ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ ೧

ಶಾಸನ ಸಾಹಿತ್ಯ



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧ : ಶಾಸನ ಸಾಹಿತ್ಯ

- [illegible]
- ಶಾಸನಗಳಲ್ಲಿ ಶಿವಶರಣರು
- [illegible]
- [illegible]

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಎಸ್. ಕೆ. ಕೊಪ್ಪಾ

ಹಂಪಿ

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಾಪುರ
[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೧ : ಶಾಸನ ಸಾಹಿತ್ಯ

❖

- ಬಸವಣ್ಣನವರನ್ನು ಕುರಿತ ಶಾಸನಗಳು
- ಶಾಸನಗಳಲ್ಲಿ ಶಿವಶರಣರು
- ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
- ಮಹಾರಾಷ್ಟ್ರದ ಕನ್ನಡ ಶಾಸನಗಳು

❖

ಪ್ರಧಾನ ಸಂಪಾದಕರು
ಡಾ. ವೀರಣ್ಣ ರಾಜೂರ
ಧಾರವಾಡ

ಸಂಪಾದಕರು
ಡಾ. ಎಸ್. ಕೆ. ಕೊಪ್ಪಾ
ಇಂಡಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಯಪುರ
೨೦೧೯

COMPLETE WORK OF DR. M.M.KALBURGI
VOLUME-1 : SHASANA SAHITY
Edited by : Dr. S. K. Koppa, Indi

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxviii + 426=464(32 Page Images)

Copies: 1000
Price Rs: 300/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The Print Point, No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧-ಶಾಸನ ಸಾಹಿತ್ಯ

ಸಂಪಾದಕರು : ಡಾ. ಎಸ್.ಕೆ. ಕೊಪ್ಪಾ, ಇಂಡಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ : ೨೦೧೯
ಪುಟಗಳು : xxxviii + ೪೨೬=೪೬೪(೩೨ ಪುಟ ಚಿತ್ರಗಳು)

ಪ್ರತಿಗಳು : ೧೦೦೦
ಬೆಲೆ ರೂ : ೩೦೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

“ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ.”

“ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ”(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

“ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ ‘ಮಹಾಮಾರ್ಗ’ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ ‘ಮಾರ್ಗ’ ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ.”

“ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.‘ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ’

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ–೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ–ಧಾರ್ಮಿಕ–ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ–೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ–ವ್ಯಾಪ್ತಿ–ವಿಧಾನ–ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ,

೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :
ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ

ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ-೧ **-ಸಂ. ಡಾ. ಪಂಡಿತ ರಾಠೋಡ**
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ- ೨ **-ಸಂ. ಡಾ. ಪಂಡಿತ ರಾಠೋಡ**
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧

ಸಂಪುಟ : ೯ ವಚನ ಸಾಹಿತ್ಯ : ಭಾಗ-೧ **-ಸಂ. ಡಾ. ವೀರಣ್ಣ ರಾಜೂರ**
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ-೨ **-ಸಂ. ಡಾ. ಗುರುಲಿಂಗ ಕಾಪಸೆ**
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ-೩ **-ಸಂ. ಡಾ. ವೀರಣ್ಣ ರಾಜೂರ**
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ-೪ **-ಸಂ. ಡಾ. ವೀರಣ್ಣ ರಾಜೂರ**
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ-೫ **-ಸಂ. ಡಾ. ವೀರಣ್ಣ ರಾಜೂರ**
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ-೬ **-ಸಂ. ಡಾ. ವೀರಣ್ಣ ರಾಜೂರ**
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ
೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ

ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ,

ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ತಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಎಸ್. ಕೆ. ಕೊಪ್ಪಾ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಎಸ್.ಕೆ. ಕೊಪ್ಪಾ

ಕಳೆದ ಶತಮಾನದ ಮಧ್ಯಕಾಲಕ್ಕೆ ನಮ್ಮ ವಿಶ್ವವಿದ್ಯಾಲಯಗಳು ಕವಿ-ಕಾವ್ಯ ಪರಂಪರೆ ಮತ್ತು ಅವುಗಳ ಸಾಂಸ್ಕೃತಿಕ ಅಧ್ಯಯನದೊಂದಿಗೆ ಗ್ರಂಥಸಂಪದನಾ ಶಾಸ್ತ್ರ, ಭಾಷಾಶಾಸ್ತ್ರ, ಶಾಸನಶಾಸ್ತ್ರ ಜಾನಪದ ಶಾಸ್ತ್ರ, ನಾಮಶಾಸ್ತ್ರ ಮೊದಲಾದ ಹೊಸ ಹೊಸ ಕೇತ್ರಗಳನ್ನು ಪರಿಚಯಿಸಿದವು. ಇದರಿಂದ ಕನ್ನಡ ಸಂಶೋಧನ ಕ್ಷೇತ್ರ ವಿಸ್ತೃತಗೊಂಡು ಅಂತರ್‌ಶಿಸ್ತೀಯ ಅಧ್ಯಯನಕ್ಕೆ ನಾಂದಿಯಾಯಿತು. ಈ ಪರಂಪರೆಯ ಎಲ್ಲ ಕ್ಷೇತ್ರಗಳಲ್ಲಿ ಹೊಸಮಾರ್ಗವನ್ನು ತೆರೆದು ಮುಂದಿನ ತಲೆಮಾರು ದುಡಿಯುವಂತೆ ಮಾಡಿದ ವಿರಳ ಸಂಶೋಧಕರಲ್ಲಿ ಪ್ರೊ.ಎಂ.ಎಂ.ಕಲಬುರ್ಗಿಯವರು ಅಗ್ರಮಾನ್ಯರು.

ಸಂಶೋಧನೆಯಲ್ಲಿ ಆಕರಗಳನ್ನು ಶೋಧಿಸುವುದು, ಶೋಧಿತ ಆಕರಗಳನ್ನು ಪರೀಕ್ಷಿಸುವುದು, ಪರೀಕ್ಷಿತ ಆಕರಗಳ ಸಹಾಯದಿಂದ ಸತ್ಯವನ್ನು ಕಂಡುಹಿಡಿಯುವ ಕ್ರಿಯೆ ನಡೆಯುತ್ತದೆ. ಕಲಬುರ್ಗಿಯವರ ಆಕರ ಶೋಧಗಳಲ್ಲಿ ಶಾಸನಗಳು ತುಂಬಾ ಮಹತ್ವದವುಗಳು. ಚರಿತ್ರೆ ಮತ್ತು ಸಂಸ್ಕೃತಿ ಶೋಧದಲ್ಲಿ ತುಂಬ ವಿಶ್ವಾಸಾರ್ಹವಾದ ಈ ದಾಖಲೆಗಳು ನಶಿಸಿ ಹೋಗುವ ಮುನ್ನ ಅವುಗಳನ್ನು ಶೋಧಿಸಿ, ಸಂಗ್ರಹಿಸುವ ಕೆಲಸ ತುರ್ತಾಗಿ ಆಗಬೇಕಾದುದನ್ನು ಅವರು ಮನಗಂಡಿದ್ದರು. ಹೀಗಾಗಿ ಶಾಸನಗಳ ಶೋಧ ಅವರ ಮೊದಲ ಆದ್ಯತಾ ಕ್ಷೇತ್ರವಾಯಿತು. ಕನ್ನಡದ ಎಲ್ಲ ಪ್ರಕಟಿತ ಶಾಸನಗಳ ಪರಿಶೀಲನೆ, ಅಪ್ರಕಟಿತ ಶಾಸನಗಳ ಪರಿವೀಕ್ಷಣೆ ಮತ್ತು ಪ್ರಕಟಣೆಯ ಬಹು ದೊಡ್ಡ ಯೋಜನೆಯನ್ನು ಅವರು ರೂಪಿಸಿದರು. ಅಷ್ಟಕ್ಕೆ ನಿಲ್ಲದೇ ಶಾಸನಗಳ ಸಂಗ್ರಹ-ವರ್ಗೀಕರಣ-ಸಂಕಿರಣ ಕಾರ್ಯಕ್ಕೆ ಮುಂದಾದರು. ಇವುಗಳೊಂದಿಗೆ ಶಾಸನಗಳ ವಿಶ್ಲೇಷಣೆ, ವ್ಯಾಖ್ಯಾನಕ್ಕೂ ತೊಡಗಿದರು. 'ಡಾ.ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆ'ಯ ಪ್ರಸ್ತುತ ಸಂಪುಟದಲ್ಲಿ ಅವರ ನಾಲ್ಕು ಕೃತಿಗಳಿವೆ. ಅವುಗಳ ವಿವರ ಹೀಗಿದೆ:

೧. ಬಸವಣ್ಣನವರನ್ನು ಕುರಿತ ಶಾಸನಗಳು (೧೯೬೮) :

ಈ ಪುಸ್ತಿಕೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಬಳ್ಳಾರಿ ಜಿಲ್ಲೆ ಕುರವತ್ತಿಯಲ್ಲಿ ಏರ್ಪಡಿಸಿದ ಪ್ರಚಾರೋಪನ್ಯಾಸ ಮಾಲೆಯ ಲಿಖಿತರೂಪ. ಕಲಬುರ್ಗಿಯವರನ್ನು ಕನ್ನಡ ಸಾರಸ್ವತ್ವ ಪ್ರಪಂಚಕ್ಕೆ

ಮೊಟ್ಟಮೊದಲು ಪರಿಚಯಿಸಿದ ಶ್ರೇಯಸ್ಸು ಇದಕ್ಕಿದೆ. ಅಷ್ಟೇ ಅಲ್ಲ, ಫ್ಲೀಟ್, ವೆಂಕಟಸುಬ್ಬಯ್ಯ ಮತ್ತು ಸಿ.ನಾರಾಯಣರಾವ್ ಅವರಂತಹ ವಿದ್ವಾಂಸರು ಶರಣರು ಅದರಲ್ಲೂ ಬಸವಣ್ಣನವರ ಚಾರಿತ್ರಿಕ ಅಸ್ತಿತ್ವ ಪ್ರಶ್ನಿಸುವ ಸಂದರ್ಭದಲ್ಲಿ ಮೂಡಿಬಂದ ಈ ಚಿಕ್ಕ ಪುಸ್ತಕಕ್ಕೆ ಅದರದೇ ಆದ ಐತಿಹಾಸಿಕ ಮಹತ್ವವಿದೆ. ಕನ್ನಡ ಶಾಸನಗಳು ಮತ್ತು ಶರಣರ ದೃಷ್ಟಿಯನ್ನು ಪರಿಚಯಿಸುತ್ತ ಶರಣರನ್ನು ಕುರಿತು ಶಾಸನಗಳು ಹುಟ್ಟದಿರುವುದಕ್ಕೆ ಸರಿಯಾದ ಉತ್ತರವನ್ನು ಅವರು ಕಂಡುಕೊಂಡಿದ್ದಾರೆ. ದೇಹ ದೇಗುಲವನ್ನು ನಂಬಿ ದೇವಾಲಯ ನಿರ್ಮಾಣ ಬಿಟ್ಟ ಶರಣರು ಯಾರಿಂದಲೂ ದಾನ ಪಡೆಯಲಿಲ್ಲ. ತಾವು ನೀಡಿದುದನ್ನು ನೆನೆಯಲಿಲ್ಲ. ಹೀಗಾಗಿ ಕರ್ನಾಟಕದ ಬಹುಪಾಲು ದಾನ ಶಾಸನಗಳಲ್ಲಿ ಅವರು ಬರೆಯಿಸಿದ ಒಂದೂ ಶಾಸನ ಕಾಣಬರುವುದಿಲ್ಲ. ಆದರೆ ಶರಣಧರ್ಮದಲ್ಲಿ ಶ್ರದ್ಧೆಯನ್ನಿರಿಸಿದ ಮುಂದಿನವರು ಬಸವಾದಿ ಪ್ರಮಥರನ್ನು ಕೆಲವು ಶಾಸನಗಳಲ್ಲಿ ಭಕ್ತಿ–ಗೌರವದಿಂದ ಸ್ಮರಿಸುವುದರಿಂದ ಶರಣರ ಅಸ್ತಿತ್ವ ಶಂಕಿಸುವವರಿಗೆ ಸರಿಯಾದ ಉತ್ತರ ನೀಡಿದಂತಾಗಿದೆ.

ಈ ಹಿನ್ನೆಲೆಯಲ್ಲಿ 'ಬಸವಣ್ಣನವರನ್ನು ಕುರಿತ ಶಾಸನಗಳು' ಅಧ್ಯಯನಕ್ಕೆ ತೊಡಗಿದ ಕಲಬುರ್ಗಿಯವರು ಅವುಗಳನ್ನು ಅಸಮ್ಮತ ಶಾಸನಗಳು, ಸರ್ವಸಮ್ಮತ ಶಾಸನಗಳು ಎಂದು ವಿಭಾಗಿಸಿಕೊಂಡಿದ್ದಾರೆ. ಬಸವಣ್ಣನವರ ಹೆಸರನ್ನು ಉಲ್ಲೇಖಿಸುವ ಶಾಸನಗಳನ್ನು ಮೊದಲು ಬೆಳಕಿಗೆ ತಂದವರಲ್ಲಿ ಫ್ಲೀಟ್, ಹಳಕಟ್ಟಿ, ನಂದೀಮಠ, ಸಿ.ನಾರಾಯಣರಾವ್, ರಾಜಪುರೋಹಿತ, ಮಧುರಚೆನ್ನ, ಗೋವಿಂದ ಪೈ, ಚೆನ್ನಮಲ್ಲಿಕಾರ್ಜುನ, ಎಸ್.ಶ್ರೀಕಂಠಶಾಸ್ತ್ರೀ ಪ್ರಮುಖರು. ನಂತರದಲ್ಲಿ ಎನ್. ಲಕ್ಷ್ಮೀನಾರಾಯಣರಾವ್, ಕಪಟ್ರಾಳ ಕೃಷ್ಣರಾಯ, ಎಸ್.ಎಸ್.ಬಸವನಾಳ, ಜೀರಿಗೆ ಕಟ್ಟಿ ಬಸವಪ್ಪ, ಚಿದರೆಮಠದ ವೀರಭದ್ರಶಾಸ್ತ್ರಿ, ಟಿ.ಎನ್.ಮಲ್ಲಪ್ಪ, ಎಮ್.ಆರ್.ಶ್ರೀನಿವಾಸಮೂರ್ತಿ, ಆರ್.ಸಿ.ಹಿರೇಮಠ, ಪಿ.ಬಿ.ದೇಸಾಯಿ ಮೊದಲಾದವರು ಬಸವಣ್ಣನವರ ಹೆಸರಿನ ಸತ್ಯಾಸತ್ಯತೆಯನ್ನು ಚರ್ಚಿಸಿದರು. ಆದರೆ ಕಲಬುರ್ಗಿಯವರು ತಾವು ಗುರುತಿಸಿದ ಮೂರು ಶಾಸನಗಳನ್ನು ಸೇರಿಸಿ ಒಟ್ಟು ಹದಿನೆಂಟು ಶಾಸನಗಳ ಚರ್ಚೆಯನ್ನು ಎತ್ತಿಕೊಂಡು ಇತಿಹಾಸದ ಕುಲುಮೆಯಲ್ಲಿ ಕಾಸಿ, ಸತ್ಯದ ಸಾಣೆಯಲ್ಲಿ ಸೋಸಿ, ಏಳು ಅಸಮ್ಮತ ಶಾಸನಗಳನ್ನು ಕೊಚ್ಚಿ ತೆಗೆದಿದ್ದಾರೆ. ಮುಂದುವರಿದು ಬಸವಣ್ಣನವರ ಚರಿತ್ರೆ ಮತ್ತು ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಹನ್ನೊಂದು ಶಾಸನಗಳು ಮಾತ್ರ ಸರ್ವಸಮ್ಮತ ಶಾಸನಗಳೆಂದು ಪಟ್ಟಿ ಮಾಡಿಕೊಟ್ಟಿದ್ದಾರೆ. ಅಷ್ಟೇ ಅಲ್ಲ ಈ ಶಾಸನಗಳಲ್ಲಿ ನಿರೂಪಿಸುವ ಸಂಗತಿಗಳು ಹೆಚ್ಚು ಪ್ರಾಚೀನ ಮತ್ತು ವಿಶ್ವಸನೀಯ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಹನ್ನೊಂದು ಸರ್ವಸಮ್ಮತ ಶಾಸನಗಳಲ್ಲಿ ಬಹಳಷ್ಟು ಶರಣರ ಆಂದೋಲನೆಯ ಪ್ರದೇಶದಿಂದ ದೂರದಲ್ಲಿರುವ ದಕ್ಷಿಣ ಕರ್ನಾಟಕಕ್ಕೆ ಸಂಬಂಧಿಸಿದವುಗಳೆಂಬುದನ್ನು ಗುರುತಿಸಿದ ಕಲಬುರ್ಗಿಯವರು ಶರಣರ ಆಂದೋಲನೆಯ ಕೇಂದ್ರ ಭೂಮಿಯಾದ ಉತ್ತರ ಕರ್ನಾಟಕದಲ್ಲಿ ಕ್ಷೇತ್ರಕಾರ್ಯ ಮತ್ತು ಸಂಶೋಧನೆ ಮುಂದುವರಿಸಬೇಕಾದ ಅಗತ್ಯವನ್ನು ಸೂಚಿಸಿದ್ದಾರೆ. ಕೊನೆಯಲ್ಲಿ ಈ ಎಲ್ಲ ಶಾಸನಗಳಿಂದ ಬಸವಣ್ಣನವರಿಗೆ ಸಂಬಂಧಿಸಿದ ನಂದಿಯ ಅವತಾರ, ೧, ೯೬೦೦೦ ಜಂಗಮ ದಾಸೋಹ, ನಿತ್ಯ ಪವಾಡಗಳೆಂಬ ಅಲೌಕಿಕ ಹೇಳಿಕೆ, ತರ್ದವಾಡಿನಾಡಿನ ಮಧ್ಯ ಗ್ರಾಮ ಬಾಗವಾಡಿ, ಬಾಗವಾಡಿಯ ಪುರ ಪ್ರಭು ಮಾದಿರಾಜ, ಮಾದಿರಾಜನ ಮಗ ಬಸವಣ್ಣ, ಬಸವಣ್ಣನ ಅಣ್ಣ ದೇವರಾಜ, ದೇವರಾಜನ ಮಗ ಕಲಿದೇವ, ಕಲಿದೇವನ ಮಗ ಹಾಲಬಸವಿದೇವ ಎಂಬ ಚಾರಿತ್ರಿಕ

ಸಂಗತಿಗಳು ಮತ್ತು ಅವರು ಆತ್ಮೀಕರಿಸಿಕೊಂಡ ಲಿಂಗಪೂಜೆ, ಜಂಗಮ ದಾಸೋಹ, ಪ್ರಸಾದ ಸಿದ್ಧಿ, ಪುರಾತನ ಭಕ್ತಿ, ಸಮಯ ಭಕ್ತಿಗಳೆಂಬ ವ್ಯಕ್ತಿಸಿದ್ಧಿಗಳ ಒಟ್ಟು ಚಿತ್ರ ಕಣ್ಣಿಗೆ ಕಟ್ಟುವಂತೆ ಇಡೀ ಬಸವಣ್ಣನವರ ಸಮಗ್ರ ಚಿತ್ರವನ್ನು ತಮ್ಮ ಸಂಶೋಧನ ಚಕ್ಷುವಿನಿಂದ ತೆರೆದಿಡುವ ರೀತಿ ಯಾರಿಗೂ ಬೆರಗು ಮೂಡಿಸುತ್ತದೆ.

೨. ಶಾಸನಗಳಲ್ಲಿ ಶಿವಶರಣರು(೧೯೭೦) :

ಬಸವಣ್ಣನವರನ್ನು ಕುರಿತ ಶಾಸನಗಳು 'ಕೃತಿಯ ಮುಂದುವರಿಕೆಯಾಗಿ ಶಾಸನಗಳಲ್ಲಿ ಶಿವಶರಣರು' ಕೃತಿ ಹೊರಬಂದಿತು. ಕಾಲದೇಶಗಳಿಂದ ವಿಸ್ತೃತ ವ್ಯಾಪ್ತಿಯನ್ನು ಪಡೆದ ಶರಣರ ಚರಿತ್ರೆಗೆ ಕಾವ್ಯ, ವಚನ, ಪುರಾಣಗಳನ್ನು ಹಿನ್ನೆಲೆಯನ್ನಾಗಿಟ್ಟುಕೊಂಡು ಅದುವರೆಗೆ ಪ್ರಕಟಗೊಂಡ ಕರ್ನಾಟಕದ ಸುಮಾರು ೨೫೦೦೦ ಶಾಸನಗಳನ್ನು ಜಾಲಾಡಿ, ಕೆಲವನ್ನು ಶ್ರಮಪಟ್ಟು ಸಂಶೋಧಿಸಿ ಸುಮಾರು ನೂರು ಜನ ಶಿವಶರಣರನ್ನು ಗುರುತಿಸುವ ಮೊದಲ ಬ್ರಹತ್ ಪ್ರಯತ್ನವಿದು. "ಶರಣರ ದೃಷ್ಟಿ-ಶಾಸನ ಸೃಷ್ಟಿ" ಇವೆರಡು ಪರಸ್ಪರ ವಿರುದ್ಧ ಮುಖಗಳು. ಆದರೂ ಚರಿತ್ರೆಗಿಂತ ಚಾರಿತ್ರ್ಯಕ್ಕೆ ಮಹತ್ವಕೊಟ್ಟ ಶರಣರ ಕುರಿತು ಶಾಸನಿಕ ದಾಖಲೆಗಳ ವಿಶ್ಲೇಷಣೆಯ ಮೂಲಕ ಕಲಬುರ್ಗಿಯವರು ಒಂದು ಹೊಸ ಶಿಸ್ತನ್ನು ನಮ್ಮ ಮುಂದಿರಿಸಿದ್ದಾರೆ. ಅವರ 'ಶಾಸನಗಳಲ್ಲಿ ಶಿವಶರಣರು' ಕೃತಿ ಶರಣ ಪರಂಪರೆಯ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಅಷ್ಟೇ ಅಲ್ಲ ಶರಣರ ಚರಿತ್ರೆ ತಿಳಿದುಕೊಳ್ಳಬೇಕೆನ್ನುವರಿಗೆ ಈ ಕೃತಿ ಅನಿವಾರ್ಯ ಆಕರಗ್ರಂಥ. ಹೀಗಾಗಿ ಶಾಶ್ವತ ಮೌಲ್ಯದ ಇದು ಮತ್ತೆ ಮತ್ತೆ ಪ್ರಕಟವಾಗುತ್ತ ಆಗಲೇ ಪರಿಷ್ಕೃತ ನಾಲ್ಕನೆಯ ಆವೃತ್ತಿಯನ್ನು ಕಂಡಿದೆ.

ಶರಣರ ಚರಿತ್ರೆಗೆ ಪ್ರಾಚೀನತೆ ಇಲ್ಲ ಎಂದು ವಾದಿಸುವವರ ಮಧ್ಯ ಈ ಗ್ರಂಥ ಮೈದೋರಿ ಶಾಸನೋಕ್ತ ಶರಣರ ಚರಿತ್ರೆಯನ್ನು ಮೂರು ಯುಗಗಳಲ್ಲಿ ಬಿಡಿಸಿ ತೋರಿಸಿದೆ. ಬಸವಪೂರ್ವ ಯುಗದಲ್ಲಿ ಅರವತ್ತು ಮೂರು ಪುರಾತನರು, ಬಾಣ-ಮಯೂರ ಮೊದಲಾದ ಶಿವೋಪಾಸಕರು, ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯ, ರೇವಣಸಿದ್ಧ, ಶಿವಯೋಗಿ ಶಾಂತಿಮಯ್ಯ ಮೊದಲಾದ ಶಿವಶರಣರು ಕಾಣಬರುತ್ತಾರೆ. ಶಾಸನಗಳ ಬೆಳಕಿನಲ್ಲಿ ಈ ಯುಗವನ್ನು ಭೇದಿಸಿದ ಕಲಬುರ್ಗಿಯವರು ಹಲವಾರು ಹೊಸ ಸಂಗತಿಗಳನ್ನು ಅನಾವರಣಗೊಳಿಸಿದ್ದಾರೆ. ಬಸವಯುಗದ ಆಳ ಸಂಶೋಧನೆಗೆ ತೊಡಗಿದ ಅವರು ಬಸವಣ್ಣ, ಸಿದ್ಧರಾಮ, ಹುಳಿಯುಮೇಶ್ವರ ಚಿಕ್ಕಯ್ಯ, ಏಕಾಂತರಾಮಯ್ಯ, ಸಕಳೇಶ ಮಾದರಸರ ವಿಷಯಕವಾಗಿ ಹೊಸಸಂಗತಿಗಳನ್ನು ತಿಳಿಸುತ್ತಾ ಪ್ರಭುದೇವ, ಚೆನ್ನಬಸವಣ್ಣನವರ ಕುರಿತ ಶಾಸನೋಕ್ತ ಉಲ್ಲೇಖಗಳೆಡೆಗೆ ನಮ್ಮ ಗಮನ ಸೆಳೆಯುತ್ತಾರೆ. ಅದುವರೆಗೆ ಅಲಕ್ಷಿಸಲ್ಪಟ್ಟ ಬಸವೋತ್ತರಯುಗದ ಚೌಡದಾನಪುರ ಶಿವದೇವ, ತೋಂಟದ ಸಿದ್ಧಲಿಂಗರ ಚರಿತ್ರೆಯೊಂದಿಗೆ ಮೂರುಜಾವಿದೇವ, ಆಕಾಶವಾಸಿ ಯತಿಗಳಂತಹ ಹೊಸ ಶರಣರನ್ನು ಶಾಸನಗಳಿಂದ ಮೊದಲಬಾರಿಗೆ ಇಲ್ಲಿ ಗುರುತಿಸಿದ್ದಾರೆ.

ಬಸವಪೂರ್ವ ಮತ್ತು ಬಸವೋತ್ತರಯುಗದ ಶರಣರ ಕುರಿತು ವಚನಗಳು, ಕಾವ್ಯಗಳು ಕೊಡುವ ವಿವರಗಳಿಗಿಂತ ಭಿನ್ನವಾದ, ಪೂರಕವಾದ ಅಧಿಕೃತ ಮಾಹಿತಿ ಶಾಸನಗಳು ಕೊಡುವುದನ್ನು ಅವರು ಶೋಧಿಸಿಕೊಟ್ಟಿದ್ದಾರೆ. ಶಿವಶರಣರ ಚರಿತ್ರೆಗೆ ವಚನ-ಕಾವ್ಯ-ಶಾಸನಗಳೊಂದಿಗೆ ಜಾನಪದ ಮತ್ತು ಶಿಲ್ಪಗಳನ್ನು ಗಮನಿಸಿರುವುದು ಅವರ ಸಂಶೋಧನೆಯ ಪೂರ್ಣತ್ವಕ್ಕೆ, ಬಹುಶಿಸ್ತಿಗೆ ಸಾಕ್ಷಿಯೆನ್ನಬೇಕು.

ಕಲಬುರ್ಗಿಯವರದು ನಿಶಿತಮತಿ, ಖಚಿತ ಅಭಿಪ್ರಾಯ. ಜೋಕೆ ತೂಕಗಳ ಪಾಂಡಿತ್ಯಪೂರ್ಣ ನಿರ್ಣಯ. "ಅವಶ್ಯಕವಾದ ವಿಷಯ ಕಣ್ಣು ತಪ್ಪಿ ಹೊರಗುಳಿಯಬಾರದು. ಅನ್ಯವಾದ ವಿಷಯ ಕಣ್ಣು ತಪ್ಪಿಸಿ ಒಳಗೆ ಬರಬಾರದು" ಎನ್ನುವ ನಿರಂತರ ಎಚ್ಚರ ಅವರದು. ಅದುವರೆಗೆ ಚರಿತ್ರೆಯ ಶೋಧದಲ್ಲಿ ಆಗಿರುವ ತಪ್ಪು, ಗೋಪಷಗಳನ್ನು ಪುನರ್ ಅವಲೋಕಿಸುವ ಕಲಬುರ್ಗಿಯವರು ಶಾಸನಗಳಲ್ಲಿ ಬರುವ ಸಾಂಪ್ರದಾಯಿಕ ವಿವರಗಳನ್ನು ಹೊರತುಪಡಿಸಿ ಅಲ್ಲಿ ಅಡಗಿರುವ ಚಾರಿತ್ರಿಕ ಎಳೆಗಳನ್ನು ಹೊರಗೆಳೆಯುತ್ತಾರೆ. ಇದು ಅವರದೇ ಆದ ಅಧ್ಯಯನದ ಒಂದು ವಿಧಾನವೆನ್ನಬೇಕು.

೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು(೧೯೮೦):

ಎಂ.ಎಂ.ಕಲಬುರ್ಗಿಯವರು ಯು.ಜಿ.ಸಿ ರಾಷ್ಟ್ರೀಯ ಉಪನ್ಯಾಸಕರಾಗಿ ಹೈದ್ರಾಬಾದ್ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ನೀಡಿದ ಉಪನ್ಯಾಸಗಳ ಪ್ರಕಟಿತ ರೂಪ "ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು." ಪ್ರಾಚೀನ ಕರ್ನಾಟಕದಲ್ಲಿ ಜರುಗುತ್ತಲಿದ್ದ ಇಂತಹ ಮರಣಗಳ ಸ್ಮಾರಕ ನಿರ್ಮಾಣ ಮತ್ತು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನ ಈ ಕೃತಿ ರಚನೆಗೆ ಹಿನ್ನೆಲೆಯಾಗಿದೆ. ಇಲ್ಲಿನ ವಿಷಯ ವಸ್ತು ಮೂರು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಭಾರತೀಯರ ಬದುಕಿನ ಪರಮಗುರಿ ಸದ್ಗತಿ ಸಂಪಾದನೆ. ಅದಕ್ಕಾಗಿ ಅವರು ಆತ್ಮಾನುಸಂಧಾನ, ಆದರ್ಶಾನುಸಂಧಾನ, ಮೌಲ್ಯಾನುಸಂಧಾನ ಸದ್ಗತಿಗಳ ಸಾಧನೆಗಳನ್ನಾಗಿಸಿಕೊಂಡರು. ಇವುಗಳಲ್ಲಿ ಜೈನ ಸಮಾಧಿ ಮರಣವು ಆತ್ಮಾನುಸಂಧಾನ ವರ್ಗಕ್ಕೆ ಸೇರುವಂತದ್ದು. ಜೈನ ಸಿದ್ಧಾಂತದಲ್ಲಿ ಇನ್ನೇನು ಬದುಕಲಾರೆನು ಎಂದು ನಿಶ್ಚಯವಾದ ಮರಣ ಸನ್ನಿಹಿತ ಪ್ರಸಂಗದಲ್ಲಿ ಪ್ರಾಣೋತ್ಮರಣ ಪರ್ಯಂತ ವ್ರತವನ್ನು ಆಚರಿಸಿದರೆ ಅದು ಸಲ್ಲೇಖನವೆನಿಸಿಕೊಳ್ಳುತ್ತದೆ. ಈ ವ್ರತದ ಮರಣ ವಿಧಾನಗಳು ಅನೇಕವಾಗಿದ್ದು; ಪ್ರಶಸ್ತ ಸ್ಥಳಗಳಲ್ಲಿ, ವಿಶೇಷವಾಗಿ ಪವಿತ್ರ ಸ್ಥಳಗಳಲ್ಲಿ ಸ್ವೀಕರಿಸುತ್ತಿದ್ದರು. ಹೀಗೆ ವ್ರತ ಹಿಡಿದು ಸಾವನ್ನಪ್ಪಿದವರ ಸ್ಮಾರಕಗಳಾಗಿ ನಿಲ್ಲಿಸಿದವುಗಳೆ ನಿಷಿಧಿ ಶಿಲೆಗಳು. ಇಂತಹ ಶಿಲೆಗಳು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಶ್ರವಣಬೆಳಗೊಳದಲ್ಲಿ ಕಾಣಬರುತಿದ್ದುದನ್ನು ಕಲಬುರ್ಗಿಯವರು ವಿವೇಚಿಸಿದ್ದಾರೆ. ಈ ನಿಷಿಧಿ ಶಿಲೆಗಳನ್ನು ಚಿತ್ರವುಳ್ಳವು, ಬರವಣಿಗೆವುಳ್ಳವು, ಚಿತ್ರವುಳ್ಳವು ಮತ್ತು ಬರವಣಿಗೆವುಳ್ಳವು ಎಂದು ವರ್ಗೀಕರಿಸಿರುವುದು ಅವರ ಸಂಶೋಧನ ವಿಧಾನಕ್ಕೆ ಸಾಕ್ಷಿಯಾಗುತ್ತದೆ.

ಸದ್ಗತಿಗಾಗಿ ದೇವರ ಮುಂದೆ ಆತ್ಮಾರ್ಪಣೆ ಮಾಡಿಕೊಳ್ಳುವುದು ತುಂಬಾ ಹಳೆಯದು. ವಿಶೇಷವಾಗಿ ಅವುಗಳನ್ನು ಸೂರ್ಯಗ್ರಹಣ ಸಂದರ್ಭದಲ್ಲಿ ಅನುಸರಿಸುತ್ತಿದ್ದರು. ಅಂತಹವುಗಳನ್ನು ಚಿತಾಪ್ರವೇಶ, ಜಲಪ್ರವೇಶ, ಮತ್ತು ಬೆಟ್ಟ, ಮರ, ದೇವಾಲಯ ಶಿಖರಗಳಿಂದ ಕೆಳಗೆ ಬೀಳುವ ಊರ್ಧ್ವಪತನವೆಂದು ಕಲಬುರ್ಗಿಯವರು ಬಿಡಿಸಿ ಹೇಳಿದ್ದಾರೆ. ಧಾರ್ಮಿಕ ಕಾರಣಗಳಿಗಾಗಿ ದೇವರ ಹೆಸರಿನಲ್ಲಿ ನಡೆಯುವ ಈ ಬಲಿದಾನದ ವಿವರಗಳನ್ನು ಕಾವ್ಯ–ಶಾಸನಗಳಿಂದ ಹೆಕ್ಕಿ ತೆಗೆದ ಅವರು ಪ್ರಿಯ ವ್ಯಕ್ತಿಯ ಹೆಸರಿನಲ್ಲಿ ಬಲಿದಾನ ಮಾಡಿಕೊಳ್ಳುವುದನ್ನು ಲೌಕಿಕ ಬಲಿದಾನ ಮರಣವೆಂದು ಕರೆದಿದ್ದಾರೆ. ಪ್ರಿಯ ವ್ಯಕ್ತಿಗಾಗಿ ಮಾಡುವ ಈ ಬಲಿದಾನ ಪತಿಗಾಗಿ ಸತಿ ಕೈಕೊಳ್ಳುವುದನ್ನು ಮಾಸ್ತಿ ಮರಣವೆಂದೂ ಪ್ರಿಯ ವ್ಯಕ್ತಿ(ಒಡೆಯ)ಗಾಗಿ ಸೇವಕ ಮಾಡುವ ಬಲಿದಾನ ವೇಳವಾಳಿ, ಲೆಂಕವಾಳಿ, ಗರುಡ ಎಂದು ವಿಂಗಡಿಸಿ ಅವುಗಳ ಕಾರಣ, ಸ್ವರೂಪ, ಸಂದರ್ಭ, ವಿಧಿವಿಧಾನಗಳನ್ನು ನಮ್ಮ ಮುಂದಿರಿಸಿದ್ದಾರೆ.

ಧಾರ್ಮಿಕ ಬಲಿದಾನ ಮತ್ತು ಲೌಕಿಕ ಬಲಿದಾನಗಳೊಂದಿಗೆ ವ್ಯಕ್ತಿ ತನ್ನ ದೇಶ, ಸಮಾಜಕ್ಕಾಗಿ ವೀರಮರಣವನ್ನಪ್ಪುತಿದ್ದ. ಕಾವ್ಯ-ಶಾಸನಗಳು ಇಂತಹ ವೀರ ಮರಣವನ್ನು ವೀರ ಸ್ವರ್ಗ ಎಂದು ವೈಭವೋಪೇತವಾಗಿ ಬಣ್ಣಿಸುವ ಮೂಲಕ ಅದರಲ್ಲಿ ದೈವತ್ವವನ್ನು ಕಾಣುವಂತೆ ಮಾಡಿವೆ. ಈ ಎಲ್ಲ ಮರಣಗಳ ಸ್ಮಾರಕವಾಗಿ ಕರ್ನಾಟಕದ ತುಂಬಾ ಹರಡಿಕೊಂಡ ನಿಷಿಧಿ ಕಲ್ಲು, ವೀರಗಲ್ಲು, ಮಾಸ್ತಿಕಲ್ಲು, ಬಲಿದಾನ ಕಲ್ಲುಗಳು ನಿಂತುಕೊಂಡಿವೆ. ಅವೆಲ್ಲವುಗಳನ್ನು ಶಾಸನ, ಸ್ಮಾರಕ, ಸಾಹಿತ್ಯ ಈ ಮೂರು ಮಗ್ಗಲುಗಳಿಂದ ಅಧ್ಯಯನಕ್ಕೊಳಪಡಿಸಿ ಭೂತಕಾಲದ ನಮ್ಮ ಭವ್ಯ ಪರಂಪರೆ ವರ್ತಮಾನಕ್ಕೆ ಹೇಗೆ ಬೆಳಕು ನೀಡುತ್ತದೆ. ಭವಿಷ್ಯತ್ ಕಾಲಕ್ಕೆ ಹೇಗೆ ಬೆಳಕಾಗಿ ನಿಲ್ಲುತ್ತದೆ ಎಂಬುದರ ಸಾಧಾರ ವಿವರಗಳು ಇಲ್ಲಿವೆ.

೪. ಮಹಾರಾಷ್ಟ್ರದ ಕನ್ನಡ ಶಾಸನಗಳು(೧೯೮೭) :

ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ ರೂಪಿಸಿದ ಯೋಜನೆಯಲ್ಲಿ ನೀಡಿದ ವಿಶೇಷ ಉಪನ್ಯಾಸಗಳ ಲಿಖಿತ ರೂಪ 'ಮಹಾರಾಷ್ಟ್ರದ ಕನ್ನಡ ಶಾಸನಗಳು.' ಈ ಕೃತಿ ಹೊರನಾಡಿನಲ್ಲಿ ಶಾಸನಗಳ ಮೂಲಕ ಕನ್ನಡ ಸಂಸ್ಕೃತಿ ಶೋಧಿಸಲು ನಡೆಸಿದ ಪ್ರಥಮ ಅಧ್ಯಯನವಾಗಿದೆ. ಕಲಬುರ್ಗಿಯವರೇ ಹೇಳುವಂತೆ : "ಈ ಅಧ್ಯಯನ ಅನೇಕ ದೃಷ್ಟಿಗಳಿಂದ ಶ್ರಮದಾಯಕವಾದುದು. ಅದಕ್ಕೆ ಕಾರಣ ಮಹಾರಾಷ್ಟ್ರದ ಎಲ್ಲ ಶಾಸನಗಳು ವ್ಯವಸ್ಥಿತವಾಗಿ ಶೋಧವಾಗಿಲ್ಲದಿರುವುದು, ಶೋಧಿಸಿದ ಶಾಸನಗಳು ವರದಿಗಳಲ್ಲುಳಿದು ಪ್ರಕಟವಾಗದಿರುವುದು, ವರದಿಗಳಿಂದ ಪೂರ್ಣ ಮಾಹಿತಿ ಲಭ್ಯವಾಗದಿರುವುದು, ಪ್ರಕಟಿತ ಶಾಸನಗಳು ವಿವಿಧ ಶಾಸನ ಸಂಪುಟಗಳಲ್ಲಿ, ವೈಯಕ್ತಿಕ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ ಚದುರಿ ಹೋಗಿ ಒಂದೆಡೆ ದೊರಕದಿರುವುದು-ಈ ಎಲ್ಲ ಅಡೆತಡೆಗಳನ್ನು ನಿವಾರಿಸಿಕೊಂಡು ಕೈಗೊಂಡ ಅಧ್ಯಯನದ ಶ್ರೇಷ್ಠ ಫಲಶೃತಿ ಇದು."

ಮಹಾರಾಷ್ಟ್ರದಲ್ಲಿರುವ ಕನ್ನಡ ಶಾಸನಗಳ ಅಧ್ಯಯನ ಪ್ರಾಚೀನ ಇತಿಹಾಸ ದೃಷ್ಟಿಯಿಂದ ಮಹತ್ವಪೂರ್ಣವಾಗಿರುವಂತೆ ವರ್ತಮಾನದ ಸಮಸ್ಯೆ ದೃಷ್ಟಿಯಿಂದ ಹೆಚ್ಚು ಕುತೂಹಲಕಾರಿಯಾಗಿದೆ. ಇಂದು ಮಹಾರಾಷ್ಟ್ರದ ವ್ಯಾಪ್ತಿ ಕರ್ನಾಟಕಕ್ಕಿಂತ ಬಹಳ ದೊಡ್ಡದು. ಆದರೆ ಅದರ ಶಾಸನಗಳ ಸಂಖ್ಯೆ ತುಂಬಾ ಸಣ್ಣದು. ವಿವಿಧ ವಿದ್ವಾಂಸರ ಪ್ರಯತ್ನ, ಶಾಸನ ಸಂಪುಟ, ಪತ್ರಿಕಾ ವರದಿಗಳನ್ನಾಧರಿಸಿ ಅವುಗಳ ಸಂಖ್ಯೆ ಸುಮಾರು ೧೦೦೦ ಇದ್ದು, ಅದರಲ್ಲಿ ೧೦೦ ಮರಾಠಿ ಶಾಸನಗಳೆಂದು ಕಲಬುರ್ಗಿಯವರು ಅಂದಾಜಿಸಿದ್ದಾರೆ. ಜೊತೆಗೆ "ಇಂದಿನ ಕರ್ನಾಟಕಕ್ಕೆ ಭೂಗೋಳ ಸಣ್ಣದು, ಇತಿಹಾಸ ದೊಡ್ಡದು. ಇಂದಿನ ಮಹಾರಾಷ್ಟ್ರಕ್ಕೆ ಭೂಗೋಳ ದೊಡ್ಡದು ಇತಿಹಾಸ ಸಣ್ಣದು" ಎಂದು ತೌಲನಿಕವಾಗಿ ವಿವೇಚಿಸುವುದು ಅವರ ತೀಕ್ಷ್ಣ ಸಂಶೋಧನ ದೃಷ್ಟಿಗೆ ಸಾಕ್ಷಿಯಾಗಿದೆ. ಮಹಾರಾಷ್ಟ್ರದಲ್ಲಿನ ಕನ್ನಡ ಶಾಸನಗಳ ಐತಿಹಾಸಿಕ ಬೆಳವಣಿಗೆಯನ್ನು ಮೂರು ಘಟ್ಟಗಳಲ್ಲಿ ಗುರುತಿಸಿದ ಕಲಬುರ್ಗಿಯವರು ಅಶೋಕ ಮತ್ತು ಶಾತವಾಹನರ ಕಾಲದ ಪ್ರಾಕೃತ ಶಾಸನಗಳು ಬಾದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಕೇವಲ ಸಂಸ್ಕೃತ ಭಾಷೆಯ ತಾಮ್ರ ಶಾಸನಗಳು, ತರುವಾಯದ ಕಲ್ಯಾಣ ಚಾಲುಕ್ಯ, ಕಲಚೂರಿ ಮತ್ತು ಯಾದವರ ಕಾಲದಲ್ಲಿ ಕನ್ನಡ ಶಾಸನಗಳು ವಿಪುಲ ಸಂಖ್ಯೆಯಲ್ಲಿ ದೊರಕುವುದನ್ನು ವಿಶ್ಲೇಷಿಸಿದ್ದಾರೆ. ಭೌಗೋಳಿಕವಾಗಿ ನಾಂದೇಡ, ಉಸ್ಮನಾಬಾದ, ಸೊಲ್ಲಾಪುರ, ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಕನ್ನಡ ಶಾಸನಗಳು ದೊರಕಿದ್ದು; ಅವುಗಳಲ್ಲಿ ಕೇವಲ ೧೭೦ ಕನ್ನಡ ಶಾಸನಗಳು ಪ್ರಕಟಗೊಂಡಿರುವುದರತ್ತ ನಮ್ಮ ಗಮನ ಸೆಳೆದಿದ್ದಾರೆ.

ಮಹಾರಾಷ್ಟ್ರದ ಕನ್ನಡ ಶಾಸನಗಳಿಗೂ ಕರ್ನಾಟಕದ ಕನ್ನಡ ಶಾಸನಗಳಿಗೂ ಭಾಷೆ, ಸಾಹಿತ್ಯ, ಶೈಲಿ, ವಸ್ತುಗಳಲ್ಲಿ ಪ್ರತ್ಯೇಕಿಸಬಾರದ ವ್ಯತಾಸವಿಲ್ಲದಿರುವುದನ್ನು ಗುರುತಿಸಿದ ಕಲಬುರ್ಗಿಯವರು ಕನ್ನಡ ಶಾಸನಗಳ ಸ್ವರೂಪ, ಲಕ್ಷಣ, ಭಾಷೆ, ಲಿಪಿಯನ್ನು ಕುರಿತು ಚರ್ಚಿಸಿರುವುದು ಗಮನಾರ್ಹವಾಗಿದೆ. ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡ ರಾಜಕೀಯ ವಿಭಾಗಗಳು, ರಾಜಕೀಯ ಇತಿಹಾಸ, ಅರಸರು ಮತ್ತು ಮಾಂಡಲೀಕರ ವಿವರಗಳು ಅಲ್ಲಿನ ಇತಿಹಾಸ ಪುನಾರಚನೆಗೆ ಬೆಲೆಯುಳ್ಳ ಆಕರಗಳಾಗಿವೆ. ಇಂದಿನ ಮಹಾರಾಷ್ಟ್ರ ಕನ್ನಡದ ಗಟ್ಟಿನೆಲವೆಂದು ಹೇಳಲು ಅಲ್ಲಿನ ಶಾಸನಗಳೊಂದಿಗೆ ಶಾಸನೋಕ್ತ ವ್ಯಕ್ತಿನಾಮ ಮತ್ತು ಗ್ರಾಮನಾಮಗಳು ಮಹತ್ವದ ಸಾಕ್ಷ್ಯಗಳಾಗುವುದನ್ನು ಕಲಬುರ್ಗಿಯವರು ಇಲ್ಲೆಲ್ಲ ವಿಶ್ಲೇಷಿಸಿದ್ದಾರೆ. ತೈಲಪ, ಬಿಲ್ಲಮ, ಸಿಂಗಣರಂತಹ ರಾಜರ ಹೆಸರುಗಳು, ಇವುಗಳಲ್ಲಿಯ ಅಪ್ಪ, ಅಮ್ಮ, ಅಣ್ಣಗಳಂತಹ ಸಂಬಂಧವಾಚಿಗಳು, ಬಂಕೇಶ್ವರ, ಚೆಲ್ಲೇಶ್ವರ, ಗೊಜ್ಜಿಗೇಶ್ವರ, ತುಂಬೇಶ್ವರ, ತುಡಿಗೇಶ್ವರ, ಹೆಮ್ಮೇಶ್ವರ, ಬಿಜ್ಜೇಶ್ವರ, ಭಾಗಲೇಶ್ವರ, ಮೈಳಲೇಶ್ವರ ಎಂಬ ಅಚ್ಚಗನ್ನಡ ದೇವನಾಮಗಳು ಕನ್ನಡಿಗರ ಹೆಸರನ್ನು ಪ್ರತಿನಿಧಿಸುತ್ತವೆ. ಇವು ಅಲ್ಲಿನ ಜನರ ಪ್ರಾಚೀನ ಭಾಷೆ ಸಂಸ್ಕೃತಿಯನ್ನು ಸರಿಯಾಗಿ ತಿಳಿದುಕೊಳ್ಳಲು ನೆರವಾಗುತ್ತಿದ್ದುದನ್ನು ಚಿಕಿತ್ಸಕ ದೃಷ್ಟಿಯಿಂದ ಕಲಬುರ್ಗಿಯವರು ವಿವೇಚಿಸಿದ್ದಾರೆ.

ಮಹಾರಾಷ್ಟ್ರದ ಕನ್ನಡ ಶಾಸನಗಳು ಮತ್ತು ಅಲ್ಲಿನ ಸ್ಮಾರಕ ಶಾಸನಗಳಲ್ಲಿ ಉಲ್ಲೇಖಗೊಂಡ ಧರ್ಮ, ಶಿಕ್ಷಣ, ಒಕ್ಕಲುತನ, ವ್ಯಾಪಾರ, ಆಡಳಿತ ಮತ್ತು ಸಾಹಿತ್ಯ ಕುರಿತಾದ ವಿಷಯಗಳನ್ನು ಚರ್ಚಿಸುವ ಮೂಲಕ ಒಂದು ಸಾಂಸ್ಕೃತಿಕ ಪಯಣವನ್ನೇ ನಮಗೆ ಮಾಡಿಸುತ್ತಾರೆ. "ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು ಎಂದರೆ ಕರ್ನಾಟಕದಲ್ಲಿ ಕನ್ನಡ ಶಾಸನಗಳು ಎಂದೇ ಅರ್ಥ. ಹೀಗಾಗಿಯೇ ದಿಟ್ಟಿಸಿ ನೋಡಿದರೆ ಇಂದಿನ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಕರ್ನಾಟಕ ದೇಶ ಕಾಣಿಸುತ್ತದೆ. ಕಿವಿಗೊಟ್ಟು ಕೇಳಿದರೆ ಅಂದಿನ ಕನ್ನಡ ಭಾಷೆ ಕೇಳಿಸುತ್ತದೆ" ಎಂಬ ನಿರ್ಣಯದ ಹಿಂದೆ ಅವರ ಸಂಶೋಧನೆಯ ಗಟ್ಟಿತನವಿದೆ, ಸತ್ಯ ಗುರುತಿಸುವ ದಾರ್ಢ್ಯವಿದೆ. ಕರ್ನಾಟಕ ಸಂಸ್ಕೃತಿಯ ಈ ಚಿತ್ರ ಇನ್ನೂ ವಿಸ್ತಾರವಾಗಿ ಸ್ಫುಟವಾಗಬೇಕಾದರೆ ಮಹಾರಾಷ್ಟ್ರದಲ್ಲಿ ಸಿಗುವ ಎಲ್ಲ ಶಾಸನಗಳನ್ನು ಕ್ಷೇತ್ರಕಾರ್ಯದ ಮೂಲಕ ಶೋಧಿಸಬೇಕು. ಅಲ್ಲಿನ ಪ್ರಾಕೃತ, ಸಂಸ್ಕೃತ ಮತ್ತು ಮರಾಠಿ ಶಾಸನಗಳಲ್ಲಿ ಕಂಡು ಬರುವ ಕರ್ನಾಟಕದ ಅಂಶಗಳನ್ನು ಸಂಗ್ರಹಿಸಬೇಕು ಎಂಬ ಅಂಶದತ್ತ ನಮ್ಮ ಗಮನ ಸೆಳೆದು, ನಿಜವಾದ ನೆಲೆಯನ್ನು ನಮಗೆ ಹುಡುಕಿಕೊಟ್ಟಿದ್ದಾರೆ.

* * *

ಒಟ್ಟು ಇಲ್ಲಿನ ನಾಲ್ಕು ಕೃತಿಗಳನ್ನು ಗಮನಿಸಿ ಹೇಳುವುದಾದರೆ. ಕಲಬುರ್ಗಿಯವರ ಸಂಶೋಧನೆಯ ಹರವು ಮತ್ತು ವೈವಿಧ್ಯ ನಮ್ಮನ್ನು ಬೆರಗುಗೊಳಿಸುತ್ತದೆ. ಇಲ್ಲಿನ ಎಲ್ಲ ಕೃತಿಗಳಲ್ಲಿ ಸಮಸ್ಯೆಯನ್ನು ಗುರುತಿಸುವ ಅದನ್ನು ಎಳೆ ಎಳೆಯಾಗಿ ಹಿಂಜುವ, ತಮ್ಮದೇ ಆದ ವಿಶ್ಲೇಷಣೆ, ವ್ಯಾಖ್ಯಾನಗಳನ್ನು ಸಿದ್ಧಾಂತವಾಗಿಸುವ ವಿದ್ವತ್ತು ಎದ್ದುಕಾಣುತ್ತದೆ. ಯಾವುದೇ ವಿಷಯದ ಪ್ರವೇಶಕ್ಕೆ ಮುನ್ನ ಅದುವರೆಗೆ ನಡೆದ ಕೆಲಸ, ಮುಂದೆ ಆಗಬೇಕಾದ ಕೆಲಸಗಳನ್ನು ಕ್ರಮಬದ್ಧವಾಗಿ ವಿವರಿಸುವುದು ಅವರ ಜಾಯಮಾನ. ಅಧ್ಯಯನದ ಪ್ರತಿ ಹಂತದಲ್ಲೂ ಸಮಸ್ಯೆಗಳನ್ನು ಎತ್ತಿ ಆಕರಗಳನ್ನು ಶೋಧಿಸಿ, ಗುರುತಿಸಿ ಬರವಣಿಗೆಗೆ ತೊಡಗುತ್ತಾರೆ. ಇದರಿಂದಾಗಿ ಅವರ ಸಂಶೋಧನೆಗೆ ಖಚಿತತೆ, ನಿರ್ದಿಷ್ಟತೆ

ಪ್ರಾಪ್ತವಾಗುತ್ತದೆ. ಸಂಶೋಧನೆಗೆ ಸಾಮಾಜಿಕ ಮುಖಜೋಡಿಸುವುದು ಕಲಬುರ್ಗಿಯವರ ಇನ್ನೊಂದು ವಿಶೇಷ. ಹೀಗಾಗಿ ಅವರ ಬರವಣಿಗೆ ಪಾಂಡಿತ್ಯದ ಹೊರೆ ಎನಿಸುವುದಿಲ್ಲ. ಆತ್ಮೀಯವಾಗಿ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ಸತ್ಯಶೋಧನೆಗಾಗಿ "ನಾನು ಸಾಯುವುದಿಲ್ಲ; ನನ್ನಲ್ಲಿ ಸತ್ಯ ಜೀವಂತವಾಗಿರುವವರೆಗೆ" ಎನ್ನುವ ಛಲಗಾರಿಕೆ ಅವರದು. ಇಂದು ನಮ್ಮ ಮಧ್ಯ ಅವರು ತಮ್ಮ ಕೃತಿಗಳಿಂದ ಜೀವಂತವಾಗಿದ್ದಾರೆ, ಅಜರಾಮರವಾಗಿದ್ದಾರೆ.

ಸಂಪಾದನೆಯ ಕಾರ್ಯದಲ್ಲಿ ಸಹಕರಿಸಿ, ಮಾರ್ಗದರ್ಶನ ನೀಡಿದ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ, ಪೂರಕ ಸಾಹಿತ್ಯ ಒದಗಿಸಿದ ಬಿ. ಎಲ್.ಡಿ. ಇ. ಶಿಕ್ಷಣ ಸಂಸ್ಥೆಯ ಫ.ಗು. ಹಳಕಟ್ಟಿ ಕೇಂದ್ರದ ನಿರ್ದೇಶಕರಾದ ಡಾ. ಎಂ. ಎಸ್. ಮದಭಾವಿಯವರಿಗೆ, ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರಿಗೆ, ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಅವರಿಗೆ, ಸುಂದರವಾಗಿ ಸಂಪುಟ ಮುದ್ರಿಸಿದ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಅವರಿಗೆ ಕೃತಜ್ಞತೆಗಳು.

❖❖

*

ಪರಿವಿಡಿ

ಉಪನ್ಯಾಸ ಗ್ರಂಥಮಾಲೆ

೭೨

ಬಸವಣ್ಣನವರನ್ನು ಕುರಿತ ಶಾಸನಗಳು

ಡಾ. ಎಂ. ಎಂ. ಕಲಬುರ್ಗಿ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೭೮

*

ಉಪಕೃತಿ

೧೫ ಜನವರಿ ೧೯೬೮ರಂದು ಕುರುವತ್ತಿ ಗ್ರಾಮದಲ್ಲಿ ಮಾಡಿದ ಉಪನ್ಯಾಸದ ಲಿಖಿತರೂಪ ಈ ಪುಸ್ತಿಕೆ. ಶಾಸನ ಅಧ್ಯಯನದತ್ತ ನನ್ನ ಅಭಿರುಚಿಯನ್ನು ಬೆಳೆಸಿಕೊಟ್ಟ ಗುರುಗಳಾದ ಡಾ. ಆರ್. ಸಿ. ಹಿರೇಮಠ ಅವರಿಗೆ, ಉಪನ್ಯಾಸವೀಯಲು ಪ್ರೇರಣೆ ನೀಡಿದ ಮಾನ್ಯ ಶ್ರೀ ಎಸ್. ಎಸ್. ಒಡೆಯರ್ ಅವರಿಗೆ, ಪುಸ್ತಕ ಹೊರಬರಲು ಪ್ರೋತ್ಸಾಹಿಸಿದ ಶ್ರೀ ಸಿ.ಎಸ್. ಕಣವಿ ಅವರಿಗೆ, ಬರವಣಿಗೆಯ ವಿಷಯದಲ್ಲಿ ಆಸಕ್ತಿ ತೋರಿಸಿದ ಶ್ರೀ ಜೆ. ಎಸ್. ಕುಳ್ಳಿ ಅವರಿಗೆ ನನ್ನ ವಂದನೆಗಳು.

ಧಾರವಾಡ
೧-೩-೧೯೬೮

ಎಂ. ಎಂ. ಕಲಬುರ್ಗಿ

ಸಂಕೇತ ಸೂಚಿ

A.P. Govt. Ar Series	-	Andhr aPradesh Government Archaeological Series
E.C.	-	Epigraphia Carmatica
E.I.	-	Epigraphia Indica
J.B.B.R.A.S	-	Journal of the Bombay branch Royal Asiatic Society
M.A.R.	-	Annual report of the Mysore Archaeological Department
S.I.I.	-	South Indian Inscriptions
ಶಿ.ವಾ.	–	ಶಿವಾನುಭವ ಪತ್ರಿಕೆ
ಶ.ಸಾ.	–	ಶರಣ ಸಾಹಿತ್ಯ ಪತ್ರಿಕೆ
ಪ್ರ.ಕ.	–	ಪ್ರಬುದ್ಧ ಕರ್ನಾಟಕ
ಸಾ.ಪ.	–	ಸಾಹಿತ್ಯ ಪರಿಷತ್ಪತ್ರಿಕೆ

*

ವಿಷಯ ಸೂಚಿ

೧. ಶಾಸನಗಳು

ಚರಿತ್ರೆಯ ವಿಷಯದಲ್ಲಿ ನಮ್ಮ ಪ್ರಾಚೀನ ಕವಿಗಳು ತೋರಿದ ಐತಿಹಾಸಿಕ ಅವಜ್ಞೆ, ಹಸ್ತಪ್ರತಿಗಳ ವಿಷಯದಲ್ಲಿ ನಮ್ಮ ಲಿಪಿಕಾರರು ಮಾಡಿದ ಅಪ್ರಾಮಾಣಿಕ ನಕಲು ಕಾರ್ಯಗಳು ಕನ್ನಡದ ಚಾರಿತ್ರಿಕ ಸಾಹಿತ್ಯಕ್ಕೆ ಒಂದು ದೊಡ್ಡ ಶಾಪವಾಗಿ ಪರಿಣಮಿಸಿವೆ. ಇವುಗಳಿಂದಾಗಿ ನಮ್ಮ ಇತಿಹಾಸ ಕವಿಗಳ ಕೃತಿಯಲ್ಲಿ, ನಮ್ಮ ಕೃತಿಗಳು ಲಿಪಿಕಾರರ ಕೈಯಲ್ಲಿ ತಮ್ಮ ಮೂಲಸ್ವರೂಪವನ್ನು ಹಾಳುಮಾಡಿಕೊಂಡವು. ಅದಕ್ಕಾಗಿ ನಮ್ಮ ಗತಕಾಲದ ಶುದ್ಧ ಇತಿಹಾಸವನ್ನರಿಯಲು ಪ್ರಾಚೀನ ಸಂಸ್ಕೃತಿಯ ಮೂಕಸಾಕ್ಷಿಗಳೆನಿಸಿದ ಶಾಸನಗಳನ್ನು ಮೊರೆ ಹೋಗಬೇಕಾಗಿದೆ.

ಸಂಖ್ಯಾದೃಷ್ಟಿಯಿಂದ ತಮಿಳಿಗೆ, ಸಾಹಿತ್ಯ ಗುಣದೃಷ್ಟಿಯಿಂದ ಸಂಸ್ಕೃತಕ್ಕೆ ಎರಡನೆಯ ಸ್ಥಾನ ಪಡೆಯುವ ಕರ್ನಾಟಕದ ಪ್ರಕಟಿತ ಶಾಸನಗಳ ಸಂಖ್ಯೆ ೨೫೦೦೦. ಬಂಡೆಗಲ್ಲಿನ ಮೇಲೆ ಪ್ರಾರಂಭವಾದ ಈ ಶಾಸನಗಳು ಬರುಬರುತ್ತ ಶಿಲಾ ಫಲಕಗಳು ಮತ್ತು ನುಣುಪಾದ ಶಿಲಾಫಲಕಗಳ ಮೇಲೆ ನಡೆದು ಬಂದವು. ಅವುಗಳೊಂದಿಗೆ ಲಿಪಿಸೌಂದರ್ಯವೂ ಆಕರ್ಷಕ ರೂಪತಾಳುತ್ತ ಬಂದಿತು. ಮೊದಮೊದಲು ಘಟನಾ ನಿರೂಪಣಾತ್ಮಕವಾಗಿ ಸಂಕ್ಷಿಪ್ತವೆನಿಸಿದ್ದ ಈ ಶಾಸಗಳು ರಾಷ್ಟ್ರಕೂಟ, ಹೊಯ್ಸಳ, ಕಲ್ಯಾಣಚಾಲುಕ್ಯರ ಕಾಲದಲ್ಲಿ ಸಾಹಿತ್ಯ ಗುಣಾತ್ಮಕವಾಗಿ ಪುಟ್ಟ ಕಾವ್ಯವೆನ್ನುವಷ್ಟು ವಿಸ್ತಾರಗೊಂಡವು. ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರಗಳಲ್ಲಿ ಲಭಿಸುವ ಅಶೋಕನ ಒಟ್ಟು ಆರು ಧರ್ಮಶಾಸನಗಳೇ ಕರ್ನಾಟಕದ ಅತ್ಯಂತ ಪ್ರಾಚೀನ ಶಾಸನಗಳು. ಇವುಗಳ ಕಾಲ ಕ್ರಿ.ಶ. ಪೂ. ೩೦೦. ಭಾಷೆ ಪ್ರಾಕೃತ, ಲಿಪಿ ಬ್ರಾಹ್ಮಿ. ಈಗಿನ ಮಟ್ಟಿಗೆ ಪ್ರಥಮ ಕನ್ನಡ ಶಾಸನ (ಕ್ರಿ.ಶ. ೪೫೦)ವೆನಿಸಿದ ಹಲ್ಮಿಡಿ ಶಾಸನಕ್ಕೆ ಪ್ರಾಚೀನವಾಗಿ ಕರ್ನಾಟಕದಲ್ಲಿ ಸುಮಾರು ೧೦ ಶಾಸನಗಳು[೧] ಲಭಿಸುತ್ತವೆ. ಇವುಗಳ ಭಾಷೆ ಪ್ರಾಕೃತ.

---

೧. ಅಶೋಕನ ಆರು ಶಾಸನಗಳು. ಮಳವಳ್ಳಿ, ಮ್ಯಾಕದೋನಿ, ಬನವಾಸಿ, ಚಂದ್ರವಳ್ಳಿಗಳ ನಾಲ್ಕು ಶಾಸನಗಳು.

* ಕರ್ನಾಟಕದಲ್ಲಿ ಇದುವರೆಗೆ ಪ್ರಕಟವಾಗಿರುವ ಶಾಸನಗಳ ಸಂಖ್ಯೆ ನಿರ್ದಿಷ್ಟವಾಗಿಲ್ಲವಾದರೂ ಸುಮಾರು ೨೬, ೦೦೦ ಕ್ಕಿಂತಲೂ ಅಧಿಕವೆಂದು ಅಂದಾಜಿಸಲಾಗಿದೆ. ಇದರಲ್ಲಿ ಅಶೋಕನ ೧೪ ಪ್ರಾಕೃತ ಶಾಸನಗಳೂ ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ದೊರೆಕಿದ ಮೊದಲ ಮೂರು ಶತಮಾನಗಳಿಗೆ ಸಂಬಂಧಿಸಿದ ಪ್ರಾಕೃತ ಭಾಷೆಯ ೭೭ ಬಿಡಿ ಶಿಲಾಲೇಖಗಳೂ ಸೇರಿವೆ(ಸಂ). ನೋಡಿ : ಕೊಪ್ಪಾ ಎಸ್. ಕೆ. ಪಂಪಪೂರ್ವ ಕರ್ನಾಟಕದ ಶಾಸನಗಳು, ಪು. ೧, ೭ ಮತ್ತು ೮.

ತರುವಾಯದ ಶಾಸನಗಳಿಗೆ ಸಂಸ್ಕೃತ, ಪ್ರಾಕೃತ, ಕನ್ನಡ ತೆಲುಗು, ತಮಿಳು, ಮಲೆಯಾಳ, ಮರಾಠಿ, ಉರ್ದು ಭಾಷೆಗಳನ್ನು ಬಳಸಲಾಗಿದ್ದು ಇವುಗಳಲ್ಲಿ ಕನ್ನಡ ಶಾಸನ ಅಧಿಕ, ಸಂಸ್ಕೃತ ಶಾಸನ ಸ್ವಲ್ಪ ಕಡಿಮೆ, ಮಿಕ್ಕ ಶಾಸನ ಬಹಳ ಕಡಿಮೆ. ಕಾಲದೃಷ್ಟಿಯಿಂದ ಪ್ರಾರಂಭದಲ್ಲಿ ಸಂಸ್ಕೃತ ಶಾಸನ ಹೆಚ್ಚು, ಕನ್ನಡ ಶಾಸನ ಕಡಿಮೆ. ಬಾದಾಮಿ ಚಾಲುಕ್ಯರ ಕಾಲಕ್ಕೆ ಎರಡೂ ಸಮಸಮ. ಮುಂದೆ ಸಂಸ್ಕೃತ ಶಾಸನ ಕಡಿಮೆ, ಕನ್ನಡ ಶಾಸನ ಹೆಚ್ಚು.

ಸ್ವರೂಪ ದೃಷ್ಟಿಯಿಂದ ಶಾಸನಗಳು ಪ್ರಾರ್ಥನೆಯಿಂದ ಪ್ರಾರಂಭವಾಗಿ, ವಿಷಯವನ್ನು ವಿವರಿಸಿ, ಫಲಶ್ರುತಿಯೊಂದಿಗೆ ಮುಕ್ತಾಯಗೊಳ್ಳುತ್ತವೆ. ತಾಮ್ರಶಾಸನಗಳೂ ಇದೇ ಸ್ವರೂಪದವುಗಳಾಗಿದ್ದು ಒಂದಕ್ಕಿಂತ ಹೆಚ್ಚು ಫಲಕಗಳಿದ್ದರೆ ಅವನ್ನು ರಾಜಮುದ್ರೆಯ ಉಂಗುರದಲ್ಲಿ ಪವಣಿಸಿರುತ್ತಾರೆ. ಚೋಳರಾಜರಾಜೇಂದ್ರನ ೩೧ ಫಲಕಗಳ ೮ ಮಣ ತೂಕದ ತಾಮ್ರಶಾಸನವೇ ಅತಿದೊಡ್ಡದೆಂದು ಈವರೆಗೆ ಭಾವಿಸಲಾಗಿದ್ದು, ಇತ್ತೀಚೆಗೆ ಲಭಿಸಿದ ಕರಂದೈ ತಾಮ್ರಪಟ ಇದಕ್ಕಿಂತ ದೊಡ್ಡದೆಂದು ತಿಳಿದುಬಂದಿದೆ.

ಸಮಕಾಲೀನ ಸಮಾಜವನ್ನು ಪ್ರತಿನಿಧಿಸುವ ಶಾಸನಗಳ ವಿಷಯ ಜೀವನದಷ್ಟು ವೈವಿಧ್ಯಮಯ. ಅವುಗಳನ್ನು ಸ್ಥೂಲವಾಗಿ ಧರ್ಮ, ವೀರ ಎಂದು ವಿಭಜಿಸಬಹುದು. ವೀರಶಾಸನಗಳು ಯುದ್ಧ ವಿಜಯ ವೀರಮರಣಗಳನ್ನೊಳಗೊಂಡರೆ, ಧರ್ಮ ಶಾಸನಗಳು ದೇವಾಲಯ ನಿರ್ಮಾಣ, ಲಿಂಗಪ್ರತಿಷ್ಠಾಪನೆ, ದತ್ತಿ, ಸತಿ, ನಿಷಧಿಗಳನ್ನೊಳಗೊಂಡಿರುತ್ತವೆ.

❖❖

೨. ಶರಣರ ದೃಷ್ಟಿ–ಶಾಸನ ಸೃಷ್ಟಿ

ಲೋಕದಂತೆ ಬಾರರು, ಲೋಕದಂತೆ ಇರರು,
ಲೋಕದಂತೆ ಹೋಗರು ನೋಡಯ್ಯ ನಿಮ್ಮ ಶರಣರು.
ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು ನೋಡಯ್ಯ... ನಿಮ್ಮ ಶರಣರು.

ಉರಿಲಿಂಗಪೆದ್ದಿಗಳ ಈ ವಚನದನ್ವಯ ಪುಣ್ಯದಂತೆ ಬಂದು, ಜ್ಞಾನದಂತೆ ನಿಂದು, ಮುಕ್ತಿಯಂತೆ ಮುಕ್ತರಾದ ವೀರಶೈವ ಶರಣರು ಕರ್ನಾಟಕದ ಯುಗಪುರುಷರು. ಸನ್ಯಾಸದಿಂದ ಸದ್ಗತಿಯುಂಟೆಂದು ನಂಬಿ ಅರಣ್ಯ ಸೇರುತ್ತಿದ್ದ ಭಾರತೀಯರಿಗೆ ಸಂಸಾರದಿಂದ ಸದ್ಗತಿಯುಂಟೆಂದು ಬೋಧಿಸಿ ಅವರ ಬದುಕಿಗೆ ದಿವ್ಯ ಅರ್ಥವನ್ನು ಬರೆದುಕೊಟ್ಟಿತು ಇವರ ಆಂದೋಲನ. ಇದರ ಫಲವಾಗಿ ಅಂಗ ಲಿಂಗವಾಯಿತು. ಪದಾರ್ಥ ಪ್ರಸಾದವಾಯಿತು. ಸೃಷ್ಟಿ ಸತ್ಯವಾಯಿತು. ಜಾಗತಿಕ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆಯುವ ಈ ಆಂದೋಲನವನ್ನು ಧರ್ಮದ ಮೂಲಕ ಸಾಧಿಸುವಲ್ಲಿ ಅವರು ಅನುಸರಿಸಿದುದು ಭಕ್ತಿಸ್ಥಾಯಿ ವೀರಶೈವ ಮಾರ್ಗವನ್ನು. ಈಗಿನ ಮಟ್ಟಿಗೆ ಈ ವೀರಶೈವವು ಶೈವದ ಕೊನೆಯ ಪರಿಷ್ಕೃತ ರೂಪ. ಈ ರೂಪಮುದ್ರೆಯನ್ನು ಹಾಕಿದವರು ಕಲ್ಯಾಣದ ಶಿವಶರಣರು.

ಲೌಕಿಕ ಸುಖಾಪೇಕ್ಷಿಗಳಾದ ಸಾಮ್ರಾಟರು, ಸಾಮಾನ್ಯರು, ಪಾರಮಾರ್ಥಿಕ ಚಿಂತನಶೀಲರಾದ ಜೈನ ವೈಷ್ಣವ ಶೈವ ಧರ್ಮದ ಯತಿಗಳು ಬರೆಯಿಸಿದ ಸಾವಿರಾರು ಶಾಸನಗಳು ಕರ್ನಾಟಕದಲ್ಲಿ ಲಭಿಸುತ್ತಿದ್ದು ಇವುಗಳಲ್ಲಿ ವೀರಶೈವ ಶರಣರು ಬರೆಯಿಸಿದ ಒಂದೂ ಶಾಸನವಿಲ್ಲದುದು ವಿದ್ವಾಂಸರಿಗೆ ನಿಗೂಢ ಪ್ರಶ್ನೆಯೆನಿಸಿದೆ. ಯಾವ ದಿವ್ಯ ಆದರ್ಶಗಳಿಗೆ ಮನಸೋತು ವೀರಶೈವವು ಶೈವದಿಂದ ಪ್ರತ್ಯೇಕಗೊಂಡಿತೋ ಆ ಆದರ್ಶದ ಬೆಳಕಿನಲ್ಲಿ ಈ ಪ್ರಶ್ನೆಗೆ ಪರಿಹಾರ ಹುಡುಕಬೇಕೆನಿಸುತ್ತದೆ. ಅಂದರೆ ಶೈವದ ಕರ್ಮ ವೀರಶೈವದ ಕ್ರಿಯೆಯಾಗಿ, ಶೈವದ ಸ್ಥಾವರಲಿಂಗ ವೀರಶೈವದ ಇಷ್ಟಲಿಂಗವಾಗಿ ವಿಕಾಸಗೊಂಡ ರೀತಿಯನ್ನು ಐತಿಹಾಸಿಕವಾಗಿ ಅವಲೋಕಿಸಬೇಕು. ಆಗ

೧. ಸ್ಥಾವರಲಿಂಗಪೂಜೆ
೨. ಸ್ಥಾವರ ಮತ್ತು ಇಷ್ಟ ಲಿಂಗಪೂಜೆ
೩. ಇಷ್ಟಲಿಂಗಪೂಜೆ

ಎಂಬ ಮೂರು ಹಂತಗಳು ಅಲ್ಲಿ ಕಂಡುಬರುತ್ತದೆ. ಇವುಗಳನ್ನು ಒಂದೊಂದಾಗಿ ಪರಿಶೀಲಿಸಿದಲ್ಲಿ ಶರಣರನ್ನು ಕುರಿತು ಶಾಸನಗಳು ಹುಟ್ಟದಿರುವುದಕ್ಕೆ ಉತ್ತರ ಸಹಜ ಲಭಿಸುತ್ತದೆ.

ಸ್ಥಾವರ ಲಿಂಗಪೂಜೆ :

ಸ್ಥಾವರ ಲಿಂಗಪೂಜೆ ಶೈವದ ನಿತ್ಯ ಕುರುಹು. ಸ್ಮಾರ್ತರೆನಿಸಿಕೊಳ್ಳುವ ಬ್ರಾಹ್ಮಣರು, ನಕುಲೀಶಪಾಶುಪತರು, ಕೌಲ ಕಾಪಾಲಿಕರು, ತ್ರಿಷಷ್ಟಿ ಪುರಾತನರು ಈ ಲಿಂಗ ಪ್ರತಿಷ್ಠಾಪನೆ ಮತ್ತು ದೇವಾಲಯ ನಿರ್ಮಾಣಗಳು ಧರ್ಮದ ಪರಮ ಕರ್ತವ್ಯವೆಂದು ನಂಬಿದ ಕಾರಣ ಅವರಿಗೆ ಲೌಕಿಕರ ಧನಸಹಾಯ ಅನಿವಾರ್ಯವೆನಿಸಿತು. ತಾವು ಪಡೆದ ದಾನ ಆಚಂದ್ರಾರ್ಕವಾಗಿ ದೇವರಿಗೆ ಸಲ್ಲಬೇಕಾದರೆ ಅದಕ್ಕೆ ಲಿಖಿತ ಶಾಸನ ಅತ್ಯವಶ್ಯವೆಂದು ಭೋಕ್ತೃಗಳೂ, ತಾವು ನೀಡಿದ ದಾನ ಅನ್ಯರಿಗೆ ಆದರ್ಶವಾಗಬೇಕೆಂದು ದಾತೃಗಳೂ ಭಾವಿಸಿದುದರಿಂದ ಧಾರ್ಮಿಕ ವಲಯದಲ್ಲಿ ಶಾಸನ ಬರೆಯಿಸುವ ರೂಢಿ ಅಡಿಯಿಟ್ಟಿತು. ಬರಬರುತ್ತ ಈ ಪ್ರವೃತ್ತಿ ಪರಿವರ್ಧನೆಗೊಂಡು ಕರ್ನಾಟಕದ ಪ್ರಾಚೀನ ಶೈವಧರ್ಮಗಳಾದ ನಕುಲೀಶಪಾಶುಪತ 'ಕಾಳಾಮುಖ' ಕಾಪಾಲಿಕರ ಹೆಸರಿನಲ್ಲಿ ಸಾವಿರಾರು ಶಾಸನಗಳು ಹುಟ್ಟಿಕೊಂಡವು.

ಸ್ಥಾವರ ಮತ್ತು ಇಷ್ಟಲಿಂಗ ಪೂಜೆ :

ಸ್ಥಾವರಲಿಂಗವನ್ನು ಪೂಜಿಸುವ ಶೈವದ ವಿಶಿಷ್ಟ ಪಂಥವೊಂದು ಇಷ್ಟಲಿಂಗವನ್ನು ಮನ್ನಿಸಿದ ಉಲ್ಲೇಖ ಕಾರ್ಮಿಕವೆಂಬ ಪ್ರಥಮ ಆಗಮದಲ್ಲಿಯೇ ಬರುವುದರಿಂದ ಈ ಸಂಪ್ರದಾಯ ತಕ್ಕಮಟ್ಟಿಗೆ ಪ್ರಾಚೀನವೆಂದೇ ಹೇಳಬೇಕಾಗುತ್ತದೆ. ೬ನೇ ಶತಮಾನದ ಕಂಚೀಪಲ್ಲವ ಅರಸರನ್ನು ಕುರಿತು ಶಾಸನಗಳಲ್ಲಿ 'ಶಿರಸಿ ಶಂಕರಂ'[೨] 'ಶಿವ ಶಿರಸಿಧಾರಯತಾ'[೨] ಎಂದೂ, ವಾಕಾಟಕ ರಾಜನಾದ ೨ನೆಯ ಪ್ರವರಸೇನನ ಕ್ರಿ.ಶ. ೪೨೮ರ ಶಾಸನದಲ್ಲಿ 'ಅಂಸಭಾರ ಸನ್ನಿವೇಶಿತ ಶಿವಲಿಂಗೋದ್ವಹನ ಶಿವ ಪರಿತುಷ್ಟ ಸಮುತ್ಪಾದಿತ ರಾಜವಂಶಾನಾಂ'[೩] (ಭುಜದಲ್ಲಿ ನಿರಂತರವಾಗಿ ಶಿವಲಿಂಗವನ್ನು ಧರಿಸುವುದರಿಂದ ಸಂತುಷ್ಟನಾದ ಶಿವನು ಭವನಾಗರಿಗೆ ರಾಜ್ಯವನ್ನು ಒದಗಿಸಿಕೊಟ್ಟನು) ಎಂದೂ ಹೇಳಿದುದನ್ನು ಇಲ್ಲಿ ನೆನೆಯಬಹುದು.

ಪ್ರಾಚೀನ ಗ್ರಂಥಗಳಲ್ಲಿ ಸ್ಥಾವರಲಿಂಗದ ವಿಷಯವನ್ನು ಪ್ರಸ್ತಾಪಿಸುತ್ತ ಇಷ್ಟಲಿಂಗವನ್ನಾಗಲೀ, ಇಷ್ಟಲಿಂಗವನ್ನು ಪ್ರಸ್ತಾಪಿಸುತ್ತ ಸ್ಥಾರವಲಿಂಗವನ್ನಾಗಲೀ ನಿಂದಿಸಿದುದು ಎಲ್ಲಿಯೂ ಕಂಡುಬರುವುದಿಲ್ಲವಾದುದರಿಂದ ಆಗ ಎರಡೂ ಬಗೆಯ ಆಚರಣೆಗಳನ್ನು ಜನತೆ ಗೌರವಿಸುತ್ತಿರುಬಹುದು. ಒಂದು ಕಡೆಯಿಂದ ಈ ಉಭಯ ಪೂಜೆಯನ್ನು, ಇನ್ನೊಂದು ಕಡೆಯಿಂದ ತಮಿಳುನಾಡಿನ ಪುರಾತನರ ಉಗ್ರಭಕ್ತಿಯನ್ನು ಸ್ವೀಕರಿಸಿದವರ ಸಾಲಿನಲ್ಲಿ ಷೋಡಶರು, ತೇರಸರು, ದಶಗಣರು ಸಮಾವೇಶಗೊಳ್ಳುವಂತಿದೆ. ಈ ತರುವಾಯ ಬಾಳಿದ ರೇವಣಸಿದ್ಧ, ಕೊಂಡಗುಳಿ ಕೇಶಿರಾಜ,[೪] ಜೇಡರದಾಸಿಮಯ್ಯ, ಶಂಕರದಾಸಿಮಯ್ಯ ಮೊದಲಾದ ಆದ್ಯರು ಈ ಸಂಪ್ರದಾಯದವರೇ ಆಗಿದ್ದರೂ ಇವರೆಲ್ಲ ಇಷ್ಟಲಿಂಗ ತತ್ವವನ್ನು ಪರಿಷ್ಕರಿಸಿಕೊಂಡ, ಉಗ್ರಭಕ್ತಿಯನ್ನು ಸಮಉಗ್ರಮಾಡಿಕೊಂಡ ವೀರಶೈವರೆನ್ನಬಹುದು. ಈ ಕಾಲದಲ್ಲಿ ಸ್ಥಾವರ ಲಿಂಗಪೂಜೆಗೆ ಸಮಾನವಾದ ಸ್ಥಾನ

೨-೨. S.I.I. Vol. I. No. 18. 21. 33 ಮತ್ತು 34

೩. Fleet's Gupta Inscriptions . No. 45

೪. ಕೊಂಡಗುಳಿ ಕೇಶಿರಾಜನು ದೇವಾಲಯನಿರ್ಮಾಣ ಮಾಡಿದ ವಿಷಯ S.I.I. XX. No. 69 ದಲ್ಲಿ ಬರುತ್ತದೆ.

ಇಷ್ಟಲಿಂಗಪೂಜೆಗೂ ಲಭಿಸಿದುದರಿಂದ ಲಿಂಗಪ್ರತಿಷ್ಠಾಪನೆ, ದೇವಾಲಯ ನಿರ್ಮಾಣ ಕಾರ್ಯಗಳು ಅರ್ಧಕ್ಕಿಳಿದು ಅದೇ ಪ್ರಮಾಣದಲ್ಲಿ ಶಾಸನ ಬರೆವಣಿಗೆಯೂ ಕಡಿಮೆಯಾಯಿತು.

ಇಷ್ಟಲಿಂಗಪೂಜೆ :

ಇಷ್ಟಲಿಂಗೋಪಾಸನೆಯೊಂದನ್ನೇ ತಮ್ಮ ಗುರಿಗಮ್ಯವಾಗಿಟ್ಟುಕೊಂಡ ೧೨ನೆಯ ಶತಮಾನದ ಶರಣರು

ಕಲ್ಲಮನೆಯನೆ ಮಾಡಿ ಕಲ್ಲದೇವರ ಮಾಡಿ
ಆ ಕಲ್ಲು ಕಲ್ಲಮೇಲೆ ಕೆಡೆದರೆ ದೇವರೆತ್ತ ಹೋದರೋ ?
ಲಿಂಗಪ್ರತಿಷ್ಠೆ ಮಾಡಿದವರಿಗೆ ನಾಯಕನರಕ........

ಎಂದು ಸಾರಿ ಅರ್ಧದಷ್ಟು ಉಳಿದುಕೊಂಡಿದ್ದ ಸ್ಥಾವರಲಿಂಗ ಪೂಜೆಯನ್ನು ಸಂಪೂರ್ಣ ನಿರಾಕರಿಸಿದರು.

ಉಳ್ಳವರು ಶಿವಾಲಯ ಮಾಡುವರಯ್ಯ
ನಾನೇನು ಮಾಡುವೆನಯ್ಯ ಬಡವನಯ್ಯ
ಎನ್ನ ಕಾಲೆ ಕಂಬ, ದೇಹವೆ ದೇಗುಲ
ಶಿರ ಹೊನ್ನಕಳಸವಯ್ಯ

ಎಂದು ದೇಹದೇಗುಲವನ್ನು ನಂಬಿ, ದೇವಾಲಯ ನಿರ್ಮಾಣವನ್ನು ಬಿಟ್ಟುಕೊಟ್ಟರು. ಹೀಗಾಗಿ ಈ ಎರಡು ಸಂದರ್ಭಗಳಲ್ಲಿ ಹುಟ್ಟಬೇಕಾದ ಧಾರ್ಮಿಕ ಶಾಸನಗಳ ಬರೆವಣಿಗೆ ವೀರಶೈವರ ಮಟ್ಟಿಗೆ ನಿಂತೇ ಹೋಯಿತು.

ಇನ್ನು 'ಸಜ್ಜನ ಸದ್ಭಾವಿ ಅನ್ಯರ ಕೈಯಾಂತು ಬೇಡ. ಲಿಂಗವ ಮುಟ್ಟಿದ ಕೈ ಮೀಸಲು' ಎಂಬ ತತ್ವಕ್ಕೆ ಬದ್ಧರಾಗಿ ಅವರು ಯಾರಿಂದಲೂ ದಾನ ಪಡೆಯಲಿಲ್ಲ. 'ಮಾಡಿದೆನೆಂಬುದು ಮನದಲಿ ಹೊಳೆದರೆ ಏಡಿಸಿಕಾಡಿತ್ತು ಶಿವನ ಡಂಗುರ' ಎಂಬ ಆದರ್ಶಕ್ಕನುಗುಣವಾಗಿ ನೀಡಿದ ದಾನವನ್ನು ನೆನೆಯಲಿಲ್ಲ. ಹೀಗಾಗಿ ವೀರಶೈವ ಶರಣರ ಹೆಸರಿನಲ್ಲಿ ದಾನ ಶಾಸನಗಳೂ ಹುಟ್ಟಲಿಲ್ಲ. ಒಟ್ಟಿನಲ್ಲಿ ಲಿಂಗಪ್ರತಿಷ್ಠಾಪನೆ ದೇವಾಲಯ ನಿರ್ಮಾಣಗಳಲ್ಲಿ ಅಲಕ್ಷ್ಯ, ಪರಾವಲಂಬನದಲ್ಲಿ ಉಪೇಕ್ಷೆ, ಪರೋಪಕಾರದಲ್ಲಿ ನಿರಪೇಕ್ಷೆ ಎಂಬ ವೀರಶೈವ ತತ್ವಗಳು ಬೆಳೆಬೆಳೆದಂತೆ ಶಾಸನ ಬರವಣಿಗೆ ತಾನಾಗಿಯೇ ನಿಂತು ಹೋಯಿತು.

"ಹತ್ತುಮತ್ತರ ಭೂಮಿ, ಬತ್ತದ ಹಯನು, ನಂದಾ ದೀವಿಗೆಯ ನಡೆಸಿಹೆವೆಂಬವರ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು"

ಎಂಬ ವಚನವಂತೂ ಶಾಸನ ಬರೆಯಿಸುವವರನ್ನು ಗುರಿಯಿಟ್ಟು ಶರಣರು ಬೀಸಿದ ಖಂಡನೆಯ ಖಡ್ಗವೆನಿಸಿದೆ. ಅದಕ್ಕಾಗಿ ಒಂದು ಕೈಯಿಂದ ದಾನ ನೀಡಿ ಇನ್ನೊಂದು ಕೈಯಿಂದ ಲಿಪಿ ತೀಡಿದವರ ಸಹಸ್ರ ಶಾಸನಗಳನ್ನು ಕಾಣಲಾರೆವು. ವೀರಶೈವರ ಈ ಆದರ್ಶವನ್ನು ಅರ್ಥಮಾಡಿಕೊಳ್ಳದೆ ಡಾ. ಫ್ಲೀಟ, ಡಾ. ಎ. ವೆಂಕಟಸುಬ್ಬಯ್ಯ, ಡಾ. ಸಿ. ನಾರಾಯಣರಾವ್ ಮೊದಲಾದವರು ಶರಣರ

ಅಸ್ತಿತ್ವವನ್ನೇ ಶಂಕಿಸಿದರು. ಆದರೆ ಸ್ಥಾವರ ಇಷ್ಟಲಿಂಗಗಳೆರಡನ್ನು ಮನ್ನಿಸಿದ ವೀರಶೈವ ಶರಣರು (ಆದ್ಯರು) ಬರೆಯಿಸಿದ ಮತ್ತು ಇಷ್ಟಲಿಂಗವೊಂದನ್ನೇ ಮನ್ನಿಸಿದ ಬಸವಾದಿ ಪ್ರಮಥರನ್ನು ಕುರಿತು ಮುಂದಿನ ವೀರಶೈವರು ಬರೆಯಿಸಿದ ಹಲವು ಶಾಸನಗಳು ಲಭಿಸಿ, 'ಶಾಸನ ಪ್ರಮಾಣ'ವನ್ನು ನಂಬುವವರಿಗೆ ಶರಣರ ಅಸ್ತಿತ್ವದ ಬಗ್ಗೆ ಈಗ ಸತ್ಯಭಾವನೆ ಮೂಡಿದೆ.

❖❖

೩. ಬಸವಣ್ಣನವರನ್ನು ಕುರಿತ ಶಾಸನಗಳು

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶರಣನ.
ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸ ಮಾಡಿ
ಜಗವರಿಯಲು ಶಿವಾಚಾರವೆಂಬ ಧ್ವಜವನೆತ್ತಿಸಿ
ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು

ಮಾನವಕೋಟಿಯನ್ನು ಮೇಲೆತ್ತುವಲ್ಲಿ ನಿಚ್ಚಣಿಕೆಯಾಗಿ ನಿಂತ ಬಸವಣ್ಣನವರನ್ನು ಪ್ರಭುದೇವರು ಕಂಡ ರೀತಿಯಿದು. 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ಅವರ ರಚನಾತ್ಮಕ ಕ್ರಿಯಾಶಕ್ತಿ ಕರ್ನಾಟಕದಲ್ಲಿ ಕ್ರಾಂತಿಯ ಕಣಕಟ್ಟಿ ಕನ್ನಡಿಗರ ಬದುಕಿಗೆ ಹೊಸ ಮೌಲ್ಯಗಳನ್ನು ಕಲ್ಪಿಸಿಕೊಟ್ಟಿತು. ಈ ಕಾರಣಕ್ಕಾಗಿ ಸಮಸ್ತ ಜನತೆ ಅವರನ್ನು ಯುಗಪುರಷರೆಂದು ಮನ್ನಿಸಿತು. ದೇವರೆಂದು ಪೂಜಿಸಿತು. ವೀರಶೈವರ ನಾಲಿಗೆಯ ಮೇಲೆ ಜೀವಂತ ಜಪವಾಗಿ ನಿಂತ ಇವರ ಜೀವನಚರಿತ್ರೆಯನ್ನು ರೂಪಿಸುವಲ್ಲಿ ನಮಗೆ ನೆರವಾಗುವ ಮುಖ್ಯ ಆಧಾರಗಳು ನಾಲ್ಕು.

೧. ಶಿವಶರಣರ ವಚನಗಳು.
೨. ಶಿವಕವಿಗಳ ಕಾವ್ಯಗಳು.
೩. ಐತಿಹ್ಯಗಳು
೪. ಶಾಸನಗಳು.

ಇವುಗಳಲ್ಲಿ ಮೊದಲನೆಯದಾದ ವಚನಸಾಹಿತ್ಯದಿಂದ ಅಲ್ಪ ಪ್ರಮಾಣದಲ್ಲಿ ಚಾರಿತ್ರಿಕ ಅಂಶಗಳು ವ್ಯಕ್ತವಾಗುತ್ತಿದ್ದು, ಅಷ್ಟರ ಮಟ್ಟಿಗೆ ಅವು ಪ್ರಾಮಾಣಿಕ ಆಧಾರಗಳೆನಿಸಿವೆ.

ಎರಡನೆಯದಾದ ಶಿವಕವಿಗಳ ಕಾವ್ಯಗಳು ಸಂಸ್ಕೃತ, ತೆಲುಗು, ತಮಿಳು, ಕನ್ನಡ ಭಾಷೆಗಳಲ್ಲಿ ಅರಣ್ಯದಂತೆ ಬೆಳೆದು ನಿಂತಿದ್ದರೂ ಒಂದು ಇನ್ನೊಂದರಿಂದ ಭಿನ್ನ ಸಂಗತಿಗಳನ್ನು ನೀಡುತ್ತವೆ. ಅವುಗಳನ್ನು ಮಥಿಸಿದರೆ,

೧. ಹರಿಹರನ ಪರಂಪರೆ
೨. ಪಾಲ್ಕುರಿಕೆ ಸೋಮನ ಪರಂಪರೆ
೩. ಸಿಂಗಿರಾಜನ ಪರಂಪರೆ

ಎಂಬ ಮೂರು ಭಿನ್ನ ಚಾರಿತ್ರಿಕ ಪರಂಪರೆಗಳು ಕಂಡುಬರುತ್ತವೆ. ಈ ಮೂರರಲ್ಲಿಯೇ ಮತ್ತೆ ನೂರು ಒಳಪರಂಪರೆಗಳಿರುವುದರಿಂದ ಇವಗಳಲ್ಲಿ ಯಾವ ಪರಂಪರೆಯನ್ನು ಯಾವ ಕಾವ್ಯವನ್ನು ನಂಬಬೇಕೆಂಬುದು ಸಮಸ್ಯೆಯಾಗಿ ನಿಂತಿದೆ.

ಮೂರನೆಯದಾದ ಐತಿಹ್ಯಗಳು ಪ್ರದೇಶದಿಂದ ಪ್ರದೇಶಕ್ಕೆ, ಗ್ರಾಮದಿಂದ ಗ್ರಾಮಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಬೆಳೆದಿವೆ. ಚರಿತ್ರೆ ಬರೆಯಲು ಹೊರಟ ಕವಿಗಳೇ ಪವಾಡ ಹೆಣೆದಿರುವಾಗ ಮುಗ್ಧಜನತೆ ತಮತಮಗೆ ಒಂದೊಂದು ಪವಾಡ ಪರಂಪರೆಯನ್ನು ನಂಬಿದುದು ತೀರ ಸ್ವಾಭಾವಿಕ.

ನಾಲ್ಕನೆಯದಾದ ಶಾಸನಗಳನ್ನು ಮಾತ್ರ ಚರಿತ್ರೆ ನಿರ್ಮಾಣಕಾರ್ಯದಲ್ಲಿ ಬಹುಮಟ್ಟಿನ ಪ್ರಾಮಾಣಿಕ ಆಧಾರಗಳೆಂದು ಭಾವಿಸಲಾಗುತ್ತದೆ. ನಾವು ಕಳೆದುಕೊಂಡ ಬಸವಣ್ಣನವರ ಶುದ್ಧ ಚರಿತ್ರೆಯನ್ನು ಪುನರ್ರಚಿಸುವಲ್ಲಿ ಇವು ಜೀವಂತ ಸಾಕ್ಷಿಗಳಂತೆ ನೆರವು ನೀಡುತ್ತವೆ. ಆದರೆ ಹಿಂದೆ ಹೇಳಲಾದ ವೀರಶೈವತತ್ವಗಳ ಪರಮಾವತಾರವೆನಿಸಿದ ಬಸವಣ್ಣನವರು ಬರೆಯಿಸಿದ ಶಾಸನಗಳ ಬಗೆಗೆ ತೀರ ನಿರಾಶೆ ತಾಳಬೇಕಾಗುತ್ತದೆ. ಈ ತಾತ್ವಿಕ ತಳಗಟ್ಟನ್ನು ಅರ್ಥಮಾಡಿಕೊಳ್ಳದೆ “No epigraphic mention of Basava and Channabasava has been obtained which is really peculiar, if they held the high office that is alloted to them by tradition” ಎಂದು ಡಾ. ಫ್ಲೀಟ್,[೫] “...ವೀರಶೈವ ಮತಸ್ಥಾಪಕರೆಂದು ಪ್ರಸಿದ್ಧರಾದ ಬಸವ ಚೆನ್ನಬಸವಾದಿಗಳು ಕ್ರಿ.ಶ. ೧೧೫೬–೬೭ರಲ್ಲಿ ಆಳುತ್ತಿದ್ದ ಬಿಜ್ಜಳನ ಕಾಲದಲ್ಲಿದ್ದರೆಂದು ಸರ್ವತ್ರ ಪ್ರತೀತಿಯಿದ್ದು.... ಕರ್ನಾಟಕ ದೇಶದ ಶಾಸನಗಳಲ್ಲಿ ಇದಕ್ಕೆ ಯಾವ ವಿಧವಾದ ಆಧಾರವೂ ದೊರೆಯುವುದಿಲ್ಲ...ಅವರು ಕ್ರಿ.ಶ. ೧೧೫೬–೬೭ರಲ್ಲಿ ಇರಲಿಲ್ಲವೆಂದಂತೂ ಸುಮಾರಾಗಿ ಧೃಡವಾಗಿಯೇ ಹೇಳಬಹುದು” ಎಂದು ಡಾ. ಎ. ವೆಂಕಟಸುಬ್ಬಯ್ಯ[೬] ಮೊದಲಾದವರು ಬಸವಣ್ಣನವರು ಪುರಾಣ ಪುರುಷರೇ ಹೊರತು ಐತಿಹಾಸಿಕ ವ್ಯಕ್ತಿಯಲ್ಲ ಎಂಬ ಅರ್ಥದ ಸಂದೇಹವನ್ನು ವ್ಯಕ್ತಮಾಡಿದರು. ಇಂಥ ಸಮಯದಲ್ಲಿ ಕೆಲವರು ಶಾಸನಗಳನ್ನು ಹುಡುಕ ಹೊರಟು ‘ಬಸವ’ ಎಂಬ ಹೆಸರು ಕಂಡ ತಕ್ಷಣ ಭ್ರಾಂತಿಯಿಂದ ಹಲವು ಸುಳ್ಳುಶಾಸನಗಳನ್ನು ಸಂಗ್ರಹಿಸಿದರು. ಇನ್ನು ಕೆಲವು ಸತ್ಯಶಾಸನಗಳನ್ನು ತೋರಿಸಿಕೊಟ್ಟರು. ಈ ಎರಡು ಬಗೆಯ ಶಾಸನಗಳನ್ನು ಮೊದಲು ಬೆಳಕಿಗೆ (ಪ್ರಚಾರಕ್ಕೆ) ತಂದವರನ್ನು ಫ್ಲೀಟ, ಹಳಕಟ್ಟಿ, ನಂದೀಮಠ, ಸಿ. ನಾರಾಯಣರಾವ್, ರಾಜಪುರೋಹಿತ, ಮಧುರಚೆನ್ನ, ಗೋವಿಂದ ಪೈ, ಚನ್ನಮಲ್ಲಿಕಾರ್ಜುನ, ಎಸ್. ಶ್ರೀಕಂಠಶಾಸ್ತ್ರಿ ಎಂದು ಹೆಸರಿಸಬಹುದು.

ಬಸವಣ್ಣನವರ ಹೆಸರಿನಲ್ಲಿ ಹೇಳುವ ಈ ಎಲ್ಲ ಶಾಸನಗಳನ್ನು ಕೆಲವರು Epigraphia Carnatica, South Indian inscriptions ಮತ್ತು ಶಾಸನ ವರದಿಗಳಿಂದ ಹುಡುಕಿಕೊಟ್ಟರೆ, ಕೆಲವರು ಮೂಲ ಶಿಲಾಲಿಪಿಗಳಿಂದಲೇ ಎತ್ತಿ ತೋರಿಸಿದರು. ಅವರ ಈ ಪ್ರಯತ್ನವನ್ನು ಐತಿಹಾಸಿಕವಾಗಿ ಹೀಗೆ ವಿವರಿಸಬಹುದು :

---

೫. Bombay Gazetteer,P. 481

೬. ಕೆಲವು ಕನ್ನಡ ಕವಿಗಳ ಕಾಲವಿಚಾರ–ಪು. ೨೭೩

ಶಾಸನಗಳು	ಬೆಳಕಿಗೆ ತಂದವರು	ಪತ್ರಿಕೆ/ಪುಸ್ತಕ	ವರುಷ	ಆಕರ
೧.ಮನಗೂಳಿ ಶಾಸನ	ಡಾ. ಫ್ಲೀಟ	E.I.V.P. 10	೧೮೯೮–೯೯	–
೨.ಅರ್ಜುನವಾಡ ಶಾಸನ	ಡಾ. ಹಳಕಟ್ಟಿ	ಶಿವಾ ೩–೯	೧೯೨೮	–[೭]
೩.ಚೌಡದಾನಪುರ ಶಾಸನ	ಡಾ. ನಂದೀಮಠ	ಶಿವಾ ೪–೨	೧೯೨೯	ಇಲಿಯಟ್ಟರ ಸಂಗ್ರಹ[೮]
೪.ಚೌಡದಾನಪುರ ಶಾಸನ	ಡಾ. ನಂದೀಮಠ	ಶಿವಾ ೪–೨	೧೯೨೯	ಇಲಿಯಟ್ಟರ ಸಂಗ್ರಹ
೫.ಹಿರಿಯೂರ ಶಾಸನ	ಎಸ್.ಶ್ರೀಕಂಠಶಾಸ್ತ್ರಿ	ಸಾ.ಪ. ೨೩–೪	೧೯೨೮	EC ಅರಸಿಕೆರೆ ೧೧೯
೬.ಕಲ್ಲೇದೇವರಪುರ ಶಾಸನ	ಎಸ್.ಶ್ರೀಕಂಠಶಾಸ್ತ್ರಿ	ಸಾ.ಪ. ೨೪–೪	೧೯೩೮	EC XI ಜಗಳೂರು.೩೦
೭.ಮರಡಿಪುರ ಶಾಸನ	ಎಸ್.ಶ್ರೀಕಂಠಶಾಸ್ತ್ರಿ	ಸಾ.ಪ. ೨೪–೪	೧೯೩೮	EC XI ಮಂಡ್ಯ ೮೩
೮.ರಾಯಶೆಟ್ಟಿಪುರ ಶಾಸನ	ಎಸ್.ಶ್ರೀಕಂಠಶಾಸ್ತ್ರಿ	ಸಾ.ಪ. ೨೪–೪	೧೯೩೮	MAR ೧೯೩೩ ನಂ. ೪೮
೯.ಕಸಪಯ್ಯನ ಶಾಸನಗಳು*	ಸಿ. ನಾರಾಯಣರಾವ್	ಪ್ರ.ಕ.೨೧–೪ (೧೯೪೦)	೧೯೩೯	ಮುಂದೆ ನೋಡಿರಿ
೧೦.ಓರುವಾಯಿ ಶಾಸನ*	ಸಿ. ನಾರಾಯಣರಾವ್	ಪ್ರ.ಕ.೨೧–೪ (೧೯೪೦)	೧೯೩೯	SII IX, ii No.133
೧೧.ಅಬ್ಬಲೂರ ಶಾಸನ*	ಸಿ. ನಾರಾಯಣರಾವ್	ಪ್ರ.ಕ.೨೧–೪ (೧೯೪೦)	೧೯೩೯	EIVP. 245
೧೨.ಗುಡಿಹಾಳಕುಂಟೋಜಿ ಶಾಸನ*	ಶ್ರೀ ಗೋವಿಂದ ಪೈ	ಶಿವಾ.೧೪–೨	೧೯೩೯	ARSIE 1929-30 App. E P. 65[೯]

೭. E.I.I.XXI ದಲ್ಲಿ ಈ ಶಾಸನ ಆ ಮೇಲೆ (೧೯೩೧–೩೨) ಪ್ರಕಟವಾಯಿತು.

೮. ಈ ಚೌಡದಾನಪುರ ಶಾಸನಗಳನ್ನು ಶ್ರೀ ಭಾವುದಾಜಿ ಅವರು ಈ ಮೊದಲೇ J.B.B.R.A.S.IX.P. 327 ದಲ್ಲಿ ವಿವೇಚಿಸಿದ್ದರೂ ಅವು ಹೆಚ್ಚು ಪ್ರಚಾರಕ್ಕೆ ಬಂದುದು ಡಾ. ನಂದೀಮಠ ಲೇಖನ(ಶಿವಾನುಭವ ೪–೭)ದಿಂದ.

* ೧೫–೮–೧೯೩೯ರಂದು ಶ್ರೀಯುತರು ಅನಂತಪುರ ಕಾಲೇಜಿನಲ್ಲಿ ಮಾಡಿದ ಭಾಷಣ. ಕಸಪಯ್ಯನ ಶಾಸನಗಳ ವಾದ ಶ್ರೀ ಸಿ. ನಾರಾಯಣರಾಯರ ಹೆಸರಿನಲ್ಲಿ ಪ್ರಚಾರಗೊಂಡಿದ್ದರೂ ಇದಕ್ಕೆ ಮೂಲ ಶ್ರೀ ಅವರೆಂದು ಕಾಣುತ್ತದೆ. ನೋಡು–"ಕಸಪಯ್ಯನಿಗೂ ವೀರಶೈವ ಪುರಾಣದ ಬಸವಣ್ಣನವರಿಗೂ ಏನಾದರೂ ಸಂಬಂಧವಿರಬಹುದೆ? ಒಂದು ವೇಳೆ ಕಸಪಯ್ಯನೆಂದು ರಾಜಕೀಯ ಜೀವನದಲ್ಲಿಯೂ ಬಸವನೆಂದು ಹಥಹಜೀವನದಲಿಯೂ ಇದ್ದಿರಬಹುದೇ?...... ಎಂಬ ಅನುಮಾನವುಂಟಾಗುತ್ತದೆ."–ಭಕ್ತಿಭಂಡಾರಿ ಬಸವಣ್ಣನವರು(೧೯೩೧) ಪು. ೮೯.

೯. S.I.I.XV N0. 658 ರಲ್ಲಿ ಶಾಸನ ಆಮೇಲೆ ಪ್ರಕಟವಾಯಿತು.

೧೩. ಸೊರಟೂರ ಶಾಸನ	ಶ್ರೀ ಗೋವಿಂದ ಪೈ	ಶಿವಾ.೧೪-೨	೧೯೩೯	S.I.E. Sup. No. 77[೧೦]
೧೪. ಬಳ್ಳಿಗಾವಿ ಶಾಸನ	ಶ್ರೀ ಚನ್ನಮಲ್ಲಿಕಾರ್ಜುನ	ಬಸವೇಶ್ವರನ ಕಾಲ	೧೯೫೦	EC VIII. ಶಿಕಾರಿಪುರ ೧೧೭
೧೫. ಆನಂದಪುರ ಮಠದ ತಾಮ್ರ ಶಾಸನ	ಶ್ರೀ ಚನ್ನಮಲ್ಲಿಕಾರ್ಜುನ	ಬಸವೇಶ್ವರನ ಕಾಲ	೧೯೫೦	– –
೧೬. *ಜೋಡಿದಾಸೇನಹಳ್ಳಿ ಶಾಸನ	ಈ ಮೂರು ಶಾಸನಗಳನ್ನು ಈ ವರೆಗೆ ಯಾರೂ ಗುರುತಿಸಿರಲಿಲ್ಲ	–	–	EC XII. ಮದ್ದಗಿರಿ ೮
೧೭. *ಕಾನಕಾನಹಳ್ಳಿ ತಾಮ್ರ ಶಾಸನ		–	–	EC IX. ಕಾನಕಾನಹಳ್ಳಿ ೮೯
೧೮. *ಕಾನಕಾನಹಳ್ಳಿ ತಾಮ್ರ ಶಾಸನ		–	–	EC IX. ಕಾನಕಾನಹಳ್ಳಿ ೯೦

ಬಸವಣ್ಣನವರ ವಿಷಯದಲ್ಲಿ ಹೇಳಲಾದ ಈ ಶಾಸನಗಳನ್ನು ಕುರಿತು ಮೇಲೆ ಹೇಳಿದ ಪಂಡಿತರೂ, ಎನ್. ಲಕ್ಷ್ಮಿನಾರಾಯಣರಾವ್, ಕಪಟ್ರಾಳ ಕೃಷ್ಣರಾವ್, ಎಸ್. ಎಸ್. ಬಸವನಾಳ, ಜೀರಗೆಕಟ್ಟಿ ಬಸವಪ್ಪ, ಚಿದರೆಮಠದ ವೀರಭದ್ರಶಾಸ್ತ್ರಿ, ಟಿ. ಎನ್. ಮಲ್ಲಪ್ಪ, ಎಮ್. ಆರ್. ಶ್ರೀನಿವಾಸಮೂರ್ತಿ, ಡಾ. ಆರ್. ಸಿ. ಹಿರೇಮಠ, ಡಾ. ಪಿ.ಬಿ. ದೇಸಾಯಿ ಮೊದಲಾದವರೂ ಪರ–ವಿರೋಧವಾಗಿ ನಿಂತು ಆಗಾಗ ಇವುಗಳ ಸತ್ಯಾಸತ್ಯತೆಯನ್ನು ಚರ್ಚಿಸಿದ್ದಾರೆ. ಈ ಎಲ್ಲ ಶಾಸನಗಳನ್ನು, ಚರ್ಚೆಗಳನ್ನು, ಇತಿಹಾಸದ ಕುಲುಮೆಯಲ್ಲಿ ಕಾಸಿ, ಸತ್ಯದ ಸಾಣಿಗೆಯಲ್ಲಿ ಸೋಸಿ ಅಸಮ್ಮತ ಶಾಸನಗಳನ್ನು ಕೊಚ್ಚಿ ತೆಗೆದು ಸರ್ವಸಮ್ಮತ ಶಾಸನಗಳನ್ನು ಎತ್ತಿತೋರಿಸುವುದು ಪ್ರಸ್ತುತ ಉದ್ದೇಶ.

(i) ಅಸಮ್ಮತ ಶಾಸನಗಳು

ಮೇಲಣ ಯಾದಿಯಲ್ಲಿ ಸೇರಿಕೊಂಡ ಮನಗೂಳಿ, ರಾಯಸೆಟ್ಟಿಪುರ, ಓರುವಾಯಿ, ಅಬ್ಬಲೂರ, ಸೊರಟೂರ, ಬಳ್ಳಿಗಾವಿ ಶಾಸನಗಳು ಮತ್ತು ಕಸಪಯ್ಯನ ಶಾಸನಗಳು ಕಳೆದ ಹಲವು ವರುಷಗಳಿಂದ ಪಂಡಿತರನೇಕರು ಮಾಡಿದ ವಿವೇಚನೆಯ ಫಲವಾಗಿ 'ಅಸಮ್ಮತ ಶಾಸನ'ಗಳೆಂದು ಧೃಡವಾಗಹತ್ತಿವೆ; ಧೃಡವಾಗಿವೆ. ಇವುಗಳನ್ನು ಈಗ ಒಂದೊಂದಾಗಿ ಅಭ್ಯಸಿಸಬಹುದು.

* ನಂ. ೧೬ರ ಶಾಸನ ೧೯೬೮ರಲ್ಲಿ, ನಂ. ೧೭, ೧೮. ರ ಶಾಸನಗಳು ೧೯೬೩ರಲ್ಲಿ ನನ್ನ ಗಮನಕ್ಕೆ ಬಂದವು.

೧೦. S.I.I.XX No.650 ರಲ್ಲಿ ಈ ಶಾಸನ ಆಮೇಲೆ ಪ್ರಕಟವಾಯಿತು

೧. ಮನಗೂಳಿ ಶಾಸನ :

ಬಸವಣ್ಣನವರನ್ನು ಕುರಿತ ಶಾಸನಗಳನ್ನು ಕಾಣದೆ ಪಂಡಿತರನೇಕರು ತೊಳಲಾಡುತ್ತಿರುವ ಪ್ರಸಂಗದಲ್ಲಿ ಈ ಶಾನಸ ಕಣ್ಣಿಗೆ ಬಿದ್ದೊಡನೆ "(We) have at last met with an epigraphic mentioin of Basava" ಎಂದು ಡಾ. ಫ್ಲೀಟ್[೧೧] ಅವರು ಆನಂದಾಶ್ಚರ್ಯಗಳನ್ನು ವ್ಯಕ್ತಪಡಿಸಿದರು. ಬಸವಣ್ಣನವರನ್ನು ಕುರಿತು ನಡೆದ ಶಾಸನ ಸಂಶೋಧನೆಯ ಇತಿಹಾಸದಲ್ಲಿ ಲಭಿಸಿದ ಈ ಪ್ರಥಮ ಶಾಸನದ ಮುಖ್ಯಪಾಠ ಹೀಗಿದೆ.

"ಮಾಣಿಕ್ಯವಳ್ಳೀ ಪುರಪ್ರಭು ವಿಖ್ಯಾತ ಹರಿತಗೋತ್ರ ವಿಳಸಲ್ಲಕ್ಷ್ಮೀಧವಂ" ಎನಿಸಿದ ಮಾಧವ (=ಮಾದಿರಾಜ)ನು ಮಾಣಿಕ್ಯವಳ್ಳಿಯನ್ನಾಳುತ್ತಿದ್ದನು. "ಆ ನೆಗಳ್ದ ಮಣಿಗವಳ್ಳಿಯ ಭೂನುತರೈನೂರ್ವರೊಳಗೆ ಕಾಶ್ಯಪಗೋತ್ರಾಂಭೋನಿಧಿಶ್ಯ" ಎನಿಸಿದ 'ಹುರ್ವಿನವರು' ಎಂಬ ಅಡ್ಡ ಹೆಸರಿನ ಗೋವರ್ಧನನ ಮಗ ರೇವದಾಸ. ಈತನ ಐವರು ಮಕ್ಕಳಲ್ಲಿ ಚಂದ್ರರಾಜನೂ ಒಬ್ಬ.

> ಆ ಚಂದಿರಾಜ ವಿಭುಗಂ ।
> ಶ್ರೀ ಚಂದ್ರಾಂಬಿಕೆಗಾತ್ಮಜಂ ಪುಟ್ಟಿದನು ।
> ರ್ವಿನುತ ಗುಣಾಬ್ಧಿ ಸ।
> ದಾಚಾರತೆಯಿಂ ನಿಮಿರ್ಚಿ ಜಸಮಂ ಬಸವಂ ।
> ಪರಹಿತದೊಳ್ ಪರಾಕ್ರಮದೊಳಾರ್ಪಿನೊಳೂರ್ಜಿತಶಕ್ತಿಯೊಳ್ಮಹೇ
> ಶ್ವರಪದ ಭಕ್ತಿಯೊಳ್ತನಗೆ ಪಾಸಟಿಯಾರ್ಪ್ಪರರೆಂಬ ಹೆಮ್ಮೆಯೊಳ್
> ನೆರೆದು ಮಣಿಂಗವಳ್ಳಿಯ ಧರಾಮರ ಪಂಚಶತಾನುರಾಗ ಪಂ ।
> ಕರುಹ ವಿಕಾಸ ಭಾಸ್ಕರನೆನಲ್ ನೆಗಳ್ದಂ ಬಸವಂ ಗುಣಾಕರಂ ।
>
> ಇದು ವೇದತ್ರಯ ತತ್ವಧಾಮವಿದನಂತಾನಾದಿ ಸಂಸಿದ್ಧವಿಂ ।
> ತಿದು ತೇಜೋಮಯದಿವ್ಯಲಿಂಗವಿದು ಲೀಲಾಲೋಕ ಸಾನ್ನಿಧ್ಯವೆಂ ।
> ಬ ದಯಾಭ್ಯುನ್ನತಿ ಚೆನ್ನನಾದ ಕಲಿದೇವೇಶಂಗೆ ಲೋಕೋತ್ಸವಾ ।
> ಸ್ಪದಮಮ್ಮಾಡಿಸಿದಂ ನಿಜಾನ್ವಯಯಶಸ್ಸಂದೋಹಮಂ ಗೇಹಮಂ ।

ಲೋಕೋತ್ತರವಾದ ಈ ಕಲಿದೇವರ ದೇವಾಲಯಕ್ಕೆ ಕಲ್ಯಾಣ ಚಾಲುಕ್ಯ ಅರಸನಾದ ಜಗದೇಕಮಲ್ಲನು ಕ್ರಿ.ಶ. ೧೧೪೨ರಲ್ಲಿ ಕಾಳಾಮುಖ ಸದ್ಯೋಜಾತ ಪಂಡಿತರ ಕಾಲಂಕರ್ಚಿ ದತ್ತಿ ಬಿಟ್ಟನೆಂಬುದು ಈ ಶಾಸನದ ಒಟ್ಟು ವಿಷಯ.

ಈ ಶಾಸನ ಬಸವಣ್ಣವರಿಗೆ ಸಂಬಂಧಪಟ್ಟುದೆಂದು ಡಾ. ಫ್ಲೀಟ, ಈ. ಪಿ. ರೈಸ,[೧೨] ಶಿ.ಶಿ. ಬಸವನಾಳ,[೧೩] ಚನ್ನಮಲ್ಲಿಕಾರ್ಜುನ,[೧೪] ಜೀರಗೆಕಟ್ಟಿ ಬಸವಪ್ಪ,[೧೫] ಮುಂತಾದವರು ವಾದಿಸುವಲ್ಲಿ ಕೊಡುವ ಕಾರಣಗಳು ಇವು:

---

೧೧. E.I.I.Vol.V

೧೨. Kanarese literature, p. 53.

೧೩. ಬಸವನಾಳ ಸ್ಮಾರಕ ಸಂಪುಟ, ಪು. ೪೭೯.

೧೪. ಶ್ರೀ ಬಸವೇಶ್ವರನ ಕಾಲ, ಪು. ೫೬, ೧೧೧

೧೫. ಶಿವಾ ೧೩-೮, ೯ ಮತ್ತು ೧೨

೧. ಮನಗೂಳಿ ಬಾಗೆವಾಡಿಗಳು ಕೇವಲ ೧೨ ಮೈಲಿನ ಅಂತರದಲ್ಲಿವೆ.

೨. ಸಮೀಪದಲ್ಲಿಯೇ ಇರುವ ಬಾಗವಾಡಿ, ಇಂಗಳೇಶ್ವರ, ಮನಗೂಳಿ ಶಾಸನಗಳಲ್ಲಿ ಆ ಊರುಗಳ ಮಹಾಜನರ ಸಂಖ್ಯೆ ೫೦೦ ಎಂದು ಹೇಳಿರುವುದರಿಂದ ಮೂರು ಊರುಗಳ ಆಡಳಿತ ಒಬ್ಬನಿಂದಲೇ ಅಂದರೆ ಮನಗೂಳಿ ಶಾಸನದ ಪುರಪ್ರಭು ಮಾದಿರಾಜನಿಂದಲೇ ನೆರವೇರುತ್ತಿರಬಹುದು. ಅದಕ್ಕಾಗಿ ಮನಗೂಳಿ ಶಾಸನದ ಮಾದಿರಾಜನು ಇಂಗುಳೇಶ್ವರ ಪ್ರಭುವೂ ಹೌದು; ಬಾಗವಾಡಿ ಪ್ರಭುವೂ ಹೌದು.

೩. ಬಸವಣ್ಣನವರು ಬಾಲ್ಯದಲ್ಲಿಯೇ ತಬ್ಬಲಿಯಾದರೆಂದು ಬಸವರಾಜದೇವರ ರಗಳೆಯಲ್ಲಿ, ಮಾದರಸ ಮಾದಲಾಂಬೆಯರಿಗೆ ಬಾಗಿದ ಹೊಡೆಯಲ್ಲಿ ದೊರೆತ ಸಾಕುಮಗನೆಂದು ನಂದಿ ಆಗಮದಲ್ಲಿ ಹೇಳಲ್ಪಟ್ಟಿದೆ. ಇದರಿಂದ ಶಾಸನದಲ್ಲಿ ಹೇಳಲಾದ ಚಂದ್ರರಾಜ ಚಂದ್ರಾಂಬಿಕೆಯರು ಮರಣ ಹೊಂದಲು ಪುರಪ್ರಭು ಮಾದಿರಾಜನು ತಬ್ಬಲಿಯಾದ ಬಸವಣ್ಣನನ್ನು ಸಾಕಿರಬಹುದೆನಿಸುತ್ತದೆ. ಮುಂದಿನವರು ಈ ಮಾದಿರಾಜನೇ ಹಡೆದ ತಂದೆಯೆಂದು ಭ್ರಮಿಸಿರಬಹುದು.

೪. ಬಸವಣ್ಣನವರು ಕ್ರಿ.ಶ. ೧೧೦೬ರಲ್ಲಿ ಹುಟ್ಟಿದರೆಂಬ ಒಂದು ಹೇಳಿಕೆಗೆ ಈ ಶಾಸನದ ಕಾಲ ಕ್ರಿ.ಶ. ೧೧೪೨ ಅಡ್ಡಿ ಬರುವುದಿಲ್ಲವಾದುದರಿಂದ ಕ್ರಿ.ಶ. ೧೧೪೨ರವರೆಗೆ ಶೈವನಾಗಿ ದೇವಾಲಯ ನಿರ್ಮಾಣ, ಲಿಂಗ ಪ್ರತಿಷ್ಠಾಪನೆಯಂಥ ಕಾರ್ಯಮಾಡಿ ಈ ಮುಂದೆ ಬಸವಣ್ಣನವರು ವೀರಶೈವರಾಗಿರಬಹುದು.

೫. ಈ ಶಾಸನದಲ್ಲಿಯ ಉಜ್ವಲವರ್ಣನೆ ಬಸವಣ್ಣನವರನ್ನು ನೆನಪಿಗೆ ತರುತ್ತದೆ. ಈ ವಾದವನ್ನು ವಿರೋಧಿಸುವ ಡಾ. ನಂದೀಮಠ,[೧೬] ಹಳಕಟ್ಟಿ,[೧೭] ಆರ್.ಸಿ. ಹಿರೇಮಠ,[೧೮] ಚಿದರೆಮಠ ವೀರಭದ್ರಶಾಸ್ತ್ರಿ[೧೯] ಮುಂತಾದವರು ಕೊಡುವ ಕಾರಣಗಳು ಹೀಗಿವೆ.

೧. ಒಂದೇ ಊರಿನಲ್ಲಿ ಒಂದು ಹೆಸರಿನ ಹಲವು ವ್ಯಕ್ತಿಗಳಿರುವಾಗ ೧೨ ಮೈಲು ಅಂತರದ ಗ್ರಾಮದಲ್ಲಿ ಇದ್ದ ಬಸವಯ್ಯನನ್ನು ಕಲ್ಯಾಣ ಬಸವಣ್ಣನೆನ್ನಲು ಆಧಾರ ಸಾಲದು.

೨. ಮೂರೂ ಗ್ರಾಮಗಳಿಗೆ ಮಾದಿರಾಜನೇ ಅಧಿಕಾರಿಯಾಗಿದ್ದರೆ ಇಂಗುಳೇಶ್ವರ, ಬಾಗವಾಡಿಗಳ ಒಂದೂ ಶಾಸನದಲ್ಲಿ ಆತನ ಹೆಸರು ಕಂಡುಬರದಿರುವುದು ವಿಚಿತ್ರ.

೩. ನಿಜ ತಂದೆ-ತಾಯಿಗಳಾದ ಮಾದರಸ ಮಾದಲಾಂಬೆ ತೀರಿಕೊಳ್ಳಲು ಮುತ್ತಬ್ಬೆ ಸಾಕಿದಳೆಂದು ಹರಿಹರ ಹೇಳುತ್ತಾನೆಯೇ ಹೊರತು ಚಂದ್ರಾಂಬಿಕೆ ಚಂದ್ರರಾಜ ಮರಣ ಹೊಂದಲು ಮಾದಿರಾಜ ಸಲುಹಿದನೆಂದು ಹೇಳುವುದಿಲ್ಲ.

---

೧೬. ವೀರಶೈವ ೩-೧೧, ೧೨

೧೭. ಶಿವಾ. ೧೩-೮,೯

೧೮. Shri Basaveswar's commemoration Volum, P. 9.

೧೯. ಶಿವಾ, ೧೫-೩

ನಂದಿ ಆಗಮ ಇತ್ತೀಚಿನದೂ ಅದರ ಹೇಳಿಕೆ ಪವಾಡ ಸ್ವರೂಪದ್ದೂ ಆಗಿರುವುದರಿಂದ ಅಲ್ಲಿಯ ವಿಷಯ ಐತಿಹಾಸಿಕವೆನಿಸುವುದಿಲ್ಲ. ಶಾಸನದ ಪ್ರಕಾರ ಚಂದ್ರರಾಜನ ಗೋತ್ರ ಕಾಶ್ಯಪ, ಮಾದಿರಾಜನ ಗೋತ್ರ ಹರಿತ. ಆದರೆ ಕಾವ್ಯಗಳಲ್ಲಿ ಬಸವಣ್ಣನವರ ಗೋತ್ರ ಈ ಎರಡಕ್ಕೆ ಭಿನ್ನವಾಗಿ ಸಂಖ್ಯಾಯನವೆಂದು ಹೇಳಲ್ಪಟ್ಟಿದೆ. ಬಸವಣ್ಣನವರು ಐಕ್ಯವಾದ ಒಂದುನೂರು ವರುಷದೊಳಗಾಗಿ ಹುಟ್ಟಿದ ಅರ್ಜುನವಾಡ ಶಾಸನ (ಕ್ರಿ.ಶ. ೧೨೬೦) "ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜ" ಎಂದು ಹೇಳುತ್ತಿದೆಯೇ ಹೊರತು ಚಂದ್ರರಾಜನ ತನೂಜಂ ಬಸವರಾಜ ಎನ್ನುವುದಿಲ್ಲ. ಈ ಶಾಸನವನ್ನು ಬಸವಣ್ಣನ ವಂಶಜನೇ ಬರೆಯಿಸಿರುವುದರಿಂದ ಆತನು ತನ್ನ ವಂಶಕ್ಕೆ ಇನ್ನೊಬ್ಬರ ಹೆಸರನ್ನು ಬೆರಸಲಾರ.

೪. ಬಸವಣ್ಣನವರ ಜನ್ಮಕಾಲ ಕ್ರಿ.ಶ. ೧೧೩೧ ಆಗಿರುವುದರಿಂದ ಕ್ರಿ.ಶ. ೧೧೪೨ರ ಸುಮಾರಿಗೆ ಅಂದರೆ ವಯಸ್ಸಿನ ೧೧ರಲ್ಲಿ ದೇವಾಲಯ ನಿರ್ಮಾಣ ಮೊದಲಾದ ಕಾರ್ಯ ಮಾಡುವುದು ಅಸಂಭವ. ಕ್ರಿ.ಶ. ೧೧೦೬ರಲ್ಲಿ ಹುಟ್ಟಿದ್ದರೂ ಕ್ರಿ.ಶ. ೧೧೪೨ರವರೆಗೆ ಅಂದರೆ ೩೬ ವರ್ಷಗಳವರೆಗೆ ಬಸವಣ್ಣನವರು ಇನ್ನೂ ವೀರಶೈವರಾಗಿರಲಿಲ್ಲವೆಂಬುದು ನಂಬಲಾಗದ ಮಾತು. ಬಹುಶಃ ಬಸವಯ್ಯನೆಂಬವನು ಎಂದೋ ಕಟ್ಟಿಸಿದ ದೇವಾಲಯಕ್ಕೆ ಕ್ರಿ.ಶ. ೧೧೪೨ರಲ್ಲಿ ಕಾಳಾಮುಖ ಸದ್ಯೋಜಾತನೆಂಬವನ ಕಾಲ ತೊಳೆದು ದತ್ತಿಬಿಡಲಾಗಿದೆ. ಅದಕ್ಕಾಗಿ ಮನಗೂಳಿ ಶಾಸನೋಕ್ತ ಬಸವಯ್ಯ ೧೨ನೆಯ ಶತಮಾನಕ್ಕೆ ತೀರ ಹಿಂದೆ ಇರಬಹುದು. ಕೊನೆಯದಾಗಿ ಮನಗೂಳಿ ಬಸವಯ್ಯನ ಮನೆತನದ ಹೆಸರು 'ಹುರ್ವಿನವರು'. ಕಲ್ಯಾಣ ಬಸವಣ್ಣನವರ ಮನೆತನದ ಹೆಸರು 'ಮಂಡಗೆ'. ಅದಕ್ಕಾಗಿ ಮನಗೂಳಿ ಬಸವಯ್ಯನು ಒಬ್ಬ ಕೀರ್ತಿವೆತ್ತ ವೀರಶೈವೇತರನೇ ಹೊರತು ವೀರಶೈವ ಬಸವಣ್ಣನಲ್ಲ.

ಇತ್ತಿತ್ತಲಾಗಿ ಇಂಥ ವಿರೋಧ ಅಭಿಪ್ರಾಯಗಳೇ ಹೆಚ್ಚು ಬೆಳೆಯುತ್ತಿದ್ದು ಡಾ. ಫ್ಲೀಟ[೨೦] ಮೊದಲಾದವರ ಹೇಳಿಕೆ ಈಗ ಸಂಪೂರ್ಣ ಸಡಿಲುಗೊಂಡಿದೆ. ಅದಕ್ಕಾಗಿ ಮನಗೂಳಿ ಶಾಸನ ಬಸವಣ್ಣನವರಿಗೆ ಸಂಬಂಧಿಸಿದುದಲ್ಲ.

೨. ರಾಯಸೆಟ್ಟಿಪುರ ಶಾಸನ :

ಶ್ರೀ ಎಸ್. ಶ್ರೀಕಂಠಶಾಸ್ತ್ರಿಗಳು ಸಾ.ಪ. ಪತ್ರಿಕೆ ೨೩-೪ರಲ್ಲಿ (೧೯೩೮) ಬರೆದ 'ಬಸವೇಶ್ವರ' ಎಂಬ ಲೇಖನದಲ್ಲಿ ಬಸವಣ್ಣನವರಿಗೆ ಸಂಬಂಧಪಟ್ಟ ಆರು ಶಾಸನಗಳನ್ನು ಉಲ್ಲೇಖಿಸಿದ್ದಾರೆ. ಇವುಗಳಲ್ಲಿ ಪ್ರಸ್ತುತ ರಾಯಸೆಟ್ಟಿಪುರ ಶಾಸನವೂ ಒಂದು. 'ಬಸವ ಬಿಜ್ಜಳರ ಇತಿಹಾಸದ ಪುನರ್ವಿಮರ್ಶೆ' ಎಂಬ ಲೇಖನ (ಪ್ರ.ಕ.೨೯-೨)ದಲ್ಲಿ ಶ್ರೀ ಕಪಟ್ರಾಳ ಕೃಷ್ಣರಾಯರು ಇದನ್ನು ಬಳಸಿಕೊಂಡಿದ್ದಾರೆ. ಶ್ರೀ ಗೋವಿಂದಪೈಗಳು 'ಇಲ್ಲಿ ಬಸವಿದೇವ ಎಂದಿರುವಾತನು ಸ್ವಯಂ ಬಸವೇಶ್ವರನೇ'[೨೧] ಎಂದು ನಿರ್ಣಯ ನೀಡಿದ್ದಾರೆ. ಹೀಗೆ ಪಂಡಿತ ತ್ರಯರಿಂದ ಮನ್ನಿಸಲಾದ ಈ

---

೨೦. "ಕನ್ನಡಿಗರಲ್ಲದ ಇತರ ಪಂಡಿತರೂ ಯುರೋಪಿನೊಳಗಿನ ಇತರ ವಿದ್ವಾಂಸರೂ ಇನ್ನೂ ಫ್ಲೀಟ್‌ರ ಅಭಿಪ್ರಾಯವೇ ನಿಜವೆಂದು ನಂಬುವರು"(ಶಿವಾ ೫-೧೧,೧೨ ಪು. ೩೫೨) ಎಂಬ ಡಾ. ನಂದಿಮಠರ ಹೇಳಿಕೆಯನ್ನು ಇಲ್ಲಿ ಗಮನಿಸಬೇಕು.

೨೧. ಬಸವನಾಳ ಸ್ಮಾರಕ ಸಂಪುಟ, ಪು. ೫೨೭

ಶಾಸನ ಹೊಯ್ಸಳರ ಆಳಿಕೆಗೆ ಸಂಬಂಧಪಟ್ಟಿದ್ದು ಇದರ ಕಾಲ ಕ್ರಿ.ಶ. ೧೨೫೧. ದತ್ತಿಯ ವಿವರಣೆಗಳನ್ನು ಹೇಳುತ್ತ ಅದರಲ್ಲಿ ".......ಕರಸ್ತಳದ ಬಸವಿದೇವಂಗೆ ವ್ರಿತ್ತಿ೧........ಉತ್ತಮಾಂಗದ ಮಲ್ಲಿದೇವಂಗೆ ವ್ರಿತ್ತಿ೧.....ತಾನೇಶ್ವರದ ಚಾಮಯ್ಯಂಗೆ ವ್ರಿತ್ತಿ೧" ಎಂದು ಉಲ್ಲೇಖಿಸಲಾಗಿದೆ. ಇಲ್ಲಿ ಹತ್ತಾರು ಜನರ ಮಧ್ಯ ದತ್ತಿ ಪಡೆದ ಕರಸ್ತಳದ ಬಸವಿದೇವ ಮತ್ತು "ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು ಓರೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ" ಎಂಬ ಮನೋಧರ್ಮದ ಬಸವಣ್ಣನವರಿಗೆ ಸಂಬಂಧ ಕಲ್ಪಿಸಿದುದು ಒಪ್ಪದ ಮಾತು. ಕಾಲದೃಷ್ಟಿಯಿಂದಲೂ ಇದು ನಿಲುಕದ ಸಂಬಂಧ. ಅದಕ್ಕಾಗಿ ಈ ಶಾಸನವನ್ನು ಖಂಡಿತ ಬಿಟ್ಟುಕೊಡಬೇಕಾಗುತ್ತದೆ.

೩. ಕಸಪಯ್ಯನ ಶಾಸನಗಳು

ಡಾ. ಚಿಲಕೂರ ನಾರಾಯಣರಾಯರು ೧೫-೮-೧೯೩೯ರಂದು ಅನಂತಪುರ ಕಾಲೇಜದ ಕರ್ನಾಟಕ ಸಂಘದಲ್ಲಿ 'ವೀರಶೈವ ವಾಙ್ಮಯಾವತಾರ' ಎಂಬ ವಿಷಯವನ್ನು ಕುರಿತು ಮಾತನಾಡುತ್ತ "ಬಿಜ್ಜಳನ ದಂಡನಾಥನೆಂದು ಹೇಳಲ್ಪಟ್ಟ ಬಸವಣ್ಣನಿಗೂ ಅಬ್ಬಲೂರ ಶಾಸನದ ಬಸವಣ್ಣನಿಗೂ ಸಂಬಂಧವನ್ನು ಕಲ್ಪಿಸಿ ಬಿಜ್ಜಳನ ಮಂತ್ರಿ ಬಸವಣ್ಣ ಚಾರಿತ್ರಿಕ ಪುರುಷನೇ ಎಂದು ಹೇಳುವುದಕ್ಕೆ ಒಂದೇ ಒಂದು ಸಣ್ಣ ಆಧಾರವಿದೆ. ಆ ಆಧಾರವೂ ಕೂಡ ನಿರಾಧಾರವಾದರೆ ಬಸವಣ್ಣನ ಚಾರಿತ್ರತ್ವವನ್ನು ನಿರ್ಧರಿಸಲಿಕ್ಕೆ ಯಾವ ಪ್ರಮಾಣವೂ ಇಲ್ಲವೆಂದು ನಮಗೆ ಈಗಿನ ವರೆಗೂ ದೊರೆತಿರುವ ಶಾಸನ ವಿಜ್ಞಾನದಿಂದ ಹೇಳಬೇಕಾಗಿದೆ. ಬಿಜ್ಜಳನ ಶಾಸನಗಳಲ್ಲಿ ಅವರ ಮಂತ್ರಿಯಾಗಿ ಕಾಶ್ಯಪನೆಂಬ ಒಬ್ಬನಿದ್ದನೆಂದು ತಿಳಿದು ಬರುತ್ತದೆ. ಮಣಿಗವಳ್ಳಿ ಶಾಸನದ ಬಸವಣ್ಣನು ಕಾಶ್ಯಪಗೋತ್ರದವನು. ಈ ಶಾಸನದ ಬಸವಣ್ಣನೇ ಬಿಜ್ಜಳನ ಶಾಸನಗಳಲ್ಲಿ ಕಾಶ್ಯಪನೆಂದು ಹೇಳಲ್ಪಟ್ಟಿದ್ದಾನೆಂದು ಊಹಿಸಿದರೆ ಅವನ ಚಾರಿತ್ರಿಕ ರಹಸ್ಯವು ಗೊತ್ತಾಗುತ್ತದೆ"[೨೨] ಎಂದು ಹೇಳಿದರು. ಶ್ರೀಯುತರು ಇಲ್ಲಿ ಕಸಪಯ್ಯನಿಗೆ ಸಂಬಂಧಿಸಿದ E. C. VII ಶಿಕಾರಿಪುರ 102, ಶಾಸನವನ್ನು ಆಧಾರವಾಗಿಟ್ಟುಕೊಂಡಂತಿದೆ. ಇಂಥ ಇನ್ನೂ ಕೆಲವು ಶಾಸನಗಳು ಲಭಿಸುತ್ತಿದ್ದು ಅವು ಕೆಳಗಿನಂತಿವೆ.

೧. E.C. VII (ಶಿಕಾರಿಪುರ ೧೮೫) ತಾಳಗುಂದ ಶಾಸನ – ಕ್ರಿ.ಶ. ೧೧೫೮.

೨. E.C. VII (ಶಿಕಾರಿಪುರ ೧೨೩) ಬಳ್ಳಿಗಾವಿ ಶಾಸನ – ಕ್ರಿ.ಶ. ೧೧೫೮.

೩. E.C. VIII (ಸೊರಬ ೩೨೮) ಭಾರಂಗಿ ಶಾಸನ – ಕ್ರಿ.ಶ. ೧೧೫೯.

೪. E.C. VIII (ಸೊರಬ ೩೪೬) ಬೆಣ್ಣೆಗೆರೆ ಶಾಸನ – ಕ್ರಿ.ಶ. ೧೧೬೦.

೫. E.C. XI (ದಾವಣಗೆರೆ ೩೫) ಹರಿಹರ ಶಾಸನ – ಕ್ರಿ.ಶ. ೧೧೬೦.

೬. E.C. VII (ಶಿಕಾರಿಪುರ ೧೦೨) ಬಳ್ಳಿಗಾವೆ ಶಾಸನ – ಕ್ರಿ.ಶ. ೧೧೬೧.

೭. E.C. XI (ದಾವಣಗೆರೆ ೪೨) ಹರಿಹರ ಶಾಸನ – ಕ್ರಿ.ಶ. ೧೧೬೨.

---

೨೨. ಪ್ರ.ಕ. ೨೧-೪

೮. E.C. VII (ಶಿಕಾರಿಪುರ ೨೭೭) ಮುಚ್ಚಡಿ ಶಾಸನ – ಕ್ರಿ.ಶ. ೧೧೬೫.

೯. AP Govt. Ar series No. 9. P. 61, ಹರಸೂರ ಶಾಸನ – ಕ್ರಿ.ಶ. ೧೧೭೨.

ಮೇಲಣ ಶಾಸನಗಳಲ್ಲಿ ಕಂಡುಬರುವ ಕಸಪಯ್ಯನೇ ಬಸವಣ್ಣನೆಂಬ ವಾದವನ್ನು ಪ್ರಚಾರಕ್ಕೆ ತಂದ ಡಾ. ಸಿ. ನಾರಾಯಣರಾಯರೂ ಇದನ್ನು ಅನುಮೋದಿಸುವ ಚೆನ್ನಮಲ್ಲಿಕಾರ್ಜುನ,[೨೩] ಬಸವನಾಳ (?)[೨೪] ಅವರೂ ಕೊಡುವ ಕಾರಗಳು ಹೀಗಿವೆ.

೧. ಮನಗೂಳಿ ಶಾಸನೋಕ್ತ ಬಸವಯ್ಯನೆಂಬವನ ಗೋತ್ರ ಕಾಶ್ಯಪ. ಈತನೇ ಕಲ್ಯಾಣ ಬಸವಣ್ಣನಾಗಿದ್ದು ರಾಜಕೀಯ ಪ್ರಸಂಗದಲ್ಲಿ ಈ ಕಾಶ್ಯಪವೆಂಬ ಗೋತ್ರನಾಮವನ್ನೇ ಕಸಪಯ್ಯನೆಂದು ಬಳಸುತ್ತಿರಬಹುದು.

೨. ಕಸಪಯ್ಯ ನಾಯಕನನ್ನು ಬಳ್ಳಿಗಾವಿ ಶಾಸನ[೨೫]ದಲ್ಲಿ–

ಮನಮಂ ಶಂಕರಪಾದಪಂಕರುಹದೊಳ್‌ಧರ್ಮಾರ್ಜಿತಾತ್ಮೀಯ ಕಾಂ
ಚನಮಂ ಶಿಷ್ಟಜನಂಗಳೊಳ್ ನಿಜಭುಜ ಕ್ರೂರತ್ವಮಂ ಸ್ವಾಮಿ ವೈ ।
ರಿ ನರಾಧೀಶ್ವರ ಯುದ್ಧದೊಳ್ ತಳೆದನೆಂದಂದನ್ಯ ಸಾಮಾನ್ಯನೇ ।
ಜನತಾ ಮಸ್ತಕ ಮಂಡನಂ ಕಸಪಯಂ ವಿಶ್ವಂಭರಾ ಚಕ್ರದೊಳ್ ।

ಹರಚರಣ ಕಮಳಯುಗ ಷಟ್ ।
ಚರಣಂ ನುತ ವಿವಿಧ ವಿಬುಧ ವಿನುತ ಸಮಗ್ರಾ ।
ಭರಣಂ ಸುಭಟ ಜನೈಕಾ ।
ಭರಣಂ ಕೇವಳಮೆ ಕಸಪಯಂ ವಸುಮತಿಯೊಳ್ ।

ಎಂದು ಕೀರ್ತಿಸಲಾಗಿದೆ. ಇಲ್ಲಿಯ ಒಂದೊಂದು ಮಾತೂ ಶಿವಭಕ್ತಿ, ಪರಹಿತಾಸಕ್ತಿ, ಲೋಕೋತ್ತರ ಖ್ಯಾತಿಗಳನ್ನು ಎತ್ತಿ ಹೇಳುತ್ತಿದ್ದು ಬಸವಣ್ಣನವರನ್ನು ನೆನಪಿಗೆ ತರುತ್ತವೆ.

೩. ಕ್ರಿ.ಶ. ೧೧೭೨ ಹರಸೂರ ಶಾಸನ[೨೬]ದಲ್ಲಿ

ಕಳಚುರಿ ನೃಪಕುಳ ರಾಜ್ಯಂ ।
ಬಳವತ್ ದುರ್ಮಂತ್ರಿ ಕಸಪಯಾದಿಗಳಿಂದಂ ।
ಗಳಕುಳಮಾಗಿರೆ ನಿಜದೋ ।
ರ್ಬಳದಿಂದಳವಡಿಸಿ ಮಾಧವಂ ಪೆಸರ್ವಡೆದಂ ।

---

೨೩. ಶ್ರೀ ಬಸವೇಶ್ವರನ ಕಾಲ, ಪು. ೧೦೫

೨೪. "ಕೆಲವು ಶಾಸನಗಳಲ್ಲಿ ಬಿಜ್ಜಳನ ಪ್ರಧಾನಮಂತ್ರಿಯೆಂದೂ ವರ್ಣಿಸಲ್ಪಟ್ಟ ಕಸಪಯ್ಯ ಎಂಬ ವ್ಯಕ್ತಿಯು ಬಸವಣ್ಣನವರೇ ಎಂಬ ಅಭಿಪ್ರಾಯ ಈಗ ಧೃಡವಾಗ ತೊಡಗಿದೆ........ಇದು ಅಸಂಭವವೆಂದು ಕಡೆಗಣಿಸಲೂ ಬರುವಂತಿಲ್ಲ"– ಬಸವನಾಳ ಸ್ಮಾರಕ ಸಂಪುಟ, ಪು. ೪೭೨.

೨೫. E.C. VII ಶಿಕಾರಿಪು. ೧೦೨.

೨೬. Ap. Govt Ar. series No. 9. P. 61

ಎಂಬ ಪದ್ಯವೊಂದಿದೆ. ಕಳಚುರಿ ಸಾಮ್ರಾಜ್ಯದಲ್ಲಿ ಕಸಪಯ್ಯನೆಂಬ ಮಂತ್ರಿಯಿಂದ ಉದ್ಭವಿಸಿದ ಗಲಭೆಯನ್ನು ರಾಯಮುರಾರಿ ಸೋವಿದೇವನ ಮಂತ್ರಿ ಮಾಧವನು ಶಮನಗೊಳಿಸಿದನೆಂದು ಇದರ ಅಭಿಪ್ರಾಯ. ಇದು ಬಸವಣ್ಣನವರು ಬಿಜ್ಜಳನೊಂದಿಗೆ ಮನಸ್ತಾಪ ಮಾಡಿಕೊಂಡು ಸಾಮ್ರಾಜ್ಯದಲ್ಲಿ ಕೋಲಾಹಲಮಾಡಿದುದರ ಸೂಚನೆಯಾಗಿರಬೇಕು.

೪. ಕಸಪಯ್ಯನ ಶಾಸನಗಳೆಲ್ಲ ಬಸವಣ್ಣನವರ ಸಮಕಾಲೀನವಾದುದರಿಂದ ಕಾಲ ಮರ್ಯಾದೆಗೂ ಧಕ್ಕೆ ಬರುವುದಿಲ್ಲ. ಅದಕ್ಕಾಗಿ ಬಿಜ್ಜಳನ ಮಂತ್ರಿ ಕಸಪಯ್ಯನೆಂದರೆ ಕಲ್ಯಾಣದ ಬಸವಣ್ಣನೆಂದು ಹೇಳಬೇಕಾಗುತ್ತದೆ.

ಈ ವಾದವನ್ನು ವಿರೋಧಿಸುವ ಡಾ. ನಂದಿಮಠ[೨೭] ಶ್ರೀ ಎಂ. ಪಿ. ಪಾಟೀಲ[೨೮] ಮುಂತಾದವರು ಕೊಡುವ ಕಾರಣಗಳು ಹೀಗಿವೆ.

೧. ಬಸವಣ್ಣ ಮತ್ತು ಕಸಪಯ್ಯರಲ್ಲಿ ಸಂಬಂಧಕಲ್ಪಿಸುವವರಿಗೆ ಕಾಶ್ಯಪಗೋತ್ರದ ಬಸವಯ್ಯನನ್ನು ಉಲ್ಲೇಖಿಸುವ ಮನಗೂಳಿ ಶಾಸನವೊಂದು ಮಧ್ಯಸೇತುವೆಯಾಗಿದೆ. ಆದರೆ ಈ ಮನಗೂಳಿ ಶಾಸನ ಬಸವಣ್ಣನವರಿಗೆ ಸಂಬಂಧ ಪಟ್ಟುದಲ್ಲವಾದುದರಿಂದ ಕಸಪಯ್ಯನೇ ಬೇರೆ ಬಸವಣ್ಣನೇ ಬೇರೆ ಎಂದು ಹೇಳಬೇಕಾಗುತ್ತದೆ. ಒಂದು ವೇಳೆ ಮನಗೂಳಿ ಶಾಸನವನ್ನು ಒಪ್ಪಿಕೊಂಡರೂ ಒಬ್ಬನೇ ವ್ಯಕ್ತಿ ನಿತ್ಯಜೀವನದಲ್ಲಿ ಬಸವಣ್ಣನೆಂಬ ನಿಜವಾಮವನ್ನು ರಾಜಕೀಯದಲ್ಲಿ ಕಸಪಯ್ಯನೆಂಬ ಗೋತ್ರನಾಮವನ್ನು ಬಳಸುತ್ತಿದ್ದನೆಂಬುದು ತೀರ ಅಸ್ವಾಭಾವಿಕ.

೨. ಮೇಲಣ ಪದ್ಯಗಳಲ್ಲಿ 'ಹರಚರಣ ಕಮಳಯುಗ ಷಟ್ಚರಣಂ' ಎಂದು ಮುಂತಾಗಿ ಸ್ತುತಿಸಲ್ಪಟ್ಟ ಕಸಪಯ್ಯನನ್ನು ಹರಿಹರ ಶಾಸನ[೨೯]ದಲ್ಲಿ–

> ....ಪುರಾಣ ರುಕ್ಮಾಂ ।
> ಗದನಪರ ಯುಧಿಷ್ಠಿರ ನವಪ್ರಹ್ಲಾದಂ ।
> ಸದಮಳ ಚರಿತ್ರದಿಂದೆ..............।

ಎಂದು ಹೊಗಳಲಾಗಿದೆ. ಇಲ್ಲಿಯ ವಿಶೇಷಣಗಳು ಬಸವಣ್ಣನವರ ಶೈವನಿಷ್ಠೆಯನ್ನು ಪ್ರಶ್ನಿಸುವಂತಿರುವುದರಿಂದ ಕಸಪಯ್ಯನು ಬಸವಣ್ಣನಲ್ಲ.

೩. ಕಸಪಯ್ಯನ ಕಾರ್ಯಕ್ಷೇತ್ರ ಕೊನೆಯವರೆಗೂ ಬನವಾಸಿ ಪ್ರಾಂತವೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಕಸಪಯ್ಯನೇ ಬಸವಣ್ಣನವರೆಂದಿಟ್ಟುಕೊಂಡರೆ ಕಲ್ಯಾಣದಲ್ಲಿ ಅವರು ಹೂಡಿದ ಆಂದೋಲನೆಯ ಬಗ್ಗೆ ಸಂದೇಹ ಹುಟ್ಟುತ್ತದೆ. ಕೊನೆಯದಾಗಿ ಕಸಪಯ್ಯನು ಬಳ್ಳಿಗಾವಿಯ ಕೋಡಿಮಠ ಮುಂತಾದವುಗಳಿಗೆ ದತ್ತಿ ಕೊಡಿಸಿದ, ದತ್ತಿ ಕೊಟ್ಟ ಸಂಗತಿಗಳು ಬಸವಣ್ಣನವರಿಗೆ ಸ್ಥಾವರಲಿಂಗದ ವಿಷಯದಲ್ಲಿ ಇದ್ದ ತಾತ್ವಿಕ ಅನಾದರದ ಬಗ್ಗೆ ಸಂಶಯವನ್ನು ಹುಟ್ಟಿಸುತ್ತದೆ. ಅದಕ್ಕಾಗಿ ಕಸಪಯ್ಯನೆಂಬನು ಬಿಜ್ಜಳನ ಕಾಲದಲ್ಲಿ ಪ್ರಸಿದ್ಧಿ ಪಡೆದ ಬೇರೊಬ್ಬ ಮಂತ್ರಿಯೇ ಹೊರತು

---

೨೭. ವೀರಶೈವ ೩–೧೧,೧೨

೨೮. ಬಸವಣ್ಣನವರ ಚರಿತ್ರೆಯ ಮೇಲೆ ಹೊಸಬೆಳಕು

೨೯. E.C. XI ದಾವಣಗೆರೆ ೪೨.

ಬಸವಣ್ಣನಲ್ಲ. ಎಂಬಿವೇ ಮೊದಲಾದ ಉತ್ತರಗಳಿಂದ ಶ್ರೀ ಚಿಲಕೂರಿ ನಾರಾಯಣರಾಯರ ವಾದ ಬಿದ್ದುಹೋಗಿ ಇಂದಿಗೆ ಬಹಳ ದಿನಗಳಾದವು. ಈ ಕಾರಣಗಳಿಂದಾಗಿ ಕಸಪಯ್ಯನ[೩೦] ಶಾಸನಗಳು ಬಸವಣ್ಣನವರಿಗೆ ಸಂಬಂಧಪಟ್ಟುವಲ್ಲವೆನ್ನಬಹುದು.

ಓರುವಾಯಿ ಶಾಸನ :

ಕಸಪಯ್ಯನೇ ಬಸವಣ್ಣನೆಂಬ ಮೇಲಣ ವಾದವನ್ನು ಪ್ರಚುರ ಪಡಿಸಿದ ಶ್ರೀ ಸಿ. ನಾರಾಯಣರಾಯರು ಕೆಳಗಣ ಓರುವಾಯಿ ಶಾಸನ (ಕ್ರಿ.ಶ. ೧೨೦೩)ದಲ್ಲಿ ಕಂಡು ಬರುವ ಬಸವಣದಂಡನಾಯಕನೇ ಬಸವಣ್ಣನೆಂದು ಪ್ರ. ಕ. ೨೧-೪ದಲ್ಲಿ ಪ್ರಕಟವಾದ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

"ಸ್ವಸ್ತಿ ಶ್ರೀಮತು ಯಾದವನಾರಾಯಣಂ ಪ್ರತಾಪ ಚಕ್ರವರ್ತಿ ಹೊಯ್ಸಳ ವೀರಬಲ್ಲಾಳದೇವರ ರಾಜ್ಯ ಸಮುದ್ಧರ ಬಸವಣದಂಡನಾಯಕ ಗುಣಪ್ರಭಾವವೆಂತೆಂದಡೆ ।

ನುಡಿವಂ ಸತ್ಯವಚೋಕ್ತಿಯಿಂ ಸಕಳ ಧರ್ಮಬ್ಯಾಪ್ತಿಯಿಂದರ್ಥಮಂ।
ಪಡೆವಂ ವಿಪ್ರ ಸುರಾದಿ ಶಿಷ್ಟ ಜನತಾ ಸಂತುಷ್ಟಿಯಾಗಲ್ಕೆ ತಾಂ ।
ಕುಡುವಂ ದ್ರವ್ಯಮನೀಗುಣಾಶ್ರಯಮುಮಂ ಲೋಕಂ ಬಬಾಪ್ಪೆಂಬಿನಂ ।
ಪಡೆದಂ ಸದ್ಗುಣಿ ದಂಡನಾಥ ಬಸವಂ ಪ್ರಖ್ಯಾತಿಯಂ ಕೀರ್ತಿಯಂ ।

ಕಲಿಯಮೃತ ದಂಡನಾಥರ ।
ಲಲಿತಾತ್ಮಜನೆಂದೊಡೊಪ್ಪುಗುಂ ಕಲಿತನಮುಂ ।
ಸಲೆ ಸತ್ಯಾಮೃತ ವಾಕ್ಯಂ ।
ಕುಲ ತಿಳಕಂ ಬಸವದಂಡನಾಥಾಧಿಪನೊಳ್ ।

......ಶ್ರೀ ವಿನಾಯಕ ದೇವರ್ಗಾ ರಣಧವಳ ಬಸವಚಮೂಪಂ ಧಾರಾಪೂರ್ವಕಂ ಮಾಡಿಕೊಟ್ಟ....."

ಈ ಶಾಸನವನ್ನಾಧಾರಿಸಿ "ಬಸವಣ್ಣನು ಬಿಜ್ಜಳನ ರಾಜ್ಯವನ್ನು ಬಿಟ್ಟು ಪ್ರಚ್ಛನ್ನವಾಗಿ ಹೋಗಿ ಬಲ್ಲಾಳನ ಸ್ಥಾನವನ್ನು ಸೇರಿದನೆಂದೂ, ಬಿಜ್ಜಳನ ವಂಶವು ಸಂಪೂರ್ಣವಾಗಿ ನಾಶವನ್ನು ಹೊಂದಿದವರೆಗೂ ಬಲ್ಲಾಳನಿಗೆ ಸಹಾಯಮಾಡಿ ತನ್ನ ಹಗೆ ತೀರಿಸಿಕೊಂಡನೆಂದೂ ಅವನು ವೃದ್ಧಾಪ್ಯದವರೆಗೂ ಜೀವಿಸಿದ್ದನೆಂದೂ ನಾನು ಊಹಿಸುತ್ತೇನೆ" ಎಂದು ಶ್ರೀ ಸಿ. ನಾರಾಯಣರಾಯರು ಹೇಳುತ್ತಾರೆ. ಆದರೆ ಈ ಬಸವಣದಂಡನಾಯಕನು ಅಮೃತದಂಡನಾಥರ ಮಗ ಎಂಬ ಅಂಶವನ್ನು ಗಮನಿಸಿದರೆ ಸಾಕು ಶ್ರೀಯುತರ ಹೇಳಿಕೆ ತಟ್ಟನೇ ಮುರಿದುಬೀಳುತ್ತದೆ. ಕಲಚುರಿಗಳಲ್ಲಿದ್ದಾಗ ಕಸಪಯ್ಯನೆನಿಸಿಕೊಂಡವನು ಹೊಯ್ಸಳರಲ್ಲಿ ಬಸವಣದಂಡ ನಾಯಕನೆಂದು ಹೆಸರು ಬದಲಿಸಿಕೊಂಡನೆಂಬ ಅರ್ಥ ಬರುವ ಇವರ ವಾದ[೩೧] ಸತ್ಯಾಸತ್ಯತೆಯ ವಿವೇಚನೆಗೂ ಅನರ್ಹವಾದುದರಿಂದ ಯಾರಬೆಂಬಲವನ್ನು ಕಟ್ಟಿಕೊಳ್ಳದೆ ಹುಟ್ಟುತ್ತಲೆ ಸತ್ತು ಹೋಯಿತು.

---

೩೦. ಅವನಿಗೆ ಕಸಪಯ್ಯ, ಕೇಶವ, ಕೇಶಿರಾಜ, ಕೇಶಿಮಯ್ಯ ಎಂದು ಹೆಸರಿತ್ತು"(ವೀರಶೈವ ೩-೧೧,೧೨) ಎಂದು ಡಾ. ನಂದಿಮಠರು ಹೇಳುತ್ತಾರೆ. ಕಸಪಯ್ಯನ ಇನ್ನೊಂದು ಹೆಸರು ಮಹಾದೇವರಸನೆಂದು ಡಾ. ಆರ್.ಸಿ. ಹಿರೇಮಠರು (ಚೆನ್ನಬಸವಣ್ಣನವರು, ಪು. ೧೦, ೧೨) ಹೇಳುತ್ತಾರೆ.

೩೧. ಶಿವಾ-೧೫-೩ರಲ್ಲಿ ಶ್ರೀ ಚಿದರೆಮಠದ ವೀರಭದ್ರಶಾಸ್ತ್ರಿಗಳು ತಕ್ಕ ಉತ್ತರ ಕೊಟ್ಟಿದ್ದಾರೆ.

ಅಬ್ಬಲೂರ ಶಾಸನ :

ಡಾ. ಸಿ. ನಾರಾಯಣರಾಯರು ಮೇಲೆ ಹೇಳಿದ ತಮ್ಮ ಭಾಷಣದಲ್ಲಿ 'ಬಿಜ್ಜಳನ ಕಾಲಕ್ಕೆ ಸೇರಿದ ಅಬ್ಬಲೂರ ಶಾಸನದಲ್ಲಿ ಮಾತ್ರ ಬಸವಣ್ಣನ ಹೆಸರು ಕಾಣಬರುತ್ತದೆ'. 'ಅಬ್ಬಲೂರು ಶಾಸನದ ಬಸವಣ್ಣನು ಕಾಶ್ಯಪಗೋತ್ರದವನು' ಎಂದು ಮುಂತಾಗಿ ಹೇಳಿದ್ದಾರೆ. ಪ್ರೊ. ಬಸವನಾಳರು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಪರವಾಗಿ ದಿ. ೨೫, ೨೬, ೨೭, ಮಾರ್ಚ ೧೯೫೧ರಂದು ಮಾಡಿದ ಉಪನ್ಯಾಸದಲ್ಲಿ ಬಸವಣ್ಣನವರ ಶಾಸನಗಳನ್ನು ಯಾದಿಗೊಳಿಸುತ್ತ ಈ ಅಬ್ಬಲೂರ ಶಾಸನವನ್ನು ಉಲ್ಲೇಖಿಸಿದ್ದಾರೆ.[೩೨] ಆದರೆ ಅಬ್ಬಲೂರ ಗ್ರಾಮದಲ್ಲಿ ದೊರೆತ ಯಾವ ಶಾಸನದಲ್ಲಿಯೂ ಬಸವಣ್ಣನವರ ಹೆಸರು ಕಂಡುಬರುವುದಿಲ್ಲ. ಡಾ.ಸಿ. ನಾರಾಯಣರಾಯರು ಬಾಯಿತಪ್ಪಿ ಹೇಳಿದ ಮಾತನ್ನೇ ಪ್ರೊ. ಬಸವನಾಳರು ಕಣ್ಣು ತಪ್ಪಿ ಸ್ವೀಕರಿಸಿದಂತಿದೆ. ಅದೇನೇ ಇದ್ದರೂ ಬಸವಣ್ಣನವರ ವಿಷಯದಲ್ಲಿ ಈ ಶಾಸನವನ್ನು ಖಂಡಿತ ಬಿಟ್ಟುಕೊಡಬೇಕಾಗುತ್ತದೆ.[೩೩]

ಸೊರಟೂರ ಶಾಸನ :

ಶಿವಾನುಭವ ೧೪-೨ರಲ್ಲಿ ದಿ. ಗೋವಿಂದ ಪೈ ಅವರು ಉಲ್ಲೇಖಿಸಿದ ಈ ಶಾಸನ ಕೆಳಗಿನಂತಿದೆ.

"ಶುಭಮಸ್ತು. ದುರ್ಮುಖಿ ಸಂವತ್ಸರದಲಾಸ್ವೀಜ ಶು.೧೦ ಮಂಗಳವಾರದಲು, ಶ್ರೀಮನ್ಮಹಾನಾಯಕಾಚಾರ್ಯ ಭಾಸೆ ಪಾಲಕರಾದಂಥಾ ಶ್ರೀ ಹಂದಿಗನೂರ ಸಿದೆನಾಯಕರ ಮುತಾಲಿಕನು ಗಬ್ಬಿನಾಯಕನು ಸೊರಟೂರ ಹಾಳು ದೇವಾಲ್ಯವನ್ನೂ ಜೀರ್ನೋಧಾರವನ್ನೂ ಮಾಡಿ ಬಸವೇಶ್ವರ ದೇವರನೂ ಪ್ರತಿಷ್ಠೆ ಮಾಡಿದನು......" ಈ ಶಾಸನದಲ್ಲಿಯ ಬಸವೇಶ್ವರ ದೇವರೆಂದರೆ ಕಲ್ಯಾಣ ಬಸವಣ್ಣನೇ ಎಂದು ಭಾವಿಸಿ "ಈ ಕಾಲಕ್ಕೆ (ಕ್ರಿ.ಶ. ೧೩೫೬) ಹಿಂದಿನಿಂದಲೇ ಬಸವೇಶ್ವರನ ವಿಗ್ರಹ ಮಾಡಿ ಪೂಜಿಸುತ್ತಿದದ್ದರೆಂದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ" ಎಂದು ಶ್ರೀಯುತರು ಅಭಿಪ್ರಾಯ ಪಡುತ್ತಾರೆ. ಆದರೆ ಇದು ಬಸವಣ್ಣನವರ ವಿಗ್ರಹವಾಗಿರದೆ ನಂದಿಯ ವಿಗ್ರಹವಾಗಿರುವ ಸಂಭವ ಹೆಚ್ಚು. ಅದಕ್ಕಾಗಿ ಸಬಲವಾದ ಆಧಾರಗಳಿಲ್ಲದ ಈ ಶಾಸನ ಬಸವಣ್ಣನವರನ್ನು ಕುರಿತುದಾಗಿರಲಿಕ್ಕಿಲ್ಲ.

ಬಳ್ಳಿಗಾವಿ ಶಾಸನ :

ಕ್ರಿ.ಶ. ೧೧೧೮ರ ಬಳ್ಳಿಗಾವಿ ವಿರಕ್ತಮಠದ ತಾಮ್ರ ಶಾಸನದಲ್ಲಿ ಕದಂಬ ವಂಶದ ಸೋಮರಾಜನು ಸೇನವಳ್ಳಿ ಕಚವಿ ಮಾವಿನಹಳ್ಳಿಗಳೆಂಬ ಮೂರು ಗ್ರಾಮಗಳನ್ನು ೬೭ ಜನ ಬ್ರಾಹ್ಮಣರಿಗೆ ದತ್ತಿಕೊಟ್ಟನೆಂದು ಹೇಳಲಾಗಿದೆ. ಈ ೬೭ ಜನರ ಮಧ್ಯ ಬರುವ ".............ಕಾಶ್ಯಪಗೋತ್ರಾಣಾಂ ಬಸವಣ ಪಟ್ಟವರ್ಧನ, ಪ್ರಧಾನಿ ನಾರಾಯಣದೇವ....." ಎಂಬ ವಾಕ್ಯದಲ್ಲಿಯ ಬಸವಣ ಪಟ್ಟವರ್ಧನನೆಂದರೆ ಕಲ್ಯಾಣ

---

೩೨. ಬಸವನಾಳ ಸ್ಮಾರಕ ಸಂಪುಟ, ಪು. ೪೭೧

೩೩. ಶಿವಾ-೧೪-೯ರಲ್ಲಿ ಡಾ. ಹಳಕಟ್ಟಿ, ಶಿವಾ-೧೫-೩ ರಲ್ಲಿ ಶ್ರೀ ಚಿದರೆಮಠದ ವೀರಭದ್ರಶಾಸ್ತ್ರೀಗಳು ಈ ಅಬ್ಬಲೂರ ಶಾಸನವನ್ನು ಅಲ್ಲಗಳೆದಿದ್ದಾರೆ.

ಬಸವಣ್ಣನೆಂದು ಶ್ರೀ ಚೆನ್ನಮಲ್ಲಿಕಾರ್ಜುನರು ಊಹಿಸಿದ್ದಾರೆ. ಮನಗೂಳಿ ಶಾಸನೋಕ್ತ ಬಸವಯ್ಯ ಮತ್ತು ಈ ಶಾಸನದ ಬಸವಣ್ಣ ಪಟ್ಟವರ್ಧನ ಇಬ್ಬರೂ ಕಾಶ್ಯಪಗೋತ್ರದವರೆಂಬುದೇ ಇವರಿಗೆ ಆಧಾರ. ಆದರೆ ಶಾಸನದಲ್ಲಿ ಬಸವಣ್ಣನವರ ಕಾಲ ಮತ್ತು ವ್ಯಕ್ತಿತ್ವಗಳಿಗೆ ವ್ಯತಿರಿಕ್ತವಾದ ಅಂಶಗಳಿರುವುದರಿಂದ ಪಂಡಿತರು ಈ ವಾದವನ್ನು ತಿರಸ್ಕರಿಸಿದ್ದಾರೆ.[೩೪] ಅದಕ್ಕಾಗಿ ಈ ಶಾಸನವೂ ಬಸವಣ್ಣನವರಿಗೆ ಸಂಬಂಧಪಟ್ಟುದಲ್ಲ

ಒಟ್ಟಿನಲ್ಲಿ ಫ್ಲೀಟರ ಮನಗೂಳಿ ಶಾಸನ, ಶ್ರೀಕಂಠಶಾಸ್ತ್ರಿಗಳ ರಾಯಸೆಟ್ಟಿಪುರ ಶಾಸನ, ಸಿ. ನಾರಾಯಣರಾಯರ ಕಸಪಯ್ಯನ ಶಾಸನ, ಓರುವಾಯ ಶಾಸನ ಮತ್ತು ಅಬ್ಬಲೂರ ಶಾಸನ, ಗೋವಿಂದ ಪೈಗಳ ಸೊರಟೂರ ಶಾಸನ, ಚನ್ನಮಲ್ಲಿಕಾರ್ಜುನರ ಬಳ್ಳಿಗಾವಿ ಶಾಸನಗಳಿಗೂ ಬಸವಣ್ಣನವರಿಗೂ ಯಾವುದೇ ಸಂಬಂಧವಿಲ್ಲವೆಂದು ಈ ವರೆಗಣ ವಿವೇಚನೆಯಿಂದ ತಿಳಿದುಬರುತ್ತದೆ. ಅದಕ್ಕಾಗಿ ಈ ಏಳು ಬಸವಣ್ಣನವರನ್ನು ಕುರಿತ ಅಸಮ್ಮತ ಶಾಸನಗಳು.[೩೫]

(ii) ಸರ್ವಸಮ್ಮತ ಶಾಸನಗಳು

ಬಸವಣ್ಣನವರನ್ನು ಕುರಿತು ಹೇಳಲಾದ ಮೇಲಣ ೧೮ ಶಾಸನಗಳಲ್ಲಿ ಈ ವರೆಗೆ ವಿವೇಚಿಸಿದ ಅಸಮ್ಮತ ಶಾಸನಗಳನ್ನು ಬಿಟ್ಟರೆ ಉಳಿಯುವ ೧೧ ಶಾಸನಗಳನ್ನು ಎಲ್ಲ ವಿದ್ವಾಂಸರು ಒಪ್ಪುತ್ತಾರೆ. ಅವುಗಳನ್ನು 'ಸರ್ವಸಮ್ಮತ ಶಾಸನಗಳು' ಎಂದು ಕರೆಯಲಾಗಿದೆ ಅವು :

ಶಾಸನಗಳು	**ಮಿತಿ**	**ಆಕರ**	**ಹೆಸರು**
೧. ಹಿರಿಯೂರ ಶಾನ	೧೨೫೯	E.C.V. ii ಅರಸಿಕೆರೆ ೧೦೯	ಬಸವಯ್ಯ
೨. ಅರ್ಜುನವಾಡ ಶಾಸನ	೧೨೬೦	E.I.XXI. P.9	ಬಸವರಾಜ ಸಂಗನಬಸವ
೩. ಚೌಡದಾನಪುರ ಶಾಸನ	೧೨೬೩	ಶಿವದೇವವಿಜಯಂ	ಸಂಗಮೇಶನಪುತ್ರ ಬಸವಯ್ಯ
೪. ಚೌಡದಾನಪುರ ಶಾಸನ	೧೨೬೩	ಶಿವದೇವವಿಜಯಂ	ಸಂಗನಬಸವ
೫. ಕಲ್ಲೇದೇವರಪುರ ಶಾಸನ	೧೨೭೯	E.C.XI ಜಗಳೂರ, ೩೦	ಬಸವರಾಜ

---

೩೪. ಬಸವಣ್ಣನವರ ಚರಿತ್ರೆಯ ಮೇಲೆ ಹೊಸಬೆಳಕು–ಎಂ.ಪಿ. ಪಾಟೀಲ
೩೫. ೧೧–೧೨ನೆಯ ಶತಮಾನಗಳ ಅವಧಿಯ ಇನ್ನೂ ಕೆಲವು ಶಾಸನಗಳಲ್ಲಿ ಎಡೆಯ ಬಸವಯ್ಯ, ಸೆಂಬೊಳಲ ಬಸವಯ್ಯ, ಧರ್ಮದ ಬಸವಣ್ಣ, ಸಹಜಾನಂದ ಬಸವಸೆಟ್ಟಿ, ಕೇಣಿಕಾರ ಬಸವರಸ, ಹಡವಳ ಬಸವಯ್ಯ ಎಂಬ ಹೆಸರುಗಳು ಕಂಡುಬರುತ್ತಿದ್ದರೂ ಇವರು ಕಲ್ಯಾಣದ ಬಸವಣ್ಣನಾಗಿರಲಾರರು ಎಂಬ ದೀರ್ಘಲೇಖನವನ್ನು ಡಾ. ನಂದೀಮಠರು ಬರೆದಿದ್ದಾರೆ.(ಶಿವಾ ೫–೧೧,೧೨)

೬. ಮರಡಿಪುರ ಶಾಸನ	೧೨೮೦	E.C. III. i ಮಂಡ್ಯ ೮೩	ಸಂಗನಬಸವಯ್ಯ
೭. ಗುಡಿಹಾಳ ಕುಂಟೋಜಿ	೧೪ನೇ ಶತಮಾನ	S.I.I. XV ೬೫೮	ಬಸವರಾಜದೇವರು
೮. ಆನಂದಪುರ ಮಠದ ತಾಮ್ರ ಶಾಸನ	೧೬೬೦	ಬಸವೇಶ್ವರನ ಕಾಲ	ಬಸವೇಶ್ವರ
೯. ಜೋಡೀದಾಸೇನಹಳ್ಳಿ	೧೬೮೬	E.C. XII ಮದ್ದಗಿರಿ ೮	ಬಸವರಾಜೇಂದ್ರ
೧೦. ಕಾನಕಾನಹಳ್ಳಿ ತಾಮ್ರ ಶಾಸನ	೧೭೦೦	E.C. IX ಕಾನಕಾನಹಳ್ಳಿ ೮೯	ಬಸವೇಶ್ವರಸ್ವಾಮುಲು
೧೧.ಕಾನಕಾನಹಳ್ಳಿ ತಾಮ್ರ ಶಾಸನ	೧೭೦೦	EC IX ಕಾನಕಾನಹಳ್ಳಿ ೯೦	ಕಲ್ಯಾಣದ ಬಸವಪ್ಪನವರು

ಬಸವಣ್ಣನವರ ಚರಿತ್ರೆ ಮತ್ತು ವ್ಯಕ್ತಿತ್ವಗಳ ಮೇಲೆ ಬೆಳಕು ಬೀರುವ ಈ ಶಾಸನಗಳನ್ನು ವಿವರವಾಗಿ ನೋಡಬಹುದು.

ಹಿರಿಯೂರ ಶಾಸನ :

ಹರಪದಪೂಜೆಯೊಳ್ ಹರಕಥೋಚಿತತತ್ವಸುಖಾನುಸೇವೆಯೊಳ್
ಹರಸಮಯ ಪ್ರಭಾವ ಪರಿವರ್ತನದೊಳ್ ಹರಭಕ್ತಿಯೊಳ್ ಹರ ।
ಸ್ಮರಣದೊಳಾವಗಂ ತನು ಧನಂ ಮನವೆಂಬಿವನೆಯ್ದೆ ಕೂಡಿ ಸು ।
ಸ್ಥಿರ ಮೆನಿಸಿರ್ಪನೇಂ ಸುಕೃತಪುಂಜನೋ ಕುಂಜನಿಳಾತಳಾಗ್ರದೊಳ್ ।

ತನುವಂ ಜಂಗಮದೆಡೆಯೊಳ್ ।
ಮನಮಂ ಶ್ರೀ ಸೋಮನಾಥ ಪದಪಂಕಜದೊಳ್ ।
ವಿನಿಯೋಗಿಸಿ ಕುಂಜಂ ನೆ ।
ಟ್ಟನೆ ಪಡೆದಂ ಪುಣ್ಯಪದಮನಾ ಶಿವಪದಮಂ ।[೩೬]

ಶಿವಭಕ್ತಿಯ ಸಕಾರಮೂರ್ತಿಯೆನಿಸಿದ್ದ ಈ ಕುಂಜಸೆಟ್ಟಿ ಎಳೆಮೆಯಲ್ಲಿ ಲಿಂಗೈಕ್ಯನಾಗಲು ತಂದೆಯಾದ ಕಂಡನಂಬಿ ಸೆಟ್ಟಿ ಈತನ ಹೆಸರಿನಲ್ಲಿ ಕುಂಜೇಶ್ವರ ಶಿವಾಲಯವನ್ನು ನಿರ್ಮಿಸಿದನು. ಈ ದೇವಾಲಯದೊಳಗೆ ನಿಲ್ಲಿಸಲಾದ ಕ್ರಿ.ಸ. ೧೨೪೯ರ ಶಾಸನದಲ್ಲಿ–

ಸಿರಿಯಾಳ್ವಂ ಬಸವಯ್ಯನೊಳ್ಪೆಸೆವxxx ಮಂ ಬಾಣನುಂ ।
ಧರಭೋಗಂ ಸಲೆ ಚೋಳನುದ್ಭಟನತರ್ಕ್ಯಂ ಸಿಂಧು ಬಲ್ಲಾಳನೀ ।
ಧರೆ ಕೊಂಡಾಡುವ ದಾಸಿಮಯ್ಯನೆನಿಸಿರ್ದೀ ಭಕ್ತ ಸಂದೋಹವಾ ।
ದರದಿಂ ಕಾಕರ ಕಂಡನಂಬಿ ನಿನಗೀಗುದ್ಬೋಧ ಸಂಪತ್ತಿಯಂ ।

---

೩೬. ಈ ಎರಡು ಪದ್ಯಗಳನ್ನು E.C. V. ii ಅರಸಿಕೆರೆ ೧೦೮ ಹಿರಿಯೂರ ಶಾಸನದಿಂದ ಆಯ್ದುಕೊಳ್ಳಲಾಗಿದೆ.

ಎಂಬ ಆಶೀರೂಪದ ಪದ್ಯವೊಂದು ಕಂಡುಬರುತ್ತದೆ. ಬಸವಣ್ಣನವರು ಐಕ್ಯವಾದ ೯೦ ವರುಷದೊಳಗೆ ಹುಟ್ಟಿದ ಇದು ಅವರನ್ನು ಕುರಿತ ಪ್ರಾಚೀನತಮ ಶಾಸನ. ಇಲ್ಲಿ ಬಸವಣ್ಣನವರನ್ನು ಬಿಟ್ಟರೆ ಮಿಕ್ಕವರೆಲ್ಲ ತ್ರಿಷಷ್ಟಿ ಪುರಾತನರು ಮತ್ತು ಪ್ರಾಚೀನ ಶರಣರು. ಈ ಪ್ರಾಚೀನರ ಪಂಕ್ತಿಯಲ್ಲಿ ಕಲ್ಯಾಣ ಶರಣರ ಸಮೂಹದಿಂದ ಬಸವಣ್ಣನವರೊಬ್ಬರನ್ನು ಮಾತ್ರ ಆಯ್ದುಕೊಂಡಿರುವುದು ಗಮನಿಸಬೇಕಾದ ಸಂಗತಿ. ಇಲ್ಲಿ ಬಳಸಲಾದ 'ಭಕ್ತ ಸಂದೋಹ' ಎಂಬ ಪದ ಬಳಕೆ ಔಚಿತ್ಯಪೂರ್ಣವಾದುದು.

ಅರ್ಜುನವಾಡ ಶಾಸನ*

ಬಸವಣ್ಣನವರ ಚರಿತ್ರೆಯ ಮೇಲೆ ಹೊಸಬೆಳಕು ಚೆಲ್ಲಿದ ಈ ಅಪೂರ್ವ ಶಾಸನವನ್ನು ಮೊದಲು ಕಂಡು ಹಿಡಿದವರು ಶ್ರೀ ನಾ. ಶ್ರೀ. ರಾಜಪುರೋಹಿತರು. ಅವರು ಶಿವಾನುಭವಕ್ಕೆ ಕಳಿಸಿದ ಶಾಸನ ಅಚ್ಚು ಅಸ್ಪಷ್ಟವಿದ್ದುದರಿಂದ ಶ್ರೀ ಹಳಕಟ್ಟಿಯವರ ಆದೇಶದಂತೆ ಲಿಂ. ಮಧುರಚೆನ್ನರು ಮತ್ತು ಡಾ. ನಂದಿಮಠರು ಇದನ್ನು ಇನ್ನೊಮ್ಮೆ ಅಚ್ಚು ಮಾಡಿಸಿಕೊಂಡು ಬಂದರು. ಬಹುಶಃ ಲಿಂ. ಮಧುರಚೆನ್ನರು ಓದಿ ಸಿದ್ಧಮಾಡಿಕೊಟ್ಟ ಈ ಶಾಸನ ಶಿವಾನುಭವ (೩–೯) ಪತ್ರಿಕೆಯ ಮೂಲಕ ಶ್ರೀ ಹಳಕಟ್ಟಿಯವರ ಹೆಸರಿನಲ್ಲಿ ಪ್ರಥಮಸಲ (ಕ್ರಿ.ಶ. ೧೯೨೮) ಪ್ರಕಟಗೊಂಡಿತು. ಅದರ ಮುಖ್ಯಭಾಗ ಹೀಗಿದೆ.

"....ಮತ್ತಂ ತರ್ದವಾಡಿ ಮಧ್ಯಗ್ರಾಮ ಬಾಗವಾಡಿ[೩೭] ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜನ ಮಹಿಮೆಯೆಂತೆಂದಡೆ"

ಮಂಗಳ ಕೀರ್ತಿ ಪುರಾತನ
ಜಂಗಮ ಲಿಂಗೈಕ ಭಕ್ತಿ ನಿರ್ಭರ ಲೀಲಾ ।
ಸಂಗಂ ಸಂಗನಬಸವಂ ।
ಸಂಗತಿಯಂ ಮಾಳ್ಕೆ ಭಕ್ತಿಯೊಳು (=ಳ) ನವರತಂ ।
ಸ್ವಸ್ತಿ ಸಮಸ್ತ ಭುವನಾಶ್ರಯಂ....ಇತ್ಯಾದಿ ನಾಮಾವಳೀ
ಸಮಾಳಂಕೃತ ಶ್ರೀಮತ್ ಪ್ರತಾಪ ಚಕ್ರವರ್ತ್ತಿ ಕನ್ನರದೇವಂ
ದೇವಗಿರಿಯ ನೆಲೆವೀಡಿನೊಳು...ರಾಜ್ಯಂಗೆಯ್ಯುತ್ತಮಿರೆ....

ಸಂಗನಬಸವನ ಅಗ್ರ x।
x ಗೈ ಕಂ ದೇವರಾಜ ಮುನಿಪನ ತನಯಂ ।
ಜಂಗಮ ಪರುಸಂ x x ರ ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ।

---

* ಈ ಶಾಸನವನ್ನು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ತಂದಿರಿಸಲಾಗಿದೆ.

೩೭. ಈ ಶಾಸನ 'ತರ್ದವಾಡಿ ಮಧ್ಯಗ್ರಾಮ ಬಾಗವಾಡಿ' ಯೆಂದರೆ ಕಾವ್ಯಗಳು ಸಾಮಾನ್ಯವಾಗಿ 'ಇಂಗುಳೇಶ್ವರ ಬಾಗವಾಡಿ' ಯೆನ್ನುತ್ತವೆ. E.C. XI, Dg, 102 A.D. 1268 ರ ಶಾಸನವೊಂದರಲ್ಲಿ ಬರುವ 'ಇಂಗಳೇಶ್ವರ ಬಾದವಾಡಿ' ಎಂಬ ಉಲ್ಲೇಖವನ್ನು ಗಮನಿಸಬೇಕು.

ಕಲಿದೇವ ಮುನಿಪನಾತ್ಮಜ ।
ಸಲೆ ಮೂಜಗದೊಳಗೆ ಮೆರೆದ ಮಾ [ನ]ವ ದೇವಂ ।
ಗೆಲಿದಂ ಅಶನ ಬೆಸನವ ।
ಛಲರಧಿಕಂ ಹಾಲಬಸವಿದೇವ ಮುನೀಶಂ ।

ಸ್ವಸ್ತಿ ಸಮಸ್ತಭುವನಾಶ್ರಯಂ ಮಹಾಮಹೇಶ್ವರಂ ಕವಿಳಾಸಪುರವರಾಧೀಶ್ವರರುಂ ಸುವರ್ಣ್ನವೃಷಭಧ್ವಜಂ [ತೇ] ಸಠ್ಠಿ ಪುರಾಥಪಾದಾರ್ಚ್ಚಕರುಂ ಮಹಾಲಿಂಗಜಂಗಮ ಪ್ರಸಾದನಿಯತ [ರುಂ] ಸಮಯಭಕ್ತಿ ಸಂಪನ್ನ ಶ್ರೀ ಬಸವರಾಜನನ್ವರುಮಪ್ಪ ತಪಚಕ್ರ [ವ]ರ್ತ್ತಿ ವೀರಬ್ರತಿ ಹಾಲ ಬಸವಿದೇವಂಗೆ.....ಸಕವರುಷಂ ಸಾಸಿರದನೂರ ಎಂಬತ್ತೆರಡನೆಯ ಸಿದ್ಧಾರ್ಥಿಸಂವತ್ಸರದ ಚೈತ್ರ ಬಹುಳ ಅಮಾಸೆ ಸೋಮವಾರ ಸೂರ್ಯಗ್ರಹಣದಲ್ಲಿ ಹುಲಿ[ಗೆ]ರೆಯ ಸೋಮನಾಥ ದೇವರ ಸನ್ನಿಧಿಯಲ್ಲಿ...ಚೌಡಿಸೆಟ್ಟಿಯರಾ ತೀರ್ಥವಿಶೇಷಮಂ ಬೆಸಗೊಳಲು ನೂಲೆನಾಡೊಳ[ಗಿ]ನ [ಮುನಿತನದಿ ?] ಕವಿಳಲಸತೀ[ರ್ತ್ಥಂ] ನಾಲ್ಕುಯುಗದ ಪುರಾಣೋಕ್ತದಿಂ ಬಂದ ಕ್ಷೇತ್ರವೆಂತೆಂದಡೆ, ಕೃತಯುಗದಲ್ಲಿ ಕವಿಳಾಸಮುನಿ ಕವಿಳಾಸನಾಥ, ತ್ರೇತೆಯಲಿ ಅಂಕರಾಜಮುನಿ ಅಂಗನಾಥ, ದ್ವಾಪರದಲಿ ಮಹರಾಜಮುನಿ ಕಲಿದೇವನಾಮ ಇ(=ಈ) ಮುನಿಗಳು ಮುಕ್ಷ(=ಖ್ಯ) ಸಮಸ್ತಗಣೇಸ್ವರರು ಆರಾಧಿಸಿ ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಸಾಯುಜ್ಜವಂ ಪಡೆದ ಮಾದೇವರಿಗೆ ಅಂಕನಾಥವೆಸರಿಂ ಅಂಕವಲ ತಳವಿರ್ತಿ ಕೊಟ್ಟಸಿ ಕುರುವನಿಗೆ ಇ(=ಈ)ಹಳ್ಳಿ ಮಾಂಧಾತ ಚಕ್ರವರ್ತಿ ಬಿಟ್ಟ ಧರ್ಮ್ಮ ಆ ತೀರ್ಥಕ್ಕದು ಸಾಸನಸ್ಥವೆಂಬುದಂ ಚವುಡಿಸೆಟ್ಟಿಯರು ಕೇಳಿದು ನಾಗರಸರೂ ತಾವೂ ಏಕಸ್ಥರಾಗಿ ಕವಿಳಾಸಪುರದೊಳಗೆ ಸ್ವಯಂಭು ಮಲ್ಲಿಕಾರ್ಜುನ ಸಂಗಮೇಶ್ವರ ನಾಗೇಶ್ವರ ಈ ಮೂರೂ ಲಿಂಗಕಂ ಅಂಗಭೋಗ ರಂಗಭೋಗ ಜೀರ್ಣೋದ್ಧಾರಕ್ಕಂ ಪಾರಣೆಯ ಜಂಗಮ ಆರಾಧನೆಗಂ ಕೊಟ್ಟಸಿ ಕುರುವನಿಗೆ ತಳವಿತ್ತಿ ಅಂಕವಲ ಕೂಂಡಿ ನಾಡೊಳು ಸಲುವಂತೆ ಹೆಜ್ಜುಗ್ಗಿಯ ಹಬ್ಬ ಒ[ಂ]ಬತ್ತು ದಿನ ಸುಂಕ ಸೂರೆತ್ತಿನ ಪರಿಹಾರ ಯಿಂತಿನಿತುಮಂ ಸರ್ವ್ವಾಬಾಧಿ (=ಧ) ಸರ್ವನಮಸ್ಯವಂ ಮಾಡಿ ಚವುಡಿಸೆಟ್ಟಿ[ಯ]ರು ನಾಗರಸರು ಯತಿರಾಯ ಹಾಲಬಸವಿದೇವಂಗೆ ಪೂರ್ವದತ್ತವೆಂದು ನಿಯಾಮದಿಂ ನಾಗರಸರು ಪುರದಿಂ ಬಡಗಲು ತೊರೆಯ ಕೂಡಿದ ಹಳ್ಳ ನೀರುವರಿಯೆ ಮೇರೆಯಾಗಿ ಮೇಲೆ ಕಲುಕುಟಿಗಗೆರೆ ಬಸವನಗೋಡಿ, ಬಡಗಲು ಮೊಸರು ಗುತ್ತಿಯೆ ರಾರವಿಡಿ[ದು], ಮೂಡಲು ಜಂಚಿಗಲ್ಲುಕಣಿ ಕುಚ್ಚಗೋಡಿಯಿಂ ಬಂದಹಳ್ಳ ನೀರುವರಿಯೆ, ತೆಂಕಲು ತೊರೆಯಕೂಡಲು, ಈ ಚತುಸ್ಸೀಮಾಭ್ಯಂತರ ಕವಿಳಾಸಪುರದಲ್ಲಿ ಸುಂಕಸಾದ ತಳಸಾರಿಗೆ ಬಟ್ಟೆಯಬಾಧೆ ಗ್ರಾಮಬ್ರಯ ನಿಧಿನಿಕ್ಷೇಪ ಅಂಕೆ ಟಂಕ ಆಣೆಗೋಸಣೆ ಮುದ್ರೆ ನಾಗೇಶ್ವರಕೆ ಮಲ್ಲೇಸ್ವರಕೆ ಕುರುವನಿಗೆ ಸಂಗಮೇಶ್ವರಕೆ ಪಾರಣೆಯ ಜಂಗಮಾರಾ[ಧ]ನೆಗೆ ಕೊಟ್ಟಸಿಗೆ ಇ(=ಈ) ಧರ್ಮಕೆ [ಇ]ದು ವಿವರವೆಂದು ನಾಗರಸ[ರು] ಕೊಟ್ಟ ಸಾಸನ. ನಾ[ಲ್ಕುಂ] ಪಟ್ಟಣಗಳು ನೊಲೆನಾಡೊಳಗೆ ಸಂತೆಗಳ ಆಯದಾಯ ಇಪಂತು ಕೋಣನ ಮೆಯಿದೆರೆ ಸುಂಕ ಹದಿನೆಂಟು ಸಮಯವು ಅರುವತಮೂವರು ಬಣಜುಭಕುತಿ ಭೇದವಿಲ್ಲ. ಕವಿಳಾಸಪುರವೇ ಸಾಸನದವನೆ, ಬಸವರಾಜನೇ ಸಾಸನಿಗನೆಂದು ಉಭಯ ನಾನಾದೇಶಿ ಮುಮ್ಮರಿದಂಡಂಗಳು ಕೊಟ್ಟ ಸಾಸನ."

ಯಾದವ ಕನ್ನರದೇವನ ಪಾದಪದ್ಮೋಪಜೀವಿಗಳಾದ ಚೌಡಿಸೆಟ್ಟಿ, ನಾಗರಸ ಮತ್ತು ಉಭಯ ನಾನಾದೇಶಿ ಮುಮ್ಮುರಿದಂಡಗಳು ಕೊಟ್ಟ ಎರಡು ದತ್ತಿಗಳನ್ನೊಳಗೊಂಡ ಈ ಶಾಸನದ ಕಾಲ ಕ್ರಿ.ಶ. ೧೨೬೦. ದತ್ತಿ ಪಡೆದವನು ಯತಿರಾಯ ಹಾಲಬಸವಿದೇವ.

ಈ ಶಾಸನ ಕ್ರಿ.ಶ. ೧೯೨೮ರಲ್ಲಿ ಅಂದರೆ ಇಂದಿಗೆ ೪೦ ವರುಷಗಳ ಹಿಂದೆ ಬೆಳಕಿಗೆ ಬಂದರೂ ಕವಿಳಾಸಪುರ ಯಾವುದು ? ದೇವರಾಜ ಮುನಿಪ ಸಂಗನಬಸವ ಮುಂತಾದವರ ಸಂಬಂಧವೇನು? ಎಂಬ ಸಂಗತಿಗಳೆರಡು ನಿಗೂಢವಾಗಿಯೇ ಉಳಿದಿವೆ.

ಶ್ರೀ ಚನ್ನಮಲ್ಲಿಕಾರ್ಜುನರು ಮನಗೂಳಿ ಶಾಸನದ 'ಕಲಿದೇವ ಮಹೇಸ ನಿವಾಸಂ' 'ಕಲಿದೇವೇಶ ವಿಳಾಸ ಭೂಸುರ ಗೃಹಂ' ಎಂಬೆರಡು ಮಾತುಗಳನ್ನಾಧರಿಸಿ ಕವಿಳಾಸಪುರವೆಂದರೆ ಮನಗೂಳಿಯೆಂದು ಊಹಿಸಿದ್ದಾರೆ.[೩೮] ಡಾ. ನಂದೀಮಠ ಅವರು ಚೌಡದಾನಪುರ ಶಾಸನದ 'ಧರೆ'ಯೊಳ್ಕವಿಳಾಸಮೆನಿಪ ಮುಕ್ತಿಕ್ಷೇತ್ರಂ' ಎಂಬ ಶಾಸನೋಕ್ತಿ ಯನ್ನವಲಂಬಿಸಿ ಕವಿಳಾಸಪುರವೆಂದರೆ ಚೌಡದಾಣಪುರವಾಗಿರಬಹುದೆಂದು ಹೇಳಿದ್ದಾರೆ.[೩೯] ಆದರೆ ಈ ಶಾಸನದ ಉತ್ತರಾರ್ಧದಲ್ಲಿ ಹೇಳಲಾದ "....ಪಡುವಲು ತೊರೆಯ ಕೂಡಿದ ಹಳ್ಳ ನೀರುವರಿಯೆ ಮೇರೆಯಾಗಿ ಮೇಗೆ ಕಲುಕುಟಿಗೆರೆ ಬಸವನಗೋಡಿ, ಬಡಗಲು ಮೊಸರುಗುತ್ತಿಯೆ ರಾರ ವಿಡಿ[ದು], ಮೂಡಲು ಜಂಚಿಕಲ್ಲ ಕಣಿ ಕುಚ್ಛ ಗೋಡಿಯಿಂ ಬಂದ ಹಳ್ಳ ನೀರುವರಿಯೆ, ತೆಂಕಲು ತೊರೆಯ ಕೂಡಲು, ಈ ಚತುಸ್ಸೀಮಾಭ್ಯಂತರ ಕವಿಳಾಸಪುರ"ಎಂಬ ವಾಕ್ಯವು ಕವಿಳಾಸಪುರದ ಸೀಮೆಯನ್ನು ನಿರ್ಧರಿಸಿ ಕೊಡುತ್ತದೆ. ಮಲ್ಲಿಕಾರ್ಜುನ ನಾಗೇಶ್ವರ ಸಂಗಮೇಶ್ವರ ದೇವಾಲಯಗಳನ್ನೊಳಗೊಂಡ ಈ ಕವಿಳಾಸಪುರವಿದ್ದುದು ನೂಲೆನಾಡ ಪ್ರದೇಶದಲ್ಲಿ. ಈ ದಿಶೆಯಲ್ಲಿ ಸಂಶೋಧನೆ ಮುಂದುವರಿಯಬೇಕು. ಎರಡನೆಯದಾಗಿ

ಸಂಗನಬಸವನ ಅಗ್ರ x।
x ಗೈ ಕಂ ದೇವರಾಜ ಮುನಿಪನ ತನಯಂ ।
ಜಂಗಮ ಪರುಸಂ x x ರ ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ।

ಎಂಬ ಪದ್ಯದ ನಷ್ಟ ಅಕ್ಷರಗಳನ್ನು ಏಳು ಜನ ವಿದ್ವಾಂಸರು ಎಂಟು ಬಗೆಯಾಗಿ ತುಂಬಿಕೊಟ್ಟಿದ್ದಾರೆ.

ಸಂಗನಬಸವನ ಅಗ್ರ x x ಗೈಕಂ....ಜಂಗಮಪರುಸಂ x x ರಸಂಗಂ–ಮೂಲಪಾಠ

ಸಂಗನಬಸವನ ಅಗ್ರಜ x x ಗೈಕಂ....ಜಂಗಮಪರುಸಂ x x ರಸಂಗಂ–ಹಳಕಟ್ಟಿ (೧೯೨೮)[೪೦]

ಸಂಗನಬಸವನ ಅಗ್ರಜ ಸಂಗಾಂಕಂ....ಜಂಗಮಪರುಸಂ ಶರಣರಸಂಗಂ–ಎಸ್. ಶ್ರೀಕಂಠಶಾಸ್ತ್ರಿ (೧೯೩೧–೩೨)[೪೧]

---

೩೮. ಶ್ರೀ ಬಸವೇಶ್ವರನ ಕಾಲ, ಪು. ೧೫೧.

೩೯. ಶಿವಾಳ–೪

ಡಾ. ನಂದಿಮಠರ ಊಹೆಯನ್ನು ಶ್ರೀ ಎಂ. ಜಿ. ನಂಜುಂಡಾರಾಧ್ಯರು ಒಪ್ಪುತ್ತಾರೆ(ಶಿವದೇವ ವಿಜಯ, ಪೀಠಿಕೆ, xxi)[ಅರ್ಜುನವಾಡ ಶಾಸನದ 'ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ಅಮಾಸೆ ಸೋಮವಾರ ಸೂರ್ಯಗ್ರಹಣ' ಮೂಹೂರ್ತದಂದು ಚೌಡದಾನಪುರದಲ್ಲಿಯೂ ಒಂದು ಶಾಸನ ಹುಟ್ಟಿದೆ. ಒಂದರ ದಾತೃಗಳು ಚೌಡಿಸೆಟ್ಟಿ ಮತ್ತು ನಾಗರಸ, ಇನ್ನೊಂದರ ದಾತೃ 'ಚೌಡಿಸೆಟ್ಟಿಯರ ಕರಣದ ನಾಗರಸನ ತಂಮ ಭಾನುದೇವ', ಇದನ್ನು ಗಮನಿಸಿದರೆ ಡಾ. ನಂದಿಮಠರ ಊಹೆಗೆ ಸಣ್ಣ ಆಧಾರವೊಂದು ಲಭಿಸುತ್ತದೆ ಎಂದು ಸೂಚಿಸಬಯಸುತ್ತೇನೆ.]

೪೦. ಶಿವಾ ೩–೯

೪೧. E.I.XXI, P.13.

ಸಂಗನಬಸವನ ಅಗ್ರಜ ಲಿಂಗೈಕಂ....ಜಂಗಮಪರುಸಂ ಕಾವರಸಂಗಂ–ಎನ್. ಲಕ್ಷ್ಮೀನಾರಾಯಣ (೧೯೩೧–೩೨)[೪೨]

ಸಂಗನಬಸವನ ಅಗ್ರಜ ನಿಂಗೈಕಂ....ಜಂಗಮಪರುಷಂ ಶರಣರಸಂಗಂ–ಕಪಟ್ರಾಳ (೧೯೪೭)[೪೩]

ಸಂಗನಬಸವನ ಅಗ್ರಸುತಂಗೈಕಂ....ಜಂಗಮಪರುಷಂ ಶರಣರಸಂಗಂ–ಟಿ.ಎನ್. ಮಲ್ಲಪ್ಪ (೧೯೪೭)[೪೪]

ಸಂಗನಬಸವನ ಅಗ್ರಜ ಲಿಂಗೈಕ್ಯಂ....ಜಂಗಮಪರುಷಂ ಬಸವರಸಂಗಂ – ಟಿ.ಎನ್. ಮಲ್ಲಪ್ಪ (೧೯೪೭)[೪೫]

ಸಂಗನಬಸವನ ಅಗ್ರಜ ಲಿಂಗೈಕಂ (ಕ್ಯಂ....ಜಂಗಮಪರುಸಂ ಬಸವರಸಂಗಂ – ಚನ್ನಮಲ್ಲಿಕಾರ್ಜುನ (೧೯೫೦)[೪೬]

ಸಂಗನಬಸವನ ಅಗ್ರಜ ಲಿಂಗೈಕಂ....ಜಂಗಮಪರುಸಂ ಸೋವರಸಂಗಂ – ಪಿ.ಬಿ.ದೇಸಾಯಿ[೪೭]

ಈ ಪದ್ಯವನ್ನು ಮೇಲಿನಂತೆ ತಿದ್ದಿದ ಪಂಡಿತರಲ್ಲಿ ಶ್ರೀ. ಫ.ಗು. ಹಳಕಟ್ಟಿಯವರು 'ಅಗ್ರ' ಎಂಬುದನ್ನು 'ಅಗ್ರಜ' ಎಂದು ಬೆಳಸಿ ಮುಂದಣ ಅಕ್ಷರವನ್ನು ತುಂಬದೆ ಕೈ ಬಿಟ್ಟಿದ್ದಾರೆ. ಮಿಕ್ಕವರು ಒಡೆದ ಭಾಗದ ಎಲ್ಲ ಅಕ್ಷರಗಳನ್ನು ತುಂಬಿಕೊಟ್ಟಿದ್ದು ಅವರಲ್ಲಿ ಶ್ರೀಕಂಠಶಾಸ್ತ್ರಿಗಳು ಮತ್ತು ಎನ್. ಲಕ್ಷ್ಮೀನಾರಾಯಣರಾಯರು ಛಂದಸ್ಸು, ಪ್ರಾಸ ಮತ್ತು ಶ್ರೀ. ಹಳಕಟ್ಟಿಯವರು ಕಳಿಸಿಕೊಟ್ಟ ಶಾಸನದ ಅಚ್ಚುಗಳನ್ನು ಆಧಾರವಾಗಿಟ್ಟುಕೊಂಡರು. ಮುಂದೆ ಶ್ರೀ. ಕಪಟ್ರಾಳ ಕೃಷ್ಣ ಅವರು ಕೇವಲ ಪ್ರಾಸ, ಛಂದಸ್ಸುಗಳನ್ನವಲಂಬಿಸಿ ಬೇರೆ ಅಕ್ಷರಗಳನ್ನು ಪೂರೈಸಿ ಕೊಡಲು, ಇದಕ್ಕೆ ವಿರುದ್ಧವಾಗಿ ಶ್ರೀ. ಟಿ.ಎನ್. ಮಲ್ಲಪ್ಪನವರು, ಈ ಪದ್ಯವನ್ನು ಎರಡು ಬಗೆಯಲ್ಲಿ ತಿದ್ದಿ ಅವುಗಳಲ್ಲಿ ಒಂದು ಮಾತ್ರ ತಮಗೆ ಸಮ್ಮತವೆಂದು ಬರೆದರು. ತರುವಾಯ ಶ್ರೀ. ಚೆನ್ನಮಲ್ಲಿಕಾರ್ಜುನ ಅವರು ಮೇಲಿನ ಎಲ್ಲ ತಿದ್ದುಪಡಿಗಳನ್ನು ಕಣ್ಣೆದುರಿಗಿಟ್ಟುಕೊಂಡು ಶ್ರೀ. ಟಿ. ಎನ್. ಮಲ್ಲಪ್ಪನವರ ಅಭಿಪ್ರಾಯವನ್ನೇ ಬಹುಮಟ್ಟಿಗೆ ಒಪ್ಪಿಕೊಂಡರು. ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರು ಈ ಶಾಸನವನ್ನು ಶ್ರೀ. ಪಿ. ಬಿ. ದೇಸಾಯಿ ಅವರು ಕಣ್ಬುಟ್ಟ ನಿರೀಕ್ಷಿಸಿ ಮೇಲಿನಂತೆ ಒಂದು ಅಕ್ಷರದ ಮಟ್ಟಿನ ಹೊಸ ತಿದ್ದುಪಡಿಯನ್ನು ಮಾಡಿಕೊಟ್ಟರು. ಈ ಏಳು ಜನ ವಿದ್ವಾಂಸರಿಂದ ಊಹಿಸಲ್ಪಟ್ಟ ಎಂಟು ಬಗೆಯ ಭಿನ್ನಾಭಿಪ್ರಾಯಗಳಿಂದಾಗಿ ಕೆಳಗಣ ವಿಭಿನ್ನ ವಂಶಾವಳಿಗಳು ಸಿದ್ಧವಾಗಿವೆ.

೧. ಸಂಗನಬಸವ....?...ದೇವರಾಜ......?.....ಕಲಿದೇವ–ಹಾಲಬಸವಿದೇ. (ಹಳಕಟ್ಟಿ)[೪೮]

೨. (ಶ್ರೀಕಂಠಶಾಸ್ತ್ರಿಗಳ ಪಾಠದಿಂದ ಸ್ಪಷ್ಟವಾದ ವಂಶಾವಳಿ ಹೊರಡುವುದಿಲ್ಲ.)

೩. [ದೇವರಾಜ...... ....ಕಾವರಸ–ಕಲಿದೇವ–ಹಾಲಬಸವಿದೇವ.
ಸಂಗನಬಸವ (ಎನ್.ಲಕ್ಷ್ಮೀನಾರಾಯಣರಾಯರು)

---

೪೨. E.I.XXI, P.16.

೪೩. ಶರಣ ಸಾಹಿತ್ಯ ೧೦–೬, ೭.

೪೪–೪೫ ಶಿವಾ ೨೨–೨, ಎರಡನೆಯದೇ ತಮಗೆ ಸಮ್ಮತವೆಂದು ಲೇಖಕರು ಹೇಳಿದ್ದಾರೆ.

೪೬. ಶ್ರೀ ಬಸವೇಶ್ವರನ ಕಾಲ, ಪು.೫೪.

೪೭. ಡಾ. ಪಿ.ಬಿ. ದೇಸಾಯಿ ಅವರು ಮುಖತಃ ಹೇಳಿದ ಪಾಠ

೪೮. 'ಬಸವೇಶ್ವರನ........ಮೊಮ್ಮಗನ ಹೆಸರು ದೇವರಾಜನೆಂದು ಇದ್ದುದಾಗಿ ಗೊತ್ತಾಗುತ್ತದೆ" ಶಿವಾ–೩–೯.

೪. [ದೇವರಾಜ...... ....ಕಲಿದೇವ–ಹಾಲಬಸವಿದೇವ. (ಕಪಟ್ರಾಳ)[೨೯]
ಸಂಗನಬಸವ

೫. ಸಂಗನಬಸವ..... ..... ದೇವರಾಜ .... ಕಲಿದೇವ–ಹಾಲಬಸವಿದೇವ.

(ಟಿ.ಎನ್. ಮಲ್ಲಪ್ಪ)[೩೦]

೬. [ದೇವರಾಜ ... . ಬಸವರಸ .... ಕಲಿದೇವ–ಹಾಲಬಸವಿದೇವ. (ಟಿ.ಎನ್. ಮಲ್ಲಪ್ಪ)[೩೧]
ಸಂಗನಬಸವ

೭. [ದೇವರಾಜ ... . ಬಸವರಸ .... ಕಲಿದೇವ–ಹಾಲಬಸವಿದೇವ. (ಚೆನ್ನಮಲ್ಲಿಕಾರ್ಜುನ)
ಸಂಗನಬಸವ

೮. [ದೇವರಾಜ ... . ಸೋವರಸ–ಕಲಿದೇವ–ಹಾಲಬಸವಿದೇವ. (ಪಿ.ಬಿ. ದೇಸಾಯಿ)
ಸಂಗನಬಸವ

ಈಗಿನ ಮಟ್ಟಿಗೆ ತಾತ್ಪೂರ್ತಿಕ ತೃಪ್ತಿದೃಷ್ಟಿಯಿಂದ ಶ್ರೀ ಎನ್. ಲಕ್ಷ್ಮೀನಾರಾಯಣರಾಯರ ಪಾಠವನ್ನೂ ಅದರಿಂದ ಹೊರಡುವ ವಂಶಾವಳಿಯನ್ನೂ ಎಲ್ಲರೂ ಒಪ್ಪಿಕೊಂಡಿದ್ದಾರೆ. ಅಕ್ಷರ ಒಡೆದು ಹೋದುದರಿಂದ ಯಾರು ಏನೇ ಹೇಳಿದರೂ ಅದೆಲ್ಲ ಊಹೆಯೇ ಎನಿಸುವುದರಿಂದ ಶ್ರೀಯುತರ ಪಾಠವನ್ನು ಒಪ್ಪಬಹುದು. ಆದರೆ ಅವರು ಈ ಪಾಠಕ್ಕೆ ಮಾಡಿದ ಅರ್ಥ ಮಾತ್ರ ಸಮಂಜಸವಲ್ಲವೆಂದು ನನ್ನ ಭಾವನೆ. ಏಕೆಂದರೆ–

೧. ಸರಾಗವಾಗಿ ಓದಿದರೆ ಈ ಪದ್ಯದಿಂದ ಶ್ರೀಯುತರು ಹೇಳಿದ ವಂಶಚಿತ್ರ ಹೊರಡುವುದಿಲ್ಲ.

೨. ಈ ಪದ್ಯದ 'ತನಯಂ, ಸುತಂ ಎಂಬ ಪದಗಳ ಬೆನ್ನು ಹತ್ತಿ ದೇವರಾಜನ ಮಗ ಕಾವರಸ, ಕಾವರಸನ ಮಗ ಕಲಿದೇವರಸ ಎಂದು ಅವಸರದ ನಿರ್ಣಯ ನೀಡಿದ್ದಾರೆ.

೩. 'ಕಾವರಸಂಗಂ ಪ್ರಿಯಸುತಂ' ಎಂಬಲ್ಲಿಯ ಸಮುಚ್ಚಯವನ್ನು ಗಮನಿಸಿಲ್ಲ. ಅದಕ್ಕಾಗಿ ಶ್ರೀಯುತರು ಮಾಡಿದ ಅರ್ಥದ ಬಗ್ಗೆ ಸಂಶಯ ಹುಟ್ಟುತ್ತದೆ.

ಈಗ ಇಲ್ಲಿಯ ಹೇಳಿಕೆಗಳೆಲ್ಲ ಕಲಿದೇವರಸನಿಗೆ ಸಂಬಂಧಿಸಿದ ವಿಶೇಷಣಗಳಾಗಿವೆ ಎಂಬ ದೃಷ್ಟಿಯಿಂದ


"ಸಂಗನ ಬಸವನ ಅಗ್ರಜ ಲಿಂಗೈಕಂ ದೇವರಾಜ ಮುನಿಪನ ತನಯಂ (ಎನಿಪ್ಪ),
ಜಂಗಮಪುರುಸಂ ಕಾವರಸಂಗಂ ಪ್ರಿಯಸುತಂ ಎನಿಪ್ಪ ಕಲಿದೇವರಸಂ"

ಎಂದು ಈ ಪದ್ಯವನ್ನೋದಬೇಕು. ಯಾವ ವ್ಯಕ್ತಿಯೇ ಆಗಲಿ ತಾನು ತನ್ನ ತಂದೆಗೆ ಪ್ರೀತಿಯ ಮಗನು ಎಂದು ಹೇಳುವುದು ಕೃತ್ರಿಮವೆನಿಸುವುದರಿಂದ ಇಲ್ಲಿ 'ತನಯಂ' ಎಂದರೆ ನೇರವಾದ

---

೨೯. 'ಸಂಗನಬಸವನ ಅಗ್ರಜನಿಗೆ ಅಂದರೆ ದೇವರಾಜ ಮುನಿಪನಿಗೆ ಏಕಮಾತ್ರ ಪುತ್ರನು ಕಲಿದೇವ' ಶ.ಸಾ–೧೩–೬,೭ ೩೦–೩೧. ಈ ಎರಡರಲ್ಲಿ ಎರಡನೆಯದೇ ತಮಗೆ ಒಪ್ಪಿಗೆ ಎಂದು ಹೇಳಿದ್ದಾರೆ.

ಮಗನೆಂದೂ 'ಪ್ರಿಯಸುತಂ' ಎಂದರೆ ಶಿಷ್ಯನೆಂದೂ ಅರ್ಥಮಾಡಬೇಕು. ಆಗ 'ಸಂಗನಬಸವನ ಅಣ್ಣನಾದ ಲಿಂಗೈಕ ದೇವರಾಜನ ಮಗನು, ಜಂಗಮಪರುಷನಾದ ಕಾವರಸನಿಗೂ (ಶಿಷ್ಯನೆಂಬ ಅರ್ಥದಲ್ಲಿ) ಪ್ರೀತಿಯ ಮಗನು ಎನಿಸಿದ ಕಲಿದೇವರಸನು' ಎಂಬ ವಿಷಯ ವ್ಯಕ್ತವಾಗುತ್ತದೆ. ಇಲ್ಲಿ ಕಲಿದೇವರಸನು ತಾನು ಒಬ್ಬನಿಗೆ ಉದರ ಸಂಜಾತ, ಇನ್ನೊಬ್ಬನಿಗೆ ಕರಸಂಜಾತನಾಗಿದ್ದೇನೆಂದು ಹೇಳಿಕೊಂಡಿದ್ದಾನೆ. ಈ ಅರ್ಥದಿಂದ ಕೆಳಗಣ ವಂಶಚಿತ್ರ ಸಿದ್ಧವಾಗುತ್ತದೆ.



ನನಗೆ ಮಾತ್ರ ಶ್ರೀ. ಲಕ್ಷ್ಮೀನಾರಾಯಣರಾಯರ ಅರ್ಥ ತಪ್ಪು ಎನಿಸಿ ಈ ಅರ್ಥವೇ ಸರಿಯೆಂದು ತೋರುತ್ತದೆ. ಇದು ವಿದ್ವಾಂಸರಿಗೆ ಮಾನ್ಯವಾದಲ್ಲಿ ಕಳೆದ ೩೬ ವರುಷಗಳಿಂದ ನಂಬುತ್ತ ಬಂದ ಶ್ರೀ ಲಕ್ಷ್ಮೀನಾರಾಯಣರಾಯರ ಅರ್ಥವನ್ನು ಇನ್ನು ಮೇಲೆ ಬಿಟ್ಟು ಕೊಡಬೇಕಾಗುತ್ತದೆ.

ಇಲ್ಲಿ ಕಲಿದೇವನ ಮಗನಾದ ಹಾಲಬಸವಿದೇವನ ಕಾಲ ಕ್ರಿ. ಶ. ೧೨೬೦ ಇದ್ದು ತಲೆಮಾರಿಗೆ ೩೦ ವರುಷಗಳಂತೆ ಹಿಂದೆ ಹೋದರೂ ದೇವರಾಜನ ಕಾಲ ಕ್ರಿ. ಶ. ೧೨೦೦ ಆಗುತ್ತದೆ. ಈತನ ತಮ್ಮನಾದ ಬಸವಣ್ಣ ಸರಿಸುಮಾರು ಈ ಕಾಲದವನೇ ಆಗುತ್ತಾನೆ. ಈ ಅಂಶವನ್ನು ಗಮನಿಸಿದರೆ ಜನನಮಿತಿ ಕ್ರಿ. ಶ. ೧೧೦೬ ಎನ್ನುವ R C C ಕಾರ್, E. Thurston, ಚೆನ್ನಮಲ್ಲಿಕಾರ್ಜುನ, ಬಸವನಾಳ ಮೊದಲಾದವರ ವಾದ ಸತ್ಯಕ್ಕೆ ದೂರವಾಗುತ್ತದೆ. ಎರಡನೆಯದಾಗಿ ಅವರ ಅಂತ್ಯಕಾಲ ಕ್ರಿ. ಶ. ೧೨೦೦ ಎನ್ನುವ ಎಸ್. ಶ್ರೀಕಂಠಶಾಸ್ತ್ರಿ ಮೊದಲಾದವರ ಹೇಳಿಕೆಗೆ ಈ ಮಿತಿ ಆಧಾರ ನೀಡುತ್ತದೆ.

ಇಲ್ಲಿ ಬರುವ 'ಯತಿರಾಯ ಹಾಲಬಸವಿದೇವಂಗೆ ಪೂರ್ವ ದತ್ತವೆಂದು ಧಾರಾಪೂರ್ವಕಂ ಮಾಡಿಕೊಟ್ಟರು' ಎಂಬ ಮಾತಿನಲ್ಲಿ ಹಾಲಬಸವಿದೇವನಿಗೆ ಪ್ರಾಚೀನಕಾಲದ ಒಂದು ದತ್ತಿಯನ್ನು (ಮಾಂಧಾತ ಚಕ್ರವರ್ತಿ ಕೊಟ್ಟುದು?) ಪುನಃ ಸ್ಥಿರಗೊಳಿಸಿ (ಚೌಡಿಸೆಟ್ಟಿ, ನಾಗರಸರು) ಕೊಟ್ಟರೆಂಬ ಅರ್ಥವಿದ್ದಂತೆ ಕಾಣುತ್ತದೆ.

ಇಂಥ ಸಮಸ್ಯೆಗಳೇನೇ ಇದ್ದರೂ ಬಸವಣ್ಣನವರನ್ನು ಕುರಿತು ಹೇಳಿದ "ಪುರಾತನ ಜಂಗಮ ಲಿಂಗೈಕ ಭಕ್ತಿ ನಿರ್ಭರ ಲೀಲಾ ಸಂಗಂ" ಮತ್ತು "ಸಮಯ ಭಕ್ತಿಸಂಪನ್ನಂ" ಎಂಬಿವು ಅವರ ವ್ಯಕ್ತಿಸಿದ್ಧಿಯ ಪ್ರಮುಖ ಅಂಶಗಳನ್ನು ಎತ್ತಿ ತೋರಿಸುತ್ತವೆ. ಕೊನೆಯದಾಗಿ 'ಮಂಗಳ

---

* ಈ ಕಲಿದೇವರಸನೆಂದರೆ ಚೌಡದಾನಪುರಶಾಸನೋಕ್ತ ವೀರಕನ್ನಾದೇವಿಯ ಗಂಡ ಕಲ್ಲರಸನಗಿರಬಹುದೆಂದು ಶ್ರೀ ಎಂ. ಜಿ. ನಂಜುಂಡಾರಾಧ್ಯರು ಊಹಿಸಿದ್ದಾರೆ(ಶಿವದೇವ ವಿಜಯಂ ಪೀಠಿಕೆ.XXXII).

ಕೀರ್ತಿ' ಎಂದು ಕರೆದುದಂತೂ ಆ ಕಾಲದಲ್ಲಿ ಹರಡಿದ ಬಸವಣ್ಣನವರ ಧವಲಕೀರ್ತಿಗೆ ಸ್ಪಷ್ಟ ನಿದರ್ಶನವೆನಿಸಿದೆ.

ನೆಲದ ಮರೆಯ ನಿದಾನವಾಗಿದ್ದ ಬಸವಣ್ಣನವರ ಜೀವನಕ್ಕೆ ಸಂಬಂಧಪಟ್ಟ ಕೆಲವು ಹೊಸ ವಿಷಯುಗಳನ್ನು ಹೊರಗೆಡವಿದ ಈ ಶಾಸನಕ್ಕೆ ಚರಿತ್ರೆಯ ದೃಷ್ಟಿಯಿಂದ ಅತಿಮಹತ್ವಕೊಡಬೇಕಾಗಿದೆ. "ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜ" ಎಂಬ ಹೇಳಿಕೆ ಅವರ ತಂದೆಯ ವಿಷಯದಲ್ಲಿ ತಲೆದೋರಿದ ಸಂದೇಹಗಳನ್ನು ಆತ್ಯಂತಿಕವಾಗಿ ಕೊಚ್ಚಿಹಾಕಿದೆ. ಬಸವಣ್ಣನವರ ಅಣ್ಣ ದೇವರಾಜ, ಈತನ ಮಗ ಕಲಿದೇವರಸ, ಈತನ ಮಗ ಹಾಲಬಸವಿದೇವ (ನಾವು ಅರ್ಥ ಮಾಡಿದಂತೆ) ಎಂಬ ವಿನೂತನ ಸಂಗತಿಗಳನ್ನು ಈ ಶಾಸನ ನಮ್ಮ ಗಮನಕ್ಕೆ ತಂದಿದೆ.

ಪುಲಿಗೆರೆಯ ಸೋಮನಾಥನ ಸನ್ನಿಧಿಯಲ್ಲಿ ದತ್ತಿ ಪಡೆದ ಹಾಲಬಸವಿದೇವನನ್ನು 'ಮೂಜಗದೊಳಗೆ ಮೆರೆವ ಮಾನವ ದೇವಂ, ಗೆಲಿದಂ ಅಸನ ಬೆಸನವ ಛಲರಧಿಕಂ' ಎಂದೂ "ಸ್ವಸ್ತಿ ಸಮಸ್ತ ಭುವನಾಶ್ರಯಂ, ಮಹಾಮಹೇಶ್ವರಂ, ಕವಿಳಾಸಪುರವಾರಾಧೀಶ್ವರರುಂ, ಸುವರ್ಣವೃಷಭಧ್ವಜಂ, [ತೇ] ಸತ್ಥಿಪುರಾಥಪಾದಾರ್ಚಕರುಂ, ಮಹಾಲಿಂಗ ಜಂಗಮ ಪ್ರಸಾದ ನಿಯತರುಂ, ಸಮಯಭಕ್ತಿಸಂಪನ್ನ ಶ್ರೀ ಬಸವರಾಜನನ್ವಯರುಂ, ತಪಚಕ್ರವರ್ತಿ, ವೀರವ್ರತಿ" ಎಂದೂ "ಹಾಲಬಸವಿದೇವ ಮುನೀಶಂ, ಯತಿರಾಯ ಹಾಲಬಸವಿದೇವಂ" ಎಂದೂ ಕರೆದುದು ಬಸವಣ್ಣನವರ ಮುಂದಣ ಸಂತತಿ ಕೆಲವು ಕಾಲ ಅದೇ ಎತ್ತರದಲ್ಲಿ ಮುನ್ನಡೆದುದಕ್ಕೆ ಸಾಕ್ಷಿಯೆನಿಸಿದೆ. ಅಲ್ಲದೆ ಕಾವರಸನು 'ಜಂಗಮಪುರುಸ' ಹಾಲ ಬಸವಿದೇವನು 'ಮಹಾಲಿಂಗ ಜಂಗಮ ಪ್ರಸಾದ ನಿಯತ' ಎಂಬ ಹೇಳಿಕೆಗಳು ವೀರಶೈವ ನಡೆದು ಬಂದ ದಾರಿಯ ಮೈಲಿಗಲ್ಲುಗಳಾಗಿವೆ.

ಚೌಡದಾನಪುರ ಶಾಸನ (೧)

ಗೊಪೆ, ಶಿವಪುರ, ಶಿವದೇವಪುರ, ಮುಕ್ತಿಕ್ಷೇತ್ರ ಎಂಬಿವು ಚೌಡದಾನಪುರದ ಪರ್ಯಾಯ ನಾಮಗಳು. ಇಲ್ಲಿ ಬಾಳಿದ ಶಿವದೇವನೆಂಬ ವೀರವ್ರತಿಯನ್ನು ಭಕ್ತಿಯಿಂದ ಬಣ್ಣಿಸುವ ಆರೆಂಟು ಶಾಸನಗಳಲ್ಲಿ ಎರಡು ಮಾತ್ರ ಬಸವಣ್ಣನವರನ್ನು ಉಲ್ಲೇಖಿಸುತ್ತವೆ. ಇವುಗಳಲ್ಲಿ ಬಸವಣ್ಣನವರ ಅವತಾರ ವಿಷಯವನ್ನು ಹೇಳುವ ಶಾಸನವೊಂದರ ಮುಖ್ಯಭಾಗ ಹೀಗಿದೆ.

(ಕೈಲಾಸದ ಗಣಸಭೆಯ ವರ್ಣನೆ. ಗಣಂಗಳಿಂದ ಶಿವಸ್ತುತಿ)

ಆ ಉಮಾಮಹೇಶ್ವರಂ ಗಣಂಗಳಿಗೆ ಪ್ರಸಂನನಾಗಿಯಿಂತೆಂದಂ–
ಇದೆ ನಾಲ್ಕುಂ ವೇದಪಾರಂ ಬಗೆವಡೆ ದಿಟದಿಂ ಸರ್ವಶಾಸ್ತ್ರಾರ್ಥಪಾರಂ
ಪದಪಿಂ ಸ್ಮೃತ್ಯರ್ಥಪಾರಂ ತ್ರಿಭುವನ ಭುವನಜ್ಞಾನವಿಜ್ಞಾನಪಾರಂ
ಸದ್ವಾಕ್ಯಾರ್ಥಪಾರಂ ಪ್ರಣವಸಮುದಿತಂ ಧ್ಯಾನಭಾವೈಕಪಾರಂ
ವಿದಿತಂ ಶ್ರೀ ಜ್ಯೋತಿಲಿಂಗಾಮರಗಣಕರುಣೋತ್ಪನ್ನ ಭಕ್ತಿ ಪ್ರಸಾದಂ

---

* 'ಬಂಕ ಎಂಬುದು ವ್ಯಕ್ತಿನಾಮವೆಂದು ಓದಬೇಕೋ? 'ಬಂದ' ಎಂದು ತಿದ್ದಿ ಓದಬೇಕೋ ಗೊತ್ತಾಗುವದಿಲ್ಲ.

ಎನೆ ಕೇಳ್ದದ್ರಿಜೆ ಬಿನ್ನಪಂ ಶಿವ ಜಗಕ್ಕೀಮಾರ್ಗಮಂ ತೋರಬೇ
ಳ್ಕೆನಲಂದಾ ಪ್ರಭು ನಂದಿನಾಥನ ಮೊಗನ್ನೋಡಲ್ಕೆ ಶ್ರೀಸಂಗಮೇ
ಶನಪುತ್ರಂ ಬಸವಯ್ಯ ಬಂಕ*ನದರಿಂ ಶಿವಮುದ್ದು ದೇವಂ ಜನ
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಮಂ ತೋರುವಂ

ವೇದ ಶಾಸ್ತ್ರ ಸ್ಮೃತಿಗಳಿಗೆ ಅತೀತವಾದ ಭಕ್ತಿಪ್ರಸಾದವನ್ನು ಮರ್ತ್ಯದಲ್ಲಿ ಬಿತ್ತರಿಸಲೋಸುಗ ನಂದಿನಾಥನು 'ಸಂಗಮೇಶನ ಪುತ್ರಂ ಬಸವಯ್ಯ'ನಾಗಿ ಬಂದ ರೀತಿಯಲ್ಲಿ ಶಿವನು ಶಿವದೇವನಾಗಿ ಅವತರಿಸಿದನೆಂಬುದು ಮೇಲಣ ಕ್ಲಿಷ್ಟ ಪದ್ಯದ ಒಟ್ಟು ಆಶಯ. ಬಸವಣ್ಣನವರು ಐಕ್ಯವಾದ ಒಂದು ಶತಮಾನದೊಳಗಾಗಿ ಜನತೆ ಅವರನ್ನು ಸಂಗಮೇಶನ ಸಾಕ್ಷಾತ್ ಸುಪುತ್ರ, ನಂದಿನಾಥನ ಅಪರಾವತಾರವೆಂದು ಅರ್ಥಮಾಡಿಕೊಂಡಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ಹರಿಹರ ದೇವನ ಕಾಲ ಹದಿಮೂರನೆಯ ಶತಮಾನದ ಅಂತ್ಯವೆಂಬ ಹೇಳಿಕೆ ನಿಜವಿದ್ದರೆ ಕ್ರಿ. ಶ. ೧೨೬೩ರ ಈ ಶಾಸನದಲ್ಲಿ ಹೇಳಲಾದ ಅವತಾರ ಕಲ್ಪನೆ ಬಸವರಾಜ ದೇವರ ರಗಳೆಯಲ್ಲಿಯ ಅವತಾರ ಕಲ್ಪನೆಗಿಂತ ಕೊಂಚ ಪ್ರಾಚೀನವೆನಿಸುತ್ತದೆ.

ಇದಲ್ಲದೆ ಈ ಶಾಸನದಲ್ಲಿ ಇನ್ನೊಂದೆಡೆಗೆ ಹೇಳಲಾದ "ಶಿವದೇವ ಮುನಿಪತಿ ತೋರಿಮೆರೆದಂ ಲಿಂಗಜಂಗಮೈಕ್ಯಕ್ರಮಮಂ" "ಮತ್ತಂ ಪುರಾತನರ ಚರಿತ್ರ[ನೀ]ತಿ ವಿಚಿತ್ರಮಾಗಿ ಲಿಂಗಾರ್ಚನಂಗೆಯ್ವುತಮಿರೆ" ಎಂಬ ಮಾತುಗಳು ಬಸವಣ್ಣನವರು ಬಿತ್ತಿದ ತತ್ವಗಳ ಜೀವಂತಿಕೆಗೆ ಸಾಕ್ಷಿಯಾಗಿವೆ.

ಚೌಡದಾನಪುರ ಶಾಸನ (೨)

ಮೇಲೆ ಹೇಳಲಾದ ಚೌಡದಾನಪುರ ಶಾಸನ (೧) ವು ಬಸವಣ್ಣನವರ ಅವತಾರ ವಿಷಯವನ್ನು ಬಣ್ಣಿಸಿದರೆ, ಈ ಶಾಸನವು ಅವರ ಲಿಂಗ ಜಂಗಮ ಸೇವೆ, ಪ್ರಸಾದಸಿದ್ಧಿಗಳನ್ನು ವ್ಯಕ್ತಪಡಿಸುತ್ತದೆ. ಶಿವದೇವನ ವೀರವ್ರತಗಳನ್ನು ಒಂದೊಂದಾಗಿ ವಿವರಿಸುತ್ತ

ಲಿಂಗಕ್ಕೆ ಜಂಗಮಕ್ಕಂ।
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ ।
ಸಂಗನಬಸವಂ ಬೆಸಸೆ ಮ ।
ನಂಗೊಂಡರ್ಚಿಸುವನುಭಯ ಲಿಂಗವ ಮುದದಿಂ।

ಮೃಡಗಣ ವರಪ್ರಸಾದಮ ।
ಪಡೆದಂ ಜಗವರಿಯಲಂದು ಸಂಗನ ಬಸವಂ ।
ಪಡೆದಾ ಪ್ರಸಾದ ಸಿದ್ಧಿಯ ।
ಕಡುವೀರಬ್ರತದಿ ಪಡೆದನೀ ಶಿವದೇವಂ ।

ಎಂದು ಈ ಶಾಸನ ಹೇಳುತ್ತದೆ. ಲಿಂಗಪೂಜೆ, ಜಂಗಮ ದಾಸೋಹಗಳು ಬಸವಣ್ಣನವರ ನಿತ್ಯಬದುಕು, ಪ್ರಸಾದಸಿದ್ಧಿ ಅದರಿಂದ ಸಂಪ್ರಾಪ್ತವಾದ ಅಮೃತಫಲ. ಈ ಅಂಶಗಳನ್ನು ಉಲ್ಲೇಖಿಸುವ ಪ್ರಸ್ತುತ ಶಾಸನ ಅವರ ವ್ಯಕ್ತಿಸಿದ್ಧಿಗೆ ಹಿಡಿದ ಕನ್ನಡಿಯಾಗಿದೆ. ಆ ಕಾಲದ ಜನತೆಗೆ ಬಸವಣ್ಣನವರ ಬದುಕು ಪರಮ ಆದರ್ಶವಾಗಿದ್ದಿತೆಂದೂ, ಅವರ ಅನಂತರ ಆಚರಣೆಗಳು ಧರ್ಮದ

ಅನುಶಾಸನಗಳಾಗಿದ್ದು ಶಿವದೇವನಂಥವರು ಅವುಗಳನ್ನು ಅನುಷ್ಠಾನಗೊಳಿಸುತ್ತಿದ್ದರೆಂದೂ ಇದರಿಂದ ವಿದಿತವಾಗುತ್ತದೆ.

ಈ ಶಾಸನದಲ್ಲಿ ಶಿವಶರಣರ ವಚನಗಳ ಸಾರರೂಪವೆನಿಸುವ ಆರೆಂಟು ವೃತ್ತಗಳೂ, ಹಲವಾರು ವೀರಶೈವ ಪಾರಿಭಾಷಿಕ ಪದಗಳೂ ಕಂಡುಬರುತ್ತಿದ್ದು ಆ ಕಾಲದ ವೀರಶೈವದ ಸ್ವರೂಪವನ್ನರಿಯುವಲ್ಲಿ ಇದು ಅಧಿಕ ನೆರವನ್ನು ನೀಡುತ್ತದೆ.

ಕಲ್ಲೇದೇವರಪುರ ಶಾಸನ :

ಯಾದವ ರಾಮಚಂದ್ರನ ಆಳಿಕೆಯಲ್ಲಿ ಹುಟ್ಟಿದ ಈ ಶಾಸನದ ಕಾಲ ಕ್ರಿ. ಶ. ೧೨೭೯.

"......ಭಕ್ತಿ ಸಕ್ತಿ ವದನ ಪದ್ಮಪರಿಮಳ ರೋರಂಬನುಂ। ಸೈವಸಮಯ ಸಂವರ್ದ್ಧನ ಸಕಳಸಮಯ ಸಮುದ್ಧರಣ ಸರ್ಬ್ಬಾಗಮ ಸಾರ್ಬ್ಬಭೌಮನುಂ । ಪಂಚಮುದ್ರಾಧರ ವರತಪೋನಿಷ್ಟ ನಿಕಾಯನುಂ। ......ಬಾಣ ಬಾಣಾಸುರ ವೀರ ಕಲಿಗ ಚಂದ್ರ । ಭದ್ರಕಾಳ ಮಹಾಕಾಳ ಕಾಳ ಕಾಳಕಂಠ । ನಂದಿನಾಥ ಹರಿxxಗುಹxxರಾಮಭೀಮ ನಾರಾಯಣಾದಿ ದೇವಗಣ ಗುಣಕೀರ್ತ್ತಿ । ಕರ್ಣ್ಣಾವತಂಸನುಂ । ಸರಣಜನ ಮನಸ್ಸರೋಜರಾಜಹಂಸನುಂ । ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ ಚೆಂನ ಹೊಂನ ಬಂಕ ಬಸವರಾಜ ಭೋಜಾದಿ ಮರ್ತ್ಯಲೋಕದ ಮಹಾಗಣಾಚಾರ । ಧರಾಭಾರಧೌರೇಯ ದಿಕ್ಕುಂಜರನುಂ...ಹೊಂಗೆ ಹೆಂಗೆ ಮಂಗೆ ......ಗದ ಮಾನವ ದೇವನುಂ ಕಕ್ಷಕಂಠಕರವಕ್ಷೋತ್ತಮಾಂಗ ಲಿಂಗೈಕ್ಯಸಂಗಸದ್ಭಾವನುಂ । .....ನಿಸ್ಪಂದ ನಿತ್ಯಾತ್ಮ ತತ್ವಸ್ವರೂಪನುಂ ।.....ರಸರಸಾಯನ ಘುಟಿಕಾಂಜನ ಮುಖಾಂಜನ ಮೂಳಿಕಾ ನಿಕಾಯ । ವಸ್ಯವಾದ xxಯಸ್ತಂಭ । ವೊಡ್ಡಾಮರ ಮಹೇಂದ್ರಜಾಲ ಹರಮೇಖಳಾ । ದಿ ಪ್ರಪಂಚ ವಿದ್ಯಾಸಿದ್ಧ ಸವಿತ । ಸಂತ ಪದ್ಮನುಂ । ಆದಿಗದೆ ಎದುನಾಥ । ಚತುರಂಗಿನಾಥ । ಗೋರಖನಾಥ । ವಿಸ್ತಾರಾದೇವಿ xx ನಾಥ । ಕಾಹಳಿನಾಥ । ಸುರ್ಪ್ಪಾಣಿನಾಥ । ಲೋಕನಾಥ । ನರನಾಥ । ಪಂಥ.ಪಮಾಣ ಘೋಷನುಂ । ಮಂತ್ರ ತಂತ್ರ ಯಂತ್ರ ಸ್ವತಂತ್ರ ನಿದರ್ಷನಂ । ಕಂದಖಪಾಯ ಕಂಬಳಿಪಾಯ ಭೂಧರಪಾಯ ಮಾಹಲುಪಾಯ ತಂತ್ರಿಪಾಯ ಗುಪ್ತಪಾಯ ನಾಡಪಾಯ ಪೂಜಪಾಯಾದಿ ಸಾಮಗ್ರಿಯ ಸಾಮರ್ಥ್ಯಕಳಾವಲ್ಲಭನುಂ । ....ಸ್ಪಷ್ಟಾಷ್ಟಾದಸ ಯೋಗಪೀಠಾಚಾರ್ಯ್ಯ ಚಕ್ರ ಚಕ್ರಧರ । ಸಿದ್ಧ ಸಿಂಹಾಸನಾಸನಾವಷ್ಟಿತ ಯೋಗಪಟ್ಟ ಯೋಗದಂಡ । ಯೋಗಪಾದುಕ । ಯೋಗಮುದ್ರ ಭದ್ರಕನುಂ ।....ಜನಿಸಿದ ಕಾಯಸಂಪುಟ ಸ್ಫುಟ ಸಹಜಲಿಂಗ । ಮಂಗಳನಿಳಯ ಜಂಗಮಾವತಾರ ಶ್ರೀಸಯದ ಮಲ್ಲಿನಾಥನುಂ ।.....ಭೂಚರ ಕಲಿನಾಥನುಂ .....ವರಗುರು ಸಿವಯೊಗಿ ಶ್ರೀಮತು ಯೋಗಿ ಚಕ್ರವರ್ತಿಪ್ರಸಾದದೇವರಿಗೆ[೫೨]...." ದತ್ತಿ ನೀಡಿದುದು ಈ ಶಾಸನದ ವಿಷಯ.[೫೩] ಇಲ್ಲಿ ಮರ್ತ್ಯಲೋಕದ 'ಮಹಾಗಣ' ಗಳ ಮಧ್ಯ ಬಸವಣ್ಣನವರನ್ನು 'ಬಸವರಾಜ' ಎಂದು ಹೆಸರಿಸಲಾಗಿದೆ. ಶೈವ–ವೀರಶೈವಗಳ ಸಾರ್ಥಕ ಪರಿಭಾಷೆಯಲ್ಲಿ ಕಣ್ಣುಕುಕ್ಕಿಸುವಂತೆ ವರ್ಣಿತನಾದ ಯೋಗಿಚಕ್ರವರ್ತಿ

---

೫೨. ಪ್ರಸಾದಿದೇವ ಎಂಬ ಹೆಸರು ಈ ಶಾಸನದಲ್ಲಿ ಒಟ್ಟು ಎರಡು ಸಲ ಕಂಡುಬರುತ್ತಿದ್ದು ಅದನ್ನು ಅಳಿಸಲು ಮಾಡಿದ ಪ್ರಯತ್ನವನ್ನು ಇಲ್ಲಿ ಕಾಣಬಹುದು.

೫೩. ಈ ಶಾಸನ 'ಶ್ರೀ ಯೋಗಿನಾಥ' ಎಂದು ಮುಕ್ತಾಯಗೊಂಡಿದೆ.

ಪ್ರಸಾದಿದೇವನಿಗೆ ಬಸವಾದಿ ಮರ್ತ್ಯಲೋಕದ ಮಹಾಗಣಗಳ ಆಚರಣೆ ಆದರ್ಶವಾಗಿದ್ದಿತೆಂದು ಈ ಶಾಸನದಿಂದ ತಿಳಿದು ಬರುತ್ತದೆ.

ಮರಡಿಪುರ ಶಾಸನ –

ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಹುಟ್ಟಿದ ಈ ಶಾಸನದ ಕಾಲ ಕ್ರಿ.ಶ. ೧೨೮೦. "ಶ್ರೀ ಕಲಿದೇವರ ದಿವ್ಯ ಶ್ರೀಪಾದಪದ್ಮಂಗಳಂ ಕಮಳಿನಾಳ x x ಸೂತ್ರದಂನ್ತೆದೆವಜೆಯದೆ ಅನುದಿನಂ ಬೆಸಕೆಯ್ಯು(ವ)....ಶರಣದಾಸ ಶೋವನ ಸಿಂಗನ ಮಾರೆಯನಾಯಕ" ಮತ್ತು ಹಲವು ಗಾವುಂಡಗಳು ಕೂಡಿ ಕಲಿದೇವರ ಹೆಸರಿನಲ್ಲಿ ಗ್ರಾಮವೊಂದನ್ನು ದಾನ ನೀಡಿದ್ದಾರೆ.

"........ಭಸ್ಮಾದ್ಧೂಳಿತ ಸುದ್ದಗಾತ್ರ ಕಟ್ವಾಂಗದಾರಿ ತ್ರಿಸೂಳಧರ ಗಂಗಾಧರ ಜಾಹ್ನವೀಜಟಾಜೂಟ ಕೋಟೀರಭಾರ ಪಂಚವಕ್ತ್ರಪರಮೇಶ್ವರ ತ್ರಿಯಂಬಕತ್ರಿಲೋಚನ ತ್ರಿಸೂಳಧರ ಕಟ್ವಾಂಗಧಾರಿ ಕಪಾಳಧರ ಕಱಿಕೊರಳ ಹೆಱಿನೊಸಲ ತುಱಿಗಿದಕೆಂಜೆಡೆಯ ನವಿಲೆಯ ಜಡೆಯಶಂಕರದೇವರ[೫೪] ಪಡಿಹಾರ ದಾಸಯ್ಯ ಸದ್ಯೋಜಾತನ ಮನಮೂರ್ತ್ತಿ ಭಕ್ತಜನ ವನವರ್ತ್ತಿ......ಉಚ್ಚರಿತೇ ಮಂತ್ರ ಉದ್ಧರಿಸಿತೇ ತಂತ್ರ ಶಿವಾಚಾರವೇ ಪಥವಾಗಿ ನಡಪ ರಿಷಿಗಣಂಗಳುಪ್ರಿಯ ದಕ್ಷಯ xx ನಾಸನ ಭಾಳಾಕ್ಷ ಹರ ಅಕ್ಷೇಶ್ವರ ನಂದಿನಾಥ ನಂದಿಮಹಾಕಾಳ ವೀರಭದ್ರ ಬ್ರಂಗಿನಾಥ ಅಂಗಜ ಅxxxತಗ್ರೀವ ಮಯಗ್ರೀವ ಘಂಟಾಕರ್ಣ್ನ ಅಗ್ಗಳಗಣ್ನ ಧಾರುಕ ರೇಣುಕ ಸಾರೂಪ್ಯ ಶಾಯುಜ್ಯ ಸಾಮ್ರಾಜ್ಯ ಪದವಿಯಂ ಹಡದ ಗಂಗಾವಾಳುಕ ಸಮಾರುದ್ರ ಸಕಳಗಣ ಪರಿವೇಷ್ಟಿತಯೆಕ್ಕೋಟಿಗಳು ಪೂಜಿತ ಮತ್ರಂ ಮರ್ತ್ಯಲೋಕದ ಗಣಂಗಪಸ್ರಿರಿಯಾಳುವ ದಾಸದಸವರ್ಮ್ಮದಿಹಿಲ ಉದ್ಭಟ ನಂಬಿ ಕುಂಬಾರಗುಂಡ ಆಂಡವಲ ಕರಿಕಾಲಜೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜದಣ್ನಾಯಕ ಸುರಿಗೆಯಚಲ್ವಡರಾಯ ಸಂಗನ ಬಸವಯ್ಯ ಲಿನಿಮಿತಿ ಕೇಶವರಾಜ. ಜಗದೇವದಣ್ನಾಯಕ ಏಕಾನ್ತದರಾಮಯ್ಯ ಸೊನಲಿಗೆಯರಾಮಯ್ಯ ಹುಲಿಗೆಱಿಯಪೊನ್ನಯ ನೆಲುವಿಗೆಯಸಾಂತಯ್ಯ ಸಕಳಗಣ ಪರಿವೇಷ್ಟಿತ ಶ್ರೀ ಕಲಿದೇವರ ಪ್ರಶಸ್ತಿ ಮಂಗಳಂ" ಎಂಬ ಕಲಿದೇವರ ಪ್ರಶಸ್ತಿಗದ್ಯದಲ್ಲಿ ಬಸವಣ್ಣನವರನ್ನು 'ಸಂಗನ ಬಸವಯ್ಯ' ಎಂದು ಉಲ್ಲೇಖಿಸಲಾಗಿದೆ. ಹಿಂದೆ ಹೇಳಲಾದ ಅರ್ಜುನವಾಡ ಚೌಡದಾನಪುರ ಶಾಸನದ 'ಸಂಗನಬಸವ' ಮತ್ತು ಈ ಶಾಸನದ 'ಸಂಗನಬಸವಯ್ಯ' ಎಂಬ ಹೆಸರುಗಳು ಸಂಗಮೇಶ್ವರ ಮತ್ತು ಬಸವೇಶ್ವರರ ದೈವೀಸಂಬಂಧವನ್ನು ಧೃಡಪಡಿಸುತ್ತವೆ.

ಗುಡಿಹಾಳ ಕುಂಟೋಜಿ ಶಾಸನ –

ಬಾಗೆವಾಡಿಗೆ ಸಮೀಪದ ಗುಡಿಹಾಳ ಕುಂಟೋಜಿ ಗ್ರಾಮಗಳ ಸೀಮೆಯಲ್ಲಿರುವ ಕಲ್ಲಿನಮೇಲೆ

"[ಶ್ರೀ ಸಂ]ಗಮನಾ
ಥ ಬಸವರಾಜ ದೇ
ವಾರ ಮಾಂನ [ನ್ಯ]

---

೫೪. ಈ ಶಾಸನ 'ಶ್ರೀ ಜಡೆಯ ಸಂಕರದೇವರ ಮಲ್ಲಯ್ಯ ಬರೆದ ಶಿವದೇವ ಮಂಗಳಮಹಾಶ್ರೀ' ಎಂದು ಕೊನೆಗೊಂಡಿದೆ.

ಯಿದಕ್ಕೆ ದಾರೊಬರು
ತಪ್ಪಿದರೆ.........

ಎಂದು ಮುಂತಾಗಿ ಬರೆಯಲ್ಪಟ್ಟಿದೆ. ಅಕ್ಷರ ಸ್ವರೂಪವನ್ನವಲಂಬಿಸಿ ಇದರ ಕಾಲ ೧೪ನೆಯ ಶತಮಾನವೆಂದು ಪಂಡಿತರು ಹೇಳುತ್ತಾರೆ. ಬಹುಶಃ ಈ ಕಲ್ಲು ನಿಲ್ಲಿಸಿದ ಹೊಲ ಬಸವಣ್ಣನವರ ಹೆಸರಿನಲ್ಲಿ ಬಿಟ್ಟ ಮಾನ್ಯವಾಗಿರಬಹುದು. ಇಲ್ಲವೆ ಬಾಗವಾಡಿಯ ಸುತ್ತಣ ಪ್ರದೇಶಕ್ಕೆ 'ಬಸವರಾಜದೇವರ ಮಾನ್ಯ' ಎಂದು ಕರೆಯುತ್ತಿರಬಹುದು. ಬಸವಣ್ಣನವರಿಗೆ ಜನ್ಮನೀಡಿದ ಬಾಗವಾಡಿಯ ಪುಣ್ಯಪ್ರದೇಶದಲ್ಲಿ ಅವರನ್ನು ಸ್ಮರಿಸುತ್ತ ನಿಂತ ಏಕೈಕ ಶಾಸನವಿದು.

ಆನಂದಪುರ ಸಂಸ್ಥಾನಮಠದ ತಾಮ್ರಶಾಸನ –

ಬಸವಣ್ಣನವರ ಹೆಸರನ್ನು ಉಲ್ಲೇಖಿಸುವ ಕ್ರಿ.ಶ. ೧೬೬೦ರ ತಾಮ್ರಶಾಸನವೊಂದು ಆನಂದಪುರ ಸಂಸ್ಥಾನಮಠದಲ್ಲಿದ್ದು ಅದರ ಮುಖ್ಯ ಭಾಗ ಹೀಗಿದೆ –

"....ಕೆಳದಿ.....ಸೋಮಶೇಖರ ನಾಯಕರು ಶಾಲಿವಾಹನ ಶಕವರುಷ ೧೫೫೨ನೆಯ ಧಾತುಸಂವತ್ಸರದ ಮಾರ್ಗಶಿರ ಶು. ೧೩ರಲ್ಲು ಬರಸಿ ವಪ್ಪಿಸಿದ ಶಾಸನಪ್ರಮಾಣ.....ಪೂರ್ವ ಕಲ್ಯಾಣ ಪಟ್ಟಣದಲ್ಲಿ ನಿರಂಜನ ಪ್ರಭುಸ್ವಾಮಿಗಳು ತಮ್ಮ ಶೂನ್ಯ ಸಿಂಹಾಸನಕ್ಕೆ ಮುಂದೆ ವಬ್ಬರ ಯೋಗ್ಯರ ಮಾಡಬೇಕೆಂದು ಚನ್ನಬಸವ ಬಸವೇಶ್ವರ ಮುಂತಾದ ಪ್ರಮಥರು ಬಿನ್ನೈಸಿಕೊಂಡದ್ದಕ್ಕೆ ಚಂನಬಸವರಾಜದೇವರ ಸಮಯಾಚಾರದ ೬ ಸಾವಿರಕ್ಕೆ ಅಧ್ಯಕ್ಷರಾದ ನಿರಂಜನ ಪ್ರಭುವಿನಲ್ಲಿ ಏಕೋಭೋ(=ಭಾ)ಜನ ಸ್ಥಲ ಕೂಡಿದ ಗಂಗಾಧರಸ್ವಾಮಿಗಳಿಗೆ ಕಲಿಶಕ ೫೭೭೮ನೆಯ ಜಯ ಸಂವತ್ಸರದ ಆಶ್ವೀಜ ಶು.೧೦ರಲ್ಲು.....ಸ್ವಾಯಂಭುವಾಗಮೋಕ್ತ ಪ್ರಮಾಣದಿಂ ಚರಪಟ್ಟ ನಿಬಂಧಿಸಿ ಮುಂದೆ ಇದೇ ಪ್ರಕಾರ ಶಿಷ್ಯಪಾರಂಪರ್ಯ ನಡೆಯಬೇಕೆಂದು ಅಲ್ಲಮಪ್ರಭುಸ್ವಾಮಿಗಳು ನಿಶ್ಚೈಸಿದರು....."

ಈ ಶಾಸನದ ಪ್ರಾಮಾಣಿಕತೆಯನ್ನು ನಂಬುವುದು ಅತಿ ಕಷ್ಟವಾಗಿದ್ದರೂ ಇಲ್ಲಿ ಹೇಳಲಾದ 'ಬಸವೇಶ್ವರ' ಎಂಬ ಹೆಸರನ್ನು ಗಮನಿಸಬಹುದು.

ಜೋಡೀದಾಸೇನಹಳ್ಳಿ ಶಾಸನ

ಕೆಂಡ ಶಂಕರೇಶ್ವರದೇವರೆಂಬವರು ಕಲ್ಯಾಣದ ಶಿವ ಶರಣರ ಸಂತಾನವೆಂದು ಹೇಳುವ ಕ್ರಿ. ಶ. ೧೬೮೬ರ ಈ ಶಾಸನದ ಮುಖ್ಯಪಾಠ ಹೀಗಿದೆ –

"ಶುಭಮಸ್ತು. ಸ್ವಸ್ತಿ ಶ್ರೀ. ಜಯಾಭ್ಯುದಯ ಷಲಿವಹನ ಷಕ ವರುಷ ೧೬೦೮ ಅಕ್ಷಯನಾಮ ಸಂವತ್ಸರದ ಕಾರ್ತಿಕ ಬಹುಳ ೧೩ ಯಲು, ಕಲ್ಯಾಣ ಪಟ್ಟಣಕೆ ವಡೆಕರ್ತರಾಗಿ ೮ ೧೯೬೦೦೦ ಜಂಗಮಕೆ ದಾಸೋಹ ಮಾಡಿ ನಿಚ್ಚಪವಾಡವ ಮೆರೆದ ಕಪ್ಪಟಿಯ ಸಂಗನ ಬಸವರಾಜೇಂದ್ರನು. ಷಡ್ದರುಶನ ಸ್ಥಾಪನಾಚಾರ್ಯರಾದ ಷಟುಸ್ಥಳದ ಪ್ರxxxಗಳಾದ ೧೨ಡು ಸಾವಿರ ಸ್ವಯಜಂಗಮೇಶ(?) ಅನುಭವಮೂರ್ತಿಯಾಗಿ ಗ್ನಾನಸಂಭವದಿ ಅರುಹಿ ಕೊಟ್ಟಂಥ ಚಿಕ್ಕದಣಾಯಕ ಚೆಂನಬಸವರಾಜೇಂದ್ರನು, ಶಾಂಭುಲೋಕಕೆ ಅಧಿಪತಿಗಳಾದಂಥ ಸಾಂಕೆ ಕೋಳಾಹಳನೆಂಬ ಬಿರಿದಿನ ಮಹಿಮೆಯುಲಿ ಚರಿಸಿದ ಅಲ್ಲಿ ಮಹಾಬಸವಂಗಳು (=ಅಲ್ಲಮಹಾಪ್ರಭುಗಳು?)

ಯಿಂತಿವರುಭಯಾನುxxಅ ಮೇರುಗಣಂಗಳು ಸಹವಾಗಿ ಬಂದ ಕೆಂಡಶಂಕರೇಶ್ವರದೇವರ ಪದಪಂಕಜ ಭ್ರಮರರಾದ.....".

ಇಲ್ಲಿ ಚನ್ನಬಸವಣ್ಣ ಪ್ರಭುದೇವ (?) ರೊಂದಿಗೆ ಬಸವಣ್ಣನವರ ಉಲ್ಲೇಖ ಬಂದಿದ್ದು ವೀರಶೈವ ಪುರಾಣಗಳಲ್ಲಿ ಉಕ್ತವಾದ ಬಸವಣ್ಣನವರ ೧೯೬೦೦೦ ಜಂಗಮದಾಸೋಹ, ನಿತ್ಯ ಪವಾಡಗಳು ಈ ಶಾಸನದಲ್ಲಿ ಸ್ಥಾನಪಡೆದಿವೆ. ಅಲ್ಲದೆ 'ಕಪ್ಪಟಿಯ ಸಂಗಮೇಶನ ಬಸವರಾಜೇಂದ್ರ' ಎಂದು ಕರೆದುದು ಗಮನಿಸಬೇಕಾದ ಸಂಗತಿ.

ಕಾನಕಾನಹಳ್ಳಿ ತಾಮ್ರಶಾಸನ (೧)

ಈ ಶಾಸನದಲ್ಲಿ ಅಗಸರಿಗೆ ಮಡಿವಳ ಮಾಚಿದೇವನು ನಿಯಮಿಸಿಕೊಟ್ಟ ಹಕ್ಕುಗಳನ್ನು ಉಲ್ಲೇಖಿಸುತ್ತ ಕೊನೆಗೆ "....ಕಲ್ಯಾಣಪಟ್ಟ ಮಂದು ಬಸವೇಶ್ವರಸ್ವ (=ಸ್ವಾ)ಮುಲುವಾರು ನಿರ್ನಯಂ ಚೇಶಿಂದಿ" ಎಂದು ಹೇಳಲಾಗಿದೆ. ಇದು ತೆಲುಗ ಶಾಸನವಿದ್ದು ಕಾಲ ಕ್ರಿ. ಶ. ಸು. ೧೭೦೦.

ಕಾನಕಾನಹಳ್ಳಿ ತಾಮ್ರಶಾಸನ (೨)

ಮಲ್ಲಿಗೆ ಹೂಗಳನ್ನು ನಾವಿದರು ಉಪಭೋಗಿಸಬಾರದು ಎಂಬ ವಿಷಯವಾಗಿ ಹೇಳುತ್ತ ".....ಯಿದನ್ನು ಕಲ್ಯಾಣದ ಬ್ಸ (=ಬಸ) ವಪ್ಪಾನವರು ಮಾಡಿದ ಶ್ಯಾಸನ (=ಶಾಸನ) ವೆಂದು ಹೇಳುವರ್ರು (=ರು)" ಎಂದು ಉಲ್ಲೇಖಿಸಲಾಗಿದೆ.

ಈ ಎರಡು ಶಾಸನಗಳಲ್ಲಿ ಹೇಳಲಾದ ನಿರ್ಣಯಗಳನ್ನು ಬಸವಣ್ಣನವರು ಕೊಟ್ಟಿರಲಿ ಬಿಡಲಿ, ಅಗಸರು ಸಮಾಜದಿಂದ ಆಯವನ್ನು ಸಾಧಿಸುವಲ್ಲಿ, ಸಮಾಜವು ನಾವಿದರ ಹಕ್ಕುಗಳನ್ನು ಸೀಮಿತಗೊಳಿಸುವಲ್ಲಿ ಬಸವಣ್ಣನವರ ಹೆಸರನ್ನು ಬಳಸಿದರೆ ತಮ್ಮ ಮಾತಿಗೆ ಬೆಲೆಬರುವುದೆಂದು ಭಾವಿಸಿದುದು ಇದರಿಂದ ವ್ಯಕ್ತವಾಗುತ್ತದೆ.

ಮೇಲೆ ಹೇಳಲಾದ ೧೧ ಶಾಸನಗಳಲ್ಲದೆ ಸುತ್ತೂರು ತಾಮ್ರಶಾಸನದ[೫೫] ಕೊನೆಯ 'ಶ್ರೀ ಬಸವೇಶ್ವರ ಸ್ವಾಮಿಯವರು' ಕಸಬಾ ಗ್ರಾಮದ ಶಿಲಾಶಾಸನದ[೫೬] ಪ್ರಾರಂಭದ 'ಬಸವ ಮಾದೇಶ್ವರ ನಂಜುಂಡೇಶ್ವರ ಪ್ರಸಂನ'* ಎಂಬಂಥ ಉಲ್ಲೇಖಗಳು ಹಲವಾರು ಶಾಸನಗಳಲ್ಲಿ ಕಂಡುಬರುತ್ತವೆ. ಇಂಥವುಗಳನ್ನೂ ಸಂಗ್ರಹಿಸಿದರೆ ಬಸವಣ್ಣನವರನ್ನು ಕುರಿತ ಶಾಸನ ಸಂಖ್ಯೆ ಇನ್ನೂ ವರ್ಧಿಸುತ್ತದೆ.

ಮಳೆಗಾಳಿಗಳೆಂಬ ಪ್ರಕೃತಿಯ ಆಘಾತ, ಮತಮತ್ಸರ, ಇತಿಹಾಸದ ಅನಾದರಗಳೆಂಬ ಜನತೆಯ ಮನೋಭಾವ, ಇವುಗಳಿಂದಾಗಿ ಕರ್ನಾಟಕದ ಸಾವಿರಾರು ಶಾಸನಗಳು ಮಣ್ಣುಗೂಡಿ ಹೋಗಿವೆ. ಈ ರಾಶಿಯಲ್ಲಿ ಶರಣರ ಶಾಸನಗಳೂ ಸೇರಿರಬಹುದು.

---

೫೫. M.AR. 1930 .P.193

೫೬. M.AR. 1930 .P.136

* ಬಸವೇಶ್ವರನೆ ಗತ್ತಿ (EC XI ಮೊಳಕಾಲ್ಮೂರು ೨೫ ಕ್ರಿ.ಶ. ೧೬೬೫) ಶ್ರೀಗುರುಬಸವಲಿಂಗ M.AR. 1935 . P.133

ಶಾಸನ ಸಂಶೋಧನೆಯ ಕಾರ್ಯ ದಕ್ಷಿಣ ಕರ್ನಾಟಕದಲ್ಲಿ ಬಹುಮಟ್ಟಿಗೆ ಪರಿಪೂರ್ಣಗೊಂಡಿದ್ದು, ಶರಣರ ಆಂದೋಲನೆಯ ಕೇಂದ್ರ ಭೂಮಿಯಾದ ಉತ್ತರಕರ್ನಾಟಕದಲ್ಲಿ ತೃಪ್ತಿಕರವಾಗಿ ನಡೆದಿಲ್ಲವೆಂದೇ ಹೇಳಬಹುದು.* ಈ ಪ್ರದೇಶದಲ್ಲಿ ಸಂಶೋಧನೆ ಮುಂದುವರೆದರೆ ಬಸವಣ್ಣನವರನ್ನು ಕುರಿತ ಶಾಸನ ಸಾಮಗ್ರಿ ಇನ್ನೂ ಅಧಿಕ ಪ್ರಮಾಣದಲ್ಲಿ ದೊರೆಯಬಹುದು.

ಶಾಸನ ಅಧ್ಯಯನ ಅದೇ ಸುಳಿಬಿಚ್ಚುತ್ತಿದ್ದ ಸಮಯದಲ್ಲಿ ಓದಿದ ಮೇಲಣ ಶಾಸನಗಳು ಪಾಠದೃಷ್ಟಿಯಿಂದ ಆಶುದ್ಧವಾಗಿದ್ದು, ಲಿಪಿಸೂಕ್ಷ್ಮಜ್ಞರು ಅವುಗಳನ್ನು ಇನ್ನೊಮ್ಮೆ ಓದಿ ನಿಜಪಾಠವನ್ನು ನಿರ್ಣಯಿಸಿಕೊಡಬೇಕು. ಸಾಧ್ಯವಾದರೆ ಈ ೧೧ ಶಾಸನಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಬೇಕು.

ಒಟ್ಟಿನಲ್ಲಿ ಈಗ ಬಸವಣ್ಣನವರ ಹೆಸರಿನಲ್ಲಿ ಮೇಲಣ ಶಾಸನಗಳು ಲಭಿಸಿ 'ಶಾಸನ ಪ್ರಮಾಣ'ವನ್ನು ನಂಬುವವರಿಗೆ ಅವರು ಐತಿಹಾಸಿಕ ವ್ಯಕ್ತಿಗಳೆಂಬ ಭಾವನೆ ಮೂಡಿದೆ. ಇದರಿಂದಾಗಿ "ಬಸವಣ್ಣನವರನ್ನು ಕುರಿತು ಗ್ರಂಥಗಳಲ್ಲಿರುವ ಒಂದು ವಿಷಯಕ್ಕೂ ಶಾಸನಾಧಾರ ಒಂದಾದರೂ ಇಲ್ಲವೆಂಬುದೇ ಆಶ್ಚರ್ಯವು. ಇಂಥ ಮಹಾಪುರುಷನನ್ನು ಕುರಿತು ಶಾಸನಗಳೆಲ್ಲ ಮೌನಮುದ್ರೆ ವಹಿಸಿವೆ....ಇದೇ ಬಸವಣ್ಣನ ಚಾರಿತ್ರಿಕಪುರುಷನೋ ಅಲ್ಲವೋ ಎಂಬ ಸಂದೇಹಕ್ಕೆ ಮೂಲವು" ಎಂಬ ಸಂಶಯಗಳು ಬೇರುಸಹಿತ ಬಿದ್ದು ಹೋಗಿವೆ.

❖❖

---

* ಬಸವಣ್ಣನವರ ಹೆಸರಿನಲ್ಲಿ ಲಭಿಸಿದ ಈ ೧೧ ಶಾಸನಗಳಲ್ಲಿ ಬಹಳಷ್ಟು ಶರಣರ ಆಂದೋಲನೆಯ ಪ್ರದೇಶಕ್ಕೆ ದೂರದಲ್ಲಿರುವ ದಕ್ಷಿಣ ಕರ್ನಾಟಕಕ್ಕೆ ಸಂಬಂಧಿಸಿದವುಗಳೆಂಬುದನ್ನು ಗಮನಿಸಬೇಕು.

ಸಮೀಕ್ಷೆ

ಶಿವಶರಣರ, ಶಿವಕವಿಗಳ, ಶಿವಭಕ್ತರ ಸಾವಿರ ಕಂಠಗಳಲ್ಲಿ ವಿಪುಲವಾಗಿ ಬೆಳೆದುಬಂದ ಬಸವಣ್ಣನವರ ಜೀವನ ಚರಿತ್ರೆ ಮತ್ತು ವ್ಯಕ್ತಿ ಸಿದ್ಧಿಗಳ ಉಲ್ಲೇಖ ಕೆಲವೇ ಶಾಸನಗಳಲ್ಲಿ ನೆಲೆ ನಿಂತುದು ಈ ವರೆಗಣ ವಿವೇಚನೆಯಿಂದ ವೇದ್ಯವಾಗುತ್ತದೆ. ಈ ವಿರಳಸತ್ಯವನ್ನು ಸಮೀಕ್ಷಿಸಿ ಶಾಸನಗಳ ಮುಖಾಂತರ ಬಸವಣ್ಣನವರ ಒಟ್ಟುದರ್ಶನ ಮಾಡಿಕೊಳ್ಳುವುದು ಪ್ರಸ್ತುತ ಉದ್ದೇಶ.

ಹಿರಿಯೂರ ಶಾಸನದಲ್ಲಿ ಸಿರಿಯಾಳ ಬಾಣ ಭೋಗ ಚೋಳ ಉದ್ಭಟ ಸಿಂಧುಬಲ್ಲಾಳ ದಾಸಿಮಯ್ಯರ ಜೊತೆಗೆ, ಕಲ್ಲೇದೇವರಪುರ ಶಾಸನದಲ್ಲಿ ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ ಚೆನ್ನ ಹೊನ್ನ ಬಂಕ ಭೋಜರ ಜೊತೆಗೆ, ಮರಡಿಪುರ ಶಾಸನದಲಿ ಸಿರಿಯಾಳ ದಾಸ ದಶವರ್ಮ ಓಹಿಲ ಉದ್ಭಟ ನಂಬಿ ಕುಂಬಾರಗುಂಡ ಆಂಡವಲ ಕರಿಕಾಲಚೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜದಣ್ಣಾಯಕ ಸುರಿಗೆಯಚೆಲ್ವಡರಾಯ ಅನಿಮಿಷಕೇಶವರಾಜ ಜಗದೇವದಣ್ಣಾಯಕ ಏಕಾಂತದ ರಾಮಯ್ಯ ಸೊನ್ನಲಿಗೆಯ ರಾಮಯ್ಯ ಹುಲಿಗೆರೆಯಪೊನ್ನಯ್ಯ ನೆಲುವಿಗೆಯಶಾಂತಯ್ಯರ ಜೊತೆಗೆ ಬಸವಣ್ಣನವರನ್ನು ಕ್ರಮವಾಗಿ ಬಸವಯ್ಯ, ಬಸವರಾಜ ಸಂಗನಬಸವಯ್ಯ ಎಂದು ಸ್ಮರಿಸಲಾಗಿದೆ. ಹನಿ ಹನಿ ಹಳ್ಳವಾಗಿ, ಹಳ್ಳ ಹಳ್ಳ ಹೊಳೆಯಾಗಿ, ಹೊಳೆ ಹೊಳೆ ಸಂಗಮಿಸಿ ಸಮುದ್ರವಾದ ಶರಣರ 'ಸಾಂಘಿಕ ಆಂದೋಲನೆಯ ಸೂಚನೆಯೆಂಬಂತೆ ಮೇಲಣ ಶಾಸನಗಳು ಶರಣರನ್ನು ಸಾಮುದಾಯಿಕವಾಗಿ ಉಲ್ಲೇಖಿಸಿವೆ. 'ಭಕ್ತಸಂದೋಹ' 'ಮರ್ತ್ಯಲೋಕದ ಮಹಾಗಣ' 'ಮರ್ತ್ಯಲೋಕದ ಗಣ' ಎಂದು ವಿಶಿಷ್ಟ ಪರಿಭಾಷೆಯಲ್ಲಿ ಗೌರವಿಸಿವೆ. ಹಿರಿಯೂರ ಶಾಶನವು ಇವರಿಂದ 'ಉದ್ಬೋಧ ಸಂಪತ್ತಿ'ಯನ್ನು ಯಾಚಿಸಿದ್ದರೆ, ಮರಡಿಪುರ ಶಾಶನವು ಇವರ 'ಮಹಾಗಣಾಚಾರ'ವನ್ನು ಆದರ್ಶವಾಗಿಟ್ಟುಕೊಂಡಿದೆ. ಕಲ್ಲೇದೇವರಪುರ ಶಾಸನವು ಇವರೆಲ್ಲ ಶಿವಸನ್ನಿಧಿಯ ಶರಣರೆಂದು ಮನ್ನಿಸಿದೆ.

ಚೌಡದಾನಪುರದ ಒಂದು ಶಾಸನವು "ಆ ಪ್ರಭು(=ಶಿವ) ನಂದಿನಾಥನ ಮೊಗಂ ನೋಡಲ್ಕೆ ಶ್ರೀ ಸಂಗಮೇಶನ ಪುತ್ರಂ ಬಸವಯ್ಯ ಬಂದ" ಎಂದು ಬಸವಣ್ಣನವರ ಅವತಾರವನ್ನು ಕಥೆ ಕಟ್ಟಿ ಹೇಳುತ್ತದೆ. ಕಾವ್ಯಗಳಲ್ಲಿ ಅವರ ಅವತಾರ ಕಲ್ಪನೆ ವಿಭಿನ್ನವಾಗಿದ್ದರೂ ಜನತೆ ಮಾತ್ರ ಇಂದಿಗೂ ಅವರು ನಂದಿಯ ಅವತಾರವೆಂದು ಭಾವಿಸಿದುದಕ್ಕೆ ಈ ಶಾಸನ ಪೋಷಣೆ ನೀಡುತ್ತದೆ.

"ಲಿಂಗಕ್ಕಲ್ಲದೆ ಮಾಡೆನೀ ಮನವ,
ಜಂಗಮಕ್ಕಲ್ಲದೆ ಮಾಡೆನೀ ಧನವ,

ಪ್ರಸಾದಕ್ಕಲ್ಲದೆ ಮಾಡೆನೀ ತನುವ.......ಎಂಬುದೆನ್ನ ಭಾಷೆ.
ಅನರ್ಪಿತವಾದರೆ ತಪ್ಪೆನ್ನದು. ಮೂಗ ಕೊಯಿ.....ಕೂ.ಸಂದೇವಾ"

ಎಂಬ ವಚನದಲ್ಲಿ ಬಸವಣ್ಣನವರು ತಮಗಿದ್ದ ಲಿಂಗ ಜಂಗಮ ಪ್ರಸಾದ ನಿಷ್ಠೆಗಳನ್ನು ಭಾಷೆಕೊಟ್ಟು ಹೇಳಿದ್ದಾರೆ.[೫೭] ಇದಕ್ಕೆ ಸಾಕ್ಷಿಯೆನಿಸುವ "ಲಿಂಗಕ್ಕೆ ಜಂಗಮಕ್ಕಂ ಹಿಂಗದೆ ದಾಸತ್ವಂ ಮಾಳ್ಪುದೇ ಬೆಸನೆಂದಾ ಸಂಗನ ಬಸವಂ....." "ಮೃಡಗಣ ವರ ಪ್ರಸಾದಮ ಪಡೆದಂ ಜಗವರಿಯಲಂದು ಸಂಗನಬಸವಂ" ಎಂಬ ಅಪರೂಪವಾದ ಹೇಳಿಕೆಗಳನ್ನು ಚೌಡದಾನಪುರದ ಇನ್ನೊಂದು ಶಾಸನವು ಉಲ್ಲೇಖಿಸುತ್ತದೆ. ಆಚರಣೆಯಲ್ಲಿ ನಡೆದು ತೋರಿಸಿ, ವಚನಗಳಲ್ಲಿ ಘೋಷಿಸಿದ ಬಸವಣ್ಣನವರ ಈ ಪ್ರತಿಜ್ಞೆಗಳಿಗೆ ಇಲ್ಲಿ ಶಾಸನ ಸತ್ಯ ಲಭಿಸಿದೆ. ಅವರಿಂದ ಖಚಿತಗೊಳಿಸಲ್ಪಟ್ಟ ಲಿಂಗ ಜಂಗಮ ಪ್ರಸಾದ ತತ್ವಗಳು ಕ್ರಿ. ಶ. ೧೨೬೩ ರ ಹೊತ್ತಿಗೆ ವೀರಶೈವರಿಗೆ ಧರ್ಮದ ಅನುಶಾಸನಗಳಾಗಿದ್ದುವೆಂದೂ, ಚೌಡದಾನಪುರದ ಶಿವದೇವನಂಥವರು ಅವುಗಳನ್ನು ಬದುಕುತ್ತಿದ್ದರೆಂದೂ ಇದರಿಂದ ತಿಳಿದುಬರುತ್ತದೆ.

ಅರ್ಜುನವಾಡ ಶಾಸನವು ಬಸವಣ್ಣನವರನ್ನು "ಪುರಾತನ ಜಂಗಮ ಲಿಂಗೈಕಭಕ್ತಿ ನಿರ್ಭರಲೀಲಾಸಂಗಂ" ಎಂದು ವರ್ಣಿಸುತ್ತ ಮೇಲೆ ಹೇಳಿದ ಲಿಂಗ ಜಂಗಮ ನಿಷ್ಠೆಯೊಂದಿಗೆ ಅವರ ಬದುಕಿನ ಇನ್ನೊಂದು ಪ್ರಮುಖ ಅಂಶವಾದ 'ಪುರಾತನ ಭಕ್ತಿ'ಯನ್ನು ಎತ್ತಿ ಹೇಳಿದೆ.

ಗುರುಭಕ್ತಿಯ ಮಾಡಬಹುದಲ್ಲದೆ ಲಿಂಗಭಕ್ತಿಯ ಮಾಡಬಾರದು
ಲಿಂಗಭಕ್ತಿಯ ಮಾಡಬಹುದಲ್ಲದೆ ಜಂಗಮಭಕ್ತಿಯಮಾಡಬಾರದು
ಜಂಗಮಭಕ್ತಿಯ ಮಾಡಬಹುದಲ್ಲದೆ ಸಮಯಭಕ್ತಿಯ ಮಾಡಬಾರದು

ಎಂಬ ವಚನದನ್ವಯ ಬಸವಣ್ಣನವರ ದೃಷ್ಟಿಯಲ್ಲಿ ಸಮಯಭಕ್ತಿ ಸಂಪಾದನೆಯೊಂದು ಅಸಿಧಾರಾವ್ರತ. ಈ ಖಡ್ಗಧಾರೆಯ ಮೇಲೆ ನಡೆದು ತೋರಿಸಿದ ಅವರನ್ನು ಆ ಕಾಲದ ಜನತೆ 'ಸಮಯಾಚಾರಿ' ಎಂದು ಕರೆದರೆ, ಪ್ರಸ್ತುತ ಶಾಸನವು 'ಸಮಯಭಕ್ತಿ ಸಂಪನ್ನ' ಎಂದು ಬಾಯ್ತುಂಬ ಹೊಗಳಿದೆ.

ಈ ಅರ್ಜುನವಾಡ ಶಾಸನವು ಬೆಳಕಿಗೆ ಬಂದು ಬಸವಣ್ಣನವರ ಜೀವನಚರಿತ್ರೆಯ ಮುಚ್ಚಿದ ಬಾಗಿಲೊಂದು ತೆರೆದಂತಾಗಿದೆ. ಅಲ್ಲಿಯ "ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜ" ಎಂಬ ಮಾತು ಚಾರಿತ್ರಿಕ ಸತ್ಯವನ್ನು ವ್ಯಕ್ತಗೊಳಿಸಿದೆ. ಇದಲ್ಲದೆ ನಾವು ಅರ್ಥಮಾಡಿದಂತೆ ಬಸವಣ್ಣನವರ ಅಣ್ಣ ದೇವರಾಜ, ದೇವರಾಜನ ಮಗ ಕಲಿದೇವ, ಕಲಿದೇವನ ಮಗ ಹಾಲಬಸವಿದೇವ ಎಂಬ ವಿನೂತನ ಅಂಶಗಳು ಈ ಶಾಸನದಿಂದ ಪ್ರಥಮ ಸಲ ಬೆಳಕಿಗೆ ಬಂದಿವೆ. ಅದಕ್ಕಾಗಿ ಶಿವಶರಣರ, ಶಿವಕವಿಗಳ, ಶಿವಭಕ್ತರ ಸ್ಮೃತಿಪಟಲದಿಂದ ಜಾರಿಹೋದ ಅಪೂರ್ವವಿಷಯಗಳನ್ನು ಉಳಿಸಿಕೊಟ್ಟ ಈ ಶಾಸನ ಅತ್ಯಪೂರ್ವವಾದುದು.

---

೫೭. ಲಿಂಗದಲ್ಲಿ ಸಾಹಿತ್ಯನು,
ಜಂಗಮದಲ್ಲಿ ಸನುಮತನು,
ಪ್ರಸಾದದಲ್ಲಿ ಸನ್ನಿಹಿತನು.
ಇಂತೀ ತ್ರಿವಿಧದಲ್ಲಿ ಸಂಬಂಧ ಸಾರಾಯವ ಬಲ್ಲ
ಬಸವಣ್ಣಂಗಲ್ಲದೆ ಮತ್ತಾರಿಗೆಯೂ ಅಳವಡದು.
ಕೂಡಲಚನ್ನಸಂಗಯ್ಯನ ದಯದಿಂದಲಾನು ಬದುಕಿದೆನಯ್ಯಾ" ಎಂಬ ಚನ್ನಬಸವಣ್ಣನವರ ವಚನವನ್ನು ಗಮನಿಸಬೇಕು.

ಬಾಗವಾಡಿ ಪ್ರದೇಶದಲ್ಲಿ ಬಸವಣ್ಣನವರ ನೆನಪನ್ನು ಹೇಳುವ ಗುಡಿಹಾಳ ಕುಂಟೋಜಿ ಶಾಸನವು ತನ್ನ ಸುತ್ತಣ ಪ್ರದೇಶಕ್ಕೆ "ಬಸವರಾಜದೇವರ ಮಾನ್ಯ" ಎಂಬ ಗೌರವ ಘೋಷಣೆ ಮಾಡಿದರೆ, ಜೋಡೀದಾಸೇನಹಳ್ಳಿ ಶಾಸನವು ವೀರಶೈವ ಪುರಾಣೋಕ್ತ ೧೯೬೦೦೦ ಜಂಗಮದಾಸೋಹ, ಮತ್ತು ನಿಚ್ಚ ಪವಾಡಗಳನ್ನು ಎತ್ತಿ ಹೇಳುತ್ತದೆ.

ಅಗಸರು ಸಮಾಜವನ್ನುದ್ದೇಶಿಸಿ, ಸಮಾಜವು ನಾವಿದರನ್ನುದ್ದೇಶಿಸಿ ಬರೆಯಿಸಿದ ಕಾನಕಾನಹಳ್ಳಿಯ ತಾಮ್ರಪಟಗಳು "ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವಭಕ್ತರನು ಒಂದೇ ಎಂಬೆ" ಎಂಬ ವಿಶ್ವಮಾನವ ಬಸವಣ್ಣನವರಿಗೆ ಜನತೆ ತೋರಿಸುವ ಭಕ್ತಿ ಗೌರವಗಳ ಪ್ರತೀಕವೆನಿಸಿವೆ. ಸಾಮಾಜಿಕ ಕಟ್ಟಳೆಗಳು ಬಸವಣ್ಣನವರಿಂದ ನಿರ್ಣಯಿಸಲ್ಪಟ್ಟಿವೆಯೆಂದರೆ ಜನತೆ ಅವುಗಳನ್ನು ಪಾಲಿಸುವರೆಂದು ಈ ಎರಡು ಶಾಸನಗಳು ಭಾವಿಸಿದರೆ, ಆನಂದಪುರಮಠದ ಖೊಟ್ಟಿ ತಾಮ್ರ ಶಾಸನವು ಬಸವಣ್ಣ ಮೊದಲಾದವರ ಹೆಸರುಗಳನ್ನು ಬಳಸಿ ಪ್ರಾಮಾಣಿಕವೆನಿಸಿಕೊಳ್ಳುವ ಪ್ರಯತ್ನ ಮಾಡಿದೆ.

ಈ ಹನ್ನೊಂದು ಶಾಸನಗಳಿಂದ ಬಸವಣ್ಣನವರಿಗೆ ಸಂಬಂಧಿಸಿದ ನಂದಿಯ ಅವತಾರ, ೧೯೬೦೦೦ ಜಂಗಮದಾಸೋಹ, ನಿತ್ಯಪವಾಡಗಳೆಂಬ ಅಲೌಕಿಕ ಹೇಳಿಕೆಗಳ, ತರ್ದವಾಡಿಪ್ರಾಂತದ ಮಧ್ಯಗ್ರಾಮ ಬಾಗವಾಡಿ, ಬಾಗವಾಡಿಯ ಪುರಪ್ರಭು ಮಾದಿರಾಜ, ಮಾದಿರಾಜನ ಮಗ ಬಸವಣ್ಣ, ಬಸವಣ್ಣನ ಅಣ್ಣ ದೇವರಾಜ, ದೇವರಾಜನ ಮಗ ಕಲಿದೇವ, ಕಲಿದೇವನ ಮಗ ಹಾಲಬಸವಿದೇವ ಎಂಬ ಚಾರಿತ್ರಿಕ ಸಂಗತಿಗಳ, ಮತ್ತು ಅವರು ಆತ್ಮೀಕರಿಸಿಕೊಂಡ ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಪುರಾತನಭಕ್ತಿ, ಸಮಯ ಭಕ್ತಿಗಳೆಂಬ ವ್ಯಕ್ತಿಸಿದ್ಧಿಗಳ ಒಟ್ಟುಚಿತ್ರ ಕಣ್ಣಿಗೆ ಕಟ್ಟುತ್ತದೆ.

ಹರಿಹರದೇವನು 'ಬಸವ ಬಸವಣ್ಣ ಬಸವರಸ ಬಸವರಾಜ ಬಸವಿದೇವ' ಎಂದು ಎದೆಯುಕ್ಕಿ ಕರೆದಂತೆ, ಈ ಶಾಸನಗಳೆಲ್ಲ ಬಸವಯ್ಯ–ಸಂಗನಬಸವಯ್ಯ, ಬಸವೇಶ್ವರ–ಬಸವೇಶ್ವರಸ್ವಾಮಿ, ಬಸವರಾಜ–ಬಸವರಾಜದೇವರು, ಸಂಗನಬಸವ–ಸಂಗನಬಸವಯ್ಯ–ಸಂಗನಬಸವೇಶನ ಪುತ್ರ ಬಸವಯ್ಯ–ಕಪ್ಪಟಿಯ ಸಂಗನಬಸವರಾಜೇಂದ್ರ ಎಂದು ನಾಮಸ್ಮರಣೆ ಮಾಡಿವೆ. ಅರ್ಜುನವಾಡ ಶಾಸನವಂತೂ

ಮಂಗಳಕೀರ್ತಿ ಪುರಾತನ ।
ಜಂಗಮ ಲಿಂಗೈಕ ಭಕ್ತಿ ನಿರ್ಭರ ಲೀಲಾ ।
ಸಂಗಂ ಸಂಗನಬಸವಂ ।
ಸಂಗತಿಯಂ ಮಾಳ್ಕೆ ಭಕ್ತಿಯೊಳಗನವರತಂ ।

ಎಂದು ಭಕ್ತಿಪ್ರಸಾದವನ್ನು ಯಾಚಿಸುತ್ತ ಅವರ ಸುಂದರ ಚಿತ್ರವನ್ನು ಬಿಡಿಸಿದೆ. ಬಸವಣ್ಣನವರ ಜೀವನಚರಿತ್ರೆ, ವ್ಯಕ್ತಿಸಿದ್ಧಿಗಳನ್ನು ನಿರೂಪಿಸುವ ಈ ಶಾಸನಗಳಲ್ಲಿ ಅವರಿಂದ ರೂಪಿಸಲ್ಪಟ್ಟ ವೀರಶೈವ ತತ್ವದ ಮುತ್ತು ಹವಳಗಳು, ವಚನದ ವಜ್ರ ತುಣುಕುಗಳು ಬಿತ್ತಿ ಬೆಳೆಯಲ್ಪಟ್ಟಿವೆ.

ಹಿರಿಯೂರ ಶಾಸನದಲ್ಲಿ 'ತನುವಂ ಜಂಗಮದೆಡೆಯೊಳ್ ಮನವಂ ಶ್ರೀ ಸೋಮನಾಥ ಪದಪಂಕಜದೊಳ್' ವಿನಿಯೋಗಿಸಿದ ಕುಂಜಸೆಟ್ಟಿ, ಅರ್ಜುನವಾಡ ಶಾಸನದಲ್ಲಿ 'ಜಂಗಮ ಪುರುಷ'ಕಾವರಸ ಮತ್ತು 'ಮಹಾಲಿಂಗ ಜಂಗಮ ಪ್ರಸಾದ ನಿಯತ' ಹಾಲಬಸವಿದೇವ, ಚೌಡದಾನಪುರ ಶಾಸನಗಳಲ್ಲಿ 'ಜಂಗಮ ಸುಖೈಕ ಸದ್ಭಾವಂ, ಲಿಂಗಜಂಗಮೈಕಂ, ಲಿಂಗಜಂಗಮಾರಾಧಕಂ' ಶಿವದೇವ,

ಕಲ್ಲೇದೇವರಪುರ ಶಾಸನದಲ್ಲಿ 'ಕಕ್ಷಕಂಠಕರವಕ್ಷೋತ್ತಮಾಂಗ ಲಿಂಗೈಕ ಸಂಗಂ' 'ಜನಿಸಿದ ಕಾಯಸಂಪುಟದ ಸ್ಫುಟಸಹಜ ಲಿಂಗಂ' 'ಮಂಗಳನಿಳಯ ಜಂಗಮಾವತಾರಂ' ಎನಿಸಿದ ಪ್ರಸಾದಿ ದೇವರು ಕಂಡುಬರುತ್ತಿದ್ದು, ಇವರೆಲ್ಲ ಲಿಂಗಜಂಗಮ ಪ್ರಸಾದನಿಷ್ಠರೆಂದು ವಿದಿತವಾಗುತ್ತದೆ.

ಅರ್ಜುನವಾಡ ಶಾಸನದ ಹಾಲಬಸವಿದೇವನು 'ತೇಸಠ್ಠಿಪುರಾಥ ಪಾದಾರ್ಚಕ' 'ವೀರವ್ರತಿ' ಎನಿಸಿಕೊಂಡರೆ, ಚೌಡದಾನಪುರ ಶಾಸನದ ಶಿವದೇವನು 'ಪುರಾತನಚರಿತ್ರ' 'ಮಹಾವೀರವ್ರತಿ' 'ಆರೂಢವೀರವ್ರತಿ' ಎನಿಸಿಕೊಂಡಿದ್ದಾನೆ. ಕಲ್ಲೇದೇವರಪುರ ಶಾಸನವು ಪ್ರಸಾದಿದೇವನನ್ನು 'ಶಿವಯೋಗಿ' ಮತ್ತು 'ಶರಣಜನಮನಸ್ಸರೋಜ ರಾಜಹಂಸ'ನೆಂದೂ ಚೌಡದಾನಪುರಶಾಸನವು ಶಿವದೇವನನ್ನು 'ಶಿವಯೋಗಸಿದ್ಧ'ನೆಂದೂ, ಮರಡಿಪುರ ಶಾಸನವು ಮಾರೆಯನಾಯಕನನ್ನು 'ಶರಣರದಾಸ' ನೆಂದೂ ಕರೆದಿರುವಲ್ಲಿ ಪುರಾತನಭಕ್ತಿ, ವೀರವ್ರತ, ಶಿವಯೋಗ ಸಿದ್ಧಿ, ಶರಣಸೇವೆಗಳು ವ್ಯಕ್ತವಾಗಿವೆ. ಹೀಗೆ ಒಬ್ಬರಿಗಿಂತ ಹೆಚ್ಚು ಜನರಲ್ಲಿ ಇಂಥ ಸಮಾನ ತತ್ವಗಳು ಕಂಡುಬರುವುದರಿಂದ ಆ ಕಾಲದಲ್ಲಿ ವೀರಶೈವಕ್ಕೆ ಸಾರ್ವತ್ರಿಕ ಸ್ವರೂಪ ಒದಗಿತ್ತೆಂದು ತಿಳಿದುಬರುತ್ತದೆ.

ಮಹಾಮಹೇಶ್ವರಂ, ಸುವರ್ಣವೃಷಭಧ್ವಜಂ, ಮರ್ತ್ಯಲೋಕದ ಗಣ, ಮರ್ತ್ಯಲೋಕದ ಮಹಾಗಣ, ಭಕ್ತ ಪುರಾತ, ತೇಸಠ್ಠಿಪುರಾಥ, ಸಮಯಭಕ್ತಿ, ಶಿವತತ್ವಾನುಭಾವ, ಶಿವಭಾವ, ಶಿವಕಥಾಳಾಪ, ಶಿವಸದಾಚಾರ, ಶಿವಯೋಗ, ಶಿವಗಣಪ್ರಸಾದ, ಲಿಂಗ ಜಂಗಮ ಪ್ರಸಾದ, ಜಂಗಮಾರೋಗಣೆ, ಜಂಗಮಾರಾಧನೆ, ಕರಲಿಂಗ ಎಂಬ ಅಚ್ಚ ವೀರಶೈವ ಪದಗಳು ಶಾಸನಗಳಲ್ಲಿ ಹಚ್ಚಹಸುರಾಗಿ ನಳನಳಿಸುತ್ತವೆ. ವೀರಶೈವ ನಡೆದುಬಂದ ಹೆಜ್ಜೆಯ ಗುರುತುಗಳಾಗಿವೆ.

'ಲಿಂಗವನಪ್ಪಿದ ತೋಳ್ಗಳಿನಂಗನೆಯುರನಪ್ಪೆಂ' 'ತಲೆದಂಡ ಸ್ವರ್ಗಮುಕ್ತಿಯು ಫಲವನಪೇಕ್ಷಿಸಿದೆನಾದಡೆ' 'ಒರೆಯಂ ಕಟ್ಟಿದೆ ನೂರೆಂಟು ಬ್ಯಾದಿಗೆ' 'ತನುಗುಣಂಗಳಂ ಮರದು, ಆವರಣಗಳಂ ತೊರದು, ಉಭಯಕರ್ಮದ ಬೇರಂ ಕೊರದು, ಮಾಯಾಪಾಶಮಂ ಪರಿದು'

ಅಂಕೆಗೆ ಝುಂಕೆಗೆ ಮನದೊ ।
ಳ್ಶಂಕಿಸಿದಡೆ ನಿನ್ನ ಭಕ್ತರಾಣೆಲೆ ಪಶುಪತಿ ।
ಶಂಕರನೊಳಾದೊಡಂ ಬೇ ।
ಡೆಂ ಕೇಳ್ ಬೇಡಿದಡೆ ಯುಂನ ತಲೆಯೇ ದಂಡಂ ।
ಮಾನಸ ವಾಚಕ ಕಾಯಿಕ ।
ಮೇನುಂಟದ ನಿನ್ನ ಭಕ್ತರೊಳನಿಶಂ।
ಸಾನಂದದಿಂ ಮಾಳ್ಪೆಂ ನಾ ।
ನನ್ಯವ ನೆನೆಯೆ ನುಡಿಯೇ ಮಾಡೆಂ ಕೂಡೆಂ

ಎಂಬ ಚೌಡದಾನಪುರ ಶಾಸನಸ್ಥ ಪದ ಪದ್ಯಗಳಲ್ಲಿ ವಚನ ಸಾಹಿತ್ಯದ ಭಾಷೆ ಥಳ್ಳಥಳ್ಳನೆ ಮಿಂಚುತ್ತದೆ.

ಈ ಶಾನಗಳನ್ನು ಇನ್ನೂ ಹಲವು ದೃಷ್ಟಿಗಳಿಂದ ಸಮೀಕ್ಷಿಸಿ ಕೆಳಗಣ ಅಭಿಪ್ರಾಯಗಳನ್ನು ಸಂಗ್ರಹಿಸಬಹುದು.

ಹಾಸನ ಜಿಲ್ಹೆಯ ಹಿರಿಯೂರ (ಕ್ರಿ.ಶ. ೧೨೪೫) ಚಿತ್ರದುರ್ಗ ಜಿಲ್ಹೆಯ ಕಲ್ಲೇದೇವರಪುರ (ಕ್ರಿ.ಶ.೧೨೭೬) ಮೈಸೂರ ಜಿಲ್ಲೆಯ ಮರಡಿಪುರ (ಕ್ರಿ.ಶ. ೧೨೮೦) ಶಾಸನಗಳಲ್ಲಿ ಬರುವ

ಶರಣರ ಮತ್ತು ಬಸವಣ್ಣವರ ನಾಮಸ್ಮರಣೆಯನ್ನು ಗಮನಿಸಿದರೆ, ಕಲ್ಯಾಣದಲ್ಲಿ ತಲೆಯೆತ್ತಿದ ವೀರಶೈವವು ೧೩ನೆಯ ಶತಮಾನದಲ್ಲಿಯೇ ತುಂಗಭದ್ರೆಯನ್ನು ದಾಟಿ ದಕ್ಷಿಣ ಕರ್ಣಾಟಕವನ್ನು ವ್ಯಾಪಿಸಿತ್ತೆಂದು ಹೇಳಬೇಕಾಗುತ್ತದೆ.

ಈ ಶಾಸನಗಳಲ್ಲಿ ಮೂರು ತಾಮ್ರಶಾಸನ, ಮೂರು ಶಿಲಾಶಾಸನಗಳನ್ನು ಬಿಟ್ಟರೆ ಮಿಕ್ಕ ಕಲ್ಲೇದೇವರಪುರ, ಮರಡಿಪುರ, ಅರ್ಜುನವಾಡಗಳ ಒಂದೊಂದು ಶಾಸನ, ಚೌಡದಾನಪುರದ ಎರಡು ಶಾಸನ, ಹೀಗೆ ಒಟ್ಟು ೫ ಶಾಸನಗಳು ಒಂದಿಲ್ಲೊಂದು ರೀತಿಯಿಂದ ಕಲಿದೇವರಿಗೆ ಸಂಬಂಧಪಟ್ಟುವಾಗಿವೆ. ಕಲ್ಲೇದೇವರಪುರ ಶಾಸನವು ಕಲ್ಮೇಶ್ವರ (=ಕಲಿದೇವ) ದೇವಾಲಯದಲ್ಲಿದ್ದು ದಾನ ಪಡೆದ ಪ್ರಸಾದಿ ದೇವನನ್ನು 'ಭೂಚರ ಕಲಿನಾಥನಂ' ಎಂದು ಕರೆದಿದೆ. ಮರಡಿಪುರ ಶಾಶನವು ಕಲಿದೇವರ ವಿಸ್ತಾರವಾದ ಪ್ರಶಸ್ತಿಯೊಂದಿಗೆ ಪ್ರಾರಂಭವಾಗುವುದಲ್ಲದೇ ಕಲಿದೇವರಿಗೆ ದತ್ತಿ ಕೊಟ್ಟುದೇ ಅದರ ವಿಷಯವಾಗಿದೆ. ಅರ್ಜುನವಾಡ ಶಾಸನವು 'ಶ್ರೀಯಂ ಶ್ರೀಕಲ್ಲಿನಾಥಂ ಕುಡುಗೆ' ಎಂಬ ಕಲಿದೇವರ ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗುವುದಲ್ಲದೆ ಬಸವಣ್ಣನವರ ಅಣ್ಣನ ಮಗನ ಹೆಸರು 'ಕಲಿದೇವರಸ' ಎಂದು ಹೇಳುತ್ತದೆ. ಶಿವನು 'ಕಲಿಯುಗದಲ್ಲಿ ಕಲಿರಾಜಮುನಿ, ಕಲಿದೇವನಾಮ'ದ ಲಿಂಗನಾದನೆಂದು ಸಾರುತ್ತದೆ. ಚೌಡದಾನಪುರವಂತೂ ವೀರಕನ್ನಾದೇವಿಯಿಂದ ಪ್ರತಿಷ್ಠಾಪಿಸಲ್ಪಟ್ಟ ಕಲಿದೇವನಿಂದ ಕಂಗೊಳಿಸುವ ಪುಣ್ಯಭೂಮಿ. ಈ ಎಲ್ಲ ಸಂಗತಿಗಳನ್ನು ಮನದಂದರೆ ಕಲಿದೇವರ ಸಂಪ್ರದಾಯಕ್ಕೂ ಬಸವಣ್ಣನವರಿಗೂ ಏನೋ ಒಂದು ಸಂಬಂಧವಿರಬಹುದೆನಿಸುತ್ತದೆ. ಇದು ನಿಜವಿದ್ದರೆ ಕಲಿದೇವರ ದೇವಾಲಯವನ್ನು ನಿರ್ಮಿಸಿದ ಮನಗೂಳಿ ಶಾಸನೋಕ್ತ ಬಯಸವಯ್ಯನೂ ಕಲ್ಯಾಣಬಸವಣ್ಣನೂ ಒಬ್ಬನೇ ಎಂದು ವಾದಿಸುವವರಿಗೆ ಹೊಸ ಆಧಾರವೊಂದು ಲಭಿಸಿದಂತಾಗುತ್ತದೆ.

ಹರಿಹರದೇವನ ಕಾಲ ಕ್ರಿ.ಶ. ೧೨೮೦ ಎಂದು ಶ್ರೀ ಎ. ಆರ್. ಕೃಷ್ಣಶಾಸ್ತ್ರೀ, ಕ್ರಿ.ಶ. ೧೨೯೦ ಎಂದು ಕಿಟೆಲ್, ಕ್ರಿ.ಶ. ೧೨೯೫ ಎಂದು ಡಾ. ಆರ್. ಸಿ. ಹಿರೇಮಠ, ಕ್ರಿ.ಶ. ೧೩೦೦ ಎಂದು ಲೂಯಿಸ್ ರೈಸ್, ಡಾ. ವೆಂಕಟ ಸುಬ್ಬಯ್ಯ, ಎಚ್. ದೇವೀರಪ್ಪ ಮೊದಲಾದವರು ಹೇಳುತ್ತಾರೆ. ಇತ್ತಿತ್ತಲಾಗಿ ಇನ್ನೂ ಬಲಗೊಳ್ಳುತ್ತಿರುವ ಈ ಹೇಳಿಕೆ ನಿಜವಿದ್ದ ಪಕ್ಷದಲ್ಲಿ, ಬಸವಣ್ಣನವರನ್ನು ಕುರಿತ ಪ್ರಾಚೀನತಮ ಕೃತಿಯೆನಿಸುವ 'ಬಸವರಾಜದೇವರ ರಗಳೆ'ಗಿಂತ ಹಿರಿಯೂರ (೧೨೫೯) ಅರ್ಜುನವಾಡ (೧೨೬೦) ಚೌಡದಾನಪುರ (೧೨೮೦) ಶಾಸನಗಳೇ ಹೆಚ್ಚು ಪ್ರಾಚೀನತಮವೆನಿಸುತ್ತವೆ. ಅದಕ್ಕಾಗಿ ಈ ಶಾಸನಗಳಲ್ಲಿ ನಿರೂಪಿಸಲಾದ ಸಂಗತಿಗಳು ಕಾವ್ಯಗಳಿಗಿಂತ ಹೆಚ್ಚು ಪ್ರಾಚೀನತಮ, ಹೆಚ್ಚು ವಿಶ್ವಸನೀಯ.

❖❖

ಶಾಸನಗಳಲ್ಲಿ ಶಿವಶರಣರು

ಡಾ. ಎಂ. ಎಂ. ಕಲಬುರ್ಗಿ

ಸಿರಿಗನ್ನಡ ಪ್ರಕಾಶನ
ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೯೭೦

ನಿವೇದನೆ

(ಮೊದಲ ಮುದ್ರಣದ್ದು)

'ಜೈನ ಶಿಲಾಲೇಖ ಸಂಗ್ರಹ' ಹೆಸರಿನ ಮೂರು ಸಂಪುಟಗಳನ್ನು ಮೂರು ವರ್ಷಗಳ ಹಿಂದೆ ಓದಿದೆನು. ಅದೇ ಮಾದರಿಯಲ್ಲಿ 'ವೀರಶೈವ ಶಿಲಾಲೇಖ ಸಂಗ್ರಹ' ಗ್ರಂಥವನ್ನು ಸಿದ್ಧಪಡಿಸುವ ಹಂಬಲ ಹುಟ್ಟಿತು. ಸಂಬಂಧಪಟ್ಟ ಶಾಸನಗಳನ್ನು ಒಂದೆಡೆ ಸಂಗ್ರಹಿಸಿದೆ. ಈ ಸಂಗ್ರಹಕ್ಕೆ ಯೋಗ್ಯ ಉಪೋದ್ಘಾತ ಅವಶ್ಯವೆನಿಸಿತು. ನನ್ನ ಸಂಗ್ರಹವನ್ನು ಕಣ್ಣೆದುರಿಗಿಟ್ಟುಕೊಂಡು ಅಭ್ಯಾಸ ನಡೆಸಿದೆ. ಉಪೋದ್ಘಾತ ಅನಿರೀಕ್ಷಿತ ಬೆಳೆದು ಒಂದು ಸ್ವತಂತ್ರಗ್ರಂಥದ ಗಾತ್ರ ಪಡೆಯಿತು. ಅದರ ಫಲವಾಗಿ ಮೊದಲು ಹಮ್ಮಿಕೊಂಡ 'ವೀರಶೈವ ಶಿಲಾಲೇಖ ಸಂಗ್ರಹ' ಹಿಂದುಳಿದು 'ಶಾಸನಗಳಲ್ಲಿ ಶಿವಶರಣರು' ಎಂಬ ಈ ಪುಸ್ತಕ ಹೊರಬಂದಿತು.

೧೯೫೭ರಲ್ಲಿ ಡಾ. ಬಿ.ಎಸ್. ಗದ್ದಿಗಿಮಠರ 'ಶಾಸನೋಕ್ತ ವೀರಶೈವರು' ಲೇಖನ ಪ್ರಕಟವಾಯಿತು. ೧೯೬೮ರಲ್ಲಿ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬ ನನ್ನ ಪುಸ್ತಿಕೆ ಪ್ರಕಟವಾಯಿತು. ಆದರೆ ಸಮಗ್ರ ಶರಣರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ಶಾಸನಗ್ರಂಥದ ಕೊರತೆ ಇಂದಿಗೂ ಇದ್ದಿತು. ಇದನ್ನು ಮನದಂದು ಈ ಪುಸ್ತಕವನ್ನು ರಚಿಸಲಾಗಿದೆ. ಶರಣರ ಚರಿತ್ರೆಯನ್ನು ಬರೆಯುವವರಿಗೆ ಇದು ಆಕರ ಗ್ರಂಥವೆಂದು ಉಪಯೋಗವಾದರೆ ನನ್ನ ಶ್ರಮ ಸಾರ್ಥಕವೆಂದು ಬಗೆಯುತ್ತೇನೆ.

ಶಾಸನೋಕ್ತ ಶರಣರನ್ನು ಗುರುತಿಸುವಲ್ಲಿ ನನಗೆ ಆಧಾರ, ವೀರಶೈವಕೃತಿಗಳು. ಅವುಗಳ ಬಲದಿಂದ ಶಾಸನಗಳಲ್ಲಿಯ ಶರಣರನ್ನು ಗುರುತಿಸಲು ಪ್ರಯತ್ನಿಸಿದ್ದೇನೆ. ಈ ಗ್ರಂಥಕ್ಕೆ ಅವಶ್ಯವಾದ ವಿಷಯ ಕಣ್ಣು ತಪ್ಪಿ ಹೊರಗುಳಿಯದಂತೆ, ಅನ್ಯವಾದ ವಿಷಯ ಕಣ್ಣು ತಪ್ಪಿಸಿ ಒಳಗೆ ಬರದಂತೆ ಎಚ್ಚರ ವಹಿಸಿದ್ದೇನೆ.

ಅನೇಕ ಶಾಸನಗಳಲ್ಲಿ ಈ ಕಾಲದ ಸುಪ್ರಸಿದ್ಧಮಠಗಳ ಪ್ರಾಚೀನ ಮಹಾಪುರುಷರ ಉಲ್ಲೇಖ ಬರುತ್ತದೆ. ಆದರೆ ಶರಣರನ್ನು ಹೆಸರಿಸುವ ವೀರಶೈವಕೃತಿಗಳು ಇವರ ಬಗ್ಗೆ ಮೌನ ತಾಳಿದ ಕಾರಣ, ಅನಿವಾರ್ಯವಾಗಿ ಅಂಥವರನ್ನು ಕೈಬಿಡಬೇಕಾಯಿತು.

ಈ ಶಾಸನಗಳಲ್ಲಿ ಕೆಲವು ಶಾಸನಸಂಪುಟಗಳಿಂದ, ಇನ್ನು ಕೆಲವು ಪತ್ರಿಕೆಗಳಿಂದ ಸ್ವೀಕರಿಸಿದುವು; ಕೆಲವು ನಾನು ಶ್ರಮಪಟ್ಟು ಸಂಶೋಧಿಸಿದುವು. ಪ್ರಕಟಿತ ಶಾಸನಗಳಲ್ಲಿ ಕೆಲವು ಶುದ್ಧ, ಕೆಲವು ತೀರ ಅಶುದ್ಧರೂಪದಲ್ಲಿ ನನ್ನ ಕೈಗೆ ಸಿಕ್ಕವು. ಇಂಥ ಶಾಸನಗಳಲ್ಲಿ ಕಾಣುವ ಭಾಷಾದೋಷವನ್ನು ಅಚ್ಚಿನದೋಷವೆಂದು ಭಾವಿಸಬಾರದು. ಈ ಎಲ್ಲ ಅಶುದ್ಧ ಶಾಸನಗಳನ್ನು ಇನ್ನೊಮ್ಮೆ ಪರೀಕ್ಷಿಸಬೇಕೆನಿಸಿತು. ಹಣ, ಸಮಯ, ಮತ್ತು ಶ್ರಮ ಕಾರಣವಾಗಿ ಅದು ಸಾಧ್ಯವಾಗಿಲ್ಲ. ಒಂದೆರಡು ಸಲ ಪ್ರಯತ್ನಪಟ್ಟರೂ ವ್ಯರ್ಥವಾಯಿತು.

ಬೇರೆ ಕೆಲವು ಶಾಸನ ಮತ್ತು ವಿಗ್ರಹಗಳು ಇದ್ದುದು, ಕೈತಪ್ಪಿ ಕಣ್ತಪ್ಪಿ ಕೆಲವು ಅಚ್ಚುದೋಷಗಳು ಅಲ್ಲಲ್ಲಿ ಉಳಿದುಕೊಂಡುದು ಈ ಗ್ರಂಥ ಪೂರ್ಣ ಅಚ್ಚಾದ ಮೇಲೆ ನನ್ನ ಗಮನಕ್ಕೆ ಬಂದವು. ಮುಂದಿನ ಆವೃತ್ತಿಯಲ್ಲಿ

ಈ ಎಲ್ಲ ನ್ಯೂನತೆಗಳನ್ನು ತುಂಬಿಕೊಳ್ಳುತ್ತೇನೆ. ಈಗ ನನ್ನ ದೃಷ್ಟಿಗೆ ಬಾರದ, ಮುಂದೆ ಬೆಳಕಿಗೆ ಬರಬಹುದಾದ ವಿಷಯಗಳಿಂದಾಗಿ ಈ ಗ್ರಂಥವನ್ನು ಆಗಾಗ ಮಾರ್ಪುಗೊಳಿಸಬೇಕಾಗುತ್ತದೆ ಎಂಬ ಅರಿವು ನನಗಿದೆ. ಅಂಥ ಸಂಶೋಧನೆ, ಸಲಹೆಗಳನ್ನು ಸ್ವಾಗತಿಸುತ್ತೇನೆ. 'ಎಡೆವಾಯ್ದು ಬಂದ' ತಪ್ಪುಗಳನ್ನು ಮನ್ನಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಈ ಪುಸ್ತಕದ ಬರವಣಿಗೆಯುದ್ದಕ್ಕೂ ಮಾರ್ಗದರ್ಶನ ನೀಡಿ, ಪ್ರಕಟನೆಯ ವರೆಗೂ ಮುನ್ನಡೆಸಿ, ಬೆಲೆಯುಳ್ಳ ಮುನ್ನುಡಿಯನ್ನು ಬರೆದುಕೊಟ್ಟ ನನ್ನ ವಿದ್ಯಾಗುರುಗಳಾದ ಡಾ. ಆರ್. ಸಿ. ಹಿರೇಮಠ ಅವರಿಗೆ ವಂದನೆಗಳು. ನಿಷ್ಠೆಯಿಂದ ಹಸ್ತಪ್ರತಿಯನ್ನು ಬರೆದುಕೊಟ್ಟ ಶ್ರೀ ರವೀಂದ್ರ ಕರ್ಜಗಿ ಅವರಿಗೆ, ಅಲ್ಪಾವಧಿಯಲ್ಲಿ ಮುದ್ರಿಸಿಕೊಟ್ಟ 'ಕ್ವಾಲಿಟಿ ಪ್ರಿಂಟರ್ಸ್' ಅಚ್ಚುಕೂಟದವರಿಗೆ ನನ್ನ ನೆನಕೆಗಳು.

೧೬ ಡಿಸೆಂಬರ್ ೧೯೭೦ — ಎಂ.ಎಂ. ಕಲಬುರ್ಗಿ

ಪರಿಷ್ಕೃತ ದ್ವಿತೀಯ ಆವೃತ್ತಿ

೧೯೭೦ರಲ್ಲಿ ಪ್ರಕಟವಾದ 'ಶಾಸನಗಳಲ್ಲಿ ಶಿವಶರಣರು' ಮುಂದೆ ಒಂದೆರಡು ವರ್ಷಗಳಲ್ಲಿಯೇ ವಾಚಕರಿಗೆ ಅಲಭ್ಯವಾಯಿತು. ನೂರು ಕಡೆಗಳಿಂದ ಬರುತ್ತಲಿದ್ದ ಬೇಡಿಕೆಗಳನ್ನು, ವೀರಶೈವಸಾಹಿತ್ಯದ ಪ್ರಕಟಣೆ-ಪ್ರಸಾರ 'ಮಹಾಕಾರ್ಯ'ವನ್ನು ಕೈಗೆತ್ತಿಕೊಂಡ ಗದುಗಿನ ಶ್ರೀ ತೋಂಟದಾರ್ಯ ಸಂಸ್ಥಾನಮಠದ 'ವೀರಶೈವ ಅಧ್ಯಯನಸಂಸ್ಥೆ' ಈಡೇರಿಸಿ ಕೊಡುತ್ತಲಿದೆ.

ಇದು ಪರಿಷ್ಕೃತ ದ್ವಿತೀಯ ಆವೃತ್ತಿ. ಪ್ರಥಮ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ತಪ್ಪುಗಳನ್ನು ತಿದ್ದಿಕೊಂಡು, ಎಂಟು ವರ್ಷಗಳಲ್ಲಿ ಬೆಳಕಿಗೆ ಬಂದ ಹೊಸ ಶಾಸನ ಶಿಲ್ಪಗಳನ್ನು ಜೋಡಿಸಲಾಗಿದೆ. 'ಶಾಸನಗಳಲ್ಲಿ ಶಿವಶರಣರು' ಪ್ರಕಟವಾಗಲು ಕಾರಣ, ಸುಳಿವ ಶಾಸನವಾಗಿರುವ ಶ್ರೀ ಜಗದ್ಗುರು ತೋಂಟದಾರ್ಯಮಹಾಸ್ವಾಮಿಗಳವರ ಕಾರುಣ್ಯ. ಶ್ರೀಸನ್ನಿಧಿಗೆ ಭಕ್ತಿಯಿಂದ ಬಾಗುತ್ತೇನೆ.

೨೧.೪.೭೮ — ಎಂ.ಎಂ. ಕಲಬುರ್ಗಿ

ಪರಿಷ್ಕೃತ ತೃತೀಯ ಆವೃತ್ತಿ

೧೯೭೮ರಲ್ಲಿ ಪ್ರಕಟವಾದ ದ್ವಿತೀಯ ಆವೃತ್ತಿ ಈಗ ತೃತೀಯ ಆವೃತ್ತಿಯಾಗಿ ಬೆಳಕು ಕಾಣುತ್ತಲಿದೆ. ಶರಣ ಮೊಲ್ಲೆ ಬೊಮ್ಮಣ್ಣನ ವಿಷಯವನ್ನು ಇಲ್ಲಿ ಹೊಸದಾಗಿ ಸೇರಿಸಿದ್ದೇನೆ ಮತ್ತು ಅಲ್ಲಲ್ಲಿ ಪರಿಷ್ಕರಿಸಿದ್ದೇನೆ. ಇಷ್ಟನ್ನು ಬಿಟ್ಟರೆ ದ್ವಿತೀಯ ಆವೃತ್ತಿ ಮೂಲರೂಪದಲ್ಲಿಯೇ ಹೊರಬರುತ್ತಿದೆ. ಈ ಮೂರನೆಯ ಮುದ್ರಣ ಈಗ ಕಲಬುರ್ಗಿಯ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನದ ಮೂಲಕ ಬೆಳಕು ಕಾಣುತ್ತಿದೆ. ಈ ಪ್ರಕಾಶನದ ಮಾಲಕರಾದ ಶ್ರೀ ಸಿದ್ಧಲಿಂಗ ಬಿ. ಕೊನೇಕ್ ಅವರಿಗೆ ಕೃತಜ್ಞತೆಗಳು.

೨೮ನೇ ನವೆಂಬರ್ ೨೦೧೨ — ಎಂ.ಎಂ. ಕಲಬುರ್ಗಿ

ಪರಿಷ್ಕೃತ ನಾಲ್ಕನೆಯ ಆವೃತ್ತಿ

ಶರಣರ ಚರಿತ್ರೆಯನ್ನು ತಿಳಿದುಕೊಳ್ಳಬೇಕೆನ್ನುವವರಿಗೆ 'ಶಾಸನಗಳಲ್ಲಿ ಶಿವಶರಣರು' ಕೃತಿ ಅನಿವಾರ್ಯ ಆಕರಗ್ರಂಥ. ಹೀಗಾಗಿ ಶಾಶ್ವತ ಮೌಲ್ಯದ ಇದು ಮತ್ತೆ ಮತ್ತೆ ಪ್ರಕಟವಾಗುತ್ತ ಬಂದಿದೆ. ಈಗ ಕನ್ನಡ ಸಾಹಿತ್ಯ ಪರಿಷತ್ತಿನ 'ಶತಮಾನೋತ್ಸವ' ಸಂದರ್ಭದಲ್ಲಿ ಇದನ್ನು ಪ್ರಕಟಿಸುತ್ತಿರುವ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿ, ಕಾರ್ಯದರ್ಶಿಗಳಾದ ಶ್ರೀ ರಾಜಶೇಖರ ಹತಗುಂದಿ, ಮುದ್ರಣದ ಹೊಣೆಹೊತ್ತಿರುವ ಶ್ರೀ ಶಾಮರಾವ್ ಅವರಿಗೆ ಕೃತಜ್ಞನಾಗಿದ್ದೇನೆ.

ಜೇಡರ ದಾಸಿಮಯ್ಯ, ಶಿವಯೋಗಿ ಶಾಂತಿಮಯ್ಯ, ರೇವಣಸಿದ್ಧ, ಸಕಳೇಶ ಮಾದರಸ, ಹುಳಿಯಮೇಶ್ವರ ಚಿಕ್ಕಯ್ಯರನ್ನು ಕುರಿತು ಇಲ್ಲಿ ಒಂದಿಷ್ಟು ಹೊಸ ಮಾಹಿತಿ ಸೇರಿಸಲಾಗಿದೆ. ಮಿಕ್ಕಂತೆ ಅಚ್ಚಿನದೋಷ ಇತ್ಯಾದಿಗಳನ್ನು ನಿವಾರಿಸಿ, ಇದನ್ನು ಮೂಲರೂಪದಲ್ಲಿಯೇ ಪ್ರಕಟಿಸಲಾಗಿದೆ. ಮೊದಲ ಎರಡು ಆವೃತ್ತಿಗಳಲ್ಲಿ ಬಳಸಲಾಗಿದ್ದ ಶರಣರಿಗೆ ಸಂಬಂಧಿಸಿದ ಚಿತ್ರಗಳನ್ನು ಆಮೇಲಿನ ಆವೃತ್ತಿಗಳಲ್ಲಿ ಸೇರಿಸಿಲ್ಲ.

೨ ಅಕ್ಟೋಬರ್ ೨೦೧೪ — ಎಂ.ಎಂ. ಕಲಬುರ್ಗಿ

*

ಪರಿವಿಡಿ

ಪ್ರವೇಶ

ಆಜ್ಞೆಮಾಡು, ಅರ್ಥದ 'ಶಾಸ್' ಧಾತುವಿನಿಂದ ನಿಷ್ಪನ್ನವಾದ 'ಶಾಸನ' ಎಂಬ ಪದಕ್ಕೆ ಆಜ್ಞೆ ಎಂದು ನಿಘಂಟುವಿನ ಅರ್ಥ. ಕಾಲಕ್ರಮದಲ್ಲಿ ಈ ಪದ, ಅರಸನು ಪ್ರಜೆಗಳಿಗೆ ನೀಡಿದ ಮೌಖಿಕ ಇಲ್ಲವೆ ಲಿಖಿತ ನಿರೂಪ ಎಂಬ ಸೀಮಿತ ಅರ್ಥಕ್ಕೆ ಇಳಿಯಿತು. ತಾಳೆಗರಿ, ಭೂರ್ಜಪತ್ರ, ತೊಗಲು, ಬಟ್ಟೆಗಳ ಮೇಲೆ ಬರೆಯಬಹುದಾದ ಈ ನಿರೂಪವನ್ನು ಲೋಹ, ಶಿಲೆಗಳ ಮೇಲೆ ಬರೆವಲ್ಲಿ ಈ ಪದಕ್ಕೆ ಮತ್ತೂ ಒಂದು ಅರ್ಥ ಒದಗಿತು. ಮುಂದೆ ಅರಸನೇ ಆಗಲಿ ಪ್ರಜೆಗಳೇ ಆಗಲಿ ಬಹುದಿನ ಬಾಳುವ ಲೋಹ ಇಲ್ಲವೆ ಶಿಲೆಗಳ ಮೇಲೆ ಬರೆದ ಬರವಣಿಗೆಗೆ (ಆಜ್ಞೆ ಇರಬಹುದು ಇಲ್ಲದಿರಬಹುದು) 'ಶಾಸನ' ಎಂಬ ಈಗಿನ ವಿಶಿಷ್ಟ ಅರ್ಥ ಪ್ರಾಪ್ತವಾಯಿತು.

ಕರ್ನಾಟಕದ ಶಾಸನಗಳು:

ಭಾರತ, ಶಾಸನಗಳ ಶ್ರೀಮಂತಭಾಂಡಾರ. ಈ ದೇಶದ ಪ್ರತಿಯೊಂದು ಪ್ರಾಂತಗಳು ತಂತಮ್ಮ ಪ್ರಾಚೀನ ಇತಿಹಾಸವನ್ನು ಪುನರ್‍ರಚಿಸಿಕೊಳ್ಳುವಲ್ಲಿ ಇವು ಪ್ರಾಮಾಣಿಕ ಸಾಕ್ಷಿ ನುಡಿಯುತ್ತವೆ. ಕರ್ನಾಟಕ ಇಂಥ ಶಾಸನಗಳ ಬಹುದೊಡ್ಡ ಸಂಚಯ. ಈ ಸಂಚಯಕ್ಕೆ ಸಮಸ್ತಭಾರತದಲ್ಲಿ ಸಂಖ್ಯಾದೃಷ್ಟಿಯಿಂದ ತಮಿಳಿನ ತರುವಾಯದ, ಸತ್ವದೃಷ್ಟಿಯಿಂದ ಸಂಸ್ಕೃತದ ತರುವಾಯದ ಸ್ಥಾನ ಸಲ್ಲುತ್ತದೆ.

ಬಂಡೆಗಲ್ಲಿನ ಮೇಲೆ ಪ್ರಾರಂಭವಾದ ಈ ನಾಡಿನ ಶಾಸನಗಳು ಬರುಬರುತ್ತ ಶಿಲಾಫಲಕ, ನುಣುಪಾದ ಶಿಲಾಫಲಕಗಳ ಮೇಲೆ ನಡೆದುಬಂದವು. ಅವುಗಳೊಂದಿಗೆ ಲಿಪಿಸೌಂದರ್ಯವೂ ಆಕರ್ಷಕರೂಪ ತಾಳುತ್ತ ಬಂದಿತು. ಮೊದಮೊದಲು ಘಟನಾಪ್ರಧಾನವಾಗಿ ಶುಷ್ಕನಿರೂಪಣೆಗಳಿಂದ ಕೂಡಿದ ಇವು ಕ್ರಮೇಣ ರಾಷ್ಟ್ರಕೂಟ, ಹೊಯ್ಸಳ, ಕಲ್ಯಾಣಚಾಲುಕ್ಯರ ಕಾಲದಲ್ಲಿ ಸಾಹಿತ್ಯಗುಣವನ್ನು ಸಂವರ್ಧಿಸಿಕೊಂಡು ಪುಟ್ಟ ಕಾವ್ಯದ ಮಟ್ಟಕ್ಕೇರಿದವು. ಇವುಗಳಲ್ಲಿ ಗದ್ಯ, ಕಂದ, ಅಕ್ಷರವೃತ್ತಗಳು ಬಹಳ, ಮಾತ್ರಾವೃತ್ತ, ಅಂಶವೃತ್ತಗಳು ಇಲ್ಲವೆನ್ನುವಷ್ಟು ವಿರಳ.

ಮಸ್ಕಿ, ಗವಿಮಠ, ಪಾಲ್ಕಿಗುಂಡ, ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರಗಳಲ್ಲಿ ಲಭಿಸಿದ ಆರು, ನಿಟ್ಟೂರಿನಲ್ಲಿ ೨, ಉದಗೋಳದಲ್ಲಿ ೨ – ಹೀಗೆ ಅಶೋಕನ ಒಟ್ಟು ಹತ್ತು ಧರ್ಮಲಿಪಿಗಳೇ ಕರ್ನಾಟಕದ ಅತ್ಯಂತ ಪ್ರಾಚೀನ ಶಾಸನಗಳು.[೧] ಇವುಗಳ ಕಾಲ ಕ್ರಿ.ಪೂ. ೩೦೦; ಭಾಷೆ ಪ್ರಾಕೃತ;

---

೧. Corpus inscriptionum Indicarum Vol. I. (E. Hultzsch) P. 174-179 ಮತ್ತು HAS Vol. X ಕ.ಭಾ. ೧೦-೧ ಮತ್ತು ಸಂಯುಕ್ತ ಕರ್ನಾಟಕ ೧೮-೩-೭೮ ನೋಡಿರಿ. ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ನಾಲ್ಕು ಶಿಲಾಶಾಸನ ಫಲಕಗಳು ದೊರೆತಿದ್ದು; ಅಶೋಕನ ಧರ್ಮಲಿಪಿಗಳ ಸಂಖ್ಯೆ ಈಗ ಹದಿನಾಲ್ಕಕ್ಕೇರುತ್ತದೆ(ಸಂ). ನೋಡಿ : ಕೊಪ್ಪಾ ಎಸ್. ಕೆ. ಪಂಪಪೂರ್ವ ಕರ್ನಾಟಕದ ಶಾಸನಗಳು.

ಲಿಪಿ ಬ್ರಾಹ್ಮಿ, ಈಗ ತಿಳಿದಮಟ್ಟಿಗೆ ಕನ್ನಡದ ಪ್ರಥಮ ಶಾಸನ ಹಲ್ಮಿಡಿ ಶಾಸನ(ಕ್ರಿ.ಶ. ೪೫೦)ವೆಂದು ಡಾ. ಎಂ. ಎಚ್. ಕೃಷ್ಣ,[೨] ಬಾದಾಮಿ ಗುಹೆಯ ಮಂಗಳೇಶನ ಶಾಸನ (ಕ್ರಿ.ಶ. ೫೭೮)ವೆಂದು ಶ್ರೀ ಎನ್. ಲಕ್ಷ್ಮೀನಾರಾಯಣರಾಯರ[೩] ಅಭಿಪ್ರಾಯ. ಈ ಹಲ್ಮಿಡಿ ಶಾಸನಕ್ಕೆ ಪ್ರಾಚೀನವಾಗಿ ಕರ್ನಾಟಕದಲ್ಲಿ ಅಶೋಕನ ಧರ್ಮಶಾಸನಗಳಲ್ಲದೆ ಬೇರೆ ಕೆಲವು ಪ್ರಾಕೃತಶಾಸನಗಳೂ ಲಭಿಸುತ್ತವೆ.[೪]

ಈ ತರುವಾಯದ ಶಾಸನಗಳಿಗೆ ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಮಲಯಾಳ, ಮರಾಠಿ ಭಾಷೆಗಳನ್ನೂ ಬಳಸಲಾಗಿದೆ. ಇವುಗಳಲ್ಲಿ ಸಂಖ್ಯಾದೃಷ್ಟಿಯಿಂದ ಕನ್ನಡ ಶಾಸನಗಳು ಅಧಿಕ, ಸಂಸ್ಕೃತ ಶಾಸನಗಳು ಕಡಿಮೆ; ಮಿಕ್ಕ ಭಾಷೆಗಳ ಶಾಸನ ಇನ್ನೂ ಕಡಿಮೆ. ಕಾಲದೃಷ್ಟಿಯಿಂದ ಪ್ರಾರಂಭದಲ್ಲಿ ಸಂಸ್ಕೃತಶಾಸನ ಹೆಚ್ಚು. ಕನ್ನಡ ಶಾಸನ ಕಡಿಮೆ. ಬಾದಾಮಿ ಚಾಲುಕ್ಯರ ಕಾಲಕ್ಕೆ ಎರಡೂ ಸಮ ಸಮ. ಮುಂದೆ ಸಂಸ್ಕೃತ ಶಾಸನಗಳು ವಿರಳ, ಕನ್ನಡಶಾಸನಗಳು ವಿಪುಲ.

ಸಾಮಾನ್ಯವಾಗಿ ಶಾಸನಗಳಲ್ಲಿ ಒಂದೇ ಭಾಷೆ ಮತ್ತು ಒಂದೇ ಲಿಪಿಯನ್ನು ಬಳಸುತ್ತಿದ್ದರೂ, ಕೆಲವುಸಲ ಹಲವು ಭಾಷೆ ಹಲವು ಲಿಪಿಗಳನ್ನು ಬಳಸಲಾಗಿದೆ. ಇದಲ್ಲದೆ ಮೇಲೆ ಒಂದು ಭಾಷೆಯಲ್ಲಿ ಹೇಳಿದ ವಿಷಯವನ್ನು ಕೆಳಗೆ ಇನ್ನೊಂದು ಭಾಷೆಯಲ್ಲಿ ಅನುವಾದಿಸಿ ಬರೆದುದನ್ನು, ಇನ್ನು ಕೆಲವುಸಲ ಯಾವುದೇ ಭಾಷೆಗೆ ಯಾವುದೇ ಲಿಪಿ ಬಳಸಿದುದನ್ನು ಕಾಣಬಹುದು.

ಸ್ವರೂಪದೃಷ್ಟಿಯಿಂದ ಶಾಸನದ ತಲೆಯ ಮೇಲೆ ಮತಕ್ಕನುಗುಣವಾಗಿ ಬೇರೆ ಬೇರೆ ಚಿತ್ರಗಳಿರುತ್ತವೆ. ಆದರೆ ಆಕಳು, ಕರು, ಖಡ್ಗ, ಸೂರ್ಯ, ಚಂದ್ರರ ಚಿತ್ರ ಸರ್ವಸಾಮಾನ್ಯ. ಇದರ ಕೆಳಗೆ ಶ್ರೀ, ಸ್ವಸ್ತಿ, ಸಿದ್ಧಂಸ್ವಸ್ತಿ, ಶಿವಾಯನಮಃ ಎಂಬ ಮಂಗಳ ಪದಗಳೋ ಆ ಆ ಧರ್ಮಗಳಿಗನುಗುಣವಾಗಿ ಶಿವ, ವಿಷ್ಣು, ಜಿನ ಮೊದಲಾದವರ ಸ್ತುತಿಪದ್ಯಗಳೋ ಇರುತ್ತವೆ. ಶೈವಶಾಸನಗಳ ಆರಂಭದಲ್ಲಿ ಶಿವಸ್ತುತಿಪರ ಹಲವು ಬಗೆಯ ಪದ್ಯಗಳು ಲಭಿಸುತ್ತಿದ್ದರೂ "ನಮಸ್ತುಂಗ ಶಿರಶ್ಚುಂಬಿ..." ಎಂಬ ಹರ್ಷಚರಿತೆಯ ಪದ್ಯದ ಬಳಕೆ ಅಧಿಕ.[೫] ಶಾಸನಪ್ರಪಂಚದಲ್ಲಿ ಇದರಷ್ಟು ಬಳಕೆಗೊಂಡ ಪದ್ಯ ಇನ್ನೊಂದಿಲ್ಲ. ವೈಷ್ಣವಶಾಸನಗಳ ಆರಂಭದಲ್ಲಿ ವಿಷ್ಣುಸ್ತುತಿಪರ ಅನೇಕ ಪದ್ಯಗಳು ಲಭಿಸುತ್ತಿದ್ದರೂ "ಜಯತ್ಯಾವಿಷ್ಕೃತಂ ವಿಷ್ಣೋ..." ಎಂಬ ಪದ್ಯ ಹೆಚ್ಚು ಪ್ರಚುರವಾಗಿದೆ. ಜೈನಶಾಸನಗಳ ಆದಿಯ ಜಿನಸ್ತುತಿರೂಪದ ಹಲವು ಪದ್ಯಗಳಲ್ಲಿ ಅಕಳಂಕನ (ಕ್ರಿ.ಶ. ೭ನೆಯ ಶತಮಾನ) ಪ್ರಮಾಣಸಂಗ್ರಹ ಗ್ರಂಥದ "ಶ್ರೀಮತ್ಪರಮಗಂಭೀರ..." ಎಂಬ ಪದ್ಯ ಬಹಳಸಲ ಕಂಡುಬರುತ್ತದೆ. ಕೆಲವು ಶಾಸನಗಳಲ್ಲಿ ಶಿವ, ಬ್ರಹ್ಮ, ಬುದ್ಧ, ಜಿನರನ್ನು ಅಭೇದವಾಗಿ ಸ್ತುತಿಸಿದ ಉದಾರಭಾವದ ಪದ್ಯಗಳಿಗೂ ಆಗಾಗ

---

೨. ಅತ್ಯಂತ ಪ್ರಾಚೀನ ಕನ್ನಡ ಶಾಸನ-ಎಂ.ಎಚ್. ಕೃಷ್ಣ (ಪ್ರ.ಕ. ೨೦-೩)

೩. Karnatak Darshan P. 40-41.

೪. ಮಳವಳ್ಳಿ (E.C. VII-i sk 263 A.D. 150), ಮಳವಳ್ಳಿ (E.C. VII-i sk 264 A.D. 250), ಮ್ಯಾಕದೋಣಿ (EI.XIV P. 152), ಬನವಾಸಿ (SII XX No.1), ಚಂದ್ರವಳ್ಳಿ (MAR 1929. P. 50), ಹಿರೇಹಡಗಲಿ (EI.XV P. 247), ವಡಗಾಂವ-ಮಾಧವಪುರ, ಬನವಾಸಿ (ಪತ್ರಿಕಾ ವರದಿ), ಹುರಸಗುಂದಿ (ಗುಲ್ಬರ್ಗಾ ಜಿಲ್ಲೆ, ಸಂಯುಕ್ತ ಕರ್ನಾಟಕ ೩೦-೧೧-೭೫), ಬೆಳ್ವಾಡಗಿ, ಹಿರೇಮಗಳೂರು (MAR 1945), ಹಂಪೆ (ಸಂಯುಕ್ತ ಕರ್ನಾಟಕ ೨೨-೨-೭೬), ಗುಲ್ಬರ್ಗಾ ಜಿಲ್ಲೆಯ ಸನ್ನತಿಗ್ರಾಮದಲ್ಲಿಯೂ ಪ್ರಾಕೃತ ಬರಹಗಳು ದೊರೆತಿವೆ. ಇವುಗಳೊಂದಿಗೆ ಗುಲ್ಬರ್ಗಾ ಜಿಲ್ಲೆಯ ಜೇವರಗಿ, ಹಿಪ್ಪರಗಿ, ಅವರಾದ, ಕೊಪ್ಪಳ ಜಿಲ್ಲೆಯ ಚಿಕ್ಕಸಿಂದೋಗಿ; ಧಾರವಾಡ ಜಿಲ್ಲೆಯ ಶಾಸನಗಳಲ್ಲೂ ಪ್ರಾಕೃತ ಶಾಸನಗಳು ದೊರೆತಿವೆ(ಸಂ). ನೋಡಿ : ಕೊಪ್ಪಾ ಎಸ್. ಕೆ. ಪಂಪಪೂರ್ವ ಕರ್ನಾಟಕದ ಶಾಸನಗಳು.

೫. ಈ ಶ್ಲೋಕ ಮೊದಲು ಕಾಣಿಸಿಕೊಳ್ಳುವುದು ೯ನೆಯ ಶತಮಾನದ ಶಾಸನಗಳಲ್ಲಿ (BKI.I-122 A.D. 867)

ಸ್ಥಾನ ಲಭಿಸಿದೆ. ಈ ಸ್ತುತಿಪದ್ಯಗಳ ತರುವಾಯ ರಾಜವಂಶಾವಳಿ, ಶಾಸನಕಾಲ, ಶಾಸನವಿಷಯಗಳು ಬಂದು ಕೊನೆಯಲ್ಲಿ "ಸ್ವದತ್ತಂ ಪರದತ್ತಂ..." ಎಂಬಂತಹ ಫಲಶ್ರುತಿಪದ್ಯಗಳು ಕಂಡುಬರುತ್ತವೆ. ಕೆಲವುಸಲ ರುಜು, ಸಾಕ್ಷಿ, ಕವಿ, ಲಿಪಿಕಾರ, ರೂವಾರಿ ಮೊದಲಾದ ವಿಷಯಗಳು ಉಲ್ಲಖಿತವಾಗಿರುತ್ತವೆ.[೬]

ತಾಮ್ರಶಾಸನಗಳೂ ಇದೇ ಸ್ವರೂಪದವುಗಳಾಗಿದ್ದು, ಒಂದಕ್ಕಿಂತ ಹೆಚ್ಚು ಫಲಕಗಳಿದ್ದರೆ ಅವುಗಳನ್ನು ರಾಜಮುದ್ರೆಯ ಉಂಗುರದಲ್ಲಿ ಪವಣಿಸಿರುತ್ತಾರೆ. ಚೋಳವಂಶದ ಪ್ರಥಮ ರಾಜರಾಜೇಂದ್ರನ ೩೧ ಫಲಕಗಳ ೮ ಮಣ ತೂಕದ ಗ್ರಾಮ ಶಾಸನವೇ ಅತಿ ದೊಡ್ಡದೆಂದು ಈವರೆಗೆ ಭಾವಿಸಲಾಗಿತ್ತು. ಇತ್ತೀಚೆಗೆ ಲಭಿಸಿದ ಕರಂದೈ ತಾಮ್ರಪಟ ಇದಕ್ಕಿಂತಲೂ ದೊಡ್ಡದೆಂದು ತಿಳಿದುಬಂದಿದೆ.

ಸಮಕಾಲೀನ ಸಮಾಜವನ್ನು ಪ್ರತಿನಿಧಿಸುವ ಶಾಸನಗಳ ವಿಷಯ ಜೀವನದಷ್ಟು ವೈವಿಧ್ಯಮಯ. ಅವುಗಳನ್ನು ಧರ್ಮ, ವೀರ ಎಂದು ವಿಭಾಗಿಸಬಹುದು. ವೀರ ಶಾಸನಗಳು ಯುದ್ಧವಿಜಯ, ವೀರಮರಣ, ಲೌಕಿಕ ಬಲಿದಾನಗಳನ್ನೊಳಗೊಂಡರೆ ಧರ್ಮಶಾಸನಗಳು ದೇವಾಲಯ ನಿರ್ಮಾಣ, ಲಿಂಗಪ್ರತಿಷ್ಠಾಪನೆ, ದತ್ತಿ, ನಿಷಧಿ, ಧಾರ್ಮಿಕ ಬಲಿದಾನಗಳನ್ನೊಳಗೊಂಡಿರುತ್ತವೆ.

ಶರಣರ ಚರಿತ್ರ-ಶಾಸನಗಳ ಮಹತ್ವ:

ವ್ಯಕ್ತಿಯ ಬದುಕಿನ ಗುಣವಿಶೇಷ ಚಾರಿತ್ರ್ಯ, ವ್ಯಕ್ತಿಯು ಬದುಕಿದ ವಿವರವಿಶೇಷ ಚರಿತ್ರೆ. ಅಂದರೆ ಅಂತರಂಗಕ್ಕೆ ಸಂಬಂಧಪಟ್ಟ ಚಾರಿತ್ರ್ಯದ ಬಹಿರಂಗ ಆಚರಣೆ ಚರಿತ್ರೆ. ಈ ಚರಿತ್ರೆಯ ಬರವಣಿಗೆಯೆಂದರೆ ಬಹಿರಂಗದ ಮೂಲಕ ಒಬ್ಬ ವ್ಯಕ್ತಿಯ ಅಂತರಂಗವನ್ನು ಚಿತ್ರಿಸುವ ಒಂದು ಶಾಬ್ದಿಕ ಪ್ರಯತ್ನ. ಈ ಪ್ರಯತ್ನಪ್ರಜ್ಞೆಯ ಅಭಾವದಿಂದ ಕೂಡಿದ ಪ್ರಾಚೀನ ಭಾರತೀಯರು 'ಚಾರಿತ್ರಿಕ ಸಾಹಿತ್ಯ' ನಿರ್ಮಾಣಕ್ಕೆ ಹೆಚ್ಚು ಗಮನಕೊಡಲಿಲ್ಲ. ಅದಕ್ಕಾಗಿ ಆ ಸಾಹಿತ್ಯರಚನೆಯ ದೊಡ್ಡ ಹೊಣೆಯನ್ನು ಈ ಕಾಲದ ಸಂಶೋಧಕರು ಹೊರಬೇಕಾಗಿದೆ.

ಚರಿತ್ರೆಗಿಂತ ಚಾರಿತ್ರ್ಯ ದೊಡ್ಡದು. ಹೀಗಾಗಿ ಸಚ್ಚಾರಿತ್ರ್ಯದ ಸಾಕಾರಮೂರ್ತಿ ಎನಿಸಿದ ಶರಣರು ತಮ್ಮ ಚರಿತ್ರೆಯನ್ನು ಬರೆಯಲಿಲ್ಲ, ಬರೆಯಿಸಲಿಲ್ಲ. ಅವರ ಉದಾತ್ತ ಆಚರಣೆ ಲೋಕಕ್ಕೆ ಆದರ್ಶವಾಗಿ ನಿಲ್ಲಲಿ ಎಂಬ ಭಾವನೆಯಿಂದ ಮುಂದಣ ಕವಿಗಳು ಮಾತ್ರ ಶರಣರ ಬದುಕನ್ನು ಬರಹಕ್ಕೆ ಇಳಿಸಿದರು. ಇದರ ಫಲ ವೀರಶೈವ ಚರಿತ್ರೆಗಳು ಮತ್ತು ಪುರಾಣಗಳು.

ಒಬ್ಬ ವ್ಯಕ್ತಿಯ ವಿಷಯದಲ್ಲಿ ಗೌರವ, ಭಕ್ತಿ, ಅಧಿಕವಾದಂತೆ ಅವನ ಆಚರಣೆಯ ಅಣುಗಳೆಲ್ಲ ಅದ್ರಿಯಾಗಿ ಕಾಣುತ್ತವೆ. ಆಗ ಚರಿತ್ರೆ ಪವಾಡದ ಸೋಗು ಹಾಕುತ್ತದೆ. ಇದು ಭಾರತೀಯ ವಿಭೂತಿಪುರುಷರ ಚರಿತ್ರೆಗೆ ಅಂಟಿದ ಒಂದು ದೊಡ್ಡ ದೋಷ. ವೀರಶೈವ ಶರಣರೂ ಇದಕ್ಕೆ ಹೊರತಲ್ಲ. ಶಿವಶರಣರು ಈ ನೆಲದ ಮೇಲೆ ಬದುಕಿದ ನಿರ್ಮಲ ಬದುಕು ಸೂರ್ಯನಷ್ಟು ಸತ್ಯವಿದ್ದರೂ ಬರವಣಿಗೆ ರೂಪದ ಅವರ ಶುದ್ಧಚರಿತ್ರೆಯ ಕೊರತೆಯಿಂದಾಗಿ "No epigraphic mention of Basava and Chennabasava has been obtained, which is really peculiar,

೬. On the authorship of Mangal-verse in inscriptions (New Indian Antiquary. II. P.111)

if they really held the high office that is alloted to them by tradition" ಎಂದು ಡಾ. ಫ್ಲೀಟ್.[೭] "ವೀರಶೈವ ಮತಸ್ಥಾಪಕರೆಂದು ಪ್ರಸಿದ್ಧರಾದ ಬಸವ-ಚನ್ನಬಸವಾದಿಗಳು ಕ್ರಿ.ಶ. ೧೧೫೬-೧೧೬೭ ರಲ್ಲಿ ಆಳುತ್ತಿದ್ದ ಬಿಜ್ಜಳನ ಕಾಲದಲ್ಲಿದ್ದರೆಂದು ಸರ್ವತ್ರ ಪ್ರತೀತಿ ಇದ್ದು..... ಕರ್ನಾಟಕದೇಶದ ಶಾಸನಗಳಲ್ಲಿ ಇದಕ್ಕೆ ಯಾವ ವಿಧವಾದ ಆಧಾರವೂ ದೊರೆಯುವುದಿಲ್ಲ.... ಅವರು ಕ್ರಿ.ಶ. ೧೧೫೬-೧೧೬೭ ರಲ್ಲಿ ಇರಲಿಲ್ಲವೆಂದೂ ಸುಮಾರಾಗಿ ದೃಢವಾಗಿಯೇ ಹೇಳಬಹುದು" ಎಂದು ಡಾ. ವೆಂಕಟಸುಬ್ಬಯ್ಯನವರು[೮] ಶರಣರ ಅಸ್ತಿತ್ವವನ್ನೇ ಪ್ರಶ್ನಿಸಿದರು. ಕೆಲವರು ಶರಣಸಾಹಿತ್ಯ, ಶರಣತತ್ತ್ವಗಳು ೧೫ನೆಯ ಶತಮಾನದ ಸೃಷ್ಟಿಯೆಂದು ಅನುಮಾನಪಟ್ಟರು. ಬಿಜ್ಜಳನ ದುಷ್ಟಮಂತ್ರಿ ಕಸಪಯ್ಯನೇ ಬಸವಣ್ಣನೆಂದು ಶ್ರೀ ಚಿಲಕೂರ ನಾರಾಯಣರಾಯರು.[೯] ಬಸವಣ್ಣನು ನಾಥಪಂಥದ ಅನುಯಾಯಿಯೆಂದು ಶ್ರೀ ಕಪಟ್ರಾಳ ಕೃಷ್ಣರಾಯರು[೧೦] ಊಹಿಸಿದರು. ಸಾಲದುದಕ್ಕೆ ಪ್ರತಿಯೊಬ್ಬ ಶರಣನ ಜನ್ಮಗ್ರಾಮ, ಜನನಮಿತಿ, ತಂದೆ, ತಾಯಿ, ದೀಕ್ಷಾಗುರು, ಜೀವಿತದ ಅವಧಿ, ಐಕ್ಯಸ್ಥಳ ಮೊದಲಾದುವು ಇನ್ನೂ ಪ್ರಶ್ನೆಗಳಾಗಿ ಉಳಿದಿವೆ. ಈ ಪ್ರಶ್ನೆಗಳನ್ನು ಬಿಡಿಸಿ ಶರಣರ ಚರಿತೆಯನ್ನು ರೂಪಿಸುವ ಹೊಣೆ ಸಂಶೋಧಕರ ಹೆಗಲ ಮೇಲೆ ನಿಂತಿದೆ. ಈ ದೃಷ್ಟಿಯಿಂದ ಮುಂದುವರಿದರೆ–

೧. ಶಿವಶರಣರ ವಚನಗಳು

೨. ಐತಿಹ್ಯಗಳು

೩. ಶಿವಕವಿಗಳ ಕಾವ್ಯಗಳು

೪. ಶಾಸನಗಳು

ಎಂಬ ನಾಲ್ಕು ತೆರನಾದ ಆಧಾರಗಳು ಲಭಿಸುತ್ತವೆ. ವಚನಗಳಲ್ಲಿ ಕೆಲವು ಸಲ ಜೀವನಘಟನೆಯ ಅಂಶಗಳು, ಜೀವನಚರಿತ್ರೆಯ ಸೂಕ್ಷ್ಮ ಎಳೆಗಳು ಉಳಿದುನಿಂತಿವೆ. 'ಆರು ಜನ್ಮದವ ಬಸವಣ್ಣನೆಂಬರು ಈಗಾರು ಮಾತು ಕೇಳಲಾಗದು' 'ಆವನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ' 'ಕೂಡಲಸಂಗಮದೇವ ವಿಪ್ರಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದ' 'ಮಂಡಗೆಯ ಮಾದಿರಾಜ ಮಾದಲಾಂಬೆಯರ ಮಗನೆನ್ನಬಹುದೆ ಬಸವೇಶ್ವರನ' 'ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳ ಚೆಲುವೆ' 'ಲಕ್ಷದ ಮೇಲೆ ತೊಂಬತ್ತಾರುಸಾವಿರ ಗೀತಂಗಳ ಹಾಡಿ ಹಾಡಿ' 'ನಿರ್ವಾಹವಾಯಿತ್ತಯ್ಯ ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ'–ಇವು ವಚನಗಳಲ್ಲಿ ಉಳಿದುನಿಂತ ಚರಿತ್ರೆಯ ಅವಶೇಷಗಳು. ಆದರೆ ಇಂಥ ಕೆಲವು ವಚನಗಳು ಪ್ರಕ್ಷಿಪ್ತಗಳೆಂದು, ಕೆಲವು ವಚನಗಳಲ್ಲಿಯ ಚಾರಿತ್ರಿಕ ಅಂಶಗಳು ಅತ್ಯುಕ್ತಿಗಳೆಂದು ವಿದ್ವಾಂಸರು ಊಹಿಸುತ್ತಾರೆ. ಈ ಊಹೆಯಲ್ಲಿ ಕೆಲಮಟ್ಟಿಗೆ ಸತ್ಯವಿದ್ದರೂ ವಚನಗಳಲ್ಲಿಯ ಚಾರಿತ್ರಿಕ ಅಂಶದ ಬಹುಪಾಲು ಸತ್ಯವನ್ನು ಅಲ್ಲಗಳೆಯುವಂತಿಲ್ಲ.

ಶರಣರ ಪ್ರಭಾವ ಈ ನೆಲದ ಮೇಲೆ ಜೀವಂತ ತೊರೆಯಾಗಿ ಹರಿದ ಕಾರಣ, ಅವರ ಚರಿತ್ರೆ ಪ್ರಾಂತಗಳಲ್ಲಿ ಪ್ರವಹಿಸಿ, ಗ್ರಾಮಗಳಲ್ಲಿ ವ್ಯಾಪಿಸಿ, ವ್ಯಕ್ತಿವ್ಯಕ್ತಿಗಳ ಹೃದಯ ಹೊಲವನ್ನು ಹಸಿಗೊಳಿಸಿ

---

೭. Bombay Gazetteer, P. 481.

೮. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಪು. ೨೭೩

೯. ಪ್ರ.ಕ. ೨೧-೪.

೧೦. ಪ್ರ.ಕ. ೨೪-೧.

ಮುನ್ನಡೆಯಿತು. ಹೀಗಾಗಿ ಒಂದೊಂದು ಪ್ರಾಂತ, ಗ್ರಾಮ, ವ್ಯಕ್ತಿಗಳು ತಮತಮಗೆ ತೃಪ್ತಿಯಾಗುವ ರೀತಿಯಲ್ಲಿ ಶರಣರನ್ನು ಕೀರ್ತಿಸಿದರು. ಅವರ ಚರಿತ್ರೆಗೆ ಅನೇಕ ತಿರುವುಗಳನ್ನು ಕಲ್ಪಿಸಿದರು, ಅನೇಕ ಪವಾಡಗಳನ್ನು ಕಟ್ಟಿದರು. ಇದರ ಫಲವಾಗಿ ಶರಣರನ್ನು ಕುರಿತ ಐತಿಹ್ಯಗಳು ಸಾವಿರ ವಿಧದಲ್ಲಿ ಬೆಳೆದುನಿಂತು, ಇವುಗಳಲ್ಲಿಯ ಕೆಲಮಟ್ಟಿನ ಸತ್ಯವೂ ಸಂಶಯಕ್ಕೆ ಎಡೆಮಾಡಿತು.

ಇನ್ನು ವಿಪುಲ ಪ್ರಮಾಣದಲ್ಲಿ ಲಭಿಸುವ ಸಾಹಿತ್ಯಲೋಕವನ್ನು ಪ್ರವೇಶಿಸಿದರೆ ಸಾಮಾನ್ಯವಾಗಿ ಅಲ್ಲಿದ್ದುವು ಮತಮತ್ಸರದಿಂದ ಬರೆದ ದೂಷಣರೂಪದ ಜೈನಕೃತಿಗಳು ಮತ್ತು ಮತಾಭಿಮಾನದಿಂದ ಬರೆದ ಪವಾಡರೂಪದ ವೀರಶೈವ ಕೃತಿಗಳು. ಜೈನಕೃತಿಗಳಾದ ಬಿಜ್ಜಳರಾಯ ಪುರಾಣ, ಬಿಜ್ಜಣಾಂಕ ಚರಿತೆ, ರಾಜಾವಳಿ ಕಥೆಯ ಕರ್ತೃಗಳು ಶೈವನಾದ ಬಿಜ್ಜಳನನ್ನು ಜೈನನೆಂದು ಭ್ರಮಿಸಿ ಅಕಾರಣವಾಗಿ ಶರಣರ ಶುದ್ಧಬದುಕನ್ನು ದೋಷದೃಷ್ಟಿಯಿಂದ ನೋಡಿ, ಅವರ ಚರಿತ್ರೆಯನ್ನು ವಿರೂಪಗೊಳಿಸಿದರು. ಶರಣರ ಚರಿತ್ರೆಯನ್ನು ಬರೆಯುವ ಪ್ರಸಂಗದಲ್ಲಿ ಇವುಗಳನ್ನು ಮುಟ್ಟದಿರುವುದೇ ಲೇಸು.

ವೀರಶೈವ ಕವಿಸಾಹಿತ್ಯದ ಬಹುಪಾಲು ಶರಣರ ಚರಿತ್ರೆಗೆ ಮೀಸಲು. ಅಲ್ಲಿ ಸ್ವತಂತ್ರಕೃತಿ ಇಲ್ಲವೆ ಉಪಕಥೆಯ ರೂಪದಲ್ಲಿ ಶರಣರ ಚರಿತ್ರೆ ಅರಳಿನಿಂತಿದೆ. ಆದರೆ ಮೂಲವಿಗ್ರಹವನ್ನು ಮರೆಗೊಳಿಸುವ ಅಲಂಕಾರದ ಹೊರೆಯಂತೆ ಇಲ್ಲಿ ಶರಣರ ಸುತ್ತ ಪವಾಡಗಳು ಹೆಣೆದುನಿಂತಿವೆ. ಕೆಲವುಸಲ ಒಬ್ಬನ ಪವಾಡ ಮತ್ತು ಘಟನೆಗಳನ್ನು ಇನ್ನೊಬ್ಬನ ತಲೆಗೆ ಕಟ್ಟಲಾಗಿದೆ. ಇನ್ನು ಕೆಲವು ಸಲ ಒಬ್ಬನ ಘಟನೆ ಮತ್ತು ಪವಾಡಗಳು ಕೃತಿಯಿಂದ ಕೃತಿಗೆ ಭಿನ್ನವಾಗಿವೆ. ಹೀಗಾಗಿ ಇತಿಹಾಸದ ಎಳೆಗಳ ಕೊರತೆಯಿಂದ ಕೂಡಿದ ಈ ಚರಿತ್ರೆ ಮತ್ತು ಪುರಾಣಗಳನ್ನು ಎರಡನೆಯ ವರ್ಗದ ಆಧಾರಗಳೆಂದು ಇಟ್ಟುಕೊಳ್ಳಬೇಕಾಗಿದೆ.

ಶಾಸನಗಳ ವಿಷಯ ಹೀಗಲ್ಲ, ಸೀಮಿತವಾದ ಫಲಕದ ಮೇಲೆ ಮುಖ್ಯ ಘಟನೆಗಳನ್ನು ಹೇಳುವುದೇ ಅಸಾಧ್ಯವಾಗಿರುವಾಗ ಅಲ್ಲಿ ಪವಾಡ ಕಡಿಮೆ, ಚರಿತ್ರೆ ಹೆಚ್ಚು. ಹೀಗಾಗಿ ಇತಿಹಾಸ ಬರೆಯುವಲ್ಲಿ ಅವುಗಳಿಗೆ ಪ್ರಥಮವರ್ಗದ ಆಧಾರಗಳೆಂಬ ಬೆಲೆ ಸಲ್ಲುತ್ತದೆ. ಪುರಾಣ ಸಂಗತಿಗಳಿಂದ ಭಿನ್ನವಾದ ರೀತಿಯಲ್ಲಿ ಶುದ್ಧ ಇತಿಹಾಸ ಅಲ್ಲಿ ಸಿಗುವುದೆಂಬುದಕ್ಕೆ ಅರ್ಜುನವಾಡ ಶಾಸನವೊಂದು ಉತ್ತಮ ಉದಾಹರಣೆ.[೧೧]

ಹನ್ನೆರಡನೆಯ ಶತಮಾನದ ತರುವಾಯ ವೀರಶೈವ ಹಲವು ಸಣ್ಣ ದೊಡ್ಡ ಘಟ್ಟಗಳನ್ನು ರೂಪಿಸಿಕೊಂಡು ನಡೆದುಬಂದಿದೆ. ಆ ಆ ಘಟ್ಟಗಳಲ್ಲಿ ಕೆಲವು ಶರಣರು, ವಚನಕಾರರು ಬಾಳಿ ಬೆಳಗಿರುವರು. ಆದರೆ ನೂರೊಂದು ವಿರಕ್ತರು, ಏಳುನೂರೊಂದು ವಿರಕ್ತರನ್ನು ಬಿಟ್ಟರೆ ಮಿಕ್ಕವರೆಲ್ಲ ಹನ್ನೆರಡನೆಯ ಶತಮಾನದವರೆಂಬ ಪರಿಭಾವನೆ ನಮ್ಮಲ್ಲಿ ಬೇರುಬಿಟ್ಟಿದೆ. ಅದಕ್ಕಾಗಿ ಶರಣರನ್ನು ಅವರವರ ನ್ಯಾಯವಾದ ಘಟ್ಟಗಳಲ್ಲಿ ನಿಲ್ಲಿಸಿ ಕಾಲ ನಿರ್ಣಯ ಮಾಡಿ ವೀರಶೈವದ ಗತಿ-ಪ್ರಗತಿಗಳನ್ನು ಸಕ್ರಮವಾಗಿ ಪುನರ್‌ರಚಿಸುವುದು ಅತ್ಯವಶ್ಯವೆನಿಸಿದೆ. ಈ ಕಾರ್ಯದಲ್ಲಿ ಪುರಾಣಗಳಿಗಿಂತ ಕಾಲಸಹಿತ ವ್ಯಕ್ತಿನಿರ್ದೇಶನ ಮಾಡುವ ಶಾಸನಗಳು ಮಹತ್ವದ ಪಾತ್ರ ವಹಿಸುತ್ತವೆ. ಕವಿಚರಿತೆ ಹೇಳುವಂತೆ ಕೊಂಡಗುಳಿ ಕೇಶಿರಾಜನ ಕಾಲ ಕ್ರಿ.ಶ. ೧೧೬೦ ಅಲ್ಲ, ಇತ್ತೀಚೆ ಲಭಿಸಿದ ಕೊಂಡಗುಳಿ ಶಾಸನದ ಪ್ರಕಾರ ೧೧೦೭ ಎಂಬುದನ್ನು ಇಲ್ಲಿ ನೆನೆಯಬೇಕು.[೧೨]

---

೧೧. ಬಸವಣ್ಣನವರನ್ನು ಕುರಿತ ಶಾಸನಗಳು. ಪು. ೪೧

೧೨. ಪ್ರ.ಕ. ೪೭-೩.

ಎಂಟುನೂರು ವರ್ಷಗಳಿಂದ ಅಳಿದುಳಿದು ಬಂದ ಶರಣರ ಹೆಸರು ಮತ್ತು ಮುದ್ರಿಕೆಗಳಿಗೆ ಭಿನ್ನಪಾಠಗಳು ಹುಟ್ಟಿಕೊಂಡಿವೆ. "ನಾವು ಹಿಂದೆ ಕೊಟ್ಟಿರುವ ವಚನಕಾರರ ಅಂಕಿತನಾಮಗಳಿಗೂ 'ವಚನಶಾಸ್ತ್ರಸಾರ'ದಲ್ಲಿ ಕೊಟ್ಟಿರುವ ಅಂಕಿತ ನಾಮಗಳಿಗೂ ಕೆಲವು ಕಡೆ ವ್ಯತ್ಯಾಸವು ಕಂಡುಬರುತ್ತದೆ. ಈ ಪುಸ್ತಕದಲ್ಲಿ ಅರ್ಕೇಶ್ವರಲಿಂಗ, ಅಖಂಡೇಶ್ವರ, ಅಜಗಣ್ಣ, ಅಮರಗುಂಡದ ಮಲ್ಲಿಕಾರ್ಜುನ, ಅಮುಗೇಶ್ವರಲಿಂಗ, ಕಲಿದೇವರದೇವ, ರಾಮನಾಥ, ಚಿಮ್ಮಲಿಗೆಯ ಚೆನ್ನರಾಮ ಎಂಬ ಅಂಕಿತಗಳು ಕ್ರಮವಾಗಿ ಮಧುವಯ್ಯ, ಷಣ್ಮುಖಸ್ವಾಮಿ, ಮುಕ್ತಾಯಕ್ಕ, ಪುರದ ನಾಗಣ್ಣ, ರಾಯಸದ ಮಂಚಣ್ಣನ ಹೆಂಡತಿ ರಾಯಮ್ಮ, ಮಡಿವಳಮಾಚಯ್ಯ, ದೇವರದಾಸಿಮಯ್ಯ, ಚಂದಿಮರಸ ಇವರಿಗೆ ಅನ್ವಯಿಸುತ್ತವೆಂದು ಹೇಳಿದೆ. ನಮ್ಮ ಪುಸ್ತಕದಲ್ಲಾದರೋ ಈ ಅಂಕಿತಗಳು ಕ್ರಮವಾಗಿ ಮಡಿವಳಮಾಚಯ್ಯ, ನಿರಾಲಂಬಶರಣ, ಅಜಗಣ್ಣ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಅಮುಗಿದೇವಯ್ಯ, ಕಲಿದೇವಯ್ಯ, ಜೇಡರದಾಸಿಮಯ್ಯ, ಸಿಮ್ಮಲಿಗೆಯ ಚೆನ್ನಯ್ಯ ಇವರಿಗೆ ಸೇರಿವೆ. ನಾವು ಬರೆದುದಕ್ಕೆ ಆವುದೋ ಆಧಾರವಿದ್ದಿರಬೇಕು,"[೧೩] ಎಂಬ ಕವಿಚರಿತೆಕಾರರ ಮಾತು ಶರಣರ ಹೆಸರು ಮತ್ತು ಅವರ ಮುದ್ರಿಕೆಗಳ ಸಮಸ್ಯೆಯನ್ನು ಕಣ್ಣಿಗೆ ಹಿಡಿಯುತ್ತದೆ. ಇದಲ್ಲದೆ ಕೆಲವು ಮುದ್ರಿಕೆಗಳಿಗೆ ಕೆಳಗಿನಂತೆ ಭಿನ್ನಪಾಠಗಳು ಗೋಚರಿಸುತ್ತವೆ.

ಅಮರೇಶ್ವರಲಿಂಗ – ಅಮಲೇಶ್ವರಲಿಂಗ (ಆಯ್ದಕ್ಕಿ ಮಾರಯ್ಯ)[೧೪]

ಅಲೇಖನಾಥ – ಅಲೇಖನಾದ (ವಚನಭಾಂಡಾರಿ ಶಾಂತರಸ)[೧೫]

ಆಗಮೇಶ್ವರಲಿಂಗ–ಅಗಮ್ಮೇಶ್ವರಲಿಂಗ–ಅಘರ್ಮೇಶ್ವರಲಿಂಗ (ಮನುಮುನಿ ಗೊಮ್ಮಟಯ್ಯ)[೧೬]

ಐಘಟದೂರ ರಾಮೇಶ್ವರಲಿಂಗ – ವಿಘಟದೂರ ರಾಮೇಶ್ವರಲಿಂಗ (ಮೆರೆಮಿಂಡದೇವ)[೧೭]

ಗುರುಪುರದ ಮಲ್ಲಯ್ಯ – ಗುರುಕುಲದ ಮಲ್ಲಯ್ಯ (ಮಲ್ಲಯ್ಯ)[೧೮]

ಗುಹೇಶ್ವರ – ಗೊಹೇಶ್ವರ – ಗೋಹೇಶ್ವರ – ಗೊಗೇಶ್ವರ – ಗೊಗ್ಗೇಶ್ವರ (ಪ್ರಭುದೇವ)[೧೯]

ಚಂಡೇಶ್ವರಲಿಂಗ – ಚಂದೇಶ್ವರಲಿಂಗ (ನುಲಿಯ ಚಂದಯ್ಯ)[೨೦]

ಜಾಂಬೇಶ್ವರ – ಭೌಂಬೇಶ್ವರ (ರಾಯಸದ ಮಂಚಣ್ಣ)[೨೧]

ಧಾರೇಶ್ವರ – ಭಾರೇಶ್ವರ (ಕಾಮಾಟದ ಭೀಮಣ್ಣ)[೨೨]

ಈ ಮುದ್ರಿಕೆಗಳು ಶರಣರ ಆರಾಧ್ಯದೇವತೆಯ ಹೆಸರಾಗಿರುವುದರಿಂದ, ಆ ಆ ದೇವತೆಗಳಿಗೆ ದಾನಬಿಟ್ಟ, ದೇಗುಲ ಕಟ್ಟಿದ ಸಂದರ್ಭದಲ್ಲಿ ಹುಟ್ಟಿದ ಶಾಸನಗಳು ಮಾತ್ರ ಇಂಥ ಪಾಠಸಂದೇಹವನ್ನು ಪರಿಹರಿಸಬಲ್ಲವು. ಚಿಕ್ಕಯ್ಯನ ಮುದ್ರಿಕೆ 'ಉಳಿಯುಮೇಶ್ವರ'ವಲ್ಲ 'ಹುಳಿಯಮೇಶ್ವರ'ವೆಂದು ದೇವರಗುಡಿ ಶಾಸನದಿಂದ ಇತ್ತೀಚೆಗೆ ತಿಳಿದುಬಂದುದನ್ನು ಇಲ್ಲಿ ಸ್ಮರಿಸಬೇಕು.[೨೩]

---

೧೩. ಕ.ಕ.ಚ. I ಪು. ೨೧೮ (೧೯೬೧).
೧೪. ಶಿ.ಗೀ. ೩೪ ೧೫. ಶಿ.ಗೀ. ೩೦೬ ೧೬. ಶಿ.ಗೀ. ೩೦೬-೩೦೭
೧೭. ಶಿ.ಗೀ. ೩೪೫ ೧೮. ಶಿ.ಗೀ. ೩೧೫ ೧೯. ಶಿ.ಗೀ. ೩೧೫
೨೦. ಶಿ.ಗೀ. ೩೧೭ ೨೧. ಶಿ.ಗೀ. ೩೩೪ ೨೨. ಶಿ.ಗೀ. ೩೨೨
೨೩. ಕ.ಭಾ. ೧-೨

ಲಿಪಿಕಾರರ ಅನವಧಾನತೆ ಕಾರಣವಾಗಿ ಶರಣರ ಅಂಕಿತನಾಮಗಳಲ್ಲಿ ಕೆಲವು ಭಿನ್ನಪಾಠಗಳು ಉದ್ಭವಿಸಿವೆ. ಮೈದುನರಾಮಯ್ಯ-ಮೈಥುನರಾಮಯ್ಯ[೨೪], ವರದ ಸಂಗಣ್ಣ-ವರದ ಶಂಕರ(ರ)ಣ್ಣ - ವರದ ಸಂಕಣ್ಣ[೨೫], ಬೊಕ್ಕಸದ ಚಿಕ್ಕಣ್ಣ-ಬೊಕ್ಕಸದ ಸಂಗಣ್ಣ[೨೬], ಅನಾಮಿಕ ನಾಚಯ್ಯ-ಅನಾಮಿಕ ನಾಗಯ್ಯ[೨೭], ಕದಿರ ರೆಬ್ಬವ್ವೆ – ಕದಿರ ರೆಮ್ಮವ್ವೆ [೨೮], ಅವಸರದ ರೇಕಣ್ಣ – ಅವಸರದ ರೇಚಣ್ಣ[೨೯], ದಾಸೋಹದ ಸಂಕಣ್ಣ – ದಾಸೋಹದ ಸಂಗಣ್ಣ[೩೦]. ಇತ್ಯಾದಿ ಹೆಸರುಗಳ ಮೂಲಪಾಠವನ್ನು ನಿರ್ಣಯಿಸುವುದು ಹಸ್ತಪ್ರತಿಗಳಿಂದ ಅಸಾಧ್ಯ. ಆದರೆ ಪ್ರಾಚೀನತಮವಾಗಿರುವ ಮತ್ತು ಅಚಲಪಾಠಗಳನ್ನು ಹೊತ್ತು ನಿಂತಿರುವ ಶಾಸನಗಳಿಂದ ಮಾತ್ರ ಇಂತಹ ಸಂದೇಹ ನಿವಾರಣೆಯಾಗಿ ಶರಣರ ನಿಜನಾಮವನ್ನು ಅರಿಯಬಹುದಾಗಿದೆ.

ಹೀಗೆ ಶರಣರ ಚರಿತ್ರೆಯನ್ನು, ವೀರಶೈವದ ಇತಿಹಾಸವನ್ನು ಅರಿಯುವಲ್ಲಿ ಶಾಸನಗಳು ವಿಶ್ವಸನೀಯ ಆಧಾರಗಳನ್ನೊದಗಿಸುತ್ತವೆ. ಅದಕ್ಕಾಗಿ 'ಶಾಸನಗಳಲ್ಲಿ ಶಿವಶರಣರು' ಎಂಬ ಅಭ್ಯಾಸ ಮಹತ್ವಪೂರ್ಣವಾದುದು. ಆದರೆ ಅವರನ್ನು ಕುರಿತ ಶಾಸನಗಳು ತೀರ ಕಡಿಮೆ. ಈ ವಿರಳ ಶಾಸನಗಳಲ್ಲಿಯಾದರೂ ಅವರು ಕಂಡುಬರುವುದು ಆನುಷಂಗಿಕವಾಗಿ ಇಲ್ಲವೆ ನಾಮಮಾತ್ರವಾಗಿ. ಇದಕ್ಕೆ ಕಾರಣ, ಶರಣಧರ್ಮ ಮತ್ತು ಶರಣರ ಮನೋಧರ್ಮವೆಂದು ಕೆಳಗಣ 'ಶರಣರ ದೃಷ್ಟಿ-ಶಾಸನ ಸೃಷ್ಟಿ' ಎಂಬ ವಿಭಾಗದಲ್ಲಿ ಮನಗಾಣಬಹುದು.

ಶರಣರ ದೃಷ್ಟಿ-ಶಾಸನ ಸೃಷ್ಟಿ:

ಮಾನವಕಲ್ಯಾಣ ದೃಷ್ಟಿಯಿಂದ ಆವಿರ್ಭವಿಸಿದ ಜಾಗತಿಕ ಆಂದೋಲನಗಳ ಸಾಲಿನಲ್ಲಿ ನಿಲ್ಲುವ ಶಿವಶರಣರ 'ವೀರಶೈವ ಆಂದೋಲನೆ'ಯ ಕಾಲ ಕ್ರಿ.ಶ. ೧೨ನೆಯ ಶತಮಾನ. ಈ ವೀರಶೈವ ಶೈವದ ಕೂಸು. ಆದರೆ ಇದು ಪ್ರಾಚೀನ ಭಾರತದ ಯಾವ ಶೈವದಿಂದ? ಎಂದು? ಹೇಗೆ? ಕವಲೊಡೆದು ವಿಕಾಸಗೊಂಡಿತು ಎಂಬ ಪ್ರಶ್ನೆ ಇನ್ನೂ ಬಗೆಹರಿದಿಲ್ಲ. ಈ ವಿಷಯವಾಗಿ ಪಂಡಿತರನೇಕರು ಅವಲಂಬಿಸುವ ನಾಲ್ಕಾರು ಬಗೆಯ ಆಧಾರಗಳಲ್ಲಿ 'ಗಣಸಹಸ್ರನಾಮಾವಳಿ'ಯೂ ಒಂದು. ಶಿವೋಪಾಸಕರನ್ನು ಎಂಟು ವರ್ಗಗಳಲ್ಲಿ ವಿಭಾಗಿಸುವ ಈ ಗ್ರಂಥ ಶೈವವು ವೀರಶೈವವಾಗಿ ಬೆಳೆದುಬಂದ ಕಾಲಕ್ರಮವನ್ನು ತಿಳಿಸಿಕೊಡುತ್ತದೆ ಎಂದು ಅವರ ಅಭಿಪ್ರಾಯ.

ಈ ವರ್ಗೀಕರಣದ ಪ್ರಾರಂಭದಲ್ಲಿ ಬರುವ (೧) ಪ್ರಮಥಗಣ (೨) ರುದ್ರಗಣಗಳು ಕೈಲಾಸದ ಶಿವಗಣಂಗಳು. ಅಮರ್ತ್ಯರಾದ ಇವರ ವಿವೇಚನೆಗೆ ಇತಿಹಾಸದಲ್ಲಿ ಸ್ಥಾನವಿಲ್ಲ.

ತರುವಾಯದ ವರ್ಗ (೩) ಯೋಗಾಚಾರ್ಯರು. ಈ ಯೋಗಾಚಾರ್ಯರೆಂದರೆ ನಕುಲೀಶ ಪಾಶುಪತರು. ಕ್ರಿಸ್ತಶಕದ ಆದಿಯಲ್ಲಿ ಗುಜರಾಥದ ಕಾಯಾವರೋಹಣದಲ್ಲಿ ಅವತಾರವೆತ್ತಿದ ನಕುಲೀಶನಿಂದ ರೂಪಗೊಂಡ ಈ ನಕುಲೀಶಪಾಶುಪತವು ಬಹುಕಾಲದ ಹಿಂದೆ ಕರ್ನಾಟಕವನ್ನು ಪ್ರವೇಶಿಸಿದೆ. ದೇವಾಲಯನಿರ್ಮಾಣ, ಲಿಂಗಪ್ರತಿಷ್ಠಾಪನೆಗಳು ಈ ನಕುಲೀಶಪಾಶುಪತ ಮತ್ತು

---

೨೪. ಶಿ.ಗೀ. ೩೧೮　೨೫. ಶಿ.ಗೀ. ೩೬೮　೨೬. ಶಿ.ಗೀ. ೩೬೩
೨೭. ಶಿ.ಗೀ. ೩೧೮　೨೮. ಶಿ.ಗೀ. ೩೬೭　೨೯. ಶಿ.ಗೀ. ೩೬೭
೩೦. ಶಿ.ಗೀ. ೩೬೮

ಇದರೊಂದಿಗೆ ಬೆಳೆದುಬಂದ ಕಾಳಾಮುಖ, ಕಾಪಾಲಿಕ, ಕೌಲ, ಮಹಾವ್ರತಿ ಧರ್ಮಗಳ ಪರಮಕರ್ತವ್ಯಗಳು. ಈ ಕರ್ತವ್ಯವನ್ನು ನಿರ್ವಹಿಸಲು ಅವರಿಗೆ ಅರಸರ ಮತ್ತು ಶ್ರೀಮಂತರ ನೆರವು ಅನಿವಾರ್ಯವಾಯಿತು. ಆಗ ದಾತೃ ಭೋಕ್ತೃ ಇಬ್ಬರೂ ಕೂಡಿ ಶಾಸನ ಬರೆಯಿಸಿದುದರ ಫಲವಾಗಿ ಈ ಶೈವರ ಹೆಸರಿನಲ್ಲಿ ಸಾವಿರಾರು ಶಾಸನಗಳು ಸೃಷ್ಟಿಗೊಂಡವು.

ಈ ಯೋಗಾಚಾರ್ಯರ ಮುಂದಿನ ವರ್ಗ (೪) ತ್ರಿಷಷ್ಟಿಪುರಾತನರು. ಇವರು ಬಾಳಿದುದು ತಮಿಳುನಾಡಿನಲ್ಲಿ. ಇವರಲ್ಲಿ ಸಮಾವೇಶಗೊಳ್ಳುವ ಚೋಳ, ಚೇರ ಇತ್ಯಾದಿ ಸಾಮ್ರಾಟರು ರಾಜಧರ್ಮಕ್ಕನುಗುಣವಾಗಿ ಶಾಸನ ಬರೆಯಿಸಿದರು. ತಮ್ಮ ಸಂಪರ್ಕಕ್ಕೆ ಬಂದ ಮಿಕ್ಕ ಪುರಾತನರನ್ನೂ ಕುರಿತು ಶಾಸನ ಬರೆಯಿಸಿದರು. ಹೀಗಾಗಿ ಅರುವತ್ತುಮೂವರಿಗೆ ಸಂಬಂಧಿಸಿದ ಅನೇಕ ಶಾಸನಗಳು ಆ ನಾಡಿನಲ್ಲಿ ಹುಟ್ಟಿದವು. ಇವರೊಂದಿಗೆ ರಾಜಕೀಯ ಸಂಬಂಧವನ್ನಿಟ್ಟುಕೊಂಡ, ಇವರ ಅಚಲಭಕ್ತಿಯ ಅಖಂಡ ಪ್ರಭಾವಕ್ಕೆ ಒಳಗಾದ ಕರ್ನಾಟಕದಲ್ಲಿಯೂ ಈ ಅರವತ್ತುಮೂವರ ಬಗೆಗೆ ಕೆಲವು ಶಾಸನಗಳು ಜನ್ಮತಾಳಿದವು.

ಸಮಸಮವಾಗಿ ಬಾಳಿದ ಈ ಯೋಗಾಚಾರ್ಯ ಮತ್ತು ತ್ರಿಷಷ್ಠಿಪುರಾತನ ಎಂಬ ಶೈವಮತಗಳ ಮುಂದಣ ದೊಡ್ಡ ಹೆಜ್ಜೆ ವೀರಶೈವ. ಮೇಲೆ ಹೇಳಿದ ಶೈವಗಳು ವೀರಶೈವವಾಗುವಲ್ಲಿ ಮಧ್ಯ ಸಮ್ಮಿಶ್ರಣರೂಪದ ಶೈವಧರ್ಮವೊಂದು ರೂಹುಗೊಂಡಿರುವುದು ಸಹಜ. ಈ ಮಧ್ಯ ಅವಧಿಯಲ್ಲಿ ಗಣಸಹಸ್ರನಾಮಾವಳಿಯ ಮುಂದಣ ವರ್ಗಗಳಾದ (೫) ಷೋಡಶರು (೬) ತೇರಸರು (೭) ದಶಗಣರು ಅಲ್ಲದೆ ಕೊಂಡಗುಳಿ ಕೇಶಿರಾಜ, ರೇವಣಸಿದ್ಧ, ಜೇಡರ ದಾಸಿಮಯ್ಯ ಮೊದಲಾದ ಮಹಿಮರು ಸಮಾವೇಶಗೊಳ್ಳುತ್ತಾರೆ. ಇವರ ಬದುಕಿನಲ್ಲಿ ಒಂದುಕಡೆ ನಕುಲೀಶ ಪಾಶುಪತಾದಿ ಶೈವರ ಸ್ಥಾವಲಿಂಗಪೂಜೆ, ಅರುವತ್ತುಮೂವರ ಅಚಲಭಕ್ತಿ; ಇನ್ನೊಂದು ಕಡೆ ವೀರಶೈವರ ಇಷ್ಟಲಿಂಗೋಪಾಸನೆ, ಷಟ್ಸ್ಥಲಾಚರಣೆ, ವಚನರಚನೆ-ಇವುಗಳ ಸಮ್ಮಿಶ್ರಣ ಕಂಡುಬರುವುದರಿಂದ, ಇವರನ್ನು ಸಂಕ್ರಮಣಕಾಲದ ವೀರಶೈವರೆಂದು ಕರೆಯಬಹುದು. ತ್ರಿಷಷ್ಟಿಪುರಾತನರ ಉಗ್ರಭಕ್ತಿಯನ್ನು ಸಮಉಗ್ರಕ್ಕೆ ಇಳಿಸಿಕೊಂಡ ಇವರು ಸ್ಥಾವರಲಿಂಗದ ಜೊತೆಗೆ ಇಷ್ಟಲಿಂಗವನ್ನೂ ಮನ್ನಿಸಿದ ಕಾರಣ, ಈ ಕಾಲದಲ್ಲಿ ಲಿಂಗಪ್ರತಿಷ್ಠಾಪನೆ ಮತ್ತು ದೇವಾಲಯನಿರ್ಮಾಣಕಾರ್ಯ ಅರ್ಧದಷ್ಟು ಕಡಿಮೆಯಾಯಿತು. ಇದರಿಂದಾಗಿ ಈ ಸಂಕ್ರಮಣಸಮಯದ (ವೀರ)ಶೈವರನ್ನು ಕುರಿತ ಶಾಸನಗಳ ಸಂಖ್ಯೆಯೂ ಅರ್ಧದಷ್ಟು ಕಡಿಮೆಯಾಯಿತು.

ಗಣಸಹಸ್ರನಾಮಾವಳಿಯ ಪ್ರಕಾರ ಮುಂದಣ ವರ್ಗ(೮) ಬಸವಾದಿ ಪ್ರಮಥರು. ಇವರು ಸಂಕ್ರಮಣಕಾಲದ ವೀರಶೈವರ ಸಮಉಗ್ರಭಕ್ತಿಯನ್ನು ಸೌಮ್ಯಗೊಳಿಸಿ, ಇಷ್ಟಲಿಂಗೋಪಾಸನೆ ಷಟ್ಸ್ಥಲಾಚರಣೆಗಳನ್ನು ತೀವ್ರಗೊಳಿಸಿ

> ಕಲ್ಲಮನೆಯನೆ ಮಾಡಿ ಕಲ್ಲದೇವರ ಮಾಡಿ
> ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೋ?
> ಲಿಂಗಪ್ರತಿಷ್ಠೆ ಮಾಡಿದವರಿಗೆ ನಾಯಕನರಕ[೩೧]

ಎಂದು ನಂಬಿ, ಉಳಿದರ್ಧ ಸ್ಥಾವರಲಿಂಗಪೂಜೆಯನ್ನು ಸಂಪೂರ್ಣ ತ್ಯಜಿಸಿದರು.

---

೩೧. ಗೂಳೂರ ಶೂ.ಸಂ.ಪು. ೪೧.

ಉಳ್ಳವರು ಶಿವಾಲಯ ಮಾಡುವರಯ್ಯ
ನಾನೇನ ಮಾಡುವೆನಯ್ಯ ಬಡವನಯ್ಯ
ಎನ್ನ ಕಾಲೇ ಕಂಬ, ದೇಹವೆ ದೇಗುಲ, ಶಿರ ಹೊನ್ನ ಕಳಸವಯ್ಯ[೩೨]

ಎಂದು ನಂಬಿ, ದೇವಾಲಯ ನಿರ್ಮಾಣಕಾರ್ಯವನ್ನು ಬಿಟ್ಟುಕೊಟ್ಟರು. ಹೀಗಾಗಿ ಈ ಎರಡು ಸಂದರ್ಭಗಳಲ್ಲಿ ಹುಟ್ಟಬೇಕಾದ ಧಾರ್ಮಿಕ ಶಾಸನಗಳ ಬರವಣಿಗೆ ವೀರಶೈವರ ಮಟ್ಟಿಗೆ ನಿಂತೇ ಹೋಯಿತು.

ಇನ್ನು 'ಸಜ್ಜನ ಸದ್ಭಾವಿ ಅನ್ಯರ ಕೈಯಾಂತು ಬೇಡ, ಲಿಂಗವ ಮುಟ್ಟಿದ ಕೈ ಮೀಸಲು' ಎಂಬ ತತ್ವಕ್ಕೆ ಬದ್ಧರಾಗಿ, ಅವರು ಯಾರಿಂದಲೂ ದಾನ ಪಡೆಯಲಿಲ್ಲ. 'ಮಾಡಿದೆನೆಂಬುದು ಮನದಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ' ಎಂಬ ಆದರ್ಶವನ್ನು ನೆಮ್ಮಿ ನೀಡಿದ ದಾನವನ್ನು ನೆನೆಯಲಿಲ್ಲ. ಹೀಗಾಗಿ ವೀರಶೈವ ಶರಣರ ಹೆಸರಿನಲ್ಲಿ ದಾನಶಾಸನಗಳೂ ಹುಟ್ಟಲಿಲ್ಲ.

ಒಟ್ಟಿನಲ್ಲಿ ಸ್ಥಾವರಲಿಂಗ ಪ್ರತಿಷ್ಠಾಪನೆ – ದೇವಾಲಯ ನಿರ್ಮಾಣಗಳಲ್ಲಿ ಅಲಕ್ಷ್ಯ, ಪರೋಪಕಾರದಲ್ಲಿ ನಿರಪೇಕ್ಷೆ, ಪರಾವಲಂಬನದಲ್ಲಿ ಉಪೇಕ್ಷೆ ಎಂಬ ವೀರಶೈವ ತತ್ವಗಳು ಬೆಳೆಬೆಳೆದಂತೆ ಶಾಸನ ಬರೆವಣಿಗೆ ತಾನಾಗಿಯೇ ಇಳಿದುಹೋಯಿತು.

ಹತ್ತು ಮತ್ತರ ಭೂಮಿ ಬತ್ತದ ಹಯನು
ನಂದಾದೀವಿಗೆಯ ನಡೆಸಿಹೆವೆಂಬರ
ಮುಖವ ನೋಡಲಾಗದು, ನುಡಿಯ ಕೇಳಲಾಗದು[೩೩]

ಇಲ್ಲಿಯ ಒಂದೊಂದು ಪಾರಿಭಾಷಿಕಗಳನ್ನು ನೋಡಿದರೆ, ಇದು ಶಾಸನ ಬರೆಯಿಸುವವರನ್ನು ನಿಂದಿಸಿ ನುಡಿದ ವಚನವೆನಿಸುತ್ತದೆ. ಈ ಎಲ್ಲ ತತ್ವಗಳ ತಳಗಟ್ಟಿನ ಮೇಲೆ ನಿಂತ ಕಾರಣ ಶರಣರು ಶಾಸನಗಳನ್ನು ಬರೆಸಲಿಲ್ಲ. ಆದರೆ ಸ್ಥಾವರ ಮತ್ತು ಇಷ್ಟಗಳನ್ನು ಮನ್ನಿಸಿದ ಸಂಕ್ರಮಣಯುಗದ ಕೆಲವು ಶರಣರು ಬರೆಯಿಸಿದ, ಇವರನ್ನೂ ಬಸವಾದಿ ಪ್ರಮಥರನ್ನೂ ಕುರಿತು ಮುಂದಿನ ವೀರಶೈವರು ಬರೆಯಿಸಿದ ಶಾಸನಗಳು ಲಭಿಸಿ 'ಶಾಸನಪ್ರಮಾಣ'ವನ್ನು ನಂಬುವವರಿಗೆ ಈಗ ಶರಣರ ಅಸ್ತಿತ್ವದ ಬಗೆಗೆ ಸತ್ಯಭಾವನೆ ಮೂಡಿದೆ.

ಈ ಶರಣಸಂತಾನಕ್ಕೆ ಹಲವು ನೂರು ವರ್ಷಗಳ ಇತಿಹಾಸವಿದೆ. ಅಂದರೆ ತಮ್ಮ ಹಿಂದೆ ಇದ್ದ ಜೇಡರದಾಸಿಮಯ್ಯಾದಿಗಳ ವೀರಶೈವವನ್ನು ಪರಿಷ್ಕರಿಸಿ, ೧೨ನೆಯ ಶತಮಾನದಲ್ಲಿ ಅದಕ್ಕೆ ಶಾಶ್ವತಮುದ್ರೆಯನ್ನು ಮೊದಲು ಹಾಕಿದವರು ಬಸವಾದಿ ಪ್ರಮಥರು. ತರುವಾಯ ೧೫ನೆಯ ಶತಮಾನದ ನೂರೊಂದು ವಿರಕ್ತರಿಂದ, ೧೬ನೆಯ ಶತಮಾನದ ಏಳುನೂರೊಂದು ವಿರಕ್ತರಿಂದ ಪೋಷಣೆಗೊಳ್ಳುತ್ತ ಅದು ಇಂದಿನ ವರೆಗೆ ಉತ್ತರೋತ್ತರ ನಡೆದು ಬಂದಿದೆ. ಇಷ್ಟು ವ್ಯಾಪಕವಾದ ಕಾಲಾವಧಿಯನ್ನು ಅಭ್ಯಾಸದ ಅನುಕೂಲ ದೃಷ್ಟಿಯಿಂದ

---

೩೨. ಬ.ವ. ೮೪೨ (ಶ್ರೀ ಬಸವನಾಳ).

೩೩. ಬ.ವ. ೨೨೫ (ಶ್ರೀ ಬಸವನಾಳ).

೧. ಬಸವಪೂರ್ವಯುಗ

೨. ಬಸವಯುಗ

೩. ಬಸವೋತ್ತರಯುಗ

ಎಂದು ವಿಭಾಗಿಸಿ, ಆ ಆ ಯುಗದ ಶರಣರನ್ನು ವೀರಶೈವ ಕೃತಿಗಳ ಬಲದಿಂದ ಗುರುತಿಸಿ, ಅವರ ಶಾಸನಗಳನ್ನು ಇಲ್ಲಿ ಅಭ್ಯಸಿಸಬಹುದಾಗಿದೆ. ವೀರಶೈವರಲ್ಲಿ ಒಂದೇ ಹೆಸರಿನ ನಾಲ್ಕಾರು ಜನ ಶರಣರೂ ವೀರಶೈವ ಕೃತಿಗಳಲ್ಲಿ ಹಲವಾರು ಶರಣರ ಹೆಸರಿನೊಂದಿಗೆ ಒಂದೇ ವಿಧದ ಪವಾಡಗಳೂ ಕಂಡುಬರುವುದರಿಂದ, ಅಂಥ ಪ್ರಸಂಗಗಳಲ್ಲಿ ಊಹೆಗೆ ಅವಕಾಶ ಕೊಡಬೇಕಾಗುತ್ತದೆ, ಕೊಡಲಾಗಿದೆ.

❖❖

ಬಸವಪೂರ್ವಯುಗ

ಶೈವ ಸೈವೆಜಿಗಾದ, ಪಾಶುಪತ ಪಥವನಱಿಯ,
ಕಾಳಾಮುಖ ಕಂಗೆಟ್ಟ, ಮಹಾವ್ರತಿ ಮದವೇರಿದ,
ಸನ್ಯಾಸಿ ಪಾಷಂಡಿಯಾದ, ಜೋಗಿ ಮರುಳಾಗಿ ತಿರುಗಿದ,
ಈ ಆಱು ಭಕ್ತಿಪಥಕ್ಕೆ ಸಲ್ಲವು[೧]

ಚೆನ್ನಬಸವಣ್ಣನವರ ಈ ವಚನದ ಪ್ರಕಾರ, ಪಾಶುಪತ ಮೊದಲಾದವು ಭಕ್ತಿಸ್ಥಲಕ್ಕೆ ಸಲ್ಲದ ಶೈವಮತಗಳು. ಶರಣರ ಗೌರವವನ್ನು ಗಳಿಸಿಕೊಳ್ಳದ ಈ ಶಿವೋಪಾಸಕರನ್ನು ಬಿಟ್ಟು, ಬಸವಾದಿ ಪ್ರಮಥರನ್ನೂ ನೂರೊಂದು ವಿರಕ್ತರನ್ನೂ ಏಳುನೂರೊಂದು ವಿರಕ್ತರನ್ನೂ ಮತ್ತು ಇವರ ಗೌರವಕ್ಕೆ ಪಾತ್ರರಾದ ಶಿವಭಕ್ತರನ್ನೂ ಇಲ್ಲಿ ಶರಣರೆಂದು ಭಾವಿಸಲಾಗಿದೆ. ನಮ್ಮ ಈ ಗ್ರಹಿಕೆಗೆ ಹೊರಗಾಗುವ ಪಾಶುಪತ ಮೊದಲಾದವರ ಶಾಸನಗಳನ್ನು ಬಿಟ್ಟು ಮುಂದುವರಿಯಬೇಕಾದ ನಾವು, ಪ್ರಥಮದಲ್ಲಿ ತ್ರಿಷಷ್ಟಿ ಪುರಾತನರನ್ನು ಕುರಿತ ಶಾಸನಗಳನ್ನು ವಿವೇಚಿಸಬಹುದು.

ತ್ರಿಷಷ್ಟಿ ಪುರಾತನರು:

ತಮಿಳುನಾಡಿನಲ್ಲಿ ಶೈವಧರ್ಮವನ್ನು ಉದ್ದೀಪನಗೊಳಿಸಿದ, ಕರ್ನಾಟಕದ ಶರಣರಿಗೆ ಪೂಜ್ಯರಾದ, ಅರುವತ್ತುಮೂವರ ಹಲವು ವಿಗ್ರಹಗಳು ಮತ್ತು ಶಾಸನಗಳು ನಮ್ಮ ನಾಡಿನಲ್ಲಿ ಕಂಡುಬರುತ್ತವೆ.

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿರುವ ಪುರಾತನರ ವಿಗ್ರಹಗಳ ಅಡಿಯಲ್ಲಿ ಕೆಳಗಿನ ಹೆಸರುಗಳನ್ನು ಕೊರೆಯಲಾಗಿದೆ.[೨]

ನಂದಿನಿ, ಸುಂದರರು, ಕಮಲಿನಿ, ಅಪ್ಪರು, ಮಾಣಿಕ್ಯವಾಚಕರು, ಶಿವಜ್ಞಾನ ಸಮಂಧರು, ತ್ರಿಸಹಸ್ರ ಭೂಸುರರು, ನೀಲಕಂಠರು, ಮಹಾಧನರು, ಮಾರರು, ಸತ್ಯಾರ್ಥರು, ವರಮಿಂದರು, ಅಮರನೀತಿ, ದಾರುಕರು, ಯೇಣಾದಿನಾಥರು, ಕಳಾನಾಥರು, ಕಂಣಪ್ಪನವರು, ಮಾನಕಂಜರು, ಶಂಕುಲದಾಯರು, ಗೋನಾಥರು, ಮೂರ್ತಿನಾಥರು, ಭದ್ರಭಕ್ತರು, ರುದ್ರಪಶುಪತಿ, ನಂದರು, ಚಂಡೀಶ್ವರರು, ಕುಲಪಂಕ್ಷರು, ವಿಚಾರವಂತರು, ವಿದ್ಯಾಶೂರರು, ಪೂತವತಿ, ಅಭೂತಿಚರರು, ನೀಲನಗ್ನರು, ನವನಂದಿ, ಕಲಿಕಾಮರು, ಶ್ರೀಮೂಲರು, ಶಕ್ತಿನಾಥರು, ದಂಡಭಕ್ತರು,

---

೧. ಚೆ.ಬ.ವ., ೫೪೫.

೨. EC. IV-ii Appendix p.2.

ಮಾರಸೋಮಯಾಜಿಗಳು, ಶಾಖ್ಯನಾಥರು, ನಿರುಧಶಾರ್ದೂಲರು, ಚರಭೂಪತಿ, ಗಣನಾಥರು, ಪರಾಂತಕರು, ಸತ್ಯದಾಸರು, ಧರ್ಮಕೇತನರು, ಪ್ರತಾಪಶೂರರು, ಅತಿಭಕ್ತರು, ಮಾನವಧನರು, ಕಲಿನೀತಿ, ಪಂಚಪಾದರು, [ಧರ್ಮಭಕ್ತರು],[೩] ಗಣೋಲಭರು, ಅವಿಕಾರಿ, ಅಭಿರಾಮರು, ನಿರ್ವಚನರು, ಮೂರ್ಖಭಕ್ತರು.[೪] ಧನಾಧನರು, ಯತಿಧರರು, ಸಾಹಸಪ್ರಿಯರು, ಕೀರ್ತಿಸಖರು, ಶೂರವ್ಯಾಘ್ರರು, ಶಂಭುಚಿತ್ತರು, ಸುಕುಮಾರರು, ಕೀರ್ತಿಕಥಾಮೃತರು, ಲೋಹಿತಾಕ್ಷರು, ಗೀತಾಕಾರರು, ಮಾನಧನರು.

ಇಲ್ಲಿಯ ಪ್ರತಿಯೊಂದು ಹೆಸರಿನ ಕೆಳಗೆ "ಮಹಿಶೂರ ದಳವಾಯಿ ದೊಡ್ಡೈಯನ। ಪೌತ್ರರಾದ। ಕಳಲೆ ವೀರರಾಜೈಯನವರ ಪುತ್ರರಾದ ನಂಜರಾಜೈಯನ ಸೇವೆ" ಎಂಬ ವಾಕ್ಯ ಕಂಡುಬರುತ್ತದೆ. ಈ ಮೂರ್ತಿಗಳ ಸಂಖ್ಯೆ ೬೩ನ್ನು ಮೀರಿದೆ.

ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದಲ್ಲಿ ಅರುವತ್ತುಮೂವರ ವಿಗ್ರಹಗಳು ಹೀಗಿವೆ:[೫]

ನಂದಿನಿ, ಸುಂದರಮೂರ್ತಿ, ಕಮಲಿನಿ, ಅಪ್ಪರು, ಮಾಣಿಕ್ಯ ವಾಚಕರು, ಶಿವಜ್ಞಾನಸಂಬಂಧರು, ತ್ರಿಸಹಸ್ರ ಭೂಸುರರು, ಶ್ರೀ ನೀಲಕಂಠರು, ಮಹಾದನರು, ಮಾರರು, ಸತ್ಯಾರ್ಥರು, ವೀರಮಂದಿರರು, ಅಮರನೀತಿ, ದಾರುಕರು, ಯೇನಾದಿನಾಥರು, ಕಳಾನಾಥರು, ಬ್ಯಾಡರಕಂನಪ್ಪ, ಮಾನಕಂಜರು, ಶಂಕುವಾದಾಯರು, ಗೋನಾಥರು, ಮೂರ್ತಿನಾಥರು, ಸ್ಕಂದನಾಥರು, ರುದ್ರಪಶುಪತಿ, ನಂದನರು, ವಿಚಾರವಂತರು, ಚಂಡೇಶ್ವರರು, ಕುಲಪಕ್ಷಕರು, ವಿದ್ಯಶೂರರು, ಪೂತವತಿ, ಅಭೂತಿಚರರು, ನೀಲಗನ್ನರು, ನವನಂದರು, ಕಲಿಕಾಮರು, ಶ್ರೀಮೂಲರು, ದಬ್ರಭಕ್ತರು, ಮುಖನಂದನರು, ಮಾರಸುಕುಮಾರರು, ಕಶ್ಯನಾಥರು, ನಿರುದಶಾರ್ದ್ದೂಲರು, ಮತಂಗರು, ಚರಭೂಪತಿ, ಗಣನಾಥರು, ಪರಾಂತಕರು, ಸತ್ಯಧನರು, ಧರ್ಮಕೇತನರು, ಪ್ರತಾಪಶೂರರು, ಅತಿಭಕ್ತರು, ಮಾನಧನರು, ಕಲಿನೀತಿ, ಕೀರ್ತಿಕಥರು, ಪಂಚಪಾದರು, ಗಣೋಲ್ಲಪರು, ಅವಿಕಾರಿ, ಅಭಿರಾಮರು, ನಿರ್ವಾಚಕರು, ಶಕ್ತಿಮಂತರು, ಸಿಂಹಕರು, ಭೂತಿಮಂತರು, ಸಾಹಸಪ್ರಿಯರು, ಕೀರ್ತಿನಾಥಾಮೃತರು, ಶೂರವ್ಯಾಘ್ರರು, ವಿಭೂತಿಚರು, ಸಹಸ್ರಕರು, ಶಂಭುಚಿತ್ತರು, ಲೋಹಿತಾಕ್ಷರು, ಗೀತಾನಂದರು.

ನಂಜನಗೂಡು ಮತ್ತು ಚಾಮರಾಜನಗರದ ಈ ವಿಗ್ರಹಗಳು ಹುಟ್ಟಿದುದು ಮೈಸೂರು ಅರಸರ ಕಾಲದಲ್ಲಿ. ಇವುಗಳ ಸಂಖ್ಯೆ ಮತ್ತು ಹೆಸರುಗಳಲ್ಲಿ ಏಕತೆಯಿಲ್ಲ. ಇದಲ್ಲದೆ ಬಳ್ಳಾರಿಯ ಮಲ್ಲಿಕಾರ್ಜುನ ದೇವಾಲಯದಲ್ಲಿಯೂ ಅರುವತ್ತುಮೂವರ ವಿಗ್ರಹಗಳಿದ್ದುದಾಗಿ ತಿಳಿದುಬರುತ್ತದೆ.

ವಿಗ್ರಹಗಳನ್ನು ಬಿಟ್ಟರೆ ಅರುವತ್ತುಮೂವರನ್ನು ಕುರಿತುವು ಶಾಸನಗಳು. ಕನ್ನಡನಾಡಿನ ಬಸವಾದಿ ಪ್ರಮಥರನ್ನು ನೂತನರೆಂದು,[೬] ತಮಿಳುನಾಡಿನ ಶೈವರನ್ನು ಪುರಾತನರೆಂದು ಕರೆಯುವ ರೂಢಿ ಇದೆ. 'ಪುರಾತನರು' ಎಂಬ ಈ ವಿಶಿಷ್ಟಪದ ಕಂಡುಬರುವುದು ಕೆಳಗಣ ಶಾಸನಗಳಲ್ಲಿ.

---

೩. ಈ ವಿಗ್ರಹದ ಹೆಸರು, ಸೇವಾಕರ್ತರ ಹೆಸರು ಇಲ್ಲ.

೪. ಈ ವಿಗ್ರಹವೇ ಇಲ್ಲ. ಪಾದಪೀಠ ಮಾತ್ರವಿದೆ.

೫. EC.XIV. N0. 342

೬. ಲಕ್ಕಣದಂಡೇಶನು ಬಸವಣ್ಣನವರ ತರುವಾಯದ ಶರಣರನ್ನು ನೂತನರೆಂದು ಕರೆದಿರುವನು.

"ಪುರಾತನ ನೂತನರೆನಿಸಿದ ಅಸಂಖ್ಯಾತಗಣಂಗಳ್[೭] ನಾಮಾದಿ ಪ್ರಶಸ್ತಿಸಹಿತಂ"[೮]

"ಪುರಾತ(ನ) ನೂತ(ನ)ರಪ್ಪ ಶಿವಭಕ್ತರ ಗುಣಸ್ತವನಂ ಮಾಡುತ್ತಮಿರ್ದೇಕಾಂತ ರಾಮಯ್ಯಂಗಳ್"[೯]

"ಪುರಾತನಜಂಗಮಲಿಂಗೈಕಭಕ್ತಿನಿರ್ಭರಲೀಲಾಸಂಗಂ ಸಂಗನಬಸವಂ"[೧೦]

"(ತೇ)ಸರ್ಿ ಪುರಾಥ ಪಾದಾರ್ಚ್ಚಕರುಂ"[೧೧]

"ಅರುವಥಮೂವರು ಮಹಾಗಣಂಗಳು ಬರಸಿದ ಪರಿವರ್ತನ ಶಿಲಾಶಾಸನ"[೧೨]

ಈ ರೀತಿ ಸಾಂಘಿಕವಾಗಿಯಲ್ಲದೆ ವೈಯಕ್ತಿಕವಾಗಿಯೂ ಇವರು ಶಾಸನಗಳಲ್ಲಿ ಹೀಗೆ ಗೋಚರಿಸುತ್ತಾರೆ:

ಚೋಳ(ರು)

ತಮಿಳುನಾಡಿನಲ್ಲಿ ಅರುವತ್ತುಮೂವರ ಧರ್ಮಪ್ರಸಾರಕ್ಕೆ ರಾಜಶಕ್ತಿಯ ಬೆಂಬಲ ನೀಡಿದವರು, ಚೋಳ ಚಕ್ರವರ್ತಿಗಳು. ಇವರ ಶೈವನಿಷ್ಠೆ ಅಖಂಡವಾದುದು. ಅದಕ್ಕಾಗಿ ಮಲ್ಲಿಕಾರ್ಜುನ ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮಾರಾಧ್ಯರ ಗಣಸಹಸ್ರನಾಮಾವಳಿಯ ಅರುವತ್ತುಮೂವರ ಯಾದಿಯಲ್ಲಿ ಕಳಚಂಗ (ಪೆರುಮಾಳ್) ಚೋಳ, ಪಗಲ್‌ಚೋಳ, ವೀರಚೋಳ, ಕರವೂರಚೋಳ ಎಂಬ ನಾಲ್ಕು ಹೆಸರುಗಳು ಸ್ಥಾನಗಳಿವೆ. ಶರಣರನ್ನು ಹೆಸರಿಸುವ ಕನ್ನಡನಾಡಿನ ಕೆಲವು ಶಾಸನಗಳು,

"....ಸಲೆ ಚೋಳನುದ್ಭಟನತರ್ಕ್ಯಂ ಸಿಂಧುಬಲ್ಲಾಳ..."[೧೩]

"....ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ..."[೧೪]

".... ಆಂಡವಲ ಕರಿಕಾಲಜೋಳ ಭೋಗದೇವ...."[೧೫]

"... ಚೋಳರಾಯಗೆ ಹೊಂನಮಳೆಗರೆದಂತೆ...."[೧೬]

---

೭. ಬಸವಾದಿ ಪ್ರಮಥರನ್ನು ಅಸಂಖ್ಯಾತರೆಂದು ಕೆಲವು ಕೃತಿಗಳು ಕರೆದಿವೆ.

೮. SII.XV. No.56. ತಾಳಿಕೋಟೆ, ಕ್ರಿ.ಶ. ೧೧೮೪

೯. EI.V. No.245. ಅಬ್ಬಲೂರ, ಕ್ರಿ.ಶ. ೧೨೦೦?

೧೦. EI.XXI. P.9. ಅರ್ಜುನವಾಡ, ಕ್ರಿ.ಶ. ೧೨೬೦.

೧೧. EI.XXI. P.9. ಅರ್ಜುನವಾಡ, ಕ್ರಿ.ಶ. ೧೨೬೦.

೧೨. MAR.1940.P. 137, & EC.V. ಅರಕಲಗೂಡ ೪೭, ಕ್ರಿ.ಶ. ೧೩೬೨.

೧೩. EC.V-ii. ಅರಸೀಕೆರೆ ೧೦೯. ಹಿರಿಯೂರು, ಕ್ರಿ.ಶ. ೧೨೫೯

೧೪. EC.XI. ಜಗಳೂರ ೩೦. ಕಲ್ಲೆದೇವರಪುರ, ಕ್ರಿ.ಶ. ೧೨೭೯

೧೫. EC. III-i ಮಂಡ್ಯ ೮೩ ಮರಡಿಪುರ, ಕ್ರಿ.ಶ. ೧೨೮೦

೧೬. SII.IX-ii No. 692 ಶ್ರೀಶೈಲ, ಕ್ರಿ.ಶ. ೧೬೦೩.

ಎಂದು 'ಚೋಳ' 'ಚೋಳರಾಯ' 'ಕರಿಕಾಲಚೋಳ' ಎಂಬ ಹೆಸರುಗಳನ್ನು ಬಳಸಿವೆ. ಇವುಗಳಲ್ಲಿಯ 'ಚೋಳ' ಎಂಬವನು ಗಣಸಹಸ್ರನಾಮಾವಳಿಯಲ್ಲಿ ಬರುವ ಚೋಳಚಕ್ರವರ್ತಿಗಳಲ್ಲಿ ಯಾರೆಂಬುದು ಸ್ಪಷ್ಟವಾಗುವುದಿಲ್ಲ. ಒಟ್ಟಿನಲ್ಲಿ ಕನ್ನಡನಾಡಿನ ಶಾಸನಗಳು ಚೋಳ ಅರಸರನ್ನು ಶರಣರ ಮಧ್ಯ ಉಲ್ಲೇಖಿಸಿದುದನ್ನು ಗಮನಿಸಬೇಕು.

ಚೇರ

ಚೋಳ ಚಕ್ರವರ್ತಿಗಳಂತೆ ಚೇರ ಸಾಮ್ರಾಟರೂ ಶಿವಧರ್ಮದ ನಿಷ್ಠೆಯ ಅನುಯಾಯಿಗಳು. ಈವಂಶದ ಚೇರಮ, ಚೇರಮಾಂಕ, ಚೇರಮರಾಜ ಎಂಬ ಭಿನ್ನ ಹೆಸರಿನ ಚೇರನು ಅರುವತ್ತುಮೂವರ ಪಟ್ಟಿಯಲ್ಲಿ ಕಂಡುಬರುವನು. ಈತನು

"....ಚೇರ ಚೋಳ ನಂಬಿ ನಂಬಿ...."[೧೭]

ಎಂದು ಶಿವಶರಣರ ಜೊತೆ ಕಲ್ಲೇದೇವರಪುರ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವನು.

ಸಿರಿಯಾಳಸೆಟ್ಟಿ

ತಮಿಳುನಾಡಿನ ಸಿರುತ್ತೊಂಡ ನಾಯನಾರ್ ಮತ್ತು ಕನ್ನಡನಾಡಿನ ಸಿರಿಯಾಳ ಸೆಟ್ಟಿ ಎಂಬಿವು ಒಬ್ಬ ವ್ಯಕ್ತಿಯ ಎರಡು ಹೆಸರುಗಳು. ೭ನೆಯ ಶತಮಾನದಲ್ಲಿ ಪುಲಿಕೇಶಿಯನ್ನು ಸೋಲಿಸಿ ಬಾದಾಮಿಯನ್ನು ಗೆದ್ದ ಪರಂಜ್ಯೋತಿಯೆಂಬ ಪಲ್ಲವ ಸೇನಾಪತಿಯೇ ಈ ಸಿರಿಯಾಳಸೆಟ್ಟಿಯೆಂದು ಕೆಲವು ಪಂಡಿತರ ಮತ. ಮಗನನ್ನು ಕೊಂದು ಜಂಗಮಾರೋಗಣೆ ಮಾಡಿಸಿದ ಈತನ ಭಕ್ತಿ ಸರ್ವಶ್ರುತ. ಕನ್ನಡನಾಡಿನ ಶಾಸನಗಳಲ್ಲಿ ಈತನ ಪ್ರಸ್ತಾಪ ಹೀಗೆ ಬರುತ್ತದೆ:

"ಓಹಿಲ ದಾಸ ಚೆನ್ನ ಸಿರಿಯಾಳ ಹಲಾಯುಧ"[೧೮]

"...ಸಿರಿಯಾಳ್ವಂ ಬಸವಯ್ಯನೊಳ್ಪೆಸೆವ..."[೧೯]

"... ಸಿರಿಯಾಳುವ ದಾಸ ದಸವರ್ಮ..."[೨೦]

ಈ ಮೂರು ಶಾಸನಗಳಲ್ಲಿ ಹೆಸರಿದ್ದರೆ, ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ಕಟ್ಟಿಸಿದ ಅಬ್ಬಲೂರ ಸೋಮೇಶ್ವರ ದೇವಾಲಯದ ಪೌಳಿಯ ಮೇಲೆ

"ಸಿರಿಯಾಳಸೆಟ್ಟಿ ಚಂಗಳವ್ವೆ ದೇವರಿಗೆ ಮಗನ ಇಕ್ಕುವ ಠಾವು"[೨೧]

---

೧೭. EC.XI. ಜಗಳೂರ ೩೦ ಕಲ್ಲೇದೇವರಪುರ. ಕ್ರಿ.ಶ. ೧೨೭೯

೧೮. EI.V.P. 245 ಅಬ್ಬಲೂರು, ಕ್ರಿ.ಶ. ೧೨೦೦?

೧೯. EC.V ii. ಅರಸಿಕೆರೆ ೧೦೯ ಹಿರಿಯೂರ, ಕ್ರಿ.ಶ. ೧೨೫೯

೨೦. EC. III-i. ಮಂಡ್ಯ ೮೩ ಮರಡಿಪುರ, ಕ್ರಿ.ಶ. ೧೨೮೦

೨೧. EI.XXIX.P. 112 ಅಬ್ಬಲೂರು, ಕ್ರಿ.ಶ. ೧೨೦೦?

ಎಂದು ಬರೆದು ಕೆಳಗೆ ಸಿರಿಯಾಳಸೆಟ್ಟಿ ಚಂಗಳವ್ವೆಯರು ಮಗನನ್ನು ಅರ್ಪಿಸಲು ಹೊರಟ ಚಿತ್ರವನ್ನು ಕೆತ್ತಲಾಗಿದೆ. ಇದಲ್ಲದೆ

> "ತಿರುಕ್ಕುಚ್ಚಿನಂಬಿ ತಿರಿತೊಂಡಸೆಟ್ಟಿ ಸಿರಿಯಾಳಸೆಟ್ಟಿ ಹೇಮಾಳಸೆಟ್ಟಿ
> ವಂಶವಿಸ್ತಾರಕರಾದ..."[೨೨]

ಎಂಬ ಶಾಸನವಾಕ್ಯದಿಂದ ಪ್ರಾಚೀನ ಕರ್ನಾಟಕದ ಕೆಲವು ವರ್ತಕರು ಸಿರಿಯಾಳಸೆಟ್ಟಿಯನ್ನು ತಮ್ಮ ಮೂಲಪುರುಷರಲ್ಲಿ ಒಬ್ಬನೆಂದು ಭಾವಿಸಿದ್ದರೆನ್ನಬೇಕಾಗುತ್ತದೆ.

ಚೇರಮಕಾವ್ಯದ ಕವಿ ಚೇರಮಾಂಕನು ತನ್ನ ಅಜ್ಜನಾದ ನಾಗಲಿಂಗಸೆಟ್ಟಿಯನ್ನು "ಆದಯ್ಯ ಸಿರಿಯಾಳನನ್ವಯೋದ್ದಾಮಂ" ಎಂದು ಮುಂತಾಗಿ ಹೆಮ್ಮೆಯಿಂದ ಕರೆದುದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಸಿಂಧುಬಲ್ಲಾಳ

ಇಹಪ್ಪಗೆಯಾಂಡ ಎಂಬುದು ಸಿಂಧುಬಲ್ಲಾಳನ ಇನ್ನೊಂದು ಹೆಸರು. ಶಿವನಿಗೆ ಸತಿಯನ್ನು ಸಮರ್ಪಿಸಿದ ಈತನ ಕಥೆ ಸುಪ್ರಸಿದ್ಧವಾಗಿದೆ. ಈ ಹೆಸರು

> "ಚೋಳನುದ್ಭಟತರ್ಕ್ಯಂ ಸಿಂಧುಬಲ್ಲಾಳ"[೨೩]

ಎಂದು ಹಿರಿಯೂರ ಶಾಸನದಲ್ಲಿ ಹಲವು ಶಿವಶರಣರ ಮಧ್ಯ ಎಡೆಪಡೆದಿದೆ.

(ಸೌಂದರ)ನಂಬಿಯಣ್ಣ

ಅರವತ್ತುಮೂವರಲ್ಲಿ ಕೊನೆಯವನಾದ ನಂಬಿಯಣ್ಣನ ಇನ್ನೊಂದು ಹೆಸರು ಸೌಂದರ. ಸಿಂಧವಂಶದ ಅಳಿಯ ಬಿಜ್ಜಳನನ್ನು ಕುರಿತು

> ನಂಬಿಯ ತೆರದಿಂ ಶಿವನಂ
> ನಂಬಿದ ಓಹಿಲನ ತೆರದಿನೋಹಿಲ್ಲದ ಭ
> ಕ್ತಂ ಬಾಣನಂತೆ ಜಾಣಂ
> ಕಿಂ ಬಹುನಾ ವೀರಬಿಜ್ಜಳಾವನಿಪಾಲಂ ॥ [೨೪]

ಎಂದು ಹೇಳುವ ಬೆಣಚಮಟ್ಟಿ ಶಾಸನದಲ್ಲಿ ನಂಬಿಯಣ್ಣನ ಉಲ್ಲೇಖ ಬಂದಿದೆ. ಇಲ್ಲಿಯ "ನಂಬಿಯ ತೆರದಿಂ ಶಿವನಂ ನಂಬಿದ" ಎಂಬ ಮಾತು 'ನಂಬಿ ಕರೆದೊಡೆ ಓ ಎನ್ನನೆ ಶಿವನು'[೨೫] ಎಂಬ ಬಸವಣ್ಣನವರ ವಚನವನ್ನು ನೆನಪು ಮಾಡಿಕೊಟ್ಟು, ನಂಬಿಯಣ್ಣನ ಆದರ್ಶಭಕ್ತಿಯನ್ನು ಭಾವಗಮ್ಯಗೊಳಿಸುತ್ತದೆ. ಹಿರಿಯೂರ ಶಾಸನದ

---

೨೨. EC IX ಬೆಂಗಳೂರು ೯೬ ಬೇಗೂರು, ಕ್ರಿ.ಶ. ೧೪೦೨.

೨೩. EC.V-ii. ಅರಸಿಕೆರೆ ೧೦೯ ಹಿರಿಯೂರ, ಕ್ರಿ.ಶ. ೧೨೫೯

೨೪. EI.XX.No. 12 ಬೆಣಚಮಟ್ಟಿ, ಕ್ರಿ.ಶ. ೧೧೮೭

೨೫. ಬ.ವ. ೧೧೬ (ಶ್ರೀ ಬಸವನಾಳ).

"...... ಬಾಣನುಂಧರ (=ಸುಂದರ?) ಭೋಗಂ ಸಲೆ ಚೋಳ..."[೨೬]

ಎಂಬಲ್ಲಿಯ 'ನುಂಧರ' ಎಂಬುದು 'ಸುಂದರ'ವಾಗಿದ್ದ ಪಕ್ಷದಲ್ಲಿ ಈ ಹೆಸರು ನಂಬಿಯಣ್ಣನದೆನ್ನ ಬೇಕಾಗುತ್ತದೆ. ಇದಲ್ಲದೆ

"...ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ..."[೨೭]

"....ಉದ್ಭಟ ನಂಬಿ ಕುಂಬಾರಗುಂಡ..."[೨೮]

ಎಂದು ಕಲ್ಲೇದೇವಪುರ ಮತ್ತು ಮರಡಿಪುರ ಶಾಸನಗಳಲ್ಲಿ ಶಿವಶರಣರ ಜೊತೆಗೆ

"ಆರುಮಠದ ಮೂವರು (ಅರವತ್ತುಮೂವರು?) ಮಹಾಗಣಂಗಳು
ದಣ್ಣಾಯಕದೇವರ ಜ್ಞಾನಸಂಬಂಧ... ವಾಗೇಶ... ನಂಬಿಯಣ್ಣ"[೨೯]

ಎಂದು ಕೆರಲಾಪುರ ಶಾಸನದಲ್ಲಿ ಪುರಾತನರ ಜೊತೆಗೆ ಈತನು ಕಂಡುಬರುತ್ತಾನೆ.

[ಕಡವಲ]ನಂಬಿ

ಅರುವತ್ತುಮೂವರಲ್ಲಿ ಸೌಂದರನಂಬಿಯಲ್ಲದೆ ಕಡವಲನಂಬಿ ಹೆಸರಿನ ಇನ್ನೊಬ್ಬ ಭಕ್ತನಿರುವನು. ತುಪ್ಪದ ದೀಪಾರಾಧನೆಯ ನಿಯಮಕ್ಕೆ ಚ್ಯುತಿ ಬರಲು ನೀರದೀಪ ಹಚ್ಚಿ ಶಿವಕೃಪೆ ಗಳಿಸಿದ ಈತನನ್ನು ಶಾಸನದಲ್ಲಿ ಊಹಿಸಬಹುದಾಗಿದೆ.

"ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ"[೩೦]

ಈ ವಾಕ್ಯದ 'ನಂಬಿ ನಂಬಿ' ಹೆಸರುಗಳಲ್ಲಿ ಒಂದು, ಮೇಲೆ ಹೇಳಿದ ಸೌಂದರ ನಂಬಿಯದಾಗಿದ್ದರೆ ಇನ್ನೊಂದು ಕಡವಲನಂಬಿಯದಾಗಿರಬೇಕೆನಿಸುತ್ತದೆ.[೩೧]

ಮಾದರಚೆನ್ನ

ಶಿವನೊಂದಿಗೆ ಊಟ ಮಾಡಿದ ಚೋಳರಾಜ್ಯದ ಈತನ ಹೆಸರು ಕಲ್ಯಾಣ ಶರಣರ ಬಳಗದಲ್ಲಿಯೂ ಕೇಳಿಬರುತ್ತದೆ. ಮಲ್ಲಿಕಾರ್ಜುನಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮಾರಾಧ್ಯರ ಪ್ರಕಾರ ಈತನು ಅರುವತ್ತುಮೂವರಲ್ಲಿ ಒಬ್ಬನು.

---

೨೬. EC.V-ii. ಅರಸಿಕೆರೆ ೧೦೯ ಹಿರಿಯೂರ, ಕ್ರಿ.ಶ. ೧೨೫೯

೨೭. EC.XI. ಜಗಳೂರ ೩೦ ಕಲ್ಲೇದೇವರಪುರ, ಕ್ರಿ.ಶ. ೧೨೭೯

೨೮. EC.III-i. ಮಂಡ್ಯ ೮೩ ಮರಡಿಪುರ, ಕ್ರಿ.ಶ. ೧೨೮೦

೨೯. EC.V ಅರಕಲಗೂಡು ೪೭ ಕೆರಲಾಪುರ, ಕ್ರಿ.ಶ. ೧೩೬೨
"ಆಱುವರಮೂವರು ಮಹಾಗಣಂಗಳಿಗೆ" "ಅಱುವತ್ತಮೂವರು ಮಹಾಜನಂಗಳ"
"ಅಱುವತ್ತುಮೂವರು ಮಹಾಗಣಂಗಳೂ" ಎಂಬ ಉಲ್ಲೇಖಗಳೂ ಇಲ್ಲಿವೆ.

೩೦. EC.XI. ಜಗಳೂರ ೩೦ ಕಲ್ಲೇದೇವವಪುರ, ಕ್ರಿ.ಶ. ೧೨೭೯

"........ಓಹಿಲ ದಾಸ ಚೆನ್ನ ಸಿರಿಯಾಳ..."[೩೨]

"........ಚಿಕ್ಕ ಕಕ್ಕ ಚೆನ್ನ ಹೊನ್ನ...."[೩೩]

ಹೀಗೆ ಎರಡು ಶಾಸನಗಳಲ್ಲಿ ಬರುವ ಚೆನ್ನನು ಮಾದರಚೆನ್ನಯ್ಯನೇ ಆಗಿರಬೇಕು.

ಕಾರಿಕಾಲಮ್ಮೆ

ತಲೆಯಿಂದ ನಡೆದು ಕೈಲಾಸಕ್ಕೆ ಹೋದ ಕಾರಿಕಾಲಮ್ಮೆಯ ನೈಷ್ಠಿಕಭಕ್ತಿ ಅರುವತ್ತುಮೂವರಲ್ಲಿ ಆಶ್ಚರ್ಯಕರವೆನಿಸಿದೆ. ಈ ಹೆಸರನ್ನೊಳಗೊಂಡ ಕಬ್ಬೂರ ಶಾಸನ ಹೀಗಿದೆ:

"ಇನ್ತೀ ಸಾಮಾನ್ಯಮಂ ಶ್ರೀಮೂಲಸ್ಥಾನ ಷಯಂಭು ಕಲಿದೇವರ್ಗ್ಗಂ ಗವಱೀಸ್ವರ ದೇವರ್ಗ್ಗಂ ದೇವಾಲೆಯಂ ಮಾಡಿಸಿ ಅನ್ನಮುಣ್ಣದ ಬ್ರತಮಂ ಪರಿಣಮಂ ಮಾಡಿ ದೇವರ ದಿಬ್ಯಶ್ರೀಪಾದಮಂ ಪೂಜಿಸುತ್ತಮಿರೆ ನಿತ್ಯವಿನೋದ ಚತುರ್ವೇದಿ ಮಂಗಲತ್ತುಂ ಸಿವಬ್ರಾಹ್ಮಣರ ಪುತ್ರ ಪವಿತ್ರೆಯಪ್ಪ ಕಾರೆಕಲ್ಲಯಮ್ಮೆಗೆ ಮಲೆಯಾಳ ನಾರಾಯಣ ಮಾಳನ್ದಲೆಯೆನುತೆ ಕಾಮಾಣ್ಡನು ಧಾರಾಪೂರ್ವಕಂ ಮಾಡಿಕೊಟ್ಟ ಧರ್ಮ.... ಶ್ರೀಮತು ಕುತದೇವರ್ಗೆಯಚಳ ಭಕುತಿಯಿಂ ಗನ್ಧಮಂ ಅಕ್ಷತೆ ಪುಷ್ಪ ಧೂಪದ್ವೀ(ದೀ)ಪನಿವೇದ್ಯಂ ತ್ರಿಸಂಜೆಯ ಕುಂದದೆ ಪೂಜೆಯಂ ಮಾಪ್ರ್ಪ ಸಮಸ್ತ ಗುಣಸಂಪನ್ನೆಯರಪ್ಪ ತಿರುಕಾಳತಿಯ ಪುಟ್ಟಿದ ಕಾರೆಕಲ್ಲಮೆಯ ಪುತ್ರ ಕುತ ಎತ್ತಿಸಿ ದೇವಾಲೆ(ಯ)ಮಂ ಮತ್ತಂ ಬೇಡಿದರ್ಗ ಮಱಿದು ಮನ್ನಿಸಿ ಸಲೆ ಪೆಂಪುತ್ತರಿಸೆ ಸಿವ ಬ್ರಾಹ್ಮಣರ್ಗ್ಗೆ ಪವಿತ್ರ ಎನಲು ನೆಗೆಟ್ಟ್ರೆಳಿನ್ತು ಕಾಱಿಕಲ್ಲಯಮ್ಮೆ"[೩೪]

ನಿರಶನವ್ರತ ಹಿಡಿದು ಕಲಿದೇವ ಗವುರೇಶ್ವರದೇವರ ದೇವಾಲಯ ಕಟ್ಟಿಸಿದ ಕಾರಿಕಲ್ಲಅಮ್ಮೆಗೆ ಮಲೆಯಾಳ ನಾರಾಯಣ ಮಾಳನ್ದಲೆಯೂ ತೆನುಳ ಕಾಮಾಂಡನೂ ದತ್ತಿಯನ್ನು ಕೊಟ್ಟರು; ಆಕೆಗೆ ತಿರುಕಾಳನ ದಯೆಯಿಂದ ಹುಟ್ಟಿದ ಕುತ (=ಕುಂತ?) ಎಂಬ ಮಗನಿದ್ದನು ಎಂದು ಮುಂತಾಗಿ ಈ ಶಾಸನಕ್ಕೆ ಅರ್ಥ ಹಚ್ಚಿದ ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರ ಪ್ರಕಾರ ಇವಳು ಅರುವತ್ತುಮೂವರ ವರ್ಗಕ್ಕೆ ಸೇರಿದ ಕಾರಿಕಾಲಮ್ಮೆ.[೩೫] ಈ ಮಾತಿಗೆ ಇನ್ನೂ ಆಧಾರಗಳು ಬೇಕು.

ಬೇಡರ ಕಣ್ಣಪ್ಪ

ಶಿವನಿಗೆ ಕಣ್ಣು ನೀಡಿದ ಕಣ್ಣಪ್ಪನು ಅರುವತ್ತುಮೂವರಲ್ಲಿ ಒಬ್ಬನು. ಜಾತಿಯಿಂದ ಬೇಡನಾದ ಈತನ ಅಚಲಭಕ್ತಿ ಮನೆಮಾತಾಗಿದೆ. ಕುಡತಿನಿ ಶಾಸನದ

---

೩೧. ಇವುಗಳಲ್ಲಿ ಒಂದು 'ನಿಂಬಿ'ಯಾಗಿರಲು ಸಾಧ್ಯವಿದೆ.

೩೨. EI.V.P. 245 ಅಬ್ಬಲೂರು ಕ್ರಿ.ಶ. ೧೨೦೦?

೩೩. EC. XI ಜಗಳೂರ ೩೦ ಕಲ್ಲೇದೇವರಪುರ, ಕ್ರಿ.ಶ. ೧೨೭೯

೩೪. EC. XI ದಾವಣಗೆರೆ ೧೫೫ ಕಬ್ಬೂರ, ಕ್ರಿ.ಶ. ೧೧೧೪

೩೫. ಸಾ.ಪ. ೩೧-೨

"…..ಮೀಂಟಿ ಕಣ್ಗಳಂ ಹರನ ಶಿಖಾಗ್ರದೊಳಿ(=ಳ್ಳಿ)ಱಿಸಿ….

ಮಗಳ್ದುಂ ಪಡೆವರ್ಪಮರ್ಥಕರ್ಳದ್ಭುತಂ"[೩೬]

ಎಂಬ ವರ್ಣನೆ ಮುಗ್ಧಭಕ್ತ ಬೇಡರಕಣ್ಣಪ್ಪನನ್ನು ಸೂಚಿಸುತ್ತಿರಬಹುದು.

……………………(?)…………… *

"ದಂಡೆಗರುಳ್ಗಳೊ(ಳೆ)ಡೆಯ ಭಯಂಕರಮೆನೆ ಮಾಡಿ….

ಮಗುಳ್ದುಂ ಪಡೆವರ್ಪಮರ್ಥಕರ್ಳದ್ಭುತಂ"[೩೭]

ದೇವರಿಗೆ ಕರುಳಿನ ನೈವೇದ್ಯ ಹಿಡಿದ ಶಿವೋಪಾಸಕರು ಅನೇಕರಿದ್ದಾರೆ. ಆದರೆ ಈ ಉಗ್ರಭಕ್ತಿಯ ವ್ಯಕ್ತಿ ಅರುವತ್ತುಮೂವರಲ್ಲಿ ಒಬ್ಬನಾಗಿರುವ ಸಾಧ್ಯತೆಯಿದೆ.

……………………(?)…………… *

"ಕರಕಮಳಂಗಳಂ ಮುರೆದುಮಾಪತಿಗೇರಿಸಿ…..

ಮಗುಳ್ದುಂ ಪಡೆವರ್ಪಮರ್ಥಕರ್ಳದ್ಭುತಂ"[೩೮]

ಶಿವನಿಗಾಗಿ ಕೈ ಕತ್ತರಿಸಿಕೊಂಡ ಈ ಭಕ್ತನು ಪುರಾತನರಲ್ಲಿ ಒಬ್ಬನಾಗಿರಬಹುದು.

……………………(?)……………*

"ಪಂದಲೆಯಿಂ ನಿವಾಳಿಯಂ ಪುರಮಥನಂಗೆ ಕೊಟ್ಟು

ಮಗುಳ್ದುಂ ಪಡೆವರ್ಪಮರ್ಥಕರ್ಳದ್ಭುತಂ ।"[೩೯]

ಶಿವನಿಗೆ ಮಸ್ತಕವನ್ನರ್ಪಿಸಿದ ಶಿವೋಪಾಸಕರು ಅರುವತ್ತುಮೂವರಲ್ಲಿ, ಸಂಕ್ರಮಣ ಯುಗದ (ವೀರ)ಶೈವರಲ್ಲಿ ಹಲವರಿರುವರು. ಏಕಾಂತರಾಮಯ್ಯನ ಮಸ್ತಕಾರ್ಪಣೆಯ ಘಟನೆ ಸುಪ್ರಸಿದ್ಧವಾಗಿದ್ದರೂ ಇಂಥ ಘಟನೆಯನ್ನು ಪುರಾತನರಲ್ಲಿ ಒಬ್ಬನು ಆಚರಿಸಿರಲು ಸಾಧ್ಯವಿದೆ.

ಹೀಗೆ ತಮಿಳುನಾಡಿನ ಅರುವತ್ತುಮೂವರು ಕರ್ನಾಟಕದ ಶಿಲ್ಪದಲ್ಲಿ ವಿಗ್ರಹ ರೂಪದಿಂದ, ಶಾಸನಗಳಲ್ಲಿ ಉಲ್ಲೇಖರೂಪದಿಂದ ಕಂಡುಬರುತ್ತಾರೆ. ಇವರಲ್ಲದೆ ತಮಿಳುನಾಡಿನ ಬೇರೆ ಕೆಲವು ಶಿವಭಕ್ತರನ್ನು ವೀರಶೈವಪುರಾಣಗಳು ಕೀರ್ತಿಸುತ್ತಿದ್ದು, ಶಾಸನಗಳಲ್ಲಿ ಅವರು ಹೀಗೆ ಗೋಚರಿಸುತ್ತಾರೆ.

೩೬, ೩೭, ೩೮, ೩೯. ಈ ನಾಲ್ಕು ಅಂಕಿಗಳಿಗೆ ಸಂಬಂಧಪಟ್ಟ ಪೂರ್ಣಪದ್ಯ ಹೀಗಿದೆ:

ಕರಕಮಳಂಗಳಂ ಮುಱಿದುಮಾಪತಿಗೇಱಿಸಿ ಮೀಂಟಿ ಕಣ್ಗಳಂ ।
ಹರನ ಶಿಖಾಗ್ರದೊಳಿ(=ಳ್ಳಿ)ಱಿಸಿ ದಂಡೆಗರುಳ್ಗಳೊ(ಳೆ)ಡೆಯಂ ಭಯಂ
ಕರಮೆನೆಮಾಡಿ ಶಂಕರನರ್ಚಿಸಿ ಪಂದಲೆಯಿಂ ನಿವಾಳಿಯಂ ।
ಪುರಮಥನಂಗೆ ಕೊಟ್ಟು ಮಗುಳ್ದುಂ ಪಡೆವರ್ಪಮರ್ಥಕರ್ಳದ್ಭುತಂ ॥

SII.XVII P.8. ಕುಡತಿನಿ, ಕ್ರಿ.ಶ. ೧೨೦೦

* ಈ ಮೂವರು ಶರಣರ ಹೆಸರು ಗೊತ್ತಾಗುವುದಿಲ್ಲ.

ಕುಂಬಾರಗುಂಡ

ಉತ್ಕಟಭಕ್ತಿಯಿಂದ ಕುಣಿದು ಶಿವನನ್ನು ಕುಣಿಸಿದ ಕುಂಬಾರಗುಂಡ ಜನಮನದಲ್ಲಿ ಜೀವಂತ ನೆನಪಾಗಿ ನಿಂತ ಮುಗ್ಧಭಕ್ತ. ಈತನು ಹೆಸರು ಮತ್ತು ವಿಗ್ರಹಗಳ ಮೂಲಕ ಈ ನಾಡಿನ ಶಿಲ್ಪ ಮತ್ತು ಶಾಸನಗಳಲ್ಲಿ ಕಾಣಿಸಿಕೊಂಡಿರುವನು.

"....ನಂಬಿ ಕುಂಬಾರಗುಂಡ ಆಂಡವಲ ಕರಿಕಾಲಚೋಳ..."[೪೦]

ಮರಡಿಪುರ ಶಾಸನದ ಈ ಪಜ್ತೆಯಲ್ಲಿ ಕುಂಬಾರಗುಂಡನ ಹೆಸರಿದೆ. ಅಬ್ಬಲೂರ ಸೋಮೇಶ್ವರ ದೇವಾಲಯದ ಪೌಳಿಯ ಮೇಲಿನ

"ಕುಂಬಾರಗು(ಂ)ಡನ ಮುಂದೆ ಬಂಧಾ(ದಾ)ಡಿದ ನಮ್ಮ ಶಿವನು"[೪೧]

ಎಂಬ ಬರೆಹದ ಕೆಳಗೆ, ಗಡಿಗೆ ಬಾರಿಸುತ್ತ ಕುಳಿತ ಆತನ ಚಿತ್ರ ಬಿಡಿಸಲಾಗಿದೆ.

ಆಂಡವಲ

ಹಲವು ಶಿವಶರಣರನ್ನು ಹೆಸರಿಸುವ ಮರಡಿಪುರ ಗ್ರಾಮದ ಶಾಸನದಲ್ಲಿ

"ಕುಂಬಾರಗುಂಡ ಆಂಡವಲ ಕರಿಕಾಲಚೋಳ"[೪೨]

ಎಂಬ ವಾಕ್ಯವಿದೆ. ಇಲ್ಲಿಯ 'ಆಂಡವಲ' ತಮಿಳು ಅಂಕಿತನಾಮದಂತೆ ತೋರುತ್ತದೆ. ಇವನು ಅರುವತ್ತುಮೂವರಲ್ಲಿ ಒಬ್ಬನೋ ಬೇರೆಯೋ ಸ್ಪಷ್ಟವಾಗುವುದಿಲ್ಲ.

ಈವರೆಗೆ ವಿವೇಚಿಸಿದ ಅರುವತ್ತುಮೂವರು ಮತ್ತು ಇತರ ಶಿವಭಕ್ತರು ತಮಿಳುನಾಡಿಗೆ ಸಂಬಂಧಿಸಿದವರು. ಇದಲ್ಲದೆ ಕುಡತಿನಿ ಶಾಸನದ

ಕ್ರೂರ ವಿಷಂಗಳಂ ಕುಡಿವರಂತಕನಂ ಜಱಿವರ್ಮಹೋಗ್ರಕಾ ।
ಳೋರಗನಂ ಕಡಂಗಿ ಪಿಡಿವರ್ಸಿಡಿಲಂ ಪೊಡೆವರ್ಗ(ಜಾ)ಜಿಯಂ ।
(ಯಾ)ರಿಗೆ ತಪ್ಪ(ರಿ)ಳ್ಪು ಶಿವದೂಷಕನೆಂಬವನೊಕ್ಕಲಿಕ್ಕುವ ।
ರ್ವೀರಗಣಂಗಳೊಂದೊಡಿದಿರಾರ್ ಪ್ರಮಥರ್ಗ್ಗೆ ಜಗತ್ರಯಂಗಳೊಳ್॥[೪೩]
ಕರಕರನಂ ಸೆಂಡಾಡುವ ।
ರುರಗಪನಂ ಕೀಱಲಿಟ್ಟು ಬಿಟ್ಟಿಕ್ಕುವರಾ ।
ಗಿರಿಕುಳಮಂ ಕಿತ್ತೆತ್ತುವ ।
ರುರಿಯೊಟಱ ಪರಿಮರಿಯಾಡುತಿರ್ಪರು ಸರಣರು।[೪೪]

---

೪೦. EC.III-i. ಮಂಡ್ಯ ೮೩ ಮರಡಿಪುರ, ಕ್ರಿ.ಶ. ೧೨೮೦.

೪೧. EI.XXIX.p.142 ಅಬ್ಬಲೂರು, ಕ್ರಿ.ಶ. ೧೨೦೦?

೪೨. EC.III-i. ಮಂಡ್ಯ ೮೩ ಮರಡಿಪುರ, ೧೨೮೦.

೪೩. SII.XVII.P.8 ಕುಡತಿನಿ, ಕ್ರಿ.ಶ. ೧೨೧೦.

೪೪. ಶ.ಸಾ. ಇಂಗಳಗಿ, ಕ್ರಿ.ಶ. ೧೨೦೯.

ಎಂಬ ಪದ್ಯಗಳಲ್ಲಿಯ ಕಠೋರಭಕ್ತಿ ಬಹುಶಃ ಈ ಅರುವತ್ತುಮೂವರನ್ನೇ ಸೂಚಿಸುತ್ತಿರಬೇಕು.

ಈ ಶಿವಭಕ್ತರಲ್ಲದೆ ಬೇರೆ ಕೆಲವು ಶಿವೋಪಾಸಕರ ವಿಷಯ ವೀರಶೈವಕೃತಿಗಳಲ್ಲಿ ಆಗಾಗ ಕಂಡುಬರುತ್ತಿದೆ. "ಬಸವಪೂರ್ವಯುಗದ ಶರಣರು" ಎಂಬ ಶೀರ್ಷಿಕೆಯಲ್ಲಿ ಅವರನ್ನು ಕೆಳಗಿನಂತೆ ವಿವೇಚಿಸಬಹುದು.

ಬಸವಪೂರ್ವಯುಗದ ಶರಣರು-೧:

ಶಿವಶರಣರ ಮತ್ತು ಶಿವಕವಿಗಳ ಗೌರವಕ್ಕೆ ಪಾತ್ರರಾದ ಬಾಣ, ಓಹಿಲ, ಉದ್ಭಟ ಮೊದಲಾದ ಶಿವೋಪಾಸಕರು ಈ ವಿಭಾಗದಲ್ಲಿ ಸಮಾವೇಶಗೊಳ್ಳುತ್ತಾರೆ. ಕಲ್ಯಾಣ ಶರಣರಿಗೆ ಪ್ರಾಚೀನರಾದ ಇವರ ಉಲ್ಲೇಖ ಶಾಸನಗಳಲ್ಲಿ ಹೀಗೆ ಬಂದಿದೆ:

ಬಾಣ

"ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ"[೪೫] ಎಂಬ ಬಸವಣ್ಣನವರ ಹೇಳಿಕೆ ವರ್ಣನಪರ ಶೈಲಿಯ ಕಾದಂಬರಿಕರ್ತೃ ಕವಿ ಬಾಣನನ್ನು ಸೂಚಿಸುವಂತೆ ತೋರುತ್ತದೆ.

ಅಸದಳಮುರ್ವ್ವಿಗುರ್ವ್ವಿಸುವ ಧರ್ಮ್ಮಮನೋವದೆ ಗೆಲ್ವ ವಿಕ್ರಮಂ ।
ಸಸಿಧರನೆನ್ದು ತ್ರೈಭುವನವ ಬಣ್ಣಿಸೆ ಬಾಣ ಮಯೂರ ದಾಸಮಂ ।
ವಸುಧೆಗೆ ಪೇಳಲ್..........[೪೬]

"..........ಕಾಳಿದಾಸನೆನೆ ಬಾಣ ಮಯೂರ ಕವಿಬ್ರಜಂ ಸವಿ ।
ಸ್ತರದೊಳೆ ಮೂಱುಲೋಕಮಱಿಯಲ್ ನೆಱೆ ಕಣ್ಬಡೆದಂತೆ ರೂಢಿಸು ।
ತ್ತಿರೆ ಕವಿಳಾಸ ಭೂಮಿಯೆನಿಸಿರ್ದ್ದುದು ವಿಶ್ವಜನಕ್ಕೆ ಕೂಡೆ ಹಿ ।
ಪ್ಪರಿಗೆ.."[೪೭]

ಎಂಬ ಎರಡು ಪದ್ಯಗಳಲ್ಲಿ ಕಾಳಿದಾಸ ಮಯೂರ ಬಾಣರು ಜೊತೆಯಾಗಿ ಹೆಸರಿಸಲ್ಪಟ್ಟಿರುವರು. ಅಬ್ಬಲೂರು ಶಾಸನದಲ್ಲಿ,

ಹರನೊಳ್ಪಡೆದರನೇಕ ।
ವ್ವರಮಂ ಬಾಣಾದಿನಿಶಾಳ ಭಕ್ತಗಣಂಗಳ್ ॥[೪೮]

ಎಂದೂ ಮುಮ್ಮಿಗಟ್ಟಿ ಶಾಸನದಲ್ಲಿ 'ಬಾಣನ ವೋಲ್ ಶಿವಭಕ್ತಂ' ಎಂದೂ ಈ ಬಾಣನ ಭಕ್ತಿಯ ಉಲ್ಲೇಖವಿದೆ.[೪೯] ಇದಲ್ಲದೆ

---

೪೫. ಬ.ವ. ೩೧೯, (ಶ್ರೀ ಬಸವನಾಳ).

೪೬. EC.XII. ಚಿಕ್ಕನಾಯಕನಹಳ್ಳಿ ೧೮ ತಂಡಗದ ಗ್ರಾಮ, ಕ್ರಿ.ಶ. ೧೧೪೯

೪೭. SII.XX No. 178 ಹಿಪ್ಪರಗಿ, ಕ್ರಿ.ಶ. ೧೧೯೨.

೪೮. EI.V. P. 245 ಅಬ್ಬಲೂರು, ಕ್ರಿ.ಶ. ೧೨೦೦?

೪೯. ಧಾ. ಜಿ.ಶಾ. ಮುಮ್ಮಿಗಟ್ಟಿ.

"........ಸಿರಿಯಾಳ ಹಳಾಯುಧ ಬಾಣನುದ್ಭಟರ್...."[೫೦]

"........ಬಾಣನುಂಧರ ಭೋಗಂ ಸಲೆ ಚೋಳನುದ್ಭಟ..."[೫೧]

"...........ಭೋಗದೇವ ಬಾಣ ಮಯೂರ ಕಾಳಿದಾಸ...."[೫೨]

ಎಂದು ಅಬ್ಬಲೂರ ಹಿರಿಯೂರ ಮರಡಿಪುರ ಶಾಸನಗಳು ಬಾಣನನ್ನು ಸ್ಮರಿಸಿವೆ. ಇನ್ನು–

"...............ಕರಕಮಳಂಗಳಂ ಮುಱಿದುಮಾಪತಿಗೇಱಿಸಿ.....

ಮಗುಳ್ದುಂ ಪಡೆವರ್ಪ್ರಮರ್ಥಕಳದ್ಭುತಂ...."[೫೩]

ಎಂಬಲ್ಲಿ ಹೇಳಿದ ಹಸ್ತಸಮರ್ಪಣೆಯ ಘಟನೆ ಅರುವತ್ತುಮೂವರಲ್ಲಿ ಒಬ್ಬನಿಗೆ ಸಂಬಂಧಿಸಿರಬಹುದೆಂದು ಹಿಂದೆ ಹೇಳಲಾಗಿದ್ದು, ಇದು ಬಾಣನಿಗೂ ಅನ್ವಯಿಸಬಹುದಾಗಿದೆ.

"......ಬಾಣನಂತೆ ಜಾಣಂ ।

ಕಿಂ ಬಹುನಾ ವೀರಬಿಜ್ಜಳಾವನಿಪಾಲಂ ॥[೫೪]

"ಭಾರತಿ ಕೇಯೂರ ರಾಜ।ಶೇಖರನಾಮಾತ್ ಭಾರವಿ ।

ಸಾಕ್ಷಾದ್ ಬಾಣ ಮಯೂರಂ । ವಾಲ್ಮೀಕಿ ಕಾಲಿದಾಸಂ ವ್ಯಾಸಂ॥[೫೫]

ಎಂಬ ಶಾಸನ ಪದ್ಯಗಳಲ್ಲಿ ಕ್ರಮವಾಗಿ ಸಿಂದವಂಶದ ಬಿಜ್ಜಳ, ಗಂಗವಂಶದ ರಾಚಮಲ್ಲರು ಬಾಣನಿಗೆ ಸಮಾನರೆಂದು ಬಣ್ಣಿಸಲಾಗಿದೆ. ಇದಲ್ಲದೆ ಹಲವಾರು ಶಾಸನಗಳ ಕೊನೆಯ

"XX...ಬಾಣಗದ್ಯ(ವಾ)ಲಿಖಿತಂ ಪಿತಾಮಹನೆನ್ದೊರೆಯೊ

ಳೊಪ್ಪಿರಲಹರ್ನ್ನಿಶಂ ಬರೆದಂ.............."[೫೬]

ಎಂಬ ವಾಕ್ಯದಲ್ಲಿಯ 'ಬಾಣಗದ್ಯ'ವು ನಮಸ್ಕಾರಗದ್ಯ, ಭೋಜಗದ್ಯಗಳಂತೆ ಒಂದು ಕೃತಿನಾಮವನ್ನು ಇಲ್ಲವೆ ಬಾಣನ ಗದ್ಯಶೈಲಿಯನ್ನು ಸೂಚಿಸುತ್ತಿರಬಹುದು.

ಮಯೂರ

'ಮಯೂರಸ್ತವ'ವನ್ನು ಬರೆದು ಕುಷ್ಟರೋಗ ಕಳೆದುಕೊಂಡ ಈತನೊಬ್ಬ ಪರಮ ಶಿವಭಕ್ತ. ತಂಡಗದ ಮತ್ತು ಹಿಪ್ಪರಗಿ ಶಾಸನಗಳ

---

೫೦. EI.V. P. 245 ಅಬ್ಬಲೂರು, ಕ್ರಿ.ಶ. ೧೨೦೦?

೫೧. EC.V.ii ಅರಸಿಕೆರೆ ೧೮೯ ಹಿರಿಯೂರು, ಕ್ರಿ.ಶ. ೧೨೫೯.

೫೨. ECIII-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೫೩. SII.XVII.P.8 ಕುಡತಿನಿ, ಕ್ರಿ.ಶ. ೧೨೧೦.

೫೪. EI.XX No. 12 ಬೆಣಚಮಟ್ಟಿ, ಕ್ರಿ.ಶ. ೧೧೮೨.

೫೫. EC.VIII ನಗರ ૩೫, ಹುಮ್ಮಚ, ಕ್ರಿ.ಶ. ೧೦೭೭

೫೬. BKI.I-II No. 247 ಚಿಕ್ಕಹಂದಿಗೋಳ, ಕ್ರಿ.ಶ. ೧೮೯೯

"ಅಸದಳಮುರ್ವ್ವಿಗುರ್ವ್ವಿಸುವ ಧರ್ಮ್ಮಮನೋವದೆ ಗೆಲ್ವ ವಿಕ್ರಮಂ ।
ಸಸಿಧರನೆನ್ದು ತ್ರೈಭುವನ ಬಣ್ಣಿಸೆ ಬಾಣ ಮಯೂರ ದಾಸಮಂ ।
ವಸುಧೆಗೆ ಪೇಳಲ್.."[೫೭]

"...........ಕಾಳಿದಾಸನೆನೆ ಬಾಣ ಮಯೂರ ಕವಿಬ್ರಜಂ ಸವಿ ।
ಸ್ತರದೊಳೆ ಮೂಱುಲೋಕಮಱಿಯಲ್ ನೆಱೆ ಕಣ್ಬಡೆದಂತೆ ರೂಢಿಸು ।
ತ್ತಿರೆ ಕವಿಳಾಸಭೂಮಿಯೆನಿಸಿರ್ದುದು ವಿಶ್ವಜನಕ್ಕೆ ಕೂಡೆ ಹಿ ।
ಪ್ಪರಿಗೆ..............................."[೫೮]

ಎಂಬ ವೃತ್ತಗಳಲ್ಲಿ ಬಾಣ, ಮಯೂರ, ಕಾಳಿದಾಸರು ಒಟ್ಟಿಗೆ ಕಂಡುಬರುವರು.

"ಬಾಣ ಮಯೂರ ಕಾಳಿದಾಸ ಕೇಶಿರಾಜ ದಣ್ನಾಯಕ..."[೫೯]

ಎಂದು ಮರಡಿಪುರ ಶಾಸನದ ಶರಣರ ಪಟ್ಟಿಯಲ್ಲಿ ಈ ಹೆಸರು ಸಮಾವೇಶಗೊಂಡಿದೆ. ಇದಲ್ಲದೆ ಗಂಗ ಅರಸು ರಾಚಮಲ್ಲನನ್ನು ಹೊಗಳುವ ಹುಮ್ಮಚ ಶಾಸನವು

ಭಾರತಿ ಕೇಯೂರ ರಾಜ।ಶೇಖರನಾಮಾತ್ ಭಾರವಿ ।
ಸಾಕ್ಷಾತ್ ಬಾಣ ಮಯೂರಂ । ವಾಲ್ಮೀಕಿ ಕಾಲಿದಾಸಂ ವ್ಯಾಸಂ ॥[೬೦]

ಎಂದು ಮಯೂರನ ಆದರ್ಶಸಾಹಿತ್ಯವನ್ನು ಎತ್ತಿ ಹೇಳುತ್ತದೆ.

ಓಹಿಲ

ಧೂಪಸಮರ್ಪಣೆಯ ವ್ರತವನ್ನು ಶ್ರದ್ಧೆಯಿಂದ ನೆರವೇರಿಸಿ ಕೈಲಾಸಕ್ಕೆ ನಡೆದ ಓಹಿಲನು ವೀರಶೈವರಿಗೆ ಪೂಜ್ಯನಾದ ವ್ಯಕ್ತಿ. ಬೆಣಚಮಟ್ಟಿ ಶಾಸನದಲ್ಲಿ

"ಓಹಿಲನ ತೆರೆದಿನೋಹಿಲ್ಲದ ಭಕ್ತಂ....
ಕಿಂ ಬಹುನಾ ಬಿಜ್ಜಳಾವನಿಪಾಲಂ"[೬೧]

ಎಂದು ಸಿಂದಬಿಜ್ಜಳನನ್ನು ವರ್ಣಿಸುವಲ್ಲಿ ಓಹಿಲನ ಓಹಿಲ್ಲದ ಭಕ್ತಿ ಅಭಿವ್ಯಕ್ತವಾಗಿದೆ.

---

೫೭. EC.XII ಚಿಕ್ಕನಾಯನಹಳ್ಳಿ ೧೮, ತಂಡಗದ ಗ್ರಾಮ, ಕ್ರಿ.ಶ. ೧೧೪೯?
೫೮. SII.XX.No. 178 ಹಿಪ್ಪರಗಿ, ಕ್ರಿ.ಶ. ೧೧೯೨
೫೯. EC.III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦?
೬೦. EC.VIII ನಗರ ೩೫ ಹುಮ್ಮಚ, ಕ್ರಿ.ಶ. ೧೦೭೭
೬೧. EIXX-12 ಬೆಣಚಮಟ್ಟಿ ಕ್ರಿ.ಶ. ೧೧೮೭

"ಓಹಿಲ ದಾಸಿ ಚೆನ್ನ ಸಿರಿಯಾಳ ಹಳಾಯುಧ...."[೬೨]

"...ದಸವಮ್ಮದಿ(=ಮ್ಮಾರ್ದೋ?)ಹಿಲ ಉದ್ಭಟ ನಂಬಿ"[೬೩]

ಎಂದು ಅಬ್ಬಲೂರ, ಮರಡಿಪುರ ಶಾಸನಗಳಲ್ಲಿ ಈ ಹೆಸರು ಎಡೆ ಪಡೆದಿದೆ.

ಕಾಳಿದಾಸ

ಕಾಳಿದಾಸ ಎಂದೊಡನೆ ನಮ್ಮ ಕಣ್ಣಮುಂದೆ ನಿಲ್ಲುವ ವ್ಯಕ್ತಿ ಶಾಕುಂತಲ ನಾಟಕದ ಕರ್ತೃ. ನಮ್ಮ ದೇಶದಲ್ಲಿ ಆಗಿಹೋದ ಈ ಹೆಸರಿನ ಹಲವುಜನ ಕಾಳಿದಾಸರಲ್ಲಿ ಶರಣರ ಸ್ತುತಿಗೆ ಪಾತ್ರನಾದವನನ್ನು ಬೆರಳಿಟ್ಟು ಹೇಳುವುದು ಅಸಾಧ್ಯವೆನಿಸಿದೆ. "ಕಾಳಿದಾಸಂಗೆ ಕಣ್ಣನಿತ್ತೆ" ಎಂದು ಬಸವಣ್ಣನವರ ಒಂದು ವಚನ ಹೇಳುತ್ತದೆ. ಅದಕ್ಕಾಗಿ ಕುಡತಿನಿ ಶಾಸನದ

"ಮೀಂಟಿ ಕಣ್ಗಳಂ ಹರನ ಶಿಖಾಗ್ರದೊಳಿ(=ಳ್ಳಿ)ರಿಸಿ.....

ಮಗುಳ್ದುಂ ಪಡೆವಪ್ರ್ರಮಥರ್ಕಳದ್ಭುತಂ"[೬೪]

ಎಂಬ ಘಟನೆ ಹಿಂದೆ ಕಣ್ಣಪ್ಪನಿಗೆ ಅನ್ವಯಿಸಿದಂತೆ ಇಲ್ಲಿ ಕಾಳಿದಾಸನಿಗೂ ಅನ್ವಯಿಸುವಂತಿದೆ. ಇದಲ್ಲದೆ ತಂಡಗದ ಮತ್ತು ಹಿಪ್ಪರಿಗೆ ಶಾಸನಗಳ

"ಆಸದಳಮುರ್ವ್ವಿಗುರ್ವ್ವಿಸುವ ಧರ್ಮ್ಮಮನೋವದೆ ಗೆಲ್ವ ವಿಕ್ರಮಂ ।
ಸಸಿಧರನೆನ್ದು ತ್ರೈಭುವನ ಬಣ್ನಿಸೆ ಬಾಣ ಮಯೂರ ದಾಸಮಂ ।
ವಸುಧೆಗೆ ಪೇಳಲ್......................................"[೬೫]

"................. ಕಾಳಿದಾಸನೆನೆ ಬಾಣ ಮಯೂರ ಕವಿವ್ರಜಂ ಸವಿ ।
ಸ್ತರದೊಳೆ ಮೂಱುಲೋಕಮಱಿಯಲ್ ನೆಱೆ ಕಣ್ಬಡೆದಂತೆ ರೂಢಿಸು ।
ತ್ತಿರೆ ಕವಿಳಾಸ ಭೂಮಿಯೆನಿಸಿರ್ದುದು ವಿಶ್ವಜನಕ್ಕೆ ಕೂಡೆ ಹಿ ।
ಪ್ಪರಿಗೆ..."[೬೬]

ಎಂದು ಈ ಎರಡು ಪದ್ಯಗಳು ಬಾಣ, ಮಯೂರ ಮತ್ತು ಕಾಳಿದಾಸ ಕವಿಗಳನ್ನು ಒಟ್ಟಿಗೆ ಉಲ್ಲೇಖಿಸಿವೆ. ಇದಲ್ಲದೆ

ಭಾರತಿ ಕೇಯೂರ ರಾಜ।ಶೇಖರನಾಮಾತ್ ಭಾರವೀ ।
ಸಾಕ್ಷಾತ್ ಬಾಣಂ ಮಯೂರಂ । ವಾಲ್ಮೀಕಿ ಕಾಲಿದಾಸಂ ವ್ಯಾಸಂ।[೬೭]

---

೬೨. EI.V. ಪು. ೨೪೫, ಅಬ್ಬಲೂರು, ಕ್ರಿ.ಶ. ೧೨೦೦

೬೩. EC.III-I ಮಂಡ್ಯ ೮೩ ಮರಡಿಪುರ, ಕ್ರಿ.ಶ. ೧೨೮೦

೬೪. SIII, XVII -ಪು.೮, ಕುಡತಿನಿ, ಕ್ರಿ.ಶ. ೧೨೮೦?

೬೫. EC.XI ಚಿಕ್ಕನಾಯಕನಹಳ್ಳಿ ೧೮ ತಂಡಗದಗ್ರಾಮ, ಕ್ರಿ.ಶ. ೧೧೪೯

೬೬. SII.XX No. ೧೭೮ ಹಿಪ್ಪರಿಗೆ, ಕ್ರಿ.ಶ. ೧೧೯೨

೬೭. EC.VIII ನಗರ ೩೫ ಹುಮ್ಮಚ, ಕ್ರಿ.ಶ. ೧೦೭೭

ಎಂದು ಹುಮ್ಮಚ ಶಾಸನದಲ್ಲಿ ಕಾಳಿದಾಸನ ಆದರ್ಶವನ್ನು ಮನ್ನಿಸಲಾಗಿದೆ. ಇನ್ನು

"ಬಾಣ ಮಯೂರ ಕಾಳಿದಾಸ ಕೇಸಿರಾಜ ದಣ್ನಾಯಕ"[೬೮]

ಎಂದು ಮರಡಿಪುರ ಶಾಸನ ಈತನನ್ನು ಶಿವಶರಣರ ಮಧ್ಯೆ ಸ್ಮರಿಸಿದೆ.

ಹಲಾಯುಧ

ಈ ಹೆಸರಿನ ವ್ಯಕ್ತಿಗಳು ಅನೇಕರಿದ್ದರೂ ಶರಣರು ಹೇಳುವ ಹಲಾಯುಧನು 'ಮಹಿಮ್ನಸ್ತೋತ್ರ'ದ ಕರ್ತೃವಾಗಿರಬೇಕು. ಈತನ ಮಹಿಮ್ನಸ್ತೋತ್ರವನ್ನು ನರ್ಮದಾ ತೀರದ ಮಾಂಧಾತಪಟ್ಟಣದ ಅಮರೇಶ್ವರ ದೇವಾಲಯದ ಮುಂದಣ ಕಲ್ಲ ಮೇಲೆ ಕಂಡರಿಸಲಾಗಿದೆ. ಅಬ್ಬಲೂರ ಶಾಸನದಲ್ಲಿ

"ಓಹಿಲ ದಾಸ ಚೆನ್ನ ಸಿರಿಯಾಳ ಹಳಾಯುಧ ಬಾಣನುದ್ಭಟರ್"[೬೯] ಎಂದು ಶಿವಶವಣರ ಜೊತೆಯಲ್ಲಿ ಇವನ ಉಲ್ಲೇಖ ಬಂದಿದೆ.

ಉದ್ಭಟ

ತನ್ನ ಪಟ್ಟಣದೊಂದಿಗೆ ಕೈಲಾಸಕ್ಕೆ ಹೋದ ಉದ್ಭಟನ ವಿಷಯ ಹಲವು ವೀರಶೈವ ಕೃತಿಗಳಲ್ಲಿ ಗೋಚರಿಸುತ್ತದೆ. ಈ ಹೆಸರು

"ಸಿರಿಯಾಳ ಹಳಾಯುಧ ಬಾಣನುದ್ಭಟರ್..."[೭೦]

"ಚೋಳನುದ್ಭಟನತರ್ಕ್ಯಂ ಸಿಂಧುಬಲ್ಲಾಳ..."[೭೧]

".......ಉದ್ಭಟ ನಂಬಿ ಕುಂಬಾರಗುಂಡ....."[೭೨]

ಎಂದು ಅಬ್ಬಲೂರ, ಹಿರಿಯೂರ, ಮರಡಿಪುರ ಶಾಸನಗಳಲ್ಲಿ ಕಂಡುಬರುತ್ತದೆ.

ಮಳಯೇಶ್ವರ

'ಮಲಯರಾಜೀಯ'ವೆಂಬ ಕೃತಿಯನ್ನು ಬರೆದ ಮಳಯೇಶ್ವರನ ಇನ್ನೊಂದು ಹೆಸರು ಮಳೆಯರಾಜ. ಅಬ್ಬಲೂರ ಶಾಸನದ

"ದೇಹದೊಳೊಂದಿ ಬಂದ ಮಳಯೇಶ್ವರ..."[೭೩]

ಎಂಬ ವಾಕ್ಯದಿಂದ ಈತನು ದೇಹಸಹಿತ ಕೈಲಾಸಕ್ಕೆ ಹೋದನೆಂದು ವೇದ್ಯವಾಗುತ್ತದೆ.

---

೬೮. EC.III.-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

೬೯. EI.V. P. 245 ಅಬ್ಬಲೂರು, ಕ್ರಿ.ಶ. ೧೨೦೦?

೭೦. EC. V. P. 245 ಅಬ್ಬಲೂರು, ಕ್ರಿ.ಶ. ೧೨೦೦?

೭೧. EC.V-ii ಅರಸಿಕೆರೆ ೧೦೯ ಹಿರಿಯೂರ, ಕ್ರಿ.ಶ. ೧೨೫೯

೭೨. EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

೭೩. EI.V. P. 245 ಅಬ್ಬಲೂರು, ಕ್ರಿ.ಶ. ೧೨೦೦?

ಭೋಜ

ಸಂಸ್ಕೃತ ಕವಿಗಳಿಗೆ ಉದಾರ ಆಶ್ರಯ ನೀಡಿದ ಚಕ್ರವರ್ತಿಗಳಲ್ಲಿ ಭೋಜನ ಹೆಸರು ಸುಪ್ರಸಿದ್ಧವಾದುದು. ಶರಣರು ಸ್ಮರಿಸುವ ಭೋಜ ಈತನೋ ಮತ್ತೊಬ್ಬನೋ ಸ್ಪಷ್ಟವಿಲ್ಲ. ಈ ಹೆಸರು ಕಲ್ಲೇದೇವರಪುರ ಶಾಸನಲ್ಲಿ

"ಚೆಂನ ಹೊಂನ ಬಂಕ ಬಸವರಾಜ ಭೋಜಾದಿ"[೭೪]

ಎಂದು ಹಲವು ಶಿವಶವಣರ ಗೌರವಕ್ಕೆ ಪಾತ್ರರಾದ ಬಾಣ, ಮಯೂರ, ಓಹಿಲ, ಕಾಳಿದಾಸ, ಹಲಾಯುಧ, ಉದ್ಭಟ, ಮಳಯೇಶ್ವರ ಮತ್ತು ಭೋಜ ಎಂಬ ಶಿವೋಪಾಸಕರು ಶಾಸನಗಳಲ್ಲಿ ಕಂಡುಬರುತ್ತಾರೆ.

ಬಸವಪೂರ್ವ ಯುಗದ ಶರಣರು-೨:

ಅರುವತ್ತುಮೂವರ ಅಚಲಭಕ್ತಿ, ನಕುಲೀಪಾಶುಪತರ ಸ್ಥಾವರಪೂಜೆ, ದೇವಾಲಯ ನಿರ್ಮಾಣಗಳೆಂಬ ಪ್ರಾಚೀನ ಆಚರಣೆಗಳನ್ನು ಮತ್ತು ವೀರಶೈವರ ಇಷ್ಟಲಿಂಗೋಪಾಸನೆ ಷಟ್ಸ್ಥಲಾಚರಣೆಗಳೆಂಬ ನವೀನ ಆಚರಣೆಗಳನ್ನು ಮೇಳವಿಸಿಕೊಂಡು ಬದುಕಿದವರು ಷೋಡಶರು, ತೇರಸರು, ದಶಗಣರು ಮತ್ತು ಜೇಡರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ರೇವಣಸಿದ್ಧ ಮೊದಲಾದವರು. ಸಂಕ್ರಮಣಯುಗದ ಈ ಮಹಿಮರನ್ನು ಕುರಿತ ಶಾಸನಗಳಲ್ಲಿ ಕೆಳಗಣ ತಾಳಿಕೋಟೆ ಶಾಸನ (ಕ್ರಿ.ಶ. ೧೧೮೪) ಹಲವು ದೃಷ್ಟಿಗಳಿಂದ ಮಹತ್ವಪೂರ್ಣವೆನಿಸಿದೆ.

೧. ದಿಂ ಮುಱಿವರುಂ ಪರಸಮಯ ಗಿರಿವಜ್ರದಂಡರುಂ ಜಗದಲುದ್ದಂ

೨. ಡರುಂ ಜಿನಸಮಯವನದಹನದಾವಾನಳರುಂ ಮುನಿದರ್ಗ್ಗೆ

೩. ಹಾಳಾಹಳರುಂ ಬೌದ್ಧಸಮಯವಿದ್ವಂಸನಪ್ರವೀಣರುಂ ಬಗೆ

೪. ಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರನೆತ್ತುವರುಂ ಸೆ

೫. ಣಸುವರ ನೆತ್ತರಂ ಮರುಳ್ಗಳಿಂ ಕುಡಿಸುವರುಂ ಪರಸಮಯ

೬. ಘರಟ್ಟರುಂ ವೀರಕು(ಪ್ಪ)ರವಟ್ಟರುಂ ಕಾಲನ ನಾಲಗೆಯಂ ಕೀಳ್ವರುಂ

೭. (ಬಾ)ರಿಯಂ ಕೂರದರ್ಗ್ಗಿವರುಂ ನಂಜನಂಜದುಂಬರುಂ

೮. XXXಱಿಸಿ ಮಾರ್ಕ್ಕೊಳ್ವರುಂ ಬಹುವಿಧ ನಿಷ್ಠಾವಶೀಕ್ರಿತ ಜ

೯. XXX(ರುಂ) ಅಸಂಖ್ಯಾತ ಸಂಖ್ಯಾಭಿಧೇಯ ಮಹಾ

೧೦. XXXಪರಸಮಯ ಸರಸಿಜಾತ ಸಮೂಹ ಮದಕರಿಗಳಂ

೧೧. XXX(ಹು) ವಿಧನಿಷ್ಠೆಯಿಂ ಹರನಂ ಪರಿಕ್ಸಿ ಭವಮನಂತರ್ಗ್ಗಿ ಪರಸಮ

---

೭೪. EC,XI. ಜಗಳೂರ ೩೦. ಕಲ್ಲೇದೇವರಪುರ, ಕ್ರಿ.ಶ. ೧೨೭೯

೧೨. XXXಮಂ ಸಂಹರ್ಸಿ ಜರಮಂ ಮಾಂಕರಿಸುವುದ್ದಂಡರುಂ

೧೩. XXXಲೆ ಗಂಡರುಂ ಪರಿಯಳಿಗೆ ಅಣೆಲೆವಾಡ ಉಣಕಲ್ಲು ಸಂ

೧೪. ಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂ

೧೫. ಬಾವಿ ಬಮ್ಮುಕೂರು ಮೊದಲಾಗಿ ಅನನ್ತದೇಶದೇಶಾನ್ತರದಲಿದಿ

೧೬. ರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮಕನಾಂಪಂಗೊ

೧೭. ಳ್ಸಿ ಬಸದಿಗಳಂ ಪೊಸದುಮುಕ್ಕಿ ಶಿವಲಿಂಗಸಿಂಹಾಸನಮಂ (ಕ)

೧೮. ಣ್ಗೊಳ್ಸಿ ಚಲಮಂ ಮೆಱೆದು ಧೀರರೊಳು ನೆಱೆದು ಸ್ವರ್ಗ್ಗ ಮರ್ತ್ಯ

೧೯. ಪಾತಾಳದೊಳನಂಗಾರಿಯ ಹೆಮ್ಮೆಯಂ ತಮ್ಮ ಭ್ರಿ

೨೦. ತ್ಯಾಚಾರದ ತೊಮ್ಮೆ್ರಯಂ ತಳದಲಿಕ್ಕಿ ತೋರ್ಪ್ಪನ್ತೆ ತೋರಿದ ಪುರಾತ

೨೧. ನ ನೂತನರೆನಿಸಿದ ಅಸಂಖ್ಯಾತಗಣಂಗಳ ನಾಮಾದಿ ಸ

೨೨. ಮಸ್ತ ಪ್ರಶಸ್ತಿಸಹಿತಂ॥..[೭೫]

ಪರಿಯಳಿಗೆ, ಅಣೆಲೆವಾಡ ಮೊದಲಾದ ಹತ್ತು ಗ್ರಾಮಗಳಲ್ಲಿ ಪರಸಮಯವನ್ನು ಧ್ವಂಸಗೊಳಿಸಿ ಶಿವಸಮಯವನ್ನು ಸಮುಜ್ವಲಗೊಳಿಸಿದ ವೀರಶರಣರನ್ನು ಉಲ್ಲೇಖಿಸುತ್ತದೆ, ಈ ಶಾಸನ. 'ಶಿವಲಿಂಗಸಿಂಹಾಸನ'ವನ್ನು ಸ್ಥಾಪಿಸುವುದರ ಮೂಲಕ ಸ್ಥಾವರಲಿಂಗಪೂಜೆಯನ್ನು ಮನ್ನಿಸಿದ ಈ ಹತ್ತುಜನರಲ್ಲಿ ಕೆಲವರು ಸಂಕ್ರಮಣ ಕಾಲದಲ್ಲಿ, ಕೆಲವರು ಬಸವಣ್ಣನವರ ಕಾಲದಲ್ಲಿ ಬಾಳಿದವರು. ಷೋಡಶರು, ತೇರಸರು, ದಶಗಣರು ಎಂಬ ವರ್ಗಗಳಲ್ಲಿ ಸಮಾವೇಶಗೊಳ್ಳುವ ಇವರಲ್ಲಿಯ ಕೆಲವರನ್ನು ಮತ್ತು ಇಂಥವರನ್ನು ಕುರಿತ ಶಾಸನಗಳನ್ನು ಇಲ್ಲಿ ಅವಲೋಕಿಸಬಹುದು.

ಷೋಡಶರು-ಗುಡ್ಡವ್ವೆ (ಅಣಂಪೂರು)

ಷೋಡಶಗಣದಲ್ಲಿ ಗುಡ್ಡವ್ವೆಘೆಯದು ಸುಪ್ರಸಿದ್ಧ ಹೆಸರು. ವೈಷ್ಣವರು ಕಿತ್ತೊಗೆದ ಅಣಂಪೂರ 'ಬಾಲಬ್ರಹ್ಮೇಶ್ವರಲಿಂಗ'ವನ್ನು ತನ್ನ ಷೋಡಶಗಣದ ಬೆಂಬಲದಿಂದ ಪುನಃ ಸ್ಥಾಪಿಸಿದ ಈ ವೀರಮಹಿಳೆಯ ವಿಷಯ ಹಲವು ಶಾಸನಗಳಲ್ಲಿ ಎಡೆಪಡೆದಿದೆ.

ತಾಳಿಕೋಟೆ ಶಾಸನ:[೭೬] **(ಕ್ರಿ.ಶ. ೧೧೮೪):** "......... ಪರಿಯಳಿಗೆ ಅಣೆಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂಬಾವಿ ಬಮ್ಮುಕೂರು ಮೊದಲಾಗಿ ಅನನ್ತದೇಶದೇಶಾನ್ತರದಲಿದಿರಾದ ಪರಸಮಯಿಗಳ ಪಡಲ್ವಡಿಸಿ...." ಎಂಬ ವಾಕ್ಯದಲ್ಲಿಯ 'ಅಣಂಪೂರು' ಗುಡ್ಡವ್ವೆಯನ್ನು ಸೂಚಿಸುತ್ತದೆ. ಇಲ್ಲಿಯ ವೀರವರ್ಣನೆ ಇವಳ ಕಲಿತನಕ್ಕೆ ಸಾಕ್ಷಿಯಾಗಿ ನಿಂತಿದೆ.

---

೭೫. SIII.XV No. 56 ತಾಳಿಕೋಟೆ, ಕ್ರಿ.ಶ. ೧೧೮೪. ೭೬. ಅದೇ.

ಇಂಗಳಗಿ ಶಾಸನ[೭೭] (ಕ್ರಿ.ಶ. ೧೨೦೯): "........ಸಮಸ್ತಲೋಕಾಲೋಕ ಚಕ್ರವರ್ತಿಯುಂ ಶಾಸ್ವತಯೈಶ್ವರ್ಯಮೂರ್ತಿಯುಮಪ್ಪ ಮಹಾಲಿಂಗದೇವರ ಉರಿಗಂಣ ಜ್ವಾಲೆಯಿಂದುದಯಿಸಿದ ಮಹಾವೀರಗಣಂಗಟಸಂಖ್ಯಾತರ ಮಹಿಮೆಯೆಂತೆಂದೊಡೆ

ಕರಕರನಂ ಸೆಂಡಾಡುವ
ರುರಗಪನಂ ಕೀಱಲಿಟ್ಟು ಬಿಟ್ಟಿಕ್ಕುವರಾ ।
ಗಿರಿಕುಟಿಮಂ ಕಿತ್ತೆತ್ತುವ ।
ರುರಿಯೊಟು ಪರಿಮಱಿಯಾಡುತಿರ್ಪ್ಪರು ಸರಣರ್ ॥"

ಎಂದು ಶರಣರ ಸಾಮರ್ಥ್ಯವನ್ನು ಉದ್ಘೋಷಿಸುವ ಈ ಶಾಸನದಲ್ಲಿ "ಯಿಂತಿವರೇಕಸ್ತರಾಗಿ ಶ್ರೀ ಮೂಲಸ್ತಾನದೇವರ ಪಾದಾರಾಧಕಿಯುಮಪ್ಪ ಕ್ಷೇತ್ರಸಂನ್ಯಾಸಿ ಮಹಾನುಭಾವೆಯರಪ್ಪ ಬಲವ್ವೆಗಳ ಕಾಲು ತೊಳೆದು ಧಾರಾಪೂರ್ಬಕಂ ಮಾಡಿ ಶ್ರೀ ಸಿದ್ಧರಾಮನಾಥದೇವರ್ಗ್ಗಂ..... ಕೇದಾರದೇವರು ನಾಗೇಶ್ವರಯಿಂತೀ ಸಕಳಲಿಂಗದೇವರಿಗೆ ಶ್ರೀ ಗುಡ್ಡವ್ವೆಗಟು ಮುಖ್ಯವಾಗಿ ಗಣಮಠಕ್ಕೆ ಕೊಟ್ಟ ವೃತ್ತಿ...." ಎಂಬ ಭಾಗ ಬರುತ್ತದೆ.

ಗುಡ್ಡವ್ವೆಗಳ ಹಿರಿತನದಲ್ಲಿ ಬಲವ್ವೆಗಳ ಕಾಲು ತೊಳೆದು ಶಿವಲಿಂಗಗಳಿಗೆ ದತ್ತಿ ನೀಡಿದುದು ಈ ಶಾಸನದ ವಿಷಯ. ಈ ಗುಡ್ಡವ್ವೆಯು ಷೋಡಶಗಣಕ್ಕೆ ಸಂಬಂಧಿಸಿದವಳೆಂದು ಪಂಡಿತರ ಮತ. "ಕರಿಕರನಂ ಸೆಂಡಾಡುವರ್..." ಎಂಬ ಪದ್ಯ ಈಕೆಯ ಕಲಿತನವನ್ನು ವ್ಯಕ್ತಪಡಿಸುತ್ತದೆ.

ವಿಜಾಪುರ ಶಾಸನ-೧[೭೮]: "ದೇಬ್ಯಾ ಪೂಜಾಮಹಾನನ ಕ್ಷೇತ್ರವಾಸಿಯ ಚಿಹ್ನಂಗಳೆಂತೆಂದೊಡೆ

ಅXXಸತ್ಯವಾದೀಚ ಬ್ರಹ್ಮಚಾರೀ ದ್ರಿಢವ್ರಿ(ವೃ)ತಂ ।
ಸಿವಭಕ್ತ! ಕ್ಷಮಾಯುಕ್ತ! ಕ್ಷೇತ್ರವಾಸೀ ಸಮರ್ಚ್ಯತೇ ॥
ಪ್ರಾತಃ ಸ್ನಾಯೀ ನಕ್ತ ಭೋಜೀ ಸಪೂಜಾಮಹಾಸ್ತಪೋಂನ್ವಿತಃ ।
ಯೇತದ್ಗುಣಯ್ವ(ರ್ಣೈಃ) ಹೀನಸ್ತು ಪೂಜಿಕೋಪಿ ನ ಚಾರ್ಹತಿ॥

ಯಿಂತಹ ಕ್ಷೇತ್ರವಾಸಿ ದೇವಿಯ ತ್ರಿಕಾಲಪೂಜೆಯ ಮಾಡಿಕೊಂಡಿಹನು. ಆತಂಗೆ ಅಸನಾಚ್ಛ್ಯಾದನವ ನಡೆಸಿ, ವರುಸಂಪ್ರತಿ ದೇವಿಯ ಭಂಡಾರದಲ್ಲಿ ಹೊಂನನು ಕೊಂಡಿಹನು. ಮೂವತ್ತುಗೇಣು ಬಾಚಿವಿಡಿಯ XX ದಾನಚಿಂತಾಮಣಿಯ ಘಳೆಯೆನಿಸುವ ಗುಡ್ಡಾದೇವಿಯ ಭೂಮಿಯೊಳಗೆ ಅಟ್ಟಗೆಱೆಯಲು ಯಿಬ್ಬರು ಪೂಜಾರಿಯರಿಗೆ ಮತ್ತ ೧೦, ವುತ್ತಮದ ಮದ್ದಳಿಗಂಗೆ ಮತ್ತ ೭, ಮಧ್ಯXದ ಮದ್ದಳಿಗಂಗೆ ಮತ್ತು ೪, ಪುರದ ತಳಾಜಿತ XXಡೆ ಯೆರಡುಳಿನಲು ನಡವದಕ್ಕೆ ಕೊಟ್ಟ ಮತ್ತ ೫. ಆತಂಗೆ ಪುರದ ವೈದಿಗೊಳರ ಕೊXXವೆನೆದೆಱು ಪ್ರಜೆಯ ಕಯ್ಯಲುXXವಂಗೆ ಮ ೨ ಲೈಕ್ಕದಲು ಎತ್ತಿಕೊಂಬನು. ಕಯಿಧಾರೆಯ ಮದುವೆಗೆ ಮ ೧೦. ಹಾಲುಕೂಳಿಂಗೆ ಮ ೪೦. ದೇವಿಯ ಪ್ರಸಾದ ಪ್ರಾತಃಕಾಲಿನದು ಗಣಮಠಕ್ಕೆ, ಮಧ್ಯಾಹ್ನಕಾಲಿನದು ಪೂಜಾರಿಗಳಿಗೆ, ಸಾಯಂಕಾಲಿನದು ಕ್ಷೇತ್ರವಾಸಿಗೆ, ಲಿಂಗಪ್ರಸಾದುಂನತಂ ತಾXXಲಂಗೆ ಆತಂಗೆ ದೇವಿಯ ಭಂಡಾರದಲ್ಲಿಯ....." (ದತ್ತಿ ವಿವರಣೆ ಇದೆ).

---

೭೭. ಶ.ಸಾ. ೨೧-೧ ಇಂಗಳಗಿ, ಕ್ರಿ.ಶ. ೧೨೦೯
೭೮. INK AND KS NO.21B

ವಿಜಾಪುರ ಶಾಸನ-೨೯ (ಕ್ರಿ.ಶ. ೧೨೭೮): "......... ಸ್ವಸ್ತಿ ಶ್ರೀ ಸಕ ೧೨೦೦ ನೆಯ ಬಹುಧಾನ್ಯ ಸಂವತ್ಸರದ ವೈಶಾಖ ಸು. ೧೫ ಯಾದಿವಾರದಲು ಶ್ರೀ ತೇಜೇಸ್ವರ, ಶ್ರೀ ವರದಾನಿ, ಶ್ರೀ ಪುರುಶೇಸ್ವರದೇವರ ಪ್ರತಿಷ್ಠೆಯಂ ಮಾಡಿ ಪುರವಂ ರಚಿಯಿಸಿಯಾ ದೇವರುಗಳ ಅಂಗಭೋಗ ರಂಗಭೋಗಕ್ಕೆ ಶ್ರೀಮಂಡಳಿಕ ಮಹಾದೇವ ರಾಣೆಯರು..." (ದತ್ತಿ ವಿವರಣೆ ಇದೆ).

ಈ ಶಾಸನಗಳಲ್ಲಿ ಮಿತಿಯನ್ನೊಳಗೊಂಡುದು ಎರಡನೆಯ ಶಾಸನ. ಇದರ ಕಾಲ ಕ್ರಿ.ಶ. ೧೨೭೮. ಇಲ್ಲಿ ಬರುವ ಶ್ರೀ ವರದಾನಿಯ ಪ್ರತಿಷ್ಠಾಪನಾ ಉಲ್ಲೇಖ ಆ ಕಾಲದಲ್ಲಿ ನಡೆಯುತ್ತಿದ್ದ ಗುಡ್ಡವ್ವೆಯ ಮೂರ್ತಿಪೂಜೆಯನ್ನು ತಿಳಿಸುತ್ತದೆ. ಇಲ್ಲಿ ಕಂಡುಬರುವ ಅರ್ಚಕನಿಗಿರಬೇಕಾದ ಅರ್ಹತೆಗಳು ಮತ್ತು ವರದಾನಿ, ದಾನಚಿಂತಾಮಣಿ ಎಂಬ ಗುಡ್ಡವ್ವೆಯ ವಿಶೇಷಣಗಳು ಗಮನಾರ್ಹವೆನಿಸಿವೆ.

ನಾಚಯ್ಯ (ಮಾರುಡಿಗೆ)

ವೀರಶೈವಪುರಾಣಗಳ ಪ್ರಕಾರ ಷೋಡಶ ಮತ್ತು ತೇರಸಗಣದ ಮಧ್ಯಕಾಲದಲ್ಲಿ ಬದುಕಿದ ಶರಣನೀತ, ಶಿವಭಕ್ತನನ್ನು ಹಿಂಸಿಸಿದ ಜೈನರನ್ನು ತೇರಸರ ಬೆಂಬಲದಿಂದ ಕೊಂದುಹಾಕಿದ ಇವನ ವಿಷಯ ಮೇಲೆ ಹೇಳಿದ ತಾಳಿಕೋಟೆ ಶಾಸನದ (ಕ್ರಿ.ಶ. ೧೧೮೪) "ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರ ಕರಹಾಡ ಕೆಂಭಾವಿ ಬಮ್ಮುಕೂರ...."[೮೦] ಎಂಬ ವಾಕ್ಯದಲ್ಲಿ 'ಮಾರುಡಿಗೆ' ಎಂಬ ಪದದ ಮೂಲಕ ಸೂಚಿತವಾಗಿದೆ. ಜೈನರನ್ನು ಸಂಹರಿಸಿದ ನಾಚಯ್ಯನ ಶೌರ್ಯವನ್ನು ಈ ಶಾಸನದ ವೀರವರ್ಣನೆಯಿಂದ ಅರ್ಥಮಾಡಿಕೊಳ್ಳಬಹುದು.

ತೇರಸರು

ಷೋಡಶರ ತರುವಾಯ ಶಿವಧರ್ಮವನ್ನು ಕಲಿತನದಿಂದ ಕಾಪಾಡಿದ ಈ ವೀರ ಶರಣರ ಸಂಖ್ಯೆ ಹದಿಮೂರು. ಇವರನ್ನು ಕುರಿತು ಶಾಸನಗಳು ಈವರೆಗೆ ಲಭಿಸಿಲ್ಲ.

ದಶಗಣರು-ಸಿಂಗಿದೇವ

ಗಣಸಹಸ್ರನಾಮಾವಳಿಯಲ್ಲಿ ತೇರಸರ ತರುವಾಯ ಬರುವವರು ದಶಗಣರು. ಈ ಹತ್ತುಜನರಲ್ಲಿ ಒಬ್ಬನಾದ ಸಿಂಗಿದೇವನ ಉಲ್ಲೇಖ ವೀರಶರಣರನ್ನು ಪ್ರಸ್ತಾಪಿಸುವ ಇಂಗಳಗಿ ಶಾಸನ (ಕ್ರಿ.ಶ. ೧೨೦೯)ದ ".......ಯಿನ್ತಿವರೇಕಸ್ತರಾಗಿ.... ಶ್ರೀ ಸಿದ್ಧರಾಮನಾಥದೇವರ್ಗ್ಗಂ ದಸಗಣ ಸಿಂಗಿದೇವ ಬಿಜ್ಜೇಶ್ವರದೇವರು.... ನಾಗೇಶ್ವರ ಯಿಂತೀ ಸಕಳಲಿಂಗದೇವರಿಗೆ.... ಕೊಟ್ಟ ವೃತ್ತಿ..."[೮೧] ಎಂಬ ಭಾಗದಲ್ಲಿ ಒಡಮೂಡಿನಿಂತಿದೆ. ಇಲ್ಲಿ ಲಿಂಗರೂಪದ ದಶಗಣ ಸಿಂಗಿದೇವನ ಉಲ್ಲೇಖವಿರುವುದರಿಂದ ಕ್ರಿ.ಶ. ೧೨೦೯ರ ಸುಮಾರಿಗೆ ಆತನು ದೇವರೆಂದು ಪೂಜೆಗೊಳ್ಳುತ್ತಿದ್ದುದು ವ್ಯಕ್ತವಾಗುತ್ತದೆ.

ಷೋಡಶರು, ತೇರಸರು, ದಶಗಣಗಳಲ್ಲದೆ ಇದೇ ಸುಮಾರಿಗೆ ಬದುಕಿರಬಹುದಾದ ಇನ್ನೂ ಕೆಲವು ಶಿವಶರಣರನ್ನು ಮೇಲಣ ತಾಳಿಕೋಟೆ ಶಾಸನದಲ್ಲಿ ಬರುವ ಊರುಗಳ ಮೂಲಕ ಗುರುತಿಸಬಹುದಾಗಿದೆ.

---

೭೯. INK AND KS NO.21A ಕ್ರಿ.ಶ. ೧೨೬೮.

೮೦. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೧. ಶ.ಸಾ. ೨೧-೧. ಇಂಗಳಗಿ, ಕ್ರಿ.ಶ. ೧೨೦೯.

ವೈಜಕವ್ವೆ (ಪರಿಯಳಿಗೆ)

ಜಿನಭಕ್ತನಾದ ಗಂಡನು ಶಿವಭಕ್ತಳಾದ ಇವಳಿಗೆ ತೊಂದರೆ ಕೊಟ್ಟ ಕಾರಣ ಎಷ್ಟು ಪ್ರಯತ್ನಿಸಿದರೂ ತೆರೆಯದಿದ್ದ ಊರ ಬಸದಿಯ ಬಾಗಿಲು ಇವಳ ಹಸ್ತಸ್ಪರ್ಶದಿಂದ ತೆರೆಯಿತು. ಆಗ ಜಿನಬಿಂಬ ಒಡೆದು ಉದ್ಭವಿಸಿದ ಶಿವಲಿಂಗದಲ್ಲಿ ಈಕೆ ಐಕ್ಯವಾದಳು ಎಂದು ಪುರಾಣದ ಕಥೆ.

ಪರಸಮಯಿಗಳಂ ಪಡಲ್ವಡಿಸಿದ ಶರಣರನ್ನು "ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ..."[೮೨] ಎಂದು ಅವರ ಗ್ರಾಮಗಳ ಮೂಲಕ ಹೆಸರಿಸುವ ತಾಳಿಕೋಟೆ ಶಾಸನದ (ಕ್ರಿ.ಶ. ೧೧೮೪) 'ಪರಿಯಳಿಗೆ'ಯು ವೈಜಕವ್ವೆಯನ್ನು ಸೂಚಿಸುತ್ತದೆ.

..........?.................. (ಅಣಿಲೆವಾಡ)

ತಾಳಿಕೋಟೆ ಶಾಸನದಲ್ಲಿ ಕಂಡುಬರುವ ಪರಸಮಯಿಗಳನ್ನು ಪಡಲ್ವಡಿಸಿದ ಶರಣರ ಗ್ರಾಮಗಳಲ್ಲಿ 'ಅಣಿಲೆವಾಡ'ವೂ ಒಂದು.[೮೩] ಈ ಗ್ರಾಮದ ಬಗ್ಗೆ, ಅಲ್ಲಿ ಬಾಳಿದ ಶಿವಶರಣನ ಬಗ್ಗೆ ಈವರೆಗೆ ಏನೂ ತಿಳಿದುಬಂದಿಲ್ಲ.

.........................?.................. (ಉಣಕಲ್ಲು)

'ಪರಸಮಯ ಗಿರಿವಜ್ರದಂಡರುಂ' ಎನಿಸಿದ ಶರಣರನ್ನು ಗ್ರಾಮಗಳ ಮೂಲಕ ಸೂಚಿಸುವ ತಾಳಿಕೋಟೆ ಶಾಸನ (ಕ್ರಿ.ಶ. ೧೧೯೪)ದಲ್ಲಿ[೮೪] 'ಉಣಕಲ್ಲು' ಎಂಬ ಹೆಸರು ಕಂಡುಬರುತ್ತದೆ. ಇದು ಧಾರವಾಡ ಸಮೀಪದ ಉಣಕಲ್ಲು ಆಗಿರಬಹುದು. ಇಲ್ಲಿ ಬಾಳಿದ ಶರಣನ ವಿಷಯ ಇನ್ನೂ ಬೆಳಕಿಗೆ ಬಂದಿಲ್ಲ.

.........................?...................... (ಸಂಪಗಾವಿ)

ತಾಳಿಕೋಟೆ ಶಾಸನ (ಕ್ರಿ.ಶ. ೧೧೮೪)ದಲ್ಲಿ 'ಸಂಪಗಾವಿ' ಎಂಬುದು ಶರಣನೊಬ್ಬನ ಗ್ರಾಮವೆಂಬಂತೆ ಉಲ್ಲೇಖಿತವಾಗಿದೆ.[೮೫] ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ ಈ ಊರಿನಲ್ಲಿ ಆಗಿಹೋದ ಶರಣನ ವಿಷಯ ಏನೂ ತಿಳಿದುಬಂದಿಲ್ಲ.

..........................?....................... (ಕರಹಾಡ)

ತಾಳಿಕೋಟೆ ಶಾಸನ(ಕ್ರಿ.ಶ. ೧೧೮೪)ದಲ್ಲಿ 'ತಮ್ಮ ಭೃತ್ಯಾಚಾರವನ್ನು' ಪ್ರಕಟಿಸಿದ ಶರಣರ ಗ್ರಾಮಗಳನ್ನು ನಿರ್ದೇಶಿಸುತ್ತ, 'ಕರಹಾಡ' ಎಂಬ ಹೆಸರನ್ನು ಉಲ್ಲೇಖಿಸಲಾಗಿದೆ.[೮೬] ಇದು ಮಹಾರಾಷ್ಟ್ರ ಪ್ರಾಂತದ ಕರಹಾಡವಾಗಿರಬಹುದು. ಇಲ್ಲಿ ಆಗಿಹೋದ ವೀರಶರಣನ ವಿಷಯ ಇನ್ನೂ ಗೊತ್ತಾಗಿಲ್ಲ.

---

೮೨. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೩. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೪. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೫. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೬. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

.......................?....................... (ಬಮ್ಮಕೂರು)

ಬಮ್ಮಕೂರು, ಈಗಿನ ಗುಲ್ಬರ್ಗಾ ಜಿಲ್ಲೆಯ ಬಂಕೂರು. ತಾಳಿಕೋಟೆ ಶಾಸನ (ಕ್ರಿ.ಶ. ೧೧೮೪)ದಲ್ಲಿ ಹೇಳಲಾದ ವೀರಶರಣರ ಗ್ರಾಮಗಳಲ್ಲಿ ಈ ಊರಿನ ಉಲ್ಲೇಖವಿದೆ.[೮೭] ಆದರೆ ಅಲ್ಲಿ ಬಾಳಿದ ಶಿವಶರಣನ ವಿಷಯ ಇನ್ನೂ ಗುಪ್ತವಾಗಿ ಉಳಿದಿದೆ.

ಭೋಗಣ್ಣ (ಕೆಂಬಾವಿ)

ಬಸವಣ್ಣನವರಿಗೆ ಪ್ರಾಚೀನನಾದ ಭೋಗಣ್ಣನೊಬ್ಬ ಸುಪ್ರಸಿದ್ಧ ಶರಣ. "ಪರಸಮಯಿ ಗಳಂ ಪಡಲ್ವಡಿಸಿ.... ಶಿವಲಿಂಗ ಸಿಂಹಾಸನಮಂ (ಕ)ಣ್ಗೊಳಿಸಿ"ದ ವೀರ ಶರಣರ ಗ್ರಾಮಗಳನ್ನು ಹೆಸರಿಸುವ ತಾಳಿಕೋಟೆ ಶಾಸನ (ಕ್ರಿ.ಶ. ೧೧೮೪)ದಲ್ಲಿ ಬರುವ 'ಕೆಂಬಾವಿ'ಯು ಈ ಭೋಗಣ್ಣನನ್ನು ಸೂಚಿಸುತ್ತದೆ.[೮೮] ಇದಲ್ಲದೆ

> ".........ಬಾಣನುಂಧರಭೋಗಂ ಸಲೆ ಚೋಳನುದ್ಭಟ...."[೮೯]
>
> ".........ಕಲಿಕಾಲ ಚೋಳ ಭೋಗದೇವ ಬಾಣ ಮಯೂರ..."[೯೦]

ಎಂದು ನೆನೆಯುವ ಹಿರಿಯೂರ ಮತ್ತು ಮರಡಿಪುರ ಶಾಸನಗಳಲ್ಲಿ, ಈ ಹೆಸರು ಶರಣರ ಮಧ್ಯ ಕಂಗೊಳಿಸಿದೆ.

ಮೇಲಣ ತಾಳಿಕೋಟೆ ಶಾಸನದ ಹತ್ತುಜನ ಶರಣರಲ್ಲಿ ಈವರೆಗೆ ಗುರುತಿಸಲಾದ ಐದುಜನ ಶರಣರನ್ನು ಅಣಂಪೂರ ಗುಡ್ಡವ್ವೆ (ಷೋಡಶರಲ್ಲಿ ಒಬ್ಬಳು), – ಮಾರುಡಿಗೆ ನಾಚಯ್ಯ (ತೇರಸಗಣದ ಕೊನೆಯಲ್ಲಿ ಇದ್ದವ), – ಪರಿಯಳಿಗೆ ವೈಜಕವ್ವೆ-ಕೆಂಬಾವಿ ಭೋಗಣ್ಣ-ಅಬ್ಬಲೂರು ಏಕಾಂತರಾಮಯ್ಯ (ಈತನ ವಿಷಯ ಮುಂದೆ ಬರುತ್ತದೆ) ಎಂದು ಕಾಲಕ್ರಮದಲ್ಲಿ ಹೊಂದಿಸಬಹುದು. ಮಿಕ್ಕ ಅಣಿಲೆವಾಡ, ಉಣಕಲ್ಲು, ಸಂಪಗಾವಿ, ಕರಹಾಡ, ಬಮ್ಮಕೂರುಗಳ ಶರಣರ ವಿಷಯ ತಿಲಮಾತ್ರ ತಿಳಿದುಬಂದಿಲ್ಲ.* ಭಕ್ತಿಯನ್ನು ನೆಮ್ಮಿ ಶಿವಲಿಂಗವನ್ನು ಸಂಸ್ಥಾಪಿಸಿದ ಇವರಲ್ಲಿ ಕೆಲವರು ಬಸವನಿಗೆ ಪ್ರಾಚೀನರು. ಇನ್ನು ಕೆಲವರು ಸಮಕಾಲೀನರು.

ಜೇಡರ ದಾಸಿಮಯ್ಯ

ತವನಿಧಿಯ ಪವಾಡ, ಶಂಕರದಾಸಿಮಯ್ಯನ ಸಂದರ್ಶನಗಳು ಜೇಡರ ದಾಸಿಮಯ್ಯ ಎಂಬ ಹೆಸರಿನೊಂದಿಗೆ ಮಾತ್ರ, ಘಟಸರ್ಪದ ಪವಾಡ, ಪೊಟ್ಟಲಕೆರೆಯ ಜಯಸಿಂಹ-ಸುಗ್ಗಲೆ ಯರ ಗುರುತ್ವಗಳು ದೇವರ ದಾಸಿಮಯ್ಯ ಎಂಬ ಹೆಸರಿನೊಂದಿಗೆ ಮಾತ್ರ ಹೊಂದಿಕೊಂಡು ಬರುವುದರಿಂದ ಇವರಿಬ್ಬರೂ ಭಿನ್ನರೆಂಬ ಭಾವನೆ ಹುಟ್ಟುತ್ತದೆ. ಬಸವಾದಿ ಪ್ರಮಥರ ವಚನ, ಹರಿಹರನ ಶಂಕರದಾಸಿಮಯ್ಯನ ರಗಳೆ. ಪಂಪಾಶತಕ ಮತ್ತು ಶಾಸನಗಳಲ್ಲಿ ಜೇಡರ ದಾಸಿಮಯ್ಯನ ಹೆಸರೂ

---

೮೭. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೮. SII.XV. NO. 56 ತಾಳಿಕೋಟೆ, ಕ್ರಿ.ಶ. ೧೧೮೪

೮೯. EC. V-II. ಅರಸಿಕೆರೆ ೧೧೯, ಹಿರಿಯೂರ, ಕ್ರಿ.ಶ. ೧೨೫೯

೯೦. EC.III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೧.

* ಮೇಲಿನ ಶರಣರ ಗ್ರಾಮಗಳಾದ ಮಾರುಡಿ, ಪರಿಯಳಿ, ಕರಹಾಡಗಳು ಇಂದಿನ ಮಹಾರಾಷ್ಟ್ರದಲ್ಲಿವೆ(ಸಂ). ನೋಡಿ: ಎಂ.ಎಂ. ಕಲಬುರ್ಗಿ: ಮಹಾರಾಷ್ಟ್ರದ ಕನ್ನಡ ಶಾಸನಗಳು.

ಭೀಮಕವಿಯ ಬಸವಪುರಾಣ ಮತ್ತು ತರುವಾಯದ ವೀರಶೈವಕೃತಿಗಳಲ್ಲಿ ದೇವರ ದಾಸಿಮಯ್ಯನ ಹೆಸರೂ ಕಂಡುಬರುವುದರಿಂದ ಈ ಭಾವನೆ ಇನ್ನೂ ಬಲಗೊಳ್ಳುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಇವರಿಬ್ಬರೂ ಒಬ್ಬನೇ ಎಂದು ಪಂಡಿತರು ಸಾಮಾನ್ಯವಾಗಿ ಒಪ್ಪಿಕೊಂಡಿರುವರು. ಈ ಪ್ರಶ್ನೆಯನ್ನು ಆತ್ಯಂತಿಕವಾಗಿ ಬಿಡಿಸಲು ಈಗ ಸಾಕಷ್ಟು ಸಾಮಗ್ರಿ ಇಲ್ಲದ ಕಾರಣ ಪಂಡಿತರ ಅಭಿಪ್ರಾಯವನ್ನು ತಾತ್ಪೂರ್ತಿಕವಾಗಿ ಒಪ್ಪಿಕೊಂಡು ದಾಸಿಮಯ್ಯನನ್ನು ಕುರಿತ ಶಾಸನಗಳನ್ನು ಇಲ್ಲಿ ಗಮನಿಸಬಹುದು.

ಗೊಬ್ಬೂರ ಶಾಸನ[೯೧] **(ಕ್ರಿ.ಶ. ೧೧೪೮):-** "ಪಿರಿಯ ಗೊಬ್ಬೂರಶೇಷ ಮಹಾಜನಂಗಳ ದಿವ್ಯಶ್ರೀಪಾದಪದ್ಮಾರಾಧಕರು ಶ್ರೀರಾಮೇಶ್ವರದೇವರ ಗಂಧವಾರಣರ್ ಜಾಡಕುಲತಿಲಕ ಜಾಡರ ದಾಸಿಮಯ್ಯ ಪ್ರಿಯಪುತ್ರರುಮಪ್ಪ ಸಕಳ ಜಾಡಗೊತ್ತಳಿಗಳು ಕುಲದೇವದೇವನಪ್ಪ ಗೊಜ್ಜೇಶ್ವರ ದೇವರಪೂಜೆ..."

ಜೇಡರ ದಾಸಿಮಯ್ಯನ ಮತ್ತು ಆತನ ಆರಾಧ್ಯದೈವತ ರಾಮನಾಥರ ಉಲ್ಲೇಖವನ್ನೊಳಗೊಂಡ ರಾಯಚೂರು ಜಿಲ್ಲೆಯ ಈ ಗೊಬ್ಬೂರ ಶಾಸನದ ಕಾಲ ಕ್ರಿ.ಶ. ೧೧೪೮. ಇಲ್ಲಿ ಗೊಜ್ಜೇಶ್ವರ ದೇವರಿಗೆ ದತ್ತಿ ನೀಡಿದವರು ಜೇಡರದಾಸಿಮಯ್ಯನ ಶಿಷ್ಯ (=ಪ್ರಿಯಪುತ್ರ) ಸಮೂಹ (=ಗೊತ್ತಳಿ). ಕ್ರಿ.ಶ. ೧೧೪೮ರಲ್ಲಿ ದತ್ತಿ ನೀಡಿದ ಇವರು ದಾಸಿಮಯ್ಯನ ನೇರವಾದ ಶಿಷ್ಯರೇ ಆಗಿರಬೇಕು.

ಗೊಬ್ಬೂರು ಶಾಸನ(ಮಿತಿ ದಾಖಲಿಸಿಲ್ಲ)[೯೨]: ರಾಯಚೂರು ಜಿಲ್ಲೆಯ ಗೊಬ್ಬೂರು ಗ್ರಾಮದ ಈ ಶಾಸನ ತ್ರುಟಿತವಾಗಿದೆ. ರಾಮನಾಥದೇವರ, ಗೊಜ್ಜೇಶ್ವರದೇವರ ಉಲ್ಲೇಖವಿದೆ. XX ಗಂಧವಾರನೂ ಜೇಡರಕುಳತಿಳಕ ದಾ(ಸಿಮ) XXX" ಎಂಬ ವಾಕ್ಯವಿದೆ.

ಚಿಕ್ಕ ಮುದೇನೂರ ಶಾಸನ(೧೧೬೭)[೯೨ಅ] "ಪವಿತ್ರ ಗುಣಾನುರಾಗರಪ್ಪ ಶ್ರೀಮತ್ಸರ್ವಸಮಸ್ತದಗ್ರಹಾರಂ ದಕ್ಷಿಣ ವಾರಣಾಸಿ ಮುದೆನೂರ ದಾಸೆಯ್ಯಗಳ..... ಪ್ರಮುಖ ಜನಂಗಳ..." ಚಿಕ್ಕ ಮುದೆನೂರ ಗೋಪಾಲಸ್ವಾಮಿ ದೇವಾಲಯದ ಕಂಬದ ಮೇಲಿರುವ ಈ ಶಾಸನ ಕಾಲ ಕ್ರಿ.ಶ. ೧೧೬೭. ಇಲ್ಲಿಯ ಮುದೆನೂರ ದಾಸಯ್ಯನೆಂದರೆ ಜೇಡರದಾಸಿಮಯ್ಯ. ಶರಣರು ಮೆಟ್ಟಿದ ಧರೆ ಪಾವನವಾದ ಕಾರಣ ಮುದೆನೂರಿಗೆ ಬಳಸಿದ ದಕ್ಷಿಣ ವಾರಣಾಸಿ ಎಂಬುದು ಅರ್ಥಪೂರ್ಣ ಪದ.

ಕಿರಿಯಿಂಡಿ ಶಾಸನ[೯೩] (ಕ್ರಿ.ಶ. ೧೧೯೭): ಕಿರಿಯಿಂಡಿಗೆ ಸಂಬಂಧಪಟ್ಟ, ಈಗ ವಿಜಾಪುರ ಮ್ಯೂಜಿಯಂದಲ್ಲಿರುವ ಶಾಸನವೊಂದರಲ್ಲಿ ಒಬ್ಬ 'ದೋಡರ ದಾಸ'ನ ಉಲ್ಲೇಖ ಹೀಗೆ ಬರುತ್ತದೆ:

ದೋಡರ ದಾಸನ ಕುಲದೊಳ್ ।
ನೋಡಿರೆ ಸೋಮಯ್ಯನೊಗೆದನಾತನ ಸತಿ ತಾಂ ।
ನೋಡ ಪತಿಬ್ರತೆ ಸದ್ಗುಣೆ ।
ರೂಢಿಯ ಹೊಲ್ಲೌವ್ವೆಯೆಂಬಳಬಳಾರತ್ನಂ ॥

ವಿಜಾಪುರ ಜಿಲ್ಲೆಯ ತಾಲೂಕ ಸ್ಥಳವಾದ ಇಂಡಿಯ ನೆರೆಯಲ್ಲಿರುವ ಚಿಕ್ಕ ಇಂಡಿಯ ಪ್ರಾಚೀನ ಹೆಸರು ಕಿರಿಯಿಂಡಿ. ಈ ಗ್ರಾಮಕ್ಕೆ ಸಂಬಂಧಿಸಿದ ಮೇಲಣ ಶಾಸನಲ್ಲಿ ಸೋಮಯ್ಯನನ್ನು ದೋಡರ

---

೯೧. ಶಿವಾ. ೫-೯ ಮತ್ತು ೧೦ ರಾಯಚೂರು ಜಿಲ್ಲೆಯ ಶಾಸನಗಳು(ದೇವದುರ್ಗ-೧೯)

೯೨. ರಾಯಚೂರು ಜಿಲ್ಲೆಯ ಶಾಸನಗಳು - ದೇವದುರ್ಗ - ೧೭.

೯೨ಅ. ಶಿವಾ ೫–೯ ಮತ್ತು ೧೦

೯೩. INK and KS. No. ೧೭ ಕಿರಿಯಿಂಡಿ, ಕ್ರಿ.ಶ. ೧೨೦೧.

ದಾಸನ ಕುಲದವನೆಂದು ಹೇಳಲಾಗಿದೆ. ಈ ದೋಡರ ದಾಸನೆಂದರೆ ಜೇಡರದಾಸನೆಂದು ವಿದ್ವಾಂಸರ ಅಭಿಮತ. ಸೋಮಯ್ಯನು ಜೇಡರ ದಾಸಿಮಯ್ಯನ ಮನೆತನಕ್ಕೆ ಸಂಬಂಧಿಸಿದವನೋ, ಶಿಷ್ಯಪರಂಪರೆಗೆ ಸಂಬಂಧಿಸಿದವನೋ ಸ್ಪಷ್ಟವಾಗುವುದಿಲ್ಲ. ಈ ಶಾಸನದ ಕಾಲ ಕ್ರಿ.ಶ. ೧೧೯೭.

ಗೀಜಗನಹಳ್ಳಿ ಶಾಸನ[೯೪] (ಕ್ರಿ.ಶ. ೧೨೦೧): "ಗೀಜೆಯಹಳ್ಳಿಯ........ ಇಂತಿನಿಬರುಂ, ಜೇಡರ ದಾಸಿಮಯ್ಯನ ಮಗ ಕಾಟಿಗೌಡನು ಗೀಜೆಯಹಳ್ಳಿಯ ಮುಱಿಹಿಂಡಿಯ ಹೊಲವೇರಿಯ ಸೀಮೆಯಲ್ಲಿ ಕಟ್ಟಿಸಿದ ಕೆಱೆಗೆ ಬಿಟ್ಟ ಗದ್ದೆ ಉಂಬಳಿ ಖಂ ೫. ಮೂಗಂಡುಗದೊಳಗೆ ಕೋಟೆಹಾಳ ಗೊಜ್ಜೇಶ್ವರ ದೇವರಿಗೆ ಕಾಟಿಗೌಡ ಬಿಟ್ಟ ಗದ್ದೆ ಕೊಳಗ ೧೦... ಮುಱಿ ಹಿಂಡಿಯ....... ಸಮಸ್ತಪ್ರಜೆಗಳುಸಹಿತರಾಗಿ ಗೀಜೆಯಹಳ್ಳಿಯ ಮುಱಿಹಿಂಡಿಯ ಹೊಲವೇರಿಯ ಸೀಮೆಯಲು ಜೇಡರ ದಾಸಿಮಯ್ಯನ ಮಗ ಕಾಟಿಗೌಡ ಕಟ್ಟಿಸಿದ ಕೆಱೆ ಇಂತಿನಿಬರು ಶಕವರ್ಷ ೧೧೨೫ನೆಯ ರೌದ್ರಿಸಂವತ್ಸವ ಚೈತ್ರ ಶುದ್ಧ ತ್ರಯೋದಶಿ ವಡ್ಡವಾರ ಉತ್ತರಾಯಣ ಸಂಕ್ರಮಣ ವ್ಯತಿಪಾತದಂದು ಬಿಟ್ಟ ಉಂಬಳಿ ಗದ್ದೆ ಕೊಳಗ ೫೦. ಕೊಳಗ ಐವತ್ತರೊಳಗೆ ಅರಿಸಿಕೆಱೆಯ ಗೊಜ್ಜೇಶ್ವರದೇವರಿಗೆ ಕಾಟಿಗೌಡ ಬಿಟ್ಟ ಗದ್ದೆ ಕೊಳಗ೧೦."

ಅರಸಿಕೆರೆ ತಾಲೂಕಿನ ಈ ಗೀಜಗನಹಳ್ಳಿ ಶಾಸನದಲ್ಲಿ ಎರಡು ದತ್ತಿಗಳಿದ್ದು ಎರಡನೆಯ ದತ್ತಿಯನ್ವಯ ಇದರ ಕಾಲ ಕ್ರಿ.ಶ. ೧೨೦೧. ಇಲ್ಲಿ 'ಜೇಡರದಾಸಿಮಯ್ಯನ ಮಗ ಕಾಟಿಗೌಡ' ಎಂದು ಹೇಳಿದ್ದರೂ ಕಾಟಿಗೌಡನು ದಾಸಿಮಯ್ಯನ ನೇರವಾದ ಮಗನಲ್ಲ. ಶಿಷ್ಯಸಂಪ್ರದಾಯದ ವ್ಯಕ್ತಿ. ಒಂದು ಶತಮಾನ ಗತಿಸುವಷ್ಟರಲ್ಲಿ ಗುಲ್ಬರ್ಗಾ ಜಿಲ್ಲೆಯ ಮುದನೂರು ದಾಸಿಮಯ್ಯನ ಸಂಪ್ರದಾಯ ಅರಸಿಕೆರೆಯಷ್ಟು ದೂರ ವ್ಯಾಪಿಸಿತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಮೇಲಣ ಗೊಬ್ಬೂರ ಶಾಸನದಲ್ಲಿ ಬರುವ ಗೊಜ್ಜೇಶ್ವರ, ಈ ಶಾಸನದಲ್ಲಿ ಬಂದ ಕೋಟೆಹಾಳ ಗೊಜ್ಜೇಶ್ವರ ಮತ್ತು ಅರಸಿಕೆರೆಯ ಗೊಜ್ಜೇಶ್ವರ ಎಂಬ ದೇವರ ಹೆಸರುಗಳು ಈ ಸಂಪ್ರದಾಯದ ಸಂಬಂಧವನ್ನು ದೃಢಪಡಿಸುತ್ತವೆ.

ಬಿದರೆ ಶಾಸನ[೯೫] **(ಕ್ರಿ.ಶ. ೧೧೬೫)**: ಮಾಹೇಶ್ವರ ಗಣಾವತಾರನೆಂದು ಪ್ರಸಿದ್ಧಿ ಪಡೆದ ಬೆಳ್ಳಪನೆಂಬ ಶಿವಭಕ್ತನನ್ನು ಬಿದಿರೆಯ ಶಾಸನ ಹೀಗೆ ವರ್ಣಿಸುತ್ತದೆ:

ಬಡವರು ಚಿಂತಾಮಣಿಯಂ ।
ಪಡೆದಂತಿರೆ ದಾಸನೀಸನ ಕೈಯ್ಯಲು ।
ಪಡೆದಾ ತವನಿಧಿಯಂತಿರೆ ।
ಪಡೆದಳು ತಾಂ ಚಾಂಕಣಪ್ವೆ ಬೆಳ್ಳಪ ಸುತನಂ ॥
ನಡೆಗಲ್ತಂ ದೇವತಾಲಯ ।
ಕ್ಕೆಡೆಯಾಡಿಯು ನುಡಿಗಲ್ತಂ ನಮಸ್ಸಿವಾಯವೆಂಬೀ ।
ನುಡಿಯಂ ಪಡೆದಾತಂ ಧ ।
ಮ್ಮಾರ್ಜ್ಜಿತ ಮ್ರಿಡಭಕ್ತ ಕೃತಾರ್ತ್ತನಪ್ಪುದೊಂದಚ್ಚರಿಯೇ ॥

---

೯೪. MAR.1928 NO. 15 ಗೀಜಗನಹಳ್ಳಿ, ಕ್ರಿ.ಶ. ೧೨೦೧, MAR 1928 No. ೧೬ರಲ್ಲಿ 'ಕಾಟಿಗಉಡನ ಮಗ ದಾಸಯ'ನ ಉಲ್ಲೇಖವಿದೆ.)

೯೫. Ec.V-II ಚೆನ್ನರಾಯಪಟ್ಟಣ ೨೧೦, ಬಿದಿರೆ, ಕ್ರಿ.ಶ. ೧೧೬೫

ತಾಯಿ ಚಾಂಕಣವ್ವೆ "ಈಶನ ಕೈಯಿಂದ ದಾಸನು ತವನಿಧಿಯನ್ನು ಪಡೆದಂತೆ" ಬೆಳ್ಳಪ್ಪನನ್ನು ಪಡೆದಳು ಎಂದು ಈ ಶಾಸನದ ಹೇಳಿಕೆ. ಇಲ್ಲಿ ತವನಿಧಿ-ದಾಸ ಪದಗಳು ಜೇಡರ ದಾಸಿಮಯ್ಯನನ್ನು ಸೂಚಿಸುತ್ತಿರಬಹುದೆಂದು ವಿದ್ವಾಂಸರ ಅಭಿಪ್ರಾಯ.

"…..ಓಹಿಲ ದಾಸ ಚೆನ್ನ ಸಿರಿಯಾಳ ಹಳಾಯುಧ…"[೯೬]

"…………………………………………ಸಿಂಧುಬಲ್ಲಾಳನೀ ।

ಧರೆ ಕೊಂಡಾಡುವ ದಾಸಿಮಯ್ಯನೆನಿಸಿರ್ದೀ ಭಕ್ತಸಂದೋಹ।"[೯೭]

"…..ಸಿರಿಯಾಳುವ ದಾಸ ದಸವಮ್ಮದಿಹಿಲ ಉದ್ಭಟ ನಂಬಿ"[೯೮]

ಎಂಬ ಈ ಅಬ್ಬಲೂರ ಹಿರಿಯೂರ ಮರಡಿಪುರ ಶಾಸನವಾಕ್ಯಗಳಲ್ಲಿಯ ದಾಸ, ದಾಸಿಮಯ್ಯ, ದಾಸ ಪದಗಳು ಜೇಡರದಾಸಿಮಯ್ಯನನ್ನು ಸೂಚಿಸುತ್ತವೆ.

ಅಬ್ಬಲೂರು ಚಿತ್ರಶಾಸನ[೯೯]: "ಜೇಡರದಾಸಿಮಯ್ಯಗಳು ದೇವರಿಗೆ ವಸ್ತ್ರವ ಕುಡುವ ಠಾವು" ಎಂದು ಬರೆದು, ಕೆಳಗೆ ಸಂಬಂಧಪಟ್ಟ ಚಿತ್ರ ಕೆತ್ತಿದುದು ಅಬ್ಬಲೂರ ಸೋಮೇಶ್ವರ ದೇವಾಲಯದ ಪೌಳಿಯ ಮೇಲೆ ಕಂಡುಬರುತ್ತದೆ.

ಹೀಗೆ ದಾಸಿಮಯ್ಯನ ಉಲ್ಲೇಖವಿದ್ದುದು ಸುಮಾರು ೯ ಶಾಸನಗಳಲ್ಲಿ. ದಾಸಿಮಯ್ಯನ ವ್ಯಾಪಕವಾದ ಶಿಷ್ಯಸಂತಾನವನ್ನು ತಿಳಿಸಿಕೊಡುವ ಈ ಶಾಸನಗಳು ಅವನ ಸಂಪ್ರದಾಯದ ಘನತೆಯನ್ನು ಉಗ್ಗಡಿಸುತ್ತವೆ. ಕೊಲ್ಲಿಪಾಕಿಯಲ್ಲಿ (ದೇವರ-) ದಾಸಿಮಯ್ಯನ ವಿಗ್ರಹವಿರುವುದಾಗಿಯೂ ತಿಳಿದುಬಂದಿದೆ.* ಸಂಪಾದಕರ ತಪ್ಪು ಓದುವಿಕೆಯಿಂದಾಗಿ ಚಿಕ್ಕಮುದೇನೂರ ಗೋಪಾಲಸ್ವಾಮಿ ಕಂಬದ ಮೇಲಿನ ಶಾಸನ(೧೧೬೭)ದಲ್ಲಿ ಜೇಡರದಾಸಿಮಯ್ಯನ ಹೆಸರಿದೆಯೆಂದು ಈವರೆಗೆ ಭಾವಿಸಲಾಗಿತ್ತು. ಈ ಆವೃತ್ತಿಯಲ್ಲಿ ಆ ತಪ್ಪು ತಿಳಿವಳಿಕೆಯ ಶಾಸನವನ್ನು ಬಿಟ್ಟಿದ್ದೇನೆ.

ಸುಗ್ಗಲದೇವಿ

ದೇವರ ದಾಸಿಮಯ್ಯನ ಶಿಷ್ಯತ್ವವನ್ನು ವಹಿಸುವುದರ ಮೂಲಕ ಬಾಲ್ಯಾವಸ್ಥೆಯ ವೀರಶೈವಕ್ಕೆ ರಾಜಮರ್ಯಾದೆ ನೀಡಿದವಳು ಸುಗ್ಗಲದೇವಿ. ಕಲ್ಯಾಣ ಚಾಲುಕ್ಯವಂಶದ ಜಯಸಿಂಹನ (ಕ್ರಿ.ಶ. ೧೦೧೮-೧೦೪೨) ಪಟ್ಟಮಹಿಷಿಯಾದ ಈಕೆಯನ್ನು ಕೀರ್ತಿಸುವ ವೀರಶೈವ ಕೃತಿಗಳು ಹೇರಳ, ಶಾಸನಗಳು ಮಾತ್ರ ವಿರಳ. ಇವುಗಳಲ್ಲಿ ದೇವೂರಿನ ಶಾಸನವೊಂದು ಹೀಗಿದೆ:

೧. XXXX ಭುವನಾಸ್ರ(ಯ) ಶ್ರೀ ಪ್ರಥ್ವೀವಲ್ಲಭ ಮಹಾರಾಜಾ

೨. XXX ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ

---

೯೬. EI.V.P. 245, ಅಬ್ಬಲೂರು, ಕ್ರಿ.ಶ. ೧೨೦೦?
೯೭. Ec.V-II ಅರಸಿಕೆರೆ ೧೦೯, ಹಿರಿಯೂರು, ಕ್ರಿ.ಶ. ೧೨೫೯
೯೮. Ec.III-1 ಮಂಡ್ಯ ೮೩, ಮರಡಿಪುರ ಕ್ರಿ.ಶ. ೧೨೮೦
೯೯. EI.XXIX.p 142 ಅಬ್ಬಲೂರು, ಕ್ರಿ.ಶ. ೧೨೦೦?
* ಶ್ರೀ ಮಲ್ಲಿಕಾರ್ಜುನ-ಶ್ರೀ ರೇವಣಸಿದ್ಧರು, ಪು. ೫೧೨.

೩. ಕುಳತಿXXXಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗದೇಕಮಲ್ಲದೇವರ

೪. XX(ಯ) ಉತ್ತರೋತ್ತ(ರಂ) ಸಲುತ್ತಮಿರೆ ಸ್ವಸ್ತ್ಯನವರತ ಪ

೫. XXಕಲ್ಯಾಣಾಭ್ಯುದಯ ಸಹಶ್ರಪಳಭೋಗಭಾಗಿ

೬. XXದ್ವಿತೀಯ ಲಕ್ಷ್ಮೀ ವಿಶಿಷ್ಟಜನ ಕಾಮಧೇನು ಆಶ್ರಿತ

೭. ಜನ ಕಲ್ಪಲತೆ ರೂಪವಿಧ್ಯಾಧರಿ ಕಲಿಕಾಲ ಸರಸ್ವ(ತಿ)

೮. (ಶ್ರೀ)ಮಜ್ಜಗದೇಕಮಲ್ಲದೇವರ ವಿಶಾಳವಕ್ಷಸ್ಥಲ ನಿವಾಸಿನಿ(ಯುಗ)

೯. ಪ್ಪ ಶ್ರೀಮತ್ಸುಗ್ಗಲದೇವಿಯರು ಸಕನ್ರಿಪಕಾಳಾತೀತಸಂವತ್ಸ

೧೦. (ರ) ಸತಂಗ ೯೫೧ನೆಯ (ಶು)ಕ್ಲ ಸಂವತ್ಸರದ ತದ್ವರಿಷಾಭ್ಯಂ

೧೧. (ತರ)ದ ಪುಷ್ಯ ಬ.೧ ಬುಧವಾರಮುತ್ತರೋತ್ತರಾಯಣ ಸಂಕ್ರಾ

೧೨. (ನ್ತಿ)ಯಂನ್ದು ಸ್ವಸ್ತಿ ಯಮನಿಯಮಾಸನಪ್ರಾಣಾ

೧೩. (ಯಾ)ಮಪ್ರತ್ಯಾಹಾರಧ್ಯಾನಧಾರಣಜಪಸಮಾಧಿ

೧೪. XXಪನ್ನ ಪಾಸುಪತಯೋಗಾಚಾರ್ಯ್ಯ ಶ್ರೀಮದ್ಬ್ರಹ್ಮರಾಸಿ

೧೫. (ಪಂ)ಡಿತರ್ಗೆ ದೇವಾಪುರದ ಶ್ರೀ ಮಾರಸಿಂಘೇಶ್ವರ

೧೬. (ದೇ)ವರಂಗಭೋಗಕ್ಕಂ ತಪೋಧನರ್ಗಂ ವಿದ್ಯಾರ್ತ್ಥಿಗಳುಗ(ಂ)ಮ

೧೭. (ಶ)ನಾಚ್ಛಾದನ ಪಥ್ಯೌಷದಾರ್ತ್ಥಮಾಗೆ...[೧೦೦] (ದತ್ತಿ ವಿವರಣೆ ಇದೆ.)

ಈ ಶಾಸನದ ಕಾಲ ಕ್ರಿ.ಶ. ೧೦೨೯. ಇಲ್ಲಿಯ ಜಗದೇಕಮಲ್ಲನೆಂದರೆ ಸುಗ್ಗಲೆಯ ಪತಿ ಜಯಸಿಂಹ (೧೦೧೮-೪೨). ಈ ಶಾಸನದ ಒಂದೊಂದು ವಿಶೇಷಗಳಲ್ಲಿ ಸುಗ್ಗಲದೇವಿಯ ಸಮಷ್ಟಿವ್ಯಕ್ತಿತ್ವ ತುಂಬಿನಿಂತಿದೆ. ಇವಳಿಂದ ದಾನ ಪಡೆದವನು ಪಾಶುಪತ ಯೋಗಾಚಾರ್ಯ ಬ್ರಹ್ಮರಾಶಿಪಂಡಿತ. ಇದು ಇವಳ ಶೈವತ್ವದ ಸೂಚನೆಯೋ ಸರ್ವಧರ್ಮ ಸಮತಾಭಾವದ ಸೂಚನೆಯೋ ಸ್ಪಷ್ಟವಾಗುವುದಿಲ್ಲ. ಇನ್ನು ಕೆರೆಸಂತೆ ಗ್ರಾಮದ ಶಾಸನವೊಂದು ಇವಳನ್ನು ಕುರಿತು ಹೀಗೆ ಹೇಳುತ್ತದೆ:

> ಪಡೆದಳ್ಸುಗ್ಗಲದೇವಿ ಮುನ್ನೆ ಜಯಸಿಂಹೋರ್ವ್ವೀಶನೊಳು ಸಾಮ್ಯವಂ ।
> ಪಡೆದಳು ಸಾಂತಲದೇವಿ ಮತ್ತೆ ತೊದಳೇ ಶ್ರೀ ವಿಷ್ಣುಭೂಪಾಲನೊಳ್ ।
> ಪಡೆದಳ್ಕೇತಲದೇವಿ ವಲ್ಲಭನೊಳೀ ಬಲ್ಲಾಳಭೂಪಾಳನೊಳ್ ।
> ಪಡೆದರ್ಮ್ಮೂವರು ಮೂವರರಸಿಯರು ಸೌಭಾಗ್ಯಭಾಗ್ಯಂಗಳಂ ॥[೧೦೧]

ಬಲ್ಲಾಳನ ಧರ್ಮಪತ್ನಿ ಕೇತಲದೇವಿಯನ್ನು ವರ್ಣಿಸುವ ಈ ಶಾಸನಕವಿಯ ದೃಷ್ಟಿಯಲ್ಲಿ ಸುಗ್ಗಲದೇವಿ ಪ್ರಾಚೀನ ಆದರ್ಶರಾಜಪತ್ನಿಯರಲ್ಲಿ ಒಬ್ಬಳು. ಇದು ಸುಗ್ಗಲೆಯ ಘನವ್ಯಕ್ತಿತ್ವದ ಕುರುಹು.

---

೧೦೦. SII.XX.No.23 ದೇವೂರ, ಕ್ರಿ.ಶ. ೧೦೨೯

೧೦೧. MAR.1925 ಕಡೂರ ನಂ.೬೪, ಕೆರೆಸಂತೆ ಕ್ರಿ.ಶ. ೧೧೮೨

ಕರ್ನಾಟಕದ ಇತಿಹಾಸದಲ್ಲಿ ಕುವರಲಕ್ಷ್ಮನದು ನಿರಂತರ ನೆನಪಿಡುವ ಹೆಸರು. ಹೊಯ್ಸಳ ಸಾಮ್ರಾಜ್ಯಕ್ಕೆ ತನ್ನ ಪ್ರಾಣವನ್ನು ಸಮರ್ಪಿಸಿದ ಈತನ ಸತಿ ಸುಗ್ಗಲೆಯ ವಿಷಯ ಬೇಲೂರಿನ ಶಾಸನದಲ್ಲಿ ಹೀಗೆ ಬಂದಿದೆ:

ಜಯಸಿಂಹಕ್ಷಿತಿಪಾಳಕಂಗೆ ಜಗಮೆಲ್ಲಂ ಬಣ್ಣಿಸಲ್ ಪೊಣ್ಬು ಭಾ ।
ಷೆಯನಾ ಸುಗ್ಗಲದೇವಿ ಕೊಟ್ಟ ತೆಱದಿಂ ಬಲ್ಲಾಳಭೂಪೋತ್ತಮ ।
ಪ್ರಿಯಪುತ್ರಂಗೆ ಕುಮಾರ ಲಕ್ಷ್ಮರಥಿನೀನಾಥಂಗೆ ಕೊಟ್ಟಳ್ ಮನಃ ।
ಪ್ರಿಯೆಯಿಂ ಸುಗ್ಗಲದೇವಿ ಭಾಷೆಯನಿಳಾಚಕ್ರಂ ಪೊಗಳ್ವನ್ನೆಗಂ ॥[೧೦೨]

ಕುವರಲಕ್ಷ್ಮನ ಹೆಂಡತಿ ಸುಗ್ಗಲದೇವಿಯ ಭಾಷೆ, ಜಯಸಿಂಹನ ಹೆಂಡತಿ ಸುಗ್ಗಲದೇವಿಯ ಭಾಷೆಗೆ ಸಮಾನವಾದುದೆಂದು ಹೇಳುವ ಈ ಶಾಸನ ಆ ಭಾಷೆಯ ಸ್ವರೂಪವನ್ನು ವಿವರಿಸಿದ್ದರೆ ಜಯಸಿಂಹ-ಸುಗ್ಗಲೆಯರ ದಾಂಪತ್ಯದ ಮೇಲೆ ಹೆಚ್ಚು ಬೆಳಕು ಬೀಳುತ್ತಿತ್ತು. ಅದನ್ನು ಹೇಳದಿದ್ದರೂ ಚಾಲುಕ್ಯ ಸುಗ್ಗಲೆಯನ್ನು ಕವಿ ಆದರ್ಶಮಹಿಳೆಯೆಂದು ಭಾವಿಸಿದುದು ಉಲ್ಲೇಖನಾರ್ಹ.

ಮೇಲಣ ಶಾಸನದಲ್ಲಿ ಬಲ್ಲಾಳನ ಸತಿ ಕೇತಲದೇವಿ, ಈ ಶಾಸನದಲ್ಲಿ ಕುವರಲಕ್ಷ್ಮನ ಸತಿ ಸುಗ್ಗಲದೇವಿಯರ ವಿಷಯ ಹೇಳುತ್ತ ಚಾಲುಕ್ಯ ಸುಗ್ಗಲೆಯನ್ನು ಉದಾಹಸಿರಿದುದು ಆಕೆಯ ಮಹಾಸತಿತ್ವಕ್ಕೆ ಸಾಕ್ಷಿಯಾಗಿದೆ. ಬಹುಶಃ ಪ್ರಾಚೀನ ಕರ್ನಾಟಕದಲ್ಲಿ ಆದರ್ಶ ಸ್ತ್ರೀ ಅತ್ತಿಮಬ್ಬೆಯನ್ನು ಬಿಟ್ಟರೆ ಕಣ್ಣು ಮುಂದೆ ಸುಳಿವ ಅದೇ ಘನತೆಯ ಸ್ತ್ರೀ ಈ ಸುಗ್ಗಲೆ ಎನ್ನಬಹುದು.

ಕೊಂಡಗುಳಿ ಕೇಶಿರಾಜ

ಅನುಭಾವ, ಸಾಹಿತ್ಯ ಮತ್ತು ರಾಜಕಾರ್ಯಗಳ ತ್ರಿಕೂಟನಾದ ಕೊಂಡಗುಳಿ ಕೇಶಿರಾಜನು ವೀರಶೈವ ಪ್ರಥಮಕವಿಯೆಂದು ಪಂಡಿತರ ಅಭಿಮತ. ಅಬ್ಬಲೂರ ಶಾಸನದಲ್ಲಿ ಬರುವ ಇಬ್ಬರು, ಷಿಕಾರಿಪುರ ಶಾಸನ (ನಂ. ೧೯೯)ದಲ್ಲಿ ಬರುವ ಇಬ್ಬರು-ಹೀಗೆ ನಾಲ್ಕು ಜನ ಕೇಶಿರಾಜರನ್ನು ಸುತ್ತು ಹಾಕಿಕೊಂಡು ಶ್ರೀ ಆರ್. ನರಸಿಂಹಾಚಾರ್,[೧೦೩] ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು[೧೦೪] ನೀಡಿದ ನಿರ್ಣಯಗಳೆಲ್ಲ ವಿಜಾಪುರಜಿಲ್ಲೆ ಸಿಂದಗಿ ತಾಲೂಕಿನ ಕೊಂಡಗುಳಿ ಗ್ರಾಮದ ಶಾಸನಗಳು ಲಭಿಸುವಲ್ಲಿ ಬಿದ್ದುಹೋಗಿವೆ.

ಕೊಂಡಗುಳಿ ಶಾಸನ[೧೦೫]: (ಓಂ ನಮಃ) ಶಿವಾಯ ನಮXXXಗಳುರ್ವ್ವಿಗೆಯ XX(ಸಿರ) ನ್ರಿಪೋತ್ತಮನಿಂ ತ್ರೈಲೋಕ್ಯಮಲ್ಲನಾಹವಮಲ್ಲಂ ॥ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಂಬರಂ ಸಲುತ್ತಂ ಕಲ್ಯಾಣಪುರದ ನೆಲೆವೀಡಿನೊಳ್ಸುಖ ಸಂಕಥಾ ವಿನೋದದಿಂದ ರಾಜ್ಯಂಗೆಯ್ಯುತ್ತ ಮಿರೆ ತತ್ಪಾದಪದ್ಮೋಪಜೀವಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಾಧಿಪತಿ

---

೧೦೨. EC. V-II ಬೇಲೂರ ೧೧೨, ಹಳೆಬೀಡು, (SII.XI-I No.73 ದಲ್ಲಿ ಬರುವ ಸೋಗಲದೇವಿ ಈ ಸುಗ್ಗಲೆಯೇ ಆಗಿರಬೇಕು).

೧೦೩. ಕ.ಕ.ಚ.ಪು. ೧೮೭ (೧೯೬೧)

೧೦೪. ಷಡಕ್ಷರಮಂತ್ರಮಹಿಮೆ-ಮುನ್ನುಡಿ, ಪು. ೫

೧೦೫. SII.XX No.69 ಕೊಂಡಗುಳಿ, ಕ್ರಿ.ಶ. ೧೧೦೭.

ಮಹಾಪ್ರಚಣ್ಡದಣ್ಣನಾಯಕಂ ವಿ (ಲ)ಬ್ಧವರದಾಯಕ ಗೋತ್ರಪವಿತ್ರ ಸುಜನೈಕಮಿತ್ರ ಅಭಿಮಾನಮನ್ದರ ವಿಭವಪುರಂದರ ಸರಸ್ವತೀಗಣಲಲಾಟಪಟ್ಟ ಕನ್ನಕೈರ ದಿಶಾಪಟ್ಟ ವಾಜಿಕುಳಾಂಬರದ್ಯುಮಣಿ ಬನ್ಧುಜನಚಿನ್ತಾ(ಮ)ಣಿ ಶ್ರೀ ಮತ್ರಿಭುವನಮಲ್ಲದೇವ ಪದಾರಾಧಕಂ ಪಂXXXಕನಾಮಾದಿ ಸಮಸ್ತ ಪ್ರಸಸ್ತಿ ಸಹಿತ XXXXಮನು ಮಹಾಪ್ರಧಾನಂ ಮನೆವೆರ್ಗಡೆ ದಂಡ XXXXಬಣಯ್ಯಂಗಳ್ ರಾಯನಾರಾಯಪು XXಯು (ದ್ಯಾಪ)ನದಲು ಕೆಜಿೆಯಪುರದೊ XXXX ಧರ್ಮವಾಗಿ ಶ್ರೀ ಮತ್ರಿಭುವನಮXXXಲು ಧಾರಾಪೂರ್ವ್ವ XXXಶ್ಯದಗ್ರ(ಹಾ) XXXಮಾಗಿರೆ ಪಡೆದ ಸಹಿXXಕೊಣ್ಡಗುಳಿಯಲು ನಿಂಬXXಗಳ ಮಗ ಶ್ರೀ ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಸಾಮನ್ತಾಧಿಪತಿ (ಮ) XXಮಹಾಪ್ರಚಣ್ಡ ದಣ್ಡನಾಯಕ ದುಷ್ಟವಿದ್ವಷ್ಟವಿಧೇಯಕ ವಾಜಿಕುಳಾರ್ಣ್ಣವ ಪಾರಿಜಾತ ಸುಕವಿಶುಕಚೂತಬನ್ಧುವನ ವಸನ್ತ ವಚಶ್ರೀವಧೂಕಾನ್ತ ಸಾಹಿತ್ಯ ಸರೋರುಹಮಧುಬ್ರತ ಸತ್ಯಸತ್ಯಬ್ರತ ಹರಚರಣ ರಜೋರಂಜಿತೋತ್ತಮಾಂಗನಯ್ಯನಸಿಂಗ ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾ ಪ್ರಧಾನಂ ಹೇರಿಲಾಳ ಸಂಧಿವಿಗ್ರಹಿ ದಣ್ಡನಾ(ಯ)ಕಂ ಕೇಸಿರಾಜರಸರು ಶ್ರೀ ಮಚ್ಚಾಳುಕ್ಯ ವಿಕ್ರಮವರ್ಷದ ೩೩ನೆಯ ಸರ್ವ್ವಜಿತ್ ಸಂವತ್ಸರದ ಮಾರ್ಗಸಿರದಮವಾಸ್ಯೆ ಸೋಮವಾರ ದಂದಿನ ಸೂರ್ಯಗ್ರಹಣ ಪರ್ವ್ವನಿಮಿತ್ತದಲು ತಾವು ಮಾಡಿಸಿದ ಶಿವಾಲೆಯದ ಮೂಲಸ್ಥಾನದ ಶ್ರೀ ಸೋಮೇಶ್ವರದೇವರ್ಗ್ಗೆ.... (ದತ್ತಿಯ ವಿವರಣೆ ಇದೆ.)

ಈ ಶಾಸನದ "ಮನೆವೆರ್ಗಡೆ ದಂಡXXXXಬಣಯ್ಯಂಗಳ್" ಮತ್ತು "ನಿಂಬ XXಗಳ ಮಗ" ಎಂಬ ತ್ರುಟಿತ ಭಾಗಗಳನ್ನು ಸರಿಯಾಗಿ ಹೊಂದಿಸಿದರೆ 'ನಿಂಬಣಯ್ಯ' ಹೆಸರು ಸಿದ್ಧವಾಗುತ್ತದೆ. ಈತನು ಚಾಲುಕ್ಯ ತ್ರಿಭುವನಮಲ್ಲ ಅಂದರೆ ವಿಕ್ರಮಾದಿತ್ಯ VI(ಪೆರ್ಮಾಡಿ)ನ ಮಹಾಸಾಮನ್ತಾಧಿಪತಿ, ಮಹಾಪ್ರಚಂಡ ದಂಡನಾಯಕ, ಮಹಾಪ್ರಧಾನ ಮತ್ತು ಮನೆವೆರ್ಗಡೆಯಾಗಿದ್ದನೆಂದು ಈ ಶಾಸನ ಹೇಳುತ್ತದೆ. "ಕೊಂಡಗುಳಿಯಲು ನಿಂಬ (+ಣಯ್ಯ)ಗಳ ಮಗ ಶ್ರೀ XXಕೇಶಿರಾಜರಸರು" ಎಂಬ ವಾಕ್ಯದಿಂದ ಕೊಂಡಗುಳಿ ಕೇಶಿರಾಜನು ಈ ನಿಂಬಣದಂಡನಾಥನ ಮಗನೆಂದು ಸುವ್ಯಕ್ತವಾಗುತ್ತದೆ. ಈ ಮಾತಿನ ಸಮರ್ಥನೆಗಾಗಿ ನಿಂಬಣಯ್ಯನನ್ನು 'ವಾಜಿಕುಳಾಂಬರದ್ಯುಮಣಿ' ಎಂದು, ಕೇಶಿರಾಜನನ್ನು 'ವಾಜಿಕುಳಾಂಬರ ಪಾರಿಜಾತ' ನೆಂದು ಕರೆದುದನ್ನು ಹೆಚ್ಚಿನ ಆಧಾರವಾಗಿಟ್ಟುಕೊಳ್ಳಬಹುದು. ಒಟ್ಟಿನಲ್ಲಿ ಕೊಂಡಗುಳಿಯ ನಿಂಬಣದಂಡನಾಥನ ಮಗ, ಕೊಂಡಗುಳಿಯ ಕೇಶಿರಾಜದಂಡನಾಥ ನೆಂಬುದು ಸತ್ಯ.

ಈ ಶಾಸನದ ಪ್ರಕಾರ ಕೇಶಿರಾಜನು ಪೆರ್ಮಾಡಿ (ವಿಕ್ರಮಾದಿತ VI) ಯ ದಂಡನಾಥ ಮತ್ತು ಸೋಮೇಶ್ವರನ ಭಕ್ತ. ವೀರಶೈವ ಪುರಾಣಗಳೂ ಇದನ್ನು ಸಮ್ಮತಿಸುತ್ತವೆ. ಇಲ್ಲಿಯ "ಸತ್ಯಸತ್ಯಬ್ರತ, ಹರಚರಣರಜೋರಂಜಿತೋತ್ತಮಾಂಗಂ" ಎಂಬ ವಾಕ್ಯಗಳು ಶರಣ ಕೇಶಿರಾಜನ ಶಿವೋಪಾಸನೆಗೆ ನಿದರ್ಶನಗಳಾಗಿದ್ದರೆ, 'ಸುಕವಿ ಶುಕ ಬಂಧುವನವಸಂತ, ವಚಶ್ರೀವಧೂಕಾಂತ, ಸಾಹಿತ್ಯಸರೋರುಹ ಮಧುಪ್ರತ' ಎಂಬ ವಾಕ್ಯಗಳು ಮಂತ್ರಮಹತ್ವದ ಕಂದ, ಲಿಂಗಮಹತ್ವದ ಕಂದ-೧, ಲಿಂಗ ಮಹತ್ವದ ಕಂದ-೨, ನವರತ್ನಮಾಲೆಗಳನ್ನು ರಚಿಸಿದ[೧೦೬] ಈತನ ಕವಿಮನೋಧರ್ಮಕ್ಕೆ ಸಾಕ್ಷಿಯಾಗಿವೆ.

---

೧೦೬. 'ಲಿಂಗಮಹತ್ವದ ಕಂದ'ಗಳಿಗಾಗಿ ಪ್ರ.ಕ. ೫೦-೩, ಚಿತ್ರಭೆ (ಶ್ರೀ ಮೂರುಸಾವಿರ ಮಠ ಹುಬ್ಬಳ್ಳಿ) ಪು. ೬೨೩ ನೋಡಿರಿ. 'ನವರತ್ನಮಾಲೆ'ಗಾಗಿ ಕ.ಭಾ.೯-೪ ನೋಡಿರಿ.

ಅದಕ್ಕಾಗಿ ಈ ಶಾಸನದ ಕೇಶಿರಾಜನೇ ವೀರಶೈವ ಪುರಾಣೋಕ್ತ ಕೇಶಿರಾಜನೆಂಬುದು ಗಟ್ಟಿಮಾತು. ಕೊಂಡಗುಳಿಯಲ್ಲಿ ಆರಾಧ್ಯ ದೈವತ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿ ದತ್ತಿ ಬಿಟ್ಟನೆಂದು ಹೇಳುವ ಈ ಶಾಸನದ ಕಾಲ ಕ್ರಿ.ಶ. ೧೧೦೭.

ಕೊಂಡಗುಳಿ ಶಾಸನ[೧೦೭]-೨: ಕೊಂಡಗುಳಿಯಲ್ಲಿ ಇವನನ್ನು ಕುರಿತು ಲಭಿಸಿದ ಇನ್ನೊಂದು ಶಾಸನದ ಪಾಠ ಹೀಗಿದೆ:

೧. ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ
೨. ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ
೩. ಪರಮೇಶ್ವರ ಪರಮಭಟ್ಟಾರಕ್ಕ ಸತ್ಯಾ
೪. ಶ್ರಯ ಕುಲತಿಲಕ ಚಾಲುಕ್ಯಾಭರ
೫. ಣ ಶ್ರೀಮಚ್ಚಾಲುಕ್ಯ ಭೂಲೋಕಮಲ್ಲದೇ
೬. ವರ ವಿಜಯರಾಜ್ಯಮುತ್ತರೋತ್ತರಾ
೭. ಭಿವೃದ್ಧಿ ಪ್ರವರ್ಧಮಾನಮಾಚಂದ್ರಾ
೮. ರ್ಕ ತಾರಂಬರಂ ಸಲುತ್ತಮಿರೆ ಮಾಹುರ
೯. ದ ನೆಲೆವೀಡಿನೊಲು ಸುಖಸಂಕಥಾ
೧೦. ವಿನೋದದಿಂ ರಾಜ್ಯಂಗೆಯುತ್ತಮಿರಲು
೧೧. ಶ್ರೀಮಚ್ಚಾಲುಕ್ಯ ಭೂಲೋಕವರ್ಷದ ೭ನೆ
೧೨. ಪೌರ್ಣಮಾಸ್ಯೆ ಆದಿತ್ಯವಾ(ರ)ದುತ್ತರಾ
೧೩. ಯಣ ಸಂಕ್ರಮಣ ಪರ್ವದಂದು ಶ್ರೀಮತ್ಸ
೧೪. ರ್ವ್ವನಮಸ್ಯದಗ್ರಹಾರಂ ಕೊಂಡಂಗು
೧೫. ಳ್ಯಸೇಷ ಮಹಾಜನಂಗಲಿ(ಳಿ)ಗೆ
೧೬. ಶ್ರೀಮತ್ ಕೇ(ಸಿ)ಮಯ ದಂಡನಾಯಕರುಂ ಗ
೧೭. ಣಪತಿ ದಂಡನಾಯಕರು(ಂ) ಕೂಡಿ ವಿದ್ಯ(ದಾ)
೧೮. ನ ನಿಮಿತ್ತವಾಗಿ ಸೂತ್ರಸ(ಂಹಿ)ತ ಪಿರಿ
೧೯. ಯ ಗ್ರಂಥಂಗಲ(ಳ)ಂ ಪೇಳ್ವ ವುಪಾಧ್ಯಾಯರ್ಗೆ ಪೊಂನ
೨೦. ವ್ರಿದ್ಧಿಯಲೆ ಗ್ರಾಸನಡವಂತಾಗಿ
೨೧. ಪೊಂಗೆ ತಿಂಗಲಿ(ಳಿ)ಂಗೆ ವೀಸಂ ನಾ
೨೨. ನಾಲ್ಕಣಿವಡ್ಡಿಯಲು ಕೊಟ್ಟ ವರ್ತಕ
೨೩. ಲೊಕ್ಕಿಗದ್ಯಾಣ ೨೦ ಮತ್ತ(ಂ)
೨೪. ಸಂಹಿತೆಯುಂ (ಕಿಱಿ)ಯ ಗ್ರಂಥಂಗ

---

೧೦೭. ಶಾಸನವ್ಯಾಸಂಗ II (೧೯೭೫), ಪು ೬೨.

೨೬. ಲು(ಳು)ಂ ಯಾಜ್ಞ್ಯವಲ್ಕಿಸಹಿತ ಪೇಲ್ವ(ಳ್ವ)

೨೭. ಉಪಾಧ್ಯಾಯರ್ಗೆ ಪೊಂನ ವಿ(ವೃ)ದ್ಧಿಯ

೨೮. ಲೆ ಗ್ರಾಸ ನಡೆವಂತಾಗಿ ಪೊಂ

೨೯. ಗೆ ತಿಂಗಲಿ(ಳಿ)ಂಗೆ ವೀಸಂ ನಾಲ್ಕ

೩೦. ರ ವೃದ್ಧಿಯಿಂ ಕೊಟ್ಟ ವರ್ತಕ ಲೊ

೩೧. ಕ್ಕಿ ಗದ್ಯಾಣ ೨೦ ಮತ್ತವಕ್ಷ

೩೨. ರವ್ಯಾಕರಣ ರೂಪಾವತಾರಮಿಂ

೩೩. ತಿನಿತುಂ ಪೇರ್ದು ವಾ(ಬಾ)ಲಶಿಕ್ಷೆ

೩೪. ಯಂ ಮಾರ್ಪ ಉಪಾಧ್ಯಾಯರ್ಗೆ ಪೊಂ

೩೫. ನ ವೃದ್ಧಿಯಲೆ ಗ್ರಾಸಂ ನಡವಂ

೩೬. ತಾಗಿ ಪೊಂಗೆ ತಿಂಗಲಿ(ಳಿ)ಂಗೆ

೩೭. ವೀಸಂ ನಾಲ್ಕ(ಱ) ವೃದ್ಧಿಯಿಂ ಕೊ

೩೮. ಟ್ಟ ವರ್ತಕ ಲೊಕ್ಕಿಗದ್ಯಾ

೩೯. ಣ ೨೦ ಈ ಧರ್ಮವಂ ಮಹಾಜ

೪೦. ನಂಗಲು(ಳು)ಂ ನಡಸುವರು

೪೧. ಶ್ರೀಮತು ಭಾಂಡರಿಗೆ ರಾಮದೇ

೪೨. ವನಾಯಕರು ಸೌಪರ್ಣ

೪೩. ದ ತಾಂಬೂಲದಾನಕ್ಕೊ(ಕ್ಕೆ) ಪೊಂ(ಗೆ)

೪೪. ತಿಂಗಲಿ(ಳಿ)ಂಗೆ ವೀಸಂ ೪(ಱ) ವೃ(ದ್ಧಿ)

೪೫. ಯಲು ಕೊಟ್ಟ ಕಟಕಪ್ರಿಯ

೪೬. ಗದ್ಯಾಣ ೧೦ ಮತ್ತಂ ಬ್ರಹ್ಮದೇ

೪೭. ವಭಟ್ಟರು ತಾಂಬೂಲ ದಾನಕ್ಕಾ

೪೮. ವೃದ್ಧಿಯಲೆ ಕೊಟ್ಟ ಕಟಕಂ ಗ

೪೯. ದ್ಯಾಣ ೨ ಶ್ರೀಮತ್ಸರ್ವನಮ

೫೦. ಸ್ಯದಗ್ರಹಾರ ಕೊಂಡಂಗುಲಿ(ಳಿ)ಯ

೫೧. ಶೇಷ ಮಹಾಜನಂಗಲು(ಳು) ಶ್ರೀ

೫೨. ಕೇಶವದೇವರ್ಗೆ ದೀಪ ದಾ

೫೩. ನವಾಗಿ ಗಾಣವಾಯಿಲೆಯ

೫೪. ಲ್ಲಿ ದೇವಸ(ದ)ಲು ಸೊಲ್ಲಗೆ

೫೫. ಯೆಣ್ಣೆಯಂ ಕೊಟ್ಟರು ಮತ್ತಂ ಪು

೫೬. ಷ್ಪದಾನವಾಗಿಯರೆವ(ಮ)ತ್ತರು

೫೭. ತೋಂಟಮಂ ಕೊಟ್ಟರು.

ಈ ಶಾಸನದಲ್ಲಿ ಒಟ್ಟು ೩ ಬಗೆಯ ದತ್ತಿಗಳಿವೆ.

ದ್ತತಿ-೧ (ಪಙ್ತಿ ೧೭-೪೦): ಕೇಶಿಮಯ್ಯದಂಡನಾಯಕ ಗಣಪತಿದಂಡ ನಾಯಕರು ಕೂಡಿ,

'ಪಿರಿಯಗ್ರಂಥಗಳುಂ ಪೇಳ್ವ' ಉಪಾಧ್ಯಾಯರಿಗೆ ವರ್ತಕ ಲೊಕ್ಕಿ ಗದ್ಯಾಣ ೨೦

'ಕಿಱಿಯಗ್ರಂಥಗಳುಂ ಯಾಜ್ಞ್ಯವಲ್ಕ್ಯಸಹಿತ ಪೇಳ್ವ ಉಪಾಧ್ಯಾಯರಿಗೆ

ವರ್ತಕ ಲೊಕ್ಕಿಗದ್ಯಾಣ ೨೦.

'ಅಕ್ಷರ ವ್ಯಾಕರಣ ರೂಪಾವತಾರ* ಮಿಂತಿನಿತುಂ ಪೇರ್ದು(ಳ್ದು) ವಾ(ಬಾ)ಲ

ಶಿಕ್ಷೆಯಂ ಮಾರ್ಪ(ಟ್ಪ), ಉಪಾಧ್ಯಾಯರಿಗೆ ವರ್ತಕ ಲೊಕ್ಕಿಗದ್ಯಾಣ ೨೦.

ಹೀಗೆ ಒಟ್ಟು ೬೦ ಗದ್ಯಾಣಗಳನ್ನು ದಾನ ನೀಡಿರುವರು.

ದತ್ತಿ-೨ (ಪಙ್ತಿ ೪೧-೪೯): ಭಾಂಡಾರಿಗ ರಾಮದೇವನಾಯಕರು ಸೌಪರ್ಣದ ತಾಂಬೂಲದಾನಕ್ಕೆ, ಬ್ರಹ್ಮದೇವಭಟ್ಟರು ತಾಂಬೂಲದಾನಕ್ಕೆ ಕೆಲವು ಗದ್ಯಾಣಗಳನ್ನು ದಾನ ನೀಡಿರುವರು.

ದತ್ತಿ-೩ (ಪಙ್ತ ೪೯-೫೭): ಅಗ್ರಹಾರ ಕೊಂಡಗುಳಿಯ ಮಹಾಜನಂಗಳು 'ಶ್ರೀ ಕೇಶವದೇವರ್ಗೆ' ದೀಪದಾನ, ಪುಷ್ಪದಾನಗಳಿಗಾಗಿ ಎಣ್ಣೆ ಹೂದೋಟಗಳನ್ನು ದಾನನೀಡಿರುವರು.

ಈ ಮೂರರಲ್ಲಿ ಶರಣ ಕೇಶಿರಾಜನ ಚರಿತ್ರೆಗೆ ಸಂಬಂಧಿಸಿದುವು ಒಂದು ಮತ್ತು ಮೂರನೆಯ ದತ್ತಿಗಳು. ತ್ರಿಭುವನಮಲ್ಲ ವಿಕ್ರಮಾದಿತ್ಯನ ಸಮಯದ 'ಶಾಸನ-೧'ರ ಕಾಲ ಕ್ರಿ.ಶ. ೧೧೦೭, ಈತನ ಮಗ ಭೂಲೋಕಮಲ್ಲ ಸೋಮೇಶ್ವರನ ಸಮಯದ ಈ 'ಶಾಸನ-೨'ರ ಕಾಲ ಕ್ರಿ.ಶ. ೧೧೩೨. ಹೀಗಾಗಿ ಕೇಶಿರಾಜದಂಡನಾಯಕನು ಕ್ರಿ.ಶ. ೧೧೦೭ಕ್ಕೆ ಮೊದಲು ಹುಟ್ಟಿ ಕ್ರಿ.ಶ. ೧೧೩೨ಕ್ಕೆ ತರುವಾಯ ಲಿಂಗೈಕ್ಯನಾಗಿರುವುದು ಸತ್ಯ. ತ್ರಿಭುವನಮಲ್ಲ ವಿಕ್ರಮಾದಿತ್ಯ (ಹೆಮ್ಮಾಡಿರಾಯ)ನಿಗೂ ಈತನಿಗೂ ಕೊನೆಕೊನೆಗೆ ವಿರಸಹುಟ್ಟಿ ಈತನು ದಂಡನಾಯಕ ಪದವಿಯನ್ನು ತ್ಯಜಿಸಿದನೆಂದು ವೀರಶೈವ ಪುರಾಣಗಳು ಹೇಳುತ್ತವೆ. ಈ ವಿಕ್ರಮಾದಿತ್ಯನ ಆಳಿಕೆಯ ಕೊನೆ ಕ್ರಿ.ಶ. ೧೧೨೬. ಅದಕ್ಕಾಗಿ ಕೇಶಿರಾಜನು ಕ್ರಿ.ಶ. ೧೧೨೬ಕ್ಕೆ ಮೊದಲು ಮಂತ್ರಿಪದವಿಯನ್ನು ತ್ಯಜಿಸಿರಬೇಕು. ಅದಕ್ಕಾಗಿಯೇ "ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಸಾಮನ್ತಾಧಿಪತಿ(ಮ)XXX ಮಹಾಪ್ರಚಣ್ಡ ದಣ್ಡನಾಯಕ..."' ಎಂದು 'ಶಾಸನ-೧' (ಕ್ರಿ.ಶ. ೧೧೦೭) ಕರೆದರೆ, "ಶ್ರೀಮತ್ ಕೇ(ಸಿ)ಮಯ್ಯ ದಂಡನಾಯಕರುಂ" ಎಂದು ರಾಜಕೀಯ ಬಿರುದುಗಳಿಲ್ಲದೆ ಈ 'ಶಾಸನ-೨' (ಕ್ರಿ.ಶ. ೧೧೩೨) ಕರೆದಂತಿದೆ. ಒಟ್ಟಿನಲ್ಲಿ ಈ ಕೇಶಿರಾಜನು ಬಸವಣ್ಣನವರ ಕಾಲಕ್ಕೆ ಸಮೀಪ ಸಮೀಪದವನಾಗಿ ಕನಿಷ್ಟಪಕ್ಷ ಕ್ರಿ.ಶ. ೧೧೩೨ರವರೆಗೆ ಬದುಕಿದ್ದನೆಂದು ತಿಳಿದುಬರುತ್ತದೆ.

---

* ಈ ಗ್ರಂಥದ ಉಲ್ಲೇಖ ಚೋಳ ವೀರಕೇಸರಿವರ್ಮನ ತಮಿಳುಶಾಸನ (EI.XXXVII.P.190) ಮತ್ತು ತಾಳಗುಂದಶಾಸನ (EC.VIII SK. 185)ಗಳಲ್ಲಿಯೂ ಬರುತ್ತದೆ.

ಈ ಶಾಸನದಲ್ಲಿ "ಶ್ರೀಮತ್ ಕೇ(ಸಿ)ಮಯ ದಂಡನಾಯಕರುಂ ಗಣಪತಿ ದಂಡ ನಾಯಕರುಂ ಕೂಡಿ" ದತ್ತಿ ನೀಡಿದ್ದಾರೆ. ಅನ್ಯೋನ್ಯರಾಗಿ ನಿಂತು ದತ್ತಿ ನೀಡಿರುವ ವಿಷಯ, ಅವರಲ್ಲಿ ಕೌಟುಂಬಿಕ ಸಂಬಂಧವನ್ನು ಕಲ್ಪಿಸಲು ಪ್ರಚೋದನೆ ನೀಡುತ್ತದೆ. 'ಶಾಸನ-೧'ರ ಪ್ರಕಾರ ನಿಂಬಣದಂಡನಾಯಕನ ಮಗ ಕೇಶಿರಾಜ ದಂಡನಾಯಕ. ಹಾಗೆಯೇ ಈ ಗಣಪತಿ ದಂಡನಾಯಕನೂ ಇನ್ನೊಬ್ಬ ಮಗನಾಗಿರಲು, ಅಂದರೆ ಕೇಶಿರಾಜದಂಡನಾಯಕನ ತಮ್ಮನಾಗಿರಲು ಸಾಧ್ಯವಿದೆ. ಈ ಮಾತಿಗೆ ಇನ್ನೂ ಆಧಾರಬೇಕು.

ಕೊಂಡಗುಳಿ, ಪ್ರಾಚೀನ ಕರ್ನಾಟಕದ ಸುಪ್ರಸಿದ್ಧ ಅಗ್ರಹಾರಗಳಲ್ಲಿ ಒಂದು ಎಂಬ ವಿಷಯ ಇತ್ತೀಚೆಗೆ ಬೆಳಕಿಗೆ ಬಂದಿದೆ.$ ಈ ಅಗ್ರಹಾರದಲ್ಲಿ ಒಂದು ವಿದ್ಯಾಪೀಠವಿದ್ದಿತು. ಇಲ್ಲಿಯ ಬೇರೆ ಶಾಸನಗಳೂ ಇದನ್ನು ಉಲ್ಲೇಖಿಸುತ್ತವೆ.* ಬಹುಶಃ ಬ್ರಾಹ್ಮಣರಿಂದ ನಡೆಯುತ್ತಿದ್ದ ವೈದಿಕ ಶಿಕ್ಷಣಕ್ರಮವನ್ನೊಳಗೊಂಡ ಈ ಶಾಲೆಗೆ ಅನ್ಯಮತೀಯನಾದ ಕೇಶಿರಾಜನು ನೀಡಿದ ದತ್ತಿ, ಅವನ ಉದಾರಭಾವವನ್ನೂ ವಿದ್ಯಾಪ್ರೇಮವನ್ನೂ ಸಾರುತ್ತದೆ. ದಂಡನಾಯಕ ಕೇಶಿರಾಜನು ಶರಣನಾಗಿದ್ದ ಕಾರಣ ಈ ಶಾಸನದ ಮಹಾಜನಂಗಳಿಗೆ ವರ್ಣನಪರ ವಿಶೇಷಣಗಳನ್ನಾಗಲೀ, ದತ್ತಿಕೊಡುವಲ್ಲಿ 'ಮಹಾಜನಂಗಳ ಕಾಲಂ ಕರ್ಚಿ' 'ಸರ್ವನಮಸ್ಯವಾಗಿ' ಎಂಬ ಪದಗಳನ್ನಾಗಲೀ ಬಳಸಿಲ್ಲವೆಂದು ಭಾವಿಸಬಹುದಾಗಿದೆ.

ಕೇಶಿರಾಜನು ಮಹಾಜನರಿಗೆ ವಿದ್ಯಾನಿಮಿತ್ತ ದತ್ತಿ ಕೊಟ್ಟರೆ, ಮಹಾಜನರು ಆ ಊರ 'ಕೇಶವದೇವರ್ಗೆ' ದೀಪದಾನಕ್ಕೋಸುಗ ಎಣ್ಣೆ ತೋಟಗಳನ್ನು ನೀಡಿದ್ದಾರೆ. ಹೀಗೆಂದಾಗ ಈ ಸಮಯದಲ್ಲಿ ಕೇಶಿರಾಜನು ಲಿಂಗೈಕ್ಯನಾಗಿ ಅವನ ಹೆಸರಿನಲ್ಲಿ ಒಂದು ದೇವಾಲಯ ನಿರ್ಮಾಣವಾಗಿದ್ದಿತೆಂದು ಭಾವಿಸುವ ಕಾರಣವಿಲ್ಲ. ಪ್ರಾಚೀನಕಾಲದಲ್ಲಿ ತಮ್ಮ ಹೆಸರಿನ ಲಿಂಗಪ್ರತಿಷ್ಠೆಯಿಂದ ತಮಗೆ ದೇವತ್ವಪ್ರಾಪ್ತವಾಗುವದೆಂಬ ನಂಬಿಕೆಯಿದ್ದುದರಿಂದ, ಸ್ವತಃ ಕೇಶಿರಾಜನೇ ಒಂದು ದೇವಾಲಯರನ್ನು ಕಟ್ಟಿಸಿ ತನ್ನ ಹೆಸರಿನಲ್ಲಿಯೂ ಲಿಂಗವನ್ನು ಸ್ಥಾಪಿಸಿರಬಹುದು.* ಅಂತಹ ದೇವಾಲಯಕ್ಕೆ ಈ ಮಹಾಜನರು ಕೇಶಿರಾಜನ ಸಮ್ಮುಖದಲ್ಲಿ ದತ್ತಿ ನೀಡಿರಬೇಕು. ಒಟ್ಟಿನಲ್ಲಿ ಕೇಶಿರಾಜನು ತನ್ನ ಅಧಿದೈವ ಸೋಮೇಶ್ವರನ ದೇವಾಲಯವನ್ನು ಕಟ್ಟಿಸಿದನೆಂದು 'ಶಾಸನ-೧' ಹೇಳಿದರೆ, ತನ್ನ ಹೆಸರಿನಲ್ಲಿಯೂ ಕೇಶವದೇವಾಲಯವನ್ನು ಕಟ್ಟಿಸಿರಬಹುದೆಂದು ಈ 'ಶಾಸನ-೨'ರಿಂದ ಊಹಿಸಲು ಸಾಧ್ಯವಿದೆ.

ಈ ಎರಡು ಶಾಸನಗಳಲ್ಲದೆ–

"ಓಹಿಲ ದಾಸ ಚೆನ್ನ ಸಿರಿಯಾಳ ಹಲಾಯುಧ ಬಾಣನುದ್ಭುಟ ।
ರ್ದೇಹದೊಳೊಂದಿ ಬಂದ ಮಳೆಯೇಶ್ವರ ಕೇಶವರಾಜಾದಿಯಾಗಿ..."[೧೦೮]
"ಕಾಳಿದಾಸ ಕೇಶಿರಾಜದಣ್ಣಾಯಕ ಸುರಿಗೆಯಚೆಲ್ವಡರಾಯ..."[೧೦೯]

$ Agraharas in ancient Karnataka (1920) S. Leela.

* "ಸಾಲೆಯ ಸುತ್ತಲು ನಾಲ್ಕು ಬೀದಿಯಲು" - SII XX. 302. "ಸಾಲೆಯ ಕೇರಿ"- SII XX.319

* ಇಲ್ಲವೆ 'ಕೇಶವದೇವ' ಹೆಸರಿನ ಒಂದು ದೇವತೆ ಪ್ರಾಚೀನಕಾಲದಿಂದಲೂ ಆ ಗ್ರಾಮದಲ್ಲಿ ಇದ್ದು, ಆ ಹೆಸರನ್ನೇ ಈ ದಣ್ಣಾಯಕನಿಗೆ ಇಟ್ಟಿರಬಹುದು.

೧೦೮. EI.VP. 245 ಅಬ್ಬಲೂರು, ಕ್ರಿ.ಶ. ೧೨೦೦?

೧೦೯. EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ಎಂದು ಅಬ್ಬಲೂರು ಮರಡಿಪುರ ಶಾಸನಗಳು ಈತನ ಹೆಸರನ್ನು ಉಲ್ಲೇಖಿಸುತ್ತವೆ. ಜೇವರಗಿ ತಾಲೂಕಿನ ಜಾಡಕೊಂಡಗುಳಿ ಶಾಸನ(೧೧೧೬)ದಲ್ಲಿ ದೇವತೆಯ ಹೆಸರಾಗಿ 'ಕೇಶವದೇವರು' ಪಾಠ ಕಂಡುಬರುತ್ತದೆ.[೧೯೯ಅ]

ಪಂಚಾಚಾರ್ಯರು-ಪಂಡಿತತ್ರಯರು:

ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ವಿಶ್ವೇಶ್ವರ ಎಂಬ ಪಂಚಾಚಾರ್ಯರ ಶ್ರೀಪತಿಪಂಡಿತ, ಮಂಚಣ್ಣಪಂಡಿತ, ಮಲ್ಲಿಕಾರ್ಜುನ ಪಂಡಿತ ಎಂಬ ಪಂಡಿತತ್ರಯರ ಚರಿತ್ರೆಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳು ಇನ್ನೂ ಕಗ್ಗಂಟಾಗಿ ಉಳಿದಿವೆ. ಈ ಜಟಿಲತೆಗೆ ಕೈನೀಡದೆ ಇವರಿಗೆ ಸಂಬಂಧಿಸಿದ ಶಾಸನಗಳನ್ನು ಮಾತ್ರ ಇಲ್ಲಿ ವಿವೇಚಿಸಬಹುದು.

ಶ್ರೀಪತಿಪಂಡಿತ

ಬೆಜವಾಡದಲ್ಲಿ ಬ್ರಾಹ್ಮಣರೊಂದಿಗೆ ವಾದಕ್ಕೆ ನಿಂತು ಬಟ್ಟೆಯಲ್ಲಿ ಬೆಂಕಿಕಟ್ಟಿ ತೋರಿದ ಶ್ರೀಪತಿಪಂಡಿತನ ವಿಷಯ ತೆಲುಗು ಮತ್ತು ಕನ್ನಡ ಕಾವ್ಯಗಳಲ್ಲಿ ನಿರಂತರ ನೆಲೆಗೊಂಡಿದೆ. ಈ ವಿಷಯ,

ತತ ಶ್ರೀ ಪಂಡಿತಾರಾಧ್ಯನಾಮ್ನಾ ಭಕ್ತೋತ್ತಮೇನ ಚ।
ಶಿವಭಕ್ತಾ ಏವನೂನಂ ದೇವರ್ಷಿಭ್ಯೋಧಿಕಾ ಇತಿ।
ಚೀನಾಂಬರೇಽಣಗ್ನಿಂ ಸಂಸ್ಥಾಪ್ಯ ಶಮೀಕೋಮಲ ಶಾಖಯಾ।
ಬದ್ಧೇ ಮಲ್ಲೇಶ್ವರಃ ಪ್ರೀತಃ ಪ್ರತ್ಯಕ್ಷಸ್ಸಮ ಜಾಯತ॥[೨೦೦]

ಎಂದು ಬೆಜವಾಡ ಶಿಲಾಶಾಸನದಲ್ಲಿ ಸ್ಥಾಯಿಯಾಗಿದೆ.

ಅಮರಗುಂಡದ ಮಲ್ಲಿಕಾರ್ಜುನ

ಆಚಾರ್ಯ ಪಂಚಕದಲ್ಲೊಬ್ಬನಾದ ಪಂಡಿತಾರಾಧ್ಯ, ಪಂಡಿತತ್ರಯದಲ್ಲೊಬ್ಬನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯ, ಕಾವ್ಯಪುರಾಣಗಳಲ್ಲಿ ಬರುವ ಅಮರಗುಂಡದ ಮಲ್ಲಿಕಾರ್ಜುನ ಪಂಡಿತಾರಾಧ್ಯ, ಶ್ರೀಶೈಲದ ಪಂಡಿತಾರಾಧ್ಯ ಎಂಬ ಹೆಸರುಗಳು ತೊಡಕು ಬಿದ್ದು, ವಿದ್ವತ್ಪ್ರಪಂಚದಲ್ಲಿ ಸಮಸ್ಯೆ ಉದ್ಭವಿಸಿದೆ. ಪ್ರಕೃತ ಅಮರಗುಂಡ ಮಲ್ಲಿಕಾರ್ಜುನನ ವಿಷಯ ಗುಬ್ಬಿಶಾಸನ (ಕ್ರಿ.ಶ. ೧೮೯೬)ದಲ್ಲಿ ಹೀಗೆ ಬರುತ್ತದೆ:

ಶ್ರೀಪಾಲ್ಗುರ್ಜರ ಭಕ್ತಿಯಣ್ಬುವಿಡಿದಾ ಶ್ರೀಶೈಲಮಂ ಮಾಣ್ದು ತ ।
ದ್ಭೂಪಾಲರ್ಕಳನೋಲುತಂದು ಕೃತದೊಳ್ ಮಲ್ಲೇಶ್ವರಂ ಗುಬ್ಬಿಯಂ ।
ಕಾಪಿಟ್ಟಂ ಕಪಿಲಾಂಕಸಿದ್ಧವೆಸರಾದಾ ಕಾಲದೊಳ್ ರಾಮನಿಂ ।
ನಾ ಪೂಜಾಂಘ್ರಿತನಾಗಿ ತಾನಮರಗೊಂಡಾಧೀಶ್ವರಂ ತೋರ್ದಪಂ ।

೧೯೯ಅ. ಕಲಬುರ್ಗಿ ಜಿಲ್ಲೆಯ ಶಾಸನಗಳು(ಸಂ. ಹನುಮಾಕ್ಷಿ ಗೋಗಿ) ಪು.೩೩೮
೨೦೦. SII.X.No. 22 ಬೆಜವಾಡ ೧೧೧.

......ಸ್ವಸ್ತಿ ಶ್ರೀ ಸಮಸ್ತಭೂಮಂಡಲ ಪುಂಡರೀಕ ಕರ್ಣಿಕಾಯಮಾನಮಾದ ಪಾಲ್ಗುರ್ಜರರಾಯ ಭಕ್ತಿಗೋಸ್ಕರಕಿಲ್ಲಿಗೈತಂದ ಕಪಿಲಸಿದ್ಧಮಲ್ಲಿಕಾರ್ಜುನನಿಂ, ಶ್ರೀರಾಮನಿಂದಿಲ್ಲಿ ಪೂಜೆಗೊಂಡ ಅಮರಗುಂಡಾಧೀಶ್ವರನಿಂ ಶೋಭಿಸುವ... ಈ ಗುಬ್ಬಿಯಲ್ಲಿ....."[೧೧೧]

ಅಮರಗುಂಡದ ಮಲ್ಲಿಕಾರ್ಜುನನು ಯುಗಯುಗಗಳಲ್ಲಿ ಅವತಾರವೆತ್ತಿದ ವಿಷಯ ಇಲ್ಲಿ ಬಂದಿದೆ. ಈ ಮುದ್ರಿಕೆಯ ಕೆಲವು ವಚನಗಳು ಲಭಿಸುತ್ತವೆ.

ಶಿವಯೋಗಿ ಶಾಂತಿಮಯ್ಯ

ಈ ಶಾಂತಿಮಯ್ಯ ಹೆಸರಿನ ಹಿಂದಿರುವ 'ಶಿವಯೋಗಿ' ಪದವನ್ನು ಗಮನಿಸಿ ನಾವು ಇವನನ್ನು ಶರಣರಲ್ಲಿ ಪರಿಗಣಿಸಿದ್ದೇವೆ. ಇವನನ್ನು ಕುರಿತು ಸಿರಿವಾಳ ೧೧೭೦, ಕೆಲ್ಲೂರ ೧೧೭೫, ಹೋತಗಲ್ಲ ೧೧೭೫, ಸಿರಿವಾಳ ೧೧೭೮- ಹೀಗೆ ನಾಲ್ಕು ಶಾಸನಗಳು ಸಿಗುತ್ತವೆ. ಇವುಗಳಿಗಾಗಿ ನನ್ನ ಮಾರ್ಗ **IV** ಕೃತಿಯಲ್ಲಿಯ 'ಕುರುಬರ ಗುರು ಶಾಂತಮುತ್ತಯ್ಯ' ಲೇಖನವನ್ನು ಕೊಡಬಹುದು. ಹೆಚ್ಚಿನ ಮಾಹಿತಿಗಾಗಿ ಇದೇ ಪುಸ್ತಕದ ರೇವಣಸಿದ್ಧ, ನೆಲುವಿಗೆಯ ಶಾಂತಯ್ಯ ಶೀರ್ಷಿಕೆಗಳನ್ನು ಗಮನಿಸಬಹುದು.

ರೇವಣಸಿದ್ಧ

ಸಿದ್ಧರಾಮ ಶಿವಯೋಗಿಯ ಜನನಭವಿಷ್ಯ ನುಡಿದು, ಮಂಗಳವಾಡ ಪ್ರದೇಶದಲ್ಲಿ ಶೈವಮತವನ್ನು ಜಾಗೃತಗೊಳಿಸಿದ ರೇವಣಸಿದ್ಧ ಮತ್ತು ವೀರಶೈವ ಪಂಚಾಚಾರ್ಯರಲ್ಲೊಬ್ಬನಾದ ರೇವಣಸಿದ್ಧರು ಭಿನ್ನರೋ ಅಭಿನ್ನರೋ ಎಂಬ ಪ್ರಶ್ನೆಯ ತೊಡಕು ಇನ್ನೂ ಬಿಟ್ಟಿಲ್ಲ. ಪ್ರಸ್ತುತದಲ್ಲಿ ಈ ಕಗ್ಗಂಟಿಗೆ ಕೈನೀಡದೆ ಶಾಸನಸ್ಥ ರೇವಣಸಿದ್ಧನ(ರ) ವಿಷಯವನ್ನು ಮಾತ್ರ ಅವಲೋಕಿಸಬಹುದಾಗಿದೆ.

ಬಯಿರತ್ತಿ ಶಾಸನ[೧೧೨]: "ಮುಸುಕುಂದ ಮಹಾರುಸಿಯ ಪಿತಾಮ ರೇವಣಸಿದ್ದೆಯ ದೇವರಿದ್ದ... ತಾವ ನಾ ಸಿಮ ಮುನಿಗಳು ಪೂಜೆಯ ಮಾಡಿದ ಮುಲತಾಣ." ಡಾ. ಬಿ.ಎಲ್. ರೈಸ್ ಅವರ ಪ್ರಕಾರ ಈ ಶಾಸನದ ಕಾಲ ಕ್ರಿ.ಶ. ೧೦೦೦. ಪಂಚಾಚಾರ್ಯ ರೇವಣಸಿದ್ಧ, ಸಿದ್ಧರಾಮನ ಜನನಭವಿಷ್ಯ ಹೇಳಿದ ರೇವಣಸಿದ್ಧ ಮತ್ತು ಈ ಶಾಸನದ ರೇವಣಸಿದ್ಧ ಒಬ್ಬನೇ ಎಂದು ಶ್ರೀ ಚನ್ನಮಲ್ಲಿಕಾರ್ಜುನರ ಮತ.

ಸಿರಿವಾಳ ಶಾಸನ[೧೧೩] **(ಕ್ರಿ.ಶ. ೧೧೮೭)**: ಗುಲ್ಬರ್ಗಾ ಜಿಲ್ಲೆಯ ಶಹಪುರ ತಾಲೂಕಿನ ಸಿರಿವಾಳಗ್ರಾಮದ ಸಿದ್ಧೇಶ್ವರ ದೇವಾಲಯದ ದಕ್ಷಿಣರಂಗಮಂಟಪದಲ್ಲಿ ನಿಲ್ಲಿಸಲಾದ ಈ ಶಾಸನದ ಪಾಠ ಹೀಗಿದೆ:

೧. *[ಸ್ವಸ್ತಿ ಸಮಧಿಗತ ಪಂಚಮಹಾಶಬ್ದ] ಮಹಾಮಂಡಳೇಶ್ವರಂ ತಗರನಗರಾಧೀಶ್ವರಂ [ಜೀಮೂತವಾಹ]-

---

೧೧೧. EC.XVI P No.30 ಗುಬ್ಬಿ, ಕ್ರಿ.ಶ. ೧೮೯೬.

೧೧೨. EC.IX ಹೊಸಕೋಟೆ ೧೨೩ ಬಯಿರತ್ತಿ.

೧೧೩ ಶಿವಾ ೪-೨ ಮತ್ತು ಕ.ಭಾ, ೯-೩.

* ಪ್ರಾರಂಭದ ಭಾಗ ಒಡೆದು, ಕಳೆದುಹೋಗಿದೆ.

೨. ನಾನ್ವಯಪ್ರಸೂತಸೂರ್ಯ್ಯಂ ಚ(ರ?)ರಘುಜಾತಂ ಶ್ರೀ ಶಿಳಾಜಿವಂಶೋದ್ಭವ ನರೇಂದ್ರ ವಿಭವಾಮರೇಂದ್ರ (ಡಂಗಾಜಿ)-

೩. ಭೇರಿನಿರ್ಗ್ಘೋಷಣಂ ಸಮರವಿಭೀಷಣಂ ವಿದಗ್ಧಮುಗ್ಧಾಂಗನಾಹ್ರಿದಯಕುಸುಮ ಕೋದಂಡ ಕದನಪ್ರಚಂಡ ಚಿಂ-

೪. ನಮನ್ನೆಯ ಪನ್ನಗವೈನತೇಯ ವಿರೋಧಿಮಂನ್ನೆಯ ತಾರಕಾಸುರಕಾರ್ತ್ತಿಕೇಯ -ನತಿವಿಷಮಹಯಾ-

೫. ರೂಢಪ್ರೌಢರೇಖಾರೇವಂತ ವಿಜಯಲಕ್ಷ್ಮೀಕಾಂತ ಸುವರ್ಣ್ಣಗರುಡಧ್ವಜ ವಿಮಳಕೀರ್ತ್ತಿಧ್ವಜ ಕಾರ್ತ್ಯಯನೀದೇವಿಲ-

೬. ಬ್ಧವರಪ್ರಸಾದ ಮ್ರಿಗಮದಾಮೋದ ಆಳಿಂ ಮುಂನಿಱಿವ ಸೌರ್ಯ್ಯಮಂ ಮೆಱೆವ ಆ ಬಂಟರಭಾವ

೭. ಮಱೆವುಗೆಕಾವ ಆನೆಗನಂಕಕಾಱ ರಣರಂಗನೀಱ ನಿಜದಬೆಡಂಗ ಸಾಹಸೋತ್ತುಂಗ ಶ್ರೀಮದು-

೮. ತ್ತರೇಶ್ವರದೇವರ ಪಾದಾರಾಧಕ ಪರಬಳಸಾಧಕ ನಾಮಾದಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮನುಮಹಾಮಂ-

೯. ಡಳೀಶ್ವರ ಎಳೆಮೇಲ ಸಿಂಗಿದೇವರಸರುಂ ಅವ್ವೆ ನಾಗಲದೇವಿಯರುಂ ಶ್ರೀಮನು ಮಹಾಪ್ರಧಾನಂ ಸೇನಾಧಿಪ

೧೦. ತಿ ಮಹಾಪಸಾಯಿತಂ ರಿಪುಮದಮರ್ದ್ದನಂ ಪ್ರತಾಪರಣರಂಗಭೈರವಂ ಶ್ರೀಮತು ಘಟ್ಟಿಯ

೧೧. ಕೇತಯನಾಯಕನುಂ ಸಮಸ್ತಪರಿವಾರಮುಂ ನಾಡಗ್ರಾಯಿತರುಂ ಶ್ರೀಮತು ಭಿಲ್ಲಮದೇವರ ಮ-

೧೨. ಹಾಪಸಾಯಿತಂ ಅಧಿಕಾರಿ ಪಯ್ಯನಾಯಕರುಂ ಸಕವರುಷಂ ೧೧೧೦ ನೆಯ ಪ್ಲವಂಗ ಸಂವತ್ಸರ-

೧೩. ದ ಭಾದ್ರಪದ ಬಹುಳದಮವಾಸ್ಯೆ ಶುಕ್ರವಾರ ಸೂರ್ಯ್ಯಗ್ರಹಣ ನಿಮಿತ್ತವಾಗಿ ಎಳೆಮೇಲ-

೧೪. ಯ್ವತ್ತಱ ಬಳಿಯ ಬಾಡಂ ಮುಱುವಡಿಯ ಮಂನ್ನೆಯ ಮೇಲಾಳಿಕೆಯುಂ ಬಾಹಿರ ಸೀಮೆಯೊ-

೧೫. ಳಗಣ ನಿಧಿನಿಧಾನನಿಕ್ಷೇಪಜಲಪಾಷಾಣಮಾಳಾವ್ರಿಕ್ಷಗುಲುಮಲತಾವಳಿ ಚತುರಾಘಾಟ

೧೬. ಕಲ್ಲಕಣಿ ಅರುವಣ... ದೆಱ ಮೂಲೆಗರರುವಣ ಅಷ್ಟಭೋಗತೇಜಸಾಮ್ಯದಂಡ ದೋಷ ಕಾಣಿಕೆ ಕಿ-

೧೭. ಱುಕುಳಾಯದಾಯ ಸರ್ಬ್ಬಯ ಶುದ್ಧವಾಗಿಯೆಂತಿನಿತುವಂ ಶ್ರೀಮದ್ದಕ್ಷಿಣ ವಾರಣಾಸಿ

೧೮. ಧರ್ಮ್ಮದ ಮನೆಯಾದಿಪಟ್ಟಣ ಸಿರಿವೊಳಲ ಶ್ರೀಮತು ಸಿದ್ಧಸಾತೇಶ್ವರದೇವರ ಅಂಗಭೋಗರಂ-

೧೯. ಗಭೋಗ ಖಂಡಸ್ಫುಟಿತ ಜೀರ್ನ್ನೋದ್ಧಾರಕ್ಕಂ ಶಿವಯೋಗಿಗಳಶನಾತ್ಸಾಧನಕ್ಕಂ ಶ್ರೀಮತು ಸರ್ವ್ವ-

೨೦. ದೇವದಯೊಳಗೆ ಶಿವಯೋಗಿ ಶಾ(ನ್ತಿ*)ಮಯ್ಯಂಗಳ ಮಹಿಮೆಯೆಂತೆನೆ ॥ ಕ್ರಿತಯುಗ ತ್ರೇತೆ-

೨೧. ಮೂಱನೆಯ ದ್ವಾಪರದೊಳು ನೆಗಳ್ದ ಭೂತೋದ್ಭವರ್ಬ್ಬತಿತ ಬ್ರತಾನುಕಾರಿಗಳು ದಿಬ್ಯಸಹಸ್ರಶತಾ-

೨೨. ನುಮಬ್ದ ಕಿಂಕರನು ಹರಯಿಬಳಿಕವಾತೆಸದೀವನದೆಂತೆನೆ ಶಾನ್ತಿಮಯ್ಯ ತತುಕ್ಷ-

೨೩. ಣದೊಳೆ ಭಕ್ತಿಯ ಪಡೆದನೇಂ ಕಲಿವೀರನೋ ವೀರಭದ್ರನೋ ॥ ಶ್ರೀಮದಣಿ ಮಾದ್ಯಷ್ಟಗುಣಸಂ-

೨೪. ಪಂನರು ತತ್ವಜ್ಞಾನಪ್ರಸನ್ನರುಂ ಷಡಂಗಯೋಗಸಂಗದರುಂ ಸಸಾರಭ್ಯಸಂಗ ನಿಸಂಗರುಮಪ್ಪ ಶಿವಯೋ-

೨೫. ಗಿ ಶಾನ್ತಿಮಯ್ಯದೇವಂಗಳ ಪುತ್ರ ರೇವಣದೇವಯ್ಯಂಗಳ ಪ್ರಸಿದ್ಧತಿಕೆಯೆಂತೆನೆ ॥ ಒರ್ಬ್ಬಳ ತಂಡುಳದಿಂ-

೨೬. ದಮ್ಮುರ್ಬ್ಬೀಶನ ರಾಯಕಟಕಮಂ ತಣಿಪಿದನಾ ಸರ್ಬ್ಬಜ್ಞಮೂರ್ತ್ತಿ ಜಗದೊಳಗೊರ್ಬ್ಬನೆ ಶಿವಸಿಧ ಚ-

೨೭. ಕ್ರಿ ರೇವಣದೇವಂ ॥ ತೊಱೆ ತುಂಬಿ ಬಂದಡರೆ ತಾ ಹಱುಗೋಲಂ ತನ್ನಿವೆಂನ ದಾಜ್ಞಾಬಲದಿಂ ತೊಱೆ-

೨೮. ಯಂ ದಾಂಟುವನಿಂತೀ ಕುಱುಪಿನ ತತುಕಾರನೀ ರೇವಣದೇವಂ ॥ ಅಂದೊಂಮ್ಮೆ ಸಿದ್ಧನೆಂದೊಡೆ-

೨೯. ನಿಂದಿಸಿದರು ಮನುಜರೆಲ್ಲ ಧರೆ ಭೂರ್ಭುಗಿಲೆನೆ ಬೆಂದುದು ಸತ್ವರಜಂತಮವಂದಿನ ಸಿದ್ಧಂ ಪ್ರ-

೩೦. ಸಿದ್ಧ ರೇವಣದೇವಂ ॥ ಮುನ್ನೊಮ್ಮೆ ಸಿದ್ಧನಾಗಿಯುವನ್ನದ ತವನಿಧಿಯ ತೋಱೆ ಲೋಕದೋಳಂ-

೩೧. ಮತ್ತಿನ್ನೊಮ್ಮೆ ನೋರ್ಪ್ಪೆನೆಂದುಂ ತಂನಂ ತಾನಱಿಪ್ಪ ನೆಗಳ್ದ ರೇವಣದೇವಂ ॥ ತಾರದ ಮಂದ್ರದ ಮಧು-

೩೨. ರದ ಸಾರಾಯದ ಸಪ್ತಸರದಿಂದ ನರೇಶ್ವರನಂ ಭೋರೆನೆ ಕೇಳಿಸುತಿಪ್ಪ ಧಾರಿಣಿ ತಳದೊಳಗೆ ನೆಗಳ್ದ ರೇವಣದೇವ ॥

೩೩. ನ್ರಿತ್ಯಕ್ಕೆ ನಿಂದಡೆವೆ ಬಲದತ್ಯದ್ಭುತ ಮರುಳತಂಡ ರೌದ್ರಮಿದೆನಲುಂ ಪ್ರತ್ಯಕ್ಷ ಲಿಂಗ ಬೆಮರಲು ಸತ್ಯ-

೩೪. ದಿಂದತ್ಯಂತ ಸಿದ್ಧರೇವಣದೇವ ॥ ಅನ್ತಾ ಭೂಲೋಕ ಸಿದ್ಧಪ್ರಸಿದ್ಧರಪ್ಪ ರೇವಣ ದೇವಯ್ಯಂಗಳ-

೩೫. ಪಾದಪ್ರಕ್ಷಾಳನಂ ಮಾಡಿ ತ್ರಿಭೋಗಾಭ್ಯಂತರ ಸರ್ಬ್ಬನಮಶ್ಯವಾಗಿ ಧಾರಾಪೂರ್ಬ್ಬ-

೩೬. ಕಂ ಮಾಡಿ ಕೊಟರು ಮಂಗಳ ಮಹಾ ಶ್ರೀ ಶ್ರೀ.... ಯ ಪ್ರಭುಗಳು ಎಂಟು ಹಿಟ್ಟುಗ.

೩೭. ಳಮಯ್ಯಂ..............ಂಭು ಸೋಮನಾಥದೇವರಾಣೆಯ...

೩೮. ಲೂರು ನಾವಿದಿಗೆಯೂರಾ................ ಮಿ ಪೂರ್ಬ್ಬಮರ್ಯ್ಯಲದೆ ॥

೩೯. ತ್ತಂ ಪರದತ್ತಂ ವಾಯೋಹ............. ಣೆ ವಿಷ್ಟಾಯಾ...

೪೦. ತೆ ಕ್ರಿಮಿ ॥ .... ಲನಿಯೊಭವ...............

೪೧. ವಿನಃ ಪಾರ್ತ್ಥಿ ....

ಅಲೌಕಿಕ ಘಟನೆಗಳನ್ನು ಅನುಷ್ಠಾನಗೊಳಿಸಿ ತೋರಿಸಿದ ರೇವಣಸಿದ್ಧನೆಂಬವನ 'ಪಾದಪ್ರಕ್ಷಾಲನಂ' ಗೈದು ಸಿದ್ಧಶಾಂತೇಶ್ವರ ದೇವರಿಗೆ ದತ್ತಿ ಬಿಟ್ಟುದನ್ನು ಹೇಳುವ ಈ ಶಾಸನದ ಕಾಲ ಕ್ರಿ.ಶ. ೧೧೮೭. ಮೇಲಣ ಪದ್ಯಗಳಲ್ಲಿ ಕಂಡುಬರುವ ಪವಾಡಗಳು ಸಿದ್ಧರಾಮನ ಜನನವನ್ನು ಸೂಚಿಸಿದ ರೇವಣಸಿದ್ಧನನ್ನು ಕುರಿತ ವೀರಶೈವ ಕಾವ್ಯಗಳಲ್ಲಿಯೂ ಕಂಡುಬರುವುದರಿಂದ ಈ ಇಬ್ಬರೂ ಅಭಿನ್ನ. ಈ ಶಾಸನದ "ಶಿವಯೋಗಿ ಶಾಂತಿಮಯ್ಯದೇವಂಗಳ ಪುತ್ರ ರೇವಣದೇವಯ್ಯ" ಎಂಬುದಕ್ಕೆ ಶಾಂತಿಮಯ್ಯಗಳ ಶಿಷ್ಯ ರೇವಣಸಿದ್ಧನೆಂದು ವಿದ್ವಾಂಸರು ವಿವರಣೆ ನೀಡುತ್ತಾರೆ. "ನಿರ್ಲಜ್ಜ ಶಾಂತಯ್ಯನೆಂಬ ದೇಶಿಕೇಂದ್ರನು ಚಂಗಣಗಿಲ ಮಂಟಪದ ರೇವಣಸಿದ್ಧೇಶ್ವರಂಗೆ ಬೋಧಿಸಿದರು ನೋಡಾ"[೧೧೪] ಎಂಬ ಸಂಗನಬಸವೇಶ್ವರನ ವಚನ ಇವರಿಗೆ ಆಧಾರ. ಪುರಾಣಗಳ ಪ್ರಕಾರ ರೇವಣಸಿದ್ದನ ಇಷ್ಟಲಿಂಗದ ಹೆಸರು "ಶಾಂತಮಲ್ಲಿಕಾರ್ಜುನ" ಎಂಬುದನ್ನು ಇಲ್ಲಿ ನೆನೆಯಬಹುದು. ಇಲ್ಲಿ ಬರುವ ಶಾಂತಿಮಯ್ಯ ಮತ್ತು ಭೂಯಾರ ಶಾಸನೋಕ್ತ(೧೧೬೨) ನೆಲುವಿಗೆಯ ಸಾತಯ್ಯಗಳ ಸಂಬಂಧ ಚಿಂತನೀಯ.

ಅವ್ವೆಯರಹಳ್ಳಿ ಶಾಸನ[೧೧೫]: ಈ ಹಳ್ಳಿಯ ಭೀಮೇಶ್ವರದೇವಾಲಯದ ಹಿಂದಣ ಶಾಸನದಲ್ಲಿ ಒಬ್ಬ ರೇವಣಸಿದ್ದನು ಹೀಗೆ ಕಂಡುಬರುತ್ತಾನೆ:

೧. ಆನಂದ ಸಂವಚರದ ಆಗೋರತ್ರೆಗೆ

೨. ಹಜರ ಗವಿ ಬಗಿಲ ತೆಗೆದು ಮುಲೋ

೩. ಕ ಅಜಿವಹಿ ಪವಡವ ತೋಱಿದರು.

೪. ರೇವಣಸಿದ್ದೇಶ್ವರನ ಮಗ

೫. ಮರುಳಸಿದೇಶ್ವರನು.......

ಆನಂದ ಸಂವತ್ಸರದಲ್ಲಿ ಬರೆದ ಈ ಶಾಸನದ ಕಾಲ ಕ್ರಿ.ಶ. ೧೧೯೩ ಎಂದು ವಿದ್ವಾಂಸರ ಊಹೆ. ಇಲ್ಲಿಯ ರೇವಣಸಿದ್ಧ, ಮರುಳಸಿದ್ಧ ಮತ್ತು ಪವಾಡ ಎಂಬ ಪದಗಳನ್ನು ಗಮನಿಸಬೇಕು.

೪. ಚೌಡದಾನಪುರ ಶಾಸನ[೧೧೬] **(ಕ್ರಿ.ಶ. ೧೨೬೩)**: ವೀರಕನ್ನಾದೇವಿಯ ಚರಿತ್ರೆ ಮತ್ತು ಮಹತಿಗಳನ್ನು ವಿವರಿಸುವ ಚೌಡದಾನಪುರ ಶಾಸನದಲ್ಲಿ ಒಬ್ಬ ರೇವಣಸಿದ್ಧನ ಉಲ್ಲೇಖ ಹೀಗೆ ಬರುತ್ತದೆ:

ಕಾರಣಿಕರೆನಿಪರೊಳು ತಾಂ ।
ಕಾರಣಿಕನೆನಿಪ್ಪ ಸಿದ್ಧರೇವಣದೇವನ ।
ಕಾರುಣ್ಯದ ಶಿಶು ಭಕ್ತಾ ।
ಚಾರದ ಚೀಲಾಳದೇವ ಲೊಕ್ಕಿಯೊಳೆಸೆದಂ ॥

ಲೊಕ್ಕಿ ಗ್ರಾಮದಲ್ಲಿದ್ದ ಭಕ್ತಾಚಾರದ ಚೀಲಾಳನ ಗುರುವಿನ ಹೆಸರು ಸಿದ್ಧರೇವಣ. ಈ ಚೀಲಾಳನ ಶಿಷ್ಯಳಾದ ವೀರಕನ್ನಾದೇವಿಯು ಪತಿಯ ಮರಣದ ತರುವಾಯ "ಕರ್ಮುರಿಯಂ ಪಾಯಲುಜ್ಜುಗ"ಗೆಯ್ಯುವಷ್ಟರಲ್ಲಿ ಅಂದರೆ ಕೊಳ್ಳದಲ್ಲಿ ಹಾರಿಕೊಂಡು ಸಾಯಬೇಕೆನ್ನುವಷ್ಟರಲ್ಲಿ

---

೧೧೪. ಶ್ರೀ ರೇವಣಸಿದ್ಧರು, (ಶ್ರೀ ಚೆನ್ನಮಲ್ಲಿಕಾರ್ಜುನ) ಪು. ೧೮೪.
೧೧೫. ಶ್ರೀ ರೇವಣಸಿದ್ಧರು, (ಶ್ರೀ ಚನ್ನಮಲ್ಲಿಕಾರ್ಜುನ) ಪು. ೩೨೬.
೧೧೬. ಶಿವದೇವವಿಜಯ, ಅನು I-IV.

ಪರಮಗುರು ಸಿದ್ಧರೇವಣ ।
ಸಿರಿಗಿರಿಯ ನಿವಾಸನಾಜ್ಞೆಯಿಂ ಬೆಸಸಿದನ ।
ಚ್ಚರಿಯ ಮನೆಯಪ್ಪ ಮುಕ್ತೇ ।
ಶ್ವರಲಿಂಗದೊಳಲ್ಲಿ ತುಂಗಭದ್ರೆಯ ತಡಿಯೊಳ್ ॥

ನೆಲೆ ನಿಲ್ಲಬೇಕೆಂದು ಸಿದ್ಧರೇವಣನು ತಿಳಿಸಿದನೆಂದು ಈ ಶಾಸನ ಹೇಳುತ್ತದೆ. ಈ ಶಾಸನಗಳಲ್ಲಿ ಬರುವ ರೇವಣಸಿದ್ಧನೇ ಪಂಚಾಚಾರ್ಯರಲ್ಲಿ ಒಬ್ಬನೆಂದು ಕೆಲವರು ಹೇಳುತ್ತಾರೆ. ಆದರೆ ಪ್ರಸ್ತುತ ಶಾಸನೋಕ್ತ ರೇವಣಸಿದ್ಧನು ಸಿದ್ಧ(ನಾಥ)ಸಂಪ್ರದಾಯದ ಬೇರೊಬ್ಬನೆಂದು, ಅಂದರೆ ಸಿದ್ಧರಾಮನ ಜನನ ಸೂಚಿಸಿದವನೆಂದು ತೋರುತ್ತದೆ.

ಲಕ್ಷ್ಮೇಶ್ವರ ಶಾಸನ[೧೧೭]: "..........ಶ್ರೀ ಮರುಳಸಿದ್ಧೇಶ್ವರಾಯ ನಮಃ"

ಉ ॥ಶ್ರೀಮದುಮಾಮನೋಹರನೆನಿಪ್ಪ ಸದಾಶಿವನಾ ಮಹಾಗಣ॥
ಸ್ತೋಮದ ಮಧ್ಯದಲ್ಲಿ ರಜತಾದ್ರಿಯೊಳೋಲಗವಿತ್ತು ದಿವ್ಯತೇ ।
ಜೋಮಯಮೂರ್ತಿ ದಾರುಕ ನಿಮಿತ್ತದ ಸೋಂಕಿನೊಳಂದು ರೇಣುಕಂ ।
ಗೀ ಮಹಿಯಲ್ಲಿ ಲಿಂಗದುದರೋದ್ಭವ ನೇಮವನಿತ್ತನಕ್ಕಱಿಂ ॥
ಶಿವಭಕ್ತರ್ನಲಿದಾಡೆ ಸಜ್ಜನಜನಂ ಕೊಂಡಾಡೆ ದೇವರ್ಕಳು ।
ತ್ಸವದಿಂದಂಬರಭಾಗದೊಳ್ಜಯಜಯದ್ವಾನಂಗಳಂ ಮಾಡೆ ತತ್।
ಶಿವಲಿಂಗೋದ್ಭವನಾಗಿ ಸಂಚರಿಸುತಿರ್ದಂ ರೇವಣಾಚಾರ್ಯ ಪುಂ ।
ಗವನೀ ಧಾರುಣಿಯಲ್ಲಿ ಸಾಸಿರದನಾನೂರ್ವತ್ಸರಂ ಲೀಲೆಯಿಂ ॥
ಮಗುಳ್ದಾ ಸೋಮೇಶನೊಳ್ಪೊಕ್ಕಗಣಿತ ಮಹಿಮಂ ಸಿದ್ಧರೇವಣನೊಲ್ದಾ ।
ಜಗದೀಶಂ ತನ್ನ ಮುನ್ನಂ ಕಳುಪಿದ ಕಥನಂ ತೀರಲೆಂದುರ್ವ್ವಿಯೊಳ್ಬಂ ।
ದೊಗೆದಂ ಪೂವಲ್ಲಿ ಸಿದ್ಧೇಶ್ವರನೆನೆ ಪೆಸರಿಂ ಜಂಗಮಾಕಾರದಿಂ ಭ ।
ಕ್ತಗಣಕ್ಕಾನಂದಮಂ ಪುಟ್ಟಿಸುತೆ ಸುಳಿದಂ ಲೀಲಾವಿನೋದಂಗಳಿಂದಂ ॥

ಕಂ॥ ಇಂತಾ ಯತಿಕುಲತಿಲಕನ ।
ನಂತ ಮಹಾತ್ಮೆಯೊಳೆ ಚರಿಸಿ ಪುಲಿಗೆರೆಗೆಯ್ತಂ ।
ದಂ ತನ್ನ ಸಗುಣಲೀಲೆಯ ।
ದಂತದನುಳಿದಮಲ ಲಿಂಗಮಪ್ಪ ನಿಮಿತ್ತಂ ॥

....

ಸ್ವಸ್ತಿ ಶ್ರೀಮತ್ಕೈಲಾಸವಾಸಿಯಾದ ಶ್ರೀಮತ್ಪರಮೇಶ್ವರಾವತಾರಮಪ್ಪ ರೇವಣಾಚಾರ್ಯ ಭಕ್ತಜನಹಿತಾರ್ಥಮಾಗಿ ಮರ್ತ್ಯಕ್ಕೆ ಪೂಲಿ [ಯ] ಮರುಳಸಿದ್ಧೇಶ್ವರ ನಾಮವಂ ಧರಿಸಿ ಕತಿಪಯ ದಿವಸಂ ತನ್ನ ಮಹಾತ್ಮೆಯಂ ಮೆಱದು ಚರಿಸುತ ಪುಲಿಕರಪುರಕ್ಕೆಯ್ತಂದು ಸಕಲ ಭಕ್ತರಿಷ್ಟಾರ್ಥಸಿದ್ಧಿಯಂ

---

೧೧೭. SII.XX.No. 390 ಲಕ್ಷ್ಮೇಶ್ವರ, ಕ್ರಿ.ಶ. ೧೫೫೩.

ಸಾರ್ಚಿ ಶ್ರೀ ದಕ್ಷಿಣ ಸೋಮೇಶ್ವರ ಸಾನ್ನಿಧ್ಯದಲ್ಲಿ ಸಾಲಿವಾಹನಶಕದ ಸಾವಿರದ ನಾನೂಱಮೂವತ್ತಯ್ದನೆಯ ಶ್ರೀಮುಖಿಸಂವತ್ಸರದ ಭಾದ್ರಪದ ಶುದ್ಧ ಪಂಚಮೀ ಆದಿತ್ಯವಾರದರುಣೋದಯದ ಕಾಲದಲ್ಲಿ ಶ್ರೀಲಿಂಗಮೂರ್ತಿಯಾಗಿ ನೆಲಸಿದ ಮರುಳಸಿದ್ಧೇಶ್ವರ ದೇವರಿಗೆ...." (ಭಕ್ತರು ಹೂದೋಟ ಬಾವಿ ಮಾಡಿಸಿದ ವಿಷಯ).

ಈ ಶಾಸನದಲ್ಲಿ ಬರುವ ದಾರುಕನ ಕಥೆ, ರೇವಣಸಿದ್ದನ ಅವತಾರ, ಹದಿನಾಲ್ಕು ನೂರು ವರ್ಷಗಳ ಜೀವನಾವಧಿ ವಿಷಯಗಳು ವೀರಶೈವಪುರಾಣಗಳಲ್ಲಿಯೂ ಎಡೆಪಡೆದಿವೆ. ರೇವಣಸಿದ್ದನು ಹದಿನಾಲ್ಕುನೂರುವರುಷ ಮರ್ತ್ಯದಲ್ಲಿದ್ದು ಸೋಮೇಶನಲ್ಲಿ ಐಕ್ಯನಾಗಿ, ಮತ್ತೆ ಪೂಲಿಯ ಮರುಳಸಿದ್ಧೇಶ್ವರನಾಗಿ ಜನಿಸಿ, ಕೊನೆಗೆ ಸಗುಣಲೀಲೆ ಸಾಕೆಂದು ಶಾಲಿವಾಹನಶಕೆ ೧೪೩೫ (ಕ್ರಿ.ಶ. ೧೫೧೩)ರಲ್ಲಿ ಪುಲಿಗೆರೆಯಲ್ಲಿ ಲಿಂಗರೂಪ ತಾಳಿದ (ಐಕ್ಯವಾದ)ನೆಂದು ಈ ಶಾಸನ ಕಥಿಸುತ್ತದೆ.

ಇದಲ್ಲದೆ ಮಸೂತಿ (ಕ್ರಿ.ಶ. ೧೧೫೨), ನರೇಗಲ್ಲ (ಕ್ರಿ.ಶ. ೧೧೮೨), ಇಂಗಳಗಿ (ಕ್ರಿ.ಶ. ೧೨೧೦) ಶಾಸನಗಳಲ್ಲಿ 'ರೇವಣೇಶ್ವರ' ಎಂಬ ದೇವರ ಹೆಸರು; ಪುಳಜೆಶಾಸನ (ಕ್ರಿ.ಶ. ೧೨೦೦) ದಲ್ಲಿ 'ರೇವಣ ಮಡು' ಎಂಬ ಜಲಾಶಯದ ಹೆಸರು ಕಂಡುಬರುತ್ತವೆ. ಕರ್ನಾಟಕದ ಕೆಲವು ಗ್ರಾಮಗಳಲ್ಲಿ ರೇವಣಸಿದ್ಧಗವಿ, ರೇವಣಸಿದ್ಧಮೂರ್ತಿಗಳನ್ನು ತೋರಿಸುತ್ತಾರೆ. ಇವುಗಳನ್ನು ಸೋಸಿ ನೋಡಿ ರೇವಣಸಿದ್ಧ ಸಮಸ್ಯೆಯನ್ನು ಬಿಡಿಸುವುದು ಇನ್ನೂ ಸಾಧ್ಯವಾಗಿಲ್ಲ. ಮೇಲೆ ಹೇಳಿದವುಗಳಲ್ಲದೆ ಈ ನಾಲ್ಕನೆಯ ಆವೃತ್ತಿಯಲ್ಲಿ ಇತ್ತೀಚೆ ಪ್ರಕಟವಾದ ಕಕ್ಕೇರಿ(೧೧೨೭), ಸಿರಿವಾಳ(೧೧೭೦), ಹೋತಗಲ್ಲ(೧೧೭೫), ಹೋತಗಲ್ಲ(೧೨೦೮)- ಈ ನಾಲ್ಕು ಶಾಸನಗಳನ್ನು ಪರಿಗಣಿಸಬೇಕಾಗುತ್ತದೆ. ಇವುಗಳಿಗಾಗಿ ನನ್ನ ಮಾರ್ಗ **IV** ಕೃತಿಯಲ್ಲಿಯ 'ರೇವಣಸಿದ್ಧ' ಲೇಖನ ನೋಡಬಹುದು.

ಹೀಗೆ ಬಸವಪೂರ್ವಯುಗದಲ್ಲಿ ಉಗ್ರಭಕ್ತಿಯ ಅರುವತ್ತುಮೂವರು, ಬಾಣ ಮಯೂರಾದಿ ಶೈವರು ಮತ್ತು ಶೈವ-ವೀರಶೈವಗಳ ಸಮ್ಮಿಶ್ರ ಆಚರಣೆಯ ಸಮಉಗ್ರಭಕ್ತಿಯ ಜೇಡರ ದಾಸಿಮಯ್ಯಾದಿ ಶರಣರು ಕಂಡುಬರುತ್ತಾರೆ.

> ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣ,
> ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣ,
> ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣ,
> ದಾಸನ ವಸ್ತ್ರವ ಬೇಡಿದಂದಿಂದ ಭಯ ಕಾಣಿರಣ್ಣ,
> ಅಘಟಿತ ಘಟಿತರು ವಿಪರೀತ ಚರಿತರು,
> ಕೂಡಲಸಂಗನಶರಣರು ನಡೆದ ದಾರಿ ಭಯ ಕಾಣಿರಣ್ಣ.[೧೧೮]

ಎಂಬ ಬಸವಣ್ಣನವರ ವಚನ ಇವರ ಉಗ್ರಭಕ್ತಿ, ಅಚಲನಿಷ್ಠೆ, ಅದಮ್ಯ ಕಲಿತನ, ಅಘಟಿತಘಟನೆಗಳಿಗೆ ಸಾಕ್ಷಿ ನುಡಿಯುತ್ತದೆ.

❖❖

---

೧೧೮. ಬ.ವ. ೧೪೭ (ಶ್ರೀಬಸವನಾಳ).

ಬಸವಯುಗ

ಅಂಗನೆಯ ಮೊಲೆ ಲಿಂಗವೆ? ಬಳ್ಳ ಲಿಂಗವೆ?
ಕಿತ್ತುಬಹ ಸಾ[ಣ] ಲಿಂಗವೆ?
ಆಡಿನ ಹಿಕ್ಕಿ ಲಿಂಗವೆ? ಮೆಚ್ಚುವರೆ ಪ್ರಮಥರು?
ಮೆಚ್ಚುವರೆ ಪುರಾತರು?
ನಿಮ್ಮ ಭಕ್ತರು ಭಾವಭ್ರಮೆಯಳಿದು ಗುಹೇಶ್ವರಾ
ನಿಮ್ಮಲ್ಲಿ ಅನಾದಿ ಸಂಸಿದ್ಧವಾದ ಜಂಗಮನಱಿದಾತ
ಬಸವಣ್ಣನೊಬ್ಬನೆ.[೧]

ಬಸವಪೂರ್ವಯುಗದ ಶರಣರ ಭಾವಭ್ರಮಿತ ಉಗ್ರಭಕ್ತಿ ಕ್ರಮೇಣ ಶಮನಗೊಳ್ಳುತ್ತ ಬಂದು, ಕಲ್ಯಾಣ ಶರಣರ ಮೂಲಕ ಸಂಪೂರ್ಣ ಸಾತ್ವಿಕವಾಯಿತು; ಆಚರಣೆಗೆ ಅನುಕೂಲವಾಯಿತು– ಎಂದು ಈ ವಚನದಿಂದ ತಿಳಿದುಬರುತ್ತದೆ. ಇಂಥ ಭಕ್ತಿಯ ಕಣವನ್ನು ಕಲ್ಯಾಣದಲ್ಲಿ ಕಟ್ಟಿ ತೋರಿಸಿದ ಶರಣರು ಕನ್ನಡನಾಡಿನಲ್ಲಿ ಹೊಸ ಆಂದೋಲನೆಯನ್ನೇ ಅವತಾರಗೊಳಿಸಿದರು. ಈ ವೀರಶೈವ ಆಂದೋಲನೆಯ ಅಧಿನಾಯಕನಾಗಿ ನಿಂತವನು, ಯುಗಪುರುಷ ಬಸವಣ್ಣ. ಈ 'ಬಸವಯುಗ'ದ ಶರಣರ ವಿಷಯ ಶಾಸನಗಳಲ್ಲಿ ಹೀಗೆ ಬರುತ್ತದೆ:

ಬಸವಣ್ಣ

ಬಸವಣ್ಣನವರ ಜೀವನಚರಿತ್ರೆಯನ್ನು ರೂಪಿಸುವಲ್ಲಿ ಮಿಕ್ಕ ಶರಣರಿಗಿಂತ ಹೆಚ್ಚಿನ ಪ್ರಮಾಣದ ವಚನ, ಕಾವ್ಯ, ಶಾಸನ ಮತ್ತು ಐತಿಹ್ಯರೂಪದ ಆಧಾರಗಳು ಲಭಿಸುತ್ತವೆ. ಇವುಗಳಲ್ಲಿ ಬಹುಮಟ್ಟಿನ ಪ್ರಾಮಾಣಿಕ ಆಧಾರಗಳೆನಿಸುವ ಶಾಸನಗಳಿಗೆ ಮನ್ನಣೆ ಹೆಚ್ಚು. ನಾವು ಕಳೆದುಕೊಂಡ ಬಸವಣ್ಣನವರ ಚರಿತ್ರೆಯನ್ನು ಪುನರ್‌ರಚಿಸುವಲ್ಲಿ ಇವು ಜೀವಂತಸಾಕ್ಷಿಗಳಂತೆ ನೆರವು ನೀಡುತ್ತವೆ. ಆದರೆ ಇಂಥ ಶಾಸನಗಳ ಸಂಖ್ಯೆ ತೀರ ಕಡಿಮೆ. ಇದಕ್ಕೆ ಕಾರಣ ಶಾಸನ ಬರವಣಿಗೆ ವೀರಶೈವ ತತ್ತ್ವಕ್ಕೆ ವಿರುದ್ಧವೆಂಬುದು. ಅದಕ್ಕಾಗಿ ವೀರಶೈವತತ್ತ್ವದ ಪರಮಾವತಾರ ವೆನಿಸಿದ ಬಸವಣ್ಣನವರು ಬರೆಯಿಸಿದ

---

೧. ಅಲ್ಲಮ ವಚನ ಚಂದ್ರಿಕೆ, ೧೧೭೭.

ಶಾಸನಗಳ ಬಗೆಗೆ ನಿರಾಶೆ ತಾಳಬೇಕಾಗುತ್ತದೆ. ಈ ತಾತ್ತ್ವಿಕ ಹಿನ್ನೆಲೆಯನ್ನು ಗಮನಿಸದೆ ಡಾ. ಫ್ಲೀಟ್ ಡಾ. ಎಂ. ವೆಂಕಟಸುಬ್ಬಯ್ಯ ಮತ್ತು ಡಾ. ಚಿಲಕೂರಿ ನಾರಾಯಣರಾಯರು, 'ಬಸವಣ್ಣನವರು ಪುರಾಣಪುರುಷರೇ ಹೊರತು ಐತಿಹಾಸಿಕ ವ್ಯಕ್ತಿಯಲ್ಲ' ಎಂಬ ಸಂದೇಹವನ್ನು ವ್ಯಕ್ತಪಡಿಸಿದರು. ಇಂಥ ಸಮಯದಲ್ಲಿ ಕೆಲವರು ಶಾಸನಗಳನ್ನು ಹುಡುಕ ಹೊರಟು 'ಬಸವ' ಎಂಬ ಹೆಸರು ಕಂಡ ತಕ್ಷಣ, ಹೋಲಿಕೆ ರೂಪದ ಚಾರಿತ್ರಿಕ ಅಂಶಗಳು ಲಭಿಸಿದ ತಕ್ಷಣ, ಭ್ರಾಂತಿಯಿಂದ ಹಲವು ಸುಳ್ಳು ಶಾಸನಗಳನ್ನು ಸಂಗ್ರಹಿಸಿದರು. ಇನ್ನು ಕೆಲವರು ಸತ್ಯಶಾಸನಗಳನ್ನು ತೋರಿಸಿಕೊಟ್ಟರು. ಈ ಎರಡು ಬಗೆಯ ಶಾಸನಗಳನ್ನು ಮೊದಲು ಬೆಳಕಿಗೆ ತಂದವರನ್ನು ಡಾ. ಫ್ಲೀಟ್[೨], ಡಾ. ಹಳಕಟ್ಟಿ[೩], ಡಾ. ನಂದಿಮಠ[೪], ಡಾ. ಸಿ. ನಾರಾಯಣರಾವ್[೫], ಶ್ರೀ ನಾ. ಶ್ರೀ. ರಾಜಪುರೋಹಿತ[೬], ಶ್ರೀ ಗೋವಿಂದ ಪೈ[೭], ಶ್ರೀ ಎಸ್. ಶ್ರೀಕಂಠಶಾಸ್ತ್ರಿ[೮], ಶ್ರೀ ಚನ್ನಮಲ್ಲಿಕಾರ್ಜುನ[೯], ಮತ್ತು ಡಾ. ಎಂ.ಎಂ. ಕಲಬುರ್ಗಿ, ಡಾ. ಜಿ.ಎಸ್. ಗಾಯಿ ಎಂದು ಹೆಸರಿಸಬಹುದು.[೧೦]

ಬಸವಣ್ಣನವರ ವಿಷಯದಲ್ಲಿ ಹೇಳುವ ಈ ಎಲ್ಲ ಶಾಸನಗಳನ್ನು ಕೆಲವರು ಎಪಿಗ್ರಾಫಿಯ ಕರ್ನಾಟಿಕ, ಸೌಥ್‌ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್ ಮತ್ತು ಶಾಸನ ವರದಿಗಳಿಂದ, ಕೆಲವರು ಮೂಲ ಶಾಸನಗಳಿಂದ ಹುಡುಕಿ ಕೊಟ್ಟರು. ಇವರ ಪ್ರಯತ್ನವನ್ನು ಕಾಲಕ್ರಮದಲ್ಲಿ ಹೀಗೆ ವಿವರಿಸಬಹುದು: (ಮುಂದಿನ ಪುಟ ನೋಡಿ)

ಈ ಇಪ್ಪತ್ತೊಂದು ಶಾಸನಗಳನ್ನು ಕುರಿತು ಮೇಲೆ ಹೇಳಿದ ಪಂಡಿತರೂ ಎನ್. ಲಕ್ಷ್ಮೀನಾರಾಯಣರಾವ್, ಕಪಟ್ರಾಳ ಕೃಷ್ಣರಾವ್, ಎಸ್.ಎಸ್. ಬಸವನಾಳ, ಜೀರಗೆ ಕಟ್ಟೆಬಸವಪ್ಪ, ಚಿದರೆಮಠದ ವೀರಭದ್ರಶಾಸ್ತ್ರಿ, ಟಿ.ಎನ್. ಮಲ್ಲಪ್ಪ, ಡಾ. ಆರ್.ಸಿ. ಹಿರೇಮಠ, ಡಾ. ಪಿ.ಬಿ. ದೇಸಾಯಿ ಮೊದಲಾದವರೂ ಪರವಿರೋಧವಾಗಿ ನಿಂತು ಆಗಾಗ ಸತ್ಯಾಸತ್ಯತೆಯನ್ನು ಚರ್ಚಿಸಿದ್ದಾರೆ. ಈ ಎಲ್ಲ ಚರ್ಚೆಗಳನ್ನು ಸತ್ಯದ ಸಾಣೆಗೆಯಲ್ಲಿ ಸೋಸಿ ಡಾ. ಫ್ಲೀಟರ ಮನಗೂಳಿ ಶಾಸನ, ಶ್ರೀಕಂಠಶಾಸ್ತ್ರಿಗಳ ರಾಯಶೆಟ್ಟಿಪುರ ಶಾಸನ, ಶ್ರೀ ಸಿ. ನಾರಾಯಣರಾಯರ ಕಸಪಯ್ಯನ ಶಾಸನ, ಓರುವಾಯಿ ಶಾಸನ ಮತ್ತು ಅಬ್ಬಲೂರು ಶಾಸನ, ಗೋವಿಂದ ಪೈಗಳ ಸೊರಟೂರ ಶಾಸನ, ಚನ್ನಮಲ್ಲಿಕಾರ್ಜುನರ ಬಳ್ಳಿಗಾವಿ ಶಾಸನ, ಡಾ. ಜಿ.ಎಸ್. ಗಾಯಿ ಅವರ ತಂಬೂರ ಶಾಸನಗಳನ್ನು ಅಸಮ್ಮತ ಶಾಸನಗಳೆಂದು ಕೊಚ್ಚಿ ತೆಗೆದರೆ ಉಳಿಯುವ ಸರ್ವಸಮ್ಮತ ಶಾಸನಗಳು ಹೀಗಿವೆ:

---

೨. EI.V.P. 10.

೩. ಶಿವಾ, ೩-೯

೪. ಶಿವಾ. ೪-೨.

೫. ಪ್ರ.ಕ. ೨೧-೪

೬. ಶಿವಾ. ೩-೯

೭. ಶಿವಾ. ೧೪-೨.

೮. ಪ್ರ.ಕ. ೨೩-೪.

೯. ಬಸವೇಶ್ವರ ಕಾಲ, ಪು. ೭೩.

೧೦. ಬಸವಣ್ಣನವರನ್ನು ಕುರಿತ ಶಾಸನಗಳು, ಪು. ೧೯. ಅಡಿಟಿಪ್ಪಣಿಯನ್ನು ನೋಡಿರಿ.

ಬಸವಣ್ಣನವರ ಕುರಿತು ಒಟ್ಟು ಶಾಸನಗಳು

ಶಾಸನಗಳು	ಬೆಳಕಿಗೆ ತಂದವರು	ಪತ್ರಿಕೆ/ಪುಸ್ತಕ	ವರುಷ	ಆಕರ
೧. ಮನಗೂಳಿ ಶಾಸನ	ಡಾ. ಫ್ಲೀಟ್	EI.V P. ೧೦	೧೮೯೮-೯೯	EI. V. P. 10
೨. ಅರ್ಜುನವಾಡ ಶಾಸನ[೧೧]	ಡಾ. ಹಳಕಟ್ಟಿ	ಶಿವಾ. ೩-೯	೧೯೨೮	-
೩. ಚೌಡದಾನಪುರ ಶಾಸನ	ಡಾ. ನಂದಿಮಠ	ಶಿವಾ. ೪-೨	೧೯೨೯	ಇಲಿಯಟ್ ಶಾಸನಸಂಗ್ರಹ[೧೨]
೪. ಚೌಡದಾನಪುರ ಶಾಸನ	ಡಾ. ನಂದಿಮಠ	ಶಿವಾ. ೪-೨	೧೯೨೯	ಇಲಿಯಟ್ ಶಾಸನಸಂಗ್ರಹ[೧೨]
೫. ಹಿರಿಯೂರು ಶಾಸನ	ಎಸ್. ಶ್ರೀಕಂಠಶಾಸ್ತ್ರಿ	ಸಾ.ಪ. ೨೩-೪	೧೯೩೮	EC. V-ii ಅರಸಿಕೆರೆ ೧೦೯
೬. ಕಲ್ಲೇದೇವರಪುರ ಶಾಸನ	ಎಸ್. ಶ್ರೀಕಂಠಶಾಸ್ತ್ರಿ	ಸಾ.ಪ. ೨೩-೪	”	EC. XI ಜಗಳೂರ ೩೦
೭. ಮರಡಿಪುರ ಶಾಸನ	ಎಸ್. ಶ್ರೀಕಂಠಶಾಸ್ತ್ರಿ	ಸಾ.ಪ. ೨೩-೪	”	EC. III-i ಮಂಡ್ಯ ೮೩
೮. ರಾಯಶೆಟ್ಟಿಪುರ ಶಾಸನ	ಎಸ್. ಶ್ರೀಕಂಠಶಾಸ್ತ್ರಿ	ಸಾ.ಪ. ೨೩-೪	”	MAR.1933 ನಂ. ೪೮
೯. ಕಸಪಯ್ಯನ ಶಾಸನಗಳು[೧೩]	ಸಿ. ನಾರಾಯಣರಾವ್	ಪ್ರ.ಕ. ೨೧-೪	೧೯೩೯	EC. VII ಶಿಕಾರಿಪುರ ೧೦೨*

---

೧೧. EI. XXIದಲ್ಲಿ ಈ ಶಾಸನ ಆಮೇಲೆ (೧೯೩೧-೩೨) ಪ್ರಕಟವಾಯಿತು.

೧೨. ಈ ಚೌಡದಾನಪುರ ಶಾಸನಗಳನ್ನು ಶ್ರೀ ಭಾವುದಾಜಿ ಅವರು ಈ ಮೊದಲು JBBRAS IX P. ೩೨೭ರಲ್ಲಿ ವಿವೇಚಿಸಿದ್ದರೂ ಇವು ಹೆಚ್ಚು ಪ್ರಚಾರಕ್ಕೆ ಬಂದುದು ಡಾ. ನಂದೀಮಠ ಅವರ ಲೇಖನ (ಶಿವಾ. ೪-೨) ದಿಂದ.

೧೩. ೧೫-೮-೧೯೩೯ರಂದು ಶ್ರೀಯುತರು ಅನಂತಪುರ ಕಾಲೇಜದಲ್ಲಿ ಮಾಡಿದ ಭಾಷಣ. (ಕಸಪಯ್ಯನ ಶಾಸನಗಳ ವಾದ ಶ್ರೀ ಸಿ. ನಾರಾಯಣರಾಯರ ಮೂಲಕ ಪ್ರಚಾರವಾಗಿದ್ದರೂ ಇದಕ್ಕೆ ಮೂಲ ಎಂ.ಆರ್.ಶ್ರೀ ಅವರೆಂದು ಕಾಣತ್ತದೆ. ನೋಡು: "ಕಸಪಯ್ಯನಿಗೂ ವೀರಶೈವ ಪುರಾಣದ ಬಸವಣ್ಣನವರಿಗೂ ಏನಾದರೂ ಸಂಬಂಧವಿರಬಹುದೆ? ಒಂದು ವೇಳೆ ಕಸಪಯ್ಯನೆಂದು ರಾಜಕೀಯ ಜೀವನದಲ್ಲಿಯೂ ಬಸವನೆಂದು ಗೃಹಜೀವನದಲ್ಲಿಯೂ ಇದ್ದಿರಬಹುದೇ? ಎಂಬ ಅನುಮಾನ ಉಂಟಾಗುತ್ತದೆ"- ಭಕ್ತಿಭಾಂಡಾರಿ ಬಸವಣ್ಣನವರು (೧೯೩೦) ಪು. ೮೯)

* ಕಸಪಯ್ಯನ ಹೆಚ್ಚಿನ ಶಾಸನಗಳಿಗಾಗಿ 'ಬಸವಣ್ಣನವರನ್ನು ಕುರಿತು ಶಾಸನಗಳು' ಪು. ೨೭ ನೋಡಬೇಕು.

೧೦. ಓರುವಾಯಿ ಶಾಸನ	ಸಿ. ನಾರಾಯಣರಾವ್	ಪ್ರ.ಕ. ೨೧-೪	೧೯೩೯	SII.IX-I No. 133
೧೧. ಅಬ್ಬಲೂರು ಶಾಸನ	ಸಿ. ನಾರಾಯಣರಾವ್	ಪ್ರ.ಕ. ೨೧-೪	೧೯೩೯	EI.V.P. 245
೧೨. ಗುಡಿಹಾಳ-ಕುಂಟೋಜಿ ಶಾಸನ[೧೪]	ಗೋವಿಂದ ಪೈ	ಶಿವಾ. ೧೪-೨	೧೯೩೯	ARSIE. 1929-30
೧೩. ಸೊರಟೂರ ಶಾಸನ[೧೫]	ಗೋವಿಂದ ಪೈ	ಶಿವಾ. ೧೪-೨	೧೯೩೯	ARSIE. 1927
೧೪. ಬಳ್ಳಿಗಾವಿ ಶಾಸನ	ಚನ್ನಮಲ್ಲಿಕಾರ್ಜುನ	ಬಸವೇಶ್ವರನ ಕಾಲ	೧೯೫೦	EC. VII ಶಿಕಾರಿಪುರ ೧೧೭
೧೫. ಆನಂದಪುರಮಠದ ಶಾಸನ	ಚನ್ನಮಲ್ಲಿಕಾರ್ಜುನ	ಬಸವೇಶ್ವರನ ಕಾಲ	೧೯೫೦	-
೧೬. ಜೋಡಿದಾಸೇನಹಳ್ಳಿ ಶಾಸನ	ಡಾ. ಎಂ.ಎಂ. ಕಲಬುರ್ಗಿ	ಬ.ಕು. ಶಾಸನಗಳು	೧೯೬೮	EC. XII ಮದ್ದಗಿರಿ ೮
೧೭. ಕಾನಕಾನಹಳ್ಳಿ ತಾಮ್ರಶಾಸನ	ಡಾ. ಎಂ.ಎಂ. ಕಲಬುರ್ಗಿ	ಬ.ಕು. ಶಾಸನಗಳು	೧೯೬೮	EC. IX ಕಾನಕಾನಹಳ್ಳಿ ೮೯
೧೮. ಕಾನಕಾನಹಳ್ಳಿ ತಾಮ್ರಶಾಸನ	ಡಾ. ಎಂ.ಎಂ. ಕಲಬುರ್ಗಿ	ಬ.ಕು. ಶಾಸನಗಳು	೧೯೬೮	EC. IX ಕಾನಕಾನಹಳ್ಳಿ ೯೦
೧೯. ತಂಬೂರ ಶಾಸನ	ಡಾ.ಜಿ.ಎಸ್. ಗಾಯಿ	ಸಾಧನೆ ೨-೧	೧೯೭೩	-
೨೦. ನಾಗಲೋಟಿ	ಡಾ. ಎಂ.ಎಂ. ಕಲಬುರ್ಗಿ	ಕ.ಭಾ. ೬-೪	೧೯೭೪	SII. XVI. No. 318
೨೧. ಅರ್ಜುನವಾಡ	ಡಾ. ಎಂ.ಎಂ. ಕಲಬುರ್ಗಿ	ಕ.ಭಾ. ೯-೪	೧೯೭೭	-

---

೧೪. SII.XV. No. 658 ರಲ್ಲಿ ಈ ಶಾಸನ ಆಮೇಲೆ ಅಚ್ಚಾಯಿತು.

೧೫. SII.XV. No. 650 ರಲ್ಲಿ ಈ ಶಾಸನ ಆಮೇಲೆ ಅಚ್ಚಾಯಿತು.

ಸರ್ವಸಮ್ಮತ ಶಾಸನಗಳು :

ಶಾಸನ	ಮಿತಿ	ಆಕರ	ಹೆಸರು
೧. ಹಿರಿಯೂರ	೧೨೫೯	EC.V-II ಅರಸಿಕೆರೆ ೧೦೯	ಬಸವಯ್ಯ
೨. ಅರ್ಜುನವಾಡ	೧೨೬೦	EI.XXI P.9	ಬಸವರಾಜ, ಸಂಗನಬಸವ
೩. ಅರ್ಜುನವಾಡ	೧೨೬೦ ?	ಕ.ಭಾ. ೯-೪	ಬಸವರಾಜ ದಣ್ಣಾಯಕ
೪. ಚೌಡದಾನಪುರ	೧೨೬೦	ಶಿ. ವಿಜಯಂ	ಸಂಗಮೇಶನಪುತ್ರ ಬಸವಯ್ಯ
೫. ಚೌಡದಾನಪುರ	೧೨೬೩	ಶಿ. ವಿಜಯಂ	ಸಂಗನಬಸವ
೬. ಕಲ್ಲೆದೇವಪುರ	೧೨೭೯	EC.XI.ಜಗಳೂರ ೩೦	ಬಸವರಾಜ
೭. ಮರಡಿಪುರ	೧೨೮೦	EC.III-I.ಮಂಡ್ಯ ೮೩	ಸಂಗನಬಸವಯ್ಯ
೮. ಗು. ಕುಂಟೋಜಿ	೧೪ನೆಯ ಶತಮಾನ	SII.XV 658	ಬಸವರಾಜದೇವರು
೯. ನಾಗಲೋಟಿ	೧೬೨೪	SII.XVI 318	ಕಲ್ಯಾಣ ಬಸವೇಶ್ವರ
೧೦. ಆನಂದಪುರ	೧೬೬೦	ಬಸವೇಶ್ವರನ ಕಾಲ	ಬಸವೇಶ್ವರ
೧೧. ಜೋಡಿದಾಸೇನ ಹಳ್ಳಿ	೧೬೮೬	EC.XII ಮದ್ದಗಿರಿ ೮	ಬಸವರಾಜೇಂದ್ರ
೧೨. ಕಾನಕಾನಹಳ್ಳಿ	೧೭೦೦	EC.XII ಕಾನಕಾನಹಳ್ಳಿ ೮೯	ಬಸವೇಶ್ವರ ಸ್ವಾಮುಲು
೧೩. ಕಾನಕಾನಹಳ್ಳಿ	೧೭೦೦	EC.IX ಕಾನಕಾಸಹಳ್ಳಿ ೯೧	ಕಲ್ಯಾಣದ ಬ್ಬವಪ್ಪನವರು

ಬಸವಣ್ಣನ ಚರಿತ್ರೆ ಮತ್ತು ವ್ಯಕ್ತಿತ್ವದ ಮೇಲೆ ಬೆಳಕು ಬೀರುವ ಈ ಸತ್ಯಶಾಸನಗಳನ್ನು ಈಗ ವಿವರವಾಗಿ ನೋಡಬಹುದು.

ಹಿರಿಯೂರ ಶಾಸನ–ಶಿವಶರಣರಿಂದ 'ಉದ್ಬೋಧಸಂಪತ್ತಿ'ಯನ್ನು ಯಾಚಿಸಿದ ಈ ಶಾಸನದ ಹಿನ್ನೆಲೆ ಮತ್ತು ವಿಷಯ ಹೀಗಿದೆ.

ಹರಪದಪೂಜೆಯೊಳು ಹರಕಥೋಚಿತ ತತ್ವಸುಖಾನುಸೇವೆಯೊಳು ।
ಹರಸಮಯಪ್ರಭಾವ ಪರಿವರ್ತನದೊಳು ಹರಭಕ್ತಿಯೊಳು ಹರ ।
ಸ್ಮರಣದೊಳಾವಗಂ ತನುಧನಂ ಮನಮೆಂಬಿವನೆಯ್ದೆ ಕೂಡಿ ಸು ।
ಸ್ಥಿರಮೆನಿಸಿರ್ದನೇಂ ಸುಕೃತಪುಂಜನೊ ಕುಂಜನಿಳಾತಳಾಗ್ರದೊಳ್ ।
ತನುವಂ ಜಂಗಮದೆಡೆಯೊಳು ।
ಮನಮಂ ಶ್ರೀ ಸೋಮನಾಥ ಪದಪಂಕಜದೊಳು ।
ವಿನಿಯೋಗಿಸಿ ಕುಂಜಂ ನೆ ।
ಟ್ಟನೆ ಪಡೆದಂ ಪುಣ್ಯಪದಮನಾ ಶಿವಪದಮಂ ॥[೧೬]

---

೧೬. ಈ ಎರಡು ಪದ್ಯಗಳನ್ನು EC.V-ii ಅರಸಿಕೆರೆ ೧೦೮. ಹಿರಿಯೂರ ಶಾಸನದಿಂದ ಆಯ್ದುಕೊಳ್ಳಲಾಗಿದೆ.

ಶಿವಭಕ್ತಿಯ ಸಾಕಾರಮೂರ್ತಿಯಾದ ಈ ಕುಂಜಸೆಟ್ಟಿ ಎಳಮೆಯಲ್ಲಿ ಲಿಂಗೈಕ್ಯನಾಗಲು ತಂದೆ ಕಂಡನಂಬಿಸೆಟ್ಟಿ ಈತನ ಹೆಸರಿನಲ್ಲಿ ಕುಂಜೇಶ್ವನ ಶಿವಾಲಯವನ್ನು ನಿರ್ಮಿಸಿದನು. ಈ ಕಾರ್ಯ ನಡೆದುದು ಕ್ರಿ.ಶ. ೧೨೫೫ರಲ್ಲಿ. ಈ ಕುಂಜೇಶ್ವರ ದೇವಾಲಯದೊಳಗೆ ನಿಲ್ಲಿಸಲಾದ ಕ್ರಿ.ಶ. ೧೨೫೯ರ ಶಾಸನದಲ್ಲಿ

ಸಿರಿಯಾಳ್ವಂ ಬಸವಯ್ಯನೊಳ್ಪೆಸೆವXXXಮಂ ಬಾಣನುಂ ।
ದರಭೋಗಂ ಸಲೆ ಚೋಳನುದ್ಭಟತರ್ಕ್ಯಂ ಸಿಂಧುಬಲ್ಲಾಳನೀ ।
ಧರೆ ಕೊಂಡಾಡುವ ದಾಸಿಮಯ್ಯನೆನಿಸಿರ್ದೀ ಭಕ್ತ ಸಂದೋಹವಾ ।
ದರದಿಂ ಕಾಕರ ಕಂಡನಂಬಿ ನಿನಗೀಗುದ್ಬೋಧ ಸಂಪತ್ತಿಯಂ ।

ಎಂಬ ಆಶೀರ್ವಾದಪರ ಪದ್ಯವೊಂದಿದೆ. ಇದು ಬಸವಣ್ಣನವರು ಐಕ್ಯವಾದ ಸುಮಾರು ೯೦ ವರ್ಷದೊಳಗೆ ಹುಟ್ಟಿದ ಶಾಸನ. ಇಲ್ಲಿ ಬಸವಣ್ಣನವರನ್ನು ಬಿಟ್ಟರೆ ಮಿಕ್ಕವರೆಲ್ಲ ತ್ರಿಷಷ್ಟಿ ಪುರಾತನರು ಮತ್ತು ಪ್ರಾಚೀನ ಶರಣರು. ಈ ಪ್ರಾಚೀನರ ಸಾಲಿನಲ್ಲಿ ಕಲ್ಯಾಣ ಶರಣ ಸಮೂಹದಿಂದ ಬಸವಣ್ಣನವರೊಬ್ಬರನ್ನು ಮಾತ್ರ ಈ ಶಾಸನ ಹೆಸರಿಸಿರುವುದು ಗಮನಾರ್ಹ. 'ಭಕ್ತ ಸಂದೋಹ' ಎಂಬ ಪದದ ಮೂಲಕ ಬಸವಣ್ಣನವರ ಭಕ್ತಿಮಾರ್ಗವನ್ನು ಸೂಚಿಸುವ ಇದು ಅವರನ್ನು ಕುರಿತ ಪ್ರಾಚೀನತಮ ಶಾಸನ.

ಅರ್ಜುನವಾಡ ಶಾಸನ[೧೭]**-೧:** ಬಸವಣ್ಣನವರ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲಿದ ಅಪೂರ್ವಶಾಸನವಿದು. ಇದನ್ನು ಮೊದಲು ಕಂಡುಹಿಡಿದವರು ಶ್ರೀ ನಾ.ಶ್ರೀ ರಾಜಪುರೋಹಿತ. ಕ್ರಿ.ಶ. ೧೯೨೮ರ ಶಿವಾನುಭವ(೩-೯)ದಲ್ಲಿ ಶ್ರೀ ಹಳಕಟ್ಟಿಯವರ ಹೆಸರಿನಿಂದ ಪ್ರಥಮಬಾರಿ ಪ್ರಕಟವಾದರೂ ಇದರ ಹಿಂದೆ ಇರುವ ಡಾ. ನಂದಿಮಠ ಮತ್ತು ಶ್ರೀ ಮಧುರಚೆನ್ನರ ಶ್ರಮವನ್ನು ಮರೆಯುವಂತಿಲ್ಲ. ಈ ಶಾಸನದ ಮುಖ್ಯ ಭಾಗ ಹೀಗಿದೆ.

ಮತ್ತಂ ತರ್ದವಾಡಿ ಮಧ್ಯಗ್ರಾಮ ಬಾಗವಾಡಿ[೧೮] ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜನ ಮಹಿಮೆಯೆಂತೆಂದಡೆ॥

ಮಂಗಳಕೀರ್ತಿ ಪುರಾತನ।
ಜಂಗಮ ಲಿಂಗೈಕ ಭಕ್ತಿ ನಿರ್ಬ್ಬರ ಲೀಲಾ।
ಸಂಗಂ ಸಂಗನಬಸವಂ।
ಸಂಗತಿಯಂ ಮಾಳ್ಕೆ ಭಕ್ತಿಯೊಳು(=ಳ)ಗನವರತಂ॥

ಸ್ವಸ್ತಿ ಸಮಸ್ತ ಭುವನಾಶ್ರಯಂ...... ಇತ್ಯಾದಿ ನಾಮಾವಳೀ ಸಮಾಳಂಕೃತ ಶ್ರೀಮತ್ ಪ್ರತಾಪಚಕ್ರವರ್ತಿ ಶ್ರೀ ಕನ್ನರದೇವಂ ದೇವಗಿರಿ ನೆಲೆವೀಡಿನೊಳು.... ರಾಜ್ಯಂಗೆಯ್ಯುತ್ತಮಿರೆ.....

---

೧೭. ಈ ಶಾಸನವನ್ನು ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಸಂಸ್ಥೆಯಲ್ಲಿ ತಂದಿರಿಸಲಾಗಿದೆ.

೧೮. ಈ ಶಾಸನ 'ತರ್ದವಾಡಿ ಮಧ್ಯಗ್ರಾಮ ಬಾಗವಾಡಿ' ಎಂದರೆ ಕಾವ್ಯಗಳು ಸಾಮಾನ್ಯವಾಗಿ 'ಇಂಗುಳೇಶ್ವರ ಬಾಗವಾಡಿ' ಎನ್ನುತ್ತವೆ. EC.XI. Dg 102 A.D. ೧೨೬೮ ರ ಶಾಸನವೊಂದರಲ್ಲಿ ಬರುವ 'ಇಂಗಳೇಶ್ವರ ಬಾದವಾಡಿ' ಎಂಬ ಉಲ್ಲೇಖವನ್ನು ಗಮನಿಸಬೇಕು.

ಸಂಗನಬಸವನ ಅಗ್ರ X ।
X ಗ್ಯೆಕಂ ದೇವರಾಜಮುನಿಪನ ತನಯಂ।
ಜಂಗಮಪರುಸಂ XX ರ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ॥
ಕಲಿದೇವ ಮುನಿಪನಾತ್ಮಜ।
ಸಲೆ ಮೂಜಗದೊಳಗೆ ಮೆರೆದ ಮಾ(ನ)ವ ದೇವಂ॥
ಗೆಲಿದಂ ಅಶನ ಬೆಸನವ।
ಛಲರಧಿಕಂ ಹಾಲಬಸವಿದೇವಮುನೀಶಂ॥

ಸ್ವಸ್ತಿ ಸಮಸ್ತಭುವನಾಶ್ರಯಂ ಮಹಾಮಹೇಶ್ವರಂ ಕವಿಳಾಸಪುರವರಾಧೀಶ್ವರರುಂ ಸುವರ್ಣ್ನವೃಷಭಧ್ವಜಂ (ತೇ)ಸಷ್ಠಿ ಪುರಾಥ ಪಾದಾರ್ಚಕರುಂ ಮಹಾಲಿಂಗ ಜಂಗಮ ಪ್ರಸಾದನಿಯತ(ರುಂ) ಸಮಯಭಕ್ತಿಸಂಪನ್ನ ಶ್ರೀಬಸವರಾಜನನ್ವಯರುಮಪ್ಪ ತಪಚಕ್ರ(ವ)ರ್ತ್ತಿ ವೀರಬ್ರತಿ ಹಾಲಬಸವಿದೇವಂಗೆ...... ಸಕವರುಷಂ ಸಾವಿರದ ನೂರ ಎಂಬತ್ತೆರಡನೆಯ ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ಆಮಾಸೆ ಸೋಮವಾರ ಸೂರ್ಯಗ್ರಹಣದಲ್ಲಿ ಹುಲಿ(ಗೆ)ರೆಯ ಸೋಮನಾಥದೇವರ ಸನ್ನಿಧಿಯಲ್ಲಿ.... ಚೌಡಿಸೆಟ್ಟಿಯರಾ ತೀರ್ಥವಿಶೇಷಮಂ ಬೆಸಗೊಳ್ಳಲು “ನೂಲೆನಾಡೊಳ(ಗಿ)ನ (ಮುನಿತನದಿ) ಕವಿಳಲಸತೀ(ರ್ಥ) ನಾಲ್ಕು ಯುಗದ ಪುರಾಣೋಕ್ತದಿಂ ಬಂದ ಕ್ಷೇತ್ರವೆಂತೆಂದಡೆ-ಕೃತಯುಗದಲ್ಲಿ ಕವಿಳಾಸಮುನಿ ಕವಿಳಾಸನಾಥ, ತ್ರೇತೆಯಲಿ ಅಂಕರಾಜಮುನಿ ಅಂಕನಾಥ, ದ್ವಾಪರದಲ್ಲಿ ಮಹಾರಾಜಮುನಿ ಮಹಾಲಿಂಗದೇವ, ಕಲಿಯುಗದಲ್ಲಿ ಕಲಿರಾಜಮುನಿ ಕಲಿದೇವನಾಮ... ಇ(ಈ) ಹಳ್ಳಿ ಮಾಂಧಾತಚಕ್ರವರ್ತಿ ಬಿಟ್ಟ ಧರ್ಮ ಆ ತೀರ್ತ್ಥಕ್ಕದು ಸಾಸನಸ್ಥ”ವೆಂಬುದು ಚವುಡಿಸೆಟ್ಟಿಯರು ಕೇಳಿದು ನಾಗರಸರೂ ತಾವು ಏಕಸ್ಥರಾಗಿ ಕವಿಳಾಸಪುರದೊಳಗೆ ಸ್ವಯಂಭು ಮಲ್ಲಿಕಾರ್ಜುನ ಸಂಗಮೇಶ್ವರ ನಾಗೇಶ್ವರ ಈ ಮೂರು ಲಿಂಗಕಂ.... ಪಾರಣೆಯ ಜಂಗಮ ಆರಾಧನೆಗಂ ಕೊಟ್ಟಸಿ ಕುರುವನಿಗೆ ತಳವಿತ್ತಿ ಅಂಕವಲ ಕೂಂಡಿ ನಾಡೊಳು ಸಲುವಂತೆ । ಹೆಜ್ಜುಗ್ಗಿಯ ಹಬ್ಬ ಒ(ಂ)ಬತ್ತು ದಿನ ಸುಂಕ ನೂರೆತ್ತಿನ ಪರಿಹಾರಯಿಂತಿನಿತುಮಂ ಸರ್ವ್ವಬಾಧಿ(ಧ) ಸರ್ವನಮಸ್ಯವಂ ಮಾಡಿ ಚವುಡಿಸೆಟ್ಟಿ(ಯ)ರು ನಾಗರಸರು ಯತಿರಾಯ ಹಾಲಬಸವಿದೇವಂಗೆ ಪೂರ್ವದತ್ತವೆಂದು ಧಾರಾಪೂರ್ವಕಂ ಮಾಡಿಕೊಟ್ಟರು. ಆ ಚವುಡಸೆಟ್ಟಿಯರ ನಿಯಾಮದಿಂ ನಾಗರಸರು ಪುರದಿಂ ಪಡವಲು ತೊರೆಯ ಕೂಡಿದ ಹಳ್ಳ ನೀರುವರಿಯೆ ಮೇರೆಯಾಗೆ ಮೇಲೆ ಕಲುಕುಟಿಗಗೆರೆ ಬಸವನಗೋಡಿ, ಬಡಗಲು ಮೊಸರಗುತ್ತಿಯೆ ರಾರವಿಡಿ(ದು), ಮೂಡಲು ಜಂಚಿಗಲ್ಲಕಣೆ ಕುಚ್ಚಗೋಡಿಯಿಂ ಬಂದಹಳ್ಳಿ ನೀರುವರಿಯೆ, ತೆಂಕಲು ತೊರೆಯ ಕೂಡಲು; ಈ ಚತುಸ್ಸೀಮಾಭ್ಯಂತರ ಕವಿಳಾಸಪುರದಲ್ಲಿ... ನಾಗೇಶ್ವರಕೆ ಮಲ್ಲೇಸ್ವರಕೆ ಕುರುವನಿಗೆ, ಸಂಗಮೇಶ್ವರಕೆ ಪಾರಣೆಯ ಜಂಗಮಾರಾ(ಧ)ನೆಗೆ ಕೊಟ್ಟಸಿಗೆ, ಇ(ಈ) ಧರ್ಮಕ್ಕೆ (ಇ)ದು ವಿವರವೆಂದು ನಾಗರಸ(ರು) ಕೊಟ್ಟ ಸಾಸನ. ನಾ(ಲ್ಕುಂ) ಪಟ್ಟಣಂಗಳು ನೂಲೆನಾಡೊಳಗೆ ಸಂತೆಗಳ ಆಯದಾಯ ಇಪಂತು ಕೋಣನ ಮೆಯಿದೆರೆ ಸುಂಕ ಹದಿನೆಂಟ್ಟು ಸಮಯವು ಅರುವತುಮೂವರು ಬಣಜುಭಕುತಿ ಭೇದವಿಲ್ಲ, ಕವಿಳಾಸಪುರವೆ ಸಾಸನದವನೆ, ಬಸವರಾಜನೆ ಸಾಸನಿಗನೆಂದು ಉಭಯನಾನಾದೇಶಿ ಮುಮ್ಮರಿದಂಡಗಳು ಕೊಟ್ಟ ಸಾ(ಶಾ)ಸನ.”

ಯಾದವ ಕನ್ನರದೇವನ ಪಾದಪದ್ಮೋಪಜೀವಿಗಳಾದ ಚೌಡಿಸೆಟ್ಟಿ, ನಾಗರಸರು ಮತ್ತು ಮುಮ್ಮುರಿದಂಡಗಳು ಕೊಟ್ಟ ಎರಡು ದತ್ತಿಗಳನ್ನೊಳಗೊಂಡ ಈ ಶಾಸನದ ಕಾಲ ಕ್ರಿ.ಶ. ೧೨೬೦. ದತ್ತಿ ಪಡೆದವನು ಯತಿರಾಯ ಹಾಲಬಸವಿದೇವ. ಈತನ ಗ್ರಾಮ ಕವಿಳಾಸಪುರ.

ಮನಗೂಳಿ ಶಾಸನದ 'ಕಲಿದೇವ ಮಹೇಶನಿವಾಸಂ' 'ಕಲಿದೇವೇಶ ವಿಳಾಸ ಭೂಸುರಗೃಹಂ' ಎಂಬ ಎರಡು ಮಾತುಗಳನ್ನು ಸಮೀಕರಿಸಿ ಕವಿಳಾಸಪುರವೆಂದರೆ ಮನಗೂಳಿಯೆಂದು ಶ್ರೀ ಚೆನ್ನಮಲ್ಲಿಕಾರ್ಜುನ[೧೯] ಚೌಡದಾನಪುರ ಶಾಸನೋಕ್ತ "ಧರೆಯೊಳ್ಕವಿಳಾಸಮೆನಿಪ ಮುಕ್ತಿಕ್ಷೇತ್ರಂ" ಎಂಬ ಮಾತನ್ನಾಧರಿಸಿ ಕವಿಳಾಸಪುರವೆಂದರೆ ಚೌಡದಾನಪುರ ವೆಂದು ಶ್ರೀ ಎಸ್.ಸಿ. ನಂದಿಮಠ[೨೦] ಹೇಳುತ್ತಾರೆ. ಆದರೆ ಈ ಶಾಸನದ ಉತ್ತರಾರ್ಧದಲ್ಲಿ ಬಂದ ಮೂಡಲು, ಪಡವಲು, ತೆಂಕಲು, ಬಡಗಲು ಮೇರೆಗಳನ್ನು ಗಮನಿಸಿ 'ಕವಿಳಾಸಪುರವು ಅರ್ಜುನವಾಡದ ನೆರೆಯಲ್ಲಿ ಮಲ್ಲಿಕಾರ್ಜುನ ನಾಗೇಶ್ವರ ಸಂಗಮೇಶ್ವರ ದೇವಾಲಯಗಳನ್ನೊಳಗೊಂಡು ಇದೆ'ಯೆಂದೆ 'ಬಸವಣ್ಣನನ್ನು ಕುರಿತ ಶಾಸನಗಳು' ಪುಸ್ತಿಕೆಯಲ್ಲಿ ಸೂಚಿಸಲಾಗಿತ್ತು. ಈ ಸೂಚನೆಯ ಜಾಡು ಹಿಡಿದು ಶ್ರೀ ಮುತಾಲಿಕ ಅವರು ತಮ್ಮದೊಂದು ಲೇಖನದ ಮೂಲಕ ಅರ್ಜುನವಾಡದ ನೆರೆಯಲ್ಲಿ ಕವಿಳಾಸಪುರವನ್ನು ಹುಡುಕಿ ಹೇಳಿದ್ದಾರೆ.[೨೧] ಶಾಸನಗಳಲ್ಲಿ ಹೇಳಲಾದ ಮಲ್ಲಿಕಾರ್ಜುನ, ನಾಗೇಶ್ವರ, ತೊರೆಯಕೂಡಿದ ಹಳ್ಳ, ಬಸವನಗೋಡಿ, ಕಲುಕುಟಿಗೆರೆ, ಜಂಚಿಕಲ್ಲಕಣೆ, ಕುಚ್ಚಗೋಡಿಯಿಂ ಬಂದ ಹಳ್ಳ, ಮಸರಗುತ್ತಿ, ಕೊಟ್ಟಸಿ, ಪಡುವಲ ತೊರೆ, ತೆಂಕಲತೊರೆ, ಕವಿಳಾಸಪುರಗಳನ್ನು ಬೆರಳಿಟ್ಟು ಗುರುತಿಸಿದ್ದಾರೆ. ಭೂಗತವಾಗಿರುವ ಈ ಗ್ರಾಮವನ್ನು ಉತ್ಖನನಗೊಳಿಸಿದರೆ ಬಸವಣ್ಣನವರ ಚರಿತ್ರೆಯ ಮೇಲೆ ಹೊಸಬೆಳಕು ಬೀಳಬಹುದು. ಇನ್ನು

ಸಂಗನಬಸವನ ಅಗ್ರ X ।
X ಗೈಕಂ ದೇವರಾಜಮುನಿಪನ ತನಯಂ ।
ಜಂಗಮ ಪರುಸಂXXರ ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ।

ಈ ಪದ್ಯದ ನಷ್ಟ ಅಕ್ಷರಗಳನ್ನು ಎಂಟುಜನರು ಒಂಬತ್ತು ಬಗೆಯಾಗಿ ತುಂಬಿಕೊಟ್ಟಿದ್ದಾರೆ.

ಸಂಗನಬಸವ ಅಗ್ರXXಗೈಕಂ.... ಜಂಗಮಪರುಸಂXXರಸಂಗಂ-ಮೂಲಪಾಠ

೧. ಸಂಗನಬಸವನ ಅಗ್ರಜXಗೈಕಂ.... ಜಂಗಮಪರುಸಂXXರಸಂಗಂ-ಹಳಕಟ್ಟಿ (೧೯೨೮)[೨೨]

೨. ಸಂಗನಬಸವನ ಅಗ್ರಜ ಸಂಗಾಕಂ.... ಜಂಗಮಪರುಸಂ ಶರಣರಸಂಗಂ-ಎಸ್. ಶ್ರೀಕಂಠಶಾಸ್ತ್ರಿ (೧೯೩೧-೩೨)[೨೩]

---

೧೯. ಶ್ರೀ ಬಸವೇಶ್ವರನ ಕಾಲ ಪು. ೧೫೧

೨೦. ಶಿವಾ. ೪-೪ (ನಂದಿಮಠರ ಈ ಊಹೆಯನ್ನು ಎಂ.ಜಿ. ನಂಜುಂಡಾರಾಧ್ಯರು ಒಪ್ಪುತ್ತಾರೆ. ಶಿವದೇವ ವಿಜಯ ಪೀಠಿಕೆ XXI)

೨೧. ಅರ್ಜುನವಾಡ ಶಾಸನದ ಕವಿಳಾಸಪುರ (ಕ-ಭಾ ೨-೧)

೨೨. ಶಿವಾ ೩-೯.

೨೩. EI. XXI P.13

೩. ಸಂಗನಬಸವನ ಅಗ್ರಜ ಲಿಂಗೈಕಂ.... ಜಂಗಮಪುರುಸಂ ಕಾವರಸಂಗಂ-ಎನ್. ಲಕ್ಷ್ಮೀನಾರಾಯಣರಾವ (೧೯೩೧-೩೨)[೨೪]

೪. ಸಂಗನಬಸವನ ಅಗ್ರಜ ನಿಂಗೈಕಂ.... ಜಂಗಮಪರುಸಂ ಶರಣರಸಂಗಂ- ಕಪಟ್ರಾಳ (೧೯೪೭)[೨೫]

೫. ಸಂಗನಬಸವನ ಅಗ್ರಸುತಂಗೈಕಂ.... ಜಂಗಮಪರುಷಂ ಶರಣಸಂಗಂ- ಟಿ.ಎನ್. ಮಲ್ಲಪ್ಪ (೧೯೪೭)[೨೬]

೬. ಸಂಗನಬಸವನ ಅಗ್ರಜ ಲಿಂಗೈಕ್ಯಂ.... ಜಂಗಮಪರುಷಂ ಬಸವರಸಂಗಂ- ಟಿ.ಎನ್. ಮಲ್ಲಪ್ಪ (೧೯೪೭)[೨೭]

೭. ಸಂಗನಬಸವನ ಅಗ್ರಜ ಲಿಂಗೈಕಂ(ಕ್ಯಂ)........ ಜಂಗಮಪರುಸಂ ಬಸವರಸಂಗಂ- ಚೆನ್ನಮಲ್ಲಿಕಾರ್ಜುನ (೧೯೫೦)[೨೮]

೮. ಸಂಗನಬಸವನ ಅಗ್ರಜ ಲಿಂಗೈಕಂ.... ಜಂಗಮಪರುಸಂ ಸೋವರಸಂಗಂ- ಬಿ.ಪಿ. ದೇಸಾಯಿ (೧೯೬೮)[೨೯]

೯. ಸಂಗನಬಸವನ ಅಂಘ್ರಿ(ಯ ಭೃಂ)ಗೈಕಂ.... ಜಂಗಮಪರುಸಂ ಸೋವರಸಂಗಂ- ಬಾಡಾಲು ರಾಮಯ್ಯ (೧೯೭೪)[೩೦]

ಛಂದಸ್ಸು, ಪ್ರಾಸ, ಪಡಿಯಚ್ಚು, ಮೂಲಶಾಸನ, ಅರ್ಥ ಇವುಗಳಲ್ಲಿ ಕೆಲವನ್ನು ಮತ್ತು ಎಲ್ಲವನ್ನು ಆಧಾರವಾಗಿ ಹಿಡಿದು ವಿದ್ವಾಂಸರು ಮೇಲಣ ತಿದ್ದುಪಡಿಗಳನ್ನು ಸೂಚಿಸಿರುವರು. ಈ ವಿಭಿನ್ನ ತಿದ್ದುಪಡಿಗಳಿಂದಾಗಿ ಕ್ರಮವಾಗಿ ಕೆಳಗಣ ವಿಭಿನ್ನ ವಂಶಚಿತ್ರಗಳು ಹೊರಡುತ್ತವೆ.

೧. ಸಂಗನಬಸವ→?→ದೇವರಾಜ→?→ಕಲಿದೇವ→ಹಾಲಬಸವಿದೇವ

೨. (ಶ್ರೀಕಂಠಶಾಸ್ತ್ರಿಗಳ ಪಾಠದಿಂದ ಸ್ಪಷ್ಟವಾದ ವಂಶಾವಳಿ ಹೊರಡುವುದಿಲ್ಲ).

೩. ┌ ದೇವರಾಜ→ಕಾವರಸ→ಕಲಿದೇವ→ಹಾಲಬಸವಿದೇವ
└ ಸಂಗನಬಸವ

೪. ┌ ದೇವರಾಜ→ಕಲಿದೇವ→ಹಾಲಬಸವಿದೇವ
└ ಸಂಗನಬಸವ

---

೨೪. EI. XXI P.16

೨೫. ಶರಣಸಾಹಿತ್ಯ ೧೦-೬ ಮತ್ತು ೭.

೨೬, ೨೭. ಶಿವಾ ೨೨-೨, ಎರಡನೆಯದೇ ತಮಗೆ ಸಮ್ಮತವೆಂದು ಹೇಳಿರುವರು.

೨೮. ಶ್ರೀ ಬಸವೇಶ್ವರನ ಕಾಲ, ಪು. ೫೪.

೨೯. ಡಾ. ಪಿ.ಬಿ. ದೇಸಾಯಿ ಅವರು ನನಗೆ ಮುಖತಃ ಹೇಳಿದ ಪಾಠ

೩೦. ಸಾಧನೆ-೩-೧. ಅರ್ಜುನವಾಡದ ಶಾಸನ ಸಮೀಕ್ಷೆ: ಪ್ರೊ. ಬಾಡಾಲು ರಾಮಯ್ಯ.

೫. ಸಂಗನಬಸವ→ದೇವರಾಜ→ಕಲಿದೇವ→ಹಾಲಬಸವಿದೇವ


೬. ದೇವರಾಜ→ಬಸವರಸ→ಕಲಿದೇವ→ಹಾಲಬಸವಿದೇವ
ಸಂಗನಬಸವ

೭. ದೇವರಾಜ→ಬಸವರಸ→ಕಲಿದೇವ→ಹಾಲಬಸವಿದೇವ
ಸಂಗನಬಸವ

೮. ದೇವರಾಜ→ಸೋವರಸ→ಕಲಿದೇವ→ಹಾಲಬಸವಿದೇವ
ಸಂಗನಬಸವ

೯. ಸಂಗನಬಸವ→(ಶಿಷ್ಯ) ದೇವರಾಜ→(ಶಿಷ್ಯ) ಸೋವರಸ→(ಶಿಷ್ಯ) ಕಲಿದೇವ →(ಶಿಷ್ಯ) ಹಾಲಬಸವಿದೇವ

ಇವುಗಳಲ್ಲಿ ತಾತ್ಪೂರ್ತಿಕ ತೃಪ್ತಿದೃಷ್ಟಿಯಿಂದ ಶ್ರೀ ಎನ್. ಲಕ್ಷ್ಮೀನಾರಾಯಣರ ಪಾಠವನ್ನು, ಅದರಿಂದ ಹೊರಡಿಸಿದ ವಂಶಚಿತ್ರವನ್ನು ಈವರೆಗೆ ಎಲ್ಲರೂ ಒಪ್ಪಿಕೊಂಡಿದ್ದರು. ಆದರೆ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬ ಪುಸ್ತಿಕೆಯಲ್ಲಿ ತಾತ್ಪೂರ್ತಿಕ ದೃಷ್ಟಿಯಿಂದ ಶ್ರೀ ಲಕ್ಷ್ಮೀನಾರಾಯಣರ ಪಾಠವನ್ನು ಒಪ್ಪಿಕೊಳ್ಳಲಾಗಿದ್ದರೂ ಈ ಪದ್ಯದಿಂದ ಅವರು ಹೊರಡಿಸಿದ ವಂಶಚಿತ್ರವನ್ನು ಶಂಕಿಸಿ ಕೆಳಗಿನಂತೆ ಬೇರೊಂದು ವಂಶಚಿತ್ರವನ್ನು ಬಿಡಿಸಲಾಗಿದೆ.[೩೧]



ಈ ವಂಶಚಿತ್ರವನ್ನು ಸಾಧಿಸುವುದರ ಮೂಲಕ ಕಳೆದ ೩೮ ವರ್ಷಗಳಿಂದ ನಂಬುತ್ತ ಬಂದ ಶ್ರೀ ಲಕ್ಷ್ಮೀನಾರಾಯಣರಾಯರ ಅರ್ಥವನ್ನು ಕೈಬಿಡಲಾಗಿದೆ. ಕಲಿದೇವನ ಮಗ ಹಾಲಬಸವಿದೇವನ ಕಾಲ ಕ್ರಿ.ಶ. ೧೨೬೦ ಇದ್ದು, ತಲೆಮಾರಿಗೆ ೩೦ ವರ್ಷಗಳಂತೆ ಹಿಂದೆ ಹೋದರೂ ದೇವವಾಜನ ಕಾಲ ಕ್ರಿ.ಶ. ೧೨೦೦ ಆಗುವುದರಿಂದ, ಈತನ ತಮ್ಮ ಬಸವಣ್ಣನು ಸರಿಸುಮಾರು ಈ ಕಾಲದವನೇ ಎಂದು ಊಹಿಸಲಾಗಿದೆ.

---

೩೧. ಬಸವಣ್ಣನವರನ್ನು ಕುರಿತ ಶಾಸನಗಳು ಪು. ೫೧-೫೨.

"ನಾಗೇಶ್ವರಕೆ ಮಲ್ಲೇಶ್ವರಕೆ ಕುರವನಿಗೆ, ಸಂಗಮೇಶ್ವರಕೆ ಪಾರಣೆಯ ಜಂಗಮಾರಾಧನೆಗೆ ಕೊತ್ತಸಿ"ಗಳನ್ನು ಅಂದರೆ ನಾಗೇಶ್ವರದೇವರು ಮಲ್ಲೇಶ್ವರದೇವರುಗಳಿಗೆ ಕುರುವನಿಗೆ (ಈಗಿನ ಕುರಣಿ) ಗ್ರಾಮವನ್ನು, ಸಂಗಮೇಶ್ವರದೇವರು ಮತ್ತು ಜಂಗಮಾರೋಗಣೆಗೆ ಕೊತ್ತಸಿ (ಈಗಿನ ಕೋಚರಿ) ಗ್ರಾಮವನ್ನು ದತ್ತಿಯಾಗಿ ಬಿಟ್ಟುದು ಈ ಮೊದಲನೆಯ ದತ್ತಿ ವಿಷಯ.

ಇಲ್ಲಿರುವ 'ಯತಿರಾಯ ಹಾಲಬಸವಿದೇವಂಗೆ ಪೂರ್ವದತ್ತವೆಂದು ಧಾರಾಪೂರ್ವಕಂ ಮಾಡಿಕೊಟ್ಟರು' ಎಂಬ ಮಾತಿನಲ್ಲಿ, ಪ್ರಾಚೀನಕಾಲದ ಒಂದು ದತ್ತಿ (ಮಾಂಧಾತ ಚಕ್ರವರ್ತಿ ಕೊಟ್ಟುದು?) ಯನ್ನು ಹಾಲಬಸವಿದೇವನಿಗೆ ಪುನಃ ಸ್ಥಿರಗೊಳಿಸಿ (ಚೌಡಿಸೆಟ್ಟಿ ನಾಗರಸರು) ಕೊಟ್ಟರೆಂಬ ಅರ್ಥವಿದ್ದಂತೆ ಕಾಣುತ್ತದೆ.

ಇಂಥ ಸಮಸ್ಯೆಗಳೇನೇ ಇದ್ದರೂ ಬಸವಣ್ಣನವರನ್ನು ಕುರಿತು ಹೇಳಿದ "ಪುರಾತನ ಜಂಗಮ ಲಿಂಗೈಕಭಕ್ತಿ ನಿರ್ಭರಲೀಲಾಸಂಗಂ" ಮತ್ತು "ಸಮಯಭಕ್ತಿಸಂಪನ್ನಂ" ಎಂಬಿವು ಅವರ ವ್ಯಕ್ತಿಸಿದ್ಧಿಯ ಪ್ರಮುಖ ಅಂಶಗಳನ್ನು ಎತ್ತಿ ತೋರಿಸುತ್ತವೆ. 'ಮಂಗಳಕೀರ್ತಿ' ಎಂದು ಕರೆದುದಂತೂ ಆ ಕಾಲದಲ್ಲಿ ಹರಡಿದ ಬಸವಣ್ಣನವರ ಧವಲಕೀರ್ತಿಗೆ ಸ್ಪಷ್ಟ ನಿದರ್ಶನವೆನಿಸಿದೆ.

ಈ ಶಾಸನ, ನೆಲದ ಮರೆಯ ನಿಧಾನವಾಗಿದ್ದ ಬಸವಣ್ಣನವರ ಜೀವನ ಚರಿತ್ರೆಯ ಕೆಲವು ಹೊಸ ವಿಷಯಗಳನ್ನು ಹೊರಗೆಡಹಿದೆ. 'ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜ' ಎಂಬ ಹೇಳಿಕೆ ಅವರ ತಂದೆ ಮತ್ತು ಜನ್ಮಸ್ಥಳಗಳ ಬಗ್ಗೆ ಪ್ರಚಲಿತವಿದ್ದ ಸಂದೇಹಗಳನ್ನು ಆತ್ಯಂತಿಕವಾಗಿ ಕೊಚ್ಚಿಹಾಕಿದೆ. ಬಸವಣ್ಣನವರ ಅಣ್ಣ ದೇವರಾಜ, ಈತನ ಮಗ ಕಲಿದೇವ,[೩೨] ಈತನ ಮಗ ಹಾಲಬಸವಿದೇವ (ನಾವು ಅರ್ಥಮಾಡಿದಂತೆ) ಎಂಬ ವಿನೂತನ ಸಂಗತಿಗಳನ್ನು ಬಯಲಿಗೆಳೆದಿದೆ.

ಪುಲಿಗೆರೆಯ ಸೋಮನಾಥನ ಸನ್ನಿಧಿಯಲ್ಲಿ ದತ್ತಿ ಪಡೆದ ಹಾಲಬಸವಿದೇವನನ್ನು "ಮೂಜಗದೊಳಗೆ ಮೆರೆವ ಮಾನವದೇವಂ, ಗೆಲಿದಂ ಅಶನ ಬೆಸವನ ಛಲರಧಿಕಂ" ಎಂದೂ "ಸ್ವಸ್ತಿ ಸಮಸ್ತಭುವನಾಶ್ರಯಂ, ಮಹಾಮಹೇಶ್ವರಂ, ಕವಿಳಾಸಪುರವರಾಧೀಶ್ವರುಂ, ಸುವರ್ಣವೃಷಭಧ್ವಜಂ, (ತೇ)ಸಕ್ಥಿ ಪುರಾಥ ಪಾದಾರ್ಚಕರುಂ, ಮಹಾಲಿಂಗ ಜಂಗಮ ಪ್ರಸಾದನಿಯತರುಂ, ಸಮಯಭಕ್ತಿ ಸಂಪನ್ನ ಶ್ರೀ ಬಸವರಾಜನನ್ವಯರುಂ, ತಪಚಕ್ರವರ್ತಿ, ವೀರವ್ರತಿ" ಎಂದೂ "ಹಾಲಬಸವಿದೇವಮುನೀಶಂ, ಯತಿರಾಯ ಹಾಲಬಸವಿದೇವ ಮುನೀಶಂ, ಯತಿರಾಯ ಹಾಲ ಬಸವಿದೇವಂ" ಎಂದೂ ಕರೆದುದು ಬಸವಣ್ಣನವರ ಮುಂದಣ ಸಂತತಿ ಕೆಲವು ಕಾಲ ಅದೇ ಎತ್ತರದಲ್ಲಿ ಮುನ್ನಡೆದುದಕ್ಕೆ ಸಾಕ್ಷಿಯೆನಿಸಿದೆ. ಅಲ್ಲದೆ ಕಾವರಸನು 'ಜಂಗಮಪುರುಸ', ಹಾಲಬಸವಿದೇವನು 'ಮಹಾಲಿಂಗಜಂಗಮಪ್ರಸಾದನಿಯತ' ಎಂಬ ಹೇಳಿಕೆಗಳು ವೀರಶೈವ ನಡೆದು ಬಂದ ದಾರಿಯ ಮೈಲುಗಲ್ಲುಗಳಾಗಿವೆ.

ಅರ್ಜುನವಾಡ ಶಾಸನ[೩೩]–೨: ಮೇಲೆ ಹೇಳಿದ ಅರ್ಜುನವಾಡಶಾಸನ ಲಭಿಸಿದ ಬಯಲಲ್ಲಿಯೇ ಈ ಶಾಸನ ಲಭಿಸಿದೆ. "ಶ್ರೀ ಬಸವಣದಂಣಾಯಕರ ಕೆಯ್" ಎಂಬ ಬರವಣಿಗೆಯನ್ನುಳ್ಳ ಇದು

---

೩೨. ಈ ಕಲಿದೇವನು ಚೌಡದಾನಪುರ ಶಾಸನೋಕ್ತ ವೀರಕನ್ನಾದೇವಿಯ ಗಂಡ ಕಲ್ಲರಸನಾಗಿರಬಹುದೆಂದು ಶ್ರೀ ಎಂ.ಜಿ. ನಂಜುಂಡಾರಾಧ್ಯರು ಊಹಿಸುತ್ತಾರೆ. (ಶಿವದೇವ ವಿಜಯಪೀಠಿಕೆ XXXII)

೩೩. ಕರ್ನಾಟಕ ಭಾರತಿ ೬-೪

ಹೊಲದ ಮೇರೆ ಸೂಚಿಸುವ ಲಿಂಗಮುದ್ರೆಯ ಸೀಮೆಕಲ್ಲು. ಬಸವಣ್ಣನವವನ್ನು 'ದಣ್ಣಾಯಕ' ಎಂದು ಕರೆದ ಏಕೈಕ ಶಾಸನವಿದು. ಅಕ್ಷರ ಸ್ವರೂಪ ದೃಷ್ಟಿಯಿಂದ ಇದು ೧೩ನೆಯ ಶತಮಾನದ್ದೆಂದು ತಿಳಿದುಬರುತ್ತದೆ.

ಚೌಡದಾನಪುರ ಶಾಸನ[೩೪]**-೧**: ಗೊಪೆ, ಶಿವಪುರ, ಶಿವದೇವಪುರ, ಮುಕ್ತಿಕ್ಷೇತ್ರ ಎಂಬ ಪರ್ಯಾಯನಾಮದ ಚೌಡದಾನಪುರ, ವೀರವ್ರತಿ ಶಿವದೇವ ಒಡೆಯರ ಪುಣ್ಯಭೂಮಿ. ಈ ಶಿವದೇವನಿಗೆ ಸಂಬಂಧಿಸಿದ ಆರೆಂಟು ಶಾಸನಗಳಲ್ಲಿ ಬಸವಣ್ಣನವರ ಉಲ್ಲೇಖ ಬರುವುದು ಎರಡರಲ್ಲಿ. ಇವುಗಳಲ್ಲಿ ಬಸವಣ್ಣನವರ ಅವತಾರವನ್ನು ಕಥಿಸುವ ಒಂದು ಶಾಸನದ ಮುಖ್ಯಭಾಗ ಹೀಗಿದೆ:

(ಕೈಲಾಸದಲ್ಲಿ ಗಣಸಭೆ. ಗಣಂಗಳಿಂದ ಶಿಶಸ್ತುತಿ)

ಆ ಉಮಾಮಹೇಶ್ವರಂ ಗಣಂಗಳಿಗೆ ಪ್ರಸಂನನಾಗಿಯಿಂತೆಂದಂ–
ಇದೆ ನಾಲ್ಕುಂ ವೇದಪಾರಂ ಬಗೆವಡೆ ದಿಟದಿಂ ಸರ್ವಶಾಸ್ತ್ರಾರ್ಥಪಾರಂ ।
ಪದಪಿಂ ಸ್ಮೃತ್ಯರ್ಥಪಾರಂ ತ್ರಿಭುವನಭುವನಜ್ಞಾನ ವಿಜ್ಞಾನಪಾರಂ ।
ಸದ್ವಾಕ್ಯಾರ್ಥಪಾರಂ ಪ್ರಣವಸಮುದಿತಂ ಧ್ಯಾನಭಾವೈಕಪಾರಂ ।
ವಿದಿತಂ ಶ್ರೀ ಜ್ಯೋತಿಲಿಂಗಾಮರಗಣ ಕರುಣೋತ್ಪನ್ನ ಭಕ್ತಿಪ್ರಸಾದಂ ॥
ಎನೆ ಕೇಳ್ದದ್ರಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗಮಂ ತೋರಬೇ ।
ಳ್ಕೆನಲಂದಾ ಪ್ರಭು ನಂದಿನಾಥನ ಮೊಗನ್ನೋಡಲ್ಕೆ ಶ್ರೀ ಸಂಗಮೇ ।
ಶನಪುತ್ರಂ ಬಸವಯ್ಯ ಬಂಕನದರಿಂ[೩೫] ಶಿವಮುದ್ದುದೇವಂ ಜಗ ।
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಮಂ ತೋರುವೆಂ ॥

ವೇದಶಾಸ್ತ್ರಗಳಿಗೆ ನಿಲುಕದ ಭಕ್ತಿಪ್ರಸಾದವನ್ನು ಮರ್ತ್ಯದಲ್ಲಿ ಬಿತ್ತಲೋಸುಗ ನಂದಿನಾಥನು 'ಸಂಗಮೇಶನ ಪುತ್ರಂ ಬಸವಯ್ಯ'ನಾಗಿ ಬಂದ ರೀತಿಯಲ್ಲಿ ಶಿವನು ಶಿವದೇವನಾಗಿ ಅವತರಿಸಿದನೆಂದು ಈ ಕ್ಲಿಷ್ಟ ಪದ್ಯದ ಒಟ್ಟು ಆಶಯ. ಐಕ್ಯವಾದ ಒಂದು ಶತಮಾನದೊಳಗಾಗಿ ಜನತೆ ಬಸವಣ್ಣನವರನ್ನು ಸಂಗಮೇಶನ ಸಾಕ್ಷಾತ್ ಸುಪುತ್ರ, ನಂದಿನಾಥನ ಅಪರಾವತಾರವೆಂದು ಭಾವಿಸಿದ್ದರೆಂದು ಈ ಶಾಸನದಿಂದ ತಿಳಿಯುತ್ತದೆ. ಇಲ್ಲಿಯ ಅವತಾರ ಕಲ್ಪನೆ ಇದೇ ಕಾಲದ ಬಸವರಾಜದೇವರ ರಗಳೆಯಲ್ಲಿಯ ಕಲ್ಪನೆಗಿಂತ ಭಿನ್ನವಾಗಿರುವುದು ಗಮನಿಸಬೇಕಾದ ಅಂಶ.

ಈ ಶಾಸನದ ಇನ್ನೊಂದೆಡೆಯಲ್ಲಿ ಹೇಳಲಾದ 'ಶಿವದೇವಮುನಿಪ ತೋರಿ ಮೆರೆದಂ ಲಿಂಗಜಂಗಮೈಕ ಕ್ರಮಮಂ' "ಮತ್ತಂ ಪುರಾತನರ ಚರಿತ್ರ [ನೀ]ತಿ ವಿಚಿತ್ರವಾಗಿ ಲಿಂಗಾರ್ಚನಂಗೈಯ್ಯುತ್ತ" ಎಂಬ ಮಾತುಗಳು ಬಸವಣ್ಣನವರು ಬಿತ್ತಿದ ತತ್ವಗಳ ಜೀವಂತ ಸಸಿ ಎನಿಸಿವೆ.

ಚೌಡದಾನಪುರ ಶಾಸನ[೩೬]**-೨**: ಮೇಲಣ ಚೌಡದಾನಪುರ ಶಾಸನ(೧)ವು ಬಸವಣ್ಣನವರ ಅವತಾರವನ್ನು ಬಣ್ಣಿಸಿದರೆ, ಇದು ಅವರ ಲಿಂಗಜಂಗಮಸೇವೆ ಪ್ರಸಾದಸಿದ್ಧಿಗಳನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಶಿವದೇವನ ವೀರವ್ರತಗಳನ್ನು ಒಂದೊಂದಾಗಿ ವಿವರಿಸುತ್ತ

---

೩೪. ಶಿವದೇವ ವಿಜಯ, ಅನು. I-V.

೩೫. 'ಬಂಕ' ಎಂಬುದು ವ್ಯಕ್ತಿನಾಮವೆಂದು ಓದಬೇಕೊ? 'ಬಂದ' ಎಂದು ತಿದ್ದಿ ಓದಬೇಕೋ ಗೊತ್ತಾಗುವುದಿಲ್ಲ.

೩೬. ಶಿವದೇವವಿಜಯಂ. ಅನು I. VI.

ಲಿಂಗಕ್ಕೆ ಜಂಗಮಕ್ಕಂ ।
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ ।
ಸಂಗನಬಸವಂ ಬೆಸಸೆ ಮ ।
ನಂಗೊಂಡರ್ಚಿಸುವನುಭಯಲಿಂಗವ ಮುದದಿಂ ॥
ಮೃಡಗಣ ವರಪ್ರಸಾದಮ ।
ಪಡೆದಂ ಜಗವರಿಯಲಂದು ಸಂಗನಬಸವಂ ।
ಪಡೆದಾ ಪ್ರಸಾದಸಿದ್ಧಿಯ ।
ಕಡು ವೀರಬ್ರತದಿ ಪಡೆದನೀ ಶಿವದೇವಂ ॥

ಎಂದು ಹೇಳುತ್ತದೆ, ಈ ಶಾಸನ. ಲಿಂಗಪೂಜೆ ಜಂಗಮದಾಸೋಹಗಳು ಬಸವಣ್ಣನವರ ನಿತ್ಯಬದುಕು, ಪ್ರಸಾದಸಿದ್ಧಿ ಅದರಿಂದ ಸಂಪ್ರಾಪ್ತವಾದ ಅಮೃತಫಲ. ಆ ಕಾಲದ ಜನತೆಗೆ ಧರ್ಮ ದ ಅನುಶಾಸನಗಳಾಗಿದ್ದ ಇವುಗಳನ್ನು, ಶಿವದೇವನಂಥವರು ಅನುಷ್ಠಾನಗೊಳಿಸುತ್ತಿದ್ದರೆಂದು ಇದರಿಂದ ವೈದ್ಯವಾಗುತ್ತದೆ.

ಈ ಶಾಸನದ ಬೇರೆಡೆಯಲ್ಲಿ ಕಂಡುಬರುವ, ವಚನಗಳ ಸಾರರೂಪವೆನಿಸುವ ಆರೆಂಟುವೃತ್ತ, ಮತ್ತು ಹಲವಾರು ವೀರಶೈವ ಪಾರಿಭಾಷಿಕ ಪದಗಳಿಂದ ಆ ಕಾಲದ ವೀರಶೈವದ ಪ್ರಸಾರ ಮತ್ತು ಪ್ರಭಾವಗಳನ್ನು ಅರಿಯಬಹುದು.

ಕಲ್ಲೆದೇವರಪುರ ಶಾಸನ[೩೭]- ಯೋಗಿಚಕ್ರವರ್ತಿ ಪ್ರಸಾದಿದೇವನಿಗೆ ನೀಡಿದ ದತ್ತಿಯನ್ನು ಉಲ್ಲೇಖಿಸುತ್ತ, ಈತನನ್ನು ಹೀಗೆ ವರ್ಣಿಸುತ್ತದೆ, ಈ ಶಾಸನ.

"…..ಭಕ್ತಿ ಸಕ್ತಿವದನ ಪದ್ಮ ಪರಿಮಳ ರೋರಂಬನುಂ । ಸೈವಸಮಯಸಂವರ್ದ್ಧನ ಸಕಳಸಮಯ ಸಮುದ್ಧರಣ ಸರ್ಬಾಗಮ ಸಾರ್ವಭೌಮನುಂ । ಪಂಚಮುದ್ರಾಧರ ವರತಪೋನಿಷ್ಠನಿಕಾಯನುಂ । …. ಬಾಣ ಬಾಣಾಸುರ ವೀರ ಕಲಿಗಚಂದ್ರ । ಭದ್ರಕಾಳ ಮಹಾಕಾಳ ಕಾಳ ಕಾಳಕಂಠ । ನಂದಿನಾಥ ಹರಿXX ಗುಹXXರಾಮ ಭೀಮ ನಾರಾಯಣಾದಿ ದೇವಗಣ ಗುಣಕೀರ್ತ್ತಿ । ಕರ್ಣ್ನಾವತಂಸನುಂ । ಸರಣಜನ ಮನಸ್ಸರೋಜ ರಾಜಹಂಸನುಂ। ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ ಚೆಂನ ಹೊಂನ ಬಂಕ ಬಸವರಾಜ ಭೋಜಾದಿ ಮರ್ತ್ಯಲೋಕದ ಮಹಾ ಗಣಾಚಾರ । ಧರಾಭಾರಧೌರೇಯ ದಿಕ್ಕುಂಜರನುಂ…. ಹೊಂಗೆ ಹೆಂಗೆ ಮಂಗೆ ಮಱಿದೆಱಗದ ಮಾನವದೇವನುಂ ಕಕ್ಷಕಂಠಕರವಕ್ಷೋತ್ತಮಾಂಗ ಲಿಂಗೈಕ್ಯಸಂಗ ಸದ್ಭಾವನುಂ । ……….ನಿಸ್ಪಂನ ನಿತ್ಯಾತ್ಮ ತತ್ವಸ್ವರೂಪನುಂ । ……….ರಸರಸಾಯನ ಘುಟಿಕಾಂಜನ ಮುಖಾಂಜನ ಮೂಳಿಕಾನಿಕಾಯ । ವಸ್ಯವಾದXಸ್ತಂಭ । ವೊಡ್ಡಾಮರ ಮಹೇಂದ್ರಜಾಲಹರಮೇಖಳಾ । ದಿ ಪ್ರಪಂಚ ವಿದ್ಯಾಸಿದ್ಧಸವಿತ । ಸಂತ ಪದ್ಮನುಂ। ಆದಿಗದೆ ಎದುನಾಥ । ಚತುರಂಗಿನಾಥ । ಗೋರಖನಾಥ । ವಿಸ್ತರಾದೇವಿXXನಾಥ। ಕಾಹಳಿನಾಥ । ಸುರ್ಪ್ಪಾಣಿನಾಥ । ಲೋಕನಾಥ । ನರನಾಥ । ಪಂಥ ಪಮಾಣ ಘೋಷನುಂ।

೩೭. EC.XI ಜಗಳೂರು ೩೦ ಕಲ್ಲೆದೇವರಪುರ, ಕ್ರಿ.ಶ. ೧೨೭೯

ಮಂತ್ರತಂತ್ರಯಂತ್ರಸ್ವತಂತ್ರ ನಿದರ್ಶನಂ । ಕಂದಖಿಷಾಯ ಕಂಬಳಿಪಾಯ ಭೂಧರಪಾಯ ಮಾಹಲುಪಾಯ ತಂತ್ರಿಪಾಯ ಗುಪ್ತಪಾಯ ನಾಡಪಾಯ ಪೂಜಪಾಯಾದಿ ಸಾಮಗ್ರಿಯ ಸಾಮರ್ಥಕಳಾವಲ್ಲಭನುಂ ।.... ಸ್ವಪ್ನಾಷ್ವಾದಸಯೋಗಪೀಠಾಚಾರ್ಯ್ಯ ಚಕ್ರಚಕ್ರಧರ। ಸಿದ್ಧ ಸಿಂಹ್ವಾಸನಾಸನಾವಷ್ಠಿತ ಯೋಗಪಟ್ಟ ಯೋಗದಂಡ । ಯೋಗಪಾದುಕ । ಯೋಗಮುದ್ರಭದ್ರಕನುಂ । ....ಜನಿಸಿದ ಕಾಯಸಂಪುಟ ಸ್ಫುಟ ಸಹಜಲಿಂಗ । ಮಂಗಳನಿಳಯ ಜಂಗಮಾವತಾರ ಶ್ರೀಸಯುದ ಮಲ್ಲಿನಾಥನುಂ । ಭೂಚರಕಲಿನಾಥನುಂ... ವರಗುರು ಸಿವಯೋಗಿ ಶ್ರೀಮತುಯೋಗಿಚಕ್ರವರ್ತಿ......... ಪ್ರಸಾದದೇವರಿಗೆ..... (ದತ್ತಿ ನೀಡಿದ ವಿಷಯವಿದೆ).

ಇಲ್ಲಿ ಮರ್ತ್ಯಲೋಕದ 'ಮಹಾಗಣ'ಗಳ ಮಧ್ಯ ಬಸವಣ್ಣನವರನ್ನು 'ಬಸವರಾಜ' ಎಂದು ಹೆಸರಿಸಲಾಗಿದೆ. ಶೈವ ವೀರಶೈವಗಳ ಸಾರ್ಥಕ ಪರಿಭಾಷೆಯಲ್ಲಿ ಕಣ್ಣುಕುಕ್ಕುವಂತೆ ವರ್ಣಿತನಾದ ಯೋಗಿಚಕ್ರವರ್ತಿ ಪ್ರಸಾದಿದೇವನಿಗೆ ಬಸವಾದಿ ಪ್ರಮಥರ ಆಚರಣೆ ಆದರ್ಶವಾಗಿದ್ದಿತೆಂದು ಈ ಶಾಸನದಿಂದ ವೇದ್ಯವಾಗುತ್ತದೆ. ಯಾದವ ರಾಚಮಂದ್ರನ ಕಾಲದಲ್ಲಿ ಹುಟ್ಟಿದ ಈ ಶಾಸನದ ಕಾಲ ಕ್ರಿ.ಶ. ೧೨೭೯.

ಮರಡಿಪುರ ಶಾಸನ[೨೮]**:** ಹೊಯ್ಸಳ ವೀರಬಲ್ಲಾಳನ ಆಳ್ವಿಕೆಗೆ ಸಂಬಂಧಿಸಿದ ಈ ಶಾಸನದ ಕಾಲ ಕ್ರಿ.ಶ. ೧೨೮೦. "ಶ್ರೀ ಕಲಿದೇವರ ದಿವ್ಯ ಶ್ರೀಪಾದಪದ್ಮಂಗಳಂ ಕಮಳಿನಾಳಿXXಸೂತ್ರದನ್ತೆಡೆವಱಿಯದೆ ಅನುದಿನಂ ಬೆಸಕಯ್ಯು(ವ)... ಶರಣರ ದಾಸ ಶೋವನಸಿಂಗ ಮಾರೆಯನಾಯಕ" ಮತ್ತು ಹಲವು ಗಾವುಂಡಗಳು ಕೂಡಿ ಕಲಿದೇವರಿಗೆ ಗ್ರಾಮವೊಂದನ್ನು ದಾನ ನೀಡಿದುದು ಇದರ ವಸ್ತು.

"...ಭಸ್ಮಾದ್ಧೂಳಿತ ಸುದ್ದಗಾತ್ರ ಕಟ್ವಾಂಗದಾರಿ ತ್ರಿಸೂಳಧರ ಗಂಗಾಧರ ಜಾಹ್ನವೀಜಟಾಜೂಟಕೋಟೀರಭಾರ ಪಂಚವಕ್ತ್ರಪರಮೇಶ್ವರ ತ್ರಿಯಂಬಕ ತ್ರಿಲೋಚನ ತ್ರಿಸೂಳಧರ ಕಟ್ವಾಂಧರ ಕಪಾಳಧರ ಕಱಿಕೊರಳ ಹೆಱಿನೊಸಲ ತುಱಿಗಿದ ಕೆಂಜೆಡೆಯ ನವಿಲೆಯ ಜಡೆಯ ಶಂಕರದೇವರ ಪಡಿಹಾರ ದಾಸಯ್ಯ ಸದ್ಯೋಜಾತನ ಮನಮೂರ್ತಿ ಭಕ್ತಿಜನವರ್ತ್ತಿ..... ಉಚ್ಚರಿಸಿತೇ ಮಂತ್ರ ಉದ್ಧರಿಸತೇ ತಂತ್ರ ಶಿವಾಚಾರವೇ ಪಥವಾಗಿ ನಡಪ ರಿಷಿಗಣಂಗಳು ಪ್ರಿಯ ದಕ್ಷಯXXನಾಸನ ಭಾಳಾಕ್ಷ ಹರ ಅಕ್ಷೇಶ್ವರ ನಂದಿನಾಥ ನಂದಿ ಮಹಾಕಾಳ ವೀರಭದ್ರ ಬ್ರಂಗಿನಾಥ ಅಂಗಜ ಅXತಗ್ರೀವ ಮಯಗ್ರೀವ ಘಂಟಾಕರ್ಣ್ಣ ಅಗ್ಗಳಗಣ್ಣ ಧಾರುಕ ರೇಣುಕ ಸಾರೂಪ್ಯ ಸಾಯುಜ್ಯ ಸಾಮ್ರಾಜ್ಯಪದವಿಯಂ ಹಡೆದ ಗಂಗಾವಾಳುಕ ಸಮಾರುದ್ರ ಸಕಳಗಣ ಪರಿವೇಷ್ಠಿತ ಯೆಕ್ಕ್ಯೋಟಿಗಳು ಪೂಜಿತ ಮತ್ತಂ ಮರ್ತ್ಯಲೋಕದ ಗಣಂಗಪಸ್ರಿರಿಯಾಳುವ ದಾಸ ದಸವಮ್ಮ್ರದಿಹಿಲ ಉದ್ಭಟ ನಂಬಿ ಕುಂಬಾರಗುಂಡ ಆಂಡವಲ ಕರಿಕಾಲಚೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜದಣ್ನಾಯಕ ಸುರಿಗೆಯ ಚಲ್ವಡರಾಯ ಸಂಗನಬಸವಯ್ಯ ಲಿನಿಮಿತಿಕೇಶವರಾಜ ಜಗದೇವದಣ್ನಾಯಕ ಏಕಾನ್ತದ ರಾಮಯ್ಯ ಸೊನಲಿಗೆಯರಾಮಯ್ಯ ಹುಲಿಗೆಱಿಯಪೊನ್ನಯ ನೆಲುವಿಗೆಯಸಾಂತಯ್ಯ ಸಕಳಗಣ ಪರಿವೇಷ್ಠಿತ ಶ್ರೀ ಕಲಿದೇವರ ಪ್ರಶಸ್ತಿಮಂಗಳಂ."

---

೨೮. EC.III-i ಮಂಡ್ಯ ೮೩ ಮರಡಿಪುರ, ಕ್ರಿ.ಶ. ೧೨೮೦.

ಕಲಿದೇವರ ಈ ಪ್ರಶಸ್ತಿಗದ್ಯದಲ್ಲಿ ಬಸವಣ್ಣನವರನ್ನು 'ಸಂಗನಬಸವಯ್ಯ' ಎಂದು ಉಲ್ಲೇಖಿಸಲಾಗಿದೆ. ಹಿಂದೆ ಹೇಳಲಾದ ಅರ್ಜುನವಾಡ, ಚೌಡದಾನಪುರ ಶಾಸನದ 'ಸಂಗನಬಸವ' ಮತ್ತು ಈ ಶಾಸನದ 'ಸಂಗನಬಸವಯ್ಯ' ಎಂಬ ಹೆಸರುಗಳು ಸಂಗಮೇಶ್ವರ ಮತ್ತು ಬಸವೇಶ್ವರರ ದೈವೀಸಂಬಂಧವನ್ನು ದೃಢಪಡಿಸುತ್ತವೆ.

ಗುಡಿಹಾಳ ಕುಂಟೋಜಿ ಶಾಸನ[೩೯]: ಬಾಗವಾಡಿ ಸಮೀಪದ ಗುಡಿಹಾಳ ಕುಂಟೋಜಿ ಗ್ರಾಮಗಳ ಸೀಮೆಯಲ್ಲಿಯ ಶಾಸನವಿದು. ಅಕ್ಷರಸ್ವರೂಪವನ್ನವಲಂಬಿಸಿ ಪಂಡಿತರು ಹೇಳುವ ಪ್ರಕಾರ ಇದರ ಕಾಲ ೧೪ನೆಯ ಶತಮಾನ.

(ಶ್ರೀ ಸಂ)ಗಮನಾ
ಥ ಬಸವರಾಜದೇ
ವಾರ ಮಾಂನ(ನ್ಯ)
ಯಿದಕ್ಕೆ ದಾರೊಬರು
ತಪ್ಪಿದರೆ........

ಎಂದು ಮುಂತಾಗಿ ಇದನ್ನು ಬರೆಯಲಾಗಿದೆ. ಬಹುಶಃ ಈ ಕಲ್ಲು ನಿಂತ ಹೊಲ ಬಸವಣ್ಣನವರ ಹೆಸರಿನಲ್ಲಿ ಬಿಟ್ಟ ಮಾನ್ಯವಾಗಿರಬಹುದು. ಇಲ್ಲವೆ ಬಾಗೆವಾಡಿ ಸುತ್ತಣ ಪ್ರದೇಶಕ್ಕೆ 'ಬಸವರಾಜದೇವರ ಮಾನ್ಯ' ಎನ್ನುತ್ತಿರಬಹುದು. ಬಸವಣ್ಣನವರಿಗೆ ಜನ್ಮ ನೀಡಿದ ಬಾಗವಾಡಿಯ ಪುಣ್ಯಪ್ರದೇಶದಲ್ಲಿ ಅವರನ್ನು ಸ್ಮರಿಸುತ್ತ ನಿಂತ ಏಕೈಕ ಶಾಸನವಿದು.

ಆನಂದಪುರಮಠದ ತಾಮ್ರಶಾಸನ[೪೦]: ಬಸವಣ್ಣನವರನ್ನು ಉಲ್ಲೇಖಿಸುವ ಕ್ರಿ.ಶ. ೧೬೬೦ರ ಆನಂದಪುರ ಸಂಸ್ಥಾನಮಠದ ಈ ತಾಮ್ರಶಾಸನದ ಮುಖ್ಯ ಭಾಗ ಹೀಗಿದೆ:

"......ಕೆಳದಿ.... ಸೋಮಶೇಖರನಾಯಕರು ಶಾಲಿವಾಹನಶಕ ವರುಷ ೧೫೯೨ನೆಯ ಧಾತುಸಂವತ್ಸರದ ಮಾರ್ಗಶಿರ ಶು. ೧೩ರಲ್ಲು ಬರಸಿ ಒಪ್ಪಿಸಿದ ಶಾಸನ ಶೂನ್ಯಸಿಂಹಾಸನಕ್ಕೆ ಮುಂದೆ ವಬ್ಬರ ಯೋಗ್ಯರ ಮಾಡಬೇಕೆಂದು ಚನ್ನಬಸವ ಬಸವೇಶ್ವರ ಮುಂತಾದ ಪ್ರಮಥರು ಬಿನ್ನೈಸಿಕೊಂಡದ್ದಕ್ಕೆ ಚಂನಬಸವರಾಜದೇವರ ಸಮಯಾಚಾರದ ೬ ಸಾವಿರಕ್ಕೆ ಅಧ್ಯಕ್ಷರಾದ ನಿರಂಜನಪ್ರಭುವಿನಲ್ಲಿ ಏಕೋಭೋ(=ಭಾ)ಜನಸ್ಥಲ ಕೂಡಿದ ಗಂಗಾಧರ ಸ್ವಾಮಿಗಳಿಗೆ ಕಲಿಶಕೆ ೩೮ ನೆಯ ಜಯ ಸಂವತ್ಸರದ ಆಶ್ವೀಜ, ಶು. ೧೦ ರಲ್ಲು... ಸ್ವಾಯಂಭುವಾಗಮೋಕ್ತ ಪ್ರಮಾಣದಿಂ ಚರಪಟ್ಟನಿಬಂಧಿಸಿ ಮುಂದೆ ಇದೇ ಪ್ರಕಾರ ಶಿಷ್ಯಪಾರಂಪರ್ಯ ನಡೆಯಬೇಕೆಂದು ಅಲ್ಲಮಪ್ರಭುಸ್ವಾಮಿಗಳು ನಿಶ್ಚಯಿಸಿದರು..."

ಈ ಶಾಸನದಲ್ಲಿಯ ವಿಷಯ ನಂಬಿಕೆಗೆ ಅತಿ ದೂರವಾಗಿದ್ದರೂ ಇಲ್ಲಿಯ 'ಬಸವೇಶ್ವರ' ಎಂಬ ಹೆಸರನ್ನು ಮಾತ್ರ ಗಮನಿಸಬಹುದು.

---

೩೯. SII.XV. No. 658 ಕ್ರಿ.ಶ. ಸು. ೧೪ನೆಯ ಶತಮಾನ. ಇದು ಬಾಗೆವಾಡಿಯಲ್ಲಿರುವ ನಂದಿ ವಿಗ್ರಹಕ್ಕೆ ಇಲ್ಲವೆ ಕಂಟೋಜಿಯ ಪ್ರಸಿದ್ಧ ನಂದಿ ವಿಗ್ರಹಕ್ಕೆ ಬಿಟ್ಟ ದಾನವಾಗಿರಲೂ ಸಾಧ್ಯವಿದೆ. ಆಗ ಇದನ್ನು ಬಸವಣ್ಣನವರನ್ನು ಕುರಿತ ಶಾಸನದಿಂದ ಬೇರ್ಪಡಿಸಬೇಕಾಗುತ್ತದೆ.

೪೦. ಶ್ರೀ ಬಸವೇಶ್ವವನ ಕಾಲ. ಪು. ೭೩.

ನಾಗಲೋಟ ಶಾಸನ[೪೧] **(ಕ್ರಿ.ಶ. ೧೬೨೪)**: ಕರ್ನೂಲ ಜಿಲ್ಲೆಯ ನಂದಿಕೋಟೂರ ತಾಲೂಕಿನ ನಾಗಲೋಟಿ ಗ್ರಾಮಕ್ಕೆ ಸಂಬಂಧಿಸಿದ ಈ ಶಾಸನದ ಕಾಲ ಕ್ರಿ.ಶ. ೧೬೨೪. ಅಳಿಯ ರಾಮರಾಯನ ಆಳಿಕೆಯಲ್ಲಿ ಹುಟ್ಟಿದ ಇದು ನಾಗಶೆಟ್ಟಿಯೆಂಬವನ ಪುಣ್ಯಕಾರ್ಯಗಳನ್ನು ವಿವರಿಸುತ್ತ "ಶ್ರೀಶೈಲ ಸಿಧಾಪುರಂ ಲಾಂಗ್ಗಲೂಟಿ ವೀರಭದ್ರುನಿದೇವುಳ ಪ್ರಾಕಾರಮಂದು ತೂ(ರ್ಪು)ನ ಗೋಪುರಮುನ್ನು ಆ ಸಮೀಪಮಂದು ಶಿಲಾಮಂಟ್ಪಪಮುನ್ನುಗಟ್ಟಿಂಚಿ ಕಾಶೀವಿಶ್ವೇಶ್ವರುನಿ ಕಲ್ಯಾಣ ಬಸ(ವೇ)ಶ್ವರುನಿ ಪ್ರ(ತಿ)ಷ್ಟಚೇಸಿ..." ಎಂದು ಹೇಳುತ್ತವೆ. ಸಂಪಾದಕರು ಈ ಶಾಸನದ ತಲೆಯ ಮೇಲಿನ ಟಿಪ್ಪಣಿಯಲ್ಲಿ "It registers the construction of gopur towards the temple of virabhadra Langguti in the region of ShriShail Sidhapuram, the consecreation of the image of Kasi Vivesvara and Kalyan Basavesvara in it" ಎಂದು ವಿವರ ಕೊಟ್ಟಿದ್ದಾರೆ. ಇವರು ಹೇಳುವಂತೆ ಇದು ವಿಗ್ರಹ(Image)ವಾಗಿದ್ದ ಪಕ್ಷದಲ್ಲಿ ೧೭ನೆಯ ಶತಮಾನದವರ ದೃಷ್ಟಿಯಲ್ಲಿದ್ದ ಬಸವಣ್ಣನವರ ಭಾವಚಿತ್ರದ ಅಪರೂಪ ಸಂಶೋಧನೆಯಾಗುತ್ತದೆ. ಲಿಂಗವಾಗಿದ್ದ ಪಕ್ಷದಲ್ಲಿ ಬಸವಣ್ಣನವರ ಬಗ್ಗೆ ಜನರಿಗಿದ್ದ ಭಕ್ತಿ ವೇದ್ಯವಾಗುತ್ತದೆ. ನಂದಿಯನ್ನು ಸ್ಥಾಪಿಸಿ ಹೀಗೆ ಹೇಳಿದ್ದರೆ ಬಸವಣ್ಣ-ನಂದಿಗಳ ಅವತಾರಸಂಬಂಧದ ಬಗ್ಗೆ ಜನರ ದೃಷ್ಟಿಯೇನೆಂಬುದು ತಿಳಿದುಬರುತ್ತದೆ. ಈ ಮೂರು ಶಕ್ಯತೆಗಳಲ್ಲಿ ಸತ್ಯವಾದುದನ್ನು ಅರಿಯಲು ಆ ಸ್ಥಳಕ್ಕೆ ಹೋಗಿ ಶೋಧಿಸುವುದು ಅವಶ್ಯವಿದೆ.

ಜೋಡಿದಾಸೇನಹಳ್ಳಿ ಶಾಸನ[೪೨]: ಕಲ್ಯಾಣದ ಶಿವಶರಣರ ಸಂತಾನವೆನಿಸಿದ ಕೆಂಡಶಂಕರೇಶ್ವರದೇವರ ವರ್ಣನೆಗೆ ಮೀಸಲಾದ ಕ್ರಿ.ಶ. ೧೬೮೬ರ ಈ ಶಾಸನದ ಮುಖ್ಯಪಾಠ ಹೀಗಿದೆ:

"ಶುಭಮಸ್ತು, ಸ್ವಸ್ತಿಶ್ರೀ ಜಯಾಭ್ಯುದಯ ಷಾಲಿವಹನ ಷಕವರುಷ ೧೬೦೮ ಅಕ್ಷಯನಾಮ ಸಂವತ್ಸರದ ಕಾರ್ತಿಕ ಬಹುಳ ೧೩ಯಲು, ಕಲ್ಯಾಣ ಪಟ್ಟಣಕೆ ವಡೆಕರ್ತರಾಗಿ ೮ ೧೯೬೦೦೦ ಜಂಗಮಕೆ ದಾಸೋಹಮಾಡಿ ನಿಚ್ಚಪವಾಡವ ಮೆರೆದ ಕಪ್ಪಟಿಯ ಸಂಗನಬಸವರಾಜೇಂದ್ರನು. ಷಡ್ಡುರುಶನ ಸ್ಥಾಪನಾಚಾರ್ಯರಾದ ಷಟುಸ್ಥಳದ ಪ್ರXXಗಳಾದ ೧೨ಡು ಸಾವಿರ ಸ್ವಯಜಂಗಮೇಶ(?) ಅನುಭವಮೂರ್ತಿಯಾಗಿ ಗ್ನಾನಸಂಭವದಿ ಅರುಹಿಕೊಟ್ಟಂಥ ಚಿಕ್ಕದಣ್ಣಾಯಕ ಚೆಂನಬಸವರಾಜೇಂದ್ರನು, ಶಾಂಭುಲೋಕಕ್ಕೆ ಅಧಿಪತಿ ಗಳಾದಂಥ ಸಾಂಕೆಕೋಳಾಹಳನೆಂಬ ಬಿರುದಿನ ಮಹಿಮೆಯಲಿ ಚರಿಸಿದ ಅಲ್ಲಿಮಹಾಬಸವಂಗಳು (ಅಲ್ಲಮಹಾಪ್ರಭುಗಳು?)ಯಿಂತಿರುವ ಭಯಾನುXXಅ ಮೇರುಗಣಂಗಳು ಸಹವಾಗಿ ಬಂದ ಕೆಂಡಶಂಕರೇಶ್ವರದೇವರ ಪದ ಪಂಕಜಭ್ರಮರರಾದ..."

ಇಲ್ಲಿ ಚೆನ್ನಬಸವ ಪ್ರಭುದೇವ(?)ರೊಂದಿಗೆ ಬಸವಣ್ಣನವರ ಉಲ್ಲೇಖವಿದ್ದು, ವೀರಶೈವಪುರಾಣಗಳಲ್ಲಿ ಉಕ್ತವಾದ ಅವರ ೧೯೬೦೦೦ ಜಂಗಮ ದಾಸೋಹ, ನಿತ್ಯ ಪವಾಡಗಳು ಈ ಶಾಸನದಲ್ಲಿ ಸ್ಥಾನ ಪಡೆದಿವೆ. ಅಲ್ಲದೆ 'ಕಪ್ಪಟಿಯ ಸಂಗನ ಬಸವರಾಜೇಂದ್ರ' ಎಂದು ಕರೆದುದು ಗಮನಿಸಬೇಕಾದ ಸಂಗತಿ.

---

೪೧. SII XVI. 318 (ಕರ್ನಾಟಕ ಭಾರತಿ ೬-೪)

೪೨. EC.XII ಮದ್ದಗಿರಿ ೮ ಜೋಡಿದಾಸೇನಹಳ್ಳಿ, ಕ್ರಿ.ಶ. ೧೬೮೬.

ಕಾನಕಾನಹಳ್ಳಿ ತಾಮ್ರಶಾಸನ[೪೩]-೧: ಅಗಸರಿಗೆ ಮಡಿವಾಳ ಮಾಚಿದೇವನು ನಿಯಮಿಸಿಕೊಟ್ಟ ಹಕ್ಕುಗಳನ್ನು ಉಲ್ಲೇಖಿಸುತ್ತ ಕೊನೆಗೆ "ಕಲ್ಯಾಣಪಟ್ನಮಂದು ಬಸವೇಶ್ವರಸ್ವ(-ಸ್ವಾ)ಮುಲುವಾರು ನಿರ್ಣಯಂ ಚೇಶಿಂದಿ" ಎಂದು ಈ ಶಾಸನ ಹೇಳುತ್ತಿದೆ. ಇದು ತೆಲುಗು ಶಾಸನವಾಗಿದ್ದು ಕಾಲ ಕ್ರಿ.ಶ. ಸು. ೧೨೦೦.

ಕಾನಕಾನಹಳ್ಳಿ ತಾಮ್ರಶಾಸನ[೪೪]-೨: ಮಲ್ಲಿಗೆಹೂಗಳನ್ನು ನಾವಿದರು ಉಪಯೋಗಿಸ ಬಾರದು ಎಂಬ ವಿಷಯವಾಗಿ ಹೇಳುತ್ತ ".......ಯಿದನ್ನು ಕಲ್ಯಾಣದ (ಬ್ಸ=ಬಸ)ವಪ್ಪಾನವರು ಮಾಡಿದ ಶ್ಯಾಸನವೆಂದು ಹೇಳುವರ್ರು...." ಎಂದು ಈ ಶಾಸನ ನುಡಿಯುತ್ತಿದೆ.

ಈ ಎರಡು ಶಾಸನಗಳಲ್ಲಿ ಹೇಳಲಾದ ನಿರ್ಣಯಗಳನ್ನು ಬಸವಣ್ಣನವರು ಕೊಟ್ಟಿರಲಿ ಬಿಡಲಿ, ಅಗಸರು ಸಮಾಜದಿಂದ ಆಯವನ್ನು ಸಾಧಿಸುವಲ್ಲಿ, ಸಮಾಜವು ನಾವಿದರ ಹಕ್ಕುಗಳನ್ನು ಸೀಮಿತಗೊಳಿಸುವಲ್ಲಿ ಬಸವಣ್ಣನವರ ಹೆಸರನ್ನು ಬಳಸಿದರೆ ತಮ್ಮ ಮಾತಿಗೆ ಬೆಲೆ ಬರುವುದೆಂದು ಭಾವಿಸಿದುದು ಇದರಿಂದ ವ್ಯಕ್ತವಾಗುತ್ತದೆ. ಮೇಲೆ ಹೇಳಿದ ಈ ಹದಿಮೂರು ಶಾಸನಗಳನ್ನಲ್ಲದೆ,

"ಶ್ರೀ ಬಸವೇಶ್ವರ ಸ್ವಾಮಿಯವರು"[೪೫]

"ಬಸವೇಶ್ವರನೆ ಗತ್ತಿ"[೪೬]

"ಶ್ರೀಗುರು ಬಸವಲಿಂಗ"[೪೭]

"ಬಸವ ಮಾದೇಶ್ವರ ನಂಜುಂಡೇಶ್ವರ ಪ್ರಸಂನ"[೪೮]

"ಬಸಪ(=ವ)ಣ ವಾಕ್ಯ ಸರಣರ ವಾಕ್ಯ ಪ್ರಭುವಿನ ವಾಕ್ಯ"[೪೯]

ಎಂಬ ಹಲವಾರು ಉಲ್ಲೇಖಗಳನ್ನು ಸಂಗ್ರಹಿಸಿದರೆ ಬಸವಣ್ಣನವರನ್ನು ಕುರಿತ ಶಾಸನ ಸಂಖ್ಯೆ ಇನ್ನೂ ವರ್ಧಿಸುತ್ತದೆ.

ಒಟ್ಟಿನಲ್ಲಿ, ಈಗ ಬಸವಣ್ಣನವರ ಹೆಸರಿನಲ್ಲಿ ಮೇಲಣ ಶಾಸನಗಳು ಲಭಿಸಿ 'ಶಾಸನಪ್ರಮಾಣ'ವನ್ನು ನಂಬುವವರಿಗೆ ಅವರು ಐತಿಹಾಸಿಕ ವ್ಯಕ್ತಿಗಳೆಂಬ ಭಾವನೆ ಮೂಡಿದೆ. ಇದರಿಂದಾಗಿ "ಬಸವಣ್ಣನವರನ್ನು ಕುರಿತ ಗ್ರಂಥಗಳಲ್ಲಿರುವ ಒಂದು ವಿಷಯಕ್ಕೂ ಶಾಸನಾಧಾರ ಒಂದಾದರೂ ಇಲ್ಲವೆಂಬುದೇ ಆಶ್ಚರ್ಯವು. ಇಂಥ ಮಹಾಪುರುಷನನ್ನು ಕುರಿತು ಶಾಸನಗಳೆಲ್ಲ ಮೌನಮುದ್ರೆ ವಹಿಸಿದೆ... ಇದೇ ಬಸವಣ್ಣನು ಚಾರಿತ್ರಿಕ ಪುರುಷನೋ ಅಲ್ಲವೋ ಎಂಬ ಸಂದೇಹಕ್ಕೆ ಮೂಲವು"[೫೦] ಎಂಬ ಸಂಶಯಗಳು ಬೇರು ಸಹಿತ ಬಿದ್ದುಹೋಗಿವೆ.

---

೪೩. EC.IX ಕಾನಕಾನಹಳ್ಳಿ ೮೯ ಕಾನಕಾನಹಳ್ಳಿ, ಕ್ರಿ.ಶ. ೧೨೦೦.

೪೪. EC.IX ಕಾನಕಾನಹಳ್ಳಿ ೯೦ ಕಾನಕಾನಹಳ್ಳಿ, ಕ್ರಿ.ಶ. ೧೨೦೦.

೪೫. MAR. 1930 P. 193 ಸುತ್ತೂರು, ಕ್ರಿ.ಶ. ೧೨೨೧.

೪೬. EC.XI. ಮೊಳಕಾಲ್ಮೂರು ೨೫, ಸಂತೆಗೋವಿ, ಕ್ರಿ.ಶ. ೧೬೬೫.

೪೭. MAR.1935. p. 113 ಹಿರೇಕೋಗಿಲೂರು ಕ್ರಿ.ಶ. ೧೮ನೆಯ ಶತಮಾನ.

೪೮. MAR.1933 No. 36

೪೯. EC.IX ದೊಡ್ಡಬಳ್ಳಾಪುರ ೪೬ ಚಿಕ್ಕಹೆಜ್ಜಾಜಿ

೫೦. ಪ್ರ.ಕ. ೨೧-೪.

ಈ ಹದಿಮೂರು ಶಾಸನಗಳಿಂದ ಬಸವಣ್ಣನವರಿಗೆ ಸಂಬಂಧಿಸಿದ ನಂದಿಯ ಅವತಾರ, ೧೯೬೦೦೦ ಜಂಗಮದಾಸೋಹ ಮತ್ತು ನಿತ್ಯಪವಾಡಗಳೆಂಬ ಅಲೌಕಿಕ ಹೇಳಿಕೆಗಳ, ತರ್ದವಾಡಿ ಮಧ್ಯಗ್ರಾಮ ಬಾಗವಾಡಿ, ಬಾಗವಾಡಿಯ ಪುರಪ್ರಭು ಮಾದಿರಾಜ, ಮಾದಿರಾಜನ ಮಗ ಬಸವಣ್ಣ, ಬಸವಣ್ಣನ ಅಣ್ಣ ದೇವರಾಜ, ದೇವರಾಜನ ಮಗ ಕಲಿದೇವ, ಕಲಿದೇವನ ಮಗ ಹಾಲಬಸವಿದೇವ–ಎಂಬ ಚಾರಿತ್ರಿಕ ಸಂಗತಿಗಳ ಮತ್ತು ಅವರು ಆತ್ಮೀಕರಿಸಿಕೊಂಡ ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಪುರಾತನಭಕ್ತಿ, ಸಮಯಭಕ್ತಿಗಳೆಂಬ ವ್ಯಕ್ತಿಸಿದ್ಧಿಗಳ ಒಟ್ಟು ಚಿತ್ರ ಕಣ್ಣಿಗೆ ಕಟ್ಟುತ್ತದೆ.

ಹರಿಹರದೇವನು "ಬಸವ ಬಸವಣ್ಣ ಬಸವರಸ ಬಸವರಾಜ ಬಸವಿದೇವ" ಎಂದು ಎದೆಯುಕ್ಕಿ ಕರೆದಂತೆ, ಈ ಶಾಸನಗಳೆಲ್ಲ ಬಸವಯ್ಯ, ಬಸವೇಶ್ವರ, ಬಸವೇಶ್ವರಸ್ವಾಮಿ, ಬಸವರಾಜ, ಬಸವರಾಜದೇವರು, ಬಸವರಾಜ ದಣ್ಣಾಯಕ, ಸಂಗನಬಸವ, ಸಂಗನ ಬಸವಯ್ಯ, ಸಂಗಮೇಶನ ಪುತ್ರ ಬಸವಯ್ಯ, ಕಪ್ಪಟಿಯ ಸಂಗನ ಬಸವರಾಜೇಂದ್ರ, ಕಲ್ಯಾಣಬಸವೇಶ್ವರ ಎಂದು ನಾಮಸ್ಮರಣೆ ಮಾಡಿದೆ. ಅರ್ಜುನವಾಡ ಶಾಸನವಂತೂ

ಮಂಗಳಕೀರ್ತಿ ಪುರಾತನ ।
ಜಂಗಮಲಿಂಗೈಕಭಕ್ತಿನಿರ್ಭರಲೀಲಾ ।
ಸಂಗಂ ಸಂಗನಬಸವಂ ।
ಸಂಗತಿಯಂ ಮಾಳ್ಕೆ ಭಕ್ತಿಯೋಗನವರತಂ ।

ಎಂದು ಭಕ್ತಿಪ್ರಸಾದವನ್ನು ಯಾಚಿಸುತ್ತ ಅವರ ವ್ಯಕ್ತಿತ್ವದ ಚಿತ್ರವನ್ನು ಬಿಡಿಸಿದೆ.

ಹಾಸನ ಜಿಲ್ಲೆಯ ಹಿರಿಯೂರ (೧೨೫೯), ಚಿತ್ರದುರ್ಗ ಜಿಲ್ಲೆಯ ಕಲ್ಲೆದೇವರಪುರ (೧೨೭೯), ಮೈಸೂರು ಜಿಲ್ಲೆಯ ಮರಡಿಪುರ (೧೨೮೦) ಶಾಸನಗಳಲ್ಲಿ ಬರುವ ಶರಣರ ಮತ್ತು ಬಸವಣ್ಣನವರ ನಾಮಸ್ಮರಣೆಯನ್ನು ಗಮನಿಸಿದರೆ, ಕಲ್ಯಾಣದಲ್ಲಿ ತಲೆಯೆತ್ತಿದ ವೀರಶೈವವು ೧೩ನೆಯ ಶತಮಾನದ ಹೊತ್ತಿಗೆ ತುಂಗಭದ್ರೆಯನ್ನು ದಾಟಿ ದಕ್ಷಿಣ ಕರ್ನಾಟಕವನ್ನು ವ್ಯಾಪಿಸಿತ್ತೆಂದು ಹೇಳಬೇಕಾಗುತ್ತದೆ.

ಈ ಶಾಸನಗಳಲ್ಲಿ ಮೂರು ತಾಮ್ರಶಾಸನ, ಐದು ಶಿಲಾಶಾಸನಗಳನ್ನು ಬಿಟ್ಟರೆ ಮಿಕ್ಕ ಕಲ್ಲೆದೇವರಪುರ, ಮರಡಿಪುರ, ಅರ್ಜುನವಾಡಗಳ ಒಂದೊಂದು ಶಾಸನ, ಚೌಡದಾನಪುರದ ಎರಡು ಶಾಸನ-ಹೀಗೆ ಒಟ್ಟು ೫ ಶಾಸನಗಳು ಒಂದಿಲ್ಲೊಂದು ರೀತಿಯಿಂದ ಕಲಿದೇವರಿಗೆ ಸಂಬಂಧಿಸಿವೆ. ಕಲ್ಲೇದೇವರಪುರ ಶಾಸನವು ಕಲ್ಮೇಶ್ವರ (=ಕಲಿದೇವ) ದೇವಾಲಯದಲ್ಲಿದ್ದು, ದಾನ ಪಡೆದ ಪ್ರಸಾದಿದೇವನನ್ನು 'ಭೂಚರ ಕಲಿನಾಥನುಂ' ಎಂದು ಕರೆದಿದೆ. ಮರಡಿಪುರ ಶಾಸನವು ಕಲಿದೇವರ ಪ್ರಶಸ್ತಿಯೊಂದಿಗೆ ಪ್ರಾರಂಭವಾಗುವುದಲ್ಲದೆ ಕಲಿದೇವರಿಗೆ ದತ್ತಿ ಕೊಟ್ಟುದೇ ಅದರ ವಿಷಯ. ಅರ್ಜುನವಾಡ ಶಾಸನವು "ಶ್ರೀಯಂ ಶ್ರೀ ಕಲ್ಲಿನಾಥಂ ಕುಡುಗೆ...." ಎಂಬ ಕಲಿದೇವರ ಪ್ರಾರ್ಥನಾಪದ್ಯದಿಂದ ಪ್ರಾರಂಭವಾಗುವುದಲ್ಲದೆ ಬಸವಣ್ಣನವರ ಅಣ್ಣನ ಮಗನ ಹೆಸರು 'ಕಲಿದೇವರಸ' ಎಂದು ಹೇಳುತ್ತದೆ; ಶಿವನು "ಕಲಿಯುಗದಲ್ಲಿ ಕಲಿರಾಜಮುನಿ, ಕಲಿದೇವನಾಮ"ದ ಲಿಂಗನಾದನೆಂದು ಸಾರುತ್ತದೆ. ಚೌಡದಾನಪುರವಂತೂ ವೀರಕನ್ನಾದೇವಿ ಯಿಂದ ಪ್ರತಿಷ್ಠಾಪಿಸಲ್ಪಟ್ಟ ಕಲಿದೇವನಿಂದ ಕಂಗೊಳಿಸುವ ಪುಣ್ಯಭೂಮಿ. ಈ ಎಲ್ಲ ಸಂಗತಿಗಳನ್ನು ಮನದಂದರೆ ಕಲಿದೇವರ ಸಂಪ್ರದಾಯಕ್ಕೂ ಬಸವಣ್ಣನವರಿಗೂ ಏನೋ ಒಂದು ಸಂಬಂಧವಿರಬಹುದೆನಿಸುತ್ತದೆ. ಇದು ನಿಜವಿದ್ದರೆ ಕಲಿದೇವರ

ದೇವಾಲಯವನ್ನು ನಿರ್ಮಿಸಿದ ಮನಗೂಳಿ ಶಾಸನೋಕ್ತ ಬಸವಯ್ಯನೂ ಕಲ್ಯಾಣ ಬಸವಣ್ಣನೂ ಒಬ್ಬನೇ ಎಂದು ವಾದಿಸುವವರಿಗೆ, ಸಣ್ಣ ಆಧಾರವೊಂದು ಲಭಿಸಿದಂತಾಗುತ್ತದೆ.

ಹರಿಹರದೇವನ ಕಾಲ ಕ್ರಿ.ಶ. ೧೨೪೦ ಎಂದು ಎ.ಆರ್.ಕೃ; ಕ್ರಿ.ಶ. ೧೨೯೦ ಎಂದು ಕಿಟೆಲ್; ೧೨೯೫ ಎಂದು ಡಾ.ಆರ್.ಸಿ. ಹಿರೇಮಠ; ಕ್ರಿ.ಶ. ೧೩೦೦ ಎಂದು ಬಿ.ಎಲ್. ರೈಸ್, ಡಾ. ಎ. ವೆಂಕಟಸುಬ್ಬಯ್ಯ, ಎಚ್. ದೇವೀರಪ್ಪ ಮೊದಲಾದವರು ಹೇಳುತ್ತಾರೆ.[೫೧] ಇತ್ತಿತ್ತಲಾಗಿ ಇನ್ನೂ ಬಲಗೊಳ್ಳುತ್ತಿರುವ ಈ ಹೇಳಿಕೆ ನಿಜವಿದ್ದ ಪಕ್ಷದಲ್ಲಿ ಬಸವಣ್ಣನವರನ್ನು ಕುರಿತ ಪ್ರಾಚೀನತಮ ಕೃತಿಯೆನಿಸುವ ಬಸವರಾಜದೇವರ ರಗಳೆಗಿಂತ ಹಿರಿಯೂರ (೧೨೫೮), ಅರ್ಜುನವಾಡ (೧೨೬೦). ಚೌಡದಾನಪುರ (೧೨೬೩), ಕಲ್ಲೆದೇವರಪುರ (೧೨೭೦), ಮರಡಿಪುರ (೧೨೪೦) ಶಾಸನಗಳೇ ಹೆಚ್ಚು ಪ್ರಾಚೀನತಮವೆನಿಸುತ್ತವೆ. ಅದಕ್ಕಾಗಿ ಈ ಶಾಸನಗಳಲ್ಲಿ ನಿರೂಪಿತವಾದ ಸಂಗತಿಗಳು ಕಾವ್ಯಗಳಿಗಿಂತ ಹೆಚ್ಚು ಪ್ರಾಚೀನ, ಹೆಚ್ಚು ವಿಶ್ವಸನೀಯ.

ಪ್ರಭುದೇವ

ವೀರಶೈವ ಇತಿಹಾಸದಲ್ಲಿ ಪ್ರಭುದೇವರ ಚರಿತ್ರೆ ಚಿದಂಬರ ರಹಸ್ಯವೆನಿಸಿದೆ. ಜನತೆಯ ದೃಷ್ಟಿಯಲ್ಲಿ ಅವನ ಬದುಕು ಒಂದು 'ಲೀಲೆ'ಯಾಗಿ ಪರಿಣಮಿಸಿದೆ. ಹೀಗಾಗಿ ವೀರಶೈವ ಕೃತಿಗಳು ಅವನ ಬಯಲ ಬದುಕನ್ನು ಬರಹಕ್ಕಿಳಿಸಿವೆಯೇ ಹೊರತು ನಿಜಚರಿತ್ರೆಯನ್ನು ನಿಲುಕಿಸಿಕೊಂಡಿಲ್ಲ. ಶಾಸನಗಳಾದರೂ ಈ ಪ್ರಯತ್ನಕ್ಕೆ ಕೈಹಾಕದೆ, ವೀರಶೈವಕೃತಿಗಳನ್ನು ಮಾತ್ರ ಅನುಸರಿಸಿ ನಡೆದಿವೆ.

ಆನಂದಪುರ ಮಠದ ತಾಮ್ರಶಾಸನ[೫೨] (ಕ್ರಿ.ಶ. ೧೬೬೦): "…..ಕಲ್ಯಾಣ ಪಟ್ಟಣದಲ್ಲಿ ನಿರಂಜನಪ್ರಭುಸ್ವಾಮಿಗಳು ತಮ್ಮ ಶೂನ್ಯಸಿಂಹಾಸನಕ್ಕೆ ಮುಂದೆ ಒಬ್ಬರ ಯೋಗ್ಯರ ಮಾಡಬೇಕೆಂದು ಚನ್ನಬಸವ ಬಸವೇಶ್ವರ ಮುಂತಾದ ಪ್ರಮಥರು ಬಿನ್ನೈಸಿಕೊಂಡಿದ್ದಕ್ಕೆ ಚಂನಬಸವರಾಜದೇವರ ಸಮಯಾಚಾರದ ೬ಸಾವಿರಕ್ಕೆ ಅಧ್ಯಕ್ಷರಾದ ನಿರಂಜನಪ್ರಭುವಿನಲ್ಲಿ ಏಕೋಭೋ(=ಭಾ)ಜನಸ್ಥಲ ಕೂಡಿದ ಗಂಗಾಧರ ಸ್ವಾಮಿಗಳಿಗೆ ಕಲಿಶಕ ೪೯೭೪ನೆಯ ಜಯ ಸಂವತ್ಸರದ ಆಶ್ವೀಜ ಶು. ೧೦ರಲ್ಲು… ಸ್ವಾಯಂಭುವಾಗಮೋಕ್ತ ಪ್ರಮಾಣದಿಂ ಚರಪಟ್ಟ ನಿಬಂಧಿಸಿ ಮುಂದೆ ಇದೇ ಪ್ರಕಾರ ಶಿಷ್ಯಪಾರಂಪರ್ಯ ನಡೆಯಬೇಕೆಂದು ಅಲ್ಲಮಪ್ರಭುಸ್ವಾಮಿಗಳು ನಿಶ್ಚೈಸಿದರು…"

ಕೆಳದಿ ಸೋಮಶೇಖರ ನಾಯಕನ ಸಮಯದಲ್ಲಿ ಹುಟ್ಟಿದ ಈ ಶಾಸನದ ಕಾಲ ಕ್ರಿ.ಶ. ೧೬೬೦. ಇಲ್ಲಿಯ 'ಚರಪಟ್ಟ' ಘಟನೆಯ ಬಗ್ಗೆ ಸಂಶಯವಿದ್ದರೂ ಬಸವ, ಚನ್ನಬಸವರೊಂದಿಗೆ ಬಂದ ಪ್ರಭುವಿನ ಹೆಸರು, ಇದರ ವಿವಿಧರೂಪಗಳಾದ ನಿರಂಜನ ಪ್ರಭುಸ್ವಾಮಿ. ನಿರಂಜನಪ್ರಭು, ಅಲ್ಲಮಪ್ರಭುಸ್ವಾಮಿ ಮತ್ತು 'ಶೂನ್ಯಸಿಂಹಾಸನ' -ಉಲ್ಲೇಖಗಳು ಗಮನಾರ್ಹವೆನಿಸಿವೆ.

ಜೋಡಿದಾಸೇನಹಳ್ಳಿ ಶಾಸನ[೫೩]: "…….ಕಲ್ಯಾಣ ಪಟ್ಟಣಕೆ ವಡೆಕರ್ತರಾಗಿ ಲ ೧೯೬೦೦೦ ಜಂಗಮಕೆ ದಾಸೋಹಮಾಡಿ ನಿಚ್ಚ ಪವಾಡ ಮೆರೆದ ಕಪ್ಪಟಿಯ ಸಂಗನಬಸವರಾಜೇಂದ್ರನು,

---

೫೧. ಪದ್ಮರಾಜ ಪುರಾಣದ ಮುನ್ನುಡಿ. ಪು. ೭

೫೨. ಶ್ರೀ ಬಸವೇಶ್ವರನ ಕಾಲ, ಪು. ೭೩

೫೩. EC.XII ಮದ್ದಗಿರಿ ೮, ಜೋಡಿದಾಸೇನಹಳ್ಳಿ ಕ್ರಿ.ಶ. ೧೬೮೬.

ಷಡ್ದರುಶನ ಸ್ಥಾಪನಾಚಾರ್ಯರಾದ ಷಟುಸ್ಥಳದ ಪ್ರXXಗಳಾದ ೧೨ಡು ಸಾವಿರ ಸ್ವಯಜಂಗಮೇಶ(?) ಅನುಭವಮೂರ್ತಿಯಾಗಿ ಗ್ನಾನ ಸಂಭವದಿ ಅರುಹಿ ಕೊಟ್ಟಂಥ ಚಿಕ್ಕದಣ್ಣಾಯಕ ಚೆಂನಬಸವರಾಜೇಂದ್ರನು, ಶಾಂಭುಲೋಕಕೆ ಅಧಿಪತಿಗಳಾದಂಥ ಸಾಂಕೆಕೋಳಾಹಳನೆಂಬ ಬಿರಿದಿನ ಮಹಿಮೆಯಲಿ ಚರಿಸಿದ ಅಲ್ಲಮಹಾಬಸವಂಗಳು (=ಅಲ್ಲಮಹಾಪ್ರಭುಗಳು?) ಯಿಂತಿವರುಭಯಾನುXXಮೇರುಗಣಂಗಳು ಸಹವಾಗಿ ಬಂದ ಕೆಂಡಶಂಕರೇಶ್ವರದೇವರ ಪದಪಂಕಜ ಭ್ರಮರರಾದ..."

ಈ ಶಿಲಾಶಾಸನದ ಕಾಲ ಕ್ರಿ.ಶ. ೧೬೮೬, ಇಲ್ಲಿ ಬರುವ "ಅಲ್ಲಮಹಾಬಸವಂಗಳು" ಎಂಬುದರ ಶುದ್ಧಪಾಠ 'ಅಲ್ಲಮ(ಹಾ)ಪ್ರಭುಗಳು' ಇರಬಹುದು. ಇದು ನಿಜವಿದ್ದರೆ ಬಸವ, ಚನ್ನಬಸವಣ್ಣರೊಂದಿಗೆ ಬಂದ "ಶಾಂಭುಲೋಕಕೆ ಅಧಿಪತಿಗಳಾದಂಥ ಸಾಂಕೆಕೋಳಾಹಳನೆಂಬ ಬಿರುದಿನ ಮಹಿಮೆಯಲಿ ಚರಿಸಿದ" ಎಂಬ ಪ್ರಭುದೇವರ ಪ್ರಶಸ್ತಿ ಅವರ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

ಚಿಕ್ಕಹೆಜ್ಜಾಜೆ ಶಾಸನ[೫೪]: ಮಿತಿ ಉಲ್ಲೇಖವಿಲ್ಲದ ಈ ಶಾಸನದ ಮೇಲೆ "ವೀರ ಸರಣರು ಅರುಸಹ ಜಂಗಮ ಈ ವಿನಯ ನುಡಿ... ಬಸವ(ವ)ಣ ವಾಕ್ಯ ಶರಣರ ವಾಕ್ಯ XXಪ್ರಭುವಿನ ವಾಕ್ಯ..." ಎಂಬ ಬರವಣಿಗೆ ಇದೆ. ಇಲ್ಲಿಯ 'ಪ್ರಭು' ಅಲ್ಲಮಪ್ರಭುವೇ ಆಗಿರಬೇಕು.

ಧಾರವಾಡ ತಾಲೂಕಿನ ಸಿದ್ಧಾಪುರ ಗ್ರಾಮದಲ್ಲಿರುವ ಸಿದ್ಧೇಶ್ವರ ದೇವಾಲಯದ ಮುಂದೆ ಒಂದು ಶಾಸನ ನಿಂತಿದೆ. ಇದರ ಕಾಲ ಕ್ರಿ.ಶ. ೧೧೫೮. ಪ್ರಭುಲಿಂಗ ದೇವರ ಮಂದಿರದ ಜೀರ್ಣೋದ್ಧಾರ ಮತ್ತು ಪೂಜೆ-ಪುರಸ್ಕಾರಕ್ಕೆ ಆ ಗ್ರಾಮದ ೫೦೦ ತೋಟಿಗರು ದಾನಮಾಡಿದುದು ಇದರ ವಿಷಯ. ಇದನ್ನು ಕುರಿತು "ಅಲ್ಲಮಪ್ರಭುವಿನ ಜೀವನ ಕಾಲ ಮತ್ತು ಪ್ರಖ್ಯಾತಿಯನ್ನು ಕುರಿತು ಘಂಟಾಘೋಷದಂತೆ ಸಾಕ್ಷಿ ಹೇಳುವ ಬಹುಮೂಲ್ಯ ಶಾಸನ ಪ್ರಮಾಣವಿದು"[೫೫] ಎನ್ನುವ ಡಾ. ಪಿ.ಬಿ. ದೇಸಾಯಿ ಅವರ ಅಭಿಪ್ರಾಯ ಇನ್ನೂ ಆಧಾರಗಳನ್ನು ಬಯಸುತ್ತದೆ.

ಚೆನ್ನಬಸವಣ್ಣ

ಶರಣಸಮೂಹದಲ್ಲಿ ಚೆನ್ನಬಸವಣ್ಣನವರದು ತೇಜೋಮಯ ವ್ಯಕ್ತಿತ್ವ, ಅವರಿಗೆ ಸಂಬಂಧಪಟ್ಟ ಕೆಲವು ಸಂಗತಿಗಳು ಶಾಸನದಲ್ಲಿ ಹೀಗಿವೆ.

ಆನಂದಪುರ ಮಠದ ತಾಮ್ರಶಾಸನ[೫೬]: ".....ಪೂರ್ವ ಕಲ್ಯಾಣಪಟ್ಟಣದಲ್ಲಿ ನಿರಂಜನಪ್ರಭುಸ್ವಾಮಿಗಳು ತಮ್ಮ ಶೂನ್ಯಸಿಂಹಾಸನಕ್ಕೆ ಮುಂದೆ ವಬ್ಬರ ಯೋಗ್ಯರ ಮಾಡಬೇಕೆಂದು ಚನ್ನಬಸವ ಬಸವೇಶ್ವರ ಮುಂತಾದ ಪ್ರಮಥರು ಬಿನ್ನೈಸಿಕೊಂಡದಕ್ಕೆ ಚೆಂನಬಸವರಾಜದೇವರ ಸಮಯಾಚಾರದ ೬ಸಾವಿರಕ್ಕೆ ಅಧ್ಯಕ್ಷರಾದ ನಿರಂಜನಪ್ರಭುವಿನಲ್ಲಿ ಏಕೋಭೋ(ಭಾ?)ಜನಸ್ಥಲ ಕೂಡಿದ ಗಂಗಾಧರ ಸ್ವಾಮಿಗಳಿಗೆ..." ಪ್ರಭುದೇವರು ಚರಪಟ್ಟ ಕಟ್ಟಿದುದು ಈ ಶಾಸನದ ವಿಷಯ. ಬಸವ, ಚೆನ್ನಬಸವರು ಇಲ್ಲಿ ಪ್ರಭುದೇವರಿಗೆ ಮಾಡಿಕೊಂಡ ಬಿನ್ನಹ, 'ಚಂನಬಸವ ರಾಜದೇವರ

---

೫೪. EC.IX. ದೊಡ್ಡಬಳ್ಳಾಪುರ ೪೬, ಚಿಕ್ಕ ಹೆಜ್ಜಾಜೆ.

೫೫. ಶ.ಸಾ. ೨೦-೪.

೫೬. ಶ್ರೀ ಬಸವೇಶ್ವರನ ಕಾಲ, ಪು. ೭೩.

ಸಮಯಾಚಾರದ ೬ಸಾವಿರಕ್ಕೆ ಅಧ್ಯಕ್ಷರಾದ ನಿರಂಜನಪ್ರಭು' ಎಂಬ ಹೇಳಿಕೆಗಳ ಬಗ್ಗೆ ಸಂಶಯವಿದ್ದರೂ ಇಲ್ಲಿ ಬಂದ ಚೆನ್ನಬಸವ, ಚೆಂನಬಸವರಾಜೇಂದ್ರ ಎಂಬ ಪದಗಳು ಮಾತ್ರ ಗಮನಾರ್ಹ.

ಜೋಡಿದಾಸೇನಹಳ್ಳಿ ಶಾಸನ[೫೭]: ಕಲ್ಯಾಣ ಶಿವಶರಣರ ಸಂತಾನವಾದ ಕೆಂಡಶಂಕರೇಶ್ವರದೇವರಿಗೆ ಸಂಬಂಧಿಸಿದ ಈ ಶಾಸನವು ಬಸವಣ್ಣ ಮತ್ತು ಪ್ರಭುದೇವರನ್ನು ನೆನೆಯುತ್ತ "ಷಡ್ದರುಷನ ಸ್ಥಾಪನಾಚಾರ್ಯರಾದ ಷಟುಸ್ಥಳದ ಪ್ರXXಗಳಾದ... ೧೨ಡು ಸಾವಿರ ಸ್ವಯಜಂಗಮೇಶ(?) ಅನುಭವ ಮೂರ್ತಿಯಾಗಿ ಜ್ಞಾನ ಸಂಭವದಿ ಅರುಹಿಕೊಟ್ಟಂಥ ಚಿಕ್ಕದಣ್ಣಾಯಕ ಚೆಂಬನಬಸವರಾಜೇಂದ್ರನು" ಎಂದು ಹೇಳಿದ ಮಾತು ಚೆನ್ನಬಸವಣ್ಣನವರ ವ್ಯಕ್ತಿಸಿದ್ಧಿಯನ್ನು ಸಾರುತ್ತದೆ. ಅತ್ಯುಕ್ತಿ ಎನಿಸುವ ಷಡ್ದರುಶನಸ್ಥಾಪನಾಚಾರ್ಯ, ೧೨ಡು ಸಾವಿರ ಸ್ವಯಜಂಗಮ ಇತ್ಯಾದಿಗಳನ್ನು ಬಿಟ್ಟರೂ "ಷಟುಸ್ಥಳದ ಪ್ರXXಗಳಾದ....ಅನುಭವ ಮೂರ್ತಿಯಾಗಿ ಜ್ಞಾನಸಂಭವದಿ ಅರುಹಿಕೊಟ್ಟಂಥ" ಎಂಬಿವು ಷಟ್ಸ್ಥಲಚಕ್ರವರ್ತಿ ಜ್ಞಾನಜ್ಯೋತಿ ಚೆನ್ನಬಸವಣ್ಣನವರಿಗೆ ಒಪ್ಪುವ ಹೇಳಿಕೆಗಳು. ಅವರನ್ನು ಕುರಿತು ಬಳಸಿದ "ಚಿಕ್ಕದಣ್ಣಾಯಕ" ಎಂಬುದು ಶಾಸನೋಕ್ತ ಏಕೈಕ ಉಲ್ಲೇಖ.

ತಿರುಪತಿದೇವಸ್ಥಾನದ ತಾಮ್ರಶಾಸನ[೫೮] **(ಕ್ರಿ.ಶ. ೧೭೪೪)**: ಈ ಶಾಸನದ ಕಾಲ ಶಾಲಿವಾಹನ ಶಕವರ್ಷ ೧೬೬೬ ಅಂದರೆ ಕ್ರಿ.ಶ. ೧೭೪೪. ಪೃಥ್ವೀಸೆಟ್ಟಿರಾಯರ ಮಂತ್ರಿ ಭಾಸ್ಕರಣ್ಣಗಳನ್ನು ಈ ಶಾಸನ "ಶ್ರೀಮತು ಸಜ್ಜನ ಶುಭ ಶಿವಾಚಾರ ಸಂಪನ್ನರಾದ ಗುರುಲಿಂಗಜಂಗಮಪ್ರೇಮಿಗಳಾದ ಹರಗುರುಭಕ್ತಿ ಪರಾಯಣರಾದ... ಶ್ರೀ ಚನ್ನಬಸವೇಶ್ವರ ದೇವರ ಸಾಂಪ್ರದಾಯಕರಾದ ಮಹಾಮೇರುವಿಗೆ ಸರಿಸಮಾನರಾದ..." ಎಂದು ಬಣ್ಣಿಸುತ್ತದೆ. ಇಲ್ಲಿ ಚನ್ನಬಸವಣ್ಣನವನರ್ನು ಕುರಿತು ಈ ಶಾಸನ ವಿಶೇಷ ಹೇಳಿರದಿದ್ದರೂ ಅವರ ಉಲ್ಲೇಖವನ್ನು ಮಾತ್ರ ಮಾಡಿದೆ.

ಸಿದ್ಧರಾಮ

ಕಲ್ಯಾಣದ ವೀರಶೈವ ಆಂದೋಲನೆಗೆ ಬಸವಣ್ಣನವರು ಕೇಂದ್ರಶಕ್ತಿ ಎನಿಸಿದಂತೆ, ಅದೇ ಕಾಲದ ಸೊನ್ನಲಿಗೆಯ ಶೈವ ಆಂದೋಲನೆಗೆ ಕೇಂದ್ರಶಕ್ತಿ ಎನಿಸಿದವನು, ಸಿದ್ಧರಾಮ ಶಿವಯೋಗಿ. ವೀರಶೈವಕ್ಕೆ ಕಡಿಮೆಯಲ್ಲದ ರೀತಿಯಲ್ಲಿ ಶೈವವನ್ನು ಬೆಳಗಿಸಲು ನಿರತನಾಗಿದ್ದ ಈತನು ವೀರಶೈವದೀಕ್ಷೆಯನ್ನು ಪಡೆಯುವಲ್ಲಿ ಕರ್ಮಯೋಗವನ್ನು ಮೆಟ್ಟಿ ಶಿವಯೋಗವನ್ನು ಮುಟ್ಟಿದನು. ಕಲ್ಯಾಣದ ಪ್ರಖ್ಯಾತ ಶರಣರಲ್ಲೊಬ್ಬನೆಂದು ಪರಿಗಣಿತನಾದ ಈತನ ಹೆಸರಿನಲ್ಲಿ ಲಭಿಸುವ ಹಲವು ಶಾಸನಗಳಲ್ಲಿ ವಿಶೇಷ ಬಳಕೆಗೊಂಡ ಎರಡು ಗದ್ಯಖಂಡಗಳು ಹೀಗಿವೆ.[೫೯]

---

೫೭. EC.XII. ಮದ್ದಗಿರಿ ೮ ಜೋಡಿದಾಸೇನಹಳ್ಳಿ, ಕ್ರಿ.ಶ. ೧೬೮೬.

೫೮. EC.v-ii ಅರಸಿಕೆರೆ ೯೪, ಅರಸಿಕೆರೆ ಹೋಬಳಿ ತಿರುಪತಿ ದೇವಸ್ಥಾನದ ತಾಮ್ರಶಾಸನ ಕ್ರಿ.ಶ. ೧೭೪೪.

೫೯. ಈ ಎರಡು ಗದ್ಯಖಂಡಗಳನ್ನು 'ಶಾಸನಗಳಲ್ಲಿ ಶ್ರೀ ಸಿದ್ಧರಾಮನ ವಚನಗಳು' ಎಂಬ ಲೇಖನದಿಂದ ಉದ್ಧರಿಸಿಕೊಳ್ಳಲಾಗಿದೆ. (K.U.J.vol.X 1966)

I

೧. ⁺⁰ಸ್ವಸ್ತಿ ಶ್ರೀ ಓಂ ಜಯ ಪರಮೇಶ್ವರ ಪರಮಾತ್ಮ
೨. ಈಶ್ವರನುರ್ವ್ವೀ ಪರ್ವಿಯಡಂಗಿಕೊಂಡಿಪ್ಪನು
೩. ಓರ್ಬ್ಬಂಣಿಗೆಯಾಗಿ ಯೋಗಿಗಳ ಮನದ
೪. ಕೊನೆಯ ಜ್ಯೋತೀಶ್ವರನುಂ ವೃಷಭನ
೫. ರೂಪಾಗಿ ಯಜಮಾನನುಂ ಆಚಾರ್ಯನುಂ
೬. ತಾನೆಯಾಗಿ ಯೋಗಾದಿ ಸಂಪನ್ನ ಖಳೆಯಂಗಳೆಲ್ಲವಂ
೭. ಸಂಪಾದಿಸಿ ಯೋಗರಮಣೀಯ ಕ್ಷೇತ್ರಮನೆ ಸ್ಥಲವಿಟ್ಟು
೮. ಸಲಾಖೆವಿಡಿದು ಅಭಿನವಶ್ರೀಶೈಲವನೆ ಮಾಡಿ
೯. ಕಪಿಲಸಿದ್ಧ ಮಲ್ಲಿಕಾರ್ಜ್ಜುನದೇವನೆ ನೆಲಸಿ ನಿಂದು
೧೦. ಪುಣ್ಯಪಾಪಂಗಳಂ ಬರಂ ಪೇಳ್ದು ಬೆಸಂ ಪೇಳುತ್ತವಿರಲು
೧೧. ಏಂ ಬೆಸಂ ದೇವಾಯೆನಲು
೧೨. ಈ ಸ್ಥಾನದಲು ಮಾನ್ಯವಾಗಿದ್ದ ಊರುಗಳಂ ಭೂಮಿಗಳಂ
೧೩. ಧನಂಗಳಂ ಈ ಲಿಂಗಕ್ಕೆ ಹಸ್ತೋದಕಂ ಮಾಡಿಕೊಟ್ಟುದುವಂ
೧೪. ಮನಂ ಪೇಸದೆ ಕಳದುಕೊಂಡಪೆನೆಂಬಾತನ
೧೫. ಮಾತಾಪಿತೃಗಳೆಲ್ಲವಂ ಎಪ್ಪತ್ತೇಳು ಕೋಟಿ ವರುಷಂಬರಂ
೧೬. ಪುಳುಗೊಂಡದ ನರಕದೊಳಿಕ್ಕಿ ನೀನಾಹುತಿಗೊಳು ಕಂಡಾ ಎಲೆ ಪಾಪವೇ
೧೭. ಈ ದೇವನ ಭೂಮಿಧನಕ್ಕಾನಂಜುವೆನೆಂದು
೧೮. ಪಂದೆಯಂ ಪಾವಡರ್ದಂತೆ ಮನಂ ಬೆದಱಿವೊಡವಟ್ಟನಂ
೧೯. ಬೇಗ ಶೀಘ್ರಂ ಕೊಂಡು ಬಾ ಎಲೆ ಪುಣ್ಯವೇ ಕವಿಳಾಸಕ್ಕೆ ॥
೨೦. ಇಂತೆಱಡಱ ಬೆಂಗೆ ಪುಣ್ಯಪಾಪಂಗಳು ಪಾರ್ದುಕೊಂಡೊಯ್ವುದು
೨೧. ತಪ್ಪದು ದಿಠ ದಿಠ ಸತ್ಯಂಗಂಡಿರೆ⁶¹

---

೬೦. + ಶ್ರೀರಾಮನಾಥ(ನೆ ಶರಣು)–ಚಡಚಣ ಶಾಸನ.
+ ಶ್ರೀಸಿದ್ಧರಾಮನಾಥ ಶರಣು–ಸಂಗೂರ ಶಾಸನ.
+ XXX ದ್ಧರಾಮನಾಥ ಸರಣು–ಕೋಳಿಸಾಲೆ ಶಾಸನ.

೬೧. + ವಚನ (ನಿಲೇಗಾವ)
+ ಯಿಂತಿದು ಶ್ರೀ ಸಿದ್ಧನಾಥದೇವರು ಪುಣ್ಯಪಾಪಕ್ಕೆ ನಿಯಮಿಸಿಕೊಟ್ಟ ವಚನ (ಬುಡರಸಿಂಗಿ)
+ ಯೆಂಬುದು ಗುರುಸಿದ್ಧರಾಮನಾಥದೇವರ ವಚನ (ಸಂಗೂರ)
+ ಯೆಂಬುದು ಶ್ರೀಸಿದ್ಧರಾಮನಾಥನ ಶ್ರೀವಚನ (ಕೋಳಿಸಾಲೆ)

II

೧. ಇರುಳುಂ ಪಗಲುಂ ಪರಿವ ಕೊಳ್ಳಿಕಳ್ಳನಾದೊಡಂ

೨. ಮಂನೆಯ ಮಹಾಮಂಡಳೇಶ್ವರನಾದೊಡಂ

೩. ಧರೆಯನಾಳ್ವ ಚಕ್ರವರ್ತಿಯಾದಡಂ

೪. ಶ್ರೀಮನುಮಹಾಮಹಿಮ ಕಪಿಲಸಿದ್ಧ ಮಲ್ಲೇಸ್ವರದೇವರ

೫. ಕ್ಷೇತ್ರದ ಚತುರಾಶ್ರಯದ ನಾಲ್ಕುಂ ದೆಸೆಯ ವಳಯದೊಳಗೆ

೬. ಹೊರಗೆ ಇಪ್ಪ ಧನಕ್ಕೆ ಅರಸುಗಳಕ್ಕು(೦) ಕೊಳ್ಳಿಕಳ್ಳರಕ್ಕು(೦)

೭. *ಮನಂ ಪೇಸದೆ ಕಳೆದುಕೊಂಡಪೆನೆಂಬಾತನ

೮. ಮಾತಾಮಾತಾಪಿತೃಗಳೆಲ್ಲವಂ

೯. ವರುಷಂಬರಂ ಪುಳುಗೊಂಡದ ನರಕದೊಳಗಿಕ್ಕಿ

೧೦. ನೀನಾಹುತಿಗೊಳ್ಳುತ್ತಿರು ಕಂಡಾ ಎಲೆ ಪಾಪವೇ ॥

೧೧. ಈ ದೇವನ ಭೂಮಿ ಧನಕ್ಕಾನಂಜುವೆನೆಂದು

೧೨. ಪಂದೆಯಂ ಪಾವಡರ್ದಂತೆ ಮನಂ ಬೆದಱೆ ಪೊಡವಟ್ಟನಂ

೧೩. ಬೇಗ ಶೀಘ್ರಂ ಕೊಂಡು ಬಾ ಎಲೆ ಪುಣ್ಯವೇ ಕವಿಳಾಸಕ್ಕೆ ॥

೧೪. ಇಂತೆಱಡಱ ಬೆಂಗೆ ಪುಣ್ಯಪಾಪಂಗಳು ಪಾರ್ದುಕೊಂಡೊಯ್ವುದು

೧೫. ತಪ್ಪದು ದಿಠ ದಿಠ ಸತ್ಯಂಗಂಡಿರೆ* ॥[೬೩]

ಈ ಎರಡು ಗದ್ಯಖಂಡಗಳಲ್ಲಿ ಬರುವ 'ವಚನ' (ಅ.ಟಿ. ೬೧) ಎಂಬ ಪದ, 'ಕಪಿಲಸಿದ್ಧ ಮಲ್ಲಿನಾಥ' ಎಂಬ ಹೆಸರುಗಳನ್ನು ನೋಡಿ ಕೆಲವರು ಇವು ಸಿದ್ಧರಾಮನ (ಅನುಭಾವದ) ವಚನಗಳೆಂದು ಭಾವಿಸಿದ್ದರು. ಆದರೆ ಇಲ್ಲಿ 'ವಚನ' ಎಂಬುದು ಆದೇಶ, ನಿರೂಪ ಎಂಬ ಅರ್ಥದಲ್ಲಿ ಬಳಕೆಯಾಗಿದೆಯೆಂದು ಡಾ. ಹಳಕಟ್ಟಿ ಮೊದಲು ಮಾಡಿಕೊಂಡು ಹಲವು ಪಂಡಿತರು ಖಚಿತಪಡಿಸಿದ್ದರು. ಆದರೆ ಇತ್ತೀಚೆ ಲಭ್ಯವಾದ ಸಿದ್ಧರಾಮನ ವಚನಗಳಲ್ಲಿ ಇಲ್ಲಿಯ ಒಂದನೆಯ ಫಲಶ್ರುತಿ ವಚನವಾಗಿ ಕಾಣಿಸಿಕೊಂಡಿದೆ. (ನೋಡಿ. ಮಾರ್ಗ III-೧೭೨)

+ ಎಂಬ ಆಜ್ಞಾವಚನ ನಿಯಾಮದಿಂ ರಚಿಸಿದ ಅನಾದಿಸಿದ್ಧನುಂ... (ಘಡೇಕನೂರ)

+ ಎಂಬ ಆಜ್ಞಾವಚನ ನಿಯಮದಿಂ ರಚಿಸಿದ ಅನಾದಿಸಿದ್ಧನುಂ... (ಜತ್ತಗಿ)

+ ಎಂದುದು ಶ್ರೀಸಿ(ದ್ಧ)ರಾಮನಾಥನ ವಚನ (ಕೊಟ್ಟಬಾಗಿ)

+ (ಎಂಬುದು) ಗುರುವಚನವು (ಯಡಿಹಳ್ಳಿ)

+ ಎಂಬುದು ಗುರುವಚನ (ಇಟ್ಕಲ್)

+ ಎಂಬುದು ಗುರುಸಿದ್ಧರಾಮನಾಥದೇವರ ವಚನ (ಮಂತ್ರವಾಡಿ)

+ ಗುರುಸಿದ್ಧರಾಮನಾಥ (ಜಂಬಗಾವ)

** ಇಷ್ಟು ಭಾಗ, ಗದ್ಯಖಂಡ(I)ರಲ್ಲಿ ಕಂಡುಬರುತ್ತದೆ.

೬೩. "ಇಂತಿದು ಗುರು ಸಿದ್ಧರಾಮನಾಥದೇವರ ವಚನ" ಎಂಬ ಭಾಗ ಕೆಲವು ಶಾಸನಗಳಲ್ಲಿ ಹೆಚ್ಚಿನದಾಗಿ ಕಂಡುಬರುತ್ತದೆ.

ಮೇಲಣ ಎರಡೂ ಗದ್ಯಖಂಡಗಳನ್ನು ಇಲ್ಲವೆ ಎರಡರಲ್ಲಿ ಒಂದನ್ನು ಒಳಗೊಂಡ ಇಪ್ಪತ್ತೆರಡು ಶಾಸನಗಳು ಲಭಿಸಿದ್ದು ಅವುಗಳನ್ನು ಕಾಲಕ್ರಮದಲ್ಲಿ ಹೀಗೆ ಹೆಸರಿಸಬಹುದು:

	ಗ್ರಾಮ	ಕಾಲ	ಅರಸು	ದಾನಿ	ಆಕರ
೧.	ಚೊರ್ಗಿ-ಇಂಡಿ-ವಿಜಾಪುರ	೧೧೯೦	ಯಾದವ ಭಿಲ್ಲಮ	ವೀರಬಂದುಗಿ ದೇವರಸ ಮಾಯಿದೇವ ದಂಡನಾಯಕ	SII,XX 117
೨.	ನಿಲೇಗಾವ-ತುಳಜಾಪುರ-ಉಸ್ಮಾನಾಬಾದ	೧೧೯೨	ಯಾದವ ಭಿಲ್ಲಮ	ಹುವಣಯ್ಯ	ಕ-ಭಾ- ೪-೩
೩.	ಸಂಖ-ಇಂಡಿ-ವಿಜಾಪುರ	೧೧೯೪	ಯಾದವ ಜೈತುಗಿ	ಮಾಯಿದೇವ ದಂಡನಾಯಕ	SII,XX 181
೪.	ಜಂಬಗಾವ-ಮೊಹೊಳ್-ಸೊಲ್ಲಾಪುರ	೧೧೯೫	ಯಾದವ ಜೈತುಗಿ	ಪದ್ಮನಾಭ ದಂಡನಾಯಕ	ಕ-ಭಾ- ೪-೩
೫.	ಕೇಸೇಗಾವ-ತುಳಜಾಪುರ-ಉಸ್ಮಾನಾಬಾದ	೧೧೯೭	ಯಾದವ ಜೈತುಗಿ	ದಾಂಕರಸ	ಕ-ಭಾ- ೪-೩
೬.	ಕೂಡಗಿ-ಇಂಡಿ-ವಿಜಾಪುರ	೧೨೦೧?	ಯಾದವ ಜೈತುಗಿ	ಸೋಮದೇವ, ಮಾಯಿದೇವ	SII,XX 185
೭.	ಇಟ್ಕಲ್-ತುಳಜಾಪುರ-ಉಸ್ಮಾನಾಬಾದ	೧೨೧೭?	ಯಾದವ ಸಿಂಘಣ	ಮಗರೆ ಮುರಾರಿ ಸಂಗಮದೇವ	ಕ-ಭಾ- ೩-೪
೮.	ಮಂತ್ರವಾಡಿ-ಸವಣೂರ-ಧಾರವಾಡ	೧೨೩೪	--	--	ಕ-ಭಾ- ೩-೪
೯.	ಕಪ್ಪನಿಂಬರಗಿ-ಇಂಡಿ-ವಿಜಾಪುರ	೧೨೪೩	ಯಾದವ ಸಿಂಘಣ	ಮಹಾದೇವನಾಯಕ (ಮಗ) ಕೇಶವದೇವನಾಯಕ	SII,XX 201
೧೦.	ಗುಂಡಕರ್ಜಗಿ-ಮುದ್ದೇಬಿಹಾಳ-ವಿಜಾಪುರ	?	ಯಾದವ ಸಿಂಘಣ	ಶ್ರೀರಾಮ ದಂಡಾಧಿಪ (ಮಗ) ಸೋಮದೇವ	SII,XX 184
೧೧.	ಅಕ್ಕಲಕೋಟ-ಅಕ್ಕಲಕೋಟ-ಸೊಲ್ಲಾಪುರ	೧೨೫೫	ಯಾದವ ಕನ್ನರ	?	KI.II,P. 137
೧೨.	ಟಾಕಳಿ-ಇಂಡಿ-ವಿಜಾಪುರ[೭೪]	?	ಯಾದವ ಕನ್ನರ	?	SII,XX 218

---

೭೪. ಇದು ಸಂಸ್ಕೃತ ಶಾಸನ.

೧೩.	ಫಡೇಕನೂರ-ಮುದ್ದೇಬಿಹಾಳ-ಬಿಜಾಪುರ	೧೨೫೬	ಯಾದವ ಕನ್ನರ	?	SII,XX 190
೧೪.	ಕೋಳಿಸಾಲೆ-ಸೊರಬ-ಶಿವಮೊಗ್ಗ	೧೨೫೬	ಯಾದವ ಕನ್ನರ	ಮಹಾಮಂಡಳೇಶ್ವರ ಬೀರರಸ	EC, VIII.ಸೊರಬ 561
೧೫.	ಜತ್ತಿಗಿ-ಮುದ್ದೇಬಿಹಾಳ-ವಿಜಾಪುರ	೧೨೫೭ ?	ಯಾದವ ಕನ್ನರ	ಸಾವಂತ ಮುದ್ದಿಗೆದೇವ	SII,XV 191
೧೬.	ತಡವಳ-ಅಕ್ಕಲಕೋಟ-ಸೊಲ್ಲಾಪುರ	೧೨೫೭ ?	ಯಾದವ ಕನ್ನರ	?	KI,IIP. 141
೧೭.	ಬುಡರಸಿಂಗಿ-ಹುಬ್ಬಳ್ಳಿ-ಧಾರವಾಡ	೧೨೫೭	ಕದಂಬ ಚಟ್ಟಯದೇವ	–	KUJ, VI. 1962
೧೮.	ಕೊಟಬಾಗಿ-ಧಾರವಾಡ-ಧಾರವಾಡ	೧೨೬೪	ಯಾದವ ಮಹಾದೇವ	ಕದಂಬ ವೀರಚಟ್ಟಯದೇವ	SII,XV 195
೧೯.	ಸಂಗೂರ-ಹಾವೇರಿ-ಧಾರವಾಡ	೧೨೬೫	ಯಾದವ ಮಹಾದೇವ	ಮಹಾಪ್ರಧಾನ ದೇವರಾಜ	EI, XXIII.P. 189
೨೦.	ಯಡಹಳ್ಳಿ-ಬೀಳಗಿ-ವಿಜಾಪುರ	?	ಯಾದವ (?)	?	SII,XV 206
೨೧.	ಕಟನೂರ-ಹುಬ್ಬಳ್ಳಿ-ಧಾರವಾಡ	?	ಯಾದವ ರಾಮಚಂದ್ರ	?	KUJ.VI .1962
೨೨.	ಚಡಚಣ-ಇಂಡಿ-ವಿಜಾಪುರ[೬೫]	೧೩೦೦	–	–	SII,XX 342

---

೬೫. ಚಿತ್ರದುರ್ಗ ಶಾಸನ (EC.XI ಚಿತ್ರದುರ್ಗ ೩)ದಲ್ಲಿ "ಕೊಳ್ಳಿಕಳ್ಳ...." ಎಂಬ ಗದ್ಯವಿದೆ. ಆದರೆ ಶಾಸನ ಮಾತ್ರ ಬೆ[=ಚಿ]ಮ್ಮ ತ್ತನಕಲ್ಲು ಸಿದ್ಧನಾಥನಿಗೆ ಸಂಬಂಧಿಸಿದ ಕಾರಣ ಇದನ್ನು ಸೊನ್ನಲಿಗೆಯ ಸಿದ್ಧರಾಮ ಇಲ್ಲವೆ ಕಪಿಲಸಿದ್ಧ ಮಲ್ಲಿನಾಥನಿಗೆ ಸಂಬಂಧಿಸಿದ ಶಾಸನಗಳಿಂದ ಪ್ರತ್ಯೇಕಿಸಬೇಕಾಗುತ್ತದೆ.

" ಶ್ರೀಕಪುಲೆ ಸಿದ್ಧಮಲ್ಲಿಕಾರ್ಜುನದೇವರ ಶ್ರೀ ಪಾದವೇ ಶರಣು" (EC.XII ಗುಬ್ಬಿ. ಸಂಪಿಗೆ) ಎಂಬ ವಾಕ್ಯವನ್ನು ಅವಲೋಕಿಸಿರಿ.

ಈ ೨೨ ಶಾಸನಗಳಲ್ಲಿ ಇಂಡಿ ತಾಲೂಕಿನ ಚೊರ್ಗಿ, ಕೂಡಗಿ, ಕಪ್ಪನಿಂಬರಗಿ, ಮುದ್ದೇಬಿಹಾಳ ತಾಲೂಕಿನ ಫಡೇಕನೂರ, ಸೊರಬ ತಾಲೂಕಿನ ಕೋಳಿಸಾಲೆ, ಹುಬ್ಬಳ್ಳಿ ತಾಲೂಕಿನ ಬುಡರಸಿಂಗಿ, ಕಟನೂರ, ಧಾರವಾಡ ತಾಲೂಕಿನ ಕೊಟಬಾಗಿ, ಸವಣೂರ ತಾಲೂಕಿನ ಮಂತ್ರವಾಡಿ, ಹಾವೇರಿ ತಾಲೂಕಿನ ಸಂಗೂರ, ತುಳಜಾಪುರ ತಾಲೂಕಿನ ಇಟ್ಕಲ್, ನಿಲೇಗಾವ, ಕೇಸೆಗಾವ, ಮೊಹೊಳ್ ತಾಲೂಕಿನ ಜಂಬಗಾವ–ಹೀಗೆ ೧೪ ಶಾಸನಗಳು ನಂದಿಸ್ತಂಭದ ಮೇಲಿರುವುದು ಒಂದು ವೈಶಿಷ್ಟ್ಯ.

ದೇವಗಿರಿ ಯಾದವ, ಗೋವೆಯ ಕದಂಬ ಅರಸರ ಆಳಿಕೆಯಲ್ಲಿ ಹುಟ್ಟಿದ ಈ ಶಾಸನಗಳು ಕಾಲದೃಷ್ಟಿಯಿಂದ ಕ್ರಿ.ಶ. ೧೧೯೦ರಿಂದ ೧೩೦೦ರ ವರೆಗೆ, ಪ್ರದೇಶ ದೃಷ್ಟಿಯಿಂದ ಉತ್ತರದ ಉಸ್ಮಾನಾಬಾದ್ ಜಿಲ್ಲೆಯಿಂದ ದಕ್ಷಿಣದ ಶಿವಮೊಗ್ಗೆ ಜಿಲ್ಲೆಯ ವರೆಗೆ ಹಬ್ಬಿನಿಂತಿವೆ. ಈ ೨೨ ಶಾಸನಗಳು ಸಿದ್ಧರಾಮ ಇಲ್ಲವೆ ಕಪಿಲಸಿದ್ಧಮಲ್ಲಿಕಾರ್ಜುನರಿಗೆ ಸಂಬಂಧಿಸಿದುವು. ಇವುಗಳಲ್ಲಿ ಕಟನೂರ, ಬುಡರಸಿಂಗಿ, ಫಡೇಕನೂರ, ಗುಂಡಕರ್ಜಗಿ ಶಾಸನಗಳು ಸಿದ್ಧರಾಮನನ್ನು ಮುಕ್ತಕಂಠದಿಂದ ಹೊಗಳಿವೆ.

ಕಟನೂರ ಶಾಸನ: ಈ ಶಾಸನದಲ್ಲಿ ಸಿದ್ಧರಾಮನನ್ನು "ಜಗದೈಕ ಗುರು ಸಿದ್ಧರಾಮ" "ನಿಜದ ಪುರುಷಲಿಂಗಂ ಸನ್ನುತ ಗುರುಸಿದ್ಧರಾಮ" ಎಂದು ಕೀರ್ತಿಸಲಾಗಿದೆ. ಅಸಂಖ್ಯಾತ ಎಕ್ಕವಿಂಡುಗಳಿಗೆ ಗುರುಸ್ಥಾನದಲ್ಲಿದ್ದ ಶಿವಯೋಗಿ ಸಿದ್ಧರಾಮನನ್ನು ಆ ಕಾಲದ ಜನತೆ 'ಜಗದ್ಗುರು' ಎಂದು ಮನ್ನಿಸಿದ್ದರು. 'ಕೃತಿಗೊಡೆಯನಾ ಜಗದಗುರು ಸಿದ್ಧರಾಮಂ"[೬೬] ಎಂದು ಹೇಳಿದ ರಾಘವಾಂಕನ, ಏಕಾಂತರಾಮಯ್ಯನ ಶಿರವು "ಸೊನ್ನಲಿಗೆಯೊಳು ಜಗದ್ಗುರು ಸಿದ್ಧರಾಮಂಗೆ ನಿನ್ನ ಪ್ರಸಾದವೀಯೆನುತೆ"[೬೭] ಪ್ರಾರ್ಥಿಸಿತೆಂದು ಹೇಳಿದ ಹರಿಹರನ ಉಕ್ತಿಗಳು, ಈ ಶಾಸನದಲ್ಲಿ ಉಲ್ಲೇಖಗೊಂಡ ಆತನ 'ಜಗದ್ಗುರುತ್ವ'ವನ್ನು ಬೆಂಬಲಿಸುತ್ತವೆ. ಸಿದ್ಧರಾಮಚರಿತೆಯಲ್ಲಿ ಬರುವ "ಪುರುಷರೂಪಿನ ಲಿಂಗ"[೬೮] ಈ ಶಾಸನದಲ್ಲಿ ಬರುವ 'ನಿಜದ ಪುರುಷಲಿಂಗಂ' ಒಂದನ್ನೊಂದು ಸಮರ್ಥಿಸುತ್ತವೆ. ಹೀಗಾಗಿ ಶಿವಯೋಗಿ ಸಿದ್ಧರಾಮನ ವ್ಯಕ್ತಿತ್ವವನ್ನು ಆ ಕಾಲದ ಕಾವ್ಯ ಮತ್ತು ಶಾಸನಗಳು ಒಮ್ಮತದಿಂದ ಒಪ್ಪಿವೆಯೆನಿಸುತ್ತದೆ.

ಬುಡರಸಿಂಗಿ ಶಾಸನ: ಶಿವಯೋಗಿ ಸಿದ್ಧರಾಮನನ್ನು ಈ ಶಾಸನ ಭಕ್ತಿಯಿಂದ ಹೀಗೆ ಬಣ್ಣಿಸಿದೆ:

ಶ್ರೀ ಪರಮಗುರು ಸಿದ್ಧರಾಮಂ ।
ಪಾಪಹರಂ ಮರ್ತ್ಯದೊಳಗೆ ಉದಯಿಸಿ ನಿಂದಂ ।
ಚಾಪಳ ವಿಶೇಷ ನಯನನ ।
ಶ್ರೀಪದ ಸಂ(ಪದ)ಮ ನಂಬಿದಂಗರಿದುಂಟೇ ॥

ಈ ಕಂದದ ಅಭಿಪ್ರಾಯದಂತೆ ಸಿದ್ಧರಾಮನು ಪಾಪಹರನು, ಲೋಕೋದ್ಧಾರಕ್ಕಾಗಿ ಮರ್ತ್ಯದೊಳಗೆ ಉದಯಿಸಿದ ಮಹಾಮಹಿಮನು. ಆತನ 'ನೊಸಲಗಣ್' ವಿಷಯವು 'ಚಾಪಳ ವಿಶೇಷನಯನಂ' ಎಂಬ ಮಾತಿನ ಮೂಲಕ ಇಲ್ಲಿ ವ್ಯಕ್ತವಾಗಿದೆ. ಅವನ ಶ್ರೀಪಾದ ನಂಬಿದವರಿಗೆ ಅಸಾಧ್ಯವೆಂಬುದು

---

೬೬. ಸಿ.ಪು. ೧-೧೨.

೬೭. ಏ.ರಾ. ರಗಳೆ. ಪು. ೨೯೧ (ಹರಿಹರನ ರಗಳೆಗಳು-ಹಳಕಟ್ಟಿ ೧೯೬೮)

೬೮. ಸಿ.ಪು. ೯-೧೨.

ಇಲ್ಲವೇ ಇಲ್ಲ ಎಂಬ ಹೇಳಿಕೆ ಕ್ರಿ.ಶ. ೧೨೫೭ರ ಹೊತ್ತಿಗೆ ಸಿದ್ಧರಾಮನನ್ನು ಜನತೆ ಯಾವ ಎತ್ತರದಲ್ಲಿ ಅರ್ಥ ಮಾಡಿಕೊಂಡಿದ್ದರೆಂಬುದನ್ನು ತಿಳಿಸಿಕೊಡುತ್ತದೆ.

ಘಡೇಕನೂರ ಶಾಸನ: ಸಿದ್ಧರಾಮನ ದಿವ್ಯವ್ಯಕ್ತಿತ್ವ ಈ ಶಾಸನದಲ್ಲಿ ಹೀಗೆ ತುಂಬಿ ನಿಂತಿದೆ: ('ಓಂ ಜಯ ಪರಮೇಶ್ವರ ಪರಮಾತ್ಮ' ಎಂದು ಪ್ರಾರಂಭವಾಗುವ ಗದ್ಯಖಂಡವಿದೆ).... ದಿಠ ದಿಠ [ಸ]ತ್ಯಂಗಡಿ [ರೆ][೬೯] ಎಂಬ ಆಜ್ಞಾವಚನ ನಿಯಾಮದಿಂ ರಚಿಸಿದ ಅನಾದಿಸಿದ್ಧನುಂ ಜಗ(ತ್ರ)ಸಿದ್ಧನುಂ ಅ(ಣಿ)ಮ ಗರಿಮ ಲಘಿಮ [ಮ]ಹಿಮ ಪ್ರಾಚ್ಯ ಪ್ರಾಕಾವ್ಯ ಈಶ [ತ್ವವ್ವ] ಸಿತ್ವಮೆಂಬ ಅಷ್ಟಮಾದಿ [ಗುಣೈಸ್ವರ್ಯ್ವ ಸಂಪಂನನುಂ ಬೇಳ್ವಭಕ್ತ [ಜನ]ಮಹೋನ್ನತ ಕಳಾಪ್ರಸಂನನುಂXX ಕರಣಂ ವಿಸುದ್ಧಹರಣಂ ವಹ್ನಿ[ರ್ವ್ವಿ]ನಾಜ್ವಳನುಂ ನಾಡಿಭಾಳನುಂ ನಾದ [ಬಿಂ]ದುದ್ಧನಿನಂ ದೇಹಸ್ಯ ಸಂಕ್ರಾಮ[ಣಂ] ಆತ್ಮಜ್ಯೋತಿ ನಿದರ್ಶಣ ಸ್ವಚ್ಛಂ[ದ] ಮ್ರಿತ್ಯುಂಜಯಮೆಂಬ ದಸಪ್ರ(ತ್ಯ)ಯ ಪ್ರಬುದ್ಧನುಂ ಸಿದಕು[೬೯][ಳ] ವಾರ್ಧಿವರ್ಧನ [ಸುಧಾ]ಕರನುಂ ಲೋಕವೆಲ್ಲವಂ ಏಕಾಕಾರಮಂ ಮಾಳ್ಪೆನೆಂಬ ಶುದ್ಧ XXXಬಾಣಮಂ XXXರಾಮX(ಕು)ದ್ದಾಳನುಂ ಕ್ರೋಧವಿಧ್ವಂಸಕನುXಭವ[ಅ]ರಿಗೆ ಮೂಳನುತ್ಪಾಟನ [ಮೋ]ಹನಿರ್ಮೂಳಭೇದನನುಂ ಕೆದರೊಡೆXXರಣXXನನುಂ ಮಾಬ್ಬರಿಯ ದೊಂXXಯ್ಯನುಂ ನೆಲಸಿ ಸ್ವರ್ಗ್ಗಮರ್ತ್ಯ ಪಾತಾಳXXXಳೋಕ್ಯಮಂ ಪಾವನಮಾಡಿXXX ಪರಮಾರಾಧ್ಯನುಂ ವೇದವೇದಾನ್ತಭೇ [ಷಜ್ಯ]ಸ್ಥೇಯ ಸಮತಾಗುಮಮಂ ಸಾಂಖ್ಯ [ತ])XXXಧಮಂ ಬೌದ್ಧಸುಧಾತ್ಮತೆಯಂ [ಜೈ]XXನ ಜಿತಾಪಂ ಧಮ್ಮವುಮಂ ಚಾವ್ವXXXದ್ರಿಷ್ಟೋಪನ್ಯಾಸಮಂ ಮೀಮಾಂಶಕ ವಿ[ಚಾರ]ಚಾತುರ್ಯಮಂ ಪುದುಂಗೊಳ್ಸಿXXXರೂಪಮುಮಂ ನಿಯಾಮಿಸಿ ಐಕ್ಯXXX[ವು]ಮಂ ತಂನ ಸುತರ್ಗ್ಗೆ ಪೆಸರಿಟ್ಟು ಲೋಕೈಕನಾಥನೆನಿಪ ಸಿದ್ಧೇಂದ್ರ ಚಕ್ರವರ್ತಿ ರಾಮನಾಥದೇವ ವಿರಚಿತ ಕ್ಷೇತ್ರಪರಿಪಾಳಕ॥....."[೬೯]

ಸಿದ್ಧರಾಮನ ಹಿಮಾಲಯೋನ್ನತ ವ್ಯಕ್ತಿತ್ವಕ್ಕೆ ಹಿಡಿದ ಶಿಲಾದರ್ಪಣವೆನಿಸಿದೆ, ಈ ಶಾಸನ. ಲೋಕೈಕನಾಥಂ, ಪರಮಾರಾಧ್ಯಂ, ಆತ್ಮಜ್ಯೋತಿದರ್ಶನಂ, ಸ್ವಚ್ಛಂದ ಮೃತ್ಯುಂಜಯಂ ಎಂಬ ಒಂದೊಂದು ಮಾತುಗಳಿಂದ ಆತನ ಘನತೆ ತೂರಿಬಂದು ಕಣ್ಣೆದುರು ನಿಲ್ಲುತ್ತದೆ.

ಗುಂಡಕರ್ಜಗಿ ಶಾಸನ: ಈ ಶಾಸನದ ದಾತೃವೂ ಯಾದವ ಸಿಂಘಣನ ದಂಡಾಧಿಪನೂ ಆದ ರಾಮನಾಥನು ಸಿದ್ಧರಾಮನ ಪರಮಭಕ್ತ. ಈತನನ್ನು ಕುರಿತು

ಶ್ರೀ ಗೌರೀಕುಚಕುಂಕುಮಾಂಕಿತ ವಿಷಾ(=ಶಾ)ಳೋರಸ್ಥಳೋದ್ಭಾಸಕಂ ।
ನಾಗೇಂದ್ರಾಮರಸಿ[ದ್ಧ]ಪೂಜಿತ ಪದಾಬ್ಜಂ ತ್ರಿ(=ತ್ರೈ)ಜಗ[ದ್ರ]ಕ್ಷಕಂ।
ರಾಗಂಬೆತ್ತಿರೆ ರಾಮನಾಥನೊಲವಿಂ ಶ್ರೀರಾಮದಂಢಾಧಿಪX ।
XXXXXXXXXXXXX ಲಕ್ಷ್ಮಿಯನಿಳಾಚಂದ್ರಾರ್ಕತಾರಂಬರಂ ॥

[ತ]ನಗಾ[ಳ್ದಂ] ಕಲಿ ಸಿ[ಘಣಂ] ತನಗೆ ದೆಯ್ವಂ ರಾಮXX" ಎಂದು ಮುಂತಾಗಿ ಈ ಶಾಸನ ಹೊಗಳುತ್ತದೆ. ಇಲ್ಲಿ ಸಿದ್ಧರಾಮನನ್ನು ಕುರಿತು ಹೇಳಿದ ಹರನ ಉರಸ್ಥಳೋದ್ಭಾಸಕ, ನಾಗೇಂದ್ರಾಮರಸಿದ್ಧಪೂಜಿತ, ತ್ರಿಜಗದ್ರಕ್ಷಕ ಎಂಬ ಪ್ರತಿಯೊಂದು ಮಾತುಗಳಿಗೆ ಕನ್ನಡ ಕಾವ್ಯಗಳಲ್ಲಿ ವಿಪುಲ ಆಧಾರಗಳು ದೊರೆಯುತ್ತವೆ. ಯಾದವ ಸಿಂಘಣನ ಕಾಲಕ್ಕೆ ಸಿದ್ಧರಾಮನು ಜನತೆಯ

---

೬೯. SII, XX 19 ಕ್ರಿ.ಶ.೧೨೫೬ ಇಷ್ಟು ಭಾಗ ಜತ್ತಿಗಿ ಶಾಸನದಲ್ಲಿಯೂ ಬರುತ್ತದೆ. SII, XV 19 ಕ್ರಿ.ಶ.೧೨೫೭

ದೃಷ್ಟಿಯಲ್ಲಿ ದೈವೀಸ್ವರೂಪ ಪಡೆದ ಕಾರಣ ಇಲ್ಲಿ "....ತನಗೆ ದೆಯ್ವಂ ರಾಮXX" ಎಂಬ ಮಾತು ಬಂದಿದೆ.

ಈ ಇಪ್ಪತ್ತೆರಡು ಶಾಸನಗಳಲ್ಲದೆ ಇನ್ನೂ ಹಲವು ಶಾಸನಗಳಲ್ಲಿ ಸಿದ್ಧರಾಮನ ಉಲ್ಲೇಖ ಹೀಗೆ ಬರುತ್ತದೆ:

ಇಂಗಳಗಿ ಶಾಸನ[೨೦] **(ಕ್ರಿ.ಶ. ೧೨೦೯):** ಶಿವನ ಉರಿಗಣ್ಣಿನಿಂದ ಜನಿಸಿದ ವೀರಶರಣರ ರುದ್ರವರ್ಣನೆಯ ತರುವಾಯ ".......ಶ್ರೀ ಮೂಲಸ್ಥಾನದೇವರ ಪಾದಾರಾಧಕೀಯ್ಯುಮಪ್ಪ ಕ್ಷೇತ್ರಸಂನ್ಯಾಸಿನಿ ಮಹಾನುಭಾವೆಯ್ಯುಮಪ್ಪ ಚೆ(=ಬ?)ಲವ್ವೆಗಳ ಕಾಲಂ ತೊಳೆದು ಧಾರಾಪೂರ್ವಕಂ ಮಾಡಿ ಸಿದ್ಧರಾಮದೇವರ್ಗಂ, ದಶಗಣ ಸಿಂಗಿದೇವ ಬಿಜ್ಜೇಶ್ವರದೇವರು ರೇವಣೇಶ್ವರ ಕಂನೇಶ್ವರ ಕೇದಾರದೇವರು ನಾಗೇಶ್ವರ ಇಂತೀ ಸಕಳಲಿಂಗದೇವರಿಗೆ ಶ್ರೀ ಗುಡ್ಡವ್ವೆಗಳು ಮುಖ್ಯವಾಗಿ ಗಣಮಠಕ್ಕೆ ಕೊಟ್ಟ ವೃತ್ತಿ" ಎಂಬ ವಾಕ್ಯವೊಂದು ಗೋಚರಿಸುತ್ತದೆ. ಇಲ್ಲಿಯ 'ಸಿದ್ಧರಾಮನಾಥ ದೇವರು' ಎಂಬ ಹೆಸರು ಆರಾಧನಾಮೂರ್ತಿಗೆ ಅನ್ವಯಿಸುವುದರಿಂದ ಈ ಕಾಲಕ್ಕೆ ಸಿದ್ಧರಾಮನು ಮೂರ್ತಿಸ್ವರೂಪದಲ್ಲಿ ಪೂಜೆಗೊಳ್ಳುತ್ತಿದ್ದುದು ಸುಸ್ಪಷ್ಟ.

ಮರಡಿಪುರ ಶಾಸನ[೨೧]: ಈ ಶಾಸನದ "ಜಗದೇವ ದಣ್ಣಾಯಕ ಏಕಾಂತದ ರಾಮಯ್ಯ ಸೊನ್ನಲಿಗೆಯ ರಾಮಯ್ಯ" ಎಂಬ ವಾಕ್ಯದಲ್ಲಿ ಸಿದ್ಧರಾಮನು ತನ್ನ ಊರ ಹೆಸರಿನೊಂದಿಗೆ ಶರಣರ ಮಧ್ಯ ಸಮಾವೇಶಗೊಂಡಿರುವನು.

ಗುಬ್ಬಿ ಶಾಸನ[೨೨]: ಕ್ರಿ.ಶ. ೧೮೯೬ರ ಗುಬ್ಬಿ ಶಾಸನ ಶ್ರೀಶೈಲ ಮಲ್ಲಿಕಾರ್ಜುನನ ಅವತಾರಗಳನ್ನು ಕಥಿಸುತ್ತ ಸಿದ್ಧರಾಮನನ್ನು ಹೀಗೆ ಉಲ್ಲೇಖಿಸುತ್ತದೆ:

> ಶ್ರೀ ಪಾಲ್ಗುರ್ಜರ ಭಕ್ತಿಯಣ್ಪುವಿಡಿದಾ ಶ್ರೀಶೈಲಮಂ ಮಾಣ್ದು ತ।
> ದ್ಭೂಪಾಲರ್ಕಳನೋಲುತಂದು ಕೃತದೊಳ್ ಮಲ್ಲೇಶ್ವರಂ ಗುಬ್ಬಿಯಂ ।
> ಕಾಪಿಟ್ಟಂ ಕಪಿಲಾಂಕಸಿದ್ಧವೆಸರಾದಾ ಕಾಲದೊಳ್ ರಾಮನಿಂ ।
> ನಾ ಪೂಜಾಂಘ್ರಿತನಾಗಿ ತಾನಮರಗೊಂಡಾಧೀಶ್ವರಂ ತೋರ್ದಪಂ ॥

"ಸ್ವಸ್ತಿ ಶ್ರೀ ಸಮಸ್ತಭೂಮಂಡಲಪುಂಡರೀಕ ಕರ್ಣಿಕಾಯಮಾನಮಾದ ಪಾಲ್ಗುರ್ಜರ ರಾಯರ ಭಕ್ತಿಗೋಸ್ಕರಕಿಲ್ಲಿಗೈತಂದ ಕಪಿಲಸಿದ್ಧ ಮಲ್ಲಿಕಾರ್ಜುನನಿಂ ಶ್ರೀರಾಮನಿಂದಿಲ್ಲಿ ಪೂಜೆಗೊಂಡ ಅಮರಗೊಂಡಾಧೀಶ್ವರನಿಂ ಶೋಭಿಸುವ... ಈ ಗುಬ್ಬಿಯಲ್ಲಿ....."

ಶ್ರೀಶೈಲ ಮಲ್ಲಿಕಾರ್ಜುನನು ತಾಳಿದ ಮಲ್ಲೇಶ್ವರ, ಕಪಿಲಸಿದ್ಧ ಮತ್ತು ಅಮರಗೊಂಡಾಧೀಶ್ವರ ಎಂಬ ಅವತಾರಗಳನ್ನು ಕ್ರಮವಾಗಿ ವಿವರಿಸುತ್ತ ಕಪಿಲಸಿದ್ಧಮಲ್ಲಿಕಾರ್ಜುನನಾದ ಸಮಯದಲ್ಲಿ ಆತನು ರಾಮನಿಂದ ಪೂಜೆಗೊಂಡನು ಎಂದು ತಿಳಿಸುತ್ತದೆ, ಈ ಶಾಸನ. ಈ ರಾಮನು ಶಿವಯೋಗಿ ಸಿದ್ಧರಾಮನಾಗಿರಬಹುದು.

---

೨೦. ಶ.ಸಾ. ೨೧-೧

೨೧. EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೨೨. EC.XVI P. ૩೦ ಗುಬ್ಬಿ, ಕ್ರಿ.ಶ. ೧೮೯೬.

ಒಟ್ಟಿನಲ್ಲಿ ಪ್ರಜೆಗಳಿಂದ ರಾಜರಿಂದ ಪೂಜೆಗೊಂಡು, ಸಮಕಾಲೀನರಿಗೆ ಗುರುವಾಗಿ ಉತ್ತರಕಾಲೀನರಿಗೆ ದೇವನಾಗಿ ತೋರಿದ ಸಿದ್ಧರಾಮನನ್ನು ಕುರಿತ ಶಾಸನ ಪ್ರಪಂಚ ವಿಶಾಲವಾಗಿದೆ. ಸಿದ್ಧರಾಮಚರಿತೆಯನ್ನು ಬರೆಯಲು ಈ ಅಥವಾ ಇಂಥ ನಟ್ಟ ಕಲ್ಲುಗಳೇ ರಾಘವಾಂಕನಿಗೆ ಪ್ರಚೋದನೆ ನೀಡಿರಬೇಕು. ಕಲ್ಲಿನಲ್ಲಿ ನೆಲೆನಿಂತ ಆತನ ಸ್ಥಿರ ಚರಿತ್ರೆ ಕೃತಿಮೂಲಕ ಜಂಗಮವಾಗಬೇಕೆಂದು ಬಯಸಿದ ಕಾರಣ "ನಟ್ಟ ಕಲ್ಲೆನ್ನದಿಳೆಯೊಳಗೆ ಸುಳಿವ ಶಾಸನವೆನಿಸಿ ಪೆಟ್ಟಿನೀ ಸತ್ಕೃತಿಯನು"[೨೩] ಎಂಬ ಪೀಠಿಕೆಯನ್ನು ಅವನು ಹಾಕಿಕೊಂಡಂತಿದೆ.

ಸಕಳೇಶ ಮಾದರಸ

ಮಲ್ಲಟ ಶಾಸನ[೨೩ಅ](ಕ್ರಿ.ಶ.೧೧೯೬): ಸಪ್ತನಾಥ ದೇವರ ಸೇವಕನಾದ ಆವುಜದ ಮಾಳಯ್ಯನು ಸಕಳೇಶ್ವರ ದೇವರ ಮಾದಿರಾಜಯ್ಯನ ಹೆಸರಿನಲ್ಲಿ ಪ್ರತಿಷ್ಠಿಸಿದ ದೇವರಿಗೆ ಈ ಮಾಳಯ್ಯನ ಮಗಳೂ ಮಲ್ಲರಸನ ಅರಸಿಯೂ ಆದ ಬೆಸವಲದೇವಿಯು ದಾನ ನೀಡಿದಳು. ಇಲ್ಲಿ ಗಣಮಠದ ಕಲ್ಲಯ್ಯನ ಉಲ್ಲೇಖವಿದೆ.

ಮಸ್ಕಿ ಶಾಸನ[೨೩ಬ](ಕ್ರಿ.ಶ.ಸು.೧೨ನೆಯ ಶತಮಾನ): ಸಕಳೇಶ್ವರ ದೇವರ ಭಕ್ತನಾದ ಮಾದಿರಾಜನ ಮಗ ವೀರನೆಂಬವನ ಉಲ್ಲೇಖವಿದೆ. ಇಲ್ಲಿಯ ದೇವರ ಹೆಸರು ಮಾತ್ರ ಗಮನಾರ್ಹ.

ಮಡಿವಳ ಮಾಚಿದೇವ

ಕಲ್ಯಾಣದ ಶರಣಸ್ತೋಮದಲ್ಲಿ ಮಾಚಿದೇವನದು ಪ್ರಜ್ವಲಿಸುವ ವ್ಯಕ್ತಿತ್ವ. ವೀರಭದ್ರನ ಅವತಾರವೆಂದು ಇವನನ್ನು ಪರಿಗಣಿಸುತ್ತ ಈತನ ಸಂತಾನವೆಂದು ಅಭಿಮಾನ ಪಡುವ ಅಗಸರು ಬರೆಯಿಸಿದ, ಕನ್ನಡ ತೆಲುಗು ಭಾಷೆಯ ಶಾಸನಗಳೂ ಕೊರೆಯಿಸಿದ ವಿಗ್ರಹಗಳೂ ಲಭಿಸುತ್ತವೆ. ಇದಲ್ಲದೆ ಕಲ್ಯಾಣದಲ್ಲಿಯೂ ಇವನದೊಂದು ಶಾಸನವಿರಬಹುದು.

ಕಲ್ಯಾಣದ ಶಾಸನ[೨೪] (ಕ್ರಿ.ಶ. ಸು. ೧೧೬೦): ಕಲ್ಯಾಣದ ತ್ರಿಪುರಾಂತಕ ಕೆರೆಯ ಸಮೀಪದಲ್ಲಿ ಒಂದು ಶಾಸನ ಲಭಿಸಿದೆ. ಅದು:

೧. ಸ್ವಸ್ತಿ (I*) ಶ್ರೀಮತು ತ್ರೈಲೋಕ್ಯಮ

೨. ಲ(ಲ್ಲ)ದೇವನ ಮಡಿವಳ ಬಸವ ಶ್ರೀ

೩. ತ್ರಿಪುರಾನ್ತಕದೇವರ ಮಡಿವಳ

೪. ಮಾಕೆಯಂಗೆ ಆಚ(ಚಂ)ದ್ರಾರ್ಕ್ಕ

೫. ವರಂ ಬಿಟ್ಟ ಶಾಸನ (II*)

---

೨೩. ಸಿ. ಪು. ೧-೫.

೨೩ಅ. ರಾಯಚೂರು ಜಿಲ್ಲೆಯ ಶಾಸನಗಳು, ಮಾನ್ವಿ ೧೦೨, ಕ್ರಿ.ಶ.೧೧೯೬

೨೩ಬ. ರಾಯಚೂರು ಜಿಲ್ಲೆಯ ಶಾಸನಗಳು, ಲಿಂಗಸುಗೂರು ೪೦, ಕ್ರಿ.ಶ.ಸು.೧೨ನೆಯ ಶತ.

೨೪. Basaveshwara and his time p. 364.

ಈ ಶಾಸನದ ತ್ರೈಳೊಕ್ಯಮಲ್ಲನೆಂದರೆ ತೈಲಪ III (೧೧೫೨-೬೨) ನಾಗಿರಬಹುದು. ಹೀಗಾಗಿ ಇದರ ಕಾಲ ಕ್ರಿ.ಶ. ೧೧೬೦. ಇಲ್ಲಿ ದಾನ ನೀಡಿದವ ತ್ರೈಲೋಕ್ಯಮಲ್ಲನ ಮಡಿವಳನಾದ ಬಸವ, ದಾನ ಪಡೆದವ ಮಡಿವಳ ಮಾಕೆಯ. ಈ ಮಡಿವಳ ಮಾಕೆಯನೆಂದರೆ ಶರಣ ಮಡಿವಳ ಮಾಚಯ್ಯನೆಂದು ಶ್ರೀದೇಸಾಯಿ ಅವರ ಅಭಿಪ್ರಾಯ.[೨೫] ಮಾಕೆಯ ಮತ್ತು ಮಾಚೆಯ ಸಮಾನಪದಗಳಾಗಬಹುದಾದರೂ ದಾನಸ್ವೀಕಾರ ಶರಣಧರ್ಮಕ್ಕೆ ವಿರುದ್ಧವಾಗಿರುವ ಕಾರಣ ಈ ಶಾಸನದಲ್ಲಿ ಉಕ್ತನಾದವನು ಉಜ್ವಲ ಶಿವಶರಣನಾದ ಮಡಿವಳ ಮಾಚಿದೇವನೆನ್ನಲು ಅನುಮಾನ ಬರುತ್ತದೆ.

ಅಮ್ಮಿನಭಾವಿ ಶಾಸನ[೨೬] (ಕ್ರಿ.ಶ. ೧೨೮೪): ಧಾರವಾಡದ ನೆರೆಯ ಅಮ್ಮಿನಭಾವಿ ಯಲ್ಲಿರುವ ಪಂಚಗ್ರಹ ಹಿರೇಮಠದ ಆವರಣದಲ್ಲಿ ಲಭಿಸಿದ ವಿಗ್ರಹವಿದು. ವಿಗ್ರಹದ ಪಾದಪೀಠದಲ್ಲಿ ಬರೆವಣಿಗೆ ಹೀಗಿದೆ:

೧. ತಾರಣಸಂವತ್ಸರದ ವೈಶಾಖ ಸು. ೧೫ ಅಲು ಅಂಮೆನಭಾವಿ

೨. ಯಲಿ ಮಡಿವಾಳರು ವೀರ ಮಡಿವಾಳ ಮಾಚಿ(ದೇ)....

೩. ಯಗ(?) [ಪ್ರ]ತಿಷ್ಠೆಯಂ [ಮಾಡಿ]ದರು ಮಂಗ[ಳ]...

೪. ....

ಈ ವಿಗ್ರಹವನ್ನು ಶೋಧಿಸಿದ ಡಾ. ಆರ್.ಎನ್. ಗುರುವ ಅವರು ಪಂಚಾಂಗ ಮತ್ತು ಅಕ್ಷರಸ್ವರೂಪಗಳನ್ನವಲಂಬಿಸಿ ಇಲ್ಲಿಯ ಮಿತಿ ಕ್ರಿ.ಶ. ೧೨೮೪, ಮೇ ೧, ಸೋಮವಾರಕ್ಕೆ ಸರಿ ಹೊಂದುವುದೆಂದು ತೀರ್ಮಾನಿಸಿದ್ದಾರೆ. ಅಗಸರು ಮಾಚಿದೇವನ ವಿಗ್ರಹ ಸ್ಥಾಪಿಸಿರುವಲ್ಲಿಯ ಔಚಿತ್ಯವನ್ನೂ ಬಹುಶಃ ಲಿಂಗೈಕ್ಯನಾಗಿ ಒಂದು ಶತಮಾನ ಗತಿಸುವಷ್ಟರಲ್ಲಿ ಮಾಚಿದೇವನು ದೇವತಾಸ್ವರೂಪಕ್ಕೇರಿ ವಿಗ್ರಹರೂಪದಲ್ಲಿ ಪೂಜೆಗೊಳ್ಳುತ್ತಿದ್ದುದನ್ನೂ ಇಲ್ಲಿ ಮನಗಾಣಬಹುದು. ವೀರಶೈವ ಪುರಾಣಗಳ ಪ್ರಕಾರ ಮಾಚಿದೇವನು ಏರಿಬಂದ ಬಿಜ್ಜಳನ ಆನೆಯನ್ನು ಸದೆಬಡೆದನೆಂಬ ಕಥೆಯೇ ಇಲ್ಲಿ ವಿಗ್ರಹರೂಪ ಪಡೆದಿದೆ.

ಇದನ್ನು ಹೋಲುವ ಇನ್ನೊಂದು ವಿಗ್ರಹ (ಬರೆವಣಿಗೆ ಇಲ್ಲ) ಮುಳಗುಂದದಲ್ಲಿ ಲಭಿಸುತ್ತದೆ.[೨೭]

ಕಾನಕಾನಹಳ್ಳಿ ತಾಮ್ರಪಟ[೨೮] (ಕ್ರಿ.ಶ. ೧೭೦೦):

.......ಕಲ್ಯಾಣಿ ಪಟಣಮಂದು ಯೀಶ್ವರುನಿ ಚಮಟುನಿ ವೀ
ರಭದ್ರಡು ಜನ್ಮಿಂಚಿನ ನಾಡು । ಕಲ್ಯಾಣಪಟಣಮಂದು ಶಿ
ಲಾಶಾಸನಂಗಾ ವೀರಗಂಟ್ಟ । ಮಡಿವಾಳಯ್ಯ ಜನನಂ । ಅ
ಕಲ್ಯಾಣಪಟ್ಟಣಂ ಪರಮಟ ಭಾಗಮಂದು ಮಡಿಯಾಳ
ಯ್ಯ ಮಟಂಗದ್ದು । ಅಂದು ಶಿಲಾಶಾಸನಂ ವಂದನ್ನವಾ

೨೫. Basaveshwara and his times p. 364.

೨೬. ಕ.ಭಾ. ೬-೪ (ಈ ವಿಗ್ರಹ ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿದೆ).

೨೭. ಕ.ಭಾ. ೬-೪ (ಇಂಥ ವಿಗ್ರಹಗಳು ಬೇರೆಡೆಗಳಲ್ಲಿಯೂ ಇರುವುದಾಗಿ ತಿಳಿದುಬಂದಿದೆ).

೨೮. EC, IX ಕಾನಕಾನಹಳ್ಳಿ ೮೯ ಕಾನಕಾನಹಳ್ಳಿ, ಕ್ರಿ.ಶ. ೧೭೦೦.

ಗಾರ್ದಭಂ ಕಡುಪುನಬುಟ್ಟುನು । ಯಿಂದು ನಾಲ್ಕು
ಸಮುದ್ರಾಲ ಲೋಗಾನು ಸಾಂಬಸದಾಶಿವುಚುಡು ಚೇಸಿನ ನಿ
ರ್ಣಾಯಂ ಚತುಸ್ಸಮುದ್ರಾಲಯಂದ್ದುಂನು । ವರ್ತ
ನ ಚೇಸಿಯಿಚಿ ನಾಡುಗನ್ನು ವುಬ್ಬಕು ನಿರ್ಣಯಂ ರು
ಟ್ಕಿಯಿಲ್ಲುಗ್ಡಿಕ್ಕಿಯಿಲ್ಲವರು ಸಪ್ರಕಾರಂ ಭೋಜನಂ
ವಕ್ಕಾಕುನು ಸಹಗಾನು ಈ ಪ್ರಕಾರಂ ಮಡಿಯ
ಯ್ಯ ನಿರ್ಣಯಂ ಚೇಸಿ ನಡಿಪಿಂಚಿನಾಡು ಯೀ ಪ್ರಕಾ
ರಂ ಯಿಯ್ಯನಿವಾಡು ಕಲಾನಕು ದೂರಸ್ತಡು ಅ
ದಿನಿಮಿತ್ಯಂ ರಜಕು ನಿಆ ಯೀಶ್ವರಂಡು ನಿರ್ಣಯ
ಂ ಚೇಸಿಂದಿ ।................

"ಈಶ್ವರನ ಬೆಮರಿನಿಂದ ಮಡಿವಳಯ್ಯನು ಜನಿಸಿದನು. ಕಲ್ಯಾಣಪಟ್ಟಣದ ಪಶ್ಚಿಮ ಭಾಗದಲ್ಲಿರುವ ಮಡಿವಳಯ್ಯನ ಮಠದಲ್ಲಿ ಈ ವಿಷಯವನ್ನು ಹೇಳುವ ಶಾಸನವಿಲ್ಲವೆನ್ನುವವರು ಕತ್ತೆಯ ಹೊಟ್ಟೆಯಲ್ಲಿ ಹುಟ್ಟುವರು. ನಮ್ಮ ಹಕ್ಕು ಆಯಗಳ ವಿಷಯದಲ್ಲಿ ಮಡಿವಳಯ್ಯನು ರೂಪಿಸಿದ ನಿರ್ಣಯಗಳನ್ನು ಸಮಸ್ತರು ನಡೆಸಿಕೊಡಬೇಕು" ಎಂದು ಈ ಶಾಸನದ ಒಟ್ಟು ಅರ್ಥ. ಮಾಚಿದೇವನು ಇಂಥ ನಿರ್ಣಯಗಳನ್ನು ನಿರೂಪಿಸಿರಲಿ, ಬಿಡಲಿ. ಆತನನ್ನು ಅಗಸರು ತಮ್ಮ ಕುಲದ ಪುಣ್ಯಪುರುಷನೆಂದು ಭಾವಿಸಿದುದು ಗಮನಿಸಬೇಕಾದ ಅಂಶ. ಈ ಶಾಸನದ ಕಾಲ ಕ್ರಿ.ಶ. ಸು. ೧೭೦೦.

ನೆಲುವಿಗೆಯ ಶಾಂತಯ್ಯ

ನೆಲುವಿಗೆಯ ಶಾಂತಯ್ಯ, ನಿಲುವಿಗೆಯ ಶಾಂತಮಲ್ಲಯ್ಯ (ಗಣಸಹಸ್ರ ನಾಮಾವಳಿ) ಎಂಬ ಹೆಸರಿನ ಈ ಶರಣನ ಹೆಸರು ಸಾನಂದಚರಿತ್ರೆಯಲ್ಲಿ, ಮಡಿವಳ ಮಾಚಿದೇವ ಪುರಾಣ, ಕೆಂಬಾವಿ ಭೋಗಣ್ಣನ ಪುರಾಣಗಳಲ್ಲಿ ಕಂಡುಬರುತ್ತದೆ.[೭೯] ಈತನೇ ಕೋಲಶಾಂತಯ್ಯನೆಂದು ನೆಲುವಿಗೆ ಗ್ರಾಮದ ಜನರು ಹೇಳುವರಾದರೂ ಪಾಲ್ಕುರಿಕೆ ಸೋಮನ ಪ್ರಕಾರ ಈ ಎರಡೂ ಹೆಸರುಗಳು ಬೇರೆ ಬೇರೆಯಾಗಿವೆ. ಈಗ ತಿಳಿದಮಟ್ಟಿಗೆ ಈ ಶರಣನ ಉಲ್ಲೇಖವಿದ್ದುದು ಎರಡು ಶಾಸನಗಳಲ್ಲಿ.

ಭೂಯಾರ ಶಾಸನ[೮೦]: ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಭೂಯಾರ ಗ್ರಾಮವು ಭೀಮಾತೀರದ ಒಂದು ಹಳ್ಳಿ. ಅಲ್ಲಿಯ ಒಂದು ಶಾಸನ ಹೀಗಿದೆ:

೧. ನೆಲುವಿಗೆಯ ಸಾತ್ಯೆಯ(ಗ)ಳ ಶ್ರೀಪಾದಗಳೇ ಶರಣು.
೨. ಓಂ ನಮಃ ಶಿವಾಯ । ಸ್ವಸ್ತಿ ಶ್ರೀಮತ್ಕಳಚುರಿ
೩. ಯಕುಳ ಭುಜಬಲಚಕ್ರವರ್ತ್ತಿ ತ್ರಿಭುವನಮ

---

೭೯. ನೆಲುವಿಗೆಯ ಶಾಂತಯ್ಯನನ್ನು ಕುರಿತು ಒಂದು ಶಾಸನ-ಕನ್ನಡನುಡಿ, ಬಸವಸಂಚಿಕೆ. (೧೯೬೮) ನೋಡಬಹುದು.
೮೦. SII XX ೧೩೮. ಭೂಯಾರ. ಕ್ರಿ.ಶ. ೧೧೬೨.

೪. ಲ್ಲದೇವರು ಕಲ್ಯಾಣದ ನೆಲೆವೀಡಿನೊಳು ಸುಖಸಂಕಥಾ
೫. ವಿನೋದದಿಂ ರಾಜ್ಯಂಗೆಯ್ವುತ್ತಮಿರೆ ತತ್ಪಾದಪದ್ಮೋಪಜೀವಿಗಳ
೬. ಪ್ಪ ಶ್ರೀಮನ್ಮಹಾಪ್ರಧಾನಂ ಲಕ್ಷ್ಮಿದೇವದಣ್ಣನಾಯಕಂ ಮೂ
೭. ವತ್ತಾಱುಂ ಬಾಡವಂ ತ್ರಿಭೋಗಾಭ್ಯಂತರಸಿದ್ಧಿಯಿಂದಾಳು
೮. ತ್ತಮಿರ್ದು ಭುಯ್ಯಾರಕ್ಕೆ ನದೀಸ್ನಾನ ನಿಮಿತ್ತಂ ಬಂದು ಕೂ
೯. ಡಲ ಅಭಿನವಮಲ್ಲಿಕಾರ್ಜುನದೇವರಂ ಕಣ್ದು ತಂನ ಪೆರ್ಗ್ಗ
೧೦. (ಡೆ) ನಾಗ್ಯಣನಾಯಕ ಪ್ರಮುಖ ನಾಲುಕು ಕರಣಂಗಳುಂ (ಪೆ)
೧೧. (ರ್ಗಡೆ) ನಾಗದೇವನುಂ ಚಿಕ್ಕಚಂಡರಸ ಸಾಂಬರಸಂ ಮಾಚಗಾಲು
೧೨. ಂಡ (ರೇ)ಚಿಗಾಉಡರು(ಂ) ಮುಖ್ಯವಾಗಿ ಸಮಸ್ತಮಾನ್ಯಕಾಱಿರುಂ
೧೩. ಏಳನೆಯ ಚಿತ್ರಭಾನು ಸಂವತ್ಸರದ ವೈಶಾಖದ ಅಮಾವಾ
೧೪. ಸ್ಯೆ ಸೋಮವಾರ ಬ್ಯತೀಪಾತದಂದು ನೆಲುವಿಗೆಯ ಶಿವಯೋಗಿ
೧೫. ಸಾತೈಯ್ಯನನುದ್ದೇಶಿಸಿ ಅವರ ಭ್ರಿತ್ಯ ಬಸವಯ್ಯಂಗೆ ಊರಿಂ ಪಡುವ,
೧೬. ಬೇವಿನೂರ ದಾರಿಯಿಂ ಬಡಗ, ಅಮ್ಮಬ್ಬೇಶ್ವ(ರ)ದ ಸ್ತಳದಿಂ ಮೂಡ, ಸೂರ್ಯ
೧೭. ದೇವರ ಕೆಯಿಂ ತೆಂಕ ಸರ್ವನಮಸ್ಯವಾಗಿ ಬಿಟ್ಟರು.... (ದತ್ತಿ ವಿವರಣೆ, ಬಿಜ್ಜಳನ ಮಗ ಸೋವಿದೇವನ ಕಾಲದ ಇನ್ನೊಂದು ದತ್ತಿ ಇದೆ.)

ಈ ಶಾಸನದ ಕಾಲ ಕ್ರಿ.ಶ. ೧೧೬೨. ಶಾಸನೋಕ್ತ ಅರಸು ಕಲಚುರಿ ಬಿಜ್ಜಳ. ಈತನ ಮಾಂಡಲಿಕನಾಗಿ ತರ್ದವಾಡಿ ನಾಡಿನ ಒಂದು ವಿಭಾಗವಾದ ೩೬ ಬಾಡಗಳನ್ನಾಳುವ ಲಕ್ಷ್ಮಿದೇವದಂಡನಾಯಕನು 'ನೆಲುವಿಗೆಯ ಶಿವಯೋಗಿ ಸಾತೈಯ್ಯನ ಭೃತ್ಯ ಬಸವಯ್ಯ' ನೆಂಬವನಿಗೆ ದತ್ತಿ ನೀಡಿದುದು ಈ ಶಾಸನದ ವಿಷಯ. ಇಲ್ಲಿ ದತ್ತಿ ಪಡೆದವನು ಶಾಂತಯ್ಯನಲ್ಲ, ಶಿಷ್ಯ ಬಸವಯ್ಯ. ಒಂದು ವೇಳೆ ಶಾಂತಯ್ಯನು ಕ್ರಿ.ಶ. ೧೧೬೨ರ ಬಸವಯ್ಯನಿಗೆ ಪರಂಪರೆಯ ಗುರುವಾಗಿದ್ದರೆ ಆತನು ಬಸವಣ್ಣನವರಿಗೆ ತೀರ ಪ್ರಾಚೀನನೆನಿಸುತ್ತಾನೆ. ದೀಕ್ಷಾಗುರುವಾಗಿದ್ದರೆ ಹಿರಿಯ ಸಮಕಾಲೀನನಾಗುತ್ತಾನೆ. ಶಿಷ್ಯ ಬಸವಯ್ಯ ದತ್ತಿ ಪಡೆಯುವಾಗ ಗುರು ಶಾಂತಯ್ಯ, ಬದುಕಿದ್ದನೋ ಇಲ್ಲವೋ ಸ್ಪಷ್ಟವಾಗುವುದಿಲ್ಲ.

ಭೂಯಾರದಿಂದ ಸುಮಾರು ೪೦ ಮೈಲು ಅಂತರದಲ್ಲಿರುವ ಸಿರಿವಾಳಗ್ರಾಮದ ಸಿದ್ಧಲಿಂಗೇಶ್ವರ ದೇವಾಲಯದ ಶಾಸನದಲ್ಲಿ "ಶ್ರೀಮದಣಿಮಾದ್ಯಷ್ಟಗುಣಸಂಪಂನರು ತತ್ವಜ್ಞಾನಪ್ರಸನ್ನರುಂ ಷಡಂಗಯೋಗಸಂಗದರುಂ ಸಸಾರಭ್ಯಸಂಗ ನಿಸಂಗರುಮಪ್ಪ ಶಿವಯೋಗಿ ಶಾನ್ತಿಮಯ್ಯದೇವಂಗಳಪುತ್ರ ರೇವಣದೇವಯ್ಯ"[೮೧] ಎಂಬ ವಾಕ್ಯವಿದೆ. ಈ ಶಾಂತಮಯ್ಯ ಮತ್ತು ನೆಲುವಿಗೆಯ ಶಾಂತಯ್ಯ ಭಿನ್ನರೋ ಅಭಿನ್ನರೋ ಎಂಬ ಸಂದೇಹಕ್ಕೆ ಅವಕಾಶವಿದೆ.

---

೮೧. ಶಿವಾ, ೪-೨

ಬಸವಣ್ಣನವರು ಬದುಕಿರುವಾಗ, ಕಲ್ಯಾಣದ ಭಕ್ತಿ ಆಂದೋಲನ ಯೌವನ ಸ್ಥಿತಿಯಲ್ಲಿರುವಾಗ ಹುಟ್ಟಿರುವ ಇದು, ಕಲ್ಯಾಣ ಶರಣರನ್ನು ಕುರಿತ ಪ್ರಾಚೀನತಮ ಶಾಸನವಾಗಿದೆ.

ಬಸವಾಪಟ್ಟಣ:* ಈ ಗ್ರಾಮದ ಶಾಂತೇಶ್ವರ ದೇವಾಲಯದ ಶಾಸನದಲ್ಲಿ 'ನೆಲುವಿಗೆಯ ಸಾತಿದೇವ'ನ ವಂಶಾವಳಿಯ ವಿವರವಿದೆ. ಈ ಹೊತ್ತಿಗೆ ಅವರು ಐಕ್ಯನಾಗಿದ್ದು, ಅವನ ಹೆಸರಿನಲ್ಲಿ ಸ್ಥಾಪಿತವಾದ ಲಿಂಗಕ್ಕೆ ಅನೇಕರು ದತ್ತಿ ನೀಡಿದ್ದಾರೆ.

ಮರಡಿಪುರ ಶಾಸನ[೮೨]: ಈ ಗ್ರಾಮದ "ಪುಲಿಗೆಱೆಯ ಪೊನ್ನಯ ನೆಲುವಿಗೆಯ ಸಾಂತಯ್ಯ..." ಎಂಬ ಶಾಸನ ವಾಕ್ಯದಲ್ಲಿ, ಶರಣರ ಜೊತೆ ನೆಲುವಿಗೆಯ ಶಾಂತಯ್ಯನು ಗೋಚರಿಸುತ್ತಾನೆ.

ಹುಳಿಯುಮೇಶ್ವರ ಚಿಕ್ಕಯ್ಯ

ದೇವರಗುಡಿ ಶಾಸನ-೧: ರಾಯಚೂರ ಜಿಲ್ಲೆಯ ಸಿಂಧನೂರ ತಾಲೂಕಿನ ಒಂದು ಹಳ್ಳಿ, ದೇವರಗುಡಿ. ಪ್ರಾಚೀನ ಕಾಲದಲ್ಲಿ ನೆರೆಯ ಮಲ್ಲಾಪುರ ಗ್ರಾಮದ ಒಂದು ಭಾಗವಾಗಿರಬಹುದಾದ ಇದು ಈಗ 'ದೇವರಗುಡಿ' ಎಂಬ ಹೆಸರಿನ ಒಂದು ಸ್ವತಂತ್ರ ಗ್ರಾಮವಾಗಿ ನಿಂತಿದೆ.[೮೩] ಇಲ್ಲಿಯ ಮಲ್ಲಿಕಾರ್ಜುನ (ಪ್ರಾಚೀನ ಹೆಸರು ಹುಳಿಯಮೇಶ್ವರ) ದೇವಾಲಯದ ಹೊರಗಣ ಒಂದು ಶಾಸನದಲ್ಲಿ, ಹುಳಿಯಮೇಶ್ವರ ಲಿಂಗ ಮತ್ತು ಈ ಶರಣ ಚಿಕ್ಕಯ್ಯನ ವಿಷಯ ಬರುವ ಬೇರೆಬೇರೆ ಕಾಲದ ಐದು ದತ್ತಿಗಳಿವೆ.

೧ನೆಯ ದತ್ತಿ: ಚರಣ ೧-೧೩, ಹುಳಿಯಮೇಶ್ವವಲಿಂಗಕ್ಕೆ 'ಕೇದಾರ ಪಂಡಿತರ ಕಾಲಂ ಕರ್ಚಿ' ಕದ್ದರನೂರ ನಾಲ್ವರು ಪ್ರಭುಗಳು, ಚಾಳುಕ್ಯ ವಿಕ್ರಮನ ೨೫ನೆಯ ವರುಷ ಅಂದರೆ ಕ್ರಿ.ಶ. ಸು. ೧೧೦೦ರಂದು ನೀಡಿದ ದತ್ತಿ ಇದರ ವಿಷಯ.

೨ನೆಯ ದತ್ತಿ: ಚರಣ ೧೩-೩೬. ಈಶ್ವರದಂಡನಾಯಕನು ಹುಳಿಯಮೇಶ್ವರ ದೇವರಿಗೆ ನೀಡಿದ ದತ್ತಿಯ ವಿಷಯವಿದೆ. ಮಿತಿ ಹೇಳಿಲ್ಲ.

ಶ್ರೀ ಸಕಳದಿವಿಜಪತಿ ಪರ ।
ಮೇಶಂ ಶ್ರೀ ಶಂಭು ಹುಳಿಯಮೇಶ್ವರದೇವಂ ।
ಭಾಸುರ ಶಶಾಂಕಜೂಟನು ।
ಮೇಶಂ ನಮಗೀಗೆ ಸಕಳಸುಖಸಂಪದಮಂ ॥
ಕುನ್ತಳಕಾನ್ತೆಗೆ ನೋಡಲು ।
ಕಿನ್ತಿದೆ ಕನ್ನಡಿಯೆನಿಪ್ಪ ಕೆಳವಾಡಿಯೊಳ ।
ತ್ಯನ್ತ ಶುಭನಿಳಯ ಗೌರೀ ।
ಕಾನ್ತಂ ಶ್ರೀ ಹುಳಿಯಮೇಶ್ವರಂ ನೆಲಸಿರ್ದನು ॥

ಎಂಬ ಸ್ತುತಿ ಈ ಭಾಗದಲ್ಲಿ ಬರುತ್ತದೆ.

---

* EC.VIII ಅರಕಲಗೂಡು ೮೩ (ಹೊಸ) ಕ್ರಿ.ಶ. ೧೨೬೧

೮೨. EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೮೩. ಉಳಿಯು(=ಹುಳಿಯ)ಮೇಶ್ವರ ಚಿಕ್ಕಯ್ಯನ ಶಾಸನ(ಕ-ಭಾಗ ೧-೨) ಎಂಬ ಲೇಖನ ನೋಡಿರಿ.

೩ನೆಯ ದತ್ತಿ: ಚರಣ ೩೬-೫೫. ಸೋಮರಸದಂಡನಾಯಕ, ಈಶ್ವರ ದಂಡನಾಯಕರು ಚೌಂಡರಸನ ಹೆಸರಿನಲ್ಲಿ 'ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ' ಹುಳಿಯಮೇಶ್ವರ ದೇವರಿಗೆ ಬಿಟ್ಟ ದತ್ತಿ. ಮಿತಿ, ಸರ್ವಧಾರಿ ಸಂವತ್ಸರ ಪುಷ್ಯ ಶುದ್ಧ ತ್ರಯೋದಶಿ ಆದಿವಾರ ಅಂದರೆ ಕ್ರಿ.ಶ. ೧೧೬೮ ರ ಡಿಸೆಂಬರ್ ತಿಂಗಳಿನ ಒಂದು ದಿನ.

ಸಕಳಸುರಸಿದ್ಧಕಿನ್ನರ ।
ನಿಕರಕಿರೀಟಬಹುರತ್ನ ಕೋಟಿರಂಜಿತಚರಣಂ ॥
ಸಕಳಗುರು ಹುಳಿಯಮೇಶಾ ।
ಕರುಣದ ಭೃತ್ಯ ನಮ್ಮ ಚಿಕ್ಕಯತೀಂದ್ರಂ ॥
ಲಾಳ ವರಾಳ ಗೂರ್ಜರ ತುರುಷ್ಕ ಹಿಮಾಚಳ ಮೇರೆಯಪ್ಪಿನಂ ।
ಕೇಳಿರೆ ಬೆಂಗಿಮಂಡಳ ಕಳಿಂಗಕುಳಂ ಜಳರಾಶಿಪೂರ್ಬ್ಬಕಂ ।
ಚೋಳ ದಿಶಾವರಂ ನೆಗಳ್ದ ತೆಂಕಣ ಕೊಂಕಣ ಪಾಡುತಿಪ್ಪರೀ ।
ಪಾಳಿತ ಕೀರ್ತಿಯಂ ಹುಳಿಯಮೇಶನ ಗೀತವ ಲೋಕಲೋಕದೊಳು ।
ತರ್ಕ್ಕ ವ್ಯಾಕರಣಂಗಳು ।
ಅಕ್ಕರಮುಂ ಶಬ್ದಶಾಸ್ತ್ರಮುಂ ವೋದುಗಳಂ ॥
ತಿಕ್ಕೆ ಶಿವಭಕ್ತಿಯೊಳು [ಸವೆ ।
ದ] ಕೆಯ್ಯಂ ಹಲರು ಮೆಚ್ಚಲೀ ಚಿಕ್ಕಯ್ಯಂ ।
ದಿಕ್ಕರಿಯ ಕಟದ ತಳದೊಳು ।
ಮಿಕ್ಕ ಸುರದ್ರುಮದ ಮೇರುಗಿರಿಮನ್ದಿರದೊಳು ॥
ಬೊಕ್ಕನೆ ಕೀರ್ತಿಲತಾವಧು ।
ಚಿಕ್ಕಯ್ಯನ ಹೆಸರ ಜಸವ ಬರೆಯಿಸುತಿರ್ದಳು ॥

"ಸ್ವಸ್ತಿ ಶ್ರೀಮತು ಸರ್ಬಧಾರಿ ಸಂವತ್ಸರದ ಪುಷ್ಯ ಶುದ್ಧ ತ್ರಯೋದಶಿ ಆದಿವಾರ ದಂದುತ್ತರಾಯಣ ಸಂಕ್ರಾನ್ತಿಪರ್ಬನಿಮಿತ್ತದಿಂ ಶ್ರೀಮನ್ಮಹಾಮಂಡಳೇಶ್ವರ ಚೌಂಡದೇವರಸರ ಹೇಳಿಕೆಯಿಂ" ಮಹಾಪ್ರಧಾನ ಸೋವರಸದಂಡನಾಯಕರು ಮತ್ತು ಈತನ ತಮ್ಮ ಈಶ್ವರದಂಡನಾಯಕರು "ಶ್ರೀಮನ್ಮಹಾಲಿಂಗ ಹುಳಿಯಮೇಶ್ವರ ದೇವರಂಗಭೋಗಕ್ಕಂ ಖಂಡಸ್ಫುಟಿತ ಜೀರ್ಣೋದ್ಧಾರಕ್ಕ ವೆಂದು ಆ ಮಠದಾಚಾರ್ಯರಪ್ಪ ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ...." (ದತ್ತಿ ವಿವರಣೆ ಇದೆ.)

೪ನೆಯ ದತ್ತಿ: ಚರಣ ೫೬-೬೧. ಸಿಂದ ರಾಚಮಲ್ಲನು ಹುಳಿಯಮೇಶ್ವರ ದೇವರಿಗೆ 'ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ' ಬಿಟ್ಟ ದತ್ತಿ. ಮಿತಿ ಹೇಳಿಲ್ಲ.

ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಶಿವಪಾದಶೇಖರಂ ಮಾಹೇಶ್ವರಜನ ಪ್ರಸಾದಾಸಾದಕಂ ಪರಬಳಸಾದಕಂ ಸಿಂದಕುಳಕಮಳ ಮಾರ್ತಾಂಡ ಶ್ರೀಕಲಿದೇವರ ಪಾದಾರಾಧಕನಪ್ಪ

ರಾಚಮಲ್ಲದೇವರಸರು ಸೂರ್ಯಗ್ರಹಣ ನಿಮಿತ್ತದಿಂ.... ಶ್ರೀಮನ್ಮಹಾಲಿಂಗಂ ಹುಳಿಯಮೇಶ್ವರದೇವ ರಂಗಭೋಗಕ್ಕೆಂದು ಆ ದೇವರ ಮಠದಾಚಾರ್ಯರಪ್ಪ ಚಿಕ್ಕಯ್ಯಪಂಡಿತರ ಕಾಲಂ ಕರ್ಚಿ.... (ದತ್ತಿ ವಿವರಣೆ ಇದೆ).

೫ನೆಯ ದತ್ತಿ: ಚರಣ ೬೨-೬೪. ಸಿಂದ ಹರಿಹರದೇವನು 'ಚಿಕ್ಕಯ್ಯಪಂಡಿತರ ಕಾಲಂ ಕರ್ಚ್ಚಿ' ಹುಳಿಯಮೇಶ್ವರ ದೇವರಿಗೆ ಬಿಟ್ಟ ದತ್ತಿ. ಮಿತಿ ಹೇಳಿಲ್ಲ.

"ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಪ್ರತಾಪಚಕ್ರವರ್ತ್ತಿ ಸಿಂದನಾರಾಯಣಂ ನುಡಿದಂತೆ ಗಂಡನುಂ ನೀತಿಚಾಣಕ್ಯನುಂ ಶ್ರೀಮತು ಕಪಾಳೇಸ್ವರದೇವರ ಪಾದಾರಾಧಕಂ ಹರಿಹರ ದೇವರಸರು..... ಶ್ರೀಮನ್ಮಹಾಲಿಂಗ ಹುಳಿಯಮೇಶ್ವರದೇವರಂಗಭೋಗಕೆಂದು ಆ ದೇವರ ಮಠದಾಚಾರ್ಯರಪ್ಪ ಚಿಕ್ಕಯ್ಯಪಂಡಿತರ ಕಾಲಂ ಕರ್ಚ್ಚಿ...." (ದತ್ತಿ ವಿವರಣೆ ಇದೆ. ಇನ್ನೆರಡು ಚಿಕ್ಕ ದತ್ತಿಗಳಿವೆ).

ಈ ಐದೂ ಹುಳಿಯಮೇಶ್ವರಲಿಂಗಕ್ಕೆ ಬಿಟ್ಟ ದತ್ತಿಗಳು. ಇವುಗಳಲ್ಲಿ ೩,೪,೫ನೆಯ ದತ್ತಿಗಳಲ್ಲಿ ಮಾತ್ರ ಹುಳಿಯಮೇಶ್ವರದೇವರ ಸ್ಥಾನಪತಿ ಶರಣ ಚಿಕ್ಕಯ್ಯನ ವಿಷಯ ಬಂದಿದೆ. ಇಲ್ಲಿ ಸಿಂದ ಚಾವುಂಡನು ನೀಡಿದ ೩ನೆಯ ದತ್ತಿಯ ಕಾಲ ಕ್ರಿ.ಶ. ೧೧೬೮ ಡಿಶಂಬರದ ಒಂದು ದಿನ. ರಾಚಮಲ್ಲನು ನೀಡಿದ ದತ್ತಿಗೆ ಮಿತಿಯಿಲ್ಲವಾದರೂ ಈತನ ಕಾಲ ಕ್ರಿ.ಶ. ೧೧೭೩-೭೭. ಅದಕ್ಕಾಗಿ ಚಿಕ್ಕಯ್ಯನು ಬಸವಣ್ಣನವರ ಸಮಕಾಲೀನನಾಗಿ ಮುಂದೆ ಇನ್ನೂ ಕೆಲವು ವರುಷ ಬಾಳಿರಬೇಕು. "ಅಂದು ಕಲ್ಯಾಣದಲ್ಲಿ ಹುಸಿಯನೆ ದಿಟವಮಾಡಿ ಬದನೆಕಾಯ ಲಿಂಗವ ಮಾಡಿಸಲೀಸನೆ ನಮ್ಮ ಬಸವಣ್ಣನು"[೮೪] ಎಂಬ ಚಿಕ್ಕಯ್ಯನ ವಚನವೂ ಇದನ್ನು ಬೆಂಬಲಿಸುತ್ತದೆ.

ಶಾಸನೋಕ್ತ ಈ ಚಿಕ್ಕಯ್ಯನು ಹುಳಿಯಮೇಶ್ವರ ಹೆಸರಿನ ಸ್ಥಾವರಲಿಂಗದ ಭಕ್ತ. ದೇವಾಲಯ ಜೀರ್ಣೋದ್ಧಾರಕ್ಕಾಗಿ ದತ್ತಿಸ್ವೀಕರಿಸಿದ ಆಚಾರ್ಯಪುರುಷ. ಈ ಸ್ಥಾವರಲಿಂಗಪೂಜೆ ದಾನಸ್ವೀಕಾರಗಳು ವೀರಶೈವಕ್ಕೆ ವಿರುದ್ಧವಾಗಿವೆ. ಮೇಲಾಗಿ "ಶೈವನೇಮಸ್ತರ ಕೈಯಲುಪದೇಶವಾದರೇನಯ್ಯ ಅಲ್ಲಿ ಏನು ಊಣಯವಿಲ್ಲ"[೮೫] ಎಂಬ ವಚನ ಈತನ ಶೈವ ಒಲವನ್ನು ಸೂಚಿಸುತ್ತದೆ. ಇದೇ ಸಮಯಕ್ಕೆ "ಎನ್ನಂತರಂಗದ ಜ್ಯೋತಿಯೆ ಬಸವಣ್ಣನಯ್ಯ, ಎನ್ನ ಬಹಿರಂಗದ ಜ್ಯೋತಿಯೆ ಚೆನ್ನಬಸವಣ್ಣನಯ್ಯ..."[೮೬] ಎಂದು ಶರಣರನ್ನು ಕೀರ್ತಿಸಿದುದು ಈತನ ವೀರಶೈವ ಒಲವನ್ನೂ ವ್ಯಕ್ತಪಡಿಸುತ್ತದೆ. ಅದಕ್ಕಾಗಿ ಕೊಂಡಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಮೊದಲಾದವರಂತೆ ಈತನು ಶೈವ-ವೀರಶೈವಗಳೆರಡನ್ನೂ ಮನ್ನಿಸಿದ ಮಹಿಮನಾಗಿರಬಹುದು.[೮೭]

ಇಂದಿನ ವರೆಗೆ ಚಿಕ್ಕಯ್ಯನ ವಚನಮುದ್ರಿಕೆ 'ಉಳಿಯುಮೇಶ್ವರ' ಎಂದು ಭಾವಿಸಲಾಗಿತ್ತು. ಈ ಶಾಸನದಿಂದ 'ಹುಳಿಯಮೇಶ್ವರ' ಎಂದು ತಿದ್ದಿಕೊಳ್ಳಬೇಕಾಗುತ್ತದೆ. ಕಥಾನಾಯಕ ಭೈರವೇಶ್ವರನು 'ಮಲ್ಲಿಪಟ್ಟಣಂ ಪೊಕ್ಕುಂ ಉಳಿಯುಮೇಶ್ವರಲಿಂಗಮಂ ಕಂಡು ನುತಿಸಿದ'[೮೮]ನೆಂದು ಭೈರವೇಶ್ವರ

---

೮೪. ಕ.ಕ.ಚ.ಅನುII. ಪು. ೪೯ (೧೯೬೧)

೮೫. ಕ.ಕ.ಚ.ಅನುII. ಪು. ೪೯ (೧೯೬೧)

೮೬. ಕ-ಭಾ. ೨-೧ ಪು. ೧೪೮

೮೭. ಶಾಸನದಲ್ಲಿ ಬರುವ ಕೇದಾರಪಂಡಿತ, ಚಿಕ್ಕಯ್ಯ ಪಂಡಿತ ಎಂಬ ಹೆಸರು, ಸ್ಥಾವರಲಿಂಗಪೂಜೆ ಇವು ಚಿಕ್ಕಯ್ಯನು ನಕುಲೀಶ ಪಾಶುಪತ ಇಲ್ಲವೆ ಕಾಳಾಮುಖನೆಂಬ ಊಹೆಗೂ ಎಡೆಮಾಡಿ ಕೊಡುತ್ತವೆ.

೮೮. ಭೈ.ಕ.ರ. ಭಾಗ ೧. ಪು.೫

ಕಾವ್ಯದ ಕಥಾಮಣಿಸೂತ್ರ ರತ್ನಾಕರ ಹೇಳುತ್ತದೆ. ಈ ಉಳಿಯುಮೇಶ್ವರಲಿಂಗವೆಂದರೆ ಪ್ರಸ್ತುತ ಹುಳಿಯುಮೇಶ್ವರ ಲಿಂಗ, ಮಲ್ಲಿಪಟ್ಟಣವೆಂದರೆ ದೇವರಗುಡಿಗ್ರಾಮದ ನೆರೆಯಲ್ಲಿರುವ ಮಲ್ಲಾಪುರಗ್ರಾಮವೆಂದು ಈ ಶಾಸನದಿಂದ ಖಚಿತವಾಗಿದೆ.

ದೇವರಗುಡಿ ಶಾಸನ[೮೯]-೨: ಹುಳಿಯುಮೇಶ್ವರ ಚಿಕ್ಕಯ್ಯನಿಗೆ ಸಂಬಂಧಿಸಿದ ಬೇರೊಂದು ಶಾಸನವಿದು. ಆಕಾರ ಚಿಕ್ಕದಾಗಿದ್ದರೂ ಮಿತಿಯನ್ನೊಳಗೊಂಡ ಕಾರಣ ಇದಕ್ಕೆ ಹೆಚ್ಚಿನ ಬೆಲೆ ಸಲ್ಲುತ್ತದೆ.

೧. ಸ್ವಸ್ತಿ ಶ್ರೀಮತು ಯಾದವನಾರಾಯಣಂ ಪ್ರತಾಪಚಕ್ರವರ್ತಿ
೨. ಸಿಂಹಣದೇವ ವರ್ಷದ ೩ನೆಯ ದುಂದುಭಿ ಸಂವತ್ಸರದ ವೈ
೩. ಸಾಕದಮವಾಸೆ ಬ್ರಹಸ್ಪತಿವಾರ ಸೂರ್ಯಗ್ರಹಣದೊಳು
೪. ಸ್ವಸ್ತಿ ಸಮಸ್ತ ಸಹಿತಂ ಕದಂಬಕಂಠೀರವಂ ಬನವಾಸೆ
೫. ಪುರವಾಧೀಸ್ವರಂ ಚೆಂನಮಂನೆಯ ಸೂಜಿಕಾಜಿಂ ಮಾಣಿಗಡಂಬ ಶ್ರೀ
೬. ಮನ್ಮಹಾಮಂಡಳೇಶ್ವರಂ ಕೆಳವಾಡಿ ೩೧೦ಜಿ ರಾಜಧಾನಿ ಕಲುಕೇಜಿಯ ಕು
೭. ಳದ ಹೆಮ್ಮಾಡಿ ದೇವರಸರ ಮಕ್ಕಳುಂ ಕೇಸರಸದೇವನ ಮಕ್ಕಳುಂXXX
೮. ಸಿರಸದೇವನಿಂತಿರಾಯಿಬ್ಬರುಂ ಕೂಡಿ ಸ್ವಸ್ತಿ ಸಮಸ್ತಪ್ರಸಸ್ತಿಸ
೯. ಹಿತಂ ಶ್ರೀಮನ್ಮಹಾಲಿಂಗಂ ಶ್ರೀ ಹುಳಿಯಮೇಸ್ವರ
೧೦. ದೇವರಯಂಗರಂಗಭೋಗ ಕಂಡಸ್ಫುಟಿತ ಜೀರ್ಣೋದ್ಧಾರಕಂ ಆ
೧೧. ದೇವರ ಮಠದಾಚಾರ್ಯರಪ್ಪ ಚಿಕ್ಕಯ್ಯಂಗಳ ಕಾಲಂ
೧೨. ಕರ್ಚ್ಚಿ.......... ಚಿಕ್ಕಯ್ಯಂಗಳಿಗೆ.... (ದತ್ತಿ ಬಿಟ್ಟ ಉಲ್ಲೇಖ).

ಮೇಲಣ ಶಾಸನೋಕ್ತ ದುಂದುಭಿ ಸಂವತ್ಸರ ಕ್ರಿ.ಶ. ೧೨೦೨ರಲ್ಲಿ ಬರುತ್ತದೆ. ಈ ಸುಮಾರಿಗೆ ಆಳುತ್ತಿದ್ದ ಅರಸು ಯಾದವ ಸಿಂಘಣII. ಹಿಂದಿನ ಶಾಸನದ ಪ್ರಕಾರ ಕ್ರಿ.ಶ. ೧೧೬೮ರಲ್ಲಿದ್ದ ಚಿಕ್ಕಯ್ಯನು ಕ್ರಿ.ಶ. ೧೨೦೨ರ ವರೆಗೂ ಅಂದರೆ ಬಸವಣ್ಣನವರ ತರುವಾಯವೂ ಬದುಕಿದ್ದನೆಂದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ಅನ್ವರಿ[೮೯ಅ](೧೧೧೪): ನಿಜ್ಜಜಿಗೆಯ ಚಂದ್ರಶೇಖರಶಕ್ತಿಯ ಶಿಷ್ಯನಾದ ಅಘೋರಶಕ್ತಿ ಪಂಡಿತನು ಶ್ರೀ ಹುಳಿಯಮೇಶ್ವರ ದೇವರ ಮಠಕ್ಕೆ ಭೂಮಿದಾನ ನೀಡಿದ್ದಾನೆ.

ಕಲ್ಲೇದೇವರಪುರ ಶಾಸನ[೯೦]: ಈ ಶಾಸನದ "ಚೀರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ..." ಎಂಬ ವಾಕ್ಯದಲ್ಲಿ 'ಚಿಕ್ಕ' ಎಂಬವನ ಹೆಸರಿದೆ. ಈತನು ಶರಣ ಸಮೂಹದಲ್ಲಿ ಕಂಡುಬರುವ ನಿಜಲಿಂಗಚಿಕ್ಕಯ್ಯ, ಚೋರಚಿಕ್ಕಯ್ಯ, ಹುಳಿಯಮೇಶ್ವರ ಚಿಕ್ಕಯ್ಯಗಳಲ್ಲಿ ಒಬ್ಬನಾಗಿರಬಹುದು.

---

೮೯. ಅಪ್ರಕಟಿತ ಶಾಸನ.

೮೯ಅ. ರಾಯಚೂರು ಜಿಲ್ಲೆಯ ಶಾಸನಗಳು, ಲಿಂಗಸುಗೂರ ೨೪, ಕ್ರಿ.ಶ.೧೧೧೪

೯೦. EC.XI ಜಗಳೂರ ೩೦, ಕ್ರಿ.ಶ. ೧೨೭೯

ಹಾವಿನಹಾಳ ಕಲ್ಲಯ್ಯ

ಕುರಗೋಡ ಕಲ್ಲೇಶ್ವರ ದೇವಾಲಯದ ಶಾಸನವೊಂದರಲ್ಲಿ 'ಮಹಾವಿನಹಾಳ ಕಲ್ಲಿಸೆಟ್ಟಿ' ಎಂಬ ಶಿವಭಕ್ತನ ಉಲ್ಲೇಖ ಹೀಗೆ ಬರುತ್ತದೆ.[೯೧]

ಆ ಪುರಮಂ ಪ್ರತಿಪಾಳಿಪ ।
ಭೂಪ ಶಿಖಾಮಣಿ ಶಿವೈಕಚೂಡಾಮಣಿ ದಿ ।
ಗ್ವ್ಯಾಪಿ ಯಶೋದರ್ಪಣಮಣಿ ।
ತಾಪಿತರಿಪು ರಾಚಮಲ್ಲನಪ್ರತಿಮಲ್ಲಂ ॥
(ಈ ಊರಿನ ಮುಮ್ಮುರಿದಂಡಗಳ ವರ್ಣನೆ)

ಆ ಮುಮ್ಮುರಿ ದಂಡಂಗಳೊಳ್ ಮಹಾವಿನಹಾಳ ಕಲ್ಲಿಸೆಟ್ಟಿಯನ್ವಯವೆನ್ತೆನೆ॥

(ನಾಲ್ಕು ತಲೆಮಾರಿನ ವಿವರವಾದ ವಂಶಾವಳಿ)

ಮತ್ತಮಾತನ ಬ್ಯವಸಾಯ ಬ್ಯವಹಾರವೆನ್ತೆನೆ ॥
ಭಕ್ತಿಯ ಭಂಡ ಮೊದಲ್ ನಿಜ ।
ಭಕ್ತಿಯೆ ಕೋಟಾನುಕೋಟಿ ಲಾಭಂ ಶಿವ ಸ ।
ದ್ಭಕ್ತಿಯ ಬೆಳಸಿXXXX ।
ಭಕ್ತ ಕಲಿದೇವಸೆಟ್ಟಿ ನೆಗಳ್ದಂ ಧರೆಯೊಳ್ ॥

ಆತನ ಹೃದಯಕಮಳದೊಳ್ ಮನಃಪ್ರೇರಕ ಮಹಾದೇವಂ ಜೀವನಾಗಿರ್ಪನೆನ್ತೆನೆ॥

ಚಿಂತಾಮಣಿಲಿಂಗಂ ಹೃದ ।
ಯಾನ್ತರದೊಳ್ನಿಂದು ಕಲ್ಲಿಸೆಟ್ಟಿಗೆ ದಯೆಯಿಂ ।
ದಿನ್ತು ನಡೆಯಿನ್ತು ನುಡಿಯೆಂ ।
ದಿಂತು ಸದಾ ಶಿಕ್ಷಿಸುತೆ ರಕ್ಷಿಸುತಿರ್ಪ್ಪಂ ।

ಈ ವರ್ಣನೆಯನ್ನು ಓದಿದ ತಕ್ಷಣ, ಈ ವ್ಯಕ್ತಿ ಶರಣ ಹಾವಿನಹಾಳ ಕಲ್ಲಯ್ಯನಾಗಿರಬಹುದೆಂಬ ಭಾವನೆ ಮೂಡುತ್ತದೆ. ಕಲ್ಯಾಣಕ್ರಾಂತಿಯ ತರುವಾಯವೂ ಬದುಕಿದ ಈತನ ಜೀವಿತ ಅವಧಿಗೆ ಈ ಶಾಸನದ ಮಿತಿ ಕ್ರಿ.ಶ. ೧೧೭೬ ಸರಿಹೊಂದುತ್ತದೆ. ಆದರೆ ಸೊಲ್ಲಾಪುರದ ನೆರೆಯ ಹಾವಿನಹಾಳ ಕಲ್ಲಯ್ಯ, ಕುರುಗೋಡದ ಮಹಾವಿನಹಾಳ ಕಲ್ಲಯ್ಯಗಳಲ್ಲಿ ಸಂಬಂಧ ಕಲ್ಪಿಸಲು ಆಧಾರಗಳಿಲ್ಲ. ವಿಪ್ಲವದ ಮೂಲಕ ಕಲ್ಯಾಣವನ್ನು ತ್ಯಜಿಸಿ, ಈತನು ಪರಮಶಿವಭಕ್ತರಾದ ಕುರುಗೋಡ ಅರಸರ ಆಶ್ರಯಕ್ಕೆ ಬಂದಿರಬಹುದೆಂದು ಊಹಿಸಬಹುದಾದರೂ ಈ ಶಾಸನೋಕ್ತ 'ಮಹಾವಿನಹಾಳ ಕಲ್ಲಿಸೆಟ್ಟಿ' ಮತ್ತು 'ಹಾವಿನಹಾಳ ಕಲ್ಲಯ್ಯ' ಒಂದೇ ಎನ್ನುವುದನ್ನು ತಡೆಹಿಡಿದಷ್ಟು ಲೇಸು.

---

೯೧. SII.IX-i ೨೯೬ ಕುರಗೋಡ, ಕ್ರಿ.ಶ. ೧೧೭೬

ಏಕಾಂತರಾಮಯ್ಯ

ಜೈನರೊಂದಿಗೆ ವಾದಕ್ಕೆ ನಿಂತು, ಕೈಯಾರೆ ಕತ್ತರಿಸಿಕೊಂಡ ತನ್ನ ಶಿರವನ್ನು ತಿರುಗಿ ಪಡೆದ ಧೀರ ಶರಣನೀತ. ವೀರಶೈವ ಇತಿಹಾಸದಲ್ಲಿ ಈತನದು ರಕ್ತರಂಜಿತ ಘಟನೆ. ಈ ವೀರಪ್ರಸಂಗಕ್ಕೆ ಪ್ರಚೋದನೆ ಕೊಟ್ಟುದು ಜೈನರು ಬ್ರಹ್ಮೇಶ್ವರಲಿಂಗದೆದುರು ಜಿನಪಾರಮ್ಯವನ್ನು ಘೋಷಿಸಿದುದು ಎಂದು ಅಬ್ಬಲೂರು ಶಾಸನ, ಜೈನನೊಬ್ಬ ಲಿಂಗದ ಕಡೆಗೆ ಕಾಲುಮಾಡಿ ಮಲಗಿದುದು ಎಂದು ಹರಿಹರನ ರಗಳೆ, ಜೈನನೊಬ್ಬ ಕೆರಹುಗಾಲಿನಿಂದ ಶಿವದೇವಾಲಯ ಪ್ರವೇಶಿಸಿದುದು ಎಂದು ಬಸವಪುರಾಣಗಳು ಭಿನ್ನರೀತಿಯಲ್ಲಿ ಹೇಳುತ್ತವೆ. ಇನ್ನು ಕೆಲವು ಕಾವ್ಯ ಮತ್ತು ಶಾಸನಗಳು ಈ ಘಟನೆ ಜರುಗಿದುದು ಅಬ್ಬಲೂರಲ್ಲಿ ಎಂದರೆ, ಬಸವಪುರಾಣ ಮತ್ತು ಆ ಸಂಪ್ರದಾಯದ ಕೃತಿಗಳು ಅಬ್ಬಲೂರಲ್ಲಿ ಈ ಮೊದಲು ಜೈನರನ್ನು ಜಯಿಸಿದ (ವಿವರ ಹೇಳುವುದಿಲ್ಲ) ಏಕಾಂತರಾಮಯ್ಯನ ಘಟನೆ ಬಸವ ಬಿಜ್ಜಳರೆದುರು ಕಲ್ಯಾಣದಲ್ಲಿ ನಡೆಯಿತೆಂದು ಹೇಳುತ್ತವೆ.[೯೨]

ಅಬ್ಬಲೂರ ಶಾಸನದ ಪ್ರಕಾರ ಕಲಚುರಿ ಬಿಜ್ಜಳ, ಚಾಲುಕ್ಯ ವೀರಸೋಮೇಶ್ವರ IV, ಕದಂಬ ಕಾಮರಸರು ರಾಮಯ್ಯಗಳ 'ಕಾಲಂ ಕರ್ಚಿ'ದತ್ತಿ ಬಿಟ್ಟಿರುವ ಕಾರಣ, ಈತನು ಬಿಜ್ಜಳ(ಬಸವ)ನ ಸಮಕಾಲೀನವಾಗಿದ್ದು ಮುಂದೆ ಇನ್ನೂ ಕೆಲವು ವರ್ಷ (ಕದಂಬ ಕಾಮರಸನ ಸಮಕಾಲೀನನಾಗಿ) ಬಾಳಿರಬಹುದು. ಇಲ್ಲಿಯ ಉಗ್ರಭಕ್ತಿ, ಸ್ಥಾವರಲಿಂಗ ಪೂಜೆಗಳನ್ನು ಮನದಂದರೆ ರಾಮಯ್ಯನು ಮೊದಮೊದಲು ಸಂಕ್ರಮಣ ಶೈವಪರಂಪರೆಗೆ ಸಂಬಂಧಿಸಿದ ಶಿವೋಪಾಸಕನಾಗಿದ್ದು, ಕೊನೆಕೊನೆಗೆ ವೀರಶೈವನಾದನೆಂದು ಭಾವಿಸಬೇಕಾಗುತ್ತದೆ. 'ಬಾಳ್ಗೆ ಭಕ್ತರ್' ಎಂಬ ಧ್ಯೇಯದಿಂದ ಶಿವಪಾರಮ್ಯವನ್ನು ಮೆರೆದ ಈತನ ವಿಷಯ ಕೆಳಗಣ ಶಾಸನಗಳಲ್ಲಿ ಸುವ್ಯಕ್ತಗೊಂಡಿದೆ.

ಅಬ್ಬಲೂರ ಶಾಸನ:[೯೩]: ಏಕಾಂತರಾಮಯ್ಯನ ಆದ್ಯಂತ ಚರಿತ್ರೆಯನ್ನು ಬಿಡಿಸಿ ಹೇಳುವ ಈ ಶಾಸನ, ಒಂದು ಪುಟ್ಟ ಚಂಪೂ ಕಾವ್ಯವೆನಿಸಿದೆ. ಸಮುದ್ರ, ಭರತ ವರ್ಷ, ಕುಂತಳ ದೇಶಗಳ ವರ್ಣನೆಯಿಂದ ಪ್ರಾರಂಭವಾಗಿ, ಸುಮಾರು ೧೦೫ ದೀರ್ಘ ಚರಣಗಳ ವರೆಗೆ ಬೆಳೆದ ಈ ಶಾಸನದ ಮುಖ್ಯ ಭಾಗ ಹೀಗಿದೆ.

"…..ಅನ್ನೆಗಮಿತ್ತ…. ಮಹೇಶ್ವರಂ ಕವಿಳಾಸಪರ್ಬ್ಬತದ ರಮ್ಯಭೂಮಿಯೊಳ್…. ಅಸಂಖ್ಯಾತಗಣಪರಿವೃತನುಮಾಸಹಿತವೊಡ್ಡೋಲಗದೊಳ್ ಸುಖಸಂಕಥಾ ವಿನೋದದಿಂದಮಿರೆ ನಾರದನೆಂಬ ಗಣೇಶ್ವರನಿಂತೆಂದಂ-

ವೃ । ಓಹಿಲ ದಾಸ ಚೆನ್ನ ಸಿರಿಯಾಳ ಹಳಾಯುಧ ಬಾಣನುದ್ಭಟ ।
ರ್ದೇಹದೊಳೊಂದಿ ಬಂದ ಮಳಯೇಶ್ವರ ಕೇಶವರಾಜರಾದಿಯಾ ।
ಗೈಹಿಕ ಸೌಖ್ಯಮಂ ಬಿಸುಟಸಂಖ್ಯಗಣಂ ನಿಜವಾದ ಭಕ್ತಿಸ ।
ದ್ಗೇಹದೊಳಿಲ್ಲಿರಲ್ ಸಮಯಮುತ್ಕಟಮಾದುದು ಜೈನಬೌದ್ಧರೊಳ್ ॥

---

೯೨. ಶರಣರನ್ನು ಕುರಿತು ಒಂದು ಶಾಸನ. K.U.J. ೧೯೬೭

೯೩. EI.V.P. ೨೪೫, ಅಬ್ಬಲೂರ ಶಾಸನ, ಕ್ರಿ.ಶ. ೧೨೦೦?

ವ|| ಎಂಬುದು ಮಹೇಶ್ವರಂ... ವೀರಭದ್ರನಂ ನೀಂ ಮನುಷ್ಯಲೋಕದೊಳ್ ನಿನ್ನಂಶ ದೊಳೊಬ್ಬನಂ ಪುಟ್ಟಿಸಿ ಪರಸಮಯಂ ನಿಯಾಮಿಸೆಂಬುದುಂ, ವೀರಭದ್ರನುಂ ಪುರುಷೋತ್ತಮಭಟ್ಟರ್ಗ್ಗೆ ಸ್ವಪ್ನದೊಳ್ ಬಂದು ಪ್ರಸಾದಮಂ ಮಾಡಿ ಪೋಪುದುಂ, ಪುರುಷೋತ್ತಮಭಟ್ಟರು.... ಮಗನಂ ಪಡೆದು... ರಾಮನೆಂದು ಹೆಸರಿಟ್ಟರಾತನುಂ...

ಕಂ|| ಏಕಾಗ್ರಭಕ್ತಿಯೋಗದಿ ।
ನೇಕಾಕಿಯೆನಲ್ಕೆ ಸಂದು ಶಿವನಂ ಪಿರಿದ ।
ಪ್ಪೇಕಾಂತದೊಳಾರಾಧಿಸಿ ।
ಯೇಕಾಂತದ ರಾಮನೆಂಬ ಪೆಸರ(ಂ) ಪಡೆದಂ ॥

(ಶೈವಕ್ಷೇತ್ರಗಳ ಸಂದರ್ಶನಾರ್ಥ ಏಕಾಂತರಾಮಯ್ಯನು ಪ್ರಯಾಣ ಬೆಳೆಸುತ್ತಾನೆ).

.... ಚರಿಯಿಸುತ್ತಂ ಬಂದು ಕಣ್ಡಂ ಸುರಾ ।
ರ್ಚ್ಚಿತನಂ ದಕ್ಷಿಣ ಸೋಮನಾಥನನಘೌಘತ್ರಾಸಿಯಂ ಪ್ರೀತಿಯಿಂ ।

ವ|| ಅಂತು ಬಂದು... ಹುಲಿಗೆಱೆಯ ಸೋಮನಾಥನನಾರಾಧಿಸುತ್ತಮಿಪ್ಪುದುಮಾ ಪರಮೇಶ್ವರಂ ಪ್ರತ್ಯಕ್ಷನಾಗಿ (ರಾಮ, ಅಬ್ಬಲೂರಿಗೆ ಹೋಗು, ಜೈನರೊಡನೆ ವಾದಿಸು, ನಿನ್ನ ತಲೆಯನ್ನಾದರೂ ಪಣಕ್ಕಿಟ್ಟು ಗೆಲ್ಲು... ಮಗನೆ ಇದು ನನ್ನಾಜ್ಞೆ ಎಂದು) ಸೋಮನಾಥ ದೇವರ್ಬೆಸಸಿದಡೇಕಾಂತ ರಾಮಯ್ಯನಬ್ಬಲೂರ ಬ್ರಹ್ಮೇಶ್ವರಸ್ಥಾನದೊಳ್ ನಿಷ್ಪೃಹವೃತ್ತಿಯಿಂದಮಿರೆ.... (ಸಂಕಗೌಡ ನೊಂದಿಗೆ ಬಂದ ಹಲವು ಜೈನರು ಬ್ರಹ್ಮೇಶ್ವರಲಿಂಗದೆದುರು ಜಿನಪಾರಮ್ಯವನ್ನು ಘೋಷಿಸಿದರು. 'ಶಿವ ಸನ್ನಿಧಿಯೊಳ್ ಅನ್ಯದೇವತಾಸ್ತವನಂ ಮಾಡಲಾಗದು'; ಎಂದು ರಾಮಯ್ಯ ಪ್ರತಿಭಟಿಸಿದ. ಶಿವಪಾರಮ್ಯ ಮತ್ತು ಜಿನಪಾರಮ್ಯಗಳ ವಾದ ನಡೆಯಿತು. ಕೊನೆಗೆ ನೀನು ಶಿರ ಕತ್ತರಿಸಿಕೊಂಡು ಮರಳಿ ಪಡೆದರೆ ನಿನ್ನ ಶಿವನ ಹಿರಿಮೆಯನ್ನು ಒಪ್ಪುತ್ತೇವೆ ಮತ್ತು ಇಲ್ಲಿಯ 'ಜಿನನ ಕಿತ್ತು ಶಿವನಂ ನಿಲಿಪೆವು' ಎಂದು ಜೈನರು ಓಲೆಯನ್ನು ಬರೆದುಕೊಟ್ಟರು.

ಅರಗಯ್ಗೊಂಡನೆ ಕಿತ್ತು ನೋಡಿದನೆ ಕೂರ್ಪ್ಪಿಂಗಳ್ಕಿ ಮೆಯ್ಗಾಯ್ದನೇ ।
ಸೆರಗಂ ಪಾರ್ದ್ದನೆ ಬಾಳ್ಗೆ ಭಕ್ತರೆನುತಂ ಬಲ್ಲಾಳು ರಾಮಂ ಸ್ವಕಂ ।
ಧರಮಂ ಚಕ್ಕನೆ ಹುಲ್ಲಕಟ್ಟನರಿವಂತಕ್ಲೇಶದಿಂದಾ ಗಳಂ ।
ತರಿದೀಶಾಂಘ್ರಿಯೊಳಿ[ಕ್ಕಿ ಶಂಕರ] ಗಣಕ್ಕಾನಂದವಂ ಮಾಡಿದಂ ॥

(ಕತ್ತರಿಸಿಕೊಂಡ ಶಿರವನ್ನು ಏಳುದಿನ ಮೆರೆಯಿಸಿ ಶಿವನಿಂದ ಮರಳಿ ಪಡೆದ).

ಬಡಿಗೊಂಡೊರ್ಬ್ಬನೆ ಸೊಕ್ಕಿ ಬಾಳೆವನಮಂ ಕಾಡಾನೆ ಪೊಕ್ಕಂತಿರು ।
ಕ್ಕಡಗಲ್ ಕಾಪಿನ ವೀರರಂ ತುರಗಮಂ ಸಾಮಂತರಂ ತೂಳ್ದು ಮಾ ।
ರ್ಪ್ಪಡೆಗಳ್ ಜೈನರ ಮಾರಿ ಬಂದುದೆನುತುಂ ಬೆ[ಂ]ಗೊಟ್ಟು ಪೋಗಲ್ ಜಿನಂ।
ಕೆಡೆವನ್ನಂ ಬಡಿದಲ್ಲಿ ಕೈಕೊಳಿಸಿದಂ ಶ್ರೀ ವೀರಸೋಮೇಶನಂ ॥

(ಅಪಮಾನಿತರಾದ ಜೈನರು ಬಿಜ್ಜಳನಲ್ಲಿ ದೂರು ಹೇಳಿದರು. ರಾಮಯ್ಯನು ಪಣದ ಓಲೆ ತೋರಿಸಿ ಬಿಜ್ಜಳನಿಗೆ ಸತ್ಯಸಂಗತಿಯನ್ನೆಲ್ಲ ನಿವೇದಿಸಿದನು).

ವ॥ ಅಂತಪ್ಪಡೀ ತಲೆಯನರಿದವರ ಕೈಯೊಳಿಡ್ದುವೆನವರದಂ ಸುಟ್ಟಿಂ ಬಳಿಕ್ಕವಾಂ ಪಡೆವೆನನಗಾನೆಸಜ್ಜೆಯ ಬಸದಿ ಮುಖ್ಯವಾಗಿ ಯೆಣ್ನೂಱುಂ ಬಸದಿಯ ಜಿನರಂ ಪಲರನೊಡ್ಡುವುದೆನೆ ಬಿಜ್ಜಣರಾಯಂ ನಾವೀ ಕೌತುಕಮಂ ನೋಡುವವೆಂದು ಬಸದಿಗಳ ಪಂಡಿತರುಮಂ ಜೈನರಂ ಕರೆದು, ನೀಮಾರ್ಪ್ಪಡೆ ಬಸದಿಗಳಂ ಪಣಂ ಮಾಡಿ ಓಲೆಗಳಂ ಕುಡಿವೆಂದಡವರಾವೀ ಮುನ್ನೊಡೆದ ಬಸದಿಯಂ ದೂಱಿಲ್ ಬಂದೆವಲ್ಲದಿನ್ನೊಡ್ಡಿ ಜಿನಪ್ರಳಯಮಮಂ ಮಾಡಲ್ ಬಂದವರಲ್ಲೆನೆ, ಬಿಜ್ಜಣರಾಯಂ ನಕ್ಕು, ನೀವಿನ್ನುಸಿರದೆ ಪೋಗಿ ಸುಖದಿನಿರಿವೆಂದವರಂ ಕಳಿಪಿ, ರಾಮಯ್ಯಗಳಿಗೆಲ್ಲರುವರಿಯೆ ಜಯಪತ್ರಮಂ ಕೊಟ್ಟು.... ರಾಮಯ್ಯಂಗಳು ಮಾಡಿದ ಪರಮಸಾಹಸಕಂ ನಿರತಿಶಯಮಪ್ಪ ಮಾಹೇಶ್ವರಭಕ್ತಿಗಂ ಮೆಚ್ಚಿ.... (ದಾನವಿವರಣೆ).... ಶ್ರೀಮದೇಕಾಂತದ ರಾಮಯ್ಯಂಗಳ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿಕೊಟ್ಟು ಪ್ರತಿಪಾಳಿಸಿದಂ.... ॥ಓಂ॥.... ತ್ರಿಭುವನಮಲ್ಲ ಸೋಮೇಶ್ವರದೇವರಂ ಸಕಳಚಮೂನಾಥ ಶಿರೋಮಣಿಯುಂ ಚಾಳುಕ್ಯರಾಜ್ಯಪ್ರತಿಷ್ಠಾಪಕನಪ್ಪ ಕುಮಾರ ಬಮ್ಮಯ್ಯನುಂ ತಾನು(ಂ) ಸೆಲೆಯಹಳ್ಳಿಯ ಕೊಪ್ಪದೊಳು ಸುಖಸಂಕಥಾವಿನೋದ ದಿಂದಿರ್ದ್ದೊಂದು ದೆವಸಂ, ಧರ್ಮಗೋಷ್ಠಿಯೊಳಿರ್ದ್ದು, ಪುರಾತನ ನೂತನರಪ್ಪ ಶಿವಭಕ್ತರ ಗುಣಸ್ತವನಂ ಮಾಡುತ್ತಮಿರ್ದೇಕಾಂತದ ರಾಮಯ್ಯಂಗಳಬ್ಬಲೂರಲಿದ್ದಲ್ಲಿ... ಅವರನಿದಿರ್ಗೊಂಡು ಪೋಗಿ... (ದಾನಗಳ ವಿವರ).... ರಾಮಯ್ಯಂಗಳ ಕಾಲಂ ಕರ್ಚಿ.... ಧಾರಾಪೂರ್ವಕಂ ಮಾಡಿ... ತಾಮ್ರಶಾಸನಂ ಕೊಟ್ಟಾನೆಯನೇಱಿಸಿ ಮೆಱಿಸಿ ಪರಮಭಕ್ತಿಯಿಂ ಪ್ರತಿಪಾಲಿಸಿದಂ ॥ಓಂ॥.... ಶ್ರೀಮನ್ ಮಹಾಮಂಡಳೇಶ್ವರಂ ಕಾವರಸಪ್ರ್ಪನುಂಗಲ್ನೆನೂಱುವಂ ದುಷ್ಟನಿಗ್ರಹ ಸಿಷ್ಟಪ್ರತಿಪಾಳನದಿ ನಾಳುತ್ತಮಿರ್ದ್ದಬ್ಬಲೂರ... ರಾಮಯ್ಯಂಗಳು... ಮಾಡಿದ ಸಾಹಸಮಂ ಸವಿಸ್ತರಂ ಕೇಳ್ದು ಮೆಚ್ಚಿ... ಪರಮ ಪ್ರೀತಿಯಿಂದೊಡಗೊಂಡು ಪೋಗಿ... (ದಾನ ವಿವರ).... ರಾಮಯ್ಯಂಗಳ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾಡಿ ಪರಮಭಕ್ತಿಯಿಂ ಕೊಟ್ಟು ಧರ್ಮಮಂ ಪ್ರತಿಪಾಳಿಸಿದಂ ಸ್ವಸ್ತ್ಯಸ್ತು ಓಂ॥.......

ಕಂ॥ ಹರನೊಳ್ತವನಿಧಿಯಂ ತಾಂ ।
ದರವುರವಿಲ್ಲೆನಿಸಿ ಪಡೆದು ದೇಗುಲವಂ ಪುರ ।
ಹರನ ಕೈಲಾಸದಂತಿರೆ ।
ವಿರಚಿಸಿದಂ ಶಂಭುಭಕ್ತಿಧಾಮಂ ರಾಮಂ ॥

ವೃ॥ ದೇಗುಲಕೆಂದು ಭಕ್ತಜನವಾದರದಿಂದಿದಿರೆರ್ದ್ದು ಕೊಟ್ಟಡಾ ।
ಹಾಗವನಾದೊಡಂ ಕಳೆದುಕೊಳ್ಳದೆ ಬೇಡದೆ ನಾಡೆ ದೈನ್ಯದಿಂ ।
ಪೋಗಿ ನೃಪಾಲರಂ ಶಿವನನುಗ್ರಹವಕ್ಷಯವಾಗೆ ಮಾಡಿದಂ ।
ದೇಗುಲವಂ ಹರಾದ್ರಿಗೆಣೆಯಾಗಿರೆ ರಾಮನಿದೇಂ ಕೃತಾರ್ಥನೋ ॥

....

ಏಕಾಂತರಾಮಯ್ಯನ ಕೀರ್ತಿಕಂಬದಂತೆ ನಿಂತ ಈ ಶಾಸನ, ಧಾರ್ಮಿಕ ರಾಜಕೀಯ ಸಾಹಿತ್ಯಿಕ ದೃಷ್ಟಿಗಳಿಂದ ಮಹತ್ವಪೂರ್ಣವೆನಿಸಿದೆ. ಬಹಿರಂಗವಾಗಿ ನಡೆದ ಈ ಜೈನ ಶೈವರ ಸಂಘರ್ಷಣೆ, ರಾಮಯ್ಯನ ಸಮಯಾಭಿಮಾನಗಳಿಗೆ ನಿರಂತರ ಸಾಕ್ಷಿಯಾಗಿದೆ.

ಅಬ್ಬಲೂರ ಚಿತ್ರ ಶಾಸನ[೯೪]: ಸೋಮೇಶ್ವರದೇವಾಲಯದ ಒಳಗೋಡೆಯ ಮೇಲೆ ಬಲಕ್ಕೆ "ಶ್ರೀಮದ್ ಏಕಾಂತರಾಮಯ್ಯಂಗೆ ಸಂಕಗೌಂಡನ ಓಲೆಯ ಕುಡುವ ಠಾವು" ಎಂಬ ವಾಕ್ಯ ಬರೆದು, ಕೆಳಗೆ ಸಂಬಂಧಿಸಿದ ಶಿಲ್ಪವನ್ನು ಬಿಡಿಸಲಾಗಿದೆ.

ಅಬ್ಬಲೂರ ವಿಗ್ರಹ ಶಾಸನ[೯೫]: ಸೋಮೇಶ್ವರದೇವಾಲಯದ ಒಳಗೋಡೆಯ ಮೇಲೆ ಎಡಕ್ಕೆ "ಯೆ(ಏ)ಕಾಂತರಾಮಯ್ಯಂಗಳು ಜಿನನ ಒಡೆದು ಲಿಂಗಪ್ರತಿಷ್ಠೆಯಂ ಮಾಡಿದ ಠಾವು" ಎಂಬ ವಾಕ್ಯವಿದ್ದು, ಕೆಳಗೆ ಅದಕ್ಕೆ ಸಂಬಂಧಪಟ್ಟ ಶಿಲ್ಪವನ್ನು ಕೊರೆಯಲಾಗಿದೆ.

ಅಬ್ಬಲೂರ ವಿಗ್ರಹ ಶಾಸನ[೯೬]: ಸೋಮೇಶ್ವರ ದೇವಾಲಯದ ಪೌಳಿಯ ಹೊರಭಾಗದ ಮೇಲೆ "ಶ್ರೀ ಬ್ರಹ್ಮೇಶ್ವರದೇವರಲ್ಲಿ ಏಕಾಂತದ ರಾಮಯ್ಯ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹಡೆದ ಠಾವು ॥ ಸಂಕಗಾವುಂಡ ಬಸದಿಯನೊಡೆಯಲೀಯದೆ ಆಳು ಕುದುರೆಯನೊಡ್ಡಿರಲು ಏಕಾಂತದ ರಾಮಯ್ಯ ಕಾದಿ ಗೆಲ್ದು ಜಿನನನೊಡೆದು ಲಿಂಗಮಂ ಪ್ರತಿಷ್ಠೆ ಮಾಡಿದಂ॥" ಎಂಬ ವಾಕ್ಯವಿದೆ. ಕೆಳಗೆ ಸಂಬಂಧಪಟ್ಟ ದೃಶ್ಯಗಳು ಕೆತ್ತಲ್ಪಟ್ಟಿವೆ.

ಮೇಲಣ ಈ ಮೂರು ವಿಗ್ರಹಶಾಸನಗಳು ರಾಮಯ್ಯನ ಮಸ್ತಕಾರ್ಪಣೆಯ ವಿವಿಧ ಸಂದರ್ಭಗಳನ್ನು ಚಿತ್ರಸಹಿತ ಕಣ್ಣಿಗೆ ಕಟ್ಟುತ್ತವೆ. ರಾಮಯ್ಯನೇ ಕೆತ್ತಿಸಿರಬಹುದಾದ ಈ ಚಿತ್ರಗಳಿಗೆ ಐತಿಹಾಸಿಕ ಮಹತ್ವ ಸಲ್ಲುತ್ತಿದ್ದರೆ, ಈ ಘಟನೆಗೆ ಐತಿಹಾಸಿಕ ಸತ್ಯದ ಬೆಲೆ ಲಭಿಸುತ್ತದೆ. ಇದಲ್ಲದೆ ಇಲ್ಲಿಯ ಸೋಮೇಶ್ವರದೇವಾಲಯದಲ್ಲಿ "ಏಕಾಂತ ರಾಮೇಶ್ವರ" ಹೆಸರಿನ ಲಿಂಗವಿದೆ.

ತಾಳಿಕೋಟೆ ಶಾಸನ[೯೭]: "......... ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂಭಾವಿ ಬಮ್ಮುಕೂರು ಮೊದಲಾಗಿ ಅನನ್ತದೇಶದೇಶಾನ್ತರದಲಿದಿರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮನಾಕಂಪಂಗೊಳ್ಸಿ.... ತಮ್ಮ ಭಿತ್ಯಾಚಾರದ ತೊಮ್ಮೆ(=ತೋರ್ಮೆ)ಯಂ ತಳದಲಿಕ್ಕಿ ತೋರ್ಪ್ಪನ್ತೆ ತೋರಿದ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ ನಾಮಾದಿ ಸಮಸ್ತ ಪ್ರಶಸ್ತಿಸಹಿತಂ॥......."

ಈ ಶಾಸನ ಭಾಗದಲ್ಲಿ ಬಂದಿರುವ 'ಅಬ್ಬಲೂರು' ಎಂಬ ಹೆಸರು ಏಕಾಂತ ರಾಮಯ್ಯನ ಸೂಚನೆಯೆಂಬುದು ಸುಸ್ಪಷ್ಟ. ಇದರ ಕಾಲ ಕ್ರಿ.ಶ. ೧೧೮೪, ಕಾಲ ನಿರ್ದೇಶನ ವಿಲ್ಲದ ಅಬ್ಬಲೂರು ಶಾಸನವನ್ನು ಬಿಟ್ಟರೆ, ಏಕಾಂತರಾಮಯ್ಯನನ್ನು ಕಾಲಸಹಿತ ಸೂಚಿಸುವ ತೀರ ಪ್ರಾಚೀನ ಶಾಸನವಿದು. ಹೀಗಾಗಿ ಈ ಶಿರಸ್ಸು ಪವಾಡ ಕ್ರಿ.ಶ. ೧೧೮೪ಕ್ಕೆ ಹಿಂದೆ ಜರುಗಿತೆಂದು ಹೇಳಬೇಕಾಗುತ್ತದೆ.

ಭೋಗಾವೆ ಶಾಸನ[೯೮]: ಅಬ್ಬಲೂರಿಗೆ ಸಮೀಪದಲ್ಲಿರುವ ಭೋಗಾವೆಯಲ್ಲಿ ಒಂದು ಶಾಸನವಿದೆ. ಅಬ್ಬಲೂರು ಸೋಮನಾಥದೇವರನ್ನು ವರ್ಣಿಸುವ, ದೇವಾಲಯ ನಿರ್ಮಾಣಕಾರ್ಯವನ್ನು ಕಥಿಸುವ ಈ ಶಾಸನ ಏಕಾಂತರಾಮಯ್ಯನನ್ನೂ ಉಲ್ಲೇಖಿಸುತ್ತದೆಯೆಂದು ತಿಳಿದುಬರುತ್ತದೆ.

---

೯೪. EI.XIX.P. 141 ಅಬ್ಬಲೂರ, ಕ್ರಿ.ಶ. ೧೨೦೦?

೯೫. EI.XIX.P. 141 ಅಬ್ಬಲೂರ, ಕ್ರಿ.ಶ. ೧೨೦೦?

೯೬. EI.XIX.P. 141 ಅಬ್ಬಲೂರ, ಕ್ರಿ.ಶ. ೧೨೦೦?

೯೭. SII. ೫೬, ತಾಳಿಕೋಟೆ, ಕ್ರಿ.ಶ. ೧೧೮೪.

೯೮. ARISE. 1958-59 No. 543.

ಕುಡತಿನಿ ಶಾಸನ[೯೯]: "...........ಪಂದಲೆಯಿಂ ನಿವಾಳಿಯಂ ಪುರುಮಥನಂಗೆ ಕೊಟ್ಟು ಮಗುಳ್ದುಂ ಪಡೆವರ್ಪ್ಪರ್ಮಥರ್ಕಳದ್ಭುತಂ...."–ಹಿಂದೆ ಹೇಳಿದಂತೆ ಅರುವತ್ತು ಮೂವರಲ್ಲಿ ಒಬ್ಬನಿಗೆ ಅನ್ವಯಿಸಬಹುದಾದ ಈ ಘಟನೆಯನ್ನು, ಶಿವನಿಗೆ ಶಿರವನ್ನರ್ಪಿಸಿ ಮರಳಿ ಪಡೆದ ರಾಮಯ್ಯನಿಗೂ ಆರೋಪಿಸಲು ಬರುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೨೧೦.

ಮರಡಿಪುರ ಶಾಸನ[೧೦೦]: "ಜಗದೇವದಣ್ಣಾಯಕ ಏಕಾಂತದ ರಾಮಯ್ಯ ಸೊನಲಿಗೆಯರಾಮಯ್ಯ" ಎಂದು ಈ ಶಾಸನ. ಏಕಾಂತರಾಮಯ್ಯನನ್ನು ಹಲವು ಶರಣರೊಂದಿಗೆ ಸ್ಮರಿಸಿದೆ.

ಬಂದಳಿಕೆ ಶಾಸನ[೧೦೧]: (ಕ್ರಿ.ಶ. ೧೨೦೭): ಈ ಗ್ರಾಮದ ಒಂದು ಶಾಸನ ಇಲ್ಲಿಯ ಅಗ್ರಹಾರ ಮಹಾಜನರಿಗೆ ಕೊಟ್ಟ ದಾನವನ್ನು ವಿವರಿಸುತ್ತ "ಏಕಾನ್ತದ ರಾಮಯಂಗಳ ಮಂಮ ರಾಮದೇವಭಟ್ಟರ ವೃತ್ತಿ೧" ಎಂಬ ಅಂಶವನ್ನು ವ್ಯಕ್ತಪಡಿಸುತ್ತದೆ. ಇಲ್ಲಿಯ ರಾಮದೇವಭಟ್ಟ, ಏಕಾಂತರಾಮಯ್ಯನ ಮೊಮ್ಮಗನಾಗಿದ್ದ ಪಕ್ಷದಲ್ಲಿ ಮತದ ಪ್ರಶ್ನೆ ಚಿಂತನೀಯವೆನಿಸುತ್ತದೆ. ಅಲ್ಲದೆ ಅಬ್ಬಲೂರಿನ ಈ ಮನೆತನ ಬಂದಳಿಕೆಯಲ್ಲಿ ನೆಲೆನಿಂತುದೇಕೆ ಎಂಬ ಪ್ರಶ್ನೆ ಎದುರಾಗುತ್ತದೆ.

ಕೆಂಪನಪುರ ಶಾಸನ[೧೦೨]: "ಸ್ವಸ್ತಿ ಶ್ರೀಮದಖಿಲದೇವಕುಲಮುಕುಟಸಂಕಲಿತಾಗಣಿತಮಣಿಕಿರಣಾವರಣ ಶ್ರೀಚರಣಸರೋರುಹ ಶ್ರೀಮದ್ವೀರಸೋಮೇಶ್ವರ ದ್ವಾದಶಾವತಾರ ಶ್ರೀ ವೀರಭದ್ರನಿಜಸ್ವರೂಪ ಶ್ರೀಮದೇಕಾಂತರಾಮೇಶ್ವರಾನ್ವಯೋದ್ಭೂತ ಸಕಲಶಾಸ್ತ್ರ ಪಾರಾವಾರಪಾರಂಗತ ವೀರಶೈವಮತಸ್ಥಾಪನಾಚಾರ್ಯ ಶ್ರುತಿಸ್ಮೃತೀತಿಹಾಸ ಪುರಾಣಾಗಮತಾತ್ಪರ್ಯ ಪ್ರತಿಪಾದಿತಾವಿಪದೀಕ್ಷಾವಿಧಾಯೀ ವದಭುಜಂಗನ ಊರು ಶ್ರೀಮದೇಕಾಂತ ಬಸವೇಶ್ವರರು...॥"

೧೫ನೆಯ ಶತಮಾನಕ್ಕೆ ಸಂಬಂಧಪಟ್ಟ ಈ ಶಾಸನ ಏಕಾಂತರಾಮಯ್ಯನನ್ನು 'ಶ್ರೀ ಮದ್ವೀರಸೋಮೇಶ್ವರ ದ್ವಾದಶಾವತಾರ ಶ್ರೀವೀರಭದ್ರ ನಿಜಸ್ವರೂಪ' ಎಂದು ಕರೆದುದೂ, ಆತನ ವಂಶಜರು ೧೫ನೆಯ ಶತಮಾನದಲ್ಲಿಯೂ ಎತ್ತರ ವ್ಯಕ್ತಿತ್ವದಿಂದ ಬಾಳಿದುದೂ ಗಮನಾರ್ಹ. ಏಕಾಂತರಾಮಯ್ಯನ ಅನ್ವಯದ ಏಕಾಂತಬಸವೇಶ್ವರನು ಮೂಲಸ್ಥಾನದೇವರಿಗೆ ದಾನ ನೀಡಿದುದು, ಈ ಶಾಸನದ ವಸ್ತು. ಈತನಿಗೆ ಬಳಸಿದ 'ವೀರಶೈವ ಮತಸ್ಥಾಪನಾಚಾರ್ಯ' ಎಂಬುದನ್ನು ಇಲ್ಲಿ ಗಮನಿಸಬೇಕು.

ಕಕ್ಕಯ್ಯ

ಶರಣರಲ್ಲಿ ಡೋಹರ ಕಕ್ಕಯ್ಯ, ಕಂಕರಿ ಕಕ್ಕಯ್ಯ ಎಂದು ಇಬ್ಬರು ಕಕ್ಕಯ್ಯಗಳಿರುವರು. ಕಲ್ಲದೇವರಪುರ ಶಾಸನದ "ಚೇರ ಚೋಳ ನಂಬಿ ನಂಬಿ ಕಕ್ಕ ಚೆನ್ನ"[೧೦೩] ಎಂಬ ಯಾದಿಯಲ್ಲಿ ಬರುವವನು ಸುಪ್ರಸಿದ್ಧ ಶಿವಭಕ್ತ ಡೋಹರ ಕಕ್ಕಯ್ಯನಾಗಿರಬಹುದು.

---

೯೯. SII.XVII. P.8 ಕುಡತಿನಿ, ಕ್ರಿ.ಶ. ೧೨೧೦

೧೦೦. EC. III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೧೦೧. EC.VII ಶಿಕಾರಿಪುರ ೨೩೫, ಬಂದಳಿಕೆ.

೧೦೨. EC.IV (ಹೊಸ) ಚಾಮರಾಜನಗರ ೧೪೪ ಕೆಂಪನಪುರ.

೧೦೩. EC.XI ಜಗಳೂರು ೩೦, ಕಲ್ಲೇದವರಪುರ, ಕ್ರಿ.ಶ. ೧೨೭೯

ಚಿಕ್ಕಯ್ಯ

ಈ ಹೆಸರಿನ ನಿಜಲಿಂಗ ಚಿಕ್ಕಯ್ಯ, ಹುಳಿಯಮೇಶ್ವರ ಚಿಕ್ಕಯ್ಯ, ಚೋರ ಚಿಕ್ಕಯ್ಯ ಎಂಬ ವ್ಯಕ್ತಿಗಳು ಕಂಡುಬರುತ್ತಾರೆ. ಕಲ್ಲೆದೇವರಪುರ ಶಾಸನೋಕ್ತ "ಚೇರ ಚೋಳು ನಂಬಿ ನಂಬಿ ಚಿಕ್ಕ ಕಕ್ಕ"* ಎಂಬಲ್ಲಿಯ ಚಿಕ್ಕನು ಇವರಲ್ಲಿ ಒಬ್ಬನಾಗಿರಬಹುದು.

ಜಗದೇವ ದಣ್ಣಾಯಕ

ಬಿಜ್ಜಳನನ್ನು ಕೊಂದು ಶರಣರಿಗಾದ ಅನ್ಯಾಯದ ಸೇಡನ್ನು ತೀರಿಸಿಕೊಂಡ ವ್ಯಕ್ತಿಗಳಲ್ಲಿ 'ಜಗದೇವ' ಎಂಬ ಹೆಸರೊಂದು ಕೇಳಿಬರುತ್ತದೆ. ಈ ಹೆಸರು 'ಲಿನಿಮಿತಿ (=ಅನಿಮಿಷ?) ಕೇಸವರಾಜ ಜಗದೇವದಣ್ಣಾಯಕ ಏಕನ್ತರಾಮಯ್ಯ'[೧೦೪] ಎಂದು ಮರಡಿಪುರ ಶಾಸನದಲ್ಲಿ ಕಂಡುಬರುತ್ತದೆ. ಇಲ್ಲಿಯ 'ದಣ್ಣಾಯಕ'ವೆಂಬುದು ಈತನ ರಾಜಕೀಯ ವ್ಯಕ್ತಿತ್ವವನ್ನು ಸೂಚಿಸುತ್ತದೆ.

ಮೊಲ್ಲೆ ಬೊಮ್ಮಣ್ಣ

ಕಲ್ಯಾಣಕ್ರಾಂತಿಯ ಕೊನೆಯ ಘಟ್ಟದಲ್ಲಿ ಜಗದೇವದಣ್ಣಾಯಕನೊಡಗೂಡಿ ಬಿಜ್ಜಳನನ್ನು ಕೊಂದ ಮೊಲ್ಲೆಬೊಮ್ಮಣ್ಣನನ್ನು ಕುರಿತು ಧೂಪದ ರಾಚೇಶ ಹೆಸರಿನ ಕವಿ 'ಮೊಲ್ಲೆಬೊಮ್ಮಯ್ಯನ ಕಾವ್ಯ' ಹೆಸರಿನ ವಾರ್ಧಕ ಷಟ್ಪದಿ ಕೃತಿ ರಚಿಸಿದ್ದಾನೆ. ಈ ಕೃತಿಯ ಪ್ರಕಾರ ಮೊಲ್ಲೆಬೊಮ್ಮಯ್ಯ ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲೂಕಿನ ಕಲ್ಲೂರು ಗ್ರಾಮದ ಕಲ್ಲಿನಾಥ ದೇವರ ಭಕ್ತ. ಈತನ ಊರು ನೆರೆಯ ರಾವಣಕಿ (ರ‍್ಯಾವಣಕಿ). ಇಲ್ಲಿಯ ಬೊಮ್ಮಣಗೌಡ, ಕಲ್ಲಮ್ಮ ದಂಪತಿಗಳ ಮಗನೀತ. ಈವರೆಗೆ ಸಂಬಂಧಿಸಿದ ಎರಡು ಶಾಸನಗಳು (೧೧೫೪, ೧೧೮೬) ಕಲ್ಲೂರಿನಲ್ಲಿವೆ.*

೧೬೫೪ರ ಶಾಸನ: "ಶ್ರೀಮನು ಮಹಾಮಂಡಳೇಶ್ವರಂ ಚಾವುಂಡ ದೇವನರ್ದ್ಧಾಂಗಿ ಮಹಾದೇವಿಯರು ಕಲ್ಲೂರನಾಳುತ್ತ ಶ್ರೀ ಸ್ವಯಂಭು ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬಂಮ್ಮೆಯಂಗೆ ದೇಹಾತ ವೃತ್ತಿ"ಯಾಗಿ ಭೂಮಿ ನೀಡಿದುದನ್ನು ಈ ಶಾಸನ ತಿಳಿಸುತ್ತದೆ.

೧೧೮೬ರ ಶಾಸನ: "ಶ್ರೀಮನ್ಮಹಾಮಂಡಳೇಶ್ವರಂ ಚಾಉಂಡರಸದೇವನ ಕುಮಾರ ವೀರ ಬಿಜ್ಜಲದೇವರಸರು ಕಲ್ಲೂರ ಶ್ರೀ ಸ್ವಯಂಭು ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬಮ್ಮಯ್ಯಂಗೆ ಪ್ರಥಮ ವೃತ್ತಿಯಾಗಿ ಗಣಮಠಕ್ಕೆ" ಇನ್ನೂರು ಮತ್ತರು ಭೂಮಿ ನೀಡಿದುದನ್ನು ಈ ಶಾಸನದಲ್ಲಿ ಹೇಳಲಾಗಿದೆ.

ಈ ಕಲ್ಲಿನಾಥ ದೇವಾಲಯ ಕಾಳಾಮುಖ ಪರಂಪರೆಗೆ ಸಂಬಂಧಿಸಿದೆ. ಈ ಮೊಲ್ಲೆ ಬೊಮ್ಮಯ್ಯನು ಗಣಮಠದ ವ್ಯಕ್ತಿಯಾಗಿದ್ದಾನೆ. ಗಣಮಠವೆಂದರೇನು? ಈವರೆಗೆ ಸ್ಪಷ್ಟವಾಗಿಲ್ಲ.

---

* EC.XI ಜಗಳೂರು ೩೦, ಕಲ್ಲೇದವರಪುರ, ಕ್ರಿ.ಶ. ೧೨೭೯

೧೦೪. EC.III-I. ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

* ಕೊಪ್ಪಳ ಜಿಲ್ಲೆಯ ಶಾಸನಗಳು: ಯಲಬುರ್ಗಾ-೧೨,೧೭. ಕಲ್ಲೂರು

ಇದೇ ಇಂದು 'ಘನಮಠ'ವೆಂದು ಪ್ರಚಾರದಲ್ಲಿರಬಹುದಾಗಿದೆ. ರೋಣ ತಾಲ್ಲೂಕಿನ ಕೋಡಿಕೊಪ್ಪ ಗ್ರಾಮದಲ್ಲಿ ಮೊಲ್ಲೇಶ್ವರ ದೇವರಿಗೆ, ಮೂಲಬ್ರಹ್ಮೇಶ್ವರ ದೇವರಿಗೆ ಮೊಲ್ಲೆ ಬೊಮ್ಮಯ್ಯ ಮೊದಲಾದವರು ದಾನ ನೀಡಿದ ವಿಷಯವನ್ನೊಳಗೊಂಡ ಎರಡು ಶಾಸನಗಳಿವೆ (೧೧೨೧, ೧೧೪೪). ಬಹುಶಃ ಈತನು ಮೇಲೆ ಹೇಳಿದ ಕಲ್ಲೂರ ಶಾಸನದ ಶರಣ ಮೊಲ್ಲೆ ಬೊಮ್ಮಯ್ಯನಿಂದ ಭಿನ್ನನಾಗಿದ್ದಾನೆ. (ನೋಡಿ. ಮಾರ್ಗ IV-ಲೇಖನ ೮೦).

ಸುರಿಗೆಯ ಚೌಡಯ್ಯ

ಬಹುರೂಪಿ ಚೌಡಯ್ಯ, ಸುರಿಗೆಯ ಚೌಡಯ್ಯ, ಅಂಬಿಗರ ಚೌಡಯ್ಯ ಎಂಬ ಮೂವರು ಶರಣರಲ್ಲಿ ಮರಡಿಪುರ ಶಾಸನವು 'ಕೇಸಿರಾಜದಣ್ಣಾಯಕ ಸುರಿಗೆಯ ಚೆಲ್ವಡರಾಯ ಸಂಗನಬಸವಯ್ಯ'[೧೦೫] ಎಂದು ಸುರಿಗೆಯ ಚೌಡಯ್ಯನನ್ನು ಹೆಸರಿಸಿದೆ.

ಹುಲಿಗೆರೆಯ ಪೊನ್ನಯ್ಯ

ಅಗ್ಘವಣಿ ಹೊನ್ನಯ್ಯ ಎಂಬುದು ಈತನ ಇನ್ನೊಂದು ಹೆಸರು. ಪುಲಿಗೆರೆಯ ಸೋಮನಾಥನಿಗೆ ತುಂಗಭದ್ರೆಯ ಜಲದಿಂದ ಮಜ್ಜನ ಮಾಡಿಸುವ ಕಾಯಕ ಇವನದು. ತನ್ನ ಆಯುಷ್ಯದ ಕೆಲ ದಿನಗಳನ್ನು ಕಲ್ಯಾಣದ ಶರಣರ ಮನೆಗೆ ನೀರು ಹಾಕುವಲ್ಲಿ ಕಳೆದ ಈತನು ಬಿಜ್ಜಳನ ತೊನ್ನ ರೋಗವನ್ನು ನಿವಾರಿಸಿದನು. ಏಕಾಂತ ರಾಮಯ್ಯನ ರುಂಡವನ್ನು ಹರಿವಾಣದಲ್ಲಿಟ್ಟು ಹೊತ್ತು ಮೆರೆಸಿದವನು ಈತನೇ. ಕಲ್ಲೇದೇವಪುರ, ಮರಡಿಪುರ ಶಾಸನಗಳ "…..ಚೆಂನ ಹೊಂನ ಬಂಕ ಬಸವ ರಾಜ…",[೧೦೬] "….. ಸೊನಲಿಗೆಯ ರಾಮಯ್ಯ ಹುಲಿಗೆರೆಯ ಪೊನ್ನಯ್ಯ….."[೧೦೭] ಎಂಬ ವಾಕ್ಯಗಳಲ್ಲಿ ಒಮ್ಮೆ ಹೊನ್ನ ಎಂದು ಇನ್ನೊಮ್ಮೆ ಹುಲಿಗೆರೆಯ ಪೊನ್ನಯ್ಯ ಎಂದು ಈತ ಉಲ್ಲಿಖಿತನಾಗಿದ್ದಾನೆ. ಈ ಹೆಸರಿನ ಮೂರ್ತಿಯೊಂದು ಬನವಾಸಿ ಮಧುಕೇಶ್ವರ ದೇವಾಲಯದ ಶಿಲಾಮಂಟಪದ ಗಗ್ಗರಿಯಲ್ಲಿ ಗೋಚರಿಸುತ್ತದೆ.[೧೦೮] ಅಬ್ಬಲೂರಿನ ಸೋಮೇಶ್ವರ ದೇವಾಲಯದಲ್ಲಿ ಈ ಹೆಸರಿನ ಒಂದು ಶಿವಲಿಂಗವಿದೆ.

ಅಗ್ಗವಣಿಯ ಹೊನ್ನಯ್ಯ

ಪುಲಿಗೆರೆಯವನಾದ ಈತನು ಅಲ್ಲಿಯ ಸೋಮೇಶ್ವರನ ಭಕ್ತ. ದಿನಾಲು ತುಂಗಭದ್ರೆಯ ನೀರು ತಂದು ದೇವರನ್ನು ಪೂಜಿಸುವುದು ಈತನ ವ್ರತ. ಶಿರಸ್ಸು ಪವಾಡ ಪ್ರಸಂಗದಲ್ಲಿ ಏಕಾಂತರಾಮಯ್ಯನ ರುಂಡವನ್ನು ಹರಿವಾಣದಲ್ಲಿಟ್ಟು ಮೆರೆಸಿದವನೀತ. "ಹುಲಿಗೆರೆಯ ವರದ ಸೋಮನಾಥ" ಅಂಕಿತದಲ್ಲಿ ವಚನ ಬರೆದಿದ್ದಾನೆ. ಕಲ್ಲೇದೇವರಪುರ ಶಾಸನದ* ಕಕ್ಕ ಚೆಂನ ಹೊನ್ನ ಬಂಕ ಬಸವರಾಜ" ಎಂಬ

---

೧೦೫. EC.III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೧೦೬. EC.XI ಜಗಳೂರ ೩೦ ಕಲ್ಲೇದೇವರಪುರ, ಕ್ರಿ.ಶ. ೧೧೭೯

೧೦೭. EC.III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೧೦೮. ವಿಭೂತಿ ಪು. ೨೭೩

* EC.XI ಜಗಳೂರ ೩೦, ಕಲ್ಲೇದೇವರಪುರ, ಕ್ರಿ.ಶ. ೧೨೭೯.

ವಾಕ್ಯದಲ್ಲಿಯ ಹೊನ್ನ ಪ್ರಸ್ತುತ ಅಗ್ಗವಣಿಯ ಹೊನ್ನಯ್ಯನಾಗಿರ ಬೇಕು. ಇದೇ ರೀತಿ ಮರಡಿಪುರ ಶಾಸನದ* "ಸೊನಲಿಗೆಯು ರಾಮಯ್ಯ ಹುಲಿಗೆರೆಯು ಪೊನ್ನಯ್ಯ ನೆಲುವಿಗೆಯು ಸಾತಯ್ಯ" ಎಂಬ ವಾಕ್ಯದಲ್ಲಿ ಇವನು ನೇರವಾಗಿ ಉಲ್ಲೇಖಗೊಂಡಿದ್ದಾನೆ.

ಬಂಕಯ್ಯ

ಬಂಕನಾಥ, ಮೊರಟದ ಬಂಕಯ್ಯ, ಸುಂಕದ ಬಂಕಣ್ಣ, ಪ್ರಸಾದಿಲೆಂಕಬಂಕಣ್ಣ, ಹೊಡೆಹುಲ್ಲಬಂಕಣ್ಣ ಎಂಬ ಹೆಸರುಗಳು ಶರಣಸಮುದಾಯದಲ್ಲಿ ಕೇಳಿಬರುತ್ತವೆ. ಕಲ್ಲೇದೇವರಪುರ ಶಾಸನದ "ಚಿಕ್ಕ ಚಿಕ್ಕ ಹೊಂನ ಬಂಕ ಬಸವರಾಜ..."[೧೦೯] ಎಂಬ ವಾಕ್ಯದಲ್ಲಿ ಬರುವ ಬಂಕನು ಇವರಲ್ಲಿ ಯಾರೆಂಬುದು ಸ್ಪಷ್ಟವಾಗುವುದಿಲ್ಲ.

ದಶವರ್ಮ

ಈ ಹೆಸರಿನ ವ್ಯಕ್ತಿ ಇನ್ನೂ ಬೆಳಕಿಗೆ ಬಂದಿಲ್ಲ. ಶರಣ ದಸರಯ್ಯನಿಂದ ಈತನು ಭಿನ್ನನೆಂದು ತೋರುತ್ತದೆ. ಮರಡಿಪುರ ಶಾಸನದ "ಸಿರಿಯಾಳುವ ದಾಸ ದಸವರ್ಮ್ಮ..."[೧೧೦] ಎಂದು ಶಿವಶರಣರ ಉಲ್ಲೇಖದ ಮಧ್ಯ ಈ ಹೆಸರು ಎಡೆಪಡೆದಿದೆ.

ಅನಿಮಿಷ ಕೇಶವರಾಜ

ಅನಿಮಿಷ ಮತ್ತು ಕೇಶವರಾಜ ಎಂಬ ಭಿನ್ನ ಹೆಸರಿನ ಶರಣರಲ್ಲದೆ ಅನಿಮಿಷ ಕೇಶವರಾಜ ಎಂಬ ಸಮಸ್ತ ಹೆಸರಿನ ಇನ್ನೊಬ್ಬ ಶರಣನಿರುವಂತೆ ತೋರುತ್ತದೆ. 'ಸಂಗನಬಸವಯ್ಯ ಲಿನಿಮಿತಿ (=ಅನಿಮಿಷ?) ಕೇಶವರಾಜ ಜಗದೇವದಣ್ಣಾಯಕ'[೧೧೧] ಎಂಬ ಮರಡಿಪುರ ಶಾಸನವಾಕ್ಯದಲ್ಲಿ ಈ ಹೆಸರನ್ನು ಗಮನಿಸಬಹುದು.

ಅಂಗಜೇಶ ಮಸಣಯ್ಯ

ಈವರೆಗೆ ಶರಣ ಸಂಕುಲದಲ್ಲಿ ಗಜೇಶ ಮಸಣಯ್ಯ ಎಂಬ ಹೆಸರನ್ನು ಪರಿಗಣಿಸಲಾಗಿದೆ. ಈತನು ಕರ್ಜಗಿ ಗ್ರಾಮದವನೆಂದು ವೀರಶೈವಕೃತಿಗಳು ತಿಳಿಸುತ್ತವೆ. ಇಂಡಿ ತಾಲೂಕು ಮತ್ತು ಹಾವೇರಿ ತಾಲೂಕುಗಳಲ್ಲಿ ಕರ್ಜಗಿ ಹೆಸರಿನ ಗ್ರಾಮಗಳಿವೆ. ಇತ್ತೀಚೆ ಹಾವೇರಿ ತಾಲೂಕಿನ ಕರ್ಜಗಿ ಸಮೀಪದ ಹಿರೇಹಳ್ಳಿಯಲ್ಲಿ ಗ್ರಾಮ (ಪ್ರಾಚೀನ ಹೆಸರು ಗೊಟ್ಟಿಗಡಿ)ದಲ್ಲಿ ಲಭಿಸಿದ ಒಂದು ಶಾಸನ[೧೧೨] 'ಅಂಗಜೇಶ್ವರ' ಹೆಸರಿನ ಗ್ರಾಮದೇವತೆಯನ್ನು ಉಲ್ಲೇಖಿಸುತ್ತದೆ. ಹೀಗಾಗಿ ಈ ಶರಣನ ಹೆಸರು ಗಜೇಶ ಮಸಣಯ್ಯನಲ್ಲ, ಅಂಗಜೇಶ ಮಸಣಯ್ಯ; ಈತನ ಊರು ಹಾವೇರಿ ತಾಲೂಕಿನ ಗರ್ಜಗಿಯೆಂದು ಹೇಳಬೇಕಾಗುತ್ತದೆ.

---

* EC.III ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೧೦೯. EC.XI ಜಗಳೂರ ೩೦ ಕಲ್ಲೇದೇವರಪುರ, ಕ್ರಿ.ಶ. ೧೧೭೯

೧೧೦. EC.III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೧೧೧. EC.III-I ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

೧೧೨. KI. IV-10 ಹಿರೇಹಳ್ಳಿ (ಕ.ಭಾ. ೬-೨ ನೋಡಿರಿ)

ಲದ್ದೆ ಸೋಮಣ್ಣ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ

ಬನವಾಸಿಯ ಮಧುಕೇಶ್ವರ ದೇವಾಲಯದ ಶಿಲಾಮಂಟಪದ ಗಗ್ಗರಿ ಕಲ್ಲಿನಲ್ಲಿ ಕೆತ್ತಿದ ಶರಣರ ವಿಗ್ರಹಗಳ ಕೆಳಗೆ ಈ ಹೆಸರುಗಳನ್ನು ಬರೆಯಲಾಗಿದೆ.[೧೧೩]

ಅಮುಗಿದೇವ

ಸಿದ್ಧರಾಮನಿಂದ ಗೌರವಿಸಲ್ಪಟ್ಟ ಅಮುಗಿದೇವನೊಬ್ಬ ಸುಪ್ರಸಿದ್ಧ ಶರಣ. ಈತನ ಹೆಸರಿನ ದೇವಾಲಯ ಮತ್ತು ಶಾಸನಗಳು ಪುಳಜೆ ಗ್ರಾಮದಲ್ಲಿ ಲಭಿಸಿವೆ.

"........ಏವಂ ಭೂತೋ ಮಹಾಲಿಂಗೋ । ಪ್ರತ್ಯಕ್ಷಃ ಸಮಜಾಯತ ॥

ತತ್ಪಾದಪಂಕಜಭೃಂಗೋ । ಮುನಿವತ್ಪೂಜಿತೋ ಯತಿಃ ।

ಶಿವಾಚಾರೈಕನಿರತೋ । ಲಿಂಗಕ್ಯೋ ಲಿಂಗವೇದಿಕಃ ॥

ಏತಚ್ಚಿತ್ರ ಗುಣೈರ್ಯುಕ್ತೋ । ಅಮ್ಮಿದೇವೋ ಮಹಾಮತಿಃ ।

ಚಕಾರ ಶಾಸನಂ ಸಮ್ಯಕ್ । ಗದ್ಯಪದ್ಯಸಮನ್ವಿತಂ ॥

ಸ್ವಸ್ತಿ ಸಮಸ್ತಭುವನಸ್ತುತ । ಸಮಗ್ರ ಜಗತೀತಳಖ್ಯಾತ । ಸಮಸ್ತಜನ ಸಕಾರುಣ್ಯ । ವರದಾಭಯಹಸ್ತ । ಸಮಸ್ತಗುಣಗಣನಿಳಯ । ಕಾಮಕ್ರೋಧಲೋಭಮೋಹಮದಮಾಚ್ಛರ್ಯ ದುರಿತಕುಳದೂರ । ಮಾಹೇಶ್ವರಗಣಕುಲಾನ್ವಯದಿವಾಕರ । ಅನಾದಿಸಂಸಿದ್ಧಪ್ರಸಿದ್ಧನ । ಸಾಸಿದ್ಧ ಕುಲಾನ್ವಯಾರ್ಣವ । ಪ್ರವರ್ದ್ಧನ ಸುಧಾಕರ । ಸರ್ವ್ವಜ್ಜೀವ ದಯಾಪರ । ಸರಣಾಗತ ಕರ್ಮನಿರ್ಮೂಳನ । ನಗಣ್ಯಪುಣ್ಯಮೂರ್ತಿ । ಸಕಳಭೂತ ಚೇತ ಚೈತನ್ಯ ಸ್ವರೂಪ । ನಿತ್ಯನಿರಂಜನ ಪ್ರಭಾವಪರಿಪೂರ್ಣ ಸದುದರುಶನ ಸಮೂ(ಮಾ ?)ಹಿತ। ದೂರಸ್ರವಣ ದೂರದರುಶನ । ಜ್ಞಾನಸಂಪನ್ನ ಅಣಿಮಾದ್ಯಷ್ಟಗುಣಪರಿಪೂರ್ಣ। ಘೂರ್ಣಿತಾರ್ಣವ ಆಚಾರಕುಳ ಕುಮುದಿನಿ ಸರಶ್ಚಂದ್ರ ಹೊಂಗೆ ಹೆಂಗೆ ಮಂಗೆ ನಿರಪೇಕ್ಷಿತ ಶರೀರ । ಅಜ್ಞಾನಾಂಕುಶ । ಭಕ್ತಜನಚಿಂತಾಮಣಿ ಗುರುಚರಣಸ್ಮರಣ । ಪರಿಣತಾಂತಃಕರಣ ಸ್ವರೂಪ । ವೀರನಾಗರಸಲಬ್ಧವರಪ್ರಸಾದ । ಶ್ರೀಸಿದ್ಧ ಸೋಮನಾಥದೇವ ಶ್ರೀಪಾದಪಂಕಜ ಭ್ರಮರ । ಲಿಂಗೈಕದೇಹಿ । ತೇಜೋನಿಧಿಸರಣಸಂತಾನ ಶ್ರೀ ಅಮ್ಮುಗಿದೇವರಸರ್ಗೆ। .... (ಪೂರ್ಣಜಾಗ್ರಾಮದ ಮಹಾಜನರು ದತ್ತಿ ಬಿಟ್ಟ ಉಲ್ಲೇಖವಿದೆ). .... ಸ್ವಸ್ತಿ ಸಮಸ್ತಭುವನಭುವನಾಶ್ರಯ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರ.... ಪ್ರತಾಪಚಕ್ರವರ್ತಿ ಶ್ರೀ ಸಿಂಘಣದೇವರಸರು ಸರ್ವಸಿದ್ಧಾರ್ಥಿಸಂವತ್ಸರದ ಮಾಘ ಶು. ೧೧ ಸೋಮವಾರ ವ್ಯತೀಪಾತದಂದು ಪೂರ್ಣಜೆಗೆ ಬಂದಲ್ಲಿ ದೇವತಾರ್ಚನಾ ಸಮಯದಲು ಶ್ರೀಸ್ವಯಂಭುಸಿದ್ಧಸೋಮನಾಥದೇವರ್ಗೆಂದಾಯಿಥ್ಥೆಯವನು ಸರ್ವನಮಸ್ಯವಾಗಿ ಅಮ್ಮುಗಿದೇವರಸರ್ಗೆ ಅಕರಪರಿಹಾರವಾಗಿ ಧಾರಾಪೂರ್ವಕಂ ಮಾಡಿಕೊಟ್ಟರು..."[೧೧೪]

---

೧೧೩. ವಿಭೂತಿ ಪು. ೨೭೪, (ಕ.ಭಾ. ೬-೩, ಮತ್ತು ೭-೧ ನೋಡಿರಿ)

೧೧೪. ಶಿವಾ. ೯-೬ ಮತ್ತು ೧೭-೧ (ಕ್ರಿ.ಶ. ಸು. ೧೨೦೦).

ಪೂರ್ಣಜಾ ಗ್ರಾಮದ ಮಹಾಜನಗಳಿಂದ ಮತ್ತು ಯಾದವಚಕ್ರವರ್ತಿ ಸಿಂಘಣನಿಂದ, ಹೀಗೆ ಎರಡು ದತ್ತಿಗಳನ್ನು ಪಡೆದಿದ್ದಾನೆ ಅಮ್ಮುಗಿದೇವ. ಇವುಗಳಲ್ಲಿ ನೀಳವಾಗಿ ಹಬ್ಬಿನಿಂತ ಮೊದಲನೆಯ ದತ್ತಿ ಅಮ್ಮುಗಿದೇವನ ವಿವರ ವ್ಯಕ್ತಿಚಿತ್ರವನ್ನು, ಎರಡನೆಯ ದತ್ತಿ ಆತನ ಯಾದವ ರಾಜಮಾನ್ಯತೆಯನ್ನು ವ್ಯಕ್ತಗೊಳಿಸುತ್ತವೆ. ಇಲ್ಲಿಯ ಮುನಿವತ್ ಪೂಜಿತೋಯತಿಃ, ಶಿವಾಚಾರ್ಯೈಕನಿರತಃ, ದೂರಶ್ರವಣ ದೂರ ದರುಶನ ಜ್ಞಾನಸಂಪನ್ನ, ಅಣಿಮಾದ್ಯಷ್ಟ ಗುಣಪರಿಪೂರ್ಣ, ಮಾಹೇಶ್ವರಗಣಕುಲಾನ್ವಯ ದಿವಾಕರ, ಶರಣಸಂತಾನ, ಸಿದ್ಧಕುಲಾರ್ಣವ ಪ್ರವರ್ಧನಸುಧಾಕರ–ಎಂಬಿವು ಅಮ್ಮುಗಿದೇವನ ವ್ಯಕ್ತಿತ್ವವನ್ನು ಸ್ಪಷ್ಟಪಡಿಸುವ ಸೂತ್ರರೂಪದ ವಿಶೇಷಣಗಳಾಗಿವೆ.

ಈ ದತ್ತಿಗಳಲ್ಲದೆ ಸಿಂಘಣನ ಮಹಾಪ್ರಧಾನರಾದ ಶ್ರೀಮನುಮಹಾಮಂಡಳೇಶ್ವರಂ ಸಾಹಸೋತ್ತುಂಗ ಭುಜಬಳಬೀಮ ವಿಕ್ರಮಾದಿತ್ಯದೇವರಸ, ಶ್ರೀಮನುಮಹಾಪ್ರಧಾನಂ ಸಿಹೆಯ ಸಾಹಣಿ, ಶ್ರೀಮನುಮಹಾಪಸಾಯಿತಂ ಬೇಂಟೆಕಾರ ತಿಪುರೆಯ ನಾಯಕ, ಶ್ರೀಮತು ರಾಯಸೆಟ್ಟಿ, ಗಂಡಭೇರುಂಡು ಜೋಯಿಸೆಟ್ಟಿ, ಶ್ರೀಮನುಮಹಾಪ್ರಧಾನ ಮನ್ನೆಯ ಬೇಂಟೆಕಾರ ಇಸಯ್ಯನಾಯಕ, ಶ್ರೀ ವಾಮನನಾಯಕ, ಶ್ರೀಮತ್ ಲಹಿದೇವನಾಯಕ, ತಮ್ಮಯ್ಯನಾಯಕ ಮೊದಲಾದವರು ವೀರನಾಗರಸ ದೇವಾಲಯ ಮತ್ತು ಸೋಮನಾಥದೇವಾಲಯಗಳಿಗೂ ಅಮ್ಮುಗಿದೇವನಿಗೂ ದತ್ತಿ ಬಿಟ್ಟ ಉಲ್ಲೇಖಗಳು ಈ ಶಾಸನದಲ್ಲಿವೆ.

ಈ ಶಾಸನದ ಕಾಲ ಕ್ರಿ.ಶ. ಸು. ೧೨೦೦ ಇದ್ದುದರಿಂದ ಕಲ್ಯಾಣಕ್ರಾಂತಿಯ ತರುವಾಯವೂ ಬದುಕಿದ ಅಮ್ಮುಗಿದೇವನು, ಪುಳಜೆಯಲ್ಲಿ ನಿಂತು ವೀರಶೈವಧರ್ಮ ದೀವಿಗೆಯನ್ನು ಬೆಳಗಿಸಿದನೆನ್ನಬಹುದು.[೧೧೫]

❖❖

---

೧೧೪. ಈ ಶರಣನ ಪರ್ಯಾಯನಾಮವಾದ ಅಮೋಘಸಿದ್ಧ ಹೆಸರಿನ ದೇವಾಲಯಗಳು ಅಲ್ಲಲ್ಲಿ ಇದ್ದು, ಕುರುಬರು ವಿಶೇಷ ನಡೆದುಕೊಳ್ಳುತ್ತಾರೆ.

ಬಸವೋತ್ತರಯುಗ

"ಊರು ಕೆಟ್ಟು ಸೂಱೆಯಾಡುವಾಗ ಆರಿಗಾರೂ ಇಲ್ಲ,
ಬಸವಣ್ಣ ಸಂಗಮಕ್ಕೆ, ಚೆನ್ನಬಸವಣ್ಣ ಉಳುವೆಗೆ, ಪ್ರಭು ಕದಳಿಗೆ,
ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ತಮ್ಮ ಲಕ್ಷ್ಯಭಾವಕ್ಕೆ ಮುಕ್ತಿಯನೈದಿಹರು"[೧]

ಕಲ್ಯಾಣದಲ್ಲಿ ಸಂಭವಿಸಿದ ಅನಿರೀಕ್ಷಿತ ವಿಪ್ಲವ ಕಾರಣವಾಗಿ ಶರಣರಿಂದ ರೂಪಗೊಳ್ಳುತ್ತಿದ್ದ ವೀರಶೈವ ಕೆರೆಯೊಡೆದುದು ಒಂದು ದೃಷ್ಟಿಯಿಂದ ಹಾನಿ ಎನಿಸಿದರೂ, ಇನ್ನೊಂದು ದೃಷ್ಟಿಯಿಂದ ಆ ಜಲ ಹತ್ತೂ ದಿಕ್ಕಿಗೆ ಹರಿದುಹಂಚಿಹೋಗಿ ವೀರಶೈವಕ್ಕೆ ವ್ಯಾಪ್ತಿಯೊದಗಿತೆಂದೇ ಹೇಳಬಹುದು. ಈ ಸಮಯದಲ್ಲಿ ಶೈವಮತಗಳು ವೀರಶೈವದಲ್ಲಿ ವಿಲೀನಗೊಳ್ಳುವುದರ ಜೊತೆಗೆ, ವೀರಶೈವಕ್ಕೂ ಶೈವದ ಸ್ಪರ್ಶ ಒದಗಿತು. ಎರಡರ ಮಧ್ಯದ ಅಂತರ ಕ್ರಮೇಣ ಕರಗುತ್ತ ನಡೆಯಿತು. ಹೀಗಾಗಿ ಕೆಲವು ಕಾಳಾಮುಖ ಪಾಶುಪತರೂ ವೀರಶೈವರೆಂಬ ಭಾವನೆಯನ್ನು ತರುವಾಯದ ಶಿವಕವಿಗಳು ತಳೆದಂತಿದೆ. ಶಿವತತ್ವಚಿಂತಾಮಣಿ, ವೀರಶೈವಾಮೃತ ಮಹಾಪುರಾಣಗಳಲ್ಲಿ ವೀರಶೈವರ ಜೊತೆ ಕೆಲವು ಶೈವರೂ ಸ್ಥಾನಪಡೆದುದು ಇದಕ್ಕೆ ನಿದರ್ಶನ.

ಕಲ್ಯಾಣಕ್ರಾಂತಿಯ ತರುವಾಯ ಆಂಧ್ರಪ್ರದೇಶದ ಓರಂಗಲ್ಲು ಶ್ರೀಶೈಲ ಕರ್ನಾಟಕದ ದ್ವಾರಸಮುದ್ರ ಹಂಪೆ ಎಡೆಯೂರುಗಳು ವೀರಶೈವದ ಕೇಂದ್ರಗಳಾದವು. ಈ ಕೇಂದ್ರಗಳ ವಲಯದಲ್ಲಿ ಮತ್ತು ದೇಶದ ಬೇರೆ ಬೇರೆ ಭಾಗಗಳಲ್ಲಿ ಬಾಳಿದ ಶರಣರನ್ನು ಗುರುತಿಸಲು ಶಿವತತ್ವಚಿಂತಾಮಣಿ, ವೀರಶೈವಾಮೃತ ಮಹಾಪುರಾಣ ಮತ್ತು ಗುರುರಾಜಚಾರಿತ್ರಗಳು ದೊಡ್ಡ ನೆರವು ನೀಡುತ್ತವೆ. ಈ ಕಾವ್ಯಗಳ ಬಲದಿಂದ ಬಸವೋತ್ತರಕಾಲದ ಶಾಸನೋಕ್ತ ಶರಣರನ್ನು ಹೀಗೆ ಗುರುತಿಸಬಹುದು:

ಕುರುಗೋಡ ರಾಚಮಲ್ಲ

ಬಲ್ಲಕುಂದೆ ನಾಡು, ಅಂದರೆ ಈಗಿನ ಬಳ್ಳಾರಿ ಜಿಲ್ಲೆಯ ಬಹುಭಾಗವನ್ನಾಳಿದ ಕುರುಗೋಡ ಸಿಂದರು ನಿಷ್ಠೆಯ ಶಿವೋಪಾಸಕರು. ಇವರಲ್ಲಿ ರಾಚಮಲ್ಲನೊಬ್ಬ ಪ್ರಸಿದ್ಧ ಶರಣ. ಕುಮಾರಪದ್ಮರಸನ ಸಾನಂದಚರಿತ್ರೆಯು ಲಿಂಗೈಕ್ಯರಾಗಿ ಶಿವನ ಸಭೆಯಲ್ಲಿದ್ದ ಸಿದ್ಧರಾಮ ಏಕಾಂತದ ರಾಮಯ್ಯ ಅಲ್ಲಮಪ್ರಭು ಬಸವೇಶ್ವರ ಮೊದಲಾದ ಶರಣರ ಜೊತೆಗೆ 'ಕುರುಗೋಡನೃಪ ರಾಜಮಲ್ಲ'ನನ್ನು ಹೆಸರಿಸಿದುದೂ ಇದನ್ನು ಪುಷ್ಟಿಸುತ್ತದೆ. ಈತನು 'ಶಿವೈಕಚೂಡಾಮಣಿ' 'ಅರ್ಚಿತಶಿವಪಾದಂ'

---

೧. ಗೂಳೂರ ಶೂ. ಸಂ. ಪು. ೨೦೦.

'ಪಾರ್ಬ್ಬತೀಶಾಂಘ್ರಿನಿರ್ಭರಭಕ್ತಂ' ಎಂದು ಪ್ರಖ್ಯಾತನಾದ ಮೊದಲನೆಯ ರಾಚಮಲ್ಲನ ಮೊಮ್ಮಗನೆಂದು ಪಂಡಿತರ ಅಭಿಪ್ರಾಯ. ವೀರಶೈವಾಮೃತಮಹಾಪುರಾಣ "ಬೇಗೆಯೊಳು ಲಿಂಗಮಂ ನುಂಗಿಯುಗುಳುತ್ತಲನುರಾಗಿಸಿದ ಕುರುಗೋಡ ರಾಜಮಲ್ಲಯ್ಯಂಗಳ್"[೩] ಎಂದು ಈತನನ್ನು ಕೀರ್ತಿಸಿದೆ. ಈ ರಾಚಮಲ್ಲನ (ಕ್ರಿ.ಶ. ೧೧೮೧-೧೧೮೪) ವಿಷಯ ಒಂದು ಶಾಸನದಲ್ಲಿ[೪] ಹೀಗೆ ಬರುತ್ತದೆ:

"ಪೊಡವಿಯ ಸಮಸ್ತಭಕ್ತರ ।
ನಡುವೆ ಮೃಡಂ ಮೆಚ್ಚಿ ನಿಚ್ಚ ವರಮಂ ಕುಡಲಿ ।
ರ್ಮಡಿ ರಾಜಮಲ್ಲದೇವಂ ।
ಪಡೆದಂ ನಿತ್ಯಪ್ರಸಾದ ರಾಜ್ಯಶ್ರೀಯಂ ॥

ಭಕ್ತರಂ ಪಿರಿದು ಮನ್ನಿಸಲೀಶರಂ ವರದನಾಗಲ್ ರಾಜ್ಯಮಂ ತಾಳ್ದಿ ವಿಸ್ತರಿಸುತ್ತೊಪ್ಪಿರೆ, ದೇವರೊಂದು ದಿವಸಂ ಪ್ರತ್ಯಕ್ಷದಿಂ ಬರ್ಪುದುಂ, ರಾಚಮಲ್ಲರಸಂ ಭೋಂಕನೆ ಕಂಡು ಪೊಡೆವಟ್ಟಾನಂದದಿಂ.... ಶಿವಲಿಂಗಾರ್ಚನಂ ಮಾಡಿ ಶರೀರಂಬೆರಸುತ್ತುಂಗಾಶ್ವ ಚಂಚಚ್ಚಮರರು ಹಸಿತಛತ್ರಚಿಹ್ನಾನ್ವಿತಂ ಶಂಕರನೊಳ್ ಪೊರ್ದಿದಂ."

ರಾಜ್ಯ ಮತ್ತು ಭಕ್ತಿಸಾಮ್ರಾಜ್ಯಗಳನ್ನು ಸಮಸಮವಾಗಿ ಪರಿಪಾಲಿಸುತ್ತಿದ್ದ ರಾಚಮಲ್ಲನೊಬ್ಬ ರಾಜಯೋಗಿ. ಶಿವನನ್ನು ಸಾಕ್ಷಾತ್ಕರಿಸಿಕೊಂಡು ಅವನಿಂದ 'ನಿಚ್ಚ ವರಮಂ' ಪಡೆದ ಮಹಾಶಿವಭಕ್ತ. ಸಾಕಾರರೂಪದಲ್ಲಿ ಬಂದ ಶಿವನನ್ನು ಅರ್ಚಿಸಿ "ಶರೀರಂ ಬೆರಸಿ" ಚೇರಮನಂತೆ ಅಶ್ವಾರೋಹಿಯಾಗಿ ಕೈಲಾಸಕ್ಕೆ ಹೋದ ಈ ಶಿವಶರಣ, ಹರಿಹರನ ರಗಳೆಗೆ ವಸ್ತುವಾಗಬಲ್ಲ ವ್ಯಕ್ತಿ.

ಮೂರುಜಾವಿದೇವರು

ಗುಬ್ಬಿಯ ಮಲ್ಲಣಾರ್ಯನು ತನ್ನ ವೀರಶೈವಾಮೃತಮಹಾಪುರಾಣದಲ್ಲಿ ಪಾಲ್ಕುರಿಕೆ ಸೋಮನ ಬಸವಪುರಾಣದ ಕಥೆಗಳನ್ನು ಸಂಗ್ರಹಿಸಿದ ತರುವಾಯ

ಮತ್ತೆ ಬಸವೇಶನ ಕೆಲವು ಪವಾಡಂಗಳಂ ।
ತತ್ತತ್ಪುರಾತನರ ಸುಪ್ರಸಂಗಂಗಳಂ ।
ಬಿತ್ತರಿಸಿದಂ ಹಲಗೆಯಾಚಾರ್ಯನಕ್ಕರಿಂ ಕೆಂಚವೀರಾಹ್ವಯಂಗೆ ॥[೫]

ಎಂಬ ಪೀಠಿಕೆ ಹಾಕಿಕೊಂಡು ಕೊಂಡಗುಳಿಕೇಶಿರಾಜ ಬಸವಣ್ಣ ಮೊದಲುಗೊಂಡು ಹದಿಮೂರನೆಯ ಶತಮಾನದ ಕುರುಗೋಡ ರಾಚಮಲ್ಲ ಮೊದಲಾದ ಶರಣರ ಚರಿತ್ರೆಯನ್ನು ಹೇಳುತ್ತಾನೆ. ಈ ಪ್ರಸಂಗದಲ್ಲಿ

---

೨. ಸಾನಂದ ಚರಿತ್ರೆಯ ಕೊನೆಯ ಸಂಧಿ.
೩. ವೀ.ಮ.ಪು. ೮-೪-೩೫.
೪. ಸಿ.ಪು. ಮುನ್ನುಡಿ, XX
೫. ವೀ.ಮ.ಪು. ೮-೮-ಪಲ್ಲವಿ.

ಉರಿಯೊಳಗೆ ಬೆಂದ ಕೈಕಾಲ್ಗಳಂ ಪಡದು ಜೈ ।
ನರು ನೋಡೆ ಮೇಲಕಡರಿಸಿ ರವಿಯ ರಾಮಯನ ।
ಶಿರವನೊಲವಿಂ ಪಡೆದ ಮೂರುಜಾವದ ದೇವರ್...॥[೬]

ಎಂಬ ಉಲ್ಲೇಖ ಬರುತ್ತದೆ. ಸಾನಂದಚರಿತ್ರೆ (೯-೬೮)ಯಲ್ಲಿಯೂ ಈ ಹೆಸರು ಬರುತ್ತದೆ. ಶಾಸನಗಳಲ್ಲಿ ಈ ಹೆಸರಿನ ಕೆಲವು ಶಿವಭಕ್ತರ ಉಲ್ಲೇಖ ಹೀಗೆ ಬಂದಿದೆ:

ಹಿರೇಮುಗಲಗೇರಿ ಶಾಸನ[೭] (ಕ್ರಿ.ಶ. ೧೦೫೯): ಬಳ್ಳಾರಿ ಜಿಲ್ಲೆಯ ಹಿರೇಮಗಲಗೇರಿ ಶಾಸನದಲ್ಲಿ ಒಬ್ಬ ಮೂಱುಜಾವಿದೇವನ ವಿಷಯ ಹೀಗೆ ಬರುತ್ತದೆ:

೯. .... XXXXXXXXXXXXXX .... ಶ್ರೀಮನ್ಮ
೧೦. ಹಾಮಣ್ಡಳೇಶ್ವರಂ ಸಿಂಗಣದೇವರ್ ಉಚ್ಚಂಗಿಮೂವತ್ತುಮಸೊಳ್ಸೆXXXX
೧೧. XXXಮುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನೆಯಿಂದಾಳುತ್ತಮುಚ್ಚಂಗಿಯ ಕೋಟೆಯಾ
೧೨. ಬ್ದಿ ಸಕವರ್ಷ ೯೮೧ನೆಯ ವಿಕಾರಿಸಂವತ್ಸರದ ಶ್ರಾಹೆಯ ಶ್ರಾವಣದ ಪುಣ್ಣಮೆ ಮಂ
೧೩. ಗಳವಾರದಂದು ಸಿಂಘಣ ಸಂಕ್ರಾನ್ತಿ ಸೋಮಗ್ರಹಣನಿಮಿತ್ತದಿಂ ಮೇಗಣಗೆಱೆಯ ಶ್ವಯಂಭುಕ
೧೪. XXನಿವೇದ್ಯಕ್ಕಂ ಧೂಪಕ್ಕಂ ಮಟದ ಶತ್ರಕಮೆನ್ದು ಸ್ವಯಂಭು ತ್ರಿಕುಟೇಶ
೧೫. (ರ)ದೇವರ ಮಟದಾಚಾರ್ಯ್ಯರ್ ಆರಿಯದೇವXXಷ್ಯರ್ ಮೂಱುಜಾವಿಪಣ್ಡಿತರ ಕಾಲಂ ಕರ್ಚಿ
೧೬. ಧಾರಾಪೂರ್ವಕಂ ಮಾಡಿ ಉಚ್ಚಂಗಿಮೂವತ್ತರ ಬಳಿಯ ಕಾಡವಾರದ ಪಳ್ಳಿಯ ಬಡಗಣಮXXXX
೧೭. ಟ್ಟಿದ ನೀರ್ವ್ವಯೆಲ್ಲಮಂ...... (ಕೊಟ್ಟ ವಿಷಯವಿದೆ.)

ಈ ಶಾಸನದ ಮೂರುಜಾವಿಪಂಡಿತದೇವರು ತ್ರಿಕೊಟೇಶ್ವರದೇವರ ಮಠದಾಚಾರ್ಯ ಮತ್ತು ಆರಿಯದೇವರ ಶಿಷ್ಯ. ನಕುಲೀಶಪಾತುಪತದವನಾಗಿರಬಹುದಾದ ಈತನ ಕಾಲ ಕ್ರಿ.ಶ. ೧೦೫೯.

ರಟ್ಟಿಹಳ್ಳಿ ಶಾಸನ[೮] (ಕ್ರಿ.ಶ. ೧೨೩೮): ಧಾರವಾಡ ಜಿಲ್ಲೆಯ ರಟ್ಟಿಹಳ್ಳಿ ಗ್ರಾಮದ ಕದಂಬೇಶ್ವರ ದೇವಾಲಯದಲ್ಲಿ ಈ ಹೆಸರನ್ನೊಳಗೊಂಡ ಒಂದು ಸುದೀರ್ಘಶಾಸನ ಹೀಗಿದೆ:

ಶ್ರೀ ಗೌರೀನಯನೋತ್ಪಳ ।
ರಾಗಸುಧಾರ್ಣವ ಸುಧಾಕರಂ ಹರನು ।
ದ್ಭೋಗನಿಧಿ ಹೊಂನಬಂಮಂ ।
ಗೀಗೆ ಮನೋಮುದದೆ ವಾಂಛಿತಾರ್ತ್ಥೋತ್ಕರಮಂ ॥

(ಯಾದವ ರಾಜವಂಶಾವಳಿ, ಎರಡನೆಯ ಸಿಂಹಣನ ವರೆಗೆ)

---

೬. ವೀ.ಮ.ಪು. ೮-೪-೩೧.
೭. sII. ix-i-೧೨೪ ಹಿರೇಮಗಲಗೇರಿ, ಕ್ರಿ.ಶ. ೧೦೫೯
೮. KI. IV. No. 44

ಶ್ರೀ ರಾಜಂ ಕವಿಮೌಳಿಪಾದಯುಗಬ್ರಿತ್ರೀ ಹೊಂನಬಂಮಂಗೆ ಕೂ ।
ರ್ತು ರಾಜೇಶ್ವರನೀಗೆ ವೀರಸಿರಿಯಂ ಶ್ರೀ ಮಲ್ಲಿನಾಥೇಶ್ವರಂ ॥
ಕಾರುಣ್ಯಪ್ರಿಯದಿಂದೆ ವೂರ್ಜಿತಸುಖಶ್ರೀಯಂ ಮನೋರಾಗದಿಂ ।
ಗೌರೀಶಂ ಕಡಬೇಶ್ವರಂ ನಿಜಗುಣಶ್ರೀಯಾಯುಮಾರೋಗ್ಯಮಂ ॥

ಪರಮನುರಾಗಮಂ ಪರಮತೇಜವನುನ್ನತಮಪ್ಪ ಲಕ್ಷ್ಮಿ್ರಯಂ ।
ಸುರುಚಿರವಾಣಿಯಂ ಸುಕರಭಕ್ತಿಯನಿತ್ತರು ಹೊಂಬನಬಂಮಗಾ ॥
ದರದೊಳೆಯಬ್ಜನಬ್ಜಸಖನಬುಜವಿಳೋಚನನಬುಜಸಂಭವಂ ।
ಹರುಷದೊಳಬುಜಶೇಖರನು ಯಿನ್ತಿವರುಂ ಮುದದಿಂದವರ್ತ್ತಿಯಂ ॥

(ಯಾದವ ರಾಜವಂಶಾವಳಿ, ಸಿಂಹಣIIನ ಪರಾಕ್ರಮವರ್ಣನೆ)

ಕೊಂಕಣಚಕ್ರಿ ರಾಯಬಲದಂಡಧರಂ ಪ್ರಭುವಾರ್ಯಮಲ್ಲನಾ ।
ತೆಂಕಣದೇಶಮಂ ಪಡೆದು ಸಿಂಹಣನಿಂ ಬೆಸನಾಗಿ ಪೋಗಿ ನಿಃ ।
ಶಂಕದಿ ನಾರಸಿಂಹನೃಪನಗ್ಗದ ದೇಶವನಾತನೇಱುತಿಪ್ಪಂ ।
ಕದ ಬಿಂಕದಾನೆ ಹದಿನಾಲ್ಕನೆ ತಂದನುವಾರ್ಯ್ಯಶೌರ್ಯದಿಂ ॥

ಕ್ಷಾರಸಮುದ್ರಮುಂ ಕರತಳಕ್ಕೆಸದಿರ್ದುದು ಕುಂಭಜಂಗೆಯಾ ।
ಕ್ಷೀರಸಮುದ್ರಮುಂ ಶಯನಕಾದುದದೊಂದು ಜನಾರ್ದ್ಧನಂಗೆ ಸಂ ।
ಸಾರಸಮುದ್ರಮುಂ ಕಯ್ಗೆದಂದುದದಂದು ಶುಕಂಗೆಯಿಂದದೀ ।
ದೋರಸಮುದ್ರಮುಂ ಕಯಿಗೆವಂದುದು[ದಾ]ರಿಯ ಮಲ್ಲಿಸೆಟ್ಟಿಯಿಂ ॥

ಅರಿಯ ಬೊಮ್ಮನ ಮಗನ ।
ಪ್ಪಾರಿಯ ಮಲ್ಲನ ತನೂಜನಾರಿಯರ್ರೈವಂ ।
ದಿರನುರು ಹೊಂನಬೊಂಮನು ।
ದಾರಂ ಚಾವುಂಡನಚಳನಚಳನುದಾತ್ತಂ ॥

ರಾಜಲದೇವಿ ತಾಯೆನೆ ಮಹಾಮಹಿಮಂ ಗುರು ಸಿದ್ಧಯೋಗಿ ಹ್ರಿ ।
ದ್ರಾಜಿತ ಗುಪ್ತಮಲ್ಲನಧಿದೈವಮೆ ಕಾಮಲದೇವಿ ರಾಣಿ ಕಲು ।
ಮಾರನು ಗುಪ್ತಮಲ್ಲನೆನಲಾ ಮುಳಗುಂದಮೆ ರಾಜಧಾನಿ ವಿ ।
ಭ್ರಾಜಿಸೆ ದಾನಧರ್ಮ್ಮನುದಿತೋದಿತನೂರ್ಜಿತ ಹೊಂನಬೊಂಮಣಂ ॥

ಉರಿಪಿದನಂದು ಭಾಳನಯನಾರ್ಚಿಗಳಿಂ ಪುರಮಂ ಮಹೀಶನಂ ।
ದುರುಪಿದನಾ ತ್ರಿಕೂಟಮನು ಮಾರುತಿ ಪುಂಭದಿನಿಂದ್ರಸೂನುವಂ ।
ದುರುಪಿದನಗ್ನಿ ಬಾಣದೊಳೆ ಖಾಂಡವಮುಂ ವರ ಹೊಂನಬೊಂಮನಿಂ ।
ದುರುಪಿದನೆಯ್ದೆ ಕೋಡಮೊಘೆ ಕೊಪ್ಪಲ ದೋರಸಮುದ್ರ ದುರ್ಗಮಂ ॥

ಸುರಧೇನು ಕಲ್ಪಭೂಜಂ ।
ವರ ಚಿಂತಾಮಣಿಗಳೆಂಬವೇವುವೆನುತ್ತಂ ।

ವರ ಹೊಂನಬೊಂಮನ್ನೊಪ್ಪುವ ।
ಕರವೀವುದು (ಬೇ)ಳ್ವರ್ಗೆ ಬೇಳ್ವರ್ತ್ಥಮಂ ॥

ಜಂಗಮದಿಬ್ಯ ಜಂಗಮದ ನಚ್ಚಿಕೆ ಜಂಗಮ ಮಚ್ಚು ಮತ್ತವಾ ।
ಜಂಗಮದಾಟ ಜಂಗಮದ ನೋಟಮೆ ಜಂಗಮ ಕೂಟವಾಗಳುಂ ।
ಜಂಗಮದಾಸೆ ಜಂಗಮದ ಭಾಸೆಯೊಳ್ಪುದವಿಕಾಸೆ ರಾಜಿಸಿ ।
ಪ್ಪಂ ಗಡನೆಂದು ಬಣ್ಣಿಪುದು ಭೂವಳಿವೆನ್ನಿವೆ ಹೊಂನಬೊಂಮನಂ ॥

ಸರಸಿಜಗರ್ಭನಾಸ್ಯದೊಳೆ ಭಾರತಿ ಕೃಷ್ಣನ ವಕ್ಷದೇಶದೊಳು ।
ಸಿರಿ ಹರನಂಗಭಾಗದೊಳೆ ಪಾರ್ವ್ವತಿ ಚಿತ್ತಜಚಿತ್ತವ್ರಿತ್ತಿಯೊಳು।
ವರ ರತಿಯನ್ತೆ ಭೂತಳದೊಳುಂನತಿಯಿಂ ಸಿವಚಿತ್ತ ಬೊಂಮನೊಳು ।
ಸರಸಿಜವಕ್ತ್ರೆ ವಿಸ್ತೃತಕಳಾನ್ವಿತೆ ಕಾಮಲದೇವಿಯೊಪ್ಪಿದಳುಂ ॥

ಉಮೆಗೆ ಪಿನ(ನಾ)ಕಿಗೆ ಕುಮಾರಂ ।
ಸಮನಿಸಿದಂತೊದವೆ ಹೊಂನಬೊಂಮಣಗಂ ತಾ ।
ಕಮಳಮುಖಿ ಕಾಮಲಾಂಗಿಗೆ ।
ಗುಮಿತಯ್ಯಂ ಕಲ್ಪಭೂಜ ಚಿಂತಾಮಣಿವೊಲುಂ ॥

ಜಳಜಾಕ್ಷಿಯರ ಮನಂಗಳ ।
ನೆಳಕುಳಿಗೊಳ್ವೊಂದು ಸೊಬಗು ಸೊಗಯಿಪ ರೂಪ ।
ಗ್ಗಳವೆನಿಪ ಸೆಟ್ಟಿರೇವಂ ।
ನಳ ನಳಕೂಬರ ಜಯನ್ತ ಕನ್ತುಪ್ರತಿಮಂ ॥

ಹೊಂನಂ ಬೇಡಿದಡಿತ್ತನಿತ್ತನೆನನೀಚಕ್ರಕ್ಕೆ ಸದ್ರಾಗದಿಂ ।
ಮು(ಂ)ನಂ ಕಂನೆಯ ಕಂದನಿಂದು ವಿಳಸದ್ರಾಜಾಂಬಿಕಾನಂದನಂ ।
ಹೊಂನಂ ಬೇಡಿದಡಿತ್ತನಿತ್ತಪನಿವಂ ಶ್ರೀ ಹೊಂನಬಂಮ್ಮಂ ಸುಸಂ ।
ಪಂನಂ ಗುಪ್ತಸುಮಲ್ಲಿಕಾರ್ಜುನ ಪದಾಂಭೋಜಾತ ಸೇವಾಕರಂ ॥

(ಬನವಸೆನಾಡು, ರಟ್ಟಪಳ್ಳಿ, ರಟ್ಟಪಳ್ಳಿಯ ಕದಂಬವಂಶಜರ ವರ್ಣನೆ, ಅವರ ಕಾಳಾಮುಖ ಗುರುಗಳಾದ ವಾಮಶಕ್ತಿ-ರುದ್ರಶಕ್ತಿ-ಶ್ರೀಕಂಠದೇವ-ಕ್ರಿಯಾಶಕ್ತಿ- ಸರ್ವೇಶ್ವರಾಚಾರ್ಯ- ಕಲ್ಯಾಣಶಕ್ತಿಗಳ ವರ್ಣನೆಯ ತರುವಾಯ)

[೯]ತದನು ಸಮುದ್ಭವ ಈಶ್ವರ ।
ಪದಕಮಳಭ್ರಮರನಾಗಮಬುಜಾತಸಮ ।
ಭ್ಯುದಿತ ದಶಶತಮಯೂಖಂ ।
ಮದನೋಗ್ರಂ ಮೂಜುಜಾವಿದೇವಬ್ರತಿಪಂ ॥

---

೯. ಈ ಮೂರು ಪದ್ಯಗಳು ರಟ್ಟಿಹಳ್ಳಿಯ ಇನ್ನೊಂದು ಶಾಸನ (KI. VI. No. 37)ದಲ್ಲಿ ಬರುತ್ತವೆ.

ʻತೊಳಪ ವಶುಧಾಂಶುವನುದರ ।
ಸ್ಥಳದೊಳು ತಳೆದಿಂದುಕಾಂತದಂತಿರೆ ಮ್ರಿಡನು ।
ಜ್ವಳಿಸೆ ನಿಜಹ್ರಿದಯದೊಳಗಾ ।
ಗಳುವೆಸವಂ ಮೂಜುಜಾವಿದೇವ ಮುನೀಂದ್ರಂ ॥

ʻತತ್ಶಿಷ್ಯನಘಕುಜಬ್ರಜ ।
ವಿಶ್ಚೇದನ ಪಟು ಕುಠಾರನುರುತರುನ್ನತ ವಿ ।
ದ್ವಚ್ಛರಣಂ ಲಕುಳೀಶ್ವರ ।
ನಚ್ಚಗುಣಾಂಬೋಧಿ ಗುರುಕುಳಾಂಬುಧಿಚಂದ್ರಂ ॥

ತಛಿಷ್ಯಂ ॥

ಮಾನಸ ವಾಚಕ ಕಾಯಕ ।
ದೇನಸಮಂ ಪೊರ್ದಲೊಲ್ಲದಿಹಪರಸುಖದ ।
ಜ್ಞಾನಮನೆ ಬಿಟ್ಟ ಶಿವನ ।
ಧ್ಯಾನದಿ ನೆಲೆಗೊಂಡ ಮೂಜುಜಾವಿಬ್ರತಿಪಂ ॥

ಸುದತಿಯರ ನಯನಗಣೆಗಳು ।
ಮದನನ ಪೂಗಣೆಗಳಮ್ರಿತಕಿರಣಾ।
ಸ್ಪದದ ಗಣೆ ಬಂದು ತಾಗಲು ।
ಹ್ರಿದಯಂ ಕಲುಹ್ರಿದಯ ಮೂರುಜಾವಿಬ್ರತಿಪಂ ॥

......ಶ್ರೀ ಹೊಂನಬಂಮಿಸೆಟ್ಟಿಯರು ಅಖಿಳಪ್ರಧಾನಪರಿಜನಪರಿವ್ರತರಾಗಿರ್ದ್ದೊಂದು ದಿವಸಂ ಧರ್ಮಕಥಾಪ್ರಸಂಗದೊಳು ವಿಜಯವನಿತಾಕರುಷಣ ಸಮುದ್ಯತರಂತು ಧರ್ಮ್ಮಮಂ ಬಲುವಿಡಿವಿಡಿವ ಬಗೆಯಿಂ ಕಡಂಬರಾಜ್ಯಲಕ್ಷ್ಮಿಭವನಕ್ಕಧಿಷ್ಠಾನವಾಗಿರ್ದ್ದ ಕಡಂಬೇಶ್ವರದೇವರ ಪ್ರವಿಷ್ಟದಲ್ಲಿ ಮಲ್ಲೇಶ್ವರ ರಾಜೇಶ್ವರ ದೇವರ ಪ್ರತಿಷ್ಠೆಯಂ ಮಾಡಿ ಧರ್ಮ್ಮಊರ್ಜಿತಂ ಮಾಡಿಕೊಡಬೇಳ್ಕೆಂದು ಹೊಂನಬಂಮ್ಮಿಸೆಟ್ಟಿಯರು ಪ್ರಾರ್ತ್ಥನಂ ಮಾಡಿದಾಚಾರ್ಯವೀರ್ಯರೆನಿಪ ಮೂರುಜಾವಿದೇವರಿಂದ ವಕ್ಕುವೆಂದುಮನದಂದರಾ ಯತೀಂದ್ರನ ಗುರುಕುಳದ ಮಹಿಮೋಂನತಿ ಯೆಂತೆಂದಡೆ ॥ ಯಮನಿಯಮಸ್ವಾಧ್ಯಾಯಧ್ಯಾನಧಾರಣಮೋನಾನುಷ್ಠಾನ ಜಪ ಸಮಾಧಿಶೀಲಗುಣಸಂಪಂನರುಂ ಗುರುಕುಳಸಮುದ್ಧರಣರುಂ ಸಪ್ತಾಹತ್ತರೀಸ್ಥಾನಾಚಾರ್ಯರುಮಪ್ಪ ಶ್ರೀಮದ್ರಾಜಗುರು ಮಹಾವಾದಿ ಮೂರುಜಾವಿದೇವರಿಗೆ ಸಕವರ್ಷದ ೧೧೬೦ನೆಯ ವಿಳಂಬಿಸಂವತ್ಸರದ ಮಾರ್ಗಶಿರಮಾಸದ ಸೋಮವಾರ ವಿತೀಪಾತ ಅಮಾವಾಸೆ ಸೂರ್ಯಗ್ರಹಣದಂದು ಶ್ರೀಹೊಂನಬಂಮಿಸೆಟ್ಟಿಯರು ಮೂಜುಜಾವಿ ದೇವರ ಗಂಗಾಜಳದಿಂ ಪಾದಪ್ರಕ್ಷಾಳನಂ ಮಾಡಿ... (ದಾನಕೊಟ್ಟರು).

ಈ ಶಾಸನದಲ್ಲಿ ಇಬ್ಬರು ಮೂಜುಜಾವಿಪಂಡಿತರಿರುವರು. ಒಬ್ಬ ಲಕುಳೀಶನ ಶಿಷ್ಯ. ಈತನನ್ನು ಕ್ರಿ.ಶ. ೧೨೩೮ರ ಪ್ರಸ್ತುತ ರಟ್ಟಿಹಳ್ಳಿ ಶಾಸನ ಉಲ್ಲೇಖಿಸುತ್ತದೆ. ಇನ್ನೊಬ್ಬ ಲಕುಳೀಶನ

ಗುರು. ಈತನನ್ನು ಈ ಶಾಸನವಲ್ಲದೆ ಕ್ರಿ.ಶ. ೧೧೫೯ರ ರಟ್ಟಿಹಳ್ಳಿಯ ಬೇರೊಂದು ಶಾಸನ ಉಲ್ಲೇಖಿಸುತ್ತದೆ. ಇಲ್ಲಿ ಒಬ್ಬನ ಕಾಲ ಕ್ರಿ.ಶ. ೧೩ನೆಯ ಶತಮಾನ, ಇನ್ನೊಬ್ಬನದು ೧೨ನೆಯ ಶತಮಾನ. ಮೇಲೆ ಹೇಳಿದ ಹಿರೇಮಗಲಗೇರಿ (ಕ್ರಿ.ಶ. ೧೦೫೯) ಶಾಸನೋಕ್ತ ಮೂಜಿಜಾವಿದೇವನ ಕಾಲವಾದರೋ ೧೧ನೆಯ ಶತಮಾನ. ಹೀಗಾಗಿ ಮೂರುಜಾವಿದೇವ ಹೆಸರಿನ ಈ ಮೂವರೂ ಬೇರೆ ಬೇರೆ. ಮಲ್ಲಣಾರ್ಯನು ಹೇಳಿದುದು ಇವರಲ್ಲಿ ಒಬ್ಬನನ್ನೋ ಬೇರೊಬ್ಬನನ್ನೋ ಸ್ಪಷ್ಟವಾಗುವುದಿಲ್ಲ. ಸಾಲದುದಕ್ಕೆ ಲಕ್ಷ್ಮೇಶ್ವರದ ೧, ಕಲಕೇರಿಯ ೨ ಶಾಸನಗಳಲ್ಲಿ* ಈ ಹೆಸರಿನ ವ್ಯಕ್ತಿ ಕಂಡುಬರುತ್ತಾನೆ.

ರಟ್ಟಿಹಳ್ಳಿ ಶಾಸನದಲ್ಲಿ ಬರುವ ಲಕುಳೀಶನ ಶಿಷ್ಯ ಮೂಜಿಜಾವಿದೇವರಿಗೆ ದಾನ ನೀಡಿದವನು ಆರ್ಯಬೊಮ್ಮನ ಮೊಮ್ಮಗ, ಆರ್ಯಮಲ್ಲ ರಾಜಲದೇವಿಯರ ಮಗ, ರೇವ ಚಾವುಂಡ ಅಚಳರ ಸೋದರ, ಕಾಮಲದೇವಿಯ ಪತಿ ಮತ್ತು ಗುಪ್ತಮಲ್ಲನ ತಂದೆಯಾದ ಹೊನ್ನಬೊಮ್ಮಿಸೆಟ್ಟಿ. ಈ ಶಾಸನದ ಪ್ರಮುಖ ವ್ಯಕ್ತಿಯಾದ ಈತನು ಯಾದವರ ಕೈಕೆಳಗೆ ಮುಳಗುಂದ ನಾಡನ್ನಾಳುವ ಅಧಿಕಾರಿ.[೧೦] ಕೊಡಮೊಘೆ ಕೊಪ್ಪಳ ದ್ವಾರಸಮುದ್ರಗಳನ್ನು ಸುಟ್ಟ ಈ ಪರಾಕ್ರಮಿ ಪರಮಶಿವಭಕ್ತ.[೧೧] "ಮಹಾಮಹಿಮಂ ಗುರು ಸಿದ್ಧಯೋಗಿ ಹೃದ್ರಾಜಿತ ಗುಪ್ತಮಲ್ಲನಧಿದೈವಂ" ಎಂಬ ಮಾತು ಇದಕ್ಕೆ ನಿದರ್ಶನ.[೧೨] ಹೊನ್ನಬೊಮ್ಮನ ಜಂಗಮಭಕ್ತಿಯನ್ನಂತೂ ಈ ಶಾಸನ ಅಪೂರ್ವ ರೀತಿಯಲ್ಲಿ ಉದ್ಘೋಷಿಸುತ್ತದೆ.[೧೩]

ಗುಂಡಬ್ರಹ್ಮಯ್ಯ

ಬಿಜ್ಜಳನನ್ನು ಕೊಂದ ಜಗದೇವ ಮೊಲ್ಲೆಬಮ್ಮಣ್ಣಗಳು ಓರಂಗಲ್ಲು ಪಟ್ಟಣದಲ್ಲಿ ಗುಂಡ ಬ್ರಹ್ಮರೆಂಬ ಹೆಸರಿನ ವ್ಯಕ್ತಿಗಳಾಗಿ ಹುಟ್ಟಿದರು. ಒಮ್ಮೆ ಶಿವನು ಕಾಕತೀಯ ಗಣಪತಿರಾಯನ (ಕ್ರಿ.ಶ. ೧೨೦೦-೧೨೬೦) ಮನೆಯಲ್ಲಿ ಕಳವುಮಾಡಿ ಈ ಗುಂಡ ಬ್ರಹ್ಮರನ್ನು ಮೊರೆಹೊಕ್ಕನು. ಮೊರೆಹೊಕ್ಕವನನ್ನು ಸಂರಕ್ಷಿಸಲು ಹೋಗಿ ಬಸಿದ ಶೂಲವನ್ನೇರಿ ಪ್ರಾಣ ತೆತ್ತರಿವರು. ವೀರಶೈವಪುರಾಣಗಳಲ್ಲಿ ಆನುಷಂಗಿಕವಾಗಿ, ಗುಂಡಬ್ರಹ್ಮಯ್ಯನ ಸುಪ್ವಿ ಎಂಬ ಕೃತಿಯಲ್ಲಿ ಸ್ವತಂತ್ರವಾಗಿ ಇವರ ಚರಿತ್ರೆ ತೋರಿಬರುತ್ತದೆ. ಚತುರ್ಮುಖ ಬೊಮ್ಮರಸನ ಸೌಂದರಪುರಾಣದಲ್ಲಿ ಬರುವ "ವರ ಗುಂಡಬೊಮ್ಮಬಿರುದಾಂತ ತಿಪ್ಪೇಂದ್ರ" ಎಂಬ ಮಾತು ಗುಂಡಬೊಮ್ಮ ಹೆಸರನ್ನ ಮಂದಿನವರು ಬಿರದಾಗಿ ಸ್ವೀಕರಿಸಿದುದಾಗಿ ತಿಳಿಸುತ್ತದೆ. ಹೀಗೆ ಪ್ರಸಿದ್ಧವಾಗಿರುವ ಗುಂಡಬೊಮ್ಮಯ್ಯಗಳ ದೇವಾಲಯ, ವಿಗ್ರಹ, ಉತ್ಸವಗಳು ಅಲ್ಲಲ್ಲಿ ಕಂಡುಬರುತ್ತವೆ. ಗುಂಡೇನಹಳ್ಳಿಯಲ್ಲಿ ಗುಂಡಬ್ರಹ್ಮಯ್ಯಗಳ ದೇವಾಲಯ- ವಿಗ್ರಹ- ಶೂಲಸ್ತಂಭಗಳದ್ದರೆ, ಕೆಲವು ಗ್ರಾಮಗಳಲ್ಲಿ ವಿಗ್ರಹಗಳು ಲಭಿಸುತ್ತವೆ. ಈವರೆಗೆ ಲಭಿಸಿದ ೭ ವಿಗ್ರಹಗಳನ್ನು (ಅ.ಟಿ. ನೋಡಿರಿ) ಶಿಲ್ಪದೃಷ್ಟಿಯಿಂದ[೧೪]

---

* S.I.I. XX No. 198 ಲಕ್ಷ್ಮೇಶ್ವರ (೧೨೨೭) ಮತ್ತು S.I.I. XX No. 228, 332 ಕಲಕೇರಿ,

೧೦. EC.VII ಹೊನ್ನಾಳಿ ೪೩ ಬೆಳಗುತ್ತಿ (ಹೊನ್ನಬೊಮ್ಮನ ಬನವಾಸಿಯ ಆಳಿಕೆ).

೧೧. EC. VIII ಸೊರಬ ೨೭೫ ⎤ ಹೊನ್ನಬೊಮ್ಮನನ್ನು "ಆದಿಗಣಾವತಾರ"
೧೨. EC. VIII ಸೊರಬ ೨೭೬ ⎦ ಎಂದು ಕರೆಯಲಾಗಿದೆ.

೧೩. ಚೌಡದಾನಪುರ ಶಾಸನ (ಶಿವದೇವ ವಿಜಯ. ಅನು.)ದಲ್ಲಿ ಈತನು ಹೆಸರು ಬಂದಿದೆ.

೧೪. ಕರ್ನಾಟಕ ಭಾರತಿ ೬-೪, ೭-೨, ೯-೪, ೧೦-೨, ಗುಂಡಬ್ರಹ್ಮಯ್ಯಗಳ ಚರಿತ್ರೆ ಪುಟ ೨೩. ಗ್ರಾಮೀಣ, ಪು. ೫೪-೭೨. ಇತ್ತೀಚೆ ಇನ್ನೂ ಕೆಲವು ವಿಗ್ರಹಗಳು (ಒಟ್ಟು ೨೩) ಪತ್ತೆಯಾಗಿವೆ. ನೋಡಿ: ಗುಂಡಬ್ರಹ್ಮಯ್ಯಗಳ ಸಾಹಿತ್ಯ–ಡಾ. ಕೆ. ರವೀಂದ್ರನಾಥ (೨೦೦೬)

೧. ಕನ್ನಡ ಸಂಶೋಧನಸಂಸ್ಥೆ (ಹಾವೇರಿ), ಗುಂಡೇನಹಳ್ಳಿ, ಕುಸಕೂರು.

೨. ಚಿತ್ರದುರ್ಗ, ಬನವಾಸಿ, ನೀತಿಗೆರೆ

೩. ಬಳ್ಳಾರಿ

ಎಂದು ವರ್ಗೀಕರಿಸಬಹುದು. ಬನವಸೆಯನ್ನುಳಿದು ಯಾವ ವಿಗ್ರಹಕ್ಕೂ ಬರವಣಿಗೆಯಿಲ್ಲ. ಜೋಡುವಿಗ್ರಹ, ಕೈಯಲ್ಲಿ ಇಷ್ಟಲಿಂಗ, ಶೂಲದ ಮೇಲೆ ಕುಳಿತಿರುವ ಇಲ್ಲವೆ ಶೂಲದ ಮಗ್ಗಲು ನಿಂತಿರುವ ಭಂಗಿ–ಇವುಗಳ ಸ್ವರೂಪ. ಸಾಮಾನ್ಯವಾಗಿ ಈ ವಿಗ್ರಹಗಳು ಬೇಡರ ವಸತಿಯಿದ್ದ ಊರುಗಳಲ್ಲಿ ಸಿಗುವುದರಿಂದಲೂ ಬೇಡರ ರಾಜಧಾನಿಯಾದ ಸುರಪುರದಲ್ಲಿ ಶೂಲದ ಹಬ್ಬವನ್ನು ಆಚರಿಸುತ್ತಿದ್ದುದರಿಂದಲೂ ಈ ಶರಣರು ಮೂಲತಃ ಬೇಡರಿದ್ದು ಆ ಮೇಲೆ ವೀರಶೈವರಾದರೇ? ಎಂಬ ಸಂದೇಹ ಬರುತ್ತದೆ. ಕುಮಾರರಾಮನ ಸಾಂಗತ್ಯದಲ್ಲಿ ಶೂಲದಹಬ್ಬದ ವರ್ಣನೆ ಮತ್ತು ಕುಮಾರರಾಮನು ಓರಂಗಲ್ಲಿನ ಗುಂಡುಬ್ರಹ್ಮಯ್ಯ ದೇವಾಲಯಕ್ಕೆ ಭೆಟ್ಟಿಕೊಟ್ಟ ವಿಷಯಗಳು ಬರುತ್ತವೆ. ಈಗಲೂ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಗ್ರಾಮದಲ್ಲಿಯೂ ಈ ಹಬ್ಬವನ್ನು ಆಚರಿಸುತ್ತಾರೆ, ಬಿಸಿಲು ಮಾರಮ್ಮ ದೇವಿಯ ಎದುರು.

ಯಾದವ ರಾಮಚಂದ್ರ

ಕಲ್ಯಾಣ ಚಾಲುಕ್ಯರ ತರುವಾಯ ಅಧಿಕಾರಕ್ಕೆ ಬಂದ ದೇವಗಿರಿ ಯಾದವರಲ್ಲಿ ರಾಮಚಂದ್ರ ಕೊನೆಯ ಅರಸು. ಈ ಯಾದವರ ಮಂತ್ರಿಗಳೂ ಮಾಂಡಲಿಕರೂ ವೀರಶೈವದ, ಅದರಲ್ಲಿಯೂ ಸಿದ್ಧರಾಮನ ಹೆಸರಿನಲ್ಲಿ ಅನೇಕ ಶಾಸನಪೂರ್ವಕ ದತ್ತಿಗಳನ್ನು ನೀಡಿದ್ದಾರೆ. ಹೀಗೆ ವೀರಶೈವದ ಅಭಿಮಾನಿಗಳಾಗಿದ್ದ ಈ ರಾಜಪರಿವಾರದಲ್ಲಿ ವೀರಶೈವನಾಗಿರಬಹುದಾದ ರಾಮಚಂದ್ರನನ್ನು ಶಿವತತ್ವಚಿಂತಾಮಣಿಯ ಕರ್ತೃ ಲಕ್ಕಣ ದಂಡೇಶನು

ತಾನೊಂದನುಂಡು ಜಂಗಮಕೊಂದನಿಕ್ಕದತಿ।
ಮಾನನಿಧಿ ರಣದೊಳಗೆ ಜೋಡತೊಟ್ಟಶ್ವಮಂ।
ತಾನೇಱಿ ನೆಗಳಿ ಹೊಗಳಿಸಿಕೊಂಬ ಮನ್ನೆಯರ ಮಂಡಳೀಕರ ಗಂಡನು।
ನಾನಾ ಕಳಾರೂಪ ಸೋಮವಂಶದ ರಾಯ।
ಭಾನುಪ್ರಕಾಶನುಂ ದೇವಗಿರಿಯಾಳ್ವನತಿ।
ದಾನಿ ಮನ್ನೆಯ ರಾಮರಸ ಭಕ್ತಿಭಾವಕರ ಚರಣಾಂಬುಜಕ್ಕೆ ಶರಣು।[೧೫]

ಎಂದು ಸ್ತುತಿಸುತ್ತಾನೆ. ಯಾದವ ರಾಮಚಂದ್ರನ "ಜಂಗಮದಾಸೋಹ" ಕೀರ್ತನೆ ಈ ಪದ್ಯದ ವಸ್ತುವಾಗಿದೆ. ಸಿದ್ಧರಾಮನಿಗೆ ಸಂಬಂದಿಸಿದ ಕಟನೂರ ಶಾಸನ ಈತನ ಕಾಲದಲ್ಲಿ ಹುಟ್ಟಿದ್ದು, ಇವನ ಮಿಕ್ಕ ವೀರಶೈವಪರ ಶಾಸನಗಳನ್ನು ಶೋಧಿಸಬೇಕಾಗಿದೆ.

---

೧೫. ಶಿವತತ್ವಚಿಂತಾಮಣಿ ೩೮-೧೩೮.

ಗೋವೆಯ ವಜ್ರರಾಯ

ಕಲ್ಯಾಣಚಾಲುಕ್ಯರ ಮಾಂಡಲಿಕರಾಗಿ ಸುಮಾರು ೩ ಶತಮಾನಗಳ ವರೆಗೆ ಈಗಿನ ಗೋವೆಯ ಪ್ರದೇಶವನ್ನಾಳಿದವರು, ಗೋವೆಯ ಕಂದಬರು. "ಹರಧರಿಣೀ ಪ್ರಸೂತ" ರೆಂದು ಶಿವಮತಮೂಲವನ್ನು ಹೇಳಿಕೊಂಡ ಇವರ ಮನೆದೈವತ ಸೌರಾಷ್ಟ್ರ ಸೋಮೇಶ್ವರ. "ಧರ್ಮಾವತಾರ" ಎಂದು ಶಾಸನಗಳಲ್ಲಿ ಕರೆಯಿಸಿಕೊಂಡ ಈ ಮನೆತನದ ಇಮ್ಮಡಿ ಚಟ್ಟಯದೇವ ಕೊನೆಗೆ ರಾಜ್ಯತ್ಯಾಗಮಾಡಿ ಧರ್ಮರಾಜ್ಯಾಸಕ್ತನಾದನೆಂದು ತಿಳಿದುಬರುತ್ತದೆ. ಇಂಥ ರಾಜಸಂತಾನಕ್ಕೆ ಸಂಬಂಧಿಸಿದವ ವಜ್ರದೇವ (೧೨೧೪-೨೨). ಸಾನಂದಚರಿತೆ ವೀರಶೈವಶರಣರನ್ನು ಉಲ್ಲೇಖಿಸುತ್ತ

ಭೋಗಬಾಚಯ್ಯಂಗಳುಂ ಶಿವ ।
ಯೋಗಿ ಸಾತಯ್ಯಂಗಳುನ್ನತ ।
ಬಾಗುಳಿಯಲುರು ಕೇಶಿರಾಜರು ಜಕ್ಕಿಯರ ಬೊಮ್ಮಂ ॥
ಭೋಗಿ ವರಸಿರಿಶೈಲಮಲ್ಲಂ।
ಚಾಗಿ ಗೋವೆಯವಜ್ರರಾಯ ವಿ ।
ರಾಗಿ ಗಜೇಶನಮಸಣಂ ನಿಜಲಿಂಗಚಿಕ್ಕಯ್ಯಂ॥[೧೬]

ಎಂಬ ಪದ್ಯದಲ್ಲಿ ಗೋವೆಯ ವಜ್ರರಾಯನನ್ನು ಶರಣರ ಸಾಲಿನಲ್ಲಿ ಮನ್ನಿಸಿದೆ. ಶಾಸನಗಳಲ್ಲಿ ಬರುವ "ಕಾದಂಬ ಶಿವಚಿತ್ತ ಶ್ರೀ ವೀರವಜ್ರದೇವ" ಹೆಸರಿಗೆ ಹೊಂದಿಕೊಂಡಿರುವ "ಶಿವಚಿತ್ತ" ಎಂಬ ವಿಶೇಷಣವನ್ನು ಲಕ್ಷಿಸಬೇಕು. ಈತನ ರಾಜಕೀಯ ಕ್ಷೇತ್ರಕ್ಕೆ ಸಂಬಂಧಪಟ್ಟ ಶಾಸನಗಳು ಮನಗುಂಡಿ, ತೇರಗಾವ, ದೊಡ್ಡವಾಡಗಳಲ್ಲಿ ಲಭಿಸುತ್ತಿದ್ದು, (ವೀರ)ಶೈವಕ್ಕೆ ಸಂಬಂಧಪಟ್ಟ ಶಾಸನಗಳನ್ನು ಶೋಧಿಸಬೇಕಾಗಿದೆ. ಈತನ ತಮ್ಮನ ಮಗನಾದ ೩ನೆಯ ಚಟ್ಟಯದೇವನ ಆಳಿಕೆಯಲ್ಲಿ ಸಿದ್ಧರಾಮನಿಗೆ ಸಂಬಂಧಿಸಿದ ೩ ಶಾಸನ (ಬಂಡರಸಿಂಗಿ, ಕಟನೂರ, ಕೊಟಬಾಗಿ)ಗಳು ಲಭಿಸುತ್ತವೆ.[೧೭]

ಪುರಾಣದ ಮಾಯಿದೇವಪಂಡಿತ, ಶಿವರಾತ್ರಿ ಮಾಯಿದೇವ ಗೊಪೆಯ ಶಿವದೇವ, ಶಿವಶರಣ

ಪುಲಿಗೆರೆಯ ಪುರಾಣದ ಮಾಯಿದೇವಪಂಡಿತ, ಶಿಷ್ಯ(?) ಶಿವರಾತ್ರೆಯ ಮಾಯಿದೇವ. ಗೊಪೆಯ ಶಿವದೇವ, ಮಗ ಶಿವಶರಣ-ಈ ನಾಲ್ಕುಜನ ಶರಣರನ್ನೊಳಗೊಂಡ ಗಿರಿಸಿದ್ಧಾಪುರ ಶಾಸನ ಕನ್ನಡ ಕವಿಚರಿತೆಯ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಬಸವೋತ್ತರಯುಗದ ಪ್ರಭಾವಶಾಲಿ ಶರಣರನ್ನು ಉಲ್ಲೇಖಿಸುವ ಇದರ ಮುಖ್ಯಭಾಗ ಹೀಗಿದೆ:

"....ಸ್ವಸ್ತಿ ಶ್ರೀವಿಜಯಾಭ್ಯುದಯ XXX ಸಕವರುಷ ೧೨೦೭ನೆಯ ಪಾರ್ತ್ಥಿವ ಸಂವತ್ಸರದ ಭಾದ್ರಪದ ಬಹುಳ ೧೦ ಆದಿವಾರದಂದು । ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂ ಶ್ರೀ ಹೊ X ಸಣರಾಯ ಭುಜಬಳಚಕ್ರವರ್ತಿ ಶ್ರೀ ವೀರನಾರಸಿಂಹದೇವರಸರು ದೋರಸಮುದ್ರನಗರಿಯಲು

---

೧೬. ಸಾನಂದ ಚರಿತೆ ೧೯-೪೩.

೧೭. 'ಬಸವಯುಗ'ದ ಸಿದ್ಧರಾಮನ ಶಾಸನಗಳನ್ನು ನೋಡಿರಿ.

ಸುಖಸಂಕಥಾವಿನೋದದಿಂ ರಾಜ್ಯಂಗೈಯ್ಯುತ್ತಿರ್ದ್ದ ಸಮಯದಲು ಶ್ರೀಮದನಾದಿಯಗ್ರಹಾರಂ ಶ್ರೀಪ್ರಾಭಂಜನಪುರ XXX ದ ಶ್ರೀಮದಸೇಷಮಹಾಜನಂಗಳು ಶ್ರೀಮತು ಹುಲಿಗೆಱೆಯ ಶ್ರೀರಾ(=ಸೋ?)ಮನಾತXXಮಪ್ಪ ಶಿವರಾತ್ರೆಯ ಮಾಯಿದೇವರಿಗೆ...... XX.........ಸಿದ್ಧಾಯ ಗದ್ಯಾಣಂ......XX........ಬಿಟ್ಟರು.............XX...........XX ....ಅಸೇಷ ಅನುಮತ್ಯದಿಂ ಬರೆದ ಸೇನಬೋವ XX ವಣ್ಣನ ಮಗ ಸೋವಂಣನ ಬರಹXXXX ಪ್ರಾಭಂಜನಪುರ।

ಶಿವಮಸ್ತು........XX....... ಪಾರ್ಥಿವ ಸಂ। ಕಾರ್ತ್ತಿಕ ಸು ೧ ಸೋ ಸಕಲXX ದಾ ಸಂಪಂನರಪ್ಪ ಶ್ರೀ ಶಿವರಾತ್ರೆಯ ಮಾಯಿದೇವರಸರಿಗೆ ಅವರ ಕರುಣದ ಮಕ್ಕಳು ಬಯಿಚಂಣ್ಣ XXXXಂಣ್ಣ ಅಂಕಣ್ಣನವರು ತಮ ಪೂರ್ವದಿವುಳ ಯಥಾ ಪ್ರಾಪ್ತವಹತಂ XX ....XX .... ಆಚಂದ್ರಾರ್ಕ್ಕತಾರಂಬರಂ ಸಲುವಂತಾಗಿXX........... ಧಾರಾಪೂರ್ವ್ವಕವಾಗಿ ಕೊಟ್ಟXX..........

ಶ್ರೀ ಅಂಕನಾಥ ಶ್ರೀ ಮಹಲಿಂಗ ಸಿವಮXXತಾರಂ ಫಾಲ್ಗುಣ ಸು ೮ ಬ್ರಿ ಶಿವರಾತ್ರೆಯ ಮಾಯಿದೇವರಿಗೆ ಗೊಪೆಯ ಶಿವದೇವರ ಮಗ ಶಿವಶರಣXX ಉಡಿಯ ಪತ್ರಕ್ರಮವೆಂತೆಂದಡೆ.... (ಭೂಮಿಯ ಮೇರೆಯ ವಿವರಣೆ ಇದೆ) ....ಯಿಂತೀ ಚತುಸ್ಸೀಮೆಯೊಳಗಣ ಆ ಶಿವಶರಣರು ಗಣಮಾಲೆಯ ಬಳವಂದನವರ ಕಯ್ಯXಕ್ರಯವಾಗಿ ಕೊಂಡ ಹೂದೋಟವನು ಅದಱೊಳಗುಳ್ಳುದೆಲ್ಲವು ಸಹಿತ ಆ ಮಾಯಿದೇವರ ಕಯ್ಯXX ಆ ಶಿವಶಿರಣರು ತತುಕಾಲೋಚಿತ ಕ್ರಮ ದ್ರಬ್ಯ ಗದ್ಯಾಣ ೩ನೂ ಕೊಂಡು ಆ ಶಿವಶರಣXX ಸ್ತ್ರೀಪುತ್ರಗ್ನಾತ್ತಿಸಾಮಂತ ದಾಯಾದ್ಯನುಮತದಿಂ ಪುರಸ್ಸರವಾಗಿ ಸ್ವರುಚಿಯಿಂ ವೊಡಂಬಟ್ಟುXX ರ್ವ್ವಕಂ ಮಾಡಿಕೊಟ್ಟ ಕ್ರಯಪ್ರಮಾಣಪತ್ರXX.... ಯಿಂತಪ್ಪುದಕ್ಕೆ ಸಾಕ್ಷಿಗಳು, ಗಣಮಾಲೆಯ ಬಸವಿದೇವXX ... XX ಶ್ರೀ ಏಕಾಂಬ್ರನಾಥ ಶ್ರೀ ಸಂಗಮದೇವ । ಶ್ರೀ ಮಲ್ಲಿನಾಥ ಇಂತಿದೆಲ್ಲವನು ಆ ಶಿವರಾತ್ರೆಯ ಮಾಯಂಣ್ಣಗಳು ಪತ್ತದ ಮರಿಯಾದೆಯಲು ಹಡದ ಭೂಮಿXX ಶ್ರೀ ಮಹಲಿಂಗದೇವರ ಅಂಗಭೋಗ ರಂಗಭೋಗ ಅಮೃತೋಪಹಾರವು ಶ್ರೀ ವೀರಭದ್ರದೇವರಿಗೆ XX ಡಿ ಕೊಟ್ಟಯಿದಕೆ ಲಾ(=ಆ?) ಮಾಯಣ್ಣಗಳ ಸ್ತ್ರೀ ವುದರಪುತ್ರಪುತ್ರಿಯರು ಕಾರುಣ್ಯದ ಸಿಸುಗಳು XXXದೇವರ ಕಾರುಣ್ಯಪ್ರಸಾದವ ಭೋಗಿಸವೊಲಾವೊಡೆಯರು ಪರರಿಗೆ ಯಿಂನು ಮುಂದೆ ಏನುತ್ವತ್ಯವಾಗಿ XX ಶ್ರೀ ಕಾರ್ಯವ ನಡೆಸಲು ಕಾರುಣ್ಯಪ್ರಸಾದವ ಬಾಗಿಲು ವೊಡೆಯರು....XX....”[೧೮]

ಕ್ರಿ.ಶ. ೧೨೮೫ರ ಈ ಶಾಸನ, ಮೂರು ದತ್ತಿಗಳನ್ನೊಳಗೊಂಡಿದೆ. ತ್ರುಟಿತಸ್ಥಿತಿ ಅಶುದ್ಧಭಾಷೆಗಳಿಂದಾಗಿ ಇದರ ಅರ್ಥ ಸ್ಪಷ್ಟವಾಗುವುದಿಲ್ಲ. ಈ ದತ್ತಿಗಳನ್ನು ಪಡೆದ ವ್ಯಕ್ತಿ ಪುಲಿಗೆರೆಯ ಪುರಾಣದ ಮಾಯಿದೇವಪಂಡಿತರ ಶಿಷ್ಯ(?) ಶಿವರಾತ್ರೆಯ ಮಾಯಿದೇವ. ನೀಡಿದವರು ಪ್ರಾಭಂಜನಪುರದ ಮಹಾಜನರು, ಶಿವರಾತ್ರೆಯ ಮಾಯಿದೇವರ ಕರುಣದ ಮಕ್ಕಳು ಮತ್ತು ಗೊಪೆಯ ಶಿವದೇವನ ಮಗ ಶಿವಶರಣ. ಇವರ ವಿಷಯ ಶಾಸನದಲ್ಲಿ ಹೀಗೆ ಬಂದಿದೆ:

ಪುರಾಣದ ಮಾಯಿದೇವಪಂಡಿತ, ಶಿವರಾತ್ರೆಯ ಮಾಯಿದೇವ: “......ಹುಲಿಗೆಱೆಯ ಶ್ರೀ ರಾ(=ಸೋ)ಮನಾತXಕ್ಷೇತ್ರವಾಗಳುಮಪ್ಪ ಪುರಾಣದ ಮಾಯಿದೇವಪಂಡಿತರ XX ಸಕಳ

---

೧೮. EC.V. ಬೇಲೂರ ೨೨೪ ಗಿರಿಸಿದ್ಧಾಪುರ, ಕ್ರಿ.ಶ. ೧೨೮೫ (Sup).

ನಯಸಂಪಂನರುಮಪ್ಪ ಶಿವರಾತ್ರಿಯ ಮಾಯಿದೇವರಿಗೆ..." ಎಂಬ ತ್ರುಟಿತ ವಾಕ್ಯದಿಂದ ಹುಲಿಗೆರೆಯ ಪುರಾಣದ ಮಾಯಿದೇವಪಂಡಿತರ ಶಿಷ್ಯ ಶಿವರಾತ್ರಿಯ ಮಾಯಿದೇವ ಎಂದು ಊಹಿಸಬಹುದಾಗಿದೆ. ಏಕೋತ್ತರಶತಸ್ಥಲದಲ್ಲಿ ಬರುವ".... ಬಂಕನಾಥದೇವ-ಪುರಾಣದ ಮಾಯಿದೇವಪಂಡಿತ-ಬಂಕಯ್ಯದೇವ-ಕುಮಾರ ಬಂಕನಾಥ- ಜಕ್ಕಣಾರ್ಯ"[೧೯] ಎಂಬ ಗುರುಪರಂಪರೆಯಲ್ಲಿಯೂ 'ಪುರಾಣದ ಮಾಯಿದೇವ ಪಂಡಿತ' ಎಂಬ ಹೆಸರು ಕಂಡುಬರುತ್ತದೆ. ಹುಲಿಗೆರೆಗೆ ಸಂಬಂಧಿಸಿದ ಈ ಇಬ್ಬರೂ ಪುರಾಣದ ಮಾಯಿದೇವಪಂಡಿತರು ಒಬ್ಬನೇ. ಇನ್ನು ತ್ರಿಭುವನತಾತನೊಂದಿಗೆ ವಾದಕ್ಕೆ ನಿಂತ ಕೆರೆಯಪದ್ಮರಸರಿಗೆ ಬೆಂಬಲನೀಡಿ, ವಾದದಲ್ಲಿ ಗೆದ್ದ ಪದ್ಮರಸನನ್ನು ಸ್ತುತಿಸಿದ 'ಹುಲಿಗೆರೆಯ ಮಾಯಿದೇವ ಪುರಾಣಭಟ್ಟ' ಎಂಬ ವ್ಯಕ್ತಿ ಪದ್ಮರಾಜಪುರಾಣ, ಸಾನಂದಚರಿತ್ರೆಗಳಲ್ಲಿ ಕಂಡುಬರುತ್ತಾನೆ. ಇಲ್ಲಿ ಪದ್ಮರಾಜಪುರಾಣ ಮತ್ತು ಸಾನಂದಚರಿತೆಗಳು ಹೇಳುವ 'ಹುಲಿಗೆರೆಯ ಮಾಯಿದೇವ ಪುರಾಣಭಟ್ಟ' ಮತ್ತು ಏಕೋತ್ತರಶತಸ್ಥಲ, ಶಾಸನಗಳು ಹೇಳುವ (ಹುಲಿಗೆರೆಯ) 'ಪುರಾಣದ ಮಾಯಿದೇವಪಂಡಿತ' ಭಿನ್ನರೋ ಅಭಿನ್ನರೋ ಸ್ಪಷ್ಟವಾಗುವುದಿಲ್ಲ. ಈ ಪುರಾಣದ ಮಾಯಿದೇವಪಂಡಿತರ ಶಿಷ್ಯ ಶಿವರಾತ್ರೆಯ ಮಾಯಿದೇವ. ಈತನ ವಿಷಯ ಯಾವ ವೀರಶೈವ ಕೃತಿಯಲ್ಲಿಯೂ ಬಂದಿಲ್ಲ.

ಗೊಪೆಯ ಶಿವದೇವ, ಶಿವರಣ: ಈ ಶಾಸನದ ಪ್ರಕಾರ ಶಿವರಾತ್ರೆಯ ಮಾಯಿದೇವರಿಗೆ ದತ್ತಿ ನೀಡಿದವನು ಗೊಪೆಯ ಶಿವದೇವರ ಮಗ ಶಿವಶರಣ. ಈತನು ಗೊಪೆಯ ಶಿವದೇವರ ಕರಸಂಜಾತನಾಗಿರದೆ ಉದರಸಂಜಾತನಾಗಿರಬಹುದೆಂದು ವಿದ್ವಾಂಸರ ಅಭಿಮತ. ಇದು ನಿಜವಿದ್ದಲ್ಲಿ ಶಿವದೇವನು ಸಂಸಾರಿಯೆನ್ನಬೇಕಾಗುತ್ತದೆ. ಶಿವಶರಣನು ಹೂದೋಟವೊಂದನ್ನು ಕ್ರಯವಾಗಿ ಪಡೆದು, ಶಿವರಾತ್ರೆ ಮಾಯಿದೇವರಿಗೆ ದತ್ತಿಬಿಟ್ಟ ವಿಷಯ ಇಲ್ಲಿದೆ. ಇಲ್ಲಿ ಪ್ರಸ್ತಾಪಿತನಾದ ಗೊಪೆಯ ಶಿವದೇವನು ಚೌಡದಾನಪುರ ಶಾಸನೋಕ್ತ ಶಿವದೇವ ಒಬ್ಬನೇ ಎಂದು ವಿದ್ವಾಂಸರ ಅಭಿಮತ.

ಚೌಡದಾನಪುರ ಶಿವದೇವ

ಬಸವಣ್ಣನವರ ತರುವಾಯ ಅವತಾರವೆತ್ತಿದ ಶಿವಶರಣರಲ್ಲಿ ಚೌಡದಾನಪುರ ಶಿವದೇವನದು ಜ್ಯೋತಿರ್ಮಯ ವ್ಯಕ್ತಿತ್ವ. 'ಶಿವದೇವ ವಿಜಯಂ'[೨೦] ಗ್ರಂಥದಲ್ಲಿ ಬಿತ್ತರಗೊಂಡ ಈತನ ಕೀರ್ತಿ ಕೆಳಗಣ ಶಾಸನಗಳಲ್ಲಿ[೨೧] ಕಣ್ಣು ಕುಕ್ಕಿಸುವಷ್ಟು ಸ್ಫುಟವಾಗಿ ನಿಂತಿದೆ.

---

೧೯. ಶಿ.ಗೀ.ಪು. ೨೩೩ ಮತ್ತು ೨೩೪ ಅ.ಟಿ.

೨೦. ಇಪ್ಪತ್ತನೆಯ ಶತಮಾನದ ಈ ಚಂಪೂಕೃತಿಯ ಕರ್ತೃ ಶರೀಫ.

೨೧. ಶಿವದೇವವಿಜಯಂ ಗ್ರಂಥದ ಪರಿಶಿಷ್ಟದಿಂದ ಈ ಶಾಸನಗಳನ್ನು ಎತ್ತಿಕೊಳ್ಳಲಾಗಿದೆ.

	ಅರಸು	ದಾನಿ	ಮಿತಿ	ವಿಶೇಷ
೧.	ಯಾದವ ಕನ್ನರ	ಭಾನುದೇವ, ಜೋಯಿಸೆಟ್ಟಿ, ಗುತ್ತರಸ III	೧೨೬೦	ಚೌಡಿಸೆಟ್ಟಿಯರ ತಮ್ಮ ಭಾನುದೇವ, ವೀರಶೈವ ಶಾಸನಗಳಲ್ಲಿ ಆಗಾಗ ಕಂಡುಬರುವ ಹೊನ್ನ ಬೊಮ್ಮಿಸೆಟ್ಟಿಯರ ಉಲ್ಲೇಖವಿದೆ.
೨.	ಯಾದವ ಮಹಾದೇವ	ಗುತ್ತರಸ III	೧೨೬೩	ರೇವಣಸಿದ್ಧ, ಭಕ್ಯಾಚಾರದ ಚೀಲಾಳ, ಕನ್ನಾದೇವಿಗಳ ಉಲ್ಲೇಖ.
೩.	ಯಾದವ ಮಹಾದೇವ	ಗುತ್ತರಸ III (ಕಾಳಯುಕ್ತ ಶುಭಕೃತ್ ಸಂವತ್ಸರಗಳ ಇನ್ನೆರಡು ದಾನಗಳಿವೆ).	೧೨೬೩	ಬಸವಣ್ಣನ ಅವತಾರ ಮತ್ತು ಅಂಬೆನಾಯಕನ ಉಲ್ಲೇಖ.
೪.	ಯಾದವ ಮಹಾದೇವ	--	೧೨೬೩	ಬಸವಣ್ಣನ ಲಿಂಗಜಂಗಮಸೇವೆ ಮತ್ತು ಪ್ರಸಾದಸಿದ್ಧಿಗಳ ವಿಷಯ
೫.	ಯಾದವ ಮಹಾದೇವ	ತೊರಗಲೆ ದೇವರಸ	೧೨೬೫	ಶಿವದೇವ ಮತ್ತು ದೇವರಸರ ಅರ್ಥಪೂರ್ಣ ಸಂಭಾಷಣೆ.
೬.	ಯಾದವ ರಾಮಚಂದ್ರ	ಹಬ್ಬರಸದೇವ	೧೨೯೫	ಶಿವದೇವರು ಈಗ ಬದುಕಿದಂತಿಲ್ಲ.
೭.	-	ಕೆರೆಮಲ್ಲಾಪುರದ ಪುಟ್ಟನಗೌಡ	–	–

ದೇವಗಿರಿ ಯಾದವ ಮತ್ತು ತೊರಗಲೆ ದೇವರಸರ ಭಕ್ತಿಗೆ ಪಾತ್ರನಾದ ಶಿವದೇವನು ಗುತ್ತಲದ ಗುತ್ತರಸರ ರಾಜಗುರು. ಈತನು ಕನಿಷ್ಟ ಪಕ್ಷ ಕ್ರಿ.ಶ. ೧೨೬೫ರ ವರೆಗೆ ಬದುಕಿರಬಹುದೆಂದು ಮೇಲಣ ೫ನೆಯ ನಂಬರಿನ ಶಾಸನದಿಂದ ವ್ಯಕ್ತವಾಗುತ್ತದೆ. ಇಷ್ಟು ಹಿನ್ನೆಲೆಯಲ್ಲಿ ಪದ್ಮರಾಜಪುರಾಣ, ಗಿರಿಸಿದ್ಧಾಪುರ ಶಾಸನ ಮತ್ತು ಚೌಡದಾನಪುರ ಶಾಸನಗಳ ಶಿವದೇವರ ಪರಸ್ಪರ ಸಂಬಂಧಸಾಧ್ಯತೆಯನ್ನು ವಿವೇಚಿಸಬಹುದು.

ಪದ್ಮರಾಜಪುರಾಣದ ಶಿವದೇವ ಮತ್ತು ಚೌಡದಾನಪುರದ ಶಿವದೇವ: ವಿಪ್ಲವದ ಮೂಲಕ ಶರಣರು ಕಲ್ಯಾಣದಿಂದ ಶ್ರೀಶೈಲಕ್ಕೆ ಹೊರಟ ಸಮಯದಲ್ಲಿ ಅಂದರೆ ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಪದ್ಮರಾಜಪುರಾಣದ ಶಿವದೇವನು ಐಕ್ಯನಾಗಿರುವನು. ಮೇಲೆ ನೋಡಿದಂತೆ ಚೌಡದಾನಪುರ ಶಿವದೇವನು ಕನಿಷ್ಟ ಪಕ್ಷ ಕ್ರಿ.ಶ. ೧೨೬೫ ಅಂದರೆ ೧೩ನೆಯ ಶತಮಾನದ ಉತ್ತರಾರ್ಧದ ವರೆಗೂ ಬದುಕಿರುವನು. ಅದಕ್ಕಾಗಿ ಇವರಿಬ್ಬರೂ ಭಿನ್ನವೆನಿಸುತ್ತದೆ. ಆದರೆ ಗೊಪೆ, ವೀರವ್ರತಿ, ಸೀಮೋಲ್ಲಂಘನ ವ್ರತ, ಶಿವದೇವ ಎಂಬ ಪದಗಳಲ್ಲಿಯ ಮತ್ತು ವರ್ಣನೆಗಳಲ್ಲಿಯ ಸಾಮ್ಯವನ್ನು ಗಮನಿಸಿ ಇಬ್ಬರೂ ಅಭಿನ್ನನೆನ್ನುತ್ತಾರೆ ಡಾ. ಹಿರೇಮಠ ಅವರು. ಕಲ್ಯಾಣ ಕ್ರಾಂತಿಯನ್ನು ಮುಂದೆ ತರುವುದಾಗಲೀ ಚೌಡದಾನಪುರ ಶಾಸನದ ಕಾಲವನ್ನು ಹಿಂದೆ ಒಯ್ಯುವುದಾಗಲೀ ಅಷ್ಟು ಸುಲಭವಲ್ಲದ ಕಾರಣ, ಈ ಸಮಸ್ಯೆ ಅಪರಿಹಾರ್ಯವಾಗಿ ಉಳಿಯುತ್ತದೆ.

ಪದ್ಮರಾಜಪುರಾಣದ ಶಿವದೇವ ಮತ್ತು ಗಿರಿಸಿದ್ಧಾಪುರ ಶಾಸನದ ಶಿವದೇವ: ಗೊಪೆಯ ಶಿವದೇವರ ಮಗ ಶಿವಶರಣನನ್ನು ಉಲ್ಲೇಖಿಸುವ ಗಿರಿಸಿದ್ದಾಪುರ ಶಾಸನದ ಕಾಲ ಕ್ರಿ.ಶ. ೧೨೮೫. ಇಲ್ಲಿ ತಲೆಮಾರಿಗೆ ೨೫ ಬಿಟ್ಟು ೫೦ ವರ್ಷ ಹಿಡಿದರೂ ಈ ಶಾಸನದ ಶಿವದೇವನು ಕಲ್ಯಾಣಕ್ರಾಂತಿಯ ತರುವಾಯ ಕೆಲವೇ ದಿನಗಳಲ್ಲಿ ಐಕ್ಯನಾದ ಪದ್ಮರಾಜಪುರಾಣದ ಶಿವದೇವನು ಸಮಕಾಲೀನನಾಗುವುದಿಲ್ಲ. ಅದಕ್ಕಾಗಿ ಈ ಸಂಬಂಧವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

ಗಿರಿಸಿದ್ಧಾಪುರಶಾಸನದ ಶಿವದೇವ ಮತ್ತು ಚೌಡದಾನಪುರ ಶಾಸನದ ಶಿವದೇವ: ಕಾಲದೃಷ್ಟಿಯಿಂದ ಇವರು ಒಂದೇ ಸಮಯದಲ್ಲಿ ಬಾಳಿದವರು. ಆದರೆ "ಲಿಂಗನಪ್ಪಿದ ತೋಳ್ಗಳಿನಂಗನೆಯರನಪ್ಪೆ[೨೨]" ಎಂಬ ಶಾಸನ ಹೇಳಿಕೆಯಂತೆ ಚೌಡದಾನಪುರ ಶಿವದೇವ ಆಜನ್ಮ ಬ್ರಹ್ಮಚಾರಿ. ಗಿರಿಸಿದ್ಧಾಪುರ ಶಿವದೇವನಿಗಾದರೋ ಶಿವಶರಣನೆಂಬ ಮಗನಿರುವನು. ಇದಲ್ಲದೆ ಒಬ್ಬನ ಗ್ರಾಮ ಧಾರವಾಡ ಜಿಲ್ಲೆಯ ಚೌಡದಾನಪುರ, ಇನ್ನೊಬ್ಬನದು ಹಾಸನ ಜಿಲ್ಲೆಯ ಗಿರಿಸಿದ್ಧಾಪುರ, ಅದಕ್ಕಾಗಿ ಇವರಿಬ್ಬರೂ ಒಂದೇ ಎನ್ನಲು ಧೈರ್ಯ ಸಾಲದು.

ಹೀಗೆ ಈ ಮೂವರ ತೊಡಕು ನಿಗೂಢವಾಗಿ ನಿಂತಿದೆ. ಹೊಸ ವಿಷಯಗಳು ಬಯಲಿಗೆ ಬರುವ ವರೆಗೆ ಅದನ್ನು ತಡೆಹಿಡಿಯಬೇಕಾದ ನಾವು, ಈಗ ಚೌಡದಾನಪುರ ಶಿವದೇವನ ಶಾಸನಗಳನ್ನು ವಿವೇಚಿಸಬಹುದು.

ಚೌಡದಾನಪುರ ಶಾಸನಗಳನ್ನು ಶಿವಾನುಭವ ಪತ್ರಿಕೆಯ ಮೂಲಕ ಮೊದಲು ಪ್ರಕಟಿಸಿದವರು (ಇಲಿಯಟ್ಟನ ಶಾಸನಸಂಗ್ರಹದಿಂದ ಆಯ್ದುಕೊಂಡು) ಡಾ. ನಂದೀಮಠರು.[೨೩] ತರುವಾಯ ಶ್ರೀ

---

೨೨. ಶಿವದೇವವಿಜಯ ಅನು:೧ ನಂ. ೬.

೨೩. ಶಿವಾ. ೪-೨, ೪ (ಭಾವುದಾಜಿ ಅವರು ಈ ಮೊದಲು) JBBRAS IX. P. ೩೨೭ರಲ್ಲಿ ಈ ಶಾಸನ ಗಳನ್ನು ಪ್ರಕಟಿಸಿದ್ದರು. ಆದರೆ ಇವು ಹೆಚ್ಚು ಪ್ರಚಾರಕ್ಕೆ ಬಂದುದು ಡಾ. ನಂದೀಮಠರ ಲೇಖನದಿಂದ.

ಎಂ.ಜಿ. ನಂಜುಂಡಾರಾಧ್ಯರು 'ಶಿವದೇವ ವಿಜಯಂ' ಗ್ರಂಥದ ಪರಿಶಿಷ್ಟದಲ್ಲಿ ಸಂಗ್ರಹಿಸಿದರು. ಈ ಎರಡರಲ್ಲಿಯೂ ಶಾಸನ ಪಾಠ ಅಶುದ್ಧವಾಗಿರುವ ಕಾರಣ, ಕೆಲಮಟ್ಟಿನ ಪರಿಷ್ಕರಣದೊಂದಿಗೆ ಮುಖ್ಯಭಾಗಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಚೌಡದಾನಪುರ ಶಾಸನ-೧: "ಶ್ರೀ ಕನ್ನರದೇವ ವರ್ಷದ ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ೧೫ಸೋ ಸೂರ್ಯಗ್ರಹಣ ಸಮಯದಲ್ಲಿ.... (ಚವುಡಿ ಸೆಟ್ಟಿಯರ ಕರಣದ ನಾಗರಸರ ತಮ್ಮ ಭಾನುದೇವ, ಜೋಗಿಸೆಟ್ಟಿ ಮತ್ತು ಗುತ್ತರಸರ ದಾನ ವಿವರಗಳು).... ಶ್ರೀ ಶಿವದೇವರಿಗೆ ಗತ್ತರ್ಸದೇವನೆಯಾರಾಧಿಸಿದನು ॥ ಮುಂನ ಹೊಂನಬೊಂಮಿಸೆಟ್ಟಿಯರು ಆರಾಧಿಸಿದ ಗದ್ದೆ...X...."

ಶಿವದೇವನನ್ನು ಉಲ್ಲೇಖಿಸುವ ಪ್ರಥಮ ಶಾಸನ(೧೨೬೦)ವಿದು. ರಟ್ಟಿಹಳ್ಳಿ ಶಾಸನದಲ್ಲಿ ಬರುವ ಹೊನ್ನಬೊಮ್ಮಿಸೆಟ್ಟಿ ಮತ್ತು ಬಸವಣ್ಣನವರಿಗೆ ಸಂಬಂಧಿಸಿದ ಅರ್ಜುನವಾಡ ಶಾಸನದಲ್ಲಿ ಬರುವ ಚೌಡಿಸೆಟ್ಟಿ ನಾಗರಸರ ಪ್ರಸ್ತಾಪ ಇಲ್ಲಿ ಬಂದಿದೆ. ಅರ್ಜುನವಾಡ ಶಾಸನ ಮತ್ತು ಈ ಶಾಸನದ ಮಿತಿ ಒಂದೇ ಎಂಬುದು, ಚೌಡಿಸೆಟ್ಟಿ ಮತ್ತು ಚೌಡದಾನಪುರ ಇವುಗಳಲ್ಲಿ ನಾಮಸಾಮ್ಯವಿದೆಯೆಂಬುದು ಗಮನಿಸಬೇಕಾದ ಸಂಗತಿ.

ಚೌಡದಾನಪುರ ಶಾಸನ-೨: (ಸಿರಿಗಿರಿಯ ಮಲ್ಲಿಕಾರ್ಜುನನ ಆಜ್ಞೆಯಂತೆ ಶಿವದೇವನು ಮುಕ್ತಿಕ್ಷೇತ್ರಕ್ಕೆ ಬಂದು ಭಕ್ತಿಯ ಬದುಕನ್ನು ಪ್ರಾರಂಭಿಸಿದನು).

ಅನವರತ ಲಿಂಗಸಂಗವ ।
ನನುಕರಿಸಿಯನ್ಯರಿಗಾಸೆ ಮಾಡದೆ ಮುಕ್ತೀ ।
ಶನನಪ್ರತಿಮನೆನಿಪ ಪೂ ।
ಜನೆಯಿಂದರ್ಚಿಸು**XXXXXX** ॥

ಪರದೈವ ಮಾನಮರ್ದ್ದನ
ಪರದೈವ ಘರಟ್ಟ ದಿಟ್ಟ ಪರದೈವಕುಬ್ಜ
ಧರವಜ್ರಪಾತನೆನಿಪಂ
ಹರಗಣ ತೇಜ ಪ್ರಭಾವದಿ ಶಿವದೇವಂ ॥

ಅಂತಾ ಶಿವದೇವರು ಶಿವಗಣಾಜ್ಞಾ ಸುಖದೊಳಿರುತ್ತಮಿರೆ-

ಲೊಕ್ಕಿಯಲ್ಲಿದ್ದ ಸಿದ್ಧರೇವಣನ ಶಿಶು ಭಕ್ತ್ಯಾಚಾರದ ಚೀಲಾಳನು, ತೊರಗಲೆಯ ಕಲ್ಲರಸನ ಅರಸಿ ಕನ್ನಾದೇವಿಗೆ ಶಿವದೀಕ್ಷೆಯನ್ನು ಅನುಗ್ರಹಿಸಿದನು. ಪತಿಯ ಮರಣದ ತರುವಾಯ ಗುರು ರೇವಣಸಿದ್ಧನ ಆದೇಶದಂತೆ ಮುಕ್ತಿಕ್ಷೇತ್ರದಲ್ಲಿ ನೆಲೆನಿಂತ ಈಕೆ, ಚೌಡದಾನಪುರದಲ್ಲಿ ಕಲಿದೇವರ ದೇವಾಲಯವನ್ನು ಕಟ್ಟಿಸಿದಳು. ಶಿವದೇವ ಒಡೆಯರ ಪಾದತೊಳೆದು ಮೂರನೆಯ ಗುತ್ತರಸನು ಈ ದೇವಾಲಯಕ್ಕೆ ದತ್ತಿ(೧೨೬೩)ಬಿಟ್ಟನು.

ಚೌಡದಾನಪುರ ಶಾಸನ-೩: (ಕೈಲಾಸಪರ್ವತ, ಶಿವಗಣ, ಗಣಸಭೆ ಇವುಗಳ ಹೃದಯಂಗಮ ವರ್ಣನೆ).

ಆ ಉಮಾಮಹೇಶ್ವರಂ ಗಣಂಗಳಗೆ ಪ್ರಸನ್ನನಾಗಿಯಿಂತೆಂದಂ-

ಇದೆ ನಾಲ್ಕುಂ ವೇದಪಾರಂ ಬಗೆವಡೆ ದಿಟದಿಂ ಸರ್ವಶಾಸ್ತ್ರಾರ್ಥಪಾರಂ ।
ಪದದಿಂ ಸ್ಮೃತ್ಯರ್ಥಪಾರಂ ತ್ರಿಭುವನ ಭುವನಜ್ಞಾನವಿಜ್ಞಾನಪಾರಂ
ಸದ್ವಾಕ್ಯಾರ್ಥೈಕಪಾರಂ ಪ್ರಣವಸಮುದಿತಂ ಧ್ಯಾನಭಾವೈಕಪಾರಂ ।
ವಿದಿತಂ ಶ್ರೀ ಜ್ಯೋತಿಲಿಂಗಾಮರಗಣ ಕರುಮೋತ್ಪನ್ನ ಭಕ್ತಿಪ್ರಸಾದಂ ॥

ಎನೆ ಕೇಳ್ದದ್ರಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗಮಂ ತೋರಬೇ(=ವೇ) ।
ಳ್ಕೆನಲಂದಾ ಪ್ರಭು ನಂದಿನಾಥನ ಮೊಗನ್ನೋಡಲ್ಕೆ ಶ್ರೀ ಸಂಗಮೇ ।
ಶನ ಪುತ್ರಂ ಬಸವಯ್ಯ ಬಂಕನದರಿಂ[೨೪] ಶಿವಮುದ್ದುದೇವಂ ಜನ ।
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಮಂ ತೋರುವೆಂ ॥

(ಧವಳೇಶ್ವರ ಶಿವಲಿಂಗವನ್ನು ಪೂಜಿಸುವ ಶಿವಮುದ್ದುಮುನಿಯ ವರ್ಣನೆ)*

ವ॥ ಅನಂತರಂ ಶ್ರೀಗಿರೀಶನಾಜ್ಞೆಯಿಂ ಬಂದ ವೀರವ್ರತಿಯಂ ನೋಡಿ-

ವೃ ॥ ಹವಣೆಸಬಾರದಗ್ರಕುಲಜೋದ್ಭವವಾಗಿ ವಿಧಾತ್ರನಿಂದ ಸಂ ।
ಭವಿಸಿದೆ(ದ?) ನಾಲ್ಕು ಸೃಷ್ಟಿಯೊಳು ಪುಟ್ಟಿದನೆಂಬಡೆ ಜಾಯತೇಸ್ತಿಯೆಂ ।
ಬರು ಮೊದಲಾಗಿ ದಡ್ಡಿ(?) ಕೃತಿಯೊಳ್ಸಲೆ ಕೂಡಿದನಲ್ಲ ಭಾವಿಸಲ್ ।
ಭವನೊಲವಿಂದೆ ವೀರಶಿವದೇವ ಗಣೇಶ್ವರನಾಗಿ ತೋರಿದನ್ ॥

....

ವ॥ ಶಕವರುಷ ೧೧೪೮ನೆಯ ಪಾರ್ಥಿವ ಸಂವತ್ಸರದ ಭದ್ರಪದ ಶುದ್ಧ ೧೫ ಸೋಮವಾರ ಚಂದ್ರೋಪರಾಗ ಪುಣ್ಯತಿಥಿಯ ಮಧ್ಯಾಹ್ನ ಸಮಯದೊಳು ಬಂದು ಮುಕ್ತಿಕ್ಷೇತ್ರಮಂ ಪೊಕ್ಕು ।

ವಿರಚಿಸಿದಂ ಕೈಳಾಸದ ।
ಚರಿತ್ರಮಂ ಶ್ರೀ ವೀರಭದ್ರನ ಶ್ರೀಪದಮಂ ।
ಸ್ಮರಿಸುವ ವೀರಬ್ರತಮಂ ।
ಧರಿಸಿದನತುಳಬಳಂ ವಿಕ್ರಮXXಶಿವಂ ॥

ಸೀಮೆಯನುಲ್ಲಂಘಿಸದುದೆ ।
ನೇಮಂ ಧರೆಗೊರಗದಿಪ್ಪುದೇ ಸಲೆ ನಿಯಮಂ ।
ಕಾಮಿಸದಿಪುದೇ ನೇಮಂ ।
ಸ್ವಾಮಿ ಮಹಾದೇವನಿತ್ತೊಡ್ಡೋಲಗ ನೇಮಂ ।

---

೨೪. 'ಬಂಕನದರಿಂ' ಎಂಬ ಭಾಗಕ್ಕೆ ಅರ್ಥಹೆಚ್ಚುವುದು ಇನ್ನೂ ಸಾಧ್ಯವಾಗಿಲ್ಲ.

* ಈ ಶಿವಮುದ್ದು ಮುನಿಯು ಕಾರಡಗಿಯ ಧವಳೇಶ್ವರಲಿಂಗದ ಆಚಾರ್ಯನಾಗಿದ್ದಾನೆ. (ನೋಡಿ ಮಾರ್ಗ III ಪು, ೩೪೧. ೨೦೧೦)

(ಮುಂದಣ ಪದ್ಯಗಳಲ್ಲಿ 'ವೀರೇಶನಾತ್ಮಜಂ ಶಿವದೇವಂ' 'ವೀರಗಣಂಗಳ ಕುಮಾರನೀ ಶಿವದೇವಂ' ಎಂಬ ಉಲ್ಲೇಖಗಳಿವೆ).

ಆರುಂ ದರುಶನಮಂ ಬಲಿ ।
ಪುರೆ ಮೆರೆವ ಶಿವಗಣಜ್ಞ ಚಿಂತಾಮಣಿ ಕೈ ।
ಸಾರೆ ಶಿವದೇವ ಮುನಿಪತಿ ।
ತೋರಿ ಮೆರೆದಂ ಲಿಂಗಜಂಗಮೈಕ್ಯ ಕ್ರಮಮಂ ॥

ಮತ್ತಂ ಪುರಾತನರ ಚರಿತ್ರದಿಂ XXXX ವಿಚಿತ್ರಮಾಗಿ ಲಿಂಗಾರ್ಚನೆಯಂ ಗೈಯ್ಯುತ ಮಿರಿಯಿರೆ॥ (ಯಾದವ ಮಹಾದೇವನ ಆಳಿಕೆ, ಗುತ್ತರಸನ ದತ್ತಿ, ಮಣಂಬೆನಾಯಕ) (= ಅಂಬೆನಾಯಕ?)ನ ಉಲ್ಲೇಖಗಳೊಂದಿಗೆ ಶಾಸನ ಮುಗಿದಿದೆ.

"ಅಮರಗಣಕರುಣೋತ್ಪನ್ನಭಕ್ತಿಪ್ರಸಾದ"ದ ಮಹಿಮೆಯನ್ನು ಲೋಕದಲ್ಲಿ ಪ್ರಕಟಿಸ ಬೇಕೆಂಬ ಪಾರ್ವತಿಯ ಬಿನ್ನಹದ ಮೇರೆಗೆ-ಈ ಹಿಂದೆ ನಂದಿನಾಥನು ಸಂಗಮೇಶನ ಪುತ್ರನಾದ ಬಸವಯ್ಯನ ರೂಪದಲ್ಲಿ ಬಂದಂತೆ-ಶಿವನು ಶಿವದೇವನ ರೂಪ ಧರಿಸಿ ಮರ್ತ್ಯಕ್ಕೆ ಅವತರಿಸಿದನೆಂದು ಸಾರುತ್ತಿದೆ, ಈ ಶಾಸನ. ಅದಕ್ಕಾಗಿ ಆ ಕಾಲದ ಜನತೆಯ ದೃಷ್ಟಿಯಲ್ಲಿ ಶಿವದೇವನ ಅವತಾರ, ಬಸವಣ್ಣನ ಅವತಾರದಷ್ಟು ಮಹತ್ವಪೂರ್ಣವೆನಿಸಿರಬೇಕು.

ಶಕವರುಷ ೧೧೪೮ ಅಂದರೆ ಕ್ರಿ.ಶ. ೧೨೨೬ರಂದು "ಮುಕ್ತಿಕ್ಷೇತ್ರಮಂ ಪೊಕ್ಕು" ಎಂಬ ಉಲ್ಲೇಖ, ಶಿವದೇವನ ಜನನಮಿತಿಯಾಗಿರಬಹುದೆಂದು ಪಂಡಿತರ ಮತ. ಇದು ಶಿವದೇವನು ಮುಕ್ತಿಕ್ಷೇತ್ರಕ್ಕೆ ಹೊರಗಿನಿಂದ ಆಗಮಿಸಿದ ಮಿತಿಯಾಗಿರಲೂ ಸಾಧ್ಯವಿದೆ. ಇಲ್ಲಿ ಬರುವ 'ಲಿಂಗಜಂಗಮೈಕಕ್ರಮ' 'ಪುರಾತನ ಚರಿತ್ರೆ' 'ಸಂಗಮೇಶನ ಪುತ್ರಂ ಬಸವಯ್ಯ' ಎಂಬ ಮಾತುಗಳು ವೀರಶೈವದ ಇತಿಹಾಸ ಮತ್ತು ಬಸವಣ್ಣನವರ ಚರಿತ್ರೆಗಳ ದೃಷ್ಟಿಯಿಂದ ಬಹುಮುಖ್ಯವೆನಿಸಿವೆ.

ಚೌಡದಾನಪುರ ಶಾಸನ-೪: (ಮರ್ತ್ಯದಲ್ಲಿ ಧರ್ಮಕ್ಷಯವಾಗುತ್ತಿದೆಯೆಂಬ ದೇವತೆಗಳ ಬಿನ್ನಹವನ್ನು ಕೇಳಿ, ಶಿವನು ಹೀಗೆ ಹೇಳುತ್ತಾನೆ).

ಅಕ್ಷಯ ನಿಧಾನ ಮುಕ್ತಿಯ ।
ದೀಕ್ಷಾಸ್ಥಳ ತುಂಗಭದ್ರೆ ಪಶ್ಚಿಮಮುಖದಿನ ।
ಧಕ್ಷಯಮಂ ಮಾಡಲ್ ತ ।
ದ್ದಕ್ಷಿಣ ತಟದಲ್ಲಿ ಮೆರೆಗು ಮುಕ್ತಿಕ್ಷೇತ್ರಂ ॥

ಅಲ್ಲಿರ್ದು ಮೂರುಲೋಕದ ।
ರೆಲ್ಲರ ಪಾವನವ ಮಾಳ್ಪೆನೆನುತಗಜಾತಾ ।
ವಲ್ಲಭನವತರಿಸಿದ ಭೂ ।
ವಲ್ಲಭೆಗನುರಾಗಮಪ್ಪಿನಂ ಮುಕ್ತೇಶಂ ॥

ಲಿಂಗವವತರಿಸಿತಾಹಾ ।
ಹಿಂಗದೆ ನಾವಿಪ್ಪವೆಂದಸಂಖ್ಯಾತಭರ್ಗೂ ।

ರಂಗಕೆ ಬರಲಿಕ್ಕಮರಗ ।
ಣಂಗಳಮೋಘಾಜ್ಞೆಯಿಂದ ಶ್ರೀ ಶಿವದೇವಂ ॥

ಉದಯಿಸಿದನಗ್ರಜನ್ಮದ ।
ಪರದೊಳ್ತನುಗುಣವನೊಂದದೆಲ್ಲಾಗಮದೊ ।
ಳ್ಮದನವಿರೋಧಿ ಶ್ರೌತೋ ।
ದಿತ ದೇವನೆನುತ್ತ ತಿಳಿದು ಶ್ರೀ ಶಿವದೇವಂ ॥

ಲಿಂಗವನಪ್ಪಿದ ತೋಳ್ಗಳಿ ।
ನಂಗನೆಯರನಪ್ಪೆನಳಿಪಿ ನೋಡೆಂ ಕೂಡೆ ಮ ।
ನಂಗೊಡೆನವಧಾರೆನುತಮ ।
ಭಂಗಂ ಬ್ರತಿ ಶಂಕರಂಗೆ ಬಾಸೆಯ ಕೊಟ್ಟಂ।

ವ॥ ಮತ್ತಮನೇಕ ಬಾಸೆಯನೀಶಂಗೆ ಕೊಟ್ಟು
ಕಂ॥ ತಲೆದಂಡ ಸ್ವರ್ಗಮುಕ್ತಿಯ ।

ಫಲವನಪೇಕ್ಷಿಸಿದೆನಾದಡೆಲೆ ಶಂಕರ ಕೇಳ್ ।
ಸಲೆ ಪುಣ್ಯಪಾಪವೆರಡರ ।
ಫಲವಿಲ್ಲದ ನಿತ್ಯಪೂಜೆಯಂ ಮಾಡಿದಪೆಂ ॥

ಆಶೆಯ ಪಾಶಮಂ ಪರಿದು ರೋಷದ ಮೀಸೆಯ ಕಿತ್ತು ಕಾಮ ಬಿ(ೞ) ।
ದೋಸರಿಸೆಂದು ಲೋಭ ಮದಮೆಂಬುದನಟ್ಟುತ ಮಾನ ಮೋಹ ತೃ ।
ಷ್ಣಾಸಬಲಂಗಳಂ ಜರಿದು ಬಗ್ಗಿಸಿ ಗೆಲ್ದುರೆ ತೊತ್ತು ಮಾಡಿದಂ ।
ದೂಷಕಧೂಮಕೇತು ಶಿವದೇವನತರ್ಕ್ಯಗುಣಪ್ರಭಾವನಂ ॥

ಮೆಟ್ಟಿದ ಕಲಿಕಿಯನೊರೆಯಂ ।
ಕಟ್ಟಿದ ನೂರೆಂಟು ಬೂದಿಗೋಂನಮಶಿವಯೆಂ ।
ದಿಟ್ಟಂ ವಿಭೂತಿ ತಿಲಕವ ।
ಕಟ್ಟಾಳ್ಗಲದಂಕ ಮನದೊಳತಿ ನಿಶ್ಶಂಕಂ ॥

ಅಂಕೆಗೆ ಝುಂಕೆಗೆ ಮನದೊ ।
ಳ್ಶಂಕಿಸಿದಡೆ ನಿನ್ನ ಭಕ್ತರಾಣೆಲೆ ಪಶುಪತಿ ।
ಶಂಕರನೊಳಾದೊಡಂ ಬೇ ।
ಡೆಂ ಕೇಳ್ ಬೇಡಿದಡೆಯೆಂನ ತಲೆಯೇ ದಂಡಂ ॥

ಅಣಕದಣೆ ಕಲಿಗೆ ಮುಂಕಣೆ ।
ಸೆಣಸುವ ವಾದಿಗಳ್ಗೆ ಬಾಯ್ಸಣೆ ಜಗವರಿಯಲ್ ।
ಗುಣೆ ಸಕಳವೇದಶಾಸ್ತ್ರದ ।
ಕಣೆ ಶಿವತತ್ವಾನುಭಾವನೀ ಶಿವದೇವಂ ॥

ಶಿವಸದ್ವಿದ್ಯೆಯೆ ವಿದ್ಯೆಯೆಂದು ಶಿವಭಾವಂ ಭಾವವೆಂದೆಂದುವಾ।
ಶಿವಮಂತ್ರಂಗಳೆ ಮಂತ್ರವೆಂದು ಶಿವಮೂರ್ತಿ ಧ್ಯಾನವೇ ಧ್ಯಾನವೀ ।
ಶಿವನಿತ್ಯೋತ್ಸವವುತ್ಸವಂ ಶಿವಕಥಾಳಾಪಂಗಳಾಳಾಪ ಮಿ ।
ಕ್ಕುವಸೇಬ್ಯಂಗಳೆನುತ್ತ ವೀರಶಿವದೇವಂ ತಾಳ್ದ ವೀರಬ್ರತಮ ॥

ಶಿವನಂ ತೋರುವ ಮಾರ್ಗ್ಗ ಮಾರ್ಗ್ಗ ಶಿವದಾಚಾರಂಗಳಾಚಾರವೀ ।
ಶಿವಸಂಯೋಗವೆ ಯೋಗ ನಿತ್ಯ ಶಿವಪೂಜಾಕರ್ಮವೇ ಕರ್ಮವೀ ।
ಶಿವನೇ ದೇವನು ದೇವನನ್ಯ ವಿಷಯಂ ಬೇಡಲ್ಲ ಹೊಲ್ಲೆಂದು ಶ್ರೀ ।
ಶಿವದೇವಪ್ರಭುವೆತ್ತಿದಂ ಧ್ವಜಪತಾಕೋದ್ದಂಡಮಂ ದಂಡಮಂ ॥

ಎಲೆ ಗಳ ವಾದಿ ಗೀದಿ ಘಡ ವೈಷ್ಣವ ಗೀಷ್ಣವ ಸೌರ ಗ್ರೀವ ಮಾ ।
ಣೆಲೆ ಗಳ ಬೊಂಮಿ ಗಿಂಮಿ ನಿಗಮಾರ್ಥವನರಿಯದಜ್ಜ ಗಿಜ್ಜ ಬೇ ।
ಡೆಲೆ ಗಳ ಬೌದ್ಧ ಗಿದ್ಧ ಬರಿಯಾಗಮಿ ಗೀಗಮಿ ಮಂತ್ರವಾದಿ ಸಾ ।
ಕುಲಿಯದಿರೆಂದು ಬಗ್ಗಿಪುದು ಶ್ರೀ ಶಿವದೇವನ ಕಾಲ ಹೊಂದೊಡರ್ ॥

ಬೆರಳಂ ಕರ್ಚಿ ಕರಂಗಳಂ ಮುಗಿದು ಬಾಯಂ ಪೊಯ್ಯುವಂತೆಮ್ಮೆರ ।
ಳ್ಕರದಿಂ ಮುಚ್ಚುತ ಬಾಯವಿಟ್ಟು ಕುಸಿದುಂ ಮೈಯಿಕ್ಕುತಂ ಪಲ್ಗಳಂ ।
ಕಿರಿದುಂ ಜೀ ಶರಣಾರ್ಥಿಯೆಂದನುದಿನಂ ಷಡ್ದರ್ಶನಂ ಬಾಹುಲೀ ।
ಭರದೊಳ್ತಳಲುತ್ತಮಿರ್ದುವನಿಶಂ ಶಿವದೇವ ವಾಮಾಂಘ್ರಿಯೊಳ್ ॥

ವ॥ ಮತ್ತಂ ದುಟ್ಟಿಘರಟ್ಟ ಲಿಂಗಕ್ಕೆ ಕಟ್ಟಿದೊರೆ ಕೊಟ್ಟಬಾಸೆ ದಿಟ್ಟವಾರಿಯ ಕಟ್ಟಾಳು ಶಿವದೇವಂ ಶ್ರೀ ಜ್ಯೋತಿನಾಥನೆ ಮುಕ್ತಿನಾಥನೆಂದರಿದು । ಕಾಲಕಲ್ಕಿಯಂ ಜರದು। ತನುಗುಣಂಗಳಂ ಮರದು । ಆವರಣಂಗಳಂ ತೊರೆದು । ಉಭಯ ಕರ್ಮದ ಬೇರಂ ಕೊರದು । ಮದನ ಶರಂಗಳಂ ಮುರಿದು । ಮಾಯಾಪಾಶಮಂ ಪರಿದು ।

ಕಂ॥ ಮಾನಸ ವಾಚಕ ಕಾಯಿಕ ।
ಯೇನುಂಟದ ನಿಂನ ಭಕ್ತರೊಳನಿಶಂ ।
ಸಾನಂದದಿಂದ ಮಾಳ್ಪೆಂ ।
ನಾನನ್ಯವ ನೆನೆಯೆ ನುಡಿಯೆ ಮಾಡೆಂ ಕೂಡೆಂ ॥

ವ॥ ಇಂತೆನುತ್ತ ದೇವಲೋಕದಲ್ಲಿ ಕೊಟ್ಟ ಪ್ರತಿಜ್ಞೆಯಂ ತಿಳಿದುನೋಡಿ

ನಿಷ್ಠಿಸಿ ನೋಡುತಮುಳಿದಾ ।
ನುಷ್ಠಾನಂ ಪೊಲ್ಲವೆಂದು ಕಂಡು ಶಿವಪದಾ ।
ನಿಷ್ಠೆ ನೆಲೆಗೊಳಲು ಶ್ರೇಷ್ಠಾ ।
ನುಷ್ಠಾನುವ ಮಾಳ್ಪನನುದಿನಂ ಶಿವದೇವಂ ॥

ಲಿಂಗಕ್ಕೆ ಜಂಗಮಕ್ಕಂ ।
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ ।
ಸಂಗನಬಸವಂ ಬೆಸಸೆ ಮ ।
ನಂಗೊಂಡರ್ಚಿಸುವನುಭಯಲಿಂಗವ ಮುದದಿಂ ॥

ಮೃಡಗಣ ವರ ಪ್ರಸಾದಮ ।
ಪಡೆದಿಂ ಜಗವರಿಯಲಂದು ಸಂಗನಬಸವಂ ।
ಪಡೆದಾ ಪ್ರಸಾದ ಸಿದ್ಧಿಯ ।
ಕಡು ವೀರಬ್ರತದಿ ಪಡೆದನೀ ಶಿವದೇವಂ ॥

ವ॥ ಮತ್ತಂ ಸತ್ಯಗಣಂಗಳ ನಿತ್ಯಪ್ರಸಾದ ಸಂಪನ್ನನಾಗಿ ಹಿಂಗದೆ ಲಿಂಗಾರ್ಚನಂ ಗೆಯ್ಯುತ್ತಮಿರೆಯಿರೆ... (ಗುತ್ತ ವಂಶಾವಳಿ, ಮೂರನೆಯ ಗುತ್ತರಸ, ತೊರಗಲೆಯ ದೇವರಸ, ಕುರವತ್ತಿಯ ಮಹಾಜನಗಳು ನೀಡಿದ ದತ್ತಿಗಳ ವಿವರಣೆಯಿದೆ).

ಹಲವು ದೃಷ್ಟಿಯಿಂದ ಮಹತ್ವ ಗಳಿಸಿದ ಶಾಸನವಿದು. ಇಲ್ಲಿ ಶಿವದೇವನು ಉದ್ಘೋಷಿಸಿದ ಭಾಷೆಗಳಲ್ಲಿ ವೀರಶೈವ ತತ್ವಗಳು ಪ್ರತಿಧ್ವನಿಸುತ್ತವೆ; ಶರಣರ ವಚನಗಳೇ ವೃತ್ತರೂಪ ತಾಳಿನಿಂತಿವೆ. ಬಸವಣ್ಣನವರ ಲಿಂಗಜಂಗಮಸೇವೆ, ಪ್ರಸಾದ ಸಿದ್ಧಿಗಳಿಗೆ ಇತಿಹಾಸದ ಸತ್ಯಮುದ್ರೆಯನ್ನೊತ್ತುವುದರ ಜೊತೆಗೆ ಆ ಕಾಲದಲ್ಲಿ ಶರಣರ ತತ್ವಗಳು ಅನುಷ್ಠಾನಗೊಳ್ಳುತ್ತಿದ್ದ ಹೊಲಬನ್ನು ವ್ಯಕ್ತಗೊಳಿಸಿದೆ, ಈ ಶಾಸನ.

ಚೌಡದಾನಪುರ ಶಾಸನ-೫: "ಸ್ವಸ್ತಿ ಶ್ರೀಮತು ಯಾದವರಾಯ ನಾರಾಯಣಂ ಪ್ರೌಢಪ್ರತಾಪ ಚಕ್ರವರ್ತಿ ಶ್ರೀ ವೀರಮಹಾದೇವರಾಯನ ಬೆಸದಿಂ । ಸ್ವಸ್ತಿ ಶ್ರೀಮನುಮಹಾಪ್ರಧಾನಂ ಸರ್ವಾಧಿಕಾರಿ ಶ್ರೀದೇವರ್ಸರು ಕಟಕದಿಂ ಬಂದು । ಸ್ವಸ್ತಿ ಶ್ರೀಮದಾರೂಢವೀರಬ್ರತಿ ಶಿವಯೋಗಸಿದ್ಧ ಶಿವದೇವರಿಗೆ ಸಾಷ್ಟಾಂಗಪ್ರಣಾಮ ಪೂರ್ವಕಂ ಬಿನ್ನಪಂಗೆಯಿದನಿಂತೆಂದಂ

ಒಂದು ಗ್ರಾಮವ ಕೊಡು ನೀ ।
ನೆಂದಂ ಯದುಕುಲನೃಪೋತ್ತಮಂ ಮಹದೇವಂ ।
ಇಂದದ ಪತಿಕರಿಸಲು ಬೇ ।
ಕೆಂದೊಡೆ ಶಿವಯೋಗಸಿದ್ಧ ನಗುತಿಂತೆಂದಂ ॥

ತ್ರಿಭುವನವೆಮ್ಮದು ಪಳ್ಳಿಯ ।
ಪ್ರಭುತ್ವವೇ ಶ್ಲಾಘ್ಯವೇಯದಲ್ಲದು ಮಾಣೆಂ ।

ದಭಯಕರ ಸಿದ್ಧನೆನಲಾ ।
ಶುಭಲಕ್ಷಣ ದೇವರಾಜ ಮರಳಿಂತೆಂದಂ ॥

ವೃ॥ ದೇವರು ಕೊಟ್ಟದೆ(ಡೊ?)ಲ್ಲದಿರಲಪ್ಪುದು ದೇವಣೆ ಮಾಡಿ ಸಿದ್ಧಿಯಿಂ ।
ಶ್ರೀವಿಭವಂಗಳಿಂ ಮನುಜಲೋಕದಧೀಶ್ವರರಿತ್ತಡಲ್ಲದೆಂ ।
ದೇ ವಿರಲಪ್ಪುದುತ್ತಮ ಪದಾರ್ತ್ಥಚಯಂಗಳನಲ್ಲದಾತ್ಮಜಾ ।
ಭಾವಕರಾರ್ತ್ತರಿತ್ತಡದನೊಲ್ಲೆವೆನಿಪ್ಪುದು ಧರ್ಮವಪ್ಪುದೇ ॥

ಎಂದಮೃತೋದರ ಪ್ರಭಾವ ದೇವನೃಪಂ ನುಡಿದೊಂದು ವಾಕ್ಯದೊಳ್ ।
ಬಂದಖಿಳಾಗಮಾರ್ಥ ನೆಲಸಿರ್ದ್ದುದು ಶಸ್ತ್ರದ ಸರ್ವಸಂಪದಂ ।
ಸಂದುದು ವದಿಕಾರ್ಥಮೊಡನಿರ್ದುದು ಧರ್ಮದ ಪೆಮ್ಮೆವೆತ್ತುದೇ ।
ನಂದಪೆನೆಂದು ತನ್ನೊಳನುಮಾನಿಸುತಂ ಶಿವದೇವರೆಂದಪರ್ ॥

ಆರಾಧಿಸುವಂ ನೀಮೊಲಿ ।
ದಾರಾಧಿಸಿಕೊಂಬನೀಶ್ವರನುವನಾನುಮ ।
ನಾರಾಧಿಸು ಕಯಿಕೊಂಬಂ ।
ವೀರೇಶ್ವರನೆಂದು ಸಿದ್ಧ ನೇಮಿಸಲೊಲವಿಂ॥

ಆ ದೇವರಾಜಂ ॥
ಉತ್ತರ ದಕ್ಷಿಣ ಪಶ್ಚಿಮ ।
ದುತ್ತುಂಗಾಸನದ ರಾಯರಾರಾಧಿಸೆ ವರ ।
ವಿತ್ತ ಶಿವದೇವರಂ ಶ್ರೀ ।
ಗುತ್ತಾನ್ವಯ ರಾಜಗುರುವನಾರಾಧಿಸಿದಂ ॥
(ಮುಂದೆ ದೇವರಾಜನು ದತ್ತಿನೀಡಿದ ಉಲ್ಲೇಖವಿದೆ)

ಶಿವದೇವರ ಜೀವಮಾನದಲ್ಲಿ ಹುಟ್ಟಿದ ಶಾಸನಗಳಲ್ಲಿ ಇದು ಕೊನೆಯದು. ಇದರ ಮಿತಿ ಕ್ರಿ.ಶ. ೧೨೬೫. ಅದಕ್ಕಾಗಿ ಶಿವದೇವರು ಕನಿಷ್ಟಪಕ್ಷ ಕ್ರಿ.ಶ. ೧೨೬೫ರ ವರೆಗೆ ಬದುಕಿರಬಹುದೆಂದು ಈಗಿನ ಮಟ್ಟಿಗೆ ಇಟ್ಟುಕೊಳ್ಳಬಹುದು. ಶಾಸನ ಪ್ರಪಂಚದಲ್ಲಿಯೇ ಅಪೂರ್ವವಾಗಿರುವ ಶಿವದೇವ ಮತ್ತು ದೇವರಸರ ಮಧ್ಯೆ ನಡೆದ ಇಲ್ಲಿಯ ಲೋಕೋತ್ತರ ಚರ್ಚೆ ಸೋಮನಾಥಚಾರಿತ್ರದ ಆದಯ್ಯ-ಪಶುಪತಿಯತೀಂದ್ರರ ಸಂಭಾಷಣೆಯನ್ನು ನೆನಪಿಗೆ ತರುತ್ತದೆ.

ಚೌಡದಾನಪುರ ಶಾಸನ-೬: "ಶ್ರೀ ಶಿವದೇವ ಪ್ರಭುವೆ ಶರಣು॥... ಸ್ವಸ್ತಿ ಶ್ರೀಮತು ರಾಯರಾಜಗುರು ಮಹಾವೀರಬ್ರತಿ ನೂರೆಂಟು ನವಬ್ರತನಿಷ್ಠರಹ ಗೊಪೆಯ ಸಿದ್ಧಶಿವದೇವರ

ಪ್ರಾಣಲಿಂಗ ಮುಕ್ತೇಶ್ವರದೇವರ ತುಂಗಭದ್ರೆ 'ಪಶ್ಚಿಮವಾಹಿನಿ ದಕ್ಷಿಣವಾರಣಾಸಿಯ ಗೊಪೆಯ ನೂರಿಪ್ಪತ್ತಿಬ್ಬರ ಸನ್ನಿಧಿಯಲ್ಲಿಯೂ ಮುಕ್ತನಾಥ ದೇವರಿಗೆ। ಸ್ವಸ್ತಿ ಶ್ರೀಮನು ಮಹಾಪ್ರಧಾನಂ ಸರ್ವಾಧಿಕಾರಿ ಪರಸುರಾಮದೇವರ ನಿರೂಪದಿಂ ಸರ್ವಾಧಿಕಾರಿ ಹಬ್ಬರಸ ದೇವರಸರು.... " (ದತ್ತಿ ನೀಡಿರುವರು).

ಈ ಶಾಸನದ (೧೨೯೫) ದಾನಪ್ರಸಂಗದಲ್ಲಿ ಶಿವದೇವರ ಸನ್ನಿಧಿಯ ಉಲ್ಲೇಖವಿರದೆ 'ಗೊಪೆಯ ನೂರಿಪ್ಪತ್ತಿಬ್ಬರ ಸನ್ನಿಧಿ'ಯ ಉಲ್ಲೇಖ ಬಂದಿದೆ. ಕಾರಣ ಈ ಸಮಯಕ್ಕೆ ಮೊದಲು (ಕ್ರಿ.ಶ. ೧೨೯೫) ಅವರು ಲಿಂಗೈಕ್ಯರಾಗಿರಬಹುದು. ಒಟ್ಟಿನಲ್ಲಿ ೫ನೆಯ ನಂಬರಿನ ಶಾಸನದ ಕ್ರಿ.ಶ. ೧೨೬೫ ಮತ್ತು ಈ ಶಾಸನದ ಕ್ರಿ.ಶ. ೧೨೯೫ರ ಮಧ್ಯ ಅವಧಿಯಲ್ಲಿ ಶಿವದೇವರು ಶಿವಾಧೀನರಾದಂತಿದೆ.

ಚೌಡದಾನಪುರ ಶಾಸನ-೭: ಇದು ಮೂಲಶಿಲಾಶಾಸನದ ನಕಲು. ಕಾಲದೃಷ್ಟಿಯಿಂದ ತೀರ ಇತ್ತೀಚನದಾದ ಇದರ ಮುಖ್ಯ ಭಾಗ ಹೀಗಿದೆ:

ಮುಕ್ತಿನಾಥೋದ್ಭವಂ ದೇವಂ ಶಿವದೇವಂ ಮಹೇಶ್ವರಂ ।
ವೀರಶೈವಮತಾಚಾರ್ಯಂ ವಂದೇಹಂ ತಂ ಜಗದ್ಗುರುಂ ॥

"...............ಮುಕ್ತಿಕ್ಷೇತ್ರದಲ್ಲಿ ಜಗದ್ಧಿತಾರ್ಥವಾಗಿ ಶ್ರೀ ಶಿವದೇವನು ಮುಕ್ತಿನಾಥ ಲಿಂಗದಲ್ಲುದ್ಭವಿಸಿ ಶ್ರೀ ಕುರುವತ್ತಿ ನಂದೀಶ್ವರ, ಶ್ರೀ ಮೈಲಾರಲಿಂಗದೇವ, ಶ್ರೀ ಹೊನ್ನಮ್ಮದೇವಿ, ಶ್ರೀ ಚರಣ ಚೌಡಯ್ಯನವರು ಮೊದಲಾದ ಶಿವಾಂಶಭೂತರಿಗೆ ಶಿವಧರ್ಮೋಪದೇಶ ಶಿವಲಿಂಗಧಾರಣಾದಿಕ್ರಿಯೆಗಳನ್ನು ಮಾಡಿದರು..."

(ಮುಂದೆ 'ಶಿವಭಕ್ತಶಿರೋಮಣಿ' 'ಮಹಾಶಿವಾನುಭಾವಿ' ಎನಿಸಿದ ಕೆರೆಮಲ್ಲಾಪುರದ ದೊಡ್ಡ ಫಕೀರಪ್ಪಗೌಡರ ಸತ್ಪುತ್ರರಾದ ಮೈಲಾರದ ಪುಟ್ಟನಗೌಡರು ಮೈಲಾರ ಗ್ರಾಮದ ಮಠ ಮತ್ತು ಮಠದ ಸುತ್ತಣ ಭೂಮಿಗಳನ್ನು ಶಿವದೇವರ ಪೀಠಕ್ಕೆ ಅರ್ಪಿಸಿದ ವಿಷಯ ಬರುತ್ತದೆ).

ಹೀಗೆ ಹಲವಾರು ಶಾಸನಗಳಲ್ಲಿ ಹಚ್ಚಹಸಿರು ಉಲ್ಲೇಖಗೊಂಡ ಈ ಪುಣ್ಯಪುರುಷನು ಪದ್ಮರಾಜಪುರಾಣೋಕ್ತ ಶಿವದೇವನೆನ್ನಲು ಸಂಶಯ ಬರುವಂತೆ, ವೀರಶೈವಾಮೃತ ಮಹಾಪುರಾಣೋಕ್ತ "ಈಶನ ಪೂಜೆಯಲ್ಲಿ ನೆರೆದ ಕಾರಣಿಕ ಶಿವದೇವಂ"[೨೫] ಎಂಬಲ್ಲಿಯ ಶಿವದೇವನೆನ್ನಲೂ ಸಂಶಯ ಬರುತ್ತದೆ.

ಭಕ್ತ್ಯಾಚಾರದ ಚೀಲಾಳ ಮತ್ತು ವೀರಕನ್ನಾದೇವಿ

ಒಡನೆ ಭವಿಗಳು ನೆಗಪಲಾರದ ಹಸುಂಬೆಯಂ ।
ಜಡರೀಕ್ಷಿಸಲ್ಕೆತ್ತಿ ಲೊಕ್ಕೆಯೆಂಬೂರೊಳಗೆ ಮೆರೆದ ಚೀಲಾಳದೇವಂ॥[೨೬]

೨೫. ವೀ.ಮ.ಪು. ೮-೪-೩೯.

೨೬. ವೀ.ಮ.ಪು. ೮-೪-೩೨.

ಎಂದು ವೀರಶೈವಾಮೃತಮಹಾಪುರಾಣ ಹೇಳುವ ಚೀಲಾಳದೇವ ಮತ್ತು ಈತನ ಶಿಷ್ಯೆ ವೀರಕನ್ನಾದೇವಿಯರ ವಿಷಯವಾಗಿ ಚೌಡದಾನಪುರ ಶಾಸನ (ನಂ. ೨) ಕೆಳಗಣ ಸಂಗತಿಗಳನ್ನು ಒದಗಿಸುತ್ತದೆ.

"............ ಅಂತಾ ಶಿವದೇವರು ಶಿವಗಣಾಜ್ಞಾಸುಖದೊಳಿರುತ್ತಮಿರೆಯಿರೆ॥

ಕಾರಣಿಕರೆನಿಪರೊಳು ತಾಂ ।
ಕಾರಣಿಕನೆನಿಪ್ಪ ಸಿದ್ಧದೇವಣದೇವನ ।
ಕಾರುಣ್ಯದ ಶಿಶು ಭಕ್ತ್ಯಾ ।
ಚಾರದ ಚೀಲಾಳದೇವ ಲೊಕ್ಕಿಯೊಳೆಸೆದಂ ॥

ಮಿಕ್ಕ ಶಿವಭಕ್ತಿ ಸುಖದಿಂ ।
ದುಕ್ಕಿ ಮಹಾದೇವ ಭಾವಭರದಿಂ ಜಗಮಂ ।
ಲೆಕ್ಕಿಸದೆ ಗಣಸುಖದೊಳಿಹ ।
ಲೊಕ್ಕೆಯ ಚೀಲಾಳದೇವ ತೊರಗಲೆ ನಾಡೊಳ್ ।
ಅಂತಿರುತಮಿರ್ದು ॥

ಒದವಿದ ಶಿವಭಕ್ತಿಯ ಸಂ ।
ಪದಮಂ ಕಲ್ಲರಸನರಸಿ ಕನ್ನಾದೇವಿಗೆ ।
ಮುದದಿಂದವಿತ್ತ ಚೀಲಾ ।
ಳದೇವಂ ಜಂಗಮಸುಖೈಕಗುಣಸದ್ಭಾವಂ ॥

ಆ ಸತಿ ಕನ್ನಾದೇವಿ ।
ಶ್ರೀಸುಖ ಸಂಪದಂ ವಿಳಾಸ ವಿಭವಾದಿಗಳಂ।
ಬಾಸಣೆಸಿ ಶಿವಗಣಂಗಳಿ ।
ಗೋಸರಿಸದೆ ಮಾಡಿ ಕೂಡೆ ಸುಖಿಸುತ್ತಿರ್ಪಳ್ ॥

ವಚನ ॥ ಅನಂತರಮ್

ಕರ್ಮಾತಿಶಯದಿ ನಿಜಪತಿ ।
ಧರ್ಮಧ್ವಜ ದೇವಲೋಕವನೆ ತಾನೈದಲ್ ।
ಧರ್ಮಜ್ಞೆ ದೇವಿ ಕನ್ನಲೆ ।
ಕಮ್ಮXಯಂ ಪರಿ(=ಪಾ?)ಯಲುಜ್ಜುಗಂ ಗೆಯ್ವನ್ನಂ ॥

ಪರಮಗುರು ಸಿದ್ಧದೇವಣ ।
ಸಿರಿಗಿರಿಯ ನಿವಾಸನಾಜ್ಞೆಯಿಂ ಬೆಸಸಿದನ ।

ಚ್ಚರಿಯ ಮನೆಯಪ್ಪ ಮುಕ್ತೇ ।
ಶ್ವರಲಿಂಗದೊಳಲ್ಲಿ ತುಂಗಭದ್ರೆಯ ತಡಿಯೊಳ್ ॥

ಆನೇನ ನೆನೆದೆ ಸದ್ಗುರು ।
ತಾನೇನು ತೋರಿದಂ ವಿಚಿತ್ರಮೆನುತ್ತಂ ।
ಮಾನಿನಿ ಕನ್ನಾದೇವಿಯ ।
ರಾನಂದದಿ ಬಂದು ಮುಕ್ತಿನಾಥನ ಕಂಡಳ್॥

ಅಂತಾ ಮುಕ್ತಿಕ್ಷೇತ್ರದೊಳಿರ್ದು ಪಿಂಗದೆ ಲಿಂಗಜಂಗಮಾರ್ಚನ ತತ್ಪರೆಯಾಗಿ ರೆಯಿರೆ....XX.... ಭುವನವರಿಯಲ್ಕೆ ಕಲಿದೇವರ ಸ್ಥಾಪಿಸಿದಳ್॥....(ಮುಂದೆ ದತ್ತಿ ವಿವರಣೆ ಇದೆ.)

ಈ ಶಾಸನದಲ್ಲಿ ಹೇಳಲಾದ ರೇವಣಸಿದ್ಧನ ವಿಷಯ ಹಿಂದೆ ಬಂದಿದೆ. ಈತನ 'ಕಾರುಣ್ಯದ ಶಿಶು' ಚೀಲಾಳ. ಇವನು ದೇವಗಿರಿ ಯಾದವ ಅರಸನೆಂದು ಡಾ. ನಂದಿಮಠ[೨೭], ಯಾದವ ಭಿಲ್ಲಮ Vನ ಅಣ್ಣನ ಮಗ ಕಾಳಿಯ ಬಲ್ಲಾಳನೆಂದು ಶ್ರೀ ಚನ್ನಮಲ್ಲಿಕಾರ್ಜುನರ ಊಹೆ[೨೮]. ಇಲ್ಲಿ ಬಳಸಲಾದ 'ಸಿದ್ಧರೇವಣನ ಕಾರುಣ್ಯದ ಶಿಶು' 'ಭಕ್ತ್ಯಾಚಾರದ ಚೀಲಾಳ' 'ಜಂಗಮಸುಖೈಕ ಗುಣಸದ್ಭಾವಂ' ಎಂಬ ಮಾತುಗಳು ಈ ಚೀಲಾಳನ ವೀರಶೈವತ್ವಕ್ಕೆ ಸಾಕ್ಷಿ ನುಡಿಯುತ್ತಿವೆ.

ಈ ಚೀಲಾಳನ ಪರಮಶಿಷ್ಯೆ ವೀರಕನ್ನಾದೇವಿ. ತೊರಗಲೆಯ ಅಧಿಕಾರಿ ಕಲ್ಲರಸನ ಧರ್ಮ ಪತ್ನಿಯಾದ ಇವಳ ಉಜ್ವಲವೈರಾಗ್ಯಜೀವನ ಈ ಶಾಸನದಲ್ಲಿ ಎರಕಗೊಂಡಿದೆ. ಸಕಲಸಂಪದವನ್ನು ಶಿವಗಣಗಳಿಗೆ ಸಮರ್ಪಿಸುತ್ತಿದ್ದ ಈಕೆ ಪತಿಯ ಮರಣಾನಂತರ ವೈರಾಗ್ಯ ತಾಳಿ ರೇವಣಸಿದ್ಧನ ಆದೇಶದಂತೆ ಮುಕ್ತಿಕ್ಷೇತ್ರಕ್ಕೆ ಬಂದು 'ಲಿಂಗಜಂಗಮಾರ್ಚನತತ್ಪರೆ' ಯಾದಳು. ಮುಕ್ತಿನಾಥದೇವಾಲಯದ ನೆರೆಯಲ್ಲಿ ತನ್ನ ಪತಿ ಕಲ್ಲರಸನ ಹೆಸರಿನ ಕಲಿದೇವರ ದೇವಾಲಯವನ್ನು ಕಟ್ಟಿಸಿದಳು. ಈ ಕಲ್ಲರಸ ಮತ್ತು ಅರ್ಜುನವಾಡ ಶಾಸನೋಕ್ತ ಹಾಲಬಸವಿದೇವನ ತಂದೆ ಕಲಿದೇವ ಮುನಿಪ ಇಬ್ಬರೂ ಒಬ್ಬನೇ ಎಂದು ಶ್ರೀ ಎಂ.ಜಿ. ನುಂಜಂಡಾರಾಧ್ಯರ ಊಹೆ.[೨೯]

ಅಂಬಿಗರ ಚೌಡಯ್ಯ

ಶರಣಸಾಹಿತ್ಯದಲ್ಲಿ ಸರ್ವಜ್ಞವಾಣಿಯಿಂದ ಮೆರೆಯುವ ವ್ಯಕ್ತಿ ಅಂಬಿಗರ ಚೌಡಯ್ಯ. ಬಸವಣ್ಣನವರ ಸಮಕಾಲೀನನೆಂದು ಪರಂಪರೆಯ ನಂಬುಗೆ ಇದ್ದರೂ ಈತನು ೧೩ನೆಯ ಶತಮಾನದ ಶಿವದೇವ ಒಡೆಯರ ಶಿಷ್ಯರಲ್ಲಿ ಒಬ್ಬನೆಂದು ಕೆಲವರ ಅಭಿಪ್ರಾಯ. ಇವರಿಗೆ ಆಧಾರ ಕೆಳಗಣ ಚೌಡದಾನಪುರ, ಮೈಲಾರ ಶಾಸನಗಳು.

"......ಮುನ್ನ ಹಿರಿಯ ಜೋಯಿದೇವರಸರು ಚಿಕ್ಕಕುರುವತ್ತಿನಗ್ರಹಾರಮಾ ಶ್ರೀ ತ್ರಿಭುವನಮಲ್ಲದೇವನ ಪರಮವಿಶ್ವಾಸಿ ಮಣಂಬೆ(=ವಣಂಬೆ?) ನಾಯಕನ ಪ್ರೇರಣೆಯಿಂ ಆಗಾಮಿಯಕ್ಷಿಣೀ (ರಕ್ಷಣ) ಸಹಿತ ತಾಂಬು(ತಾಮ್ರ)ಶಾಸನದಲ್ಲಿ ಬರೆಸಿ..." ಎಂಬ ಚೌಡದಾನಪುರದ

---

೨೭. ಶಿವಾನುಭವ ೪-೩, ಪು. ೧೧೨.
೨೮. ಶ್ರೀ ರೇವಣಸಿದ್ಧರು, ಪು. ೨೮೨
೨೯. ಶಿವದೇವ ವಿಜಯಂ (ಪೀಠಿಕೆ XXXII).

ಅಸ್ಪಷ್ಟ ಶಿಲಾಶಾಸನ ಭಾಗದಲ್ಲಿ ಬರುವ ಮಣಂಬೆ (=ವಣಂಬೆ) ನಾಯಕನೆಂದರೆ ಅಂಬೆನಾಯಕನೆಂದೂ ಈತನೇ ಅಂಬಿಗರ ಚೌಡಯ್ಯನೆಂದೂ ಇವರ ಭಾವನೆ.

"ಶ್ರೀ ಶಿವದೇವರು ಮುಕ್ತಿನಾಥಲಿಂಗದಲ್ಲುದ್ಭವಿಸಿ ಶ್ರೀಕುರುವತ್ತಿ ನಂದೀಶ್ವರ, ಶ್ರೀ ಮೈಲಾರಲಿಂಗ, ಶ್ರೀ ಹೊನ್ನಮ್ಮದೇವಿ, ಶ್ರೀ ಶರಣಚೌಡಯ್ಯನವರು ಮೊದಲಾದ ಶಿವಾಂಶಭೂತರಿಗೆ ಶಿವಧರ್ಮೋಪದೇಶ ಶಿವಲಿಂಗಧಾರಣಾದಿ ಕ್ರಿಯೆಗಳನ್ನು ಮಾಡಿದರು..." ಎಂಬ ಮೈಲಾರಶಾಸನದ ಈ ಭಾಗದಲ್ಲಿ ಶಿವದೇವನ ಶಿಷ್ಯನಾದ ಶರಣ ಚೌಡಯ್ಯನೊಬ್ಬನ ಉಲ್ಲೇಖವಿದೆ. ಈತನು ಅಂಬಿಗರ ಚೌಡಯ್ಯನೆಂದು ವಿದ್ವಾಂಸರ ಊಹೆ. ಶಿವದೇವ ಒಡೆಯರಿಗೆ ಈ ಚೌಡಯ್ಯನು ದಾನವಾಗಿ ಕೊಟ್ಟ ಪುರವೇ ಈಗಿನ ಚೌಡದಾನಪುರವೆಂದು ಇವರ ಅಭಿಪ್ರಾಯ. ಇದು ನಿಜವಿದ್ದ ಪಕ್ಷದಲ್ಲಿ ಅಂಬಿಗರ ಚೌಡಯ್ಯನು ೧೩ನೆಯ ಶತಮಾನದ ಶಿವದೇವರ ಸಮಕಾಲೀನನೆಂದು ಹೇಳಬೇಕಾಗುತ್ತದೆ. ಆದರೆ ಚೌಡದಾನಪುರ ಶಾಸನದ ಮಣಂಬೆ (=ವಣಂಬೆ) ನಾಯಕ ಮತ್ತು ವಚನಕಾರ ಅಂಬಿಗರಚೌಡಯ್ಯನ ಮಧ್ಯ ಸಂಬಂಧ ಕಲ್ಪಿಸಲು ಆಧಾರ ಸಾಲದು. ಕೆರೆಮಲ್ಲಾಪುರ ಶಾಸನದ 'ಶರಣಚೌಡಯ್ಯ'ನೆಂದರೆ ಅಂಬಿಗರಚೌಡಯ್ಯನೆನ್ನಲು ಆಧಾರಗಳು ಬೇಕು. ಮೇಲಾಗಿ ಕೆರೆಮಲ್ಲಾಪುರ ಶಾಸನ ತೀರ ಇತ್ತೀಚಿನದಿದ್ದು, ಜನತೆಯಲ್ಲಿ ನೆಲೆಯೂರಿದ ಅಂಬಿಗರ ಚೌಡಯ್ಯನ ವದಂತಿಯೇ ಅದರಲ್ಲಿ ಎಡೆಪಡೆದಿರಬಹುದು. ಅದಕ್ಕಾಗಿ ಚೌಡದಾನಪುರ ಮತ್ತು ಅಂಬಿಗರಚೌಡಯ್ಯರ ಮಧ್ಯ ನಾಮಸಾಮ್ಯವನ್ನು ಬಿಟ್ಟರೆ ಬೇರೆ ಆಧಾರಗಳೇ ಇಲ್ಲವೆನ್ನಬಹುದು.[೩೦]

ಪರ್ವತಯ್ಯ-ಅಪ್ಪಯ್ಯ ಮತ್ತು ದೇವರಸ

ಬಸವೋತ್ತರ ಕಾಲದ ಅನೇಕ ಶರಣರನ್ನು ಗುರುತಿಸಿದ ಲಕ್ಕಣದಂಡೇಶಾದಿಗಳ ಗರುಡದೃಷ್ಟಿಯಿಂದ ಹೊರಗುಳಿದ ಶಿವಭಕ್ತರಲ್ಲಿ ಪರ್ವತಯ್ಯ ಮತ್ತು ಈತನ ಶಿಷ್ಯರಾದ ಅಪ್ಪಯ್ಯ, ದೇವರಸರು ಪ್ರಮುಖ ವ್ಯಕ್ತಿಗಳು.[೩೧] ಶ್ರೀಶೈಲ ಮಲ್ಲಯ್ಯನು ನಂದೀಶ್ವರನ ಮುಖಾಂತರ ಪರ್ವತಯ್ಯನಿಗೆ, ಪರ್ವತಯ್ಯನು ಮಾವನೂರೊಡೆಯರಾದ ಅಪ್ಪಯ್ಯ, ದೇವರಸರಿಗೆ ಲಿಂಗದೀಕ್ಷೆ ನೀಡಿದ ವಿಷಯ ಕೆಳಗಣ ಮಾವನೂರು ಶಾಸನದಲ್ಲಿ ಮನಂಬುಗುವಂತೆ ಮೂಡಿನಿಂತಿದೆ:

......ಜಡೆಮುಡಿಯೊಳ್ಸುರಾಪಗೆಯನಾನ್ತ ಮಹೇಶ್ವರನೊಲ್ದ ಶೈವ ಸಂ ।
ಗಡಿಗನ ಪುಣ್ಯಪೋಷಕನ ವೀತಗುಣೌಘನ ಮರ್ತ್ಯಲೋಕದೊಳು ।
ನಡೆವ ಶಶಾಂಕಶೇಖರನ ಸರ್ವ್ವಸಮ್ಯಕನ ಚಾರು ಮಾವನೂ ।
ರೊಡೆಯರೆನಿಪ್ಪ ದೇವರಸನುಂನತ ಶೀಲವಿಳಾವಿಭೂಷಣಂ ॥

ಗದ್ಯ ॥ ಅದೆಂತೆಂದಡೆ ಸ್ವಸ್ತಿ ಸಮಸ್ತ ಸಮುದ್ರಮುದ್ರಿತಮಪ್ಪ ಧರಾಕಾಂತೆಯ ಶಿರಃಕಂಜದಂತೆ । ಪುರತ್ರಯವಿಪಿನದಹನದಾವಾನಳ ಸುಕೃತಸರ್ವ್ವಸ್ವದ ಗವಸಣಿಗೆಯಂತೆ । ಸಕಳಭಕ್ತರ ಪುಣ್ಯಸಾಲೆಯಂತೆ । ಮುಕ್ತ್ಯಾಂಗನೆಯ ತಾಯ್ವನೆಯಂತೆ । ಧರ್ಮಾರ್ಥಕಾಮ ಮೋಕ್ಷಂಗಳಪ್ಪ

---

೩೦. ಅರ್ಜುನವಾಡ ಶಾಸನದ ಮಿತಿಯಿಂದು ಚೌಡದಾನಪುರದಲ್ಲಿಯೂ ಒಂದು ಶಾಸನ ಹುಟ್ಟಿದೆ. ಒಂದರ ದಾತೃಗಳು ಚೌಡಿಸೆಟ್ಟಿ ಮತ್ತು ನಾಗರಸ. ಇನ್ನೊಂದರ ದಾತೃ ಚೌಡಿಸೆಟ್ಟಿಯರ ಕರಣದ ನಾಗರಸನ ತಮ್ಮ ಭಾನುದೇವ. ಹೀಗಾಗಿ ಚೌಡಿಸೆಟ್ಟಿಯೂ ಈ ಚೌಡದಾನಪುರದ ಸಂಪರ್ಕವಿಟ್ಟುಕೊಂಡಿರಬೇಕು. ಬಹುಶಃ ಪರಮಶಿವಭಕ್ತನಾದ ಈ ಚೌಡಿಸೆಟ್ಟಿಯು ದಾನವಾಗಿ ಕೊಟ್ಟ ಪುರವೇ ಚೌಡದಾನಪುರವಾಗಿರಬೇಕು ಎಂದು ಊಹಿಸಬಹುದು.

೩೧. ಸಾನಂದ ಚರಿತೆ (೯-೭೬). ಸಾನಂದ ಚರಿತೆಯಲ್ಲಿ ಅಪ್ಪಯ್ಯ ಎಂಬ ಹೆಸರು ಬರುತ್ತಿರುವುದನ್ನು ಗಮನಿಸಬೇಕು.

ಚತುರ್ವ್ವಿಧಪುರಾಷಾರ್ಥಂಗಳ ಜನ್ಮಕ್ಷೇತ್ರದಂತೆ ಮೆಱೆವ। ಶ್ರೀಪರ್ಬ್ಬತದ ಮೇಲೆ ಮೂಜಗಕೆ ಸೋಜಿಗಮಪ್ಪೊಜೆಯಿಂ ರಾಜಿಸುವ ರಾಜೇಂದ್ರ ಚೂಡಾಮಣಿಯ ಮನುಮಥಮತ್ತೇಭಮ್ರಿಗಾಧಿಪನ ಕೀನಾಶಬಳಬಳಾಹಕ ಮಹಾಬಳನ । ಶಾರ್ದ್ದೂಲ ದೈತ್ಯಧ್ವಾಂತ ಪ್ರದ್ಯೋತನನ । ದರ್ಪ್ಪಿಷ್ಟ ಕುಂಜರಾಸುರ ಮರಾಳ ಹರುಷ ವಿಳಯ ಜಗದಗರ್ದ್ದನನ। ಸುರಸರಿತ್ಸಮುದ್ಭೂತ ಲೋಲತರ ಕಲ್ಲೋಲಮಾಲಾ ಸಂಘಟ್ಟಿತ ಜಟಾಜಾಳನ। ಲೋಕಾಲೋಕ ಚೇತನತರ ವಾತಪಿತ್ತ ಬ್ರಾತನೂತನಾಭರಣನ ಶ್ರೀ ಪರ್ವತಾಧೀಶ್ವರನಪ್ಪ ಮಲ್ಲಿಕಾರ್ಜುನನ । ಕಾರುಂಣ್ಯ ಕಾನ್ತಿ ಕಾಯಮಂ ತಳೆವಂತೆ । ದಕ್ಷಿಣದಿಶಾಭಾಗದೊಳು ಮೆಱೆವ ಶೀವರವೆಂಬ ಮಹಾಗ್ರಾಮದೊಳು । ಶಿವ ನಿಯಮಾಸ್ತರಪ್ಪ ಧರಾಮರರ ಪುಣ್ಯಾ(ಣ್ಯೋ)ದರದೊಳು ಜನಿಯಿಸಿ ಪೂರ್ವವಾಸನಾಸಂಬಂಧದಿಂ । ಪರ್ವ್ವತೈಯ್ಯನೆಂಬ ನಾಮಮಂ ತಳೆದು ಶಯಿಶವಲೀಲೆಯಂ ಪತ್ತುವಿಟ್ಟು । ಸಕಲ ಪ್ರಪಂಚತೆಯಂ ಲಘುತರಂ ಮಾಡಿ ತಾಂ ಗುರುತೆವೆತ್ತುದಱಿಂ ಚಂದ್ರನುದಯದಿಂ ಮುಂನಂ ಬೆಳುದಿಂಗಳೊಗೆವಂತೆ । ಫಳರಸಮನೀಂಟುವದಱಿಂ ಮುಂನ ಸವಿ ಜಿಹ್ವೆಯಂ ಮುತ್ತುವಂತೆ। ತನಗೆ ಗುರುಪ್ರಾಪ್ತಿಯಪ್ಪುದಱಿಂ ಮುಂನವೆ ಪೂರ್ವವಾಸನಾ ಸಂಬಂಧದಿಂದುರ್ಬ್ಬಿ ಕೊರ್ವ್ವಿ ಪರ್ವ್ವತಮನೇಱಿ ಶ್ರೀ ಮಲ್ಲಿಕಾರ್ಜುನನಂ ಸುತ್ತಿ ಮುತ್ತಿ ಪತ್ತಿ ಪಱಿದು ನೆರೆದಾಲಿಂಗಿಸಿ ತನ್ನ ಚಿತ್ತಮನೀಸಾಂಘ್ರಿಯೊಳು ಸೆಱೆಯಿಟ್ಟು । ತಂನ ಬಱಿದೇಹಮಂ ಜನ್ಮ ಭೂಮಿಗಂ ಶ್ರೀಪರ್ವ್ವತಕ್ಕೆಡೆಯಾಡುತ್ತಿರ್ಪ ನೇಹಮಂ ಕಂಡು ಶ್ರೀ ಮಲ್ಲಿಕಾರ್ಜುನನಂ ಗುರುಕಾರುಣ್ಯಂ ಮಾಡುಲುವೇಡಿ । ನಂದೀಶ್ವರನಂ ಕರೆದು ನಿಂನ ನಾಮದೊಳೆನ್ನ ನಾಮಮಂ ಬೆರಸಿ । ನಂದೀಶ್ವರದೇವರ ಮಲ್ಲೈಯನೆಂಬ ಪೆಸರನಾಂತು ಪೋಗಿ ಎಂಮ ಮಗ ಪರ್ವ್ವತೈಯ್ಯಂಗುಪದೇಶ ಮಾಡೆಂದು ಬೆಸಸೆ ತದನುಗ್ನೆಯಂ ಕೈಕೊಂಡು ಬರುತ್ತಿರಲಿತ್ತಲಭವಂ ಮುಂಜಾವದೊಳು ಸ್ವಪ್ನಾವಸ್ತೆಯೊಳಿಪ್ಪ ಪರ್ವತೈಯ್ಯನ ಮನದ ಕೊನೆಯಂ ಮೆಟ್ಟಿ ಯಂಂನ ರೂಪಿಂ ಮಾಹೇಶ್ವರನೆಂನ್ನಾಗ್ನೆಯಿಂದಾ ಬಂದಪನಾತನಿಂ ಗುರುಕಾರುಂಣ್ಯಬಡೆವುದೆಂದು ಬೆಸಸೆ ।

ಮಯಿಮುರಿದೆದ್ದು ಮಹೋತ್ಸವದಿಂ ಸಕಳಮಾಹೇಶ್ವರರ್ವ್ವೆರಸಿ ಗಂಗೇಶ್ವರಕೆ ಪೋಗಿ ಬಂದ ಮಲ್ಲೈಯಂಗಳಂ ಕಂಡು ಶಿವಂ ಪೇಳ್ದ ಕುಱುಪಂ ತಿಳಿದು ಈ ಮಲ್ಲೈಯ್ಯಂಗಳ ಕೈಯಿಂ ಗುರುಕಾರುಂಣ್ಯಂಬಡೆದು ।

ಶಾಂತಿಯಂ ತಳೆದ ನಿರ್ಮ್ಮಳ ಜ್ಯೋತಿಯಂತಿಪ್ಪ ಪರ್ವ್ವತೈಯ್ಯನ ಗುಣಗಳಂ ಪೊಗಳ್ವಡನಂತಗತರ್ಕ್ಕವೆನಿಸಿ ಮೆಱೆವುತ್ತೆ ಭಕ್ತನೆಂದಱಿದಡಿಱಿದಂತೆ ಮುಱುಗುತುಂ । ನಿಂದಿಸಿದವರ ಮೇಲೆ ನೇಹವ ಗಳಿಸುತಂ । ಮೆಱೆವುತ್ತಿಱೆಯಿಱೆ ।

ಶಿವನ ವುಭಯನೇತ್ರದಿಂ ಚಂದ್ರಸೂರ್ಯರೊಗೆದಂತೆ । ಪರ್ವ್ವತೈಯನುಭಯವಹ ಕಾರುಂಣ್ಯಕಟಾಕ್ಷದಿಂದುದಯಿಸಿದ । ಅಪ್ಪೈಯ್ಯ ದೇವರಸರಂ ಕಂಡು ಕಾರುಂಣ್ಯಂ ಮಾಡಲುವೇಡಿ । ಚಂದ್ರಂಗೆ ಬೆಳುದಿಂಗಳಂ । ಬೆಳುದಿಂಗಳಿಂಗೆ ಪರಿಮಳಮಂ । ಪರಿಮಳಕ್ಕೆ ಸವಿಯಂ । ಸವಿಗೆ ರೂಪಂ । ರೂಪಿಂಗೆ ಸೌಂದರ್ಯ್ಯಮಂ ಕೊಡುವಂತೆ ವುಪದೇಶಂ ಮಾಡೆ। ಕೈಕೊಂಡಪ್ಪೈಯ ದೇವರಸರು ಪುಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ । ಶಾಂತಿ ಸಾಕಾರವೆತ್ತಂತೆ । ಪರಮಾರ್ಥಂ ಶರೀರವಡೆದಂತೆ । ಭಕ್ತಿಗ್ನಾನಂ ಸಂಸಾರವಂ ಸವಿದಂತೆ। ಮೆಱೆವುತ್ತೆ । ಲೋಭವಡಿಯಿಡದ ಕರಪಲ್ಲವಂಗಳ । ಅನ್ರುತವಂಕುರಿಶದ ರಸನಾಪ್ರದೇಶದ। ಶಂಸ್ರುತಿ ಸರಸವಾಡದ ಚರಿತ ಸುದ್ದಿಯ । ಕಾಮನ ಡಾಮರಕೊಳಸೋರದ ಮನದ ಬಿನದದ। ಮಾಎಯಾಗ್ಣೆಯನುಲ್ಲಂಗಿಸಿದ ಚಿತ್ತವ್ರುತ್ತಿಯ । ಸಬ್ದಸ್ಪರುಶರೂಪರಸಗಂಧಾದಿ ಭೋಗಕ್ಕೆಳಸದ ಕರಣಾವಳಿಯ ಮಹಾಮಹಿಮರೆನಿಸುವ ಅಪ್ಪೈಯ ದೇವರಸರು ।

ತಿಲಮಧ್ಯದೊಳಿರ್ಪ್ಪ ತೈಲದಂತೆ । ಕಾಷ್ಟಮಧ್ಯದೊಳಿಪ್ಪ ಅಗ್ನಿಯಂತೆ । ಜಲಮಧ್ಯದೊಳಿರ್ಪ್ಪ ಕಮಳದಂತೆ । ತಾವು ಮಾನುಷಚರಿತರಪ್ಪುದಱಿಂ ಸಂಸಾರಮಂ ಸೋಂಕದೆ ಅಣೋರಣೀಯಾಂ ಮಹತೋ ಮಹಿಯಾಂ ಎಂಬ ಸ್ತುತಿವುಂಟಾಗಿ ಯಿಱುಹ ಮೊದಲಾ ಪರಮಾಣುವಿನ ನೋವಂ ಸೈರಿಸದೆ ಯಿಚ್ಛಾಶಕ್ತಿ ಗ್ನಾನಶಕ್ತಿ ಕ್ರಿಯಾಶಕ್ತಿಯುಳ್ಳ ಶಿವಭಕ್ತರಪ್ಪುದಱಿಂ । ವುಭಯ ತನುವಿಂದನಂತ ವಾದ್ಯದಿಂ ಶಿವನಂ ಕೇಳಿಸುತಂ । ಅನವರತಂ ಶಿವನೊಳವಿರಳಪೂಜೆಯಂ ಮಾಡುತಂ । ಮೂಲೋಕಮಂ ತೀವಿದ ಶೈವಕೀರ್ತಿಯಂ ತಳೆದುದಪ್ಪೈಯ ದೇವರಸರು ಸುಖದೊಳಿರೆಯಿರೆ । ಶಿವಶರಣು...............

ಹೊಯಿಸಣ ಶ್ರೀ ವೀರನಾರಸಿಂಹ್ವದೇವರಸರು ಸಕವರುಷ ೧೨೦೪ ವಿಷು ಸಂವತ್ಸರದ ಮಾಘ ಬಹುಳ ೧೪ ಆದಿತ್ಯವಾರ ಸಿವರಾತ್ರೆಯಲು (ಸೀಗೆ ನಾಡೊಳಗಣ ತವನಿಧಿಯನು)...... ಶ್ರೀಮತ್ಪರಮ ಮಹೇಸ್ವರರುಮಪ್ಪ ಮಾವನೂರ ಹಿರಿಯೊಡೆಯರೆನಿಪ ದೇವರಸೈಯ್ಯಂಗಳ ಹೆಸರಲಿ ಅವರ ತಂಮಂದಿರು ಚಿಕ್ಕವೊಡೆಯರೆನಿಪ ಅಪ್ಪರಸೈಯ್ಯಂಗಳು ಮಾವನೂರಲಿ ಪ್ರತಿಷ್ಠೆಯ ಮಾಡಿದ ದೇವೇಸ್ವರದೇವರು, ಆ ಅಪ್ಪರಸೈಯ್ಯಂಗಳ ಅರಸಿಯರಪ್ಪ ದೇವೌವ್ವೆಯರು ಆ ಅಪ್ಪರಸೈಯ್ಯಂಗಳ ಹೆಸರಲಿ ಆ ಮಾವನೂರಲ್ಲಿಯೆ ಪ್ರತಿಷ್ಠೆಯಂ ಮಾಡಿದ ಅಪ್ಪೇಸ್ವರದೇವರು ಇಂತೀ ದೇವೇಸ್ವರದೇವರ ಅಪ್ಪೇಶ್ವರದೇವರ ಶ್ರೀಕಾರ್ಯ.... ಪಂಚಪರ್ವ್ವ ಗುರುಪರ್ವ್ವ...... ಕೆಯೂ.... ಸಲುವಂತಾಗಿ... ಆ ಅಪ್ಪರಸೈಯ್ಯಂಗಳ ಅರಸಿಯರು ದೇವೌವ್ವೆಯರಿಗೆ ಆ ಶ್ರೀ ವೀರನಾರಸಿಂಹ್ವದೇವರಸರು ಆ ತವನಿಧಿಯನು ಸರ್ಬ್ಬನಮಸ್ಯವಾಗಿ ಧಾರಾಪೂರ್ವಕಂ ಮಾಡಿಕೊಟ್ಟರು ।

ಆ ದೇವೌವ್ವೆಗಳು ತಾವು ಆ ತವನಿಧಿಯನು ಶ್ರೀ ದೇವೇಸ್ವರ ಅಪ್ಪೇಶ್ವರ ಪುರವಾದ ತವನಿಧಿಯನು ಸಿವಪುರವೆಂದು ಹೆಸರಿಟ್ಟು ಆ ಶಿವಪುರವನು ನಿಯೋಗವ್ರಿತ್ತಿ ೪೦ ಮಾಡಿ... ಆ ದೇವರ ಸರ್ವ್ವನಿಯೋಗಿಗಳಹ ವ್ಯಪಮನ್ನು ಭ್ರಿಗು ಸದ್ರುಶರಹ ಸಿವಸಂಸ್ಕಾ(ರ)ಸಂಪಂನರಪ್ಪ ಪರಮಮಾಹೇಶ್ವರುಗಳಿಗೆ ನಿಯೋಗವ್ರಿತ್ತಿಯಾಗಿ ಧಾರಾಪೂರ್ವ್ವಕಂ ಮಾಡಿಕೊಟ್ಟರು॥"[೩೨]

ಇದು ಶರಣರನ್ನು ಕುರಿತ ಒಂದು ವೈಶಿಷ್ಟ್ಯಪೂರ್ಣ ಶಾಸನ. ನಂದೀಶ್ವರದೇವರ ಮಲ್ಲಯ್ಯನು ಪರ್ವಯ್ಯನಿಗೆ, ಪರ್ವತಯ್ಯನು ಅಪ್ಪರಸ ದೇವರಸರಿಗೆ ನೀಡಿದ ಈ ಗುರುಕರುಣೆ ವೀರಶೈವ ಗುರುಕರುಣೆಯನ್ನು ಪ್ರತಿಬಿಂಬಿಸುತ್ತದೆ. ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಪದಗಳಂತೂ ವೀರಶೈವದ ಸ್ಪಷ್ಟ ಪರಿಭಾಷೆಗಳಾಗಿವೆ.

ಇದಲ್ಲದೆ ಶರಣರ ವಚನಪ್ರಭಾವ ಈ ಶಾಸನದಲ್ಲಿ ನಿಚ್ಚಳವಾಗಿ ಮೂಡಿದೆ. "ಭಕ್ತನೆಂದಱಿದಡಿಱಿದಂತೆ ಮಱುಗುತುಂ, ನಿಂದಿಸಿದವರ ಮೇಲೆ ನೇಹವ ಗಳಿಸುತುಂ" ಎಂಬುದು ಬಸವಣ್ಣನವರ "ಎನ್ನ ಭಕ್ತನೆಂಬರು ಎನ್ನ ಸಮಯಾಚಾರಿಯೆಂಬರು ನಾನೇನು ಪಾಪವ ಮಾಡಿದನೋ?" "ಹೊಯ್ದವರೆನ್ನ ಹೊರೆದವರೆಂಬೆ ಬಯ್ದವರೆನ್ನ ಬಂಧುಗಳೆಂಬೆ" ಎಂಬ ವಚನಗಳಿಗೆ ಸಮಾನವಾಗಿದೆ. "ತಿಲಕ ಮಧ್ಯದೊಳಿರ್ಪ ತೈಲದಂತೆ, ಕಾಷ್ಟಮಧ್ಯದೊಳಿಪ್ಪ ಅಗ್ನಿಯಂತೆ, ಜಲದ ಮಧ್ಯದೊಳಿರ್ಪ ಕಮಳದಂತೆ" ಎಂಬೀ ಮಾತುಗಳಲ್ಲಿ ದೇವರ ನಿಲುವನ್ನು ನಿರೂಪಿಸುವ ಶರಣರ ವಚನಗಳ ದಟ್ಟಪ್ರಭಾವ ಎದ್ದು ತೋರುತ್ತದೆ.

---

೩೨. EC.XV ಹೊಳೆನರಸೀಪುರ ೧೧೨ ಮಾವನೂರ, ಕ್ರಿ.ಶ. ೧೨೮೪. ದೇವವ್ವೆಯು ತಮ್ಮ ಮಗಳು ಪಾರ್ವತಿದೇವಿಗೆ ಸ್ಥಾನಪಟ್ಟ ಕಟ್ಟಿದಳು ಎಂಬ ವಿಷಯವೂ ಇಲ್ಲಿದೆ.

ಈ ಶಾಸನದ ಒಟ್ಟು ಶೈಲಿಯಲ್ಲಿ ಹರಿಹರನ ಉತ್ಸಾಹ ಸೌಕುಮಾರ್ಯಗಳ ಜೀವಂತಿಕೆ ಸೂಸಿ ಹರಿದಿದೆ. "ಚಂದ್ರಂಗೆ ಬೆಳುದಿಂಗಳಂ, ಬೆಳುದಿಂಗಳಿಗೆ ಪರಿಮಳಮಂ, ಪರಿಮಳಕ್ಕೆ ಸವಿಯಂ, ಸವಿಗೆ ರೂಪಂ, ರೂಪಕ್ಕೆ ಸೌಂದರ್ಯಮಂ ಕೊಡುವಂತೆ ವುಪದೇಶಂ ಮಾಡೆ" ಎಂಬ ಸರಪಳಿ ಶೈಲಿ, "ಪುಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ, ಶಾಂತಿಸಾಕಾರವೆತ್ತಂತೆ, ಪರಮಾರ್ಥಂ ಶರೀರವಡದಂತೆ, ಭಕ್ತಿಗ್ಞಾನಂ ಸಂಸಾರವಂ ಸವಿದಂತೆ" ಎಂಬ ಉಪಮಾಶೈಲಿ, "ಲೋಭವಡಿಯಿಡದ ಕರಪಲ್ಲವಂಗಳ, ಅನ್ರುತವಂಕುರಿಶದ ರಸನಾಪ್ರದೇಶದ, ಶಂಸ್ರುತಿ ಸರಸವಾಡದ ಚರಿತಶುದ್ಧಿಯ । ಕಾಮನ ಡಾಮರಕೊಳಸೋರದ ಮನದ ಬಿನದದ" ಎಂಬ ವೈವಿಧ್ಯಪೂರ್ಣ ಗದ್ಯಶೈಲಿಯ ತುಂಬ ಹರಿಹರ ತುಂಬಿ ನಿಂತಿದ್ದಾನೆ. ಓದುತ್ತ ಹೋದಂತೆ ಹೆಜ್ಜೆ ಹೆಜ್ಜೆಗೂ ಹರಿಹರನ ನೆನಪು ಮರುಕಳಿಸುತ್ತದೆ. ಹೀಗಾಗಿ ಈ ಶಾಸನಕರ್ತೃ ಹರಿಹರದೇವನೆಂಬ ಭಾವನೆ ಮೂಡಲು ಅವಕಾಶವಿದೆ.[೩೫] ಇದರ ಕಾಲವಾದ ಕ್ರಿ.ಶ. ೧೨೮೪ ಈ ಊಹೆಗೆ ಪೋಷಕವಾಗಿದೆ.

ಆಕಾಶವಾಸಿ ಯತಿ

ಸ್ಫುರಿಸುತಾಕಾಶ ಮಧ್ಯದೊಳಿರ್ದು ತನ್ನ ಸಾ ।
ಸಿರ ಕಿರಣದಿಂ ತರಣಿ ದೆಸೆಗಳಂ ಬೆಳಗುವಂ ।
ತಿರೆ ವಿಮಲಶರಣಹೃದಯಾಕಾಶ ಮಧ್ಯದೊಳು ಸುಜ್ಞಾನಸೂರ್ಯನಾಗಿ ।
ಕರಣತತಿಯೊಳು ಬಿಡದೆ ಕವಿದ ಮಾಯಾತಮೋ ।
ಹರಣಮಂ ಮಾಡುತ್ತ ನಿತ್ಯಸುಖದಿಂದಿರ್ಪ ।
ಗುರುಮೂರ್ತಿಯಾಕಾಶವಾಸಿಯತಿವಂದಿತನ ಚರಣಾಂಬುಜಕ್ಕೆ ಶರಣು॥[೩೪]

ಅಮಾತ್ಯಶಿರೋಮಣಿ ಲಕ್ಕಣ್ಣದಂಡೇಶ ಮಾಡಿದ ಆಕಾಶವಾಸಿಯತಿಯ ಸ್ತುತಿಯಿದು. ಕ್ರಿ.ಶ. ೧೩೭೪ ಮತ್ತು ಕ್ರಿ.ಶ. ೧೪೩೭ರ ದೊಡ್ಡ ಕೌಲಂದೆ ಗ್ರಾಮದ ಎರಡು ಶಾಸನಗಳಲ್ಲಿ ಈತನ ಉಲ್ಲೇಖ ಹೀಗೆ ಬಂದಿದೆ.

ದೊಡ್ಡಕೌಲಂದೆಗ್ರಾಮ ಶಾಸನ[೩೫] (ಕ್ರಿ.ಶ. ೧೩೭೪): "ಸ್ವಸ್ತಿಸಮಸ್ತ ಪ್ರಶಸ್ತಿಸಹಿತಂ ಶ್ರೀ ಸಕವರುಷ ಸಂದ ೧೨೯೬ನೆಯ ಆನಂದ ಸಂವತ್ಸರದ ವೈಸಾಕ ಸು ೧೫ಗು ಸೋಮಗ್ರಹಣದಲ್ಲಿ ಸ್ವಸ್ತಿ ಶ್ರೀ ಯಮನಿಯಮಾದ್ಯಷ್ಟಾಂಗ ಯೋಗನಿರುತ ಪರಮ ಮಹಾಪಾಸ್ವತವ್ರತಾಚಾರ್ಯನಪ್ಪ ಆಕಾಶವಾಸಿ ಸಾಂಖಾದಿಗುರು ಅಯ್ಯನವರ ಮನೆಯ ಬ್ರಿಗೆ ಅರಿರಾಯವಿಭಾಡ ಭಾಸ್ಯಗೆ ತಪ್ಪುವ ರಾಯರ ಗಂಡ ಶ್ರೀ ವೀರಕಂಪಣ್ಣವೊಡೆಯರ ಕುಮಾರ ನಂಜಂಣವೊಡಿಯರು ಕೊಟ್ಟ ಅಗ್ರಹಾರಂ..."

ದೊಡ್ಡಕೌಲಂದೆಗ್ರಾಮ ಶಾಸನ[೩೬] (ಕ್ರಿ.ಶ. ೧೪೩೭): "ಸ್ವಸ್ತಿ ಶ್ರೀ ಮನುಮಹಾರಾಜಾಧಿ ರಾಜ ಪ್ರತಾಪದೇವರಾಯರು ಪ್ರಥಿವೀರಾಜ್ಯಂಗೆಯುತ್ತಿರಲು ಹಿರಿಯ ಕವಿಲಂದೆಯ ಆಕಾಶವಾಸಿಗಳ ಸ್ವರೂಪವಹ ಚಂದ್ರಮೌಳಿವೊಡೆಯರ ಶಿಷ್ಯರಹ ವಿದ್ವನ್ಮಹಾಜನಂಗಳು ಹುರಾಳಿಯ ಮಗXXಮಲ್ಲಯನೂ ಶಕವರ್ಷಂ ೧೩೫೯ನೇ xxx"

---

೩೩. ಗಿರಿಜಾಕಲ್ಯಾಣ ಮಹಾಪ್ರಬಂಧಂ (ಸಂಗ್ರಹ) ಪೀಠಿಕೆ XII ಅ.ಟಿ.

೩೪. ಶಿ.ತ. ಚಿ, ೩೮-೨೪೮.

೩೫. EC.III-i ನಂಜನಗೂಡು. ೧೦೮ ದೊಡ್ಡ ಕೌಲಂದೆ ಕ್ರಿ. ಶ. ೧೩೭೪

೩೬. EC.III-I ನಂಜನಗೂಡ ೧೧೯ ದೊಡ್ಡ ಕೌಲಂದೆ, ಕ್ರಿ.ಶ. ೧೪೩೭.

ಈ ಶಾಸನಗಳ ಪ್ರಕಾರ ಆಕಾಶವಾಸಿಯತಿಯ ಗ್ರಾಮ ಬಹುಶಃ ಕಲವಿಂದೆ. ಶಕವರ್ಷ ೧೨೯೬ ಅಂದರೆ ಕ್ರಿ.ಶ. ೧೩೭೪ಕ್ಕೆ ಹಿಂದೆ ಅವನು ಬದುಕಿರಬಹುದು. 'ಮಹಾಪಾಸ್ವತ ವ್ರತಾಚಾರ್ಯ' ಎಂಬ ಮಾತಿನಿಂದ ನಕಲೀಶಪಾಶಪತನೆಂದು ತಿಳಿದು ಬರವ ಈತನು, ಶಿವತತ್ವಚಿಂತಾಮಣಿ ಹೇಳುವ ನೂತನಗಣಂಗಳ ಮಾಲಿಕೆಯಲ್ಲಿ ಎಡೆಪಡೆದುದು ಗಮನಿಸಬೇಕಾದ ಅಂಶ. ಚಂದ್ರಮೌಳಿವೊಡೆಯರು "ಆಕಾಶವಾಸಿಗಳ ಸ್ವರೂಪ" ಎಂದು ಎರಡನೆಯ ಶಾಸನ ಹೇಳುವುದರಿಂದ ಮುಂದಣ ಜನಾಂಗದ ದೃಷ್ಟಿಯಲ್ಲಿ ಆಕಾಶವಾಸಿಯತಿಯು ಅವತಾರಪುರುಷನೆಂಬ ಮಹತಿಯನ್ನು ಪಡೆದಿರಬೇಕು.

ಲಕ್ಕಣದಂಡೇಶ

ಲಕ್ಕಣ್ಣದಣ್ಣಾಯಕರು ಮುನ್ನ ಭಂಡಾರಿ ।
ಜಕ್ಕಪ್ಪ ಕಲ್ಲೆಹದ ಕೇತಿಸೆಟ್ಟಿಯರಿವರು ।
ಲಕ್ಕಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ....॥[೩೭]

ವೀರಶೈವ ಧರ್ಮ ಸಮಾಜ ಮತ್ತು ಸಾಹಿತ್ಯಗಳನ್ನು ಸಮುದ್ಧರಿಸಿದ ಮಹಾಪುರುಷರೆಂದು ವೀರಶೈವಾಮೃತಮಹಾಪುರಾಣ ಸಾರುತ್ತದೆ. ಮಹಾಮಂತ್ರಿಯಾಗಿ, ಉದ್ದಂಡ ಸೇನಾಪತಿಯಾಗಿ, ಪರಮಶಿವಭಕ್ತನಾಗಿ, ಭಕ್ತಕವಿಯಾಗಿ ವೀರಶೈವದ ಪುನರುದ್ಧಾರ ಪ್ರಸಂಗದಲ್ಲಿ ಮಹಾಪಾತ್ರವಹಿಸಿದ ಲಕ್ಕಣಾಮಾತ್ಯನನ್ನು ಕುರಿತು ಈಗ ಕನ್ನಡದಲ್ಲಿ ೧೩, ತಮಿಳಿನಲ್ಲಿ ೪ ಹೀಗೆ ೧೭ ಶಾಸನಗಳು ಲಭಿಸಿವೆ. ಚಿತ್ರದುರ್ಗ, ಕೋಲಾರ, ಬೆಂಗಳೂರ, ಮಂಡ್ಯ, ಸೇಲಂ, ತಿರುಚನಾಪಳ್ಳಿ, ತಂಜಾವೂರ, ದಕ್ಷಿಣಕನ್ನಡಜಿಲ್ಲೆಗಳಲ್ಲಿ ಕಂಡುಬರುವ ಇವುಗಳನ್ನು ಕಾಲಕ್ರಮದಲ್ಲಿ ಅವಲೋಕಿಸಬಹುದು.

ರಾಮಗಿರಿ ಶಾಸನ[೩೮] (ಕ್ರಿ.ಶ. ೧೪೧೦): "ಹೊಸಪಟಣದ ಲಖಿಂಣವೊಡೆಯರ ನಿರೂಪದಿಂ ದುಂಮಿಯ ಸುಂಕದ ಹೊಸಪ ಬುಳಪಂಗಳು ರಾಮಗಿರಿಯ ರಾಮಯದೇವರ ಅಮೃತಪಡಿಗೆ ಪ್ರತಿ ತಿಂಗಳು........ರಾಮಯದೇವರಿಗೆ ೩, ವೀರಭದ್ರದೇವರಿಗೆ ೨, ಯೀ ಅಯಿದು ಹಣವನು ರಾಮಗಿರಿಯ ರುಸಿಗೆ ಪಸರಾಯವನು ಯೀ ಮರಿಯಾದೆಯಲು ಧರ್ಮಗಾರಿಯವನು ನಡೆಸುವರು...........;

ಅಚಟ್ನಹಳ್ಳಿ ಶಾಸನ[೩೯] (ಕ್ರಿ.ಶ. ೧೪೧೦): "ಶ್ರೀಮತು ಲಖಿಂಣವೊಡೆಯರು, ಆಶ್ವಾಲಾಯನಸೂತ್ರದ ಆತ್ರೇಯಗೋತ್ರದ ರುಕುಶಾಖೆಯ ಸಿಂಗಸ್ರರ ಮಕ್ಕಲ(ಳು) ಆಂನದಾತಗಳಿಗೆಗೊಟ್ಟ ಧರ್ಮಶಾಸನ-ಮುಳವಾಯಿ ರಾಜ್ಯಕ್ಕೆ ಸಲುವ ಬೆಳ್ಳೂರ ಸೀಮೆಯಲು ನಿಮ್ಮ ದನಕನಿದೇವಿಯು ಕಟ್ಟಿದ ಕೆರೆಯನು.... ಶ್ರೀವಿರೂಪಾಕ್ಷದೇವರ ಸನ್ನಿಧಿಯಲು ದೇವರಾಯಮಹಾರಾಯರಿಗೆ ಧರ್ಮವಾಗಬೇಕೆಂದು..... ಕೊಟ್ಟೆವಾಗಿ ಆ ಕೆರೆ ಕೆಳಗೆ ನೀರು ಹರಿದಷ್ಟು ಗದ್ದೆ ಇದಕ್ಕೆ ಸಲುವಂತ ಹೊಲನ.... ಸುಖದಿ ಭೋಗಿಸುದು."

---

೩೭. ವಿ.ಮ. ೮-೨೨-೫೨.

೩೮. EC.XI ಹೊಳಲ್ಕೆರೆ ೭೫ ರಾಮಗಿರಿ, ಕ್ರಿ.ಶ. ೧೪೧೦.

೩೯. EC.XI ಕೋಲಾರ ೧೦೪. ಅಚಟ್ನಹಳ್ಳಿ ೧೪೨೮

ತೀರ್ಥಮಲೈ ಶಾಸನ[೪೦] **(ಕ್ರಿ.ಶ. ೧೪೨೮)**: ಇದು ಎರಡನೆಯ ದೇವರಾಯನ ಕಾಲದ ಶಾಸನ, ಭಾಷೆ ತಮಿಳು. "ಮಹಾಪ್ರಧಾನ ಲಕ್ಕಣ್ಣವೊಡೆಯರ್" ಎಂಬ ಉಲ್ಲೇಖ ಇಲ್ಲಿ ಬರುತ್ತದೆ.

ಮರಗಲ್ಲು ಶಾಸನ: [೪೧]**(ಕ್ರಿ.ಶ. ೧೪೩೦)**: "…. ಶ್ರೀಮನ್…. ಚತುಸ್ಸಮುದ್ರಾಧಿಪತಿ ಶ್ರೀ ವೀರವಿಜಯಮಹಾರಾಯರ ಕುಮಾರ ದೇವರಾಯರ್ ಸಿಂಹಾಸನದಲ್ಲಿ ಲಕ್ಕಂಣವೊಡೆಯರ ಮುಳಬಾಗಿಲ ತೆಕಲನಾಡ ಜುಂಜಿರುಗಣ್ಣಿಗಳಿಗೆ ಸಲುವ ಮರಗಳಲು ಅಯಿವತ್ತಾರು ದೇಸದ ಸಾಲೆ ಮೂಲೆ ಸಮಸ್ತ ಹಲರು ಪಾಂಚಾಳ ಸಹಿತವಾಗಿ ಕೂಡಿ ಸಂತೆಯ ಕಟ್ಟಿದ ಸಂಬಂಧ ಆ ಸಂತೆಯ ಪಟ್ಟಣಸ್ವಾಮಿ ಬಸ್ಸಿಸೆಟ್ಟಿಗೆ ಮಾನ್ಯವಾಗಿ…………"

ಮುಳಬಾಗಿಲ ತಾಮ್ರಶಾಸನ[೪೨] **(ಕ್ರಿ.ಶ. ೧೪೩೧)**: "……ಪ್ರಸನ್ನ ವಿರೂಪಾಕ್ಷದೇವರಿಗೆ ದೇವಾಲಯ ಪ್ರಾಕಾರ ಗೋಪುರಂಗಳು ಶಿಖರ ಚೆನ್ನಡೆ ಹೊದಿಕೆ ಮನ್ಮಥ ಪುಷ್ಕರಿಣಿ ಅಂಗಭೋಗ ರಂಗಭೋಗ ವೈಭವ ಅಗ್ರಹಾರ ಗ್ರಾಮಂಗಳು ಮಂಟಪಂಗಳು ಭಿಕ್ಷಾಮಂಟಪ ಮುಂತಾದ ಸಕಲ ಧರ್ಮಂಗಳು ವಿಜಯರಾಯರ ಧರ್ಮದಿಂದ ವಿಷ್ಣುವರ್ಧನಗೋತ್ರದ ಹೆಗ್ಗಡೆದೇವಂಗಳು ವೊಮ್ಮಾಯಂಮಂಗಳ ಮಕ್ಕಳು ಲಖಂಣದಣಾಯಕರು ಮಾದಂಣದಣಾಯಕರು ಶ್ರೀ ಪ್ರಸಂನ ವಿರೂಪಾಕ್ಷದೇವರಿಗೆ ಪಡಿತರ ದೀಪಾರಾಧನೆ ನಿತ್ಯೋತ್ಸವ ಪಕ್ಷೋತ್ಸವ ರಥೋತ್ಸವ ಮುಂತಾದ ಅಂಗರಂಗ ವೈಭೋಗಂಗಳು ನಡೆಯಬೇಕೆಂದ ಕಾರಣ…. ಧಾರಾದತ್ತವಾಗಿ ಕೊಟ್ಟ ಗ್ರಾಮಂಗಳು ಮುಳುವಾಯಿ ಸೀಮೆಗೆ ಸಲುವ ವಿರೂಪಾಕ್ಷಪುರ ೧, ಗುಟ್ಟೆಹಳ್ಳಿ ೧, ಸೂರಾದೇವಿಹಳ್ಳಿ ೧, ಮಹಾದೇವನಹಳ್ಳಿ ೧, ಕುಮುದೇವನಹಳ್ಳಿ ೧, ಕುಂಚುಬಂಡೆ ತರಫು ೧ ಸಹಿತವಾಗಿ ಕೊಟ್ಟುಯಿದ್ದೇವೆ. ಆದಕಾರಣ… ಶ್ರೀ ಪ್ರಸಂನ ವಿರೂಪಾಕ್ಷದೇವರಿಗೆ ವೊಂಮಾಯಮ್ಮನವರ ಮಕ್ಕಳು ಲಕ್ಕಣದಣಾಯಕರು ಮಾದಣದಣಾಯಕರು ಮಾಡಿದ ಧರ್ಮ"॥

ವಿರೂಪಾಕ್ಷಪುರ ಶಾಸನ[೪೩] **(ಕ್ರಿ.ಶ. ೧೪೩೧)**: "………ಪ್ರಸಂನ ವಿರೂಪಾಕ್ಷದೇವರಿಗೆ ದೇವಾಲಯ ಪ್ರಾಕಾರ ಗೋಪುರಗಳು ಶಿಖರದ ಚಿಂನದ ಹೊದಿಕೆ ಮನ್ಮಥ ಪುಷ್ಕರಿಣಿ ಅಂಗಭೋಗ ರಂಗಭೋಗ ವೈಭವ ಅಗ್ರಹಾರ ಮಂಟಪಗಳು ಭಿಕ್ಷಾಮಠ ಮುಂತಾದ ಸಕಲಧರ್ಮಂಗಳು ವಿಜಯರಾಯ ಮಹಾರಾಯರ ಕುಮಾರರು ಗಜವೇಂಟೆಕಾಱ ದೇವರಾಯ ಮಹಾರಾಯರ ಧರ್ಮದಿಂದ ವಿಷ್ಣುವರ್ಧನಗೋತ್ರದ ಹೆಗ್ಗಡೆದೇವಗಳು ವೊಂಮಾಯಮಂ ಮಂಗಳ ಮಕ್ಕಳು ಲಖಂಣದಂಣಾಯಕರು ಮಾದಂಣಗಳು ಯೀ ಪ್ರಸಂನ ವಿರೂಪಾಕ್ಷದೇವರಿಗೆ ಮಾಡಿದ ಸೇವೆ…"

ಮಿಟ್ಟಹಳ್ಳಿ ಶಾಸನ[೪೪] **(ಕ್ರಿ.ಶ. ೧೪೩೩)**: "ಪರಿದಾವಿ ಸಂವತ್ಸರದ ಫಾಲ್ಗುಣ ಶು. ೧ ಲು ಶ್ರೀಮತು ಲಕ್ಕಂನವೊಡೆಯರು ತೇಕಲರಾಜ್ಯಕೀರ ಮುಂದೆ XXಪನ ಮಗ ಸೊತಪ್ಪ ಕೊಟ್ಟುದು ಗದ್ದೆ ಖಂ॥ ಹೊಲತ ಹತ್ರ ಹನ್ನೊಂದು ಕೊಳಗ ಕೊಳಗXXXXXX"

---

೪೦. V.R. VOLUME II 1229, ಕ್ರಿ.ಶ. ೧೪೨೮

೪೧. EC.X ಬೌರಿಂಗಪೇಟೆ ೭೨ ಮರಗಲ್ಲು, ಕ್ರಿ.ಶ. ೧೪೩೦.

೪೨. EC.X ಮುಳುಬಾಗಿಲ, ೭ ಮುಳುಬಾಗಿಲ ಕ್ರಿ.ಶ. ೧೪೩೦.

೪೩. EC.X ಮುಳುಬಾಗಿಲ ೬, ಮುಳುಬಾಗಿಲ, ಕ್ರಿ.ಶ. ೧೪೩೧.

೪೪. EC.X ಬೌರಿಂಗಪೇಟೆ ೮೭ ಮಿಟ್ಟಹಳ್ಳಿ, ಕ್ರಿ.ಶ. ೧೪೩೩.

ತೇಕಲ್ಲು ಶಾಸನ[೪೫] **(ಕ್ರಿ.ಶ. ೧೪೩೪)**: "ಶ್ರೀಮನು ಮಹಾಮಂಡಲೇಶ್ವರ ಮೇದಿನೀಮೀಸರಗಂಡ ಕಠಾರಿಸಾಳುವ ತ್ರಿಭುವನೀರಾಯ ಗಂಡ(ರ)ಗೂಳಿ... ಸಾಳುವ ತಿಪ್ಪರಾಜವೊಡೆಯರ ಕುಮಾರ ಗೋಪರಾಜಂಗೆ ದೇವರಾಯಮಹಾರಾಯರ ನಿರೂಪದಿಂ ಲಕಣವೊಡೆಯರು ಮಾದಣವೊಡೆಯರು ಆ ಸಾಳುವ ಗೋಪರಾಜಂಗೆ ತೇಕಲನೂ ಕೊಟಲಿ..."

ಕಿರಗಸೂರ ಶಾಸನ[೪೬]**(ಕ್ರಿ.ಶ. ೧೪೪೦)**: ಮಂಡ್ಯ ಜಿಲ್ಲೆಯ ಕಿರಗಸೂರ ಶಾಸನದಲ್ಲಿ ಲಕ್ಕಣ್ಣದಣ್ಣಾಯಕರ ಉಲ್ಲೇಖವಿದೆಯೆಂದು ಶಿವತತ್ವಚಿಂತಾಮಣಿಯ ಅನುಬಂಧದಲ್ಲಿ ಹೇಳಲಾಗಿದೆ.

ತಿರುವರೂರ್ ಶಾಸನ[೪೭] **(ಕ್ರಿ.ಶ. ೧೪೪೦)**: ತಂಜಾವೂರ ಜಿಲ್ಲೆಯ ನಾಗಪಟ್ಟಣ ತಾಲೂಕಿನ ತಿರುವರೂರಿನಲ್ಲಿರುವ ತ್ಯಾಗರಾಜಸ್ವಾಮಿ ದೇವಾಲಯದ ಪಶ್ಚಿಮಗೋಪುರಕ್ಕೆ ಹೋಗುವ ಹಾದಿಯ ಬಲಭಾಗದಲ್ಲಿ ಈ ಶಾಸನವಿದೆ. ಭಾಷೆ ಕನ್ನಡ, ಕಾಲ ಕ್ರಿ.ಶ. ೧೪೪೦.

೧. ಶುಭಮಸ್ತು । ಶಕಾಬ್ದ ೧೩೬(೨)೫ ಮೇಲೆ ಸಲುವ ರಉದ್ರ ಸಂವ

೨. ತ್ಸರದ ಭಾದ್ರಪದ ಬ ೧ ಸೋಮವಾರ ರೇವತೀ ನಕ್ಷತ್ರದಲೂ

೩. ಶ್ರೀಮಾನ್ ಮಹಾಪ್ರಧಾನ ದಕ್ಷಿಣಸಮುದ್ರಾಧಿಪತಿ

೪. ಲಖಣದಣ್ಣಾಯಕ ವಡೆಯರ ಧಂರ್ಮದಲೂ

೫. ವಸಿಷ್ಠಗೋತ್ರದ ಆಶ್ವಾಯನ ಸೂತ್ರದ ಸಿದರಸರ

೬. ಮಕಳು ನಾಗರ[ಸ]ರೂ ವ[ಲ್ಮೀಕ]ನಾಥದೇವರ ಪಾದಸೇವೆ

೭. ಗೆ[ಮಾ]ಡಿಸಿ । ಸಮರ್ಪಿಸ್ತ ಗೋ[ಪುರ] ॥

ಬಾರಕೂರ ಶಾಸನ[೪೮] **(ಕ್ರಿ.ಶ. ೧೪೪೦)**: ಉಡುಪಿ ತಾಲೂಕಿನ ಬಾರಕೂರದ ನೆರೆಯಲ್ಲಿರುವ ಮೂಡಕೆರೆ ಗ್ರಾಮದ ಸೋಮೇಶ್ವರ ದೇವಾಲಯದ ಶಾಸನವಿದು. ಭಾಷೆ ಕನ್ನಡ, ಕಾಲ ಕ್ರಿ.ಶ. ೧೪೪೦. ಎರಡನೆಯ ದೇವರಾಯನು ಬ್ರಾಹ್ಮಣರಿಗೆ ಸುವರ್ಣದಾನ ಮಾಡಿದ ಸಂದರ್ಭದಲ್ಲಿ ಲಕ್ಕಣದಣ್ಣಾಯಕನ ಉಲ್ಲೇಖವಿದೆ.

ಆಡುತುರ್ರೈ ಶಾಸನ[೪೯] **(ಕ್ರಿ.ಶ. ೧೪೪೦)**: ತ್ರಿಚನಾಪಳ್ಳಿ ಜಿಲ್ಲೆಯ ಪೆರಂಬೂರ ತಾಲೂಕಿನ ಆಡುತುರ್ರೈ ಗ್ರಾಮದ ಅಪರಾಧಕ್ಷಮೇಶ್ವರ ದೇವಾಲಯದ ಶಾಸನವಿದು. ಭಾಷೆ ತಮಿಳು, ಕಾಲ ಕ್ರಿ.ಶ. ೧೪೪೦. ದಕ್ಷಿಣಸಮುದ್ರಾಧಿಪತಿ ಲಕ್ಕಣ್ಣ ದಣ್ಣಾಯಕರಿಗೆ ಶುಭಕೋರಿ ದೇವಣನಾಯಕನೆಂಬ ಅಧಿಕಾರಿಯೂ ತಿರುಕುರುಂಗಾಡುತುರ್ರೈ ಗ್ರಾಮದ ಕುಜ್ಜಿಂ ಪೊರುತ್ತರುಳಿಯ ನಾಯನಾರ್ ದೇವಸ್ಥಾನಕ್ಕೆ ಉತ್ತುಂಗತುಂಗ ವಳನಾಡಿನಲ್ಲಿರುವ ಒಂದು ಗ್ರಾಮವನ್ನೂ, ವಡಗರ್ರೈ ರಾಜಸಿಂಹ ವಳನಾಡಿನಲ್ಲಿರುವ ಒಂದು ಗ್ರಾಮವನ್ನೂ ದತ್ತಿಬಿಟ್ಟನು.

---

೪೫. EC.X ಮಾಲೂರ ೧, ತೇಕಲ್ಲು, ಕ್ರಿ.ಶ. ೧೪೩೪.

೪೬. ಶಿವತತ್ವಚಿಂತಾಮಣಿಯ ಅನುಬಂಧದಲ್ಲಿ MAR 1936. P. 36 ಎಂದು ಆಕರ ಹೇಳಿರುವರು. ಆದರೆ ಇದು MAR 1936. P. 36 ಇರಬಹುದೇ ಎಂಬ ಸಂದೇಹ ಮೂಡುತ್ತದೆ. ನನಗೆ ಈ ಶಾಸನ ಪಾಠ ಸಿಗಲಿಲ್ಲ.

೪೭. SII.XVII 612 ತಿರುವರೂರ್, ಕ್ರಿ.ಶ. ೧೪೪೦.

೪೮. V.R. Volume II p. 861, ಕ್ರಿ.ಶ. ೧೪೪೦.

೪೯. V.R. Volume III p. 1538, ಕ್ರಿ.ಶ. ೧೪೪೦.

ತಿರುವರೂರ್ ಶಾಸನ[೫೦] **(ಕ್ರಿ.ಶ. ೧೪೪೦)**: ತಂಜಾವೂರ ಜಿಲ್ಲೆಯ ನಾಗಪಟ್ಟಣ ತಾಲೂಕಿನ ತಿರುವರೂರು ತ್ಯಾಗರಾಜಸ್ವಾಮಿದೇವಾಲಯದ ಎರಡನೆಯ ಪ್ರಾಕಾರದ ಪಶ್ಚಿಮಗೋಪುರಕ್ಕೆ ಹೋಗುವ ಹಾದಿಯ ಬಲಭಾಗದಲ್ಲಿ ಈ ಶಾಸನವಿದೆ. ಇದರ ಭಾಷೆ ತಮಿಳು. ಕಾಲ ಕ್ರಿ.ಶ. ೧೪೪೦. ಲಕ್ಕಣ್ಣದಣ್ಣಾಯಕರಿಗೆ ಶ್ರೇಯಸ್ಸನ್ನು ಕೋರಿ ಸಿದ್ಧರಸನ ಮಗ ನಾಗರಸನು ವಾಲ್ಮೀಕಿನಾಥದೇವರಿಗೆ ಗೋಪುರ ಕಟ್ಟಿಸಿದುದು ಇದರ ವಿಷಯ (ಹಿಂದಣ ತಿರುವರೂರ್ ಕನ್ನಡ ಶಾಸನದ ತಮಿಳು ಪಾಠವಿದು).

ಸಿಕ್ಕೈಲ್ ಶಾಸನ[೫೧] **(ಕ್ರಿ. ೧೪೪೪)**: ತಂಜಾವೂರ ಜಿಲ್ಲೆಯ ನಾಗಪಟ್ಟಣ ತಾಲೂಕಿನ ಸಿಕ್ಕೈಲ್ ಗ್ರಾಮದ ಕೋಲವಾಮನ ಪೆರುಮಾಳ ದೇವಾಲಯದ ಶಾಸನವಿದು. ಭಾಷೆ ತಮಿಳು, ಕಾಲ ಕ್ರಿ.ಶ. ೧೪೪೪. ಇದರಲ್ಲಿ ಲಕ್ಕಣದಣ್ಣಾಯಕನು 'ದಕ್ಷಿಣಸಮುದ್ರಾಧಿಪತಿ' ಎಂದು ಕರೆಯಲ್ಪಟ್ಟಿರುವನು.

ಬಾರಕೂರ್ ಶಾಸನ[೫೨] **(ಕ್ರಿ.ಶ. ೧೪೬೩)**: ಉಡುಪಿ ತಾಲೂಕಿನ ಬಾರಕೂರಿನ ನೆರೆಯಲ್ಲಿರುವ ಮಂಗರಕೇರಿಯ ಸೋಮನಾಥೇಶ್ವರ ದೇವಾಲಯದ ಶಾಸನವಿದು. ಭಾಷೆ ಕನ್ನಡ, ಕಾಲ ಕ್ರಿ.ಶ. ೧೪೬೩. ವಿಜಯನಗರದ ವೀರಮಲ್ಲಿಕಾರ್ಜುನ ರಾಯನ ಕಾಲದ ಶಾಸನ. ಲಕ್ಕಣ್ಣವೊಡೆಯರು ಬಾರಕೂರರಾಜ್ಯದ ಅಧಿಪತಿಯೆಂದು ಇದು ಉಲ್ಲೇಖಿಸುತ್ತದೆ.

ವಾಗಟದ ಶಾಸನ[೫೩] **(ಕಾಲ ?)**: ಬೆಂಗಳೂರ ಜಿಲ್ಲೆ ಹೊಸಕೋಟೆ ತಾಲೂಕು ವಾಗಟಗ್ರಾಮದ ವರದರಾಯಸ್ವಾಮಿಯ ದೇವಾಲಯಕ್ಕೆ ಸಂಬಂಧಿಸಿದ ಶಾಸನವಿದು.

೧. ಸ್ವಸ್ತಿ ಶ್ರೀ ಭಾಷೆಗೆ ತಪ್ಪುವ ರಾಯರಗಂಡ

೨. ಶ್ರೀ ವೀರಪ್ರತಾಪ ದೇವರಾಯಮಹಾರಾಯ

೩. XXX ರತ್ನಸಿಂಹಾಸನದಲ್ಲೂ ಮುಳುವಾಗಿಲಿಗೆ ಸ

೪. ಲುವ XX ಕಂಣವೊಡೆಯರ ನಿರೂಪ

೫. ದಿಂ ಭು XXXಒಡೆಯ ಣಣರವರು ಯಿ ಮುಳುವಾಗಿಲವ XXXXXXX

ಮಾದಾಪಟ್ನ ಶಾಸನ[೫೪] **(ಕಾಲ ?)**: ಬೆಂಗಳೂರ ಜಿಲ್ಲೆಯ ಮಾದಾಪಟ್ನ ಗ್ರಾಮದ ಶಾಸನದಲ್ಲಿ ಎರಡನೆಯ ದೇವರಾಯ ಮತ್ತು ಲಕ್ಕಣಾಮಾತ್ಯರ ವಿಷಯವಿದೆಯೆಂದು ಶಿವತತ್ವ ಚಿಂತಾಮಣಿಯ ಅನುಬಂಧದಲ್ಲಿ ಹೇಳಲಾಗಿದೆ.

ಈ ಹದಿನೇಳು ಶಾಸನಗಳಲ್ಲಿ ಲಕ್ಕಣದಂಡೇಶನು ಗಳಿಸಿದ ಪ್ರಜಾನುರಾಗ, ಅರಸು ಮೈತ್ರಿಗಳಲ್ಲದೆ ಅನೇಕ ದೇವಾಲಯಗಳಿಗೆ ನೀಡಿದ ಉದಾರದಾನಗಳ ವಿಷಯ ಎಡೆ ಪಡೆದಿದೆ. ಆದರೆ ವೀರಶೈವಕ್ಕೆ

---

೫೦. SII. XVII 611, ಕ್ರಿ.ಶ. ೧೪೪೦.

೫೧. V.R. Volume II p. 1347, ಕ್ರಿ.ಶ. ೧೪೪೪.

೫೨. V.R. Volume II p. 865, ಕ್ರಿ.ಶ. ೧೪೬೩.

೫೩. EC.IX, ಹೊಸಕೋಟೆ ೧೩೦ ವಾಗಟದ ಶಾಸನ.

೫೪. ಶಿವತತ್ವಚಿಂತಾಮಣಿಯ ಅನುಬಂಧದಲ್ಲಿ MAR 1936. P. 36 ಎಂದು ಆಕರ ಹೇಳಲಾಗಿದೆ. ಆದರೆ ಇದು MAR 1920. P. 36 ಇರಬಹುದೇ? ಎಂಬ ಸಂದೇಹ ಮೂಡುತ್ತದೆ. ನನಗೆ ಈ ಶಾಸನ ಪಾಠ ಸಿಗಲಿಲ್ಲ.

ಸಂಬಂಧಪಟ್ಟಂತೆ ಈತನು ನಿರ್ವಹಿಸಿದ ಪಾತ್ರ ಶಾಸನಗಳಿಂದ ತಿಳಿದು ಬರುವುದಿಲ್ಲ. ಈ ಕಾಲದ ಇನ್ನೊಬ್ಬ ವೀರಶೈವ ಗಣ್ಯವ್ಯಕ್ತಿ ಭಂಡಾರಿ ಜಕ್ಕಣನ ಬಗೆಗೆ ಮೌನತಾಳಿದ ಶಾಸನಗಳು, ಲಕ್ಕಣನನ್ನು ಇಷ್ಟಾದರೂ ಹೆಸರಿಸಿ ಶಾಸನ ಪ್ರಮಾಣವನ್ನು ಬಯಸುವವರಿಗೆ ನಂಬುಗೆ ಹುಟ್ಟಿಸಿವೆ.

ಎಮ್ಮೆ ಬಸವ

ವಿಜಯನಗರದ ಸದಾಶಿವರಾಯನ ಆಳಿಕೆಯಲ್ಲಿ ಬಾಳಿದ ಎಮ್ಮೆ ಬಸವ ಹಂಪೆಯ ನೆರೆಯ ಜಂಬುನಾಥದೇವರ ಭಕ್ತ. ಹೊಯ್ಯೊ ಡಂಗುರವ, ಹಾಕಿಲೊ ಮುಂಡಿಗೆಯ, ಕಣೆಯ ಕೇಳಿರೋ, ಎಚ್ಚರ ಎಚ್ಚರಿಕೆ, ಕೂಕೂಕೂ, ಮಾ, ಸುವಾಬಿ, ಧರ್ಮವ ಬಿಡಬೇಡಿರೋ ಎಂದು ಕೊನೆಗೊಳ್ಳುವ ಕಾಲಜ್ಞಾನ ವಚನಗಳನ್ನು ರಚಿಸಿದ ಸುಪ್ರಸಿದ್ಧ ಕಾಲಜ್ಞಾನ ವಚನಕಾರ. ಈತನಿಗೆ ಮಂಡಲೇಶ್ವರ ಸಕಲರಾಜುವಿನ ಪುತ್ರ ತಿರುಮಲರಾಜನು ಕೊಮರಗೆರೆ ಎಂಬ ಗ್ರಾಮವನ್ನು ನೀಡಿದನೆಂದು ನಂಜನಗೂಡ ರಾಘವೇಂದ್ರ ಸ್ವಾಮಿಗಳ ಮಠದ ತಾಮ್ರಶಾಸನದಿಂದ[೫೫] ತಿಳಿದುಬರುತ್ತದೆ.

೬೧. .... ರಂಜಕೋಯಂ ಪ್ರಜಾನಾಂ ವರ ತಿ

೬೨. ರುಮಲರಾಯೋ ವರ್ಧತೇ ಭದ್ರಪೀಠೇ । ಅಬ್ಧ್ಯಂಗಾಮ್ನಾಯ ಶೀತಾಂಶುಗಣಿತೇ ಶಕವ

೬೩. ತ್ಸರೆ । ಶುಭಕೃದ್ವತ್ಸರೇ ಮಾಸಿಮಾಘೇ ಭಾರ್ಗವವಾಸರೇ । ಕೃಷ್ಣಪಕ್ಷೇ ಚತುರ್ದಸ್ಯಾಂ ಸಿವರಾತ್ರ್ಯಾಂ ಮಹಾತಿಥೌ । ತುಂಗಭದ್ರಾನದೀತೀರೋ ವಿರೂಪಾಕ್ಷ ಸಂ

೬೪. ನಿಧೌ । ಜಾಂಬುನದಾದಿವ್ಯಕೋದಂಡ ಜಂಬುನಾಥ ಪ್ರಭಾವತಃ । ಪ್ರಾಪ್ತಕಾಲತ್ರಯೋ

೬೫. ದಂತಪರಿಜ್ಞಾನಾಯಧೀಮತಾ । ಶ್ರೀಕಂಠಭಕ್ತಿಮಂದಾರವಲ್ಲಿಕಾವಾಟೀತ ।

೬೬. ಸೇ ನಿರಹಂಕಾರ ಚಿತ್ರಾಯಚಿತ್ಯಂ ಲೋಕಹಿ

೬೭. ತೈಷಿಣೇ । ವೀರಶೈವಾಗಮಜ್ಞಾಯ ವಿಜಿತಾಂತರವೈರಿಣೇ ಪ್ರ

೬೮. ಥಿತಾಯ ಕ್ಷಿತಾವೆಂಮೆಬಸವೇಂದ್ರತಪಸ್ವಿನೇ । ವಲಿತೇ ಹಸ್ತಿ

೬೯. ನಾವತ್ಯಾವಿಖ್ಯಾತಂ ಮೂಡನಾಡುಗಂ । ಕುರ್ರುಗೋಡು ಸುಸೀಮಾಂ

೭೦. ತರ್ಭಾವಂ ಚಾಪಿ ಸಮಾಶ್ರಿತಂ । ಬೋರಹಳ್ಳೀತಿ ವಿಖ್ಯಾತಾದ್ಗ್ರಾ

೭೧. ಮಾತ್ಪ್ರಾಚೀದಿಶಮುಪಾಶ್ರಿತಂ । ಕುರ್ರುಬೂರ್ಭೋರ್ರ್ರಹಳ್ಳ್ಯೋಶ್ಚ ಸೀ

೭೨. ಮಾಂತಾದ್ದಕ್ಷಿಣೇ ಸ್ಥಿತಂ । ಬಸವಾಪುರದರ್ವೋರು ಕ್ಷೇತ್ರಾದ್ಯುತ್ಯಾ

೭೩. ಚ ಪಶ್ಚಿಮಂ । ಹಾಗಲೂರೋ ಸಿಂದಗೆರ್ರೆ ಗಣಕೇಹಾಳು ನಾಮಯೋಃ ।

೭೪. ಗ್ರಾಮಯೋರುಪಸೀಮಾಂತಾದ್ಯುಕ್ತಾದುತ್ತರತಸ್ಥಿತಂ । ಪುರುವರ್ಗ ತಯಾ

೭೫. ಖ್ಯಾತಂ ಗ್ರಾಮಂ ಕೊರಂಕೆರ್ರಾಭಿದಂ । ಸರ್ವಮಾನ್ಯಂ ಚತುಸ್ಸೀಮಾ ಸಂಯುತಂ ಚ ಸ

೭೬. ಮಂತತಃ । ನಿಧಿನಿಕ್ಷೇಪವಾಯ್ಯಸ್ಮ ಸಿದ್ಧಸಾಧ್ಯಕ್ಷಿಣೇತಿ ಚ । ಆಗಾಮೀತ್ಯ

೭೭. ಷ್ಟಭೋಗಾರ್ಹಂತಜಸ್ವಾಮ್ಯ ಸಮನ್ವಿತಂ । ವಾಂಪೀಕೂಪ ತಟಾಕೈಸ್ಚ ಕಚ್ಛಾಘರಾಮೈಶ್ಚ

೭೮. ಸಂಯುತಂ । ಶಿಷ್ಯಪ್ರಶಿಷ್ಯಸಂಭೋಗ್ಯಂ ಕ್ರಮಾದಾಚಂದ್ರತಾರಕಂ । ದಾನಸ್ಯಾಧಮನ

೭೯. ಸ್ಯಾಪಿ ವಿಕ್ರಯಸ್ಯಾಪಿಚೋಚಿತಂ । ವೇದವೇದಾಂ(ತ) ತತ್ವಜ್ಞೈರ್ವಿಭುಧೈಸ್ಸ ಪುರೋಹಿತೈಃ

---

೫೫. MAR 1914. P. 25 ನಂಜನಗೂಡು, ಕ್ರಿ.ಶ. ೧೫೪೩.

೮೦. ಸಹಿತ ಶ್ರೌತ ಪಥಿಕೈಸ್ಸರ್ವಶಾಸ್ತ್ರಾರಾಬ್ಧಿಪಾರಗೈಃ । ಮಾನ್ಯಸ್ತಿರು
೮೧. ಮಲಕ್ಷ್ಮಾಪ ಮಹಾರಾಯೋ ಮನಸ್ವಿನಾಂ । ಸ ಹಿರಣ್ಯಪರ್ಯೋಧಾರಾ
೮೨. ಪೂರ್ವಕಂ ದತ್ತವಾನ್ಮುದಾ........

ಈ ಶಾಸನದ ಕಾಲ ಶಾಲಿವಾಹನಶಕ ೧೪೮೧ಳ ಅಂದರೆ ಕ್ರಿ.ಶ. ೧೪೪೩. ಇಲ್ಲಿ ಬಳಸಿದ ಒಂದೊಂದು ವಿಶೇಷಣಗಳೂ ಎಮ್ಮೆ ಬಸವನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. 'ವೀರಶೈವಾಗಮಜ್ಞಾಯ' ಎಂಬ ವಿಸೇಷಣವಂತೂ ಈತನ ಮತವನ್ನೂ ಮತದ ಅಗಾಧ ಅಭ್ಯಾಸವನ್ನೂ ಸ್ಪಷ್ಟಪಡಿಸುತ್ತದೆ.

ಗುಮ್ಮಳಾಪುರದ ಕೆಲವು ಶರಣರು

ಪರಮಶಿವಭಕ್ತ ಚೊಕ್ಕದೇವಪಾರ್ಯ, ಶೂನ್ಯಸಂಪಾದನೆಯ ಸಿದ್ಧಲಿಂಗ ಮೊದಲಾದವರಿಗೆ ಜನ್ಮವಿತ್ತ ಗುಮ್ಮಳಾಪುರ, ವೀರಶೈವದ ಇತಿಹಾಸದಲ್ಲಿ ಒಂದು ಸುಪ್ರಸಿದ್ಧ ಊರು. ಇಲ್ಲಿಯ ಕೆಲವು ಶರಣರನ್ನು ಉಲ್ಲೇಖಿಸುವ ಒಂದು ತಾಮ್ರಶಾಸನ ಹೀಗಿದೆ[೫೬]:

೧. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕವರ್ಷಂಗಳು ೧೩೯೬ ವಿಜ
೨. ಯ ಸಂವತ್ಸರದ ಮಾಘ ಬ ೧೪ ಮಹಾಶಿವರಾತ್ರಿ ಪುಣ್ಯಕಾಲದಲ್ಲೂ ಶ್ರೀ ಮನ್ಮಹಾರಾಜಾಧಿರಾಜ
೩. ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ನರಸಿಂಹದೇವಮಹಾರಾಯರು ವಿದ್ಯಾನಗರಿಸ್ಥಿರಸಿಂಹಾ
೪. ಸನಾರೂಢರಾಗಿ ಪೃಥ್ವಿ ಸಾಮ್ರಾಜ್ಯಂಗೆಯುತ್ತಿರಲು ವೀರಮಾಹೇಶ್ವರ ಗೋತ್ರದ ಶಾಂತದೇವರ ಪೌತ್ರ.
೫. ರಾದ ಚಿಕವೀರದೇವರ ಪುತ್ರರಾದ ಶರಣ ವೀರಣ್ಣದೇವರು ಮತ್ತುಮೀಸ್ಥಲದಲಿರ್ಪ ಶಾಂತದೇವರು ನಾಗ
೬. ದೇವರು ಚಿಕದೇವಪ್ಪನವರು ನಿಜಲಿಂಗಚಿಕ್ಕಯ್ಯನವರು ಬಿಟ್ಟಮಂಡೇಯಪ್ರಭು
೭. ಶಂಖರದ ಸಿದ್ಧಲಿಂಗದೇವರು ಜಂಗುಳಿದೇವರು ಪ್ರಸಾದಿದೇವರು ಮಲ್ಲಿಕಾರ್ಜುನಾರಾಧ್ಯರು ಬಸವಂಣ
೮. ದೇವರು ಮುಂತಾದಶೇಷ ವೀರಮಾಹೇಶ್ವರರು ಪೌರಕುತ್ಸಗೋತ್ರದ ಆಪಸ್ತಂಬಸೂತ್ರದ ಯಜು
೯. ಶಾಖಾಧ್ಯಾಯಿಗಳಾದ ಅರುಣಗಿರಿದೀಕ್ಷಿತರ ಪೌತ್ರರಾದ ಗಿರೀಶ್ವರ ದೀಕ್ಷಿತರ ಪುತ್ರರಾದ ವೆಂಕಟೇ.
೧೦. ಶ್ವರ ಉಪಾಧ್ಯಾಯರಿಗೆ ಬರಸಿಕೊಟ್ಟ ಭೂದಾನ ಧರ್ಮಶಾಸನ ಪತ್ರ ಕ್ರಮವೆಂತೆಂದರೆ...
(ಮುಂದೆ ವೀರರಾಯಸಮುದ್ರವನ್ನು ದಾನನೀಡಿದ ವಿಷಯವಿದೆ).

ಈ ಶಾಸನದ ಮಿತಿ ಶಕವರ್ಷ ೧೩೯೬, ಅಂದರೆ ಕ್ರಿ.ಶ. ೧೪೭೪. ಮಹಾ ಶಿವರಾತ್ರಿ ಪುಣ್ಯಕಾಲದಲ್ಲಿ ವೀರಶೈವ ಶರಣರು ಬ್ರಾಹ್ಮಣಮತದ ವೆಂಕಟೇಶ್ವರ ಉಪಾಧ್ಯಾಯರಿಗೆ ಒಂದು

---

೫೬. ಗುಮ್ಮಳಾಪುರದ ದಾನಶಾಸನಗಳು ಶ.ಸಾ. ೨೧-೨ ಮತ್ತು ೩.

ಅಗ್ರಹಾರವನ್ನು ದಾನ ನೀಡಿದುದು ಇದರ ವಿಷಯ. ಇದು ಶರಣರ ಮತಮೈತ್ರಿಗೆ ನಿದರ್ಶನ. ಇಲ್ಲಿ ದಾನ ನೀಡಿದವರು ಶಾಂತದೇವರ ಮೊಮ್ಮಗನೂ ಚಿಕವೀರದೇವರ ಮಗನೂ ಆದ ಶರಣ ವೀರಣ್ಣದೇವ ಮತ್ತು ಶಾಂತದೇವ ನಾಗದೇವ ಚಿಕದೇವಪ್ಪ ನಿಜಲಿಂಗಚಿಕ್ಕಯ್ಯ ಬಿಟ್ಟಮಂಡೆಯಪ್ರಭು ಶಂಖದ ಸಿದ್ಧಲಿಂಗದೇವ ಜಂಗುಳಿದೇವ ಪ್ರಸಾದಿದೇವ ಮಲ್ಲಿಕಾರ್ಜುನಾರಾಧ್ಯ ಬಸವಣ್ಣದೇವ ಎಂಬ ವೀರಶೈವ ಮಹಾಪುರುಷರು. ಇವರಲ್ಲಿ ಕೆಲವರ ವಿಷಯ ವೀರಶೈವಪುರಾಣಗಳಲ್ಲಿ ಹೀಗೆ ಬರುತ್ತದೆ:

ಚಿಕದೇವಪ್ಪ: ಶಿವತತ್ವ ಚಿಂತಾಮಣಿಯು 'ಶಿವಸಮಯ ಪಟ್ಟವರ್ಧನರಿಪ್ಪರಾಪುರಂ ಗುಮ್ಮಹಾಳ'[೫೭] ಎಂದು ಗುಮ್ಮಳಾಪುರವನ್ನು ಹೊಗಳಿ "ಅಲ್ಲಿಪ್ಪ ಚೊಕ್ಕದೇವಪ್ಪಯ್ಯ" ಎಂದು ಮುಂತಾಗಿ ಹೇಳುತ್ತಿದೆ. ಈ ಚೊಕ್ಕದೇವಪ್ಪಯ್ಯನೇ ಚಿಕದೇವಪ್ಪನಾಗಿರಲು ಸಾಧ್ಯವಿದೆ.

ಶಂಖದ ಸಿದ್ಧಲಿಂಗ: ಗುಬ್ಬಿಯ ಮಲ್ಲಣಾರ್ಯಕೃತ ವೀರಶೈವನಾಮೃತಮಹಾಪುರಾಣದ

ವರ ಗುಮ್ಮಳಾಪುರದೊಳುಗ್ರಾಣಿಯತಿವರನ ।
ಕರಕಮಲಸಂಜಾತರಪ್ಪ ಶಂಕಿನಸಿದ್ಧದೇಶಿಕ...[೫೮]

ಎಂಬ ಪದ್ಯದಲ್ಲಿಯ ಗುಮ್ಮಳಾಪುರದ ಶಂಕಿನಸಿದ್ಧದೇಶಿಕನು ಈ ಗುಮ್ಮಳಾಪುರ ಶಾಸನೋಕ್ತ ಶಂಖದ ಸಿದ್ಧಲಿಂಗನಾಗಿರಬಹುದು. ಉಗ್ರಾಣಿಯತಿವರನ ಶಿಷ್ಯನಾದ ಈತನ ಶಿಷ್ಯ ನಂಜುಂಡದೇವನೆಂದು ಮಲ್ಲಣಾರ್ಯನ ಹೇಳಿಕೆ. ಮಲ್ಲಣಾರ್ಯನ ಗುರು ನಂಜುಂಡದೇವನು ಈತನೇ ಆಗಿರಬೇಕು.

ನಿಜಲಿಂಗ ಚಿಕ್ಕಯ್ಯ: ಈತನು ಹಲಗೆದೇವರ ಗುರು. "ನಿಜಲಿಂಗಚಿಕ್ಕಭಿಧಾನವನುಳ್ಳ ವರ ಶೀಲವಂತದೇವರು"[೫೯] ಎಂಬ ವೀರಶೈವಾಮೃತಮಹಾಪುರಾಣದ ಹೇಳಿಕೆಯಂತೆ ಇವನ ಇನ್ನೊಂದು ಹೆಸರು ಶೀಲವಂತದೇವ.

ಬಿಟ್ಟಮಂಡೆಯ ಪ್ರಭು: ಈತನ ವಿಷಯ ಗುರುರಾಜಚಾರಿತ್ರದ ೧೨ನೆಯ ಸಂಧಿಯ ಪ್ರಾರಂಭದಲ್ಲಿ ಹೀಗೆ ಬರುತ್ತದೆ. ಬಿಟ್ಟಮಂಡೆಯಪ್ರಭು ಪ್ರಭುದೇವರ ಅವತಾರವೆನಿಸಿದ್ದನು. ಹಾವು ಬಂದು ಚರಣಕ್ಕೆ ವಂದಿಸಿ ಮೂರು ಸಲ ಪ್ರದಕ್ಷಿಣೆ ಹಾಕಿತು. ಮತ್ತಗಜ ಬಂದು ಪಾದಕ್ಕೆ ನಮಿಸಿ ಪ್ರದಕ್ಷಿಣೆ ಮಾಡಿತು. ಗುಮ್ಮಳಾಪುರದಲ್ಲಿ ಕಲ್ಲಬಸವನು ಕೆಲೆಯಲು ಸುರದುಂದುಭಿ ಮೊಳಗಲು ಮೊಲೆ ಹರಿದ ಸ್ತ್ರೀಗೆ ಮೊಲೆಕೊಟ್ಟನು. ಇವನು ಕಾರುಣ್ಯದಿಂದ ಸೋವೂರ ಚಿಕ್ಕಬಸವನು ದಾಸೋಹ ಮಾಡಿ ಕೀರ್ತಿ ಪಡೆದನು. ವೀರಶೈವಮೃತ ಮಹಾಪುರಾಣದ ಪೀಠಿಕೆಯಲ್ಲಿ

ನಿರುಪಾಧಿ ನಿಸ್ಸಂಗಿ ನಿರ್ಮಲ ನಿರಾಭಾರಿ ।
ಯುರು ನಿತ್ಯನಿರ್ದೇಹಿ ನಿಸ್ಸೀಮ ಸುಜ್ಞಾನಿ ।
ವರಭಕ್ತ ಸತ್ಪ್ರಾಣಿ ಸನ್ಮೂರ್ತಿ ಮುಕ್ತಮದಮೋಹಾದಿಗುಣವಿರಹಿತಾ ।
ಭರಿತ ಮಾಯಾದೇಹ ಮಲರಹಿತ ಪಂಚಮಾ ।

---

೫೭. ಶಿ.ತ.ಚಿ. ೩೮-೬೧ (ಈತನ ವಿಷಯ ವೀರಶೈವಾಮೃತಮಹಾಪುರಾಣದಲ್ಲಿಯೂ ಬರುತ್ತದೆ. ೮-೮-೧೮).
೫೮. ವಿ.ಮ. ಪು. ೮-೯-೪೭.
೫೯. ವಿ.ಮ. ಪು. ೧-೧-೨೫.

ಕ್ಷರಮುಖಿಪ್ರಣಮಾಂಗ ಪರತತ್ವವರಿದ ಚಿ ।

ದ್ಧರ ಬಿಟ್ಟಮಂಡೆಯಪ್ರಭು ಜಂಗಮದ ಪಾದಮಿರ್ಕೆನ್ನ ಹೃದಯದೊಳಗೆ ॥[೬೦]

ಎಂದು ಮಲ್ಲಣಾರ್ಯನು ಇವನಿಗೆ ಭಕ್ತಿಯಿಂದ ಬಾಗಿರುವನು.

ಜಂಗುಳಿದೇವ: ಏಳುನೂರೊಂದು ವಿರಕ್ತರ ತರುವಾಯದ ಶರಣರನ್ನು ಉಲ್ಲೇಖಿಸುತ್ತ ಚನ್ನಬಸವಪುರಾಣವು

"..... ಗುಮ್ಮಳಾಪುರದೊಳಿಹ ಜಂಗುಳಿ
ವೀರಪ್ಪನುಂ ಸುಪ್ರಸಾದಿದೇವರ್ಮುಖ್ಯ ।
ಚಾರುಚರಮೂರ್ತಿಗಳೆ ಬಂದ ಜಂಗಮಕಿರದೆ ।
ವಾರಿಯಿಂ ದಾಸೋಹಮಂ ಮಾಳ್ಪರ್..."[೬೧]

ಎಂಬಲ್ಲಿ ಹೇಳಿದ ಜಂಗುಳಿವೀರಪ್ಪನೆಂಬ ಚಾರುಚರಮೂರ್ತಿ ಈ ಶಾಸನದಲ್ಲಿ ಬರುವ ಜಂಗುಳಿದೇವನಾಗಿರಬೇಕು.

ಪ್ರಸಾದಿದೇವ: ಪ್ರಥಮ ಶೂನ್ಯಸಂಪಾದನೆಯ ಕರ್ತೃ ಶಿವಗಣಪ್ರಸಾದಿ ಮಹಾದೇವನದು ವೀರಶೈವ ಇತಿಹಾಸದಲ್ಲಿ ಎದ್ದುಕಾಣುವ ಹೆಸರು. ಈತನನ್ನು ರಾಘವಾಂಕಚರಿತೆಯು "ಶುದ್ಧ ಪ್ರಸಾದ್ಯುರು ಮಹಾದೇವಯ್ಯ"[೬೨] ಎಂದು ಕರೆದಿದೆ. ಮಹಾದೇವಯ್ಯನ ತರುವಾಯ ಬಂದ ಶೂನ್ಯಸಂಪಾದನಾಕರ್ತೃಗಳಾದ ಕೆಂಚವೀರಣ್ಣೊಡೆಯರ ಗುಬ್ಬಿ, ಸಿದ್ಧಲಿಂಗಯತಿಯ ಗುಮ್ಮಳಾಪುರ, ಸಿದ್ಧವೀರಣ್ಣೊಡೆಯರ ಗೂಳೂರುಗಳು ಪರಸ್ಪರ ಸಮೀಪದಲ್ಲಿರುವ ಗ್ರಾಮಗಳು. ಅದಕ್ಕಾಗಿ ಮೊದಲನೆಯ ಶೂನ್ಯಸಂಪಾದನಾಕರ್ತೃ ಶಿವಗಣಪ್ರಸಾದಿ ಮಹಾದೇವಯ್ಯನು ಇದೇ ಪ್ರದೇಶದವನು, ಬಹುಶಃ ಗುಮ್ಮಳಾಪುರದವನಾಗಿರಬಹುದು. ಗುಬ್ಬಿಯ ಕೆಂಚವೀರಣ್ಣೊಡೆಯು, ಗೂಳೂರಿನ ಸಿದ್ಧವೀರಣ್ಣೊಡೆಯರು ತಮ್ಮ ಶೂನ್ಯಸಂಪಾದನೆಗಳಲ್ಲಿ ಶಿವಗಣಪ್ರಸಾದಿಗಳನ್ನು ನಾಮಮಾತ್ರ ನಿರ್ದೇಶನ ಮಾಡಿದರೆ ಗುಮ್ಮಳಾಪುರ ಸಿದ್ಧಲಿಂಗಯತಿಗಳು "ಶ್ರೀಮದನೇಕ ಬ್ರಹ್ಮಾಂಡಭಾಂಡಗರ್ಭೀಕೃತ ನಿತ್ಯನಿರಂಜನನಿರುಪಮ ವರ ನಾಮ ರೂಪ ಕ್ರಿಯಾವಿರಹಿತ ಸಕಲ ನಿಷ್ಕಲಮಯನ ಸುಪ್ರಸಾದಿ ಮಹಾದೇವಂ"[೬೩] ಎಂದು ವಿಶೇಷ ಗೌರವ ತೋರಿಸಿದುದಕ್ಕೆ ಈತನು ತನ್ನ ಗ್ರಾಮವಾದ ಗುಮ್ಮಳಾಪುರದವನೆಂಬುದೇ ಕಾರಣವಾಗಿರಬೇಕು. ಎರಡನೆಯದಾಗಿ ಚನ್ನಬಸವಪುರಾಣದ

"............ಗುಮ್ಮಳಾಪುರದೊಳಿಹ ಜಂಗುಳಿ ।
ವೀರಪ್ಪನುಂ ಸುಪ್ರಸಾದಿದೇವರ್ಮುಖ್ಯ ।
ಚಾರುಚರಮೂರ್ತಿಗಳೆ ಬಂದ ಜಂಗಮಕಿರದೆ ।
ವಾರಿಯಿಂ ದಾಸೋಹಮಂ ಮಾಳ್ಪರು..........."[೬೪]

---

೬೦. ವಿ.ಮ. ಪು. ೧-೫. ೬೧. ಚೆ.ಬ.ಪು. ೬೩-೫೪.

೬೨. ರಾ.ಚ. ೧-೧೩.

೬೩. ಗುಮ್ಮಳಾಪುರ ಶೂ. ಸಂ. (ಪೀಠಿಕೆ).

೬೪. ಚೆ.ಬ.ಪು. ೬೩-೫೪.

ಎಂಬ ಪದ್ಯದಲ್ಲಿ ಬರುವ ಗುಮ್ಮಳಾಪುರ, ಸುಪ್ರಸಾದಿದೇವ ಎಂಬಿವು ಮೇಲಿನ ಊಹೆಗೆ ಬಲನೀಡುತ್ತವೆ. ಇಲ್ಲಿಯ 'ಚಾರಚರಮೂರ್ತಿ, ದಾಸೋಹಮಂ ಮಾಳ್ಪ' ಎಂಬ ಪದಗಳು ಪ್ರಸಾದಿ ಮಹಾದೇವಯ್ಯಗಳಿಗೆ ಸಂಪೂರ್ಣ ಒಪ್ಪುತ್ತವೆ. ಅದಕ್ಕಾಗಿ ಶೂನ್ಯಸಂಪಾದನೆಯ ಪ್ರಸಾದಿಮಹಾದೇವನ ಗ್ರಾಮ ಗುಮ್ಮಳಾಪುರವೆಂದು ಹೇಳಬಹುದಾಗಿದೆ. ಇದು ನಿಜವಿದ್ದಲ್ಲಿ ಪ್ರಸ್ತುತ ಗುಮ್ಮಳಾಪುರಶಾಸನ ಹೇಳುವ ಪ್ರಸಾದಿದೇವನು ಶೂನ್ಯಸಂಪಾದನಾ ಕರ್ತೃವಾಗಿರಬಹುದೇ ಎಂಬ ಆಸೆ ಹುಟ್ಟುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೪೭೪. ಕ್ರಿ.ಶ. ೧೫೭೦ರ ಸುಮಾರಿಗೆ ಬಾಳಿದ ತೋಂಟದ ಸಿದ್ಧಲಿಂಗನ ಶಿಷ್ಯವರ್ಗದ ಗುಮ್ಮಳಾಪುರ ಸಿದ್ಧಲಿಂಗಯತಿ, ಗೂಳೂರ ಸಿದ್ಧವೀರಣ್ಣಗಳು ಮುಂದಣ ಶೂನ್ಯಸಂಪಾದನೆಗಳನ್ನು ರಚಿಸಿರುವರು. ಇದರಿಂದ ಪ್ರಸಾದಿ ಮಹಾದೇವಯ್ಯಗಳ ಕಾಲಕ್ಕೂ ಧಕ್ಕೆ ಬರುವುದಿಲ್ಲ. ಅದಕ್ಕಾಗಿ ಈ ಶಾಸನೋಕ್ತ 'ಪ್ರಸಾದಿ ದೇವನು' ಶಿವಗಣಪ್ರಸಾದಿ ಮಹಾದೇವಯ್ಯನೆಂದೂ ಈತನ ಶೂನ್ಯಸಂಪಾದನೆಯ ತರುವಾಯ ೧೦೦ ವರ್ಷಗಳ ಅವಧಿಯಲ್ಲಿ ಮಿಕ್ಕ ಶೂನ್ಯಸಂಪಾದನೆಗಳು ಹುಟ್ಟಿವೆಯೆಂದೂ ಹೇಳಬಹುದು.

ಸುಣ್ಣದಲ್ಲಿ ಪ್ರಸಾದ ಬೀಳಲು ಎಲ್ಲ ಸುಣ್ಣವನ್ನು ಸೇವಿಸಿದ ಸುಪ್ರಸಾದಿದೇವನೆಂಬವನೊಬ್ಬ ಗುರುರಾಜಚರಿತ್ರೆ (೧೬-೧೬)ಯಲ್ಲಿ ಕಂಡುಬರುತ್ತಾನೆ. ಈತನಿಗೂ ಶೂನ್ಯಸಂಪಾದನೆಯ ಕರ್ತೃವಿಗೂ ಸಂಬಂಧವಿದ್ದಂತಿಲ್ಲ. ಮಿಕ್ಕ ಶಾಂತದೇವ, ಚಿಕ್ಕವೀರದೇವ, ಶರಣ ವೀರಣ್ಣದೇವರು, ಶಾಂತದೇವ, ನಾಗದೇವ, ಮಲ್ಲಿಕಾರ್ಜುನಾರಾಧ್ಯ, ಬಸವಣ್ಣದೇವರ ಬಗ್ಗೆ ಏನೂ ತಿಳಿದುಬಂದಿಲ್ಲ.

ಭಂಡಾರಿ ಬಸವಪ್ಪೊಡೆಯ

ತೋಂಟದಾರ್ಯರ ಕೃಪಾಪಾತ್ರನಾದ ಘನಲಿಂಗಿದೇವ, ಸುತ್ತೂರ ಶ್ರೀಮಠದ ಅಧಿಕಾರಿ. ಈತನ ಗುರು ಕೂಗಿಲೂರು ನಂಜಯ್ಯನ ಗುರುವಾದ ಭಂಡಾರಿ ಬಸವಪ್ಪೊಡೆಯನನ್ನು ಕುರಿತ ೨ ಶಾಸನಗಳು ನಂಜನಗೂಡಿನಲ್ಲಿ ದೊರೆಯುತ್ತವೆ.*

ನಂಜನಗೂಡ-೧ (ಕ್ರಿ.ಶ. ೧೫೧೪): ಸಿಂಡೇನಹಳ್ಳಿಯ ಉತ್ಪನ್ನದಲ್ಲಿ ಅರ್ಧಭಾಗವನ್ನು ಸಂಗಮೇಶ್ವರದೇವಾಲಯಕ್ಕೆ ಸುತ್ತೂರು ಸಿಂಹಾಸನದ ಪಟ್ಟದ ಭಂಡಾರಿ ಬಸವಪ್ಪ ಒಡೆಯರು ನೀಡಿದರೆಂದು ಈ ಶಾಸನ ಹೇಳುತ್ತದೆ. ಉತ್ಪನ್ನದ ಮಿಕ್ಕರ್ಧ ಭಾಗವನ್ನು ಸಂಗಮೇಶ್ವರ ದೇವಾಲಯದಲ್ಲಿ ವಾಸವಾಗಿರುವ ಸಿರಿಗಿರಿ ಒಡೆಯರಿಗೆ ನೀಡಲಾಯಿತೆಂದು ತಿಳಿದುಬರುತ್ತದೆ.

ನಂಜನಗೂಡ-೨ (ಕ್ರಿ.ಶ. ೧೫೧೪): ಸುತ್ತೂರು ಸಿಂಹಾಸನದ ಪಟ್ಟದ ಭಂಡಾರಿ ಬಸವಪ್ಪ ಒಡೆಯರು ಸ್ಥಾಪಿಸಿದ ಸಂಗಮೇಶ್ವರ ದೇವಸ್ಥಾನದಲ್ಲಿ ವಾಸವಾಗಿರುವ ಸಿರಿಗಿರಿ ಒಡೆಯರಿಗೆ ನೀಡಿದ ಭೂದಾನ ಇದರ ವಿಷಯ.

ನಿರ್ಮಾಣ ಗಣೇಶ್ವರ ಮತ್ತು ಗೋಸಲಯತೀಶ

ಪ್ರಭುದೇವ, ಚನ್ನಬಸವ, ಸಿದ್ಧರಾಮ, ಅನಾದಿಗಣೇಶ್ವರ, ಆದಿಗಣೇಶ್ವರರ ತರುವಾಯ ನಿರ್ಮಾಯಗಣೇಶ್ವರನು ಆರನೆಯವನಾಗಿ ಶೂನ್ಯಸಿಂಹಾಸನವನ್ನೇರಿದನೆಂದು ನಿರಂಜನವಂಶ ರತ್ನಾಕರದ

* EC.III (೧೯೭೪) ನಂಜನಗೂಡು ೩೯೫, ೩೯೬ (೧೫೧೪).

ಮಠ. ವಿದ್ವಾಂಸರ ಅಭಿಪ್ರಾಯದಂತೆ ಈ ನಿರ್ಮಾಯವೆಂಬುದರ ಕನ್ನಡರೂಪ ಮಾದೇಶ್ವರ.* ಈ ಮಾದೇಶ್ವರನ ಗದ್ದುಗೆ ವೀರಶೈವ ಪುಣ್ಯಕ್ಷೇತ್ರವಾದ ಶ್ರೀಮಲೆಯಲ್ಲಿದೆ.

ಈ ಆರನೆಯ ನಿರ್ಮಾಯಗಣೇಶ್ವರ ಮತ್ತು ಹದಿನೈದನೆಯ ಗೋಸಲದೇವರ ವಿಷಯವಾಗಿ ಎರಡು ತಾಮ್ರಪಟಗಳು ಲಭಿಸುತ್ತಿದ್ದು ಇವುಗಳಲ್ಲಿ ಒಂದು ಶಾಸನದ ಪೂರ್ವಾರ್ಧದಲ್ಲಿ ೧೫ನೆಯವನಾದ ಗೋಸಲ ಯತೀಶನ, ಉತ್ತರಾರ್ಧದಲ್ಲಿ ಆರನೆಯವನಾದ ನಿರ್ಮಾಯಗಣೇಶ್ವರನ ವಿಷಯ ಬಂದರೆ; ಇನ್ನೊಂದು ಶಾಸನದಲ್ಲಿ ಮೊದಲನೆಯದರ ಉತ್ತರಾರ್ಧದಲ್ಲಿರುವ ನಿರ್ಮಾಯಗಣೇಶ್ವರನ ವಿಷಯವೇ ಕೊಂಚ ವ್ಯತ್ಯಾಸದಿಂದ ಬರುತ್ತದೆ. ಹೀಗಾಗಿ ಎರಡನ್ನೂ ಒಟ್ಟಿಗೆ ಅವಲೋಕಿಸುವುದು ಸುಸಂಗತವೆನಿಸುತ್ತದೆ.

"..............ಶ್ರೀಮದ್ಗೋಸಲಾರ್ಯಯತಿ ಪ್ರಸೀದ ॥ ಶ್ರೀಮತ್ಸಚ್ಚಿದಾನಂದ ನಿತ್ಯಸಂಪೂರ್ಣ ಅವಿರಳಜ್ಞಾನಾನಂದಪರಂಜ್ಯೋತಿಸ್ವರೂಪ ಜಗದ್ವಿಸ್ತಾರ ಮೂಲ ಸ್ತಂಭಾಯಮಾನ ಚರಾಚರ ಜಗಜ್ಜಾಲ ಜನ್ಮಕಾರಣೀಭೂತ ಶೃತಿ ಸ್ಮೃತಿ ಪುರಾಣಾಗಮೇತಿಹಾಸ ಷಟಸ್ಥಳ ಪರಬ್ರಹ್ಮೇಷ್ಟಲಿಂಗಾರಾಧಕ ತತ್ವಮಸ್ಯಾದಿ ಮಹಾವಾಕ್ಯವಿಚಾರ ಧುರೀಣ ಶ್ರೀಮದ್ವಾಣಿಜ್ಯಪುರಿ ಮಠಾಧಿಪ ಅನಾದಿಗಣ ಮರುಳಾರ್ಯವಂಶ ಪರಂಪರಾನುಗತ ವಿರಿವಿಡಿದ್ರಾಜಗುರು ಅಪ್ಪಣಾರ್ಯ ನಿಜಗರ್ಭಸಂಜನಿತ ವೇದವೇದಾಂತೋಪನಿಷತ್ಸಾರೋದಿತ ಮಹನಿಜಪಟ್ಟಮೂರ್ತಿಯಾಗಿ ಕಲ್ಲಗೂಳಿಯಂ ನುಡಿಸಿ, ಪಂದವಡಿಯನೆಂಬುವನ ದಾಸೋಹದಲ್ಲವಗೆ ಘೃತ ಕಡಿಮೆಯಾಗೆ ಕುಂಭೋದಕವ ತರಿಸಿ ಉಣಬಡಿಸಿ, ಕುಲಾಂತರಮಿಗೆ ಕೂಡ ಪಾಲುಗಳಂ ವಿಂಗಡಿಸಿ, ಮುನೂರಮೂವತ್ತೈದು ಪಂಗಡ(ಗ)ಳನಾಗಮಾಡಿ ತತ್ತವರಿಗೆ ಆರಾಧಕರಾಗಿಯು, ಕೋವಿನಕೆರೆ ಸಾಸಲರಾಯನೆಂಬುವನಿಗೆ ಲಿಂಗಧಾರಣೆಯಂ ಮಾಡಿ, ಪಟಗಾರ ರಾಯಂಣನಾಯ್ಕನಿಗೆ ಮಲೆನಾಡಿಗೆ ಪಟ್ಟವಂ ಕಟ್ಟಿ, ಕುಳ ವಂದಕೆ ವಂಬತ್ತು ತ್ರಯಪಣದಂತೆ ಯಲ್ಲರೊಳು ಕಟ್ಟುಗಾಣಿಕೆಗಳನ್ನು ಪಡೆದು, ಪಡಿಪತಿ ದೇಶಕ್ಕೆ ಪ್ರಯಾಣಮಾಡಿ ಸರ್ಪದಷ್ಟನಾದ ರಾಜಮಗನಂ ಬದುಕಿಸಿ, ವಾದದಲ್ಲಿ ಗೆಲದು ನಾಮವಂನು ತೆಗಿಸಿ ಭಸ್ಮವಂ ಇಡಿಸಿ ಲಿಂಗಧಾರಣೆಯಂ ಮಾಡಿ, ತುಳುವದೇಶಕ್ಕೆ ಬಂದು ತುಲಕಾಣ್ಯರಿಗೆ ಮಹಿಮೆಯಂ ತೋರಿ ಶತಪವಾಡ ಮಹನೀಯರೆಂದು ಬಿರುದಂ ಪಡೆದ ಶ್ರೀ ಮದ್ಗೋಸಲಾರ್ಯವರ್ಯಸ್ವಾಮಿ ಸನ್ನಿಧಾನ ಸಂಕಾಶೆ । ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀಪ್ರಿತ್ವೀವಲ್ಲಭ ಶ್ರೀ ಪ್ರತಾಪಚಕ್ರವರ್ತಿ ಹೊಯ್ಸಳ ವೀರಬಲ್ಲಾಳದೇವರು ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೨೪೬ನೆಯ ತಾರಣ ಸಂಬಂತ್ತರದ ಮಾಗ ಶುದ್ಧ ತದಿಗೆಯಲು ದಕ್ಷಿಣ ದೇಶ ವಿಜಯಯಾತ್ರೆಯಲು ಬರಸಿಕೊಟ್ಟ ತಾಂಬ್ರ ಶಾಸನಕ್ರಮವೆಂತೆಂದೊಡೆ ॥ ೧. ಹಿರಿಮಡಿವಾಳದ ಶಿವನಂಕಾರೇಶ್ವರರಿಗೆ ಚಂದ್ರುಣಿ ಮಠದವರು, ೨. ಮಾದೇಶ್ವರರಿಗೆ ಕಂಚಿ ತೆಲುಗಾಣ್ಯದ ಮಠದವರು, ೩. ಪಂದೇಶ್ವರರಿಗೆ ಶ್ರೀವಾಣಿಜ್ಯಪುರಿಮಠ, ೪. ಸಿದ್ಧೇಶ್ವರರಿಗೆ ಕೆಂಬಲ್ಲೂಮಠ, ೫. ಬ್ರಹ್ಮೇಶ್ವರರಿಗೆ ಮಹಲಿಂಗಿಯಮಠವೆಂತಲೂ ಈ ಪಂಚೈದು ಲಿಂಗಗಳಿಗೆ ಈ ಮಠಗಳೆಂದು ವಿಧಿಸಿ ತತ್ತ ದೇವಸ್ಥಾನಕೆ ಸೇರಿದ ತಂಮಡಿಗಳು ಶಿಷ್ಯರು, ಬೇಡಗಂಪಣಗಳಿಗೆ ತತ್ತ ಮಠಾಧಿಪತಿಗಳೇ ಲಿಂಗಧಾರಣ ತೀರ್ಥ ಪ್ರಸಾದಂಗಳಂ ಕೊಟ್ಟು ಅವರಿಂ ಕಟ್ಟುಕಾಣಿಕೆಗಳಂ ತೆಗೆದು ಆ

---

* ಶ್ರೀ ಮಾದೇಶ್ವರ ಚರಿತ್ರೆ, ಪು. ೭.

ದೇವಾಲಯಂಗಳಲಿ ನಡೆಯುವ ಯಲ್ಲಾ ಕಾರ್ಯಗಳಂ ನಡೆಸತಕ್ಕುದೆಂದು ನೇಮಿಸಿರುತ್ತೇವೆ ।[೬೫] ಶ್ರೀ [೬೬] ಮಾದೇಶ್ವರಸ್ವಾಮಿಯು ಕತ್ತಲಿರಾಜ್ಯದೊಳು ಇದು(ದ್ದು) ಕನ್ನಾಳದೇಶಕ್ಕೆ ಬಂದು ಸಮಸ್ತ ದೇವತೆಗಳು ಶ್ರವಣನಲಿ ಸೇರಿಸಿರುವುದಂ ನೋಡಿ ಅವನಂ ಸಂಹಾರಮಾಡಿ, ಪ್ರಭುಲಿಂಗಾರಾಧ್ಯರಿಂದ ಲಿಂಗಧಾರಣೆಯಂ ಮಾಡಿಸಿಕೊಂಡು, ವಜ್ರಮಲೆಯಲಿ ನೆಲೆಗೊಂಡು ಆಲಂಬಾಡಿ ಚುಂಚೇಗಲುಡನಿಂದ ವಂದು ಅಂಕಣ ದೇವಾಲಯವಂ ಕಟ್ಟಿಸಿಕೊಂಡು ಭೂಸುರನಿಂ ಬೇಡರ ಕಂನಯನಿಂ ಪೂಜಿಸಿಕೊಂಡು ಬೇಡರ ಕಂನಯನ ದೃಡಕೆ ಮೆಚ್ಚಿ ಮೋಕ್ಷವಂ ಕೊಟ್ಟು ಕುಂನಪ ನಾಗರಸೀಮೆ ಇದ್ದ ಬೇಡ ಗಂಪಣ ರಾಯಂಣ ನಾಯ್ಕನ ಮನೆಯಲಿ ಕೊಂಗ ದೊರೆಯು ಹೆಣ್ಣು ಕೇಳಿದ್ದರಿಂದ ಅವರು ತಲೆ ತಪಿಸಿಕೊಂಡು ಹೋಗುತ ಬರಲು ದಾರಿಯಲಿ ತುಂಗಭದ್ರಾ ನದಿಯು ಅಡ(ಡ್ಡ)ಲಾಗಿದುದರಿಂದ ದಾಟಲಸಾಧ್ಯವಾಗಿ ಪಾರ್ವತಿ ಅಂಶಳಾದ ಭದ್ರಕಾಳಿ ಅಂಮನವರಂ ಭಜಿಸಲು ಆ ದೇವಿಯು ಪ್ರತ್ಯಕ್ಷಳಾಗಿ ಇವರ ಮನೋಭಿಷ್ಟವಂ ನೆರವೇರ್ರಿ ನದಿಯಂ ದಾರಿಬಿಡಿಸಿ ಹೊರಗೆ ಬಂದು ಇತಪ್ಪರ ಮಕ್ಕಳಾದರೆ ಭದ್ರಿ ಭದ್ರ ಎಂಬ ಹೆಸರಂ ಕೊಡುತ್ತೇವೆಂದು ಹೇಳಿ ನೇರಳಕೆರಿಯಲಿ ಸ್ಥಳವಾಗಿದ್ದರು. ಮೇಲಿನ ಪಂಚಮಠದ ಸ್ವಾಮಿಗಳು ಬಂದು ಬೇಡಗಂಪಣಕ್ಕೆ ಲಿಂಗಧಾರಣೆಯಂ ಮಾಡಿ ರಾಯಪ್ಪನಾಯ್ಕರಿಗೆ ವೋಕಳಿ ಸೇವೆಗೆ ಕರ್ತನಮಾಡಿ, ಶ್ರೀಮಹಾದೇವನು ಉಪ್ಪಲಿಗಶೆಟ್ಟಿಯ ದೃಢಕ್ಕೆ ಮೆಚ್ಚಿ ಗುಡ್ಡನ ಮಾಡಿ ಯಂಣೆಮಜ್ಜಣ ಸೇವೆಗೆ ಕರ್ತನಮಾಡಿ, ಭಕ್ತರುಗಳಿಂ ದೇವಾಲ್ಯವಂ ವಿಸ್ತರಿಸಿ ಅಲಸಾಲಂಮನ ವಂಶಸ್ಥರಾದ ಕೆಂಪಮಾದ ತಂಮಡಿ

೬೫, ೬೬. ಮಾದೇಶ್ವರನನ್ನು ಕುರಿತ ಹೈದರಲಿಯ ಒಂದು ಶಾಸನ ಹೀಗಿದೆ:

"ಶ್ರೀ ಮಹಾದೇವ್ರಾದ ಮಾದೇಶ್ವರ ಸಾಮಿ । ಸಿದ್ಧೇಶ್ವರಸ್ವಾಮಿ । ಬಹ್ಮೇಶ್ವರ ಶಿವಲೆಂಕಾರೇಶ್ವರ। ಹಿರಿಮಡುವಾಳಸ್ವಾಮಿ । ಪಂಚಮಠಕ್ಕೆ ಕರ್ತರಾದ ಗುರುವೆ ನಮಃ । ಶಾಲಿವಾಹನ ಶಕಾಬ್ಧಃ ೧೬೯೮ನೆಯ ದುರ್ಮುಖಿ ಸಂ। ಶ್ರಾವಣ ಶು ೩ಲ್ಲು ಶ್ರೀ ಮಾದೇಶ್ವರಸ್ವಾಮಿದೇವರ ಸಂನಿಧಿಗೆ ಶ್ರೀರಂಗಪಟ್ಟಣಕ್ಕೆ ಅಧಿಪತಿಯಾದಂತ ಬಾದ್ದರ ಸಾಬಿಯವರು ಶ್ರೀ ಮಹಾಜಗದ್ಗುರುವಾದ ಮಾದೇಶ್ವರಸ್ವಾಮಿ ತಂಮಡಿಗಳು ಅಲಸಾಲಂಮನ ವಂಶಸ್ತರಾದ ಕೆಂಪಮಾದವಡೆರು ಕಾಲ ಮಾದವಡೆರು ಬೋಳಮದವಡೆರು ಸಂತತಿಯಾದ ಕಾಡವೀರತಂಮಡಿಗಳಿಗೆ ಬರೆಸಿಕೊಟ್ಟ ತಾಂಬ್ರಶಾಸನದ ಕ್ರಮವೇನೆಂದರೆ । ೬೬ಯೀ ಮಾದೇಶ್ವರಸ್ವಾಮಿ ಕರ್ತಲ್ಲಿ ರಾಜ್ಯದ ರಿಪು ಕೊಂಕನ ಆಳಕ ದೇಶಕ್ಕೆ ಬಂದು ಶ್ರವಣರಲ್ಲಿ ಸಮಸ್ತದೇವರುಗಳೆಲ್ಲಾ ಶೆರೆಸಿಕ್ಕಿಯಿದ್ದುದು ನೋಡಿ ಆ ಶ್ರವಣನಂನು ಸಂಹಾರವಂನು ಮಾಡಿ ಜಗಕ್ಕೆಲ್ಲ ತಾನೇ ದೇವರಾಗಿ ವಜ್ರಮಲೆಯಲ್ಲಿ ನೆಲೆಗೊಂಡು, ಆಲಂಬಾಡಿ ಜುಂಜೇಗಾಡನಿಂದ ೧ ಅಂಕಣ ನಿವೇಶನ ಕಟ್ಟಿಸಿಕೊಂಡು ಭೂಸುರದಿಂದಾ । ಬ್ಯಾಡರ ಕಂನ್ಯೆಯನಿಂದ ಪೂಜಿಸಿಕೊಂಡು ಬ್ಯಾಡರ ಕಂನ್ಯೆಯನ ದೃಡಕೆ ಮೆಚ್ಚಿ ಅವನಿಗೆ ಮೋಕ್ಷಾಕೊಟ್ಟು ಗುಂದಿಪ್ಪೆ ನಾಗರ ಶೀಮೆಯಲ್ಲಿಯಿದ್ದಂತಾ ಬ್ಯಾಡಕಂಪಣದ ರಯಂಣನಾಯ್ಕನ ಮನೆಯಲ್ಲಿ ಕೊಂಗದೊರೆ ಹೆಂಣಂ ಕೇಳಿದ್ದರಿಂದ ಯಿವರು ಕಾಣದ ಹಾಗೆ ಬರುತಾಯಿರಲು ತುಂಗಭದ್ರನದಿ ದಾಟಲಾರದೆ ಶ್ರೀಮಹಾದೇವನ ಭಜಿಸಲು ನದಿ ಯಿಬ್ಬಾಗವಾಗಿ ದಾರಿಬಿಟ್ಟಿತು. ಇವರು ತಂಮಲಿ ಶಿಸು ಹುಟ್ಟಿದರೆ ಭದ್ರಾಭದ್ರಿಯೆಂಬ ನಾಮದೇಹವ ಮಾಡುತ್ತೇವೆಂದು ನಿಶ್ಚೈಸಿ ಆ ನದಿ ದಾಟಿ ಬಂದು ನೇರಿಯಕೆರೆಯಲ್ಲಿ ಸ್ಥಳವಾಗಿರಲು, ಬಾಳಲ್ಲಿ ಶಿಂವ್ಹಾಸನ ಕುಂತೂರಮಠದ ಸ್ವಾಮಿಯವರ ಬಂದು ಬೇಡ ಗಟ್ಟಿಗಂಣಪಕೆ ಲಿಂಗಧಾರಣೆ ಮಾಡಿ ರಾಯಂಣನಾಯ್ಕನ ಓಕುಳಿಶಾವೆಗೆ ಕರ್ತನ ಮಾಡಿಯಿರಲು ಗಟ್ಟಿ ಮದನಾರಿಯಿಂದ ವಿಸ್ತಾರವಾಗಿ ದೇವಸ್ತಾನ ಮದ್ದರಿಸಿತು. ಯಿದಕ್ಕೆ ಪೂಜಾಕರ್ತರು ಕಾಡವೀರ ತಂಮಡಿ ಮಕ್ಕಳು ಪೂಜಾ ವಿರುದ್ಧ ಮಾಡಿಕೊಂಡು ಪಿರಿಯಾದೆಗೆ ಬರಲು ಯಿದಕ್ಕಾಗಿ ಪಿರಿಯಾದೆಗೆ ಯದುಳಾಳಿಯಾದ ಯೀ ಹುಡುಗರ ಮಾವನಿಗೆ ಮುಂಣೆಪಾಲಿನ ಶಿವಾಗದ (ಶಿವಯೋಗ) ಶಾವೆಗೆ ನೇಮಿಶಿ ಯೀ ಹುಡುಗರ ಪೂಜಾಕತ್ತರ ಮಾಡಿಯಿವರು ಪುತ್ತಭೂಮಿಗೆ ತೆರಿಗೆಯಿಲ್ಲದಾಗು ಪಟ್ಟಗಾರನಾದ ರಾಯಂಣನಾಯ(ಕ)ನಿಗೆ ಬಿಳಿಚಿತ್ರಿ ಪಚ್ಚೆಮಡಿ ತೋಡಾಬಳೆ ಶಾಲು ನಾಮೆ ಸಹಕೊಟ್ಟು ಈ ಕಂಪಣಕ್ಕೆ ಕರ್ತನೆಂದು ನೀನು ಜಾತಿಪದ್ಧತಿ ಪ್ರಕಾರ ಅನಾಚಾರಸ್ತರನ ಶಿಕ್ಷಿಸಬಹುದೆಂದು ನೇಮಿಸಿದಕ್ಕೆ ಉಂಟಾದ ತಾಂಬ್ರದ ಶಾಸನ। ಶ್ರೀಮಹಾದೇವನಾದ ಮಾದೇಶ್ವರಸ್ವಾಮಿ । ಸಿದ್ದೇಶ್ವರ । ಬ್ರಹ್ಮೇಶ್ವರ । ಶಿವಲಂಕಾರೇಶ್ವರ । ಹಿರಿಮಡಿವಾಳದೇವರು । ಪಂಚದೇವಸ್ತಾನಕರ್ತ ಶ್ರೀ ಮಹಾದೇವ. ಪಂಚಮಟಕ್ಕೆ ಕರ್ತ ಕುಂತೂರಮಠ । ಇದಕ್ಕೆಲ್ಲಾ ಪಟ್ಟಗಾರ ರಾಯಂಣನಾಯ್ಕ ಕರ್ತನೆಂದು ನಿಶ್ಚೈಸಿತು. ಶ್ರೀ ಗುರುವೇನಮಃ ಲಿಂಗರಾಜ ಅರಸಿನವರ ಕೈಬರಹಾ । .... (ಮಾದೇಶ್ವರ ಸಾಂಗತ್ಯದ ಮುನ್ನುಡಿ ಪು.೫).

ಕಾಳಮಾದತಂಮಡಿ ಸಂತತಿಯವರಿಂದ ಕಾಡವೀರತಮ್ಮಡಿ ಮಕ್ಕಳು ಪೂಜೆ ವಿರುದ್ಧವಂ ಮಾಡಿಕೊಂಡು ವ್ಯಾಜಕೆ ಬರಲು ಇದಕೆ ಮೊದಲಾಳಿಯಾದವನ ಮೊಂಣುಪಾಲಿನವನ ಶಿವಾಗಮದ ಸೇವೆಗೆ ನೇಮಿಸಿ, ಹುಡುಗರು ಪೂಜಾಕರ್ತರೆಂದು ಇವರು ಉತ್ತಭೂಮಿಗೆ ತೆರಿಗೆ ಇಲ್ಲವೆಂದು ಮಾಡಿ ಪಟಗಾರ ರಾಯಂಣನಾಯ್ಕನಿಗೆ ಬಿಳಿಚತ್ರಿ ಪಂಚವಂಟಿ ತೋಡಬಳೆ ಶಾಲುನಾಮೆ ಸಹ ಕೊಟ್ಟು ಕಂಪಣಕ್ಕೆ ಕರ್ತನೆಂದು ನಿಂನ ತಂದ್ವಂಶ ಪರಂಪರೆಯಾಗಿ ನಡೆಸಿಕೊಂಡು ಬರತಕ್ಕುದೆಂದು ನಿಯಮಿಸಿ ಪಟಗಾರ ರಾಯಂಣನಾಯ್ಕರ ವಂಶದವರು ಪಂದೇಶ್ವರತಂಮಡಿಗಳು ಮತ್ತು ಶಿಷ್ಯರುಗಳು ಹಿಂಡಿರಾಮನ ಗುಂಪು ಬೆಳೆಕೂಟ ದೊಂಣೆಕೂಟ ಗುಪರಿನ ಕೂಟ ಮಿಂಡಗುದ್ದಿ ಪಾಲಿನವರು ಕೆರಣೆ ಪಾಲಿನವರು ಶಿವನಂಕಾರೇಶ್ವರನ ವಕ್ಕಲಿಗರು ಈ ಪಂಜ್ತೆ ಇದು ದೇವಸ್ಥಾನದ ಮೇಲುವಿಚಾರ ಅಧಿಕಾರವನು ಶ್ರೀವಾಣಿಜ್ಯಮಠಾಧಿಪತಿಗಳಿಗೆ ಬಿಟ್ಟು ಮಾದೇಶ್ವರಬೆಟ್ಟದ ಉರಿಗದ್ದಿಗೆಯೆಂಬ ವಿರಕ್ತಕಟ್ಟೆಯಲಿ ಅಀದನೆ ಒಂದು ಭಾಗ ಕಾಣೆಸಿಕೊಡುವದಲದೆ ರಾಯನಹಳ್ಳಿ ಬಸವಪುರಯೆಂಬ ಗ್ರಾಮ ಹಿಂಭಾಗಗಳಂ ಬಿಟ್ಟು ಆ ಗ್ರಾಮದ ಕಾಡಾರಂಬ ನೀರಾರಂಬ ಗೊಪ್ಪಲ ಪೊಂಮೆ ಸುಂಕ ದೇವಾದಾಯ ನಟ್ಟಕಲ್ಲು ಬಿಟ್ಟಬಸವ ಮೊದಲಾದವುಗಳನ್ನು ಈ ಮಠಕ್ಕೆ ಕೊಡುವುದಲದೆ ನಿಂಮ ತದ್ವಂಶಪರಂಪರೆಯಾಗಿ ಆಚಂದ್ರಾರ್ಕಸ್ತಾಇ ಆಗಿ ನಡೆಸಿಕೊಂಡು ಬರತಕ್ಕುದೆಂದು ಬರೆಸಿಕೊಟ್ಟ ತಾಮ್ರಶಾಸನ."[೬೭]

ಹದಿನೈದನೆಯ ಅಧಿಕಾರಿ ಗೋಸಲಯತೀಶನನ್ನು ವರ್ಣಿಸಿ ತರುವಾಯ ಆರನೆಯ ಅಧಿಕಾರಿ ಮಾದೇಶನನ್ನೂ, ಮಾದೇಶನ ಗದ್ದುಗೆಪೂಜೆಯ ಸಂಬಂಧ ಬಹುಶಃ ಹೈದರಾಲಿಯ ಕಾಲದಲ್ಲಿ ತಲೆದೋರಿದ ಜಗಳವನ್ನೂ ಈ ತಾಮ್ರಶಾಸನ ಉಲ್ಲೇಖಿಸುತ್ತದೆ. ಆದುದರಿಂದ ಹೈದರಾಲಿ ಸಮಯದ ಈ ಶಾಸನ ತನ್ನ ಕಾಲಕ್ಕೆ ಹಿಂದಣ ಘಟನೆಗಳನ್ನು (ಗೋಸಲಯತೀಶನ ಸನ್ನಿಧಿಯಲ್ಲಿ ನಿರ್ಣಯಿಸಲಾದ ಪಂಚಮಠಗಳ ಹಕ್ಕು ಮತ್ತು ಮಾದೇಶ್ವರನ ಮಹಿಮೆ) ಸಿಂಹಾವಲೋಕನ ಮಾಡಿದೆಯೆನ್ನಬಹುದು.[೬೮]

ಗೋಸಲಯತಿಯ ಸನ್ನಿಧಿಯಲ್ಲಿ ಹೊಯ್ಸಳ ವೀರಬಲ್ಲಾಳನ ಸಮಕ್ಷದಲ್ಲಿ ಪಂಚಮಠಗಳ ಹಕ್ಕು ಮರ್ಯಾದೆ ನಿರ್ಣಯಗೊಂಡ ಕಾಲ, ತಾರಣ ಸಂವತ್ಸರದ ಶಾಲಿವಾಹನ ಶಕೆ ೧೨೪೬ ಅಂದರೆ ಕ್ರಿ.ಶ। ೧೩೨೪. ಆದರೆ ತಾರಣ ಸಂವತ್ಸರವು ಶಾಲಿವಾಹನ ಶಕೆ ೧೨೬೬ರಲ್ಲಿ ಬರುವುದರಿಂದ ಈ ಶಾಸನ ಕಾಲ ಕ್ರಿ.ಶ. ೧೩೪೩ ಎನ್ನಬೇಕಾಗುತ್ತದೆ. ಇದರಿಂದ ೩ನೆಯ ವೀರಬಲ್ಲಾಳನ ಕಾಲಕ್ಕೂ ಧಕ್ಕೆ ಬರುವುದಿಲ್ಲ. ಒಟ್ಟಿನಲ್ಲಿ ಗೋಸಲಯತೀಶನು ೩ನೆಯ ವೀರಬಲ್ಲಾಳನ ಸಮಕಾಲೀನನಾಗಿ ಕ್ರಿ.ಶ. ೧೩೪೩ರಲ್ಲಿ ಬದುಕಿದ್ದನೆನ್ನಬಹುದು.[೬೯]

---

೬೭. MAR.1930 P. ೧೩೮. ಹರದನಹಳ್ಳಿ ಗ್ರಾಮದ ತಾಮ್ರಶಾಸನ.

೬೮. ಈ ಶಾಸನದ ಸಂಪಾದಕರು ಒಳವಿಷಯ, ಭಾಷೆ, ಲಿಪಿಗಳ ಆಧಾರದಿಂದ ಇದು ಸುಳ್ಳು ಶಾಸನವಿರಬಹುದೆಂದು ತೀರ್ಮಾನಿಸಿದ್ದಾರೆ. ಆದರೆ ನಾವು ಮೇಲೆ ವಿವೇಚಿಸಿದಂತೆ ಭಾಷೆ ಲಿಪಿ ಹೈದರನ ಕಾಲದವುಗಳೆಂದೂ, ಒಳವಿಷಯ ಸಿಂಹಾವಲೋಕನಕ್ರಮದ್ದೆಂದೂ ತಿಳಿದುಕೊಂಡರೆ ಇದು ಸತ್ಯಶಾಸನವೆಂದು ಖಚಿತವಾಗುತ್ತದೆ.

೬೯. ಸುಜ್ಞಾನಬೋಧೆಯೆಂಬ ಷಟ್ಪದಿಗ್ರಂಥದಲ್ಲಿ ಗುರು ಚಿತ್ತಾರಾಧ್ಯನು ದ್ವಾರಸಮುದ್ರದ ಬಲ್ಲಾಳರಾಯನಿಗೆ ದೀಕ್ಷೆಯಿತ್ತನೆಂದು ಹೇಳಿದೆ. ಚಿತ್ತಾರಾಧ್ಯವೆಂಬುದು ಈ ಗೋಸಲಾರ್ಯನ ಇನ್ನೊಂದು ಹೆಸರಿರಬಹುದೆ?

ಭಕ್ತಕೋಟಿಯನ್ನುದ್ಧರಿಸಿ, ರಾಜವಂಶಗಳನ್ನು ಪ್ರತಿಷ್ಠಾಪಿಸಿ, ಸಾಮಾಜಿಕ ಕಟ್ಟಳೆಗಳನ್ನು ನಿಯಮಿಸಿ, ಪವಾಡಗಳನ್ನು ಮೆರೆಯುತ್ತ ಗೋಸಲಯತೀಶನು ಸಂಚರಿಸಿದನೆಂದು ಹೇಳುವ ಈ ಶಾಸನಸ್ಥ ವಿಷಯಗಳೆಲ್ಲ ನಿರಂಜನವಂಶರತ್ನಾಕರದಲ್ಲಿವೆ. ಹೀಗಾಗಿ ಗೋಸಲಯತೀಶನ ಚರಿತ್ರೆ ಕಾವ್ಯ ಮತ್ತು ಶಾಸನಗಳಲ್ಲಿ ಏಕಮುಖಿಯಾಗಿ ಧ್ವನಿಸಿದೆ ಎನ್ನಬಹುದು.

ಇನ್ನು ಆರನೆಯ ಅಧಿಕಾರಿಯಾದ ನಿರ್ಮಾಯಗಣೇಶ್ವರನ ವಿಷಯ ಮೇಲಣ ಎರಡೂ ಶಾಸನಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಾಗಿ ಬಂದಿದೆ. ಮಲೆನಾಡಿನಲ್ಲಿ ಜೈನಮತವನ್ನೆದುರಿಸಿ ವೀರಶೈವವನ್ನು ಪ್ರಚಾರಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆಯೆಂದು ಈ ಶಾಸನ ತಿಳಿಸುತ್ತದೆ.

ಚನ್ನಬಸವರಾಜೇಂದ್ರ ಗುಬ್ಬಿಯ ಮಲ್ಲಣಾರ್ಯ

ನಿರಂಜನವಂಶರತ್ನಾಕರದ ಪ್ರಕಾರ ಶೂನ್ಯಸಿಂಹಾಸನವನ್ನೇರಿದ ೧೫ನೆಯ ಅಧಿಕಾರಿಯಾದ ಹರದನಹಳ್ಳಿಯ ಗೋಸಲಯತೀಶ, ಶಂಕರಾಚಾರ್ಯ, ದಿವ್ಯಲಿಂಗೇಶ್ವರರ ತರುವಾಯ ಚೆನ್ನಬಸವರಾಜನು ೧೮ನೆಯ ಅಧಿಕಾರಿಯಾದನು. ಗುಬ್ಬಿಯ ಮಲ್ಲಣಾರ್ಯ ಮತ್ತು ತೋಂಟದ ಸಿದ್ಧಲಿಂಗಯತಿಗಳು ಈತನ ಶಿಷ್ಯರಲ್ಲಿ ಪ್ರಮುಖರು. ಗುರು ಚೆನ್ನಬಸವರಾಜೇಂದ್ರನು ಕ್ಷೇತ್ರಜ್ಞಸುಮನೋವಾದವನ್ನು (?), ಶಿಷ್ಯ ಮಲ್ಲಣಾರ್ಯನು ವಾತುಲ ತಂತ್ರಟೀಕೆ ಮತ್ತು ಗಣಭಾಷಿರತ್ನಮಾಲೆಗಳನ್ನು ರಚಿಸಿ ಕನ್ನಡಸಾಹಿತ್ಯದಲ್ಲಿ ಖ್ಯಾತನಾಮರೆನಿಸಿರುವರು. ಈ ಉಭಯ ಮಹಿಮರ ವಿಷಯ ಕ್ರಿ.ಶ. ೧೮೯೬ರ ಶಿಲಾಶಾಸನವೊಂದರಲ್ಲಿ ಹೀಗೆ ಬರುತ್ತದೆ.[೭೦]

೧. ಶ್ರೀ ಸಿದ್ಧಲಿಂಗ ಪ್ರಸನ್ನ

೨. ಶಾಲಿ ಶ ೧೮೧೮ ದುರ್ಮುಖಿ

೩. ಸಂ । ಮಾರ್ಗ । ಶು । X ಸನ್ ೧೮೯೬
(ಅಮರಗುಂಡ ಮಲ್ಲಿಕಾರ್ಜುನನ ವರ್ಣನೆ)

೭. ... ಪಾವನಮೂರ್ತಿ ಕೀರ್ತಿಧವಳಂ ಕವಿಭೂಷಣ ಮಲ್ಲಣಾರ್ಯ ಸದ್ಭಾವಮನಾಂತು ನಿಂತನ

೮. ದುವೇ ಪರಮುಕ್ತಿಯನೀವ ತಾಣವೆಂದಾ ವಿಮಲಾಂಗ ಚೆನ್ನಬಸವೇಶನಿದೇಂ ಗುರುಮಲ್ಲಿನಾಥನಿಂ ಸೇವೆಯನೊಂದುತಿಲ್ಲಿ ನೆಲೆ

೯. ಗೊಂಡನಿದೇಂ ಘನಪುಣ್ಯಕೋಶಮೋ ॥
(ಅಟವೀಶನೆಂಬ ಯೋಗಿ ಚನ್ನವೃಷಭೇಂದ್ರನ ಕೃಪೆಯಲ್ಲಿ ನಿಂತು ಅಘನಾಶಿನೀ ಸರೋವರ ಮತ್ತು ಚಂದ್ರಮೌಳೀಶ ಲಿಂಗಗಳನ್ನು ನಿರ್ಮಿಸಿದ ವಿಷಯ).

೧೭. .... ಮಲ್ಲಣಾರ್ಯ ಮಹಾಕ

೧೭. ವಿಯಂ ಪಡೆದ, ಮತ್ತಾ ಮಲ್ಲೇಶನ ಭಕ್ತಿಗೊಲಿದ, ಪುಣ್ಯಕ್ಷೇತ್ರವೆಂದು ಬಗೆದಿಲ್ಲಿಯೇ ನೆಲೆಗೊಂಡ ಶ್ರೀ ಚನ್ನಬಸವೇಶ್ವರನಿಂ ರಾ

೧೮. ಜಿಸುವ ಈ ಗುಬ್ಬಿ..... ॥

---

೭೦. EC.XVI. P.೩೦ ಗುಬ್ಬಿ, ಕ್ರಿ.ಶ. ೧೮೯೬.

ಗುಬ್ಬಿ ಗ್ರಾಮದ ಹಿರಿಮೆ ಗರಿಮೆಗಳನ್ನು ಘೋಷಿಸುವ ಈ ಶಾಸನದಲ್ಲಿ ಉಲ್ಲಿಖಿತರಾದವರು ಗುರು ಚೆನ್ನಬಸವರಾಜೇಂದ್ರ, ಶಿಷ್ಯ ಗುಬ್ಬಿಯ ಮಲ್ಲಣಾರ್ಯ.[೨೧] ಈ ಮಲ್ಲಣಾರ್ಯನು ವಾತುಲತಂತ್ರಟೀಕೆ, ಗಣಭಾಷಿತರತ್ನಮಾಲೆಗಳ ಕರ್ತೃವೇ ಹೊರತು ಭಾವಚಿಂತಾರತ್ನ ವೀರಶೈವಾಮೃತಮಹಾಪುರಾಣಗಳ ಕರ್ತೃವಲ್ಲ. ಉಭಯಭಾಷಾ ಪಂಡಿತನೂ ಪರಮ ಶಿವಭಕ್ತನೂ ಆದ ಈತನನ್ನು "ಪಾವನಮೂರ್ತಿ ಕೀರ್ತಿಧವಳಂ ಕವಿಭೂಷಣ" "ಮಹಾಕವಿ" ಎಂದು ಶಾಸನ ಕರೆದಿದೆ. ಚೆನ್ನವೃಷಭೇಶನು ಶಿಷ್ಯನ ಭಕ್ತಿಗೆ ಮನಸೋತು ಗುಬ್ಬಿಯಲ್ಲಿಯೇ ಸ್ಥಿರವಾಗಿ ನೆಲಸಿದುದು ಮಲ್ಲಣಾರ್ಯನ ಗುರುಭಕ್ತಿಯನ್ನು ಪರಿಸ್ಫುಟಗೊಳಿಸುತ್ತದೆ. ಇಂಥ ಸಮರ್ಥ ಗುರು, ಸಮರ್ಥ ಶಿಷ್ಯರ ಪುಣ್ಯಭೂಮಿಯಾದ ಗುಬ್ಬಿಯಲ್ಲಿ ಆಟವೀಶನೆಂಬ ಯತಿಯು ಕ್ರಿ.ಶ. ೧೮೯೭ರಲ್ಲಿ ಸರೋವರ ಕಟ್ಟಿಸಿ ಲಿಂಗವನ್ನು ಪ್ರತಿಷ್ಠಾಪಿಸಿದನೆಂಬುದು ಈ ಶಾಸನದ ವಿಷಯ.

ತೋಂಟದ ಸಿದ್ಧಲಿಂಗ

ಶಿವಭಕ್ತರಾದ ಸಂಗಮವಂಶದ ಅರಸುಗಳನ್ನು ಮುರಿದು ವಿಷ್ಣುಭಕ್ತರಾದ ಸಾಳುವವಂಶದ ಅರಸುಗಳು ವಿಜಯನಗರಸಾಮ್ರಾಜ್ಯದ ಅಧಿಕಾರವನ್ನು ಹಿಡಿದುಕೊಂಡರು. ಈಗ ಹೊರಗೆ ಇದ್ದ ವೈಷ್ಣವಮತ ಹಂಪೆಯನ್ನು ಪ್ರವೇಶಿಸಿತು, ಒಳಗೆ ಇದ್ದ ವೀರಶೈವಮತ ಎಡೆಯೂರಿಗೆ ಅಡಿಯಿಟ್ಟು ನಡೆಯಿತು. ಹಂಪೆಯನ್ನು ಪ್ರವೇಶಿಸಿದ ಮಾಧ್ವಮತವನ್ನು ಸಂಘಟಿಸಿದ ವ್ಯಾಸರಾಯರಂತೆ. ಹಂಪೆಯನ್ನು ತೊರೆದ ವೀರಶೈವವನ್ನು ಎಡೆಯೂರಿನಲ್ಲಿ ಸಂಘಟಿಸಿದವರು, ತೋಂಟದ ಸಿದ್ಧಲಿಂಗಯತಿಗಳು. ಹೀಗಾಗಿ ಇವರು ಒಂದರ್ಥದಲ್ಲಿ 'ವೀರಶೈವ ವ್ಯಾಸರಾಯರು.' ಏಳುನೂರುವಿರಕ್ತರ ನಾಯಕವ್ಯಕ್ತಿಯಾಗಿ ನಿಂತು ವೀರಶೈವವನ್ನು ತುಂಗಭದ್ರೆಯ ದಕ್ಷಿಣಕ್ಕೆ ಹೆಚ್ಚು ಪ್ರಸಾರಗೊಳಿಸಿದ ಈ ತೋಂಟದಾರ್ಯರು ವೀರಶೈವ ಇತಿಹಾಸದಲ್ಲಿ ದ್ವಿತೀಯ ಪ್ರಭು, ಬಸವ ಮತ್ತು ಚನ್ನಬಸವ. ನಿರಂಜನವಂಶರತ್ನಾಕರದ ಪ್ರಕಾರ ಶೂನ್ಯಸಿಂಹಾಸನದ ೧೫ನೆಯ ಅಧಿಕಾರಿಗಳಾದ ಹರದನಹಳ್ಳಿ ಗೋಸಲದೇವ, ಶಂಕರದೇವ, ದಿರ್‍ಯಲಿಂಗದೇವ, ಗೋಸಲ ಚನ್ನಬಸವೇಶ್ವರರ ತರುವಾಯ ೧೯ನೆಯ ಅಧಿಕಾರಿಗಳಾಗಿ ಪಟ್ಟವೇರಿದ ಇವರ ಉನ್ನತ ಚರಿತ್ರೆ, ಉಜ್ವಲ ಚಾರಿತ್ರ್ಯ ಕನ್ನಡಸಾಹಿತ್ಯ ಮತ್ತು ಶಾಸನಗಳಲ್ಲಿ ಎರಕಗೊಂಡು ನಿಂತಿದೆ. ಇವುಗಳಲ್ಲಿ ಕೆಳಗಣ ಎಡೆಯೂರ ಶಾಸನ ಮುಖ್ಯವಾದುದು.

ಎಡೆಯೂರ ಶಾಸನ[೨೨]: ಎಡೆಯೂರ ಮಠದ ಆವರಣದಲ್ಲಿ ಸಿದ್ಧಲಿಂಗ ಶಿವಯೋಗಿಗಳ ಕೀರ್ತಿಯನ್ನು ಉದ್ಘೋಷಿಸುತ್ತಿರುವ ಶಾಸನವಿದು. ಶಿವಯೋಗಿಗಳ ದೈವೀವ್ಯಕ್ತಿತ್ವ ಮತ್ತು ಅವರ ಶಿಷ್ಯಸಂತಾನವನ್ನು ಹೆಸರಿಸುವ ಈ ಶಾಸನ ಹೀಗಿದೆ.

೧. ಕೊಡಗಿಹಳಿಯದೇವರು ತಾಉ ಪಡೆದ ಮಠದ ಭೂಮಿಯಲಿ
ತೋಂಟದಸ್ವಾಮಿ

೨. ಗೆ ತಂಮ ಭಕ್ತಿಯಿಂದಾ ಕಟ್ಟಿಸಿಕೊಟ್ಟ ಮಠ. ಯಿ ಮಹಸಿದ್ದೇಶ್ವರನ ಅತಿಸಯವೆಂತೆಂದ

---

೨೧. ಗುಬ್ಬಿಯ ಮಲ್ಲಣಾರ್ಯನು ಚನ್ನವೃಷಭೇಂದ್ರನ ಶಿಷ್ಯನೆಂದು ನಿರಂಜನವಂಶರತ್ನಾಕರ ಮತ್ತು ಶಾಂತೇಶನ ಸಿದ್ಧೇಶ್ವರಪುರಾಣಗಳಿಂದ ತಿಳಿದುಬರುತ್ತದೆ.

೨೨. EC. XI ಕುಣಿಗಲ್ ೪೯ ಎಡೆಯೂರ ಮತ್ತು EC. XVI. P. 42.

೩. ಡೆ: ಶ್ರೀಮತು ಸಚಿದಾನಂದನಿತ್ಯಪರಿಪೂರ್ಣವನುಳ್ಳ ಅನಾದಿಭಕ್ತ. ಆ ಭಕ್ತನ ಹೃದಯದಲ್ಲಿ ಜಂ
೪. ಗಮ, ಜಂಗಮದ ಮುಕುಟದಲ್ಲಿ ಶೂನ್ಯಲಿಂಗ, ಆ ಲಿಂಗದಲ್ಲಿ ಚಿದಂಬರ ಶಿವಶಕ್ತಿ ಪಂಚ
೫. ಶಕ್ತಿ ಪಂಚನಾದ ಪಂಚಬ್ರಂಹ ಯಿಶ್ವರಾಷ್ಟಕ ಮಹೇಶ್ವರ ಪಂಚವಿಂಶತಿ ರುದ್ರರೇಕಾ
೬. ದಶತ್ರಯವಯ ಹಿರಂಣ್ಯಗರ್ಭ ವಿರಾಟಮೂರ್ತಿ ಯಿಂತೀ ಯೆಂಭತೊಂದು ಮೂರ್ತಿ
೭. ಯೆ ಅಂಗವಾಗಿರ್ಪ್ಪಾತನೆ ಅನಾದಿಭಕ್ತನು. ಆ ಭಕ್ತನ ಪ್ರಾಣಕಳಾಚೈತಂನ್ಯಸ್ವ
೮. ರೂಪೇ ತೋಂಟದ ಸಿದ್ಧಲಿಂಗೇಶ್ವರನು. ಆ ಸಿದ್ಧಲಿಂಗೇಶ್ವರನ ಮೂರ್ತಿ ಕ್ರಮವೆಂತೆಂದ
೯. ಡೆ: ಪ್ರಣಮವೆ ಸಿರಸು, ನಮಸಾ(ಸ್ಕಾ)ರವೇ ಭುಜ, ಶಿಕಾರವೇ ದೇಹ, ವ ಯಸ್ಕಾರವೇ ಪಾದ, ಅನಂ
೧೦. ತಕೋಟಿಬ್ರಹ್ಮಾಂಡಗಳೇ ಮಕುಟ, ಸಮಸ್ತಲೋಕಾದಿಲೋಕಂಗಳೇ ದೇಹದ ಜಳವ
೧೧. ಳಿಯ, ಆಕಾಶವೇ ಮುಖ, ದಶದಿಕ್ಕುಗಳೇ ತೋಳು, ಚಂದ್ರಸೂರ್ಯಾದಿಗಳೇ ನಯನ, ಪಾತಾಳ
೧೨. ವೇ ಹೆದೆ(ಎದೆ?), ಮೇಘಂಗಳೇ ಜಟಾಬಂಧ, ಆ ಜಟಾಬಂಧದಲ್ಲಿ ಶೂನ್ಯಲಿಂಗ, ವೇದಪುರಾಣಂಗಳೇ ಕ್ರೀ.ನ
೧೩. ಕ್ಷತ್ರಂಗಳೇ ಪುಷ್ಪ, ಚಂದ್ರಪ್ರಕಾಶವೇ ವಿಭೂತಿ, ಅಷ್ಟಕುಲಪರ್ವ್ವತಂಗಳೇ ರುದ್ರಾಕ್ಷಿ, ಸಪ್ತಸಮುದ್ರಂಗ
೧೪. ಳೇ ಕಮಂಡಲ, ಭುವನಸ್ರುಷ್ಟಿವಿ ಕಂತೆ, ದಿವಾರಾತ್ರಿಗಳೇ ಮಠ. ಷಡುರುತುಗಳೇ ಷಡುಸ್ಥಲ, ಮಹಾಸೇ
೧೫. ಷನೇ ಕಟಿಸೂತ್ರ, ಪರಿಪೂರ್ನ್ನಜ್ಞಾನವೇ ಪಂಚಮುದ್ರೆ, ತ್ರಿಕಾಲಜ್ಞಾನವೇ ಮಹದೈಶ್ವರ್ಯ, ಮಹಾ
೧೬. ಮೇರುವೇ ದಂಡ, ಸದ್ಗುಣವೇ ಕರ್ಪರ, ಕುಲವೆ ಶಿವಕುಲ. ಯಿಂತಪ್ಪ ಅನಾದಿ ಜಂಗಮವೆ
೧೭. ಜಗಹಿತಾರ್ತ್ಥವಾಗಿ ಚರಿಸಿದ ಕ್ರಮವೆಂತೆಂದರೆ; ಜ್ಞಾನಕ್ರಿಯಾಸ್ವರೂಪನು, ಸರ್ವಾಂಗಲಿಂ
೧೮. ಗಿ, ಷಟ್ಸ್ಥಲಗ್ನಾನಿ, ಸರ್ವಾಚಾರಸಂಪನ್ನ, ಪಾದೋದಕಪ್ರಸಾದ ಪ್ರತಿಷ್ಠಾಚಾರ್ಯರು,
೧೯. ಅಷ್ಟಾವರಣಾಲಂಕರಣ, ದ್ವೈತಾದ್ವೈತತಿಮಿರಮಾರ್ತ್ತಂಡನುಂ ಯಿಂತಪ್ಪ ದಿವ್ಯ ಶಿವಯೋಗಿ ಸಿದಲಿ
೨೦. ಂಗೇಶ್ವರಂಗೆ ಸಂಮ್ಯಗ್ನಾನೋದಯವಾಗಿ ಸಂಸಾರ ಹೇಹ(ಯ)ಮಂ ಮಾಡಿ ಶರಣುಹೊಕ್ಕ ಶಿಷ್ಯಜನ
೨೧. ಗಳ ನಾಮ ಪರಿಕ್ರಮಗಳೆಂತೆಂದಡೆ: ಸಪ್ಪೆದೇವರು ಉಪ್ಪಿನಹಳ್ಳಿಯ ಸಾಮಿ ಸಿದ್ಧೇದೇವರು ನಂಜೇದೇ
೨೨. ವರು ಬೋಳಬಸವರಾಜದೇವರು ಗುಂಮಳಾಪುರದ ಸಿದ್ಧಲಿಂಗದೇವರು ಪಟಣದೇವರು ರೇವ

೨೩. ಣಸಿದ್ದೇದೇವರು ಸೀಲವಂತದೇವರು ಚಿಟ್ಟಿಗದೇವರು ಯಿಂತಿವರು ಮುಕ್ಯವಾದ ಭಕ್ತಮ
೨೪. ಹೇಸ್ವರರ್ಗೆ ಷಡುಸ್ತಲಗ್ನಾನ ಲಿಂಗಾಂಗಸಂಮಂಧ ಸಮರಸ ಏಕಾರ್ತ್ತಮಂ ಬೋಧಿಸಿ, ಮುಕ್ತರಂ
೨೫. ಮಾಡಿ, ಷಡುಸ್ತಲ ಯೇಕಾರ್ತವಾಗಿ, ಮಾಡುವ ಕ್ರಿ(ಕ್ರೀ)ಗಳೆಲ್ಲ ನಿಷ್ಪತ್ತಿಯಾಗಿ, ಯೆಡೆಯೂರಲ್ಲಿ ತಮಗೆ ಕಟ್ಟಿ
೨೬. ಸಿದ ಮಟದಲ್ಲಿ ಸಿವಯೋಗಸಮಾಧಿ ಸಂನದ್ಧರಾದರು. ತೋಂಟದ ಶ್ವಾಮಿಯ ಪಾದಪದ್ಮಾರಾದಕರಾದಾ
೨೭. ನಿವಾಸ ನಿವಾಸಿಗಳಾದ ಚೆಂನರಾಯವಡೆಯರು, ಚೆಂನರಾಯವಡೆಯರ ಮಕ್ಕಳು ಲಿಂಗಪ್ಪವಡೆ
೨೮. ಯರು, ಲಿಂಗಪ್ಪವಡೆಯರ ಮಕ್ಕಳು ಪಾದೋದಕಪ್ರಸಾದಸಂಪಂನರಾದ ಚೆಂನವೀರಪ್ಪವಡೆಯರು, ಚೆಂನ
೨೯. ವೀರಪ್ಪವಡೆಯರ ಸತಿ ಪರ್ವತಂಮ್ಮ ದಂಪತಿಗಳು ತಮ್ಮ ಭಕ್ತಿಯಿಂದ ತೋಂಟದಸ್ವಾಮಿಗೆ ಕಲ್ಲುಮಠವ ಕಟ್ಟಿ
೩೦. ಬೇಕೆಂದು ಚಿಟ್ಟಿಗದೇವರಿಗೆ ಪದಾರ್ತಮಂ ನಮಸ್ಕಾರಮಂ ಮಾಡಲಾಗಿ, ಭಕ್ತಿಪದಾರ್ತಮಂ ಕೈಕೊಂಡು ಯೆ
೩೧. ಡೆಯೂರಿಗೆ ಬಿಜಯಂಗೆಯಿದು, ತೋಂಟದಸ್ವಾಮಿಗೆ ಕಲ್ಲುಮಟವನು ಯೆಂಟುಜೆಡೆಯ ಬಗೆಯ ಹಿ
೩೨. ರಿಯರು ಚಿಟ್ಟಿಗದೇವರು ಕಟ್ಟಿಸಿದರು. ಯೆಡೆಯೂರು ಸ್ತಲದಲಿ ಆದ ಕೊಡಗಿ ಮಾನ್ಯ: ನಿತ್ಯಾ ಬಂ
೩೩. ದ ಕಾಣಿಕೆ, ಸೀಮೆ ಮೇಲೆ ತಂದ ನಂದೀದೀಪದ ಕಾಣಿಕೆ ಯಿಷ್ಟು ಯಿ ಮಟದ ಹಿರೀರು ಪಂಚಿಕಂತೆ
೩೪. ಯ ಚೆನಮಲ್ಲಿಕಾರ್ಜುನ ದೇವರದು. ಯೆಂಟುಜಡೆಯ ಬಗೆಯ ಹಿರೀರು ಚಿಟ್ಟಿಗದೇವರು ಪ
೩೫. ಡದ ಪುರವರ್ಗವು ಸಹಮುಕದಲ್ಲಿ ಬಂದ ಕಾಣಿಕೆ ತೋಂಟದಸ್ವಾಮಿಯ ದಾಸೋಹ
೩೬. ವ ದ್ರವ್ಯ ಯಿ ಮಟದಲ್ಲಿ ತೋಂಟದಸ್ವಾಮಿಯ ದಾಸೋಹವನು ಚಿಟ್ಟಿಗದೇವರು ಯಿ
೩೭. ಡ್ಡಿದ ಅXXದದಲಿ ವಡೆಯರು ಭಕ್ತರು ವಪ್ಪಿದ ಸತ್ಪುರುಸರು ಯಿ ದಾಸೋಹವನು ಮಾ
೩೮. ಡುವರು. ಯಿ ದ್ರವ್ಯ ತೋಂಟದಸ್ವಾಮಿಯ ದಾಸೋಹಕ್ಕೆ ಸಲುವದು. ಆರಿಗು ವರ್ಗಪಾ
೩೯. ರಂಪರಿಗೆ ಸಲ್ಲದು. ಸಜ್ಜನಸತ್ಪುರುಸರು ಯಿ ಮಟವಲಿ ಯಿ ಪದಾರ್ತವ ಅನು
೪೦. ಭವಿಸುವರು. ಯೀ ಮಠದಲ್ಲಿ ಕಟ್ಟಿಸಿದ ಅಡಿಗೆಮನೆ ಉಗ್ರಾಣದ ಮನೆಯೂ
೪೧. ಈ ತೋಟದ ಸ್ವಾಮಿಯ ದಾಸೋಹಕ್ಕೆ ಸಲುವದು. ಶ್ರೀ ಸಿದ್ಧೇಶ್ವರ."

ವೀರಶೈವ ತತ್ವಗಳೇ ದೇಹಧರಿಸಿ ಬಂದಂತೆ ಶೋಭಿಸುವ ಈ ವರ್ಣನೆ ಸಿದ್ಧಲಿಂಗಯತಿಗಳ ವ್ಯೋಮಸದೃಶವ್ಯಕ್ತಿತ್ವವನ್ನು ಅಭಿವ್ಯಕ್ತಗೊಳಿಸುತ್ತದೆ. ಆ ಕಾಲದ ಜನತೆ ಈ ಯತೀಶನನ್ನು ಯಾವ ಅರ್ಥದಲ್ಲಿ ಕಂಡಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. ರಾಜಪೂಜಿತರಾದ ಇವರ ಶಿಷ್ಯಕೋಟಿಯಲ್ಲಿ

ಪ್ರಮುಖರೆನಿಸಿದ ಕೊಡಗಿಹಳ್ಳಿದೇವ, ಸಪ್ಪೆದೇವ, ಉಪ್ಪಿನಹಳ್ಳಿಯ ಸ್ವಾಮಿ, ಸಿದ್ಧೇದೇವ, ನಂಜೇದೇವ, ಬೋಳಬಸವರಾಜದೇವ, ಗುಮ್ಮಳಾಪುರ ಸಿದ್ಧಲಿಂಗದೇವ, ಪಟ್ಟಣದೇವ, ರೇವಣಸಿದ್ಧೇದೇವ, ಶೀಲವಂದದೇವ, ಚಿಟ್ಟಿಗದೇವರ ಹೆಸರು ಈ ಶಾಸನದಲ್ಲಿದ್ದುದು ಒಂದು ವಿಶೇಷ. ಇವರಲ್ಲಿ ಕೊಡಗಿಹಳ್ಳಿದೇವ, ಸಪ್ಪೆದೇವ, ಉಪ್ಪಿನಹಳ್ಳಿ ಸ್ವಾಮಿಸಿದ್ಧದೇವ, ಬೋಳಬಸವ, ಗುಮ್ಮಳಾಪುರ ಸಿದ್ಧಲಿಂಗ, ಪಟ್ಟಣದೇವ, ಶೀಲವಂತದೇವರ ವಿಷಯ ಚೆನ್ನಬಸವ ಪುರಾಣದಲ್ಲಿ ಬರುತ್ತದೆ.[೨೩] ಮುಂದೆ ಈ ಪೀಳಿಗೆ ಜಾಳಿಗೆಯಂತೆ ನಾಡನ್ನೆಲ್ಲ ವ್ಯಾಪಿಸಿ ತೋಂಟದ ಸಂಪ್ರದಾಯವನ್ನು, ವೀರಶೈವ ಮತವನ್ನು ನಾಡಿನ ಉದ್ದಗಲಕ್ಕೆ ಮುಟ್ಟಿಸಿತು.

ಸಿದ್ಧಲಿಂಗಯತಿಗಳು ಲಿಂಗೈಕ್ಯರಾದ ಮಿತಿ ಹೋಗಲಿ, ಸಮಾಧಿಯ ಮೇಲೆ ಕಲ್ಲುಮಠ ಕಟ್ಟಿಸಿದ ಮಿತಿಯನ್ನಾದರೂ ಹೇಳದಿರುವುದು ಈ ಶಾಸನದ ಒಂದು ದೊಡ್ಡ ಕೊರತೆ. ಕವಿಚರಿತೆಕಾರರು ಉಲ್ಲೇಖಿಸಿದಂತೆ ಈತನ ಕಾಲ ಕ್ರಿ.ಶ. ೧೪೭೦. ಆದರೆ ಗ್ರಂಥಸಾಹಿತ್ಯ ಮತ್ತು ಶಾಸನಸಾಹಿತ್ಯಗಳ ಆಧಾರದಿಂದ ಇತ್ತೀಚೆಗೆ ಇದು ಒಂದು ಶತಮಾನದಷ್ಟು ಮುಂದೆ ಸರಿದಿದೆ.[೨೪]

ಕಗ್ಗೆರೆ ಶಾಸನ[೨೫] (ಕ್ರಿ.ಶ. ೧೬೬೩): "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೫೮೫ ಸಂದ ವರ್ತಮಾನವಾದ ಕ್ರೋಧಿ ಸಂವತ್ಸರದ ಕಾರ್ತಿಕ ಶು. ೨ ಲು.... ಆತ್ರೇಯಗೋತ್ರರಾದ ಮೈಸೂರ ರಾಜವಡೆಯರ ಪಉತ್ರರಾದ ದೇವರಾಜವಡೇರ ಪುತ್ರರಾದ ದೇವರಾಜವಡೀರ್ರೈಯ್ಯನವರು ಕಗ್ಗೆರೆಯ ತೋಂಟದ ಸಿದೇಶ್ವರಸ್ವಾಮಿಯವರಿಗೆ ಸಮರ್ಪಿಸಿದ ಗ್ರಾಮದ ಸಿಲಾಶಾಸನದ ಕ್ರಮವೆಂತೆಂದರ್‍ರೆ, ದಳವಾಯಿ ನಂದಿನಾಥೈಯ್ಯನು ಸಮರಸಂನಾಹವ ಮಾಡಿ ಯಿಕೇರ್‍ರಿ (ಇಕ್ಕೇರಿ)ಯವರ ಮೇಲಣ ಕಾರ್‍ಯಕ್ಕೆ ಕಳುಹಿಸುವಲ್ಲಿ ಪ್ರಾರ್ಥನೆ ಮಾಡಿಕೊಂಡು ಯಿದೇವಾದ ನಿಮಿತ್ಯ ಆ ಕಾರ್‍ಯ್ಯಂಉ ನಮಗೆ ದಿಗ್ವಿಜಯವಾಗಲಾಗಿ ನಂಮ ಆಳವಿಕೆಗೆ ಸಲ್ಲುವ ಕುಣಿಗಿಲ ಸ್ತಳದ ಕಗ್ಗೆರೆಗ್ರಾಮದ ಚತುಸ್ಸೀಮೆ ಒಳಗಾದ ಭೂಮಿಯನು ತುಲಾಸಂಕ್ರಮಣ ಪುಂಣ್ಯಕಾಲದಲ್ಲಿ ಸ್ವಾಮಿ ಸೇವೆಗೆ ಸಮರ್ಪಿಸಿ ಸಿಲಾಪ್ರತಿಷ್ಠೆ ಮಾಡಿಸ್ತೆಉಯೆಂದು ಬರದ ಶಾಸನಾ॥.....॥

ಈ ಶಾಸನ ಬರೆಯಿಸಿದವನು ಮೈಸೂರು ಒಡೆಯರ ದಳವಾಯಿ ನಂದಿನಾಥಯ್ಯ. ಇಕ್ಕೇರಿ ಯುದ್ಧಪ್ರಸಂಗದಲ್ಲಿ ದೊರೆಗಳಿಗೆ ವಿಜಯಲಭಿಸಬೇಕೆಂದು ಸಿದ್ಧಲಿಂಗೇಶನ ಗದ್ದುಗೆಗೆ ಹೊತ್ತ ಹರಕೆ ಸತ್ಯವಾಗಿ ಪರಿಣಮಿಸಲು ದೇವಕಾರ್ಯಕ್ಕೆ ಭೂಮಿಬಿಟ್ಟು ಈ ಶಾಸನವನ್ನು ನಿಲ್ಲಿಸಿದನು. ಯುದ್ಧ ಮೊದಲಾದ ದುರ್ಧರ ಕಾರ್ಯಕಲಾಪಗಳಲ್ಲಿ ಸಿದ್ಧಲಿಂಗೇಶನ ಗದ್ದುಗೆ ಇಷ್ಟಫಲದಾಯಿಯೆಂದು ಆ ಕಾಲದ ಜನತೆ ನಂಬಿದುದು ಇದರಿಂದ ವ್ಯಕ್ತವಾಗುತ್ತದೆ.

ಕಗ್ಗೆರೆ ಶಾಸನ[೨೬] (ಕ್ರಿ.ಶ. ೧೬೬೪): "ಸಿದ್ಧೇಸ್ವರ ಸ್ವಸ್ತಿ. ಆವನಾದರು ಆಲಿ(ಅಳಿ)ಪಿದರೆ ಆವಾನೂ ದೇವಲೋಕಕ್ಕೆ ಮರ್ತ್ಯಲೋಕಕ್ಕೆ ಹೊರಗೂ ಸಿದೇಸ್ವರXXXX"

---

೨೩. ಚೆ.ಬ.ಪು. ೬೩-೪೭. ೪೮ ಮತ್ತು ೪೯.

೨೪. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ. ಮುನ್ನುಡಿ.

೨೫. EC.XII ಕುಣಿಗಲ್ಲು ೪೬, ಕಗ್ಗೆರೆ, ಕ್ರಿ.ಶ. ೧೬೬೩.

೨೬. EC.XII ಕುಣಿಗಲ್ಲು ೪೭, ಕಗ್ಗೆರೆ, ಕ್ರಿ.ಶ. ೧೬೬೪.

ಕಗ್ಗೆರೆ ಶಾಸನ[೭೭] **(ಕ್ರಿ.ಶ. ೧೮೯೮)**: "ಕಗ್ಗೆರೆ ಶ್ರೀ ಸಿದ್ದಲಿಂಗೇಶ್ವರಸ್ವಾಮಿ ಪಾದಕ್ಕೆ ಕುಣಿಗಿಲು ಚೆನ್ನಬಸಪ್ಪನ ಮಗ ರೇಷ್ಮಿ ದಲ್ಲಾಳಿ ವೀರಪ್ಪಸೆಟಪ್ಪನ ಹೆಂಡತಿ ಗಂಗಮ್ಮನ ಭಕ್ತಿ. ಹೇವಳಂಬಿ ಸಂ। ಸನ್ ೧೯ಋಚಿ೮೯೮ನೆ ಯ್ಸಿ"

ಚಿತ್ರದುರ್ಗ ಶಾಸನ[೭೮]: ಚಿತ್ರದುರ್ಗದ ಮೋಕ್ಷಗುಂಡಂ ಶ್ರೀನಿವಾಸ ಅವಧಾನಿಗಳ ತೋಟದಲ್ಲಿರುವ ಈ ಶಾಸನವನ್ನು ಜನತೆ ಯಂತ್ರದ ಕಲ್ಲು ಎಂದು ಕರೆಯುತ್ತಾರೆ. ಬೇನೆಬಂದ ದನಕರುಗಳಿಗೆ ಈ ಕಲ್ಲುತೊಳೆದ ನೀರನ್ನು ಕುಡಿಸಿದರೆ ರೋಗ ನಿವಾರಣೆಯಾಗುವುದೆಂದು ಜನರ ನಂಬುಗೆ. ಈ ಶಾಸನದ ಪೂರ್ಣಪಾಠ ಕೆಳಗಿನಂತಿದೆ:

೧. ಶ್ರೀಗುರು ಹರಿಶರಣಂ ಯೋಗಿಜನವೆಂದ್ಯೆಶಃ ಕರು
೨. ಣೆಯಾಗೆನ್ನ ಜನನ ಮರಣಂ ನೀಗಿಪ ಗು
೩. ರುದ್ರಮೂರ್ತಿ ಕರುಣಂ ರಾಯಗಿರಿ ಶರಣಂ ॥
೪. ವೇದಾದಿ ಮೂಲಂ ಪ್ರತೀತೇಶ್ವರಾಣಾಂ ತ್ರೈಯೋ
೫. ದಶಸ್ತಂ ಶಸಿಬಿಂಬರೂಪಂ ನಾದಾತ್ಮಕಂ
೬. ಸುಪ್ತೇ ಭುಜಂಗರೂಪಂ ಶ್ರೀತಾತ ಮೂಲಂ
೭. ಪ್ರಣಮಂ ನಮಾಮಿ ॥೦॥ ಕಲಿಯುಗ
೮. ೪೮೪೯ನೇ ಕಾಳಯುಕ್ತಿ ಸಂವತ್ಸರದ ಕಾ ।
೯. ರ್ತಿಕ ಶು ೧೫ ಸಲುಂಮ್ಯವಾರ ರೋಹಿಣಿ
೧೦. ನಕ್ಷತ್ರ ಸುಭಲಗ್ನ

ವಾ ೫	ಯ ೬	ಮ ೩	ಶಿ	ಅ	ಓಂ	ನ
ಓಂ ೧	ನ ೨	ವಾ ೫	ಯ	ಮ	ಶಿ	ಅ
ಶಿ ೪	ಅ ೭	ಓಂ ೧	ನ	ವಾ	ಯ	ಮ
ಯ ೬	ಮ ೩	ಶಿ ೪	ಅ	ಓಂ	ನ	ಮ
ನ ೨	ವಾ ೫	ಯ ೬	ಮ	ಶಿ	ಅ	ಓಂ
ಅ ೭	ಓಂ ೧	ನ ೨	ವಾ	ಯ	ಮ	ಶಿ
ಮ ೩	ಶಿ ೪	ಅ೭	ಓಂ	ನ	ವಾ	ಯ

೭೭. EC.XII ಕುಣಿಗಲ್ಲು ೪೮, ಕಗ್ಗೆರೆ, ಕ್ರಿ.ಶ. ೧೮೯೮.
೭೮. ಶ. ಸಾ. ೧೮-೧೦.

೧೧. ನಾದ ಬಿಂದು ಕಳೆಭೇದವ ತಿಳಿದಲ್ಲದೆ
೧೨. ಆರಕ್ಷರವಾದ ತೆರನನರಿಯ ಬಾ
೧೩. ರದು । ಆರಕ್ಷರಕೆ ಮೂಲಪ್ರಣಮನ
೧೪. ತಿಳಿದಲ್ಲದೆ ನಾದಕಲೆದೋರದು ಆ ನಾದದೊ
೧೫. ಳಗಿನ ಕಳೆಯ ನೋಡಿ ಕಂಡಲ್ಲದೆ ರಾಜಶಿವಯೋ
೧೬. ಗಿಯಾಗಬಾರದು । ರಾಜಶಿವಯೋಗವೆಂಬುದು
೧೭. ಆದಿಯಲ್ಲಿ ಶಿವಬೀಜವಾದ ಮಹಾಮಹಿ
೧೮. ಮರಿಗೆ ಸಾಧ್ಯವಪ್ಪುದಲ್ಲದೆ ತ್ರೈಜಗದಲ್ಲಾರಿ
೧೯. ಗು ಅಸಾಧ್ಯ ನೋಡಾ ಮಹಾಲಿಂಗಗುರುಶಿವ
೨೦. ಸಿದ್ಧೇಶ್ವರ ಪ್ರಭುವೇ.

ಈ ಶಾಸನದ, ಪಙ್ತೆ ೧೧ ರಿಂದ ೨೦ರ ವರೆಗಣ ಭಾಗ ತೋಂಟದ ಸಿದ್ಧಲಿಂಗೇಶ್ವರರ ಷಟ್ಸ್ಥಲಜ್ಞಾನಸಾರಾಮೃತ ಹೆಸರಿನ ಗ್ರಂಥಕ್ಕೆ ಸಂಬಂಧಸಿದ ವಚನವಾಗಿದೆ. ವೀರಶೈವ ಅಪಾರ ವಚನರಾಶಿಯಲ್ಲಿ ಶಿಲಾಶಾಸನವನ್ನೇರಿ ನಿಂತುದು ಇಂದೊಂದೇ ವಚನ.* ಇದು ಶ್ರೀಗಳವರ ವಾಣಿಯ ಬಗೆಗೆ ಜನತೆಗಿದ್ದ ಭಕ್ತಿಯ ದ್ಯೋತಕ.

ಎಡೆಯೂರ ಸಿದ್ಧಲಿಂಗೇಶ್ವರ ದೇವಾಲಯದ ಎಡಗಡೆಯ ಗಂಟೆಯ ಮೇಲೆ:[೭೯] "ಸಿದ್ಧಲಿಂಗೇಶ್ವರಸ್ವಾಮಿಯವರ್‍ರಿಗೆ ಬಾದಶಹ ಟಿಪುಸುಲುತಾನಕಾನ ಅಮೀಲು ಜಾಪರಕಾನ ಬೊಂಮಣೆಯವರ ಸೇವೆ."

ಎಡೆಯೂರ ಸಿದ್ಧಲಿಂಗೇಶ್ವರ ದೇವಾಲಯದ ಎಡಗಡೆಯ ಗಂಟೆಯ ಮೇಲೆ[೮೦]**:** "ಸಿದ್ಧಲಿಂಗೇಶ್ವರಸ್ವಾಮಿಯವರ್‍ರಿಗೆ ಬಾದಶಹ ಟಿಪುಸುಲುತಾನಕಾನ ಜಾರಿ ಆಮೀಲ ಜಾಪರಕಾನ ಬೊಂಮಣೆಯವರ ಸೇವೆ."

ಅನ್ಯಮತೀಯರೂ ಸಿದ್ಧಲಿಂಗ ಶಿವಯೋಗಿಗಳ ಗದ್ದುಗೆಯ ಬಗೆಗೆ ವ್ಯಕ್ತಮಾಡಿದ ಭಕ್ತಿಯ ದ್ಯೋತಕವೆನಿಸಿವೆ, ಈ ಬರವಣಿಗೆಗಳು. ಇದಲ್ಲದೆ ಆ ಕಾಲದಿಂದಲೂ ಮಠಕ್ಕೆ ಸಲ್ಲಿಸಲಾದ ಕೊಳಗ, ಪಾತ್ರೆ, ಗದ್ದುಗೆ, ತಟ್ಟೆ, ಬಿಂದಿಗೆ, ಬೆಳ್ಳಿಯ ಕೋಲು, ರಥದ ಕಲಶ, ಬೆಳ್ಳಿಯ ಸತ್ತಿಗೆ ಮೊದಲಾದ ವಸ್ತುಗಳ ಮೇಲೆ ಶಿವಯೋಗಿಗಳ ಮತ್ತು ಸಲ್ಲಿಸಿದವರ ಹೆಸರುಗಳು ಕಂಡುಬರುತ್ತವೆ.[೮೧]

ಬುಕ್ಕಸಾಗರದ ಕರಿಸಿದ್ಧೇಶ್ವರ

ವಿಜಯನಗರ ಪ್ರದೇಶದ ಬುಕ್ಕಸಾಗರ ಗ್ರಾಮಕ್ಕೆ ಸಂಬಂಧಪಟ್ಟ ಕರಿಸಿದ್ಧೇಶ್ವರನ ಜಂಗಮದಾಸೋಹದ ಉಲ್ಲೇಖ ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣ (೬೩-೫೩)ದಲ್ಲಿ ಹೀಗೆ ಬರುತ್ತದೆ.

---

* ಸಿದ್ಧರಾಮನ ವಚನವೂ ಶಾಸನಸ್ಥವಾಗಿರುವ ವಿಷಯ ಇತ್ತೀಚೆ ತಿಳಿದುಬಂದಿದೆ (ನೋಡಿ. ಪು. ೮೯)

೭೯. EC.XVI ಪು. ೪೭ ಎಡೆಯೂರು.

೮೦. EC.XVI ಪು. ೪೭ ಎಡೆಯೂರು.

೮೧. EC.XVI ಪು. ೪೬-೪೭ ಎಡೆಯೂರು.

ಧಾರುಣಿಯೊಳಿಸೆವುತಿಹ ಬುಕ್ಕಸಾಗರದ ಘನ ।
ಚಾರಿತ್ರಮಹಿಮನಾ ಕರಿಯಸಿದ್ಧೇಶ್ವರನ ।
ವಾರಿಯಿಂ ಬಂದ ಜಂಗಮಕೆ ಮೃಷ್ಟಾನ್ನಮಂ ನೀಡಿಸುವ ನತಿಮುದದೊಳು ॥

ಹೀಗೆ ಪ್ರಸಿದ್ಧನಾದ ಈ ಕರಿಸಿದ್ಧೇಶ್ವರನ ಶಿಷ್ಯ ಚಿಕ್ಕಕರಿಸಿದ್ಧೇಶ್ವರ. ಇವನ ಶಿಷ್ಯನೂ ಬುಕ್ಕಸಾಗರ ಮಠಕ್ಕೆ ಕರ್ತನೂ ಆದ ಸಿದ್ಧಬಸವರಾಜದೇವರಿಗೆ ದತ್ತಿನೀಡಿರುವುದನ್ನು ತಿಳಿಸುವ ತಾಮ್ರಶಾಸನವೊಂದರ ಮುಖ್ಯಭಾಗ ಹೀಗಿದೆ.*

೨೦. ಶ್ರೀಮದ್ವೇದಾಂತೋದಿತ ವೀರಶೈವಸಮಯೋ(ರ್ಜಿ)ತ ಲಿಂಗಾಂಗ ಸಂಮಂಧ ಭಸ್ಮ
೨೧. ಸ್ನಾನೋದ್ಧೂಲಿತ ತ್ರಿಪುಂಡ್ರಧಾರಣ ಕ್ರಮವೀರಶೈವಾಗಮೋಕ್ತ ತತ್ತ(ಸ್ವಾ)ನೊ
೨೨. ಧೃತ ರುದ್ರಾಕ್ಷಭೂಷಣಭೂಷಿತ ಪಂಚಾಕ್ಷರೀಮಂತ್ರಜಪಾನುಷ್ಠಾನ ಸ್ತೋತ್ರಪಠ
೨೩. ನ ವೀರಮಹೇಶ್ವರ ಸದಾಚಾರ(ಸ್ತ)ಪನ ಜೈನಬೌದ್ಧಸಾಂಖ್ಯೆಯಶಾಕ್ತೆಯ
೨೪. ಪಾಂಚರಾತ್ರಾದಿ ಪರಮತ ಭಂಜನ ಪ್ರವೀಣ ಶ್ರೀನಂದೀನಾಥ ಶ್ರೀಬ್ರಿಂಗಿನಾಥ
೨೫. ಶ್ರೀವೀರಭದ್ರದೇವರ ಮುಖ್ಯರಾದ ಮಹಾಮಹತ್ತಿನೊಳಗಾದ ಹಂಪೆಯ ಸಿಂಹ್ಮಾ
೨೬. ಸನದ ಪ(ಂ)ಚಮಠ ಪಂಚಗೃಹದೊಳಗಾದ ಬುಕ್ಕಸಾಗರದ ಕರಿಸಿದ್ದೇವರ
೨೭. ಶಿಷ್ಯರಾದ ಚಿಕ್ಕಕರಿಸಿದ್ದೇವರ ಶಿಷ್ಯರು ಬುಕ್ಕಸಾಗರ
೨೮. ಹಂಪೆಮಠಕ್ಕೆ ಕರ್ತರಾದಂಥಾ ಸಿದ್ಧಬಸವರಾಜದೇವರಿಗಂ । ಗಂ
೨೯. ಗಾವತಿ ಸೀಮೆಯೊಳಗಣ ಭಟ್ಟರ ಹಂಚಿನಹಾಳಿಗೆ ಮೂಡಲಾದ । ಮ
೩೦. ಲಲಿಗೆ ದಕ್ಷಿಣವಾದ । ಮಲ್ಲಾಪುರಕ್ಕೆ ಪಡುವಲಾದ । ಹಿರೀಜಂತಗಲ್ಲಿ
೩೧. ಗೆ ವುತ್ತರವಾದ । ಕಲ್ಲುಗುಡಿಯೆಂಬ ಪುರವರ್ಗವನು । ಜಂಗಮಾರ್ಚನೆ ಅಂನ್ನ
೩೨. ದಾನಕ್ಕೆ । ನಿಧಿನಿಕ್ಷೇಪಜಲಪಾಷಾಣ ಆಕ್ಷೀಣಿ ಆಗಾಮಿಸಿದ್ಧಸಾಧ್ಯ ಅ
೩೩. ಷ್ಟಭೋಗ ತೇಜಸ್ವಾಮಯ್ಯಂಗಳು ವಾಪೀಕೂಪಿತಟಾಕಗಳು। [ಪಾ]
೩೪. ರಂಪರ್ಯವಾಗಿ ಆಚಂದ್ರಾರ್ಕಸ್ತಾಯಿಯಾಗಿ ಶ್ರೀ ವೀರವೆಂಕಟಪತಿ ಮಹಾರಾಯ ಮ
೩೫. ಹೀಪತಿ ಸಹಿರಣ್ಯಪಯೋಧಾರಾಪೂರ್ವಕಂ ದತ್ತವಾನ್ಮುದಾ ।

ಈ ಶಾಸನದ ಕಾಲಕ್ರಿ.ಶ. ೧೬೧೨ನೆಯ ಅಕ್ಟೋಬರ್ ೨೬. ದಾನನೀಡಿದವನು ಸಾಳ್ವವಂಶದ ಮೊದಲನೆಯ ವೆಂಕಟಪತಿದೇವರಾಯ. ಈತನ ಕಾಲ ಕ್ರಿ.ಶ. ೧೫೮೬-೧೬೧೪. ಈ ತಾಮ್ರಶಾಸನ ಪ್ರಾರಂಭದಿಂದ ೯ನೆಯ ಚರಣದ ವರೆಗೆ ಸಂಸ್ಕೃತದಲ್ಲಿ, ೨೦ರಿಂದ ೩೫ರ ವರೆಗೆ ಕನ್ನಡದಲ್ಲಿ ೩೫ರಿಂದ ೯೩ರ ವರೆಗೆ ಸಂಸ್ಕೃತದಲ್ಲಿ ಬರೆಯಲಾಗಿದೆ. ಸಿದ್ಧಬಸವರಾಜದೇವರಿಗೆ ಜಂಗಮಾರ್ಚನೆ ಅನ್ನದಾನಕ್ಕೋಸುಗ ಕಲ್ಲಗುಡಿ ಗ್ರಾಮವನ್ನು ದತ್ತಿಬಿಟ್ಟುದು ಈ ಶಾಸನದ ಮುಖ್ಯ ವಿಷಯ. ಸಿದ್ಧಬಸವರಾಜದೇವರ ಗುರುವಿನ ಗುರುವಾದ ಕರಿಸಿದ್ಧೇದೇವರಿಗೆ ಇಲ್ಲಿ ಬಳಸಿದ ವಿಶೇಷಣಗಳು ಅದರಲ್ಲಿಯೂ 'ವೀರಶೈವ', 'ಲಿಂಗಾಂಗ ಸಂಬಂಧ' ಎಂಬಿವು ತುಂಬ ಗಮನಾರ್ಹಪದಗಳು.

---

* ಹೇಮಕೂಟ ೨-೧, ಒಂದು ಅಪ್ರಕಟಿತ ಶಾಸನ-ಸಿ.ಟಿ.ಎಂ. ಕೊಟ್ರಯ್ಯ.

ಹೋಳಿನ ಹಿರಿಯ ಹಂಪಯ್ಯ

ಗುರುರಾಜಚರಿತ್ರೆಯಲ್ಲಿ ಹೋಳಿನ ಹಂಪರುದ್ರ, ಹೋಳಿನ ದೊಡ್ಡ ಹಂಪಯ್ಯ, ಹೋಳಿನ ಚಿಕ್ಕಹಂಪಯ್ಯ ಎಂಬ ಮೂರು ಜನ ಶರಣರ ಉಲ್ಲೇಖ ಬರುತ್ತದೆ.[೮೨] ಇವರಲ್ಲಿ ಹೋಳಿನ ಹಂಪರುದ್ರನು ಗುರುಕರಜಾತನಾಗಿ ಜಂಗಮಸೇವೆಯಲ್ಲಿ ಬಾಳಿ ಲಿಂಗದಲ್ಲಿ ಬೆರೆದನು. ಶ್ರೀರಂಗಪಟ್ಟಣದ ಹೋಳಿನ ದೊಡ್ಡ ಹಂಪಯ್ಯನು ಕಾಶಿಯಿಂದ ರಾಮೇಶ್ವರದ ವರೆಗಿರುವ ಜಂಗಮ ದಾಸೋಹಮಠಗಳಲ್ಲೆಲ್ಲ ಎಡೆಬಿಡದೆ ದಾಸೋಹ ಮಾಡಿ ಎಲ್ಲರನ್ನು ತೃಪ್ತಿಪಡಿಸಿ ಈಶನೊಲವ ಪಡೆದನು. ಚಿಕ್ಕಹಂಪಯ್ಯನೆಂಬಾತನು ಜಂಗಮಕ್ಕೆ ಬೇಡಿದ ಪದಾರ್ಥವನಿತ್ತು ಶೇಷಪ್ರಸಾದವ ಸೇವಿಸುತ್ತಿರಲು ಒಂದು ದಿನ ಸ್ವಪ್ನದಲ್ಲಿ ಭವಿಯ ಮನೆಯಲ್ಲಿ ಉಂಡಂತಾಗಲು ಎಚ್ಚತ್ತು, ಹೊಟ್ಟೆಸೀಳಿ ಕರುಳ ತೆಗೆದು ತೊಳೆದು, ಒಳಗಿಟ್ಟು ಶರಣರ ಸೇವೆ ಮಾಡುತ್ತಿದ್ದನು"[೮೩] ಎಂದು ಅಲ್ಲಿ ಹೇಳಲಾಗಿದೆ. ಇವರೊಳಗೆ ಒಬ್ಬನಾದ ಶ್ರೀರಂಗಪಟ್ಟಣದ ದೊಡ್ಡಹಂಪಯ್ಯನ ವಿಷಯ ಒಂದು ಶಾಸನದಲ್ಲಿ ಹೀಗೆ ಬರುತ್ತದೆ:

"............ಶಾಲಿವಾಹನ ಶಕವರ್ಷ ೧೫೩೮ನೆಯ ನಳಸಂವತ್ಸರದ ನಿಜ ಆಶ್ವೀಜ ಬ ೭ ೮ ಶ್ರೀ ಮತ್ಸಜ್ಜನಶುದ್ಧಶಿವಾಚಾರಸಂಪಂನ ಗುರುಲಿಂಗಜಂಗಮಾಪ್ರೇಮಿಗಳಾದ ದ್ಯಾವಾಪೃಥ್ವೀ ಮಹಾಮಹತ್ತಿನೊಳಗಾದ ಶ್ರೀರಂಗಪಟ್ಟಣದ ಹೋಳಿನ ಹಿರಿಯಹಂಪಯ್ಯನವರು ಸದಾಶಿವಸಾಗರದಲು ಕಟ್ಟಿಸಿದ ಮಹತ್ತಿನ ಮಠದ ಧರ್ಮಕ್ಕೆ .... ಕೆಳದಿ ವೆಂಕಟಪ್ಪನಾಯಕರು..."[೮೪] (ದತ್ತಿಬಿಟ್ಟ ವಿಷಯವಿದೆ.)

ಈ ಶಾಸನದ ಕಾಲ ಕ್ರಿ.ಶ. ೧೬೧೬. ಇಲ್ಲಿ ಕೆಳದಿ ವೆಂಕಟಪ್ಪನಾಯಕನು ದತ್ತಿ ನೀಡಿದುದು ಹೋಳಿನ ಹಿರಿಯಹಂಪಯ್ಯನವರು ಸದಾಶಿವಸಾಗರದೊಳಗೆ ಪ್ರಾಚೀನ ಕಾಲದಲ್ಲಿ ಕಟ್ಟಿಸಿದ ಮಠಕ್ಕೆ ಅಥವಾ ಅದೇ ಆಗ ಕಟ್ಟಿಸಿದ ಮಠಕ್ಕೆ ಎಂಬುದು ಸ್ಪಷ್ಟವಾಗದ ಕಾರಣ ಹಿರಿಯಹಂಪಯ್ಯನ ಕಾಲದ ಬಗ್ಗೆ ಸಂದೇಹ ಉಳಿಯುತ್ತದೆ.

'ಶರಣಸಾಹಿತ್ಯ' ಪತ್ರಿಕೆಯಲ್ಲಿ ಕೊಪ್ಪಳ ಗವಿಮಠದ ಚರಿತ್ರೆಯನ್ನು ವಿವರಿಸುತ್ತ "ಸದ್ಭಕ್ತ ಶಿರೋಮಣಿಯಾದ ಹೋಳಿನ ಹಂಪಯ್ಯನೆಂಬ ಶರಣನು ಶ್ರೀ ಶಿವಯೋಗಿಗಳ ತಪಸ್ಸಿಗೆ ಮೆಚ್ಚಿ ಶಿವಾನುಭವಗೋಷ್ಠಿಯು ನಡೆಯಲು ಅನುಕೂಲವಾಗುವಂತೆ ಮಠದ ಮೂಲಗವಿಯ ಶಿಲಾಮಂಟಪವನ್ನು ಭಕ್ತಿಯಿಂದ ಕ್ರಿ.ಶ. (೧೦೮೭) ಶಾ.ಶ. (೧೦೯೮)ರಲ್ಲಿ ಕಟ್ಟಿಸಿ ಗವಿಯಲ್ಲಿ ಒಂದು ಶಿಲಾಶಾಸನವನ್ನು ಸಹ ಸಿದ್ಧಪಡಿಸಿರುವನು"[೮೫] ಎಂದು ಹೇಳಲಾಗಿದೆ. ಕ್ರಿಸ್ತಶಕ ಮತ್ತು ಶಾಲಿವಾಹನ ಶಕಗಳಲ್ಲಿ ಮೇಳವಿಲ್ಲದ ಮತ್ತು ೧೧ನೆಯ ಶತಮಾನವನ್ನು ಪ್ರತಿನಿಧಿಸುವ ಈ ಮಿತಿ ಮತ್ತು ೧೬ನೆಯ ಶತಮಾನವನ್ನು ಪ್ರತಿನಿಧಿಸುವ ಈ ಶಾಸನ ಮಿತಿಗಳಲ್ಲಿ ಸಂಬಂಧ ಕಲ್ಪಿಸುವುದು ಅಸಾಧ್ಯವಾಗಿದೆ. ಶ್ರೀರಂಗಪಟ್ಟಣದ ನಿವಾಸಿಯಾದರೂ ಹಂಪಯ್ಯನು ಸದಾಶಿವಸಾಗರ ಮತ್ತು ಕೊಪ್ಪಳ(?)ಗಳಲ್ಲಿ ಮಠಗಳನ್ನು ಕಟ್ಟಿಸಿರುವನು. ಈತನ ಈ ಪ್ರವೃತ್ತಿಯನ್ನು ಸಿದ್ಧನಂಜೇಶನು

---

೮೨. ಗು.ಚಾ. ೧೬-೩೭, ೩೮-೩೯.

೮೩. ಗು.ಚಾ. ಕಥಾಸಾರ, ಪು. ೮೮

೮೪. EC.XVIII-II ತೀರ್ಥಹಳ್ಳಿ ೫೭ ಕವಲೇದುರ್ಗ, ಕ್ರಿ.ಶ. ೧೬೧೬.

೮೫. ಶ್ರೀ ಕೊಪ್ಪಳ ಗವಿಮಠದ ಚರಿತ್ರೆ, ಶ.ಸಾ. ೯-೧೧.

"ಸೇತುಮುಖ ವಾರಣಾಸೀ ಮಧ್ಯದೊಳು ।
ಸಾತಿಶಯಜಂಗಮಕೆ ದಾಸೋಹಮಂ ಮಾಡ ।
ಲೋತು ರಚಿಸಿದ ಮಹಾಮಠಗಳ...."[೮೬]

ಎಂದು ಗುರುರಾಜಚಾರಿತ್ರ್ಯದಲ್ಲಿ ಸರಿಯಾಗಿ ಗಮನಿಸಿರುವನು.

ಬನವಾಸಿಯ ಶಿವೋತ್ಸವ ನಾಗಲಿಂಗ ಶಿಲಾಮಂಟಪದ ಗಗ್ಗರಿಯ ಕಲ್ಲಿನಲ್ಲಿ ಕೆತ್ತಿದ ಹಲವು ಮೂರ್ತಿಗಳಲ್ಲಿ ಒಂದರ ಕೆಳಗೆ 'ಹೋಳಿನ ಹಂಪಣ್ಣ' ಎಂದು ಬರೆಯಲಾಗಿದೆ.[೮೭] ಈತನು ಹಂಪರುದ್ರನೋ ದೊಡ್ಡಹಂಪಯ್ಯನೋ ಚಿಕ್ಕಹಂಪಯ್ಯನೋ ಸ್ಪಷ್ಟವಾಗುವುದಿಲ್ಲ.

ಮುರಿಗೆಸ್ವಾಮಿ-ಕಟ್ಟಿಗೆಹಳ್ಳಿಸ್ವಾಮಿ

ಅಲ್ಲಮಪ್ರಭು ಸಂಪ್ರದಾಯದಲ್ಲಿ ಸೂರ್ಯಚಂದ್ರರಂತೆ ಬೆಳಗಿದ ಮುರುಘರಾಜೇಂದ್ರ ಮಹಾಸ್ವಾಮಿ, ಕಟ್ಟಿಗೆಹಳ್ಳಿ ಮಹಾಸ್ವಾಮಿಗಳದು ಅಪೂರ್ವ ವ್ಯಕ್ತಿತ್ವ, ಈ ಉಭಯ ಶಿವಯೋಗಿಗಳನ್ನು ಸೂಚಿಸುವ ಹುಲಕುಂದೆಗ್ರಾಮದ ಶಾಸನವೊಂದು ಹೀಗಿದೆ[೮೮]:

ಹುಲಕುಂದೆ ಶಾಸನ (ಕ್ರಿ.ಶ. ೧೪೭೮?): ತ್ರುಟಿತ ಮತ್ತು ಅಪೂರ್ಣವಾಗಿರುವ ಈ ಶಾಸನದ ಪಾಠ ಹೀಗಿದೆ. "ಸ್ವಸ್ತಿ... ಸಾವಿರ ನಾನೂರ ಪರಾಭವಸಂವತ್ಸರ ಬಹುಳ ಪುಣ್ಯಕಾಲದಲ್ಲಿ ಶ್ರೀಮದ್‌ದೇಶಿಕ ಷಟ್ಸ್ಥಲಚಕ್ರವರ್ತಿ ಬ್ರಹ್ಮಾನನ್ದ ಪರಶಿವಮೂರ್ತಿ ವಿರಕ್ತಶಿಖಾಮಣಿಗಳಾದ ಮುರಿಗೆಸ್ವಾಮಿಗಳ.... ಗ ಹಳಿಸ್ವಾಮಿಗಳ ಸಮೀಪ ಸಂಪ್ರದಾಯಕರಾದ ಸೋದಿ ಶ್ರೀ ಕಾಳಹಸ್ತಿನಿದಾ..."

ಈ ಶಾಸನದಲ್ಲಿ ಸೂಚಿತವಾದ ಮಿತಿ ಕ್ರಿ.ಶ. ೧೪೭೮ ತುಂಬ ಹಿಂದೆ ಹೋಗುವುದರಿಂದ "ಸಾವಿರ ನಾನೂರು" ಎಂಬಲ್ಲಿ ಪಾಠದೋಷವಿರಬಹುದು. ಕಾರಣ ಮೂಲ ಶಾಸನವನ್ನು ಇನ್ನೊಮ್ಮೆ ಅಭ್ಯಾಸಿಸುವುದು ಅವಶ್ಯವಿದೆ. ಇಲ್ಲಿ ಮುರಿಗಾಸ್ವಾಮಿ, ಕಟ್ಟಿಗೆಹಳ್ಳಿಸ್ವಾಮಿಗಳ ಸಂಪ್ರದಾಯದ ಶ್ರೀಗಳೊಬ್ಬರ ವಿಷಯವಿದ್ದಿರಬೇಕು.

ಪುರಾಣದ ರಾಚವಟ್ಟಿದೇವ

ರಾಚವಟ್ಟಿದೇವ ಹೆಸರಿನ ಹಲವು ವ್ಯಕ್ತಿಗಳು ವೀರಶೈವರಲ್ಲಿ ಗೋಚರಿಸುತ್ತಾರೆ. ಚೆನ್ನಬಸವಪುರಾಣದಲ್ಲಿ ತೋಂಟದಸಿದ್ಧಲಿಂಗನ ಶಿಷ್ಯರಾದ "ಸಂಪಗೆಯ ರಾಚವಟ್ಟಿದೇವ" "ರಾಚವಟ್ಟ"[೮೯] ಎಂಬವರು, ಗುರುರಾಜಚಾರಿತ್ರದಲ್ಲಿ ಪಂಚವಣ್ಣಿಗೆಯ ಸಿದ್ಧನಂಜೇಶ್ವರ ಶಿಷ್ಯರಾದ "ಹೊಳೆವಡ್ಡದ ರಾಚವಟ್ಟಿಯಯ್ಯಂ" "ಚೆಲುವ ಮುತ್ತಿನಕಂಥೆ ರಾಚಿವಟ್ಟಿಯದೇವ" "ಪೌರಾಣಗಳ

---

೮೬. ಗು.ಚಾ. ೧೬-೩೮.
(“ಸೃಷ್ಟಿಯೊಳ್ ಜಂಗಮಾರ್ಚನೆಯಿಂದ ಮೆರೆದ ಬ।ಲ್ದಿಟ್ಟ ಹೋಳಿನ ಹಂಪೆಯಾಖ್ಯ" ಎಂದು 'ಶಿವಗಣಚಾರಿತ್ರ್ಯ'ದಲ್ಲಿ ಹೇಳಲಾಗಿದೆ.)

೮೭. ವಿಭೂತಿ. ಪು. ೨೭೩

೮೮. EC.V-ii ಹಾಸನ ೧೫೫ ಹುಲಕುಂದೆ, ಕ್ರಿ.ಶ. ೧೪೭೮?

೮೯. ಚೆ.ಬ.ಪು. ೬೩-೪೮ ಮತ್ತು ೪೯.

ಪೇಳ್ವ ರಾಚವಟ್ಟಿಯದೇವ"[೯೦] ಎಂಬವರು ಉಲ್ಲಿಖಿತವಾಗಿರುವರು. ಇವರಲ್ಲಿ ಪುರಾಣದ ರಾಚವಟ್ಟಿದೇವನನ್ನು ಕುರಿತಿರಬಹುದಾದ ಕೆಳದಿ ಅರಸರ ಒಂದು ಶಾಸನ ಹೀಗಿದೆ:[೯೧]

"ಶಕವರುಷ ೧೬೩೦ನೆಯ ವಿರೋಧಿ ಸಂವತ್ಸರದ... ಉತ್ತಾರಪುರಾಣದ ರಾಚವಟ್ಟಿದೇವರಿಗೆ ಗ೩॥೦" ಎಂಬ ಕವಲೇದುರ್ಗ ಗ್ರಾಮದ ಈ ಶಾಸನವಾಕ್ಯದಲ್ಲಿ ಬರುವ ಉತ್ತಾರಪುರಾಣದ ರಾಚವಟ್ಟಿದೇವನು ಗುರುರಾಜಚರಿತ್ರೆ ಹೇಳುವ "ಪೌರಾಣಗಳ ಪೇಳ್ವ ರಾಚವಟ್ಟಿಯದೇವ"ನಾಗಿರಬೇಕು. ಇದು ನಿಜವಿದ್ದರೆ ಶಿಷ್ಯ ರಾಚವಟ್ಟಿಯ ಕಾಲ ಕ್ರಿ.ಶ. ೧೭೦೯ ಎಂದೂ ಗುರು ಸಿದ್ಧನಂಜೇಶನ ಕಾಲ ಇದಕ್ಕೆ ಕೊಂಚ ಹಿಂದೆಯೆಂದೂ ಹೇಳಬೇಕಾಗುತ್ತದೆ.[೯೨]

ಸೋಮಶೇಖರ ಶಿವಯೋಗಿ

".....ತೋಂಟದ ಸಿದ್ಧಲಿಂಗೇಶ್ವರನೆಂಬ ದೇಶಿಕ ಶಿರೋಮಣಿಯ ಕರುಣಾ ಪ್ರಸಾದ ಪಾತ್ರರಾದ ಬೋಳಬಸವೇಶ್ವರನು, ಅವರ ಕರುಣಾಪ್ರಸಾದ ಪಾತ್ರರಾದ ಗೂಳೂರು ಸಿದ್ಧಲಿಂಗಯ್ಯನವರು. ಅವರ ಕೃಪಾಪ್ರಸಾದ ಪಾತ್ರರಾದ ಗುಮ್ಮಳಾಪುರದ ಸಿದ್ಧವೀರಯ್ಯನವರು, ಅವರ ಕರುಣಾಪ್ರಸಾದ ಪಾತ್ರರಾದ ಗಗನದಯ್ಯನವರು. ಅವರ ದಯಾನುಗ್ರಹಕ್ಕೆ ಯೋಗ್ಯರಾದ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರನು, ಅವರನುಗ್ರಹ ಪ್ರಾಪ್ತರಾದ ಮುರಿಗಾಶಾಂತವೀರೇಶ್ವರನು, ಅವರಿಂದನುಗ್ರಹವ ಪಡೆದು ಮುರಿಗಾಗುರು ಸಿದ್ಧೇಶ್ವರನು-ಹೀಗೆ ಗುರುಸಂಪ್ರದಾಯವಿಡಿದು ಬಂದ ಬಸವಾದಿ ಪ್ರಮಥಗಣಂಗಳ ವಚನಾನುಭವವನು ಬೆಸಗೊಂಡ ಸೋಮಶೇಖರ ಶಿವಯೋಗಿ..."[೯೩] ಎಂದು ಈ ಸೋಮಶೇಖರ ಶಿವಯೋಗಿಯ ಬಗ್ಗೆ ತಿಳಿದುಬರುತ್ತದೆ. ಈತನು ಬಸವಣ್ಣನವರ ಮತ್ತು ತೋಂಟದ ಸಿದ್ಧಲಿಂಗ ಶಿವಯೋಗಿಯ ಬೆಡಗಿನ ವಚನಗಳಿಗೆ ಟೀಕೆ ಬರೆದಿರುವನು. ಕವಿಚರಿತೆಕಾರರು ತೋಂಟದಾರ್ಯರ ಕಾಲ ಕ್ರಿ.ಶ. ೧೪೭೦ ಎಂದು ಭಾವಿಸಿ, ಅವರ ಪರಂಪರೆಯ ಈತನ ಕಾಲ ಕ್ರಿ.ಶ. ೧೭೦೦ ಎಂದಿದ್ದಾರೆ. ಆದರೆ ಇತ್ತೀಚಿನ ಶೋಧನೆಯ ಮೇರೆಗೆ ಸಿದ್ಧಲಿಂಗಯತಿಗಳ ಕಾಲ ೧೦೦ ಇಲ್ಲವೆ ೧೨೦ ವರ್ಷ. ಮುಂದು ಸರಿದಿರುವುದರಿಂದ ಸೋಮಶೇಖರನು ಕ್ರಿ.ಶ. ೧೮೦೦ ಇಲ್ಲವೆ ೧೮೨೦ರಲ್ಲಿ ಬಾಳಿದವನಾಗುತ್ತಾನೆ. ಈ ಅಂಶವನ್ನು ಪೋಷಿಸುವ ಕೊಡಗು ಜಿಲ್ಲೆಯ ಸೋಮವಾರಪೇಟ ತಾಲೂಕಿನ ಮಾದಾಪೂರ ಶಾಸನವೊಂದು ಹೀಗಿದೆ:[೯೪]

೧. ಶ್ರೀ ಮುರಿಗಾಸ್ವಾಮಿಗಳವರ

೨. ಚರಮೂರ್ತಿಗಳಾದಂಥ ಶಾಂತವೀರಸ್ವಾಮಿಯವರ ಕರಕಮಲ ಸಂಜಾತರಾ

---

೯೦. ಗು.ಚಾ- ೧೪೩.

೯೧. EC.VIII-ii ತೀರ್ಥಹಳ್ಳಿ ೯೫, ಕವಲೇದುರ್ಗ, ಕ್ರಿ.ಶ. ೧೭೦೯.

೯೨. ಸೆಜ್ಜೆಯ ಇಷ್ಟಲಿಂಗ ಕಾಣದಾಗಲು ಬಿದನೂರಿನ ರಾಚವಟ್ಟಿದೇವನು ಸಮಾಧಿ ಹೊಂದಿದನೆಂದು ಗುರುರಾಜಚಾರಿತ್ರ್ಯ (೧೬-೩೪) ಹೇಳುತ್ತದೆ. ಈತನು ಬೇರೊಬ್ಬ ರಾಚವಟ್ಟಿಯಾಗಿರಬೇಕು.

೯೩. ತೋಂ. ಸಿ.ಷ. ಬೆಡಗಿನ ವಚನ ಟೀಕೆ, ಪೀಠಿಕೆ.

೯೪. EC.I. ೩೦, ಸೋಮವಾರಪೇಟ ತಾಲೂಕು, ಮಾದಾಪುರ ಗ್ರಾಮ, ಕ್ರಿ.ಶ. ೧೮೪೩

೩. ದ ಸೋಮಶೇಖರಶಿವಯೋಗೀಶ್ವರನು ಕಲಿಸಂದ ೪೯೪೩ನೇ ಶೋಭಕೃತ ಸಂವತ್ಸರದ ಕಾರ್ತ್ತಿಕ ಬ೨

೪. ಗುರುವಾರ ರೋಹಿಣೀ ನಕ್ಷತ್ರ ಪ್ರಾತಃಕಾಲ ಗಂಟೆ ೨ರವಳಗೆ ಯೀ ಗದಿಗೆಯ ಮೇಲೆ ಕಳಶ ಸ್ಥಪನ

೫. ಮಾಡಿದ್ದು.

ಈ ಶಾಸನೋಕ್ತ ಸೋಮಶೇಖರಶಿವಯೋಗೀಶ್ವರನ ಗುರುವಾದ ಶ್ರೀ ಮುರಿಗಾಸ್ವಾಮಿಗಳವರ ಚರಮೂರ್ತಿ ಶಾಂತವೀರಸ್ವಾಮಿಯು ಪ್ರಾರಂಭದ ಗದ್ಯಖಂಡದಲ್ಲಿ ಕೊನೆಯಿಂದ ಎರಡನೆಯವರಾಗಿ ಬರುವ ಮುರಿಗಾಶಾಂತವೀರೇಶ್ವರನೇ ಆಗಿದ್ದಾನೆ. ಈ ಶಾಸನದ ಮಿತಿ ೨೫-೧೦-೧೮೪೩, ಮೇಲೆ ನಾವು ಭಾವಿಸಿದ ಮಿತಿಗೆ ಸರಿ ಹೊಂದುತ್ತದೆ. ಈತನಿಗೂ ಕೊಡಗು ಜಿಲ್ಲೆಯ ಮಾದಾಪುರ ಗ್ರಾಮಕ್ಕೂ ಇದ್ದ ಸಂಬಂಧವನ್ನು ಶೋಧಿಸಬೇಕಾಗಿದೆ.

❖❖

ಸಮೀಕ್ಷೆ

ವೀರಶೈವದ ಮಾತೃಭೂಮಿ ಕರ್ನಾಟಕ, ವೀರಶೈವರ ಮಾತೃಭಾಷೆ ಕನ್ನಡ. ಈ ನಾಡಿನಲ್ಲಿ ನಿಲ್ಲದೆ ನಡೆದು ಬಂದ ಈ ಮತಸಂತಾನದಲ್ಲಿ ಕಾಲಕಾಲಕ್ಕೆ ಶರಣರು ಬಾಳಿ ಬೆಳಗಿರುವರು. ಬಸವರಾಜದೇವರ ರಗಳೆಯಿಯನ್ನು ಹರಿಹರ, ಹರಿಹರ ಮಹತ್ವವನ್ನು ರಾಘವಾಂಕ, ರಾಘವಾಂಕಚರಿತ್ರೆಯನ್ನು ಸಿದ್ಧನಂಜೇಶರು ಬರೆಯುವುದರ ಮೂಲಕ ಚಾರಿತ್ರಿಕಸಾಹಿತ್ಯ ನಿರ್ಮಾಣಪ್ರಜ್ಞೆಯನ್ನು ಪ್ರಕಟಿಸಿದ ವೀರಶೈವ ನೂರಾರು ಕವಿಗಳಿಂದ ಈ ಶಿವಶರಣರ ಬದುಕು ಬರಹಕ್ಕಿಳಿದಿದೆ. ಇವರಲ್ಲಿ ಪಾಲ್ಕುರಿಕೆ ಸೋಮಾರಾಧ್ಯ, ಪಂಡಿತಾರಾಧ್ಯರು ಬಸವಾದಿ ಪ್ರಮಥರ ವರೆಗಣ ಶಿವಭಕ್ತರನ್ನು ತಮ್ಮ ಗಣಸಹಸ್ರನಾಮಾವಳಿಯಲ್ಲಿ ಎಣಿಸಿ ತೋರಿಸಿದರು. ಹರಿಹರ, ರಾಘವಾಂಕಾದಿಗಳು ಕಾವ್ಯಗಳಲ್ಲಿ ಚಿತ್ರಬಿಡಿಸಿದರು. ಆ ತರುವಾಯದ ಶರಣರ ಚರಿತ್ರೆಯನ್ನು ಸಂಗ್ರಹಿಸಿದವರು ಲಕ್ಕಣದಂಡೇಶ, ಗುಬ್ಬಿಯ ಮಲ್ಲಣಾರ್ಯ ಮತ್ತು ಸಿದ್ಧನಂಜೇಶ.

"ವಿಸ್ತರಿಸುವೆಂ ಧರೆಯ ನೂತನರ ಚಾರಿತ್ರಮಂ"

–ಲಕ್ಕಣ ದಂಡೇಶ[೧]

"…. ಲಕ್ಕಣ್ಣ ದಣ್ಣಾಯಕರು ಶಿವತತ್ವ ।
ಚಿಂತಾಮಣಿಯೊಳು ತತ್ಕಾಲನೂತನಭಕ್ತ ।
ಸಂತತಿಯನೊರೆದುದಂ ಪೇಳ್ದಿವೈ…… ।
….. ಬಳಕೀ ವರ್ತಮಾನದೊಳಗವತರಿಸಿ ।
ದಂತಕಾಂತಕನಿಷ್ಠ ನೂತನಶರಣ ನುತಿಗ ।
ಳಂ ತಿಳಿಪುವೆಂ…………………. ॥

–ಗುಬ್ಬಿಯ ಮಲ್ಲಣ್ಣ[೨]

"ಲಕ್ಕಣದಂಡೇಶ ಮಲ್ಲಣಾರ್ಯರು ಪೇಳಿ ।
ದಕ್ಕಜದ ನೂತನರ ಕಥೆಗಳಲ್ಲದೆ ಮತ್ತೆ ।
ಮುಕ್ಕಣ್ಣನೊಲುಮೆಯಂ ಪಡೆದ ಶರಣರ ಕಥೆಯನೊರೆದನಾ ಗುರುರಾಯನು"

–ಸಿದ್ಧನಂಜೇಶ[೩]

೧. ಶಿ.ತ.ಚಿ. ೩೮-ಪೀಠಿಕೆ ೨. ವಿ.ಮ. ಪು. ೮-೮-೨೫.
೩. ಗು.ಚಾ. ೧೩-ಪೀಠಿಕೆ.

ಇಲ್ಲಿ ಲಕ್ಕಣಾಮಾತ್ಯ, ಗುಬ್ಬಿಯ ಮಲ್ಲಣ್ಣ ಮತ್ತು ಸಿದ್ಧನಂಜೇಶರು ಶರಣರ ಚರಿತ್ರೆಗಳನ್ನು ಕೈಯಿಂದ ಕೈಗೆ ಮುಂದುವರಿಸಿರುವರು. ಇವರ ಪ್ರಯತ್ನದಿಂದಾಗಿ ಸಮಸ್ತಶರಣರನ್ನು ಬಿಟ್ಟರೂ ಕೆಲವರ ಚರಿತ್ರೆಯಾದರೂ ನಮ್ಮ ಕೈಗೆ ಉಳಿದು ಬಂದಿತು. ಇಂಥ ಕೃತಿಗಳ ಆಧಾರದಿಂದ ಶಾಸನಗಳಲ್ಲಿಯ ಶರಣರನ್ನು ಕಂಡುಹಿಡಿಯಬೇಕಾಗಿದೆ. ಆದರೆ ಮಳೆಗಾಳಿಯ ಆಘಾತ, ಜನತೆಯ ಮತಮತ್ಸರ ಮತ್ತು ಇತಿಹಾಸದ ಅನಾದರಗಳಿಂದಾಗಿ ನಮ್ಮ ನಾಡಿನ ಸಾವಿರಾರು ಶಾಸನಗಳು ಸವೆದುಹೋಗಿವೆ; ನಿರ್ನಾಮಗೊಂಡಿವೆ. ಶರಣರ ಶಾಸನಗಳಿಗೂ ಈ ಶಾಪ ತಟ್ಟಿರುವುದಕ್ಕೆ ಇಲ್ಲಿ ಉದ್ಧರಿಸಿದ ಬಹಳಷ್ಟು ಶಾಸನಗಳು ತ್ರುಟಿತವಾಗಿರುವುದು, ಇಲಿಯಟ್ ಹೇಳುವ ಜೇಡರ ದಾಸಿಮಯ್ಯನ ಶಾಸನ ಈಗ ಹಿರಿಯಗೊಬ್ಬೂರ ಗ್ರಾಮದಲ್ಲಿ ಇಲ್ಲದಿರುವುದು ಇದಕ್ಕೆ ನಿದರ್ಶನ.*

ಎರಡನೆಯದಾಗಿ ದಕ್ಷಿಣ ಕರ್ನಾಟಕದಲ್ಲಿ ಬಹುಮಟ್ಟಿಗೆ ಪರಿಪೂರ್ಣಗೊಂಡ ಶಾಸನಸಂಶೋಧನ ಕಾರ್ಯ, ಶರಣರ ಆಂದೋಲನೆಯ ತಾಯಿನೆಲವಾದ ಉತ್ತರ ಕರ್ನಾಟಕದಲ್ಲಿ ಅದರಲ್ಲಿಯೂ ಕಲಬುರ್ಗಿ, ಬೀದರ, ರಾಯಚೂರ ಜಿಲ್ಲೆಗಳಲ್ಲಿ ಅಲಕ್ಷಿತವಾಗಿದೆ. ಶಾಸನ ಇಲಾಖೆಯವರು ಸಂಗ್ರಹಿಸಿದ ಸಾವಿರಾರು ಶಾಸನಗಳು ಇನ್ನೂ ಪ್ರಕಟವಾಗದೆ ಉಳಿದಿವೆ. ಶರಣರ ಕಾರ್ಯಕ್ಷೇತ್ರಗಳಾದ ಇಂಗಳೇಶ್ವರ, ಬಾಗವಾಡಿ, ಸಂಗಮ, ಕಲ್ಯಾಣ, ಹಂಪೆ, ಕವಿಳಾಸಪುರ ಮೊದಲಾದ ಸ್ಥಳಗಳ ಗಾಢ ಪರೀಕ್ಷೆಯಾಗಲೀ ಭೂಗತ ಅವಶೇಷಗಳ ನಿರೀಕ್ಷೆಯಾಗಲೀ ಇನ್ನೂ ನಡೆದಿಲ್ಲ. ಶಾಸನ ಇಲಾಖೆಯವರು ಸಂಗ್ರಹಿಸಿದ ಶಾಸನಗಳು ಪ್ರಕಟಗೊಂಡರೆ, ಈ ಪ್ರದೇಶಗಳಲ್ಲಿ ಸಂಶೋಧನ-ಉತ್ಖನನ ಕಾರ್ಯಗಳು ಮುಂದುವರಿದರೆ ಶರಣರ ಚರಿತ್ರೆಗೆ ಸಂಬಂಧಿಸಿದ ಶಾಸನ ಮತ್ತು ಶಿಲ್ಪಗಳು ಅಧಿಕ ಪ್ರಮಾಣದಲ್ಲಿ ಲಭಿಸುವ ಆಸೆಯಿದೆ.

ಹೀಗೆ ನಮ್ಮ ನಾಡಿನ ಶಾಸನಪರಿವೀಕ್ಷಣೆಯ ಕಾರ್ಯ ಪೂರ್ಣಗೊಳ್ಳದ ಕಾರಣ, ಈವರೆಗೆ ಪ್ರಕಟವಾದ ಶಾಸನಗಳನ್ನು ಮಾತ್ರ ಇಲ್ಲಿ ಅಭ್ಯಾಸಕ್ಕೆ ಅಳವಡಿಸಿಕೊಳ್ಳಲಾಗಿದೆ. ಎಷ್ಟೋ ಶಾಸನಗಳಲ್ಲಿ ತೋಂಟದಾರ್ಯ, ಸುತ್ತೂರ, ಬಾಳೆಹಳ್ಳಿ ಮೊದಲಾದ ಮಠಗಳ ಮತ್ತು ಮಠಾಧೀಶರ ವಿಷಯ ಕಂಡುಬರುತ್ತದೆ. ಇವರೆಲ್ಲರನ್ನು ಕುರಿತು ವಿವೇಚಿಸುವುದು ಅವಶ್ಯವಿದ್ದರೂ, ಪ್ರಾಚೀನ ವೀರಶೈವಪುರಾಣಗಳು ಶರಣರೆಂದು ಉಲ್ಲೇಖಿಸದ ಕಾರಣ ಇವರನ್ನು ಕೈಬಿಡಬೇಕಾಯಿತು.

ಕೆಲವು ಸಲ ಪುರಾಣಗಳು ಸ್ಪಷ್ಟವಾಗಿ ಸೂಚಿಸದಿದ್ದರೂ ಶಾಸನಗಳಲ್ಲಿ ನೆಲೆನಿಂತ ವೀರಶೈವ ತತ್ತ್ವ, ಆಚರಣೆಗಳ ಬಲದಿಂದ ಕೆಲವರನ್ನು ಶಿವಶರಣರೆಂದು ಭಾವಿಸಬೇಕಾಗುತ್ತದೆ.ಚೌಡದಾನಪುರ ಶಿವದೇವ, ಮಾವನೂರ ಅಪ್ಪರಸ ಮೊದಲಾದವರು ಇದಕ್ಕೆ ನಿದರ್ಶನ. ಹೀಗೆ ಒಂದಲ್ಲ ಒಂದು ಆಧಾರಗಳನ್ನವಲಂಬಿಸಿ ಇಲ್ಲಿ ಶಾಸನಗಳಿಂದ ಶಿವಶರಣರನ್ನು ಆಯ್ದುಕೊಳ್ಳಲಾಗಿದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ, ಅಂದರೆ ಜೇಡರದಾಸಿಮಯ್ಯಾದಿಗಳ ಪರಿಸರದಲ್ಲಿ ಕುಡಿಬಿಟ್ಟ ವೀರಶೈವ ಆಂದೋಲನ ಕಲಚುರಿಗಳ ಕಾಲದಲ್ಲಿ ಬಸವಾದಿ ಪ್ರಮಥರ ಮೂಲಕ ಹೂಹಣ್ಣು ಹೊತ್ತು, ಅಂದೇ ವಿಪ್ಲವಕ್ಕೆ ಗುರಿಯಾಯಿತು. ಈ ಕ್ರಾಂತಿಯ ತರುವಾಯ ಕರ್ನಾಟಕದಲ್ಲಿ ವೀರಶೈವಕ್ಕೆ ವಿಶೇಷ ಮನ್ನಣೆ ನೀಡಿದವರು ದೇವಗಿರಿ ಯಾದವರು, ಅವರ ಸಾಮಂತರು ಮತ್ತು ದಂಡನಾಥರು. ಅರ್ಜುನವಾಡ ಶಾಸನೋಕ್ತ (೧೨೬೦) ಹಾಲಬಸವಿದೇವನಿಗೆ ದತ್ತಿ ನೀಡಿದ ಚೌಡಿಸೆಟ್ಟಿ, ಕರಣದ

---

* ಬಹುಶಃ ಇಲಿಯಟ್ ತಪ್ಪು ಓದಿದ್ದಾರೆ.

ನಾಗರಸರು ಯಾದವ ಕನ್ನರನ ಅಧಿಕಾರಿಗಳು. ಸಿದ್ಧರಾಮನಿಗೆ ಸಂಬಂಧಿಸಿದ ಚೊರ್ಗಿ (೧೧೯೦) ಶಾಸನದ ವೀರಬಂದುಗಿದೇವರಸ, ಮಾಯಿದೇವ ದಂಡನಾಯಕ, ಜಂಬಗಾವ ಶಾಸನದ (೧೨೦೦ ?) ಸೋಮದೇವ, ಮಾಯಿದೇವರು ಜೈತುಗಿಯ ಅಧಿಕಾರಿಗಳು. ಇಟ್ಕಲ್ (೧೨೧೭?) ಶಾಸನದ ಮಗರೆಮುರಾರಿ ಸಂಗಮದೇವ, ಕಪ್ಪನಿಂಬರಗಿ (೧೨೪೩) ಶಾಸನದ ಮಹಾದೇವನಾಯಕ, ಮಗ ಕೇಶವದೇವ ನಾಯಕ; ಗುಂಡ ಕರ್ಜಗಿಶಾಸನದ ಶ್ರೀರಾಮದಂಡಾಧಿಪ, ಮಗ ಸೋಮದೇವರು ಸಿಂಘಣನ ಅಧಿಕಾರಿಗಳು. ಅಕ್ಕಲಕೋಟ (೧೨೫೫), ಟಾಕಳಿ, ಫಡಕೇನೂರು (೧೨೫೬), ತಡವಳ (೧೨೫೭?) ಶಾಸನಗಳು ಎರಡನೆಯ ಕನ್ನರನ ಆಳಿಕೆಗೆ ಸಂಬಂಧಿಸಿದುವು. ಸೊರಬ (೧೨೫೬) ಶಾಸನದ ಮಹಾಮಂಡಳೇಶ್ವರ ಬೀರರಸ, ಜತ್ತಿಗಿ (೧೨೫೭) ಶಾಸನದ ಸಾಮಂತ ಮುದ್ದಿಗೆದೇವರು ಇದೇ ಕನ್ನರನ ಅಧಿಕಾರಿಗಳು. ಕೊಟಬಾಗಿ ಶಾಸನದ (೧೨೬೪) ಕದಂಬ ವೀರಚಟ್ಟಿಯದೇವ, ಸಂಗೂರಶಾಸನದ ಮಹಾಪ್ರಧಾನ ದೇವರಾಜರು ಮಹಾದೇವನ ಅಧಿಕಾರಿಗಳು. ಕಟನೂರುಶಾಸನ ಯಾದವ ರಾಮಚಂದ್ರನ ಆಳಿಕೆಯಲ್ಲಿ ಹುಟ್ಟಿದೆ. ಯಡಹಳ್ಳಿ ಶಾಸನವೂ ಇದೇ ಅರಸುಮನೆತನದ ಸಮಯದಲ್ಲಿ ಬರೆಯಲ್ಪಟ್ಟಿದೆ. ಒಟ್ಟಿನಲ್ಲಿ ಸಿದ್ಧರಾಮನಿಗೆ ಸಂಬಂಧಿಸಿದ ಇಪ್ಪತ್ತೆರಡು ಶಾಸನಗಳಲ್ಲಿ ಇಪ್ಪತ್ತು ಶಾಸನಗಳು ಯಾದವರು, ಅವರ ಸಾಮಂತರು, ಮತ್ತು ದಂಡನಾಯಕರು ಬರೆಯಿಸಿದುವು. ಹುಳಿಯಮೇಶ್ವರ ಚಿಕ್ಕಯ್ಯನ ದೇವರಗುಡಿಶಾಸನ ಸಿಂಘಣನ ಕಾಲದಲ್ಲಿ ಹುಟ್ಟಿದೆ. ಅಮುಗಿದೇವನಿಗೆ ದಾನ ನೀಡಿದವರು ಯಾದವರ ಅಧಿಕಾರಿಗಳಾದ ದೇವರಸ, ಸಿಹೆಯ ಸಾಹಣಿ, ತಿಪುರೆಯ ನಾಯಕ, ಜೋಯಿಸೆಟ್ಟಿ, ವಾಮನ ನಾಯಕ, ಬಲದೇವನಾಯಕ, ತಮ್ಮಯ್ಯನಾಯಕರು. ಮೂರುಜಾವಿಪಂಡಿತರ ಶಿಷ್ಯ ಹೊನ್ನಬೊಮ್ಮಿಸೆಟ್ಟಿ ಎರಡನೆಯ ಸಿಂಘಣನ ಸಾಮಂತ. ಚೌಡದಾನಪುರದ ಐದು ಶಾಸನಗಳು ಯಾದವ ಕನ್ನರ, ಮಹಾದೇವ ಮತ್ತು ಇವರ ಅಧಿಕಾರಿಗಳಿಗೆ ಸಂಬಂದಿಸಿವೆ. ಇದೆಲ್ಲವನ್ನು ಗಮನಿಸಿದರೆ ಯಾದವರು ಮತ್ತು ಅವರ ಅಧಿಕಾರಿಗಳು ವೀರಶೈವದತ್ತ ತೋರಿದ ಒಲವು, ಭಕ್ತಿ ವೇದ್ಯವಾಗದಿರದು. ಇದೇ ಕಾಲಕ್ಕೆ ಸಿಂದವಂಶದ ರಾಚಮಲ್ಲ, ಹರಿಹರ ಮೊದಲಾದವರೂ ಶಿಲಾಹಾರವಂಶದ ಅರಸರೂ ವೀರಶೈವಕ್ಕೆ ಆಶ್ರಯ ನೀಡಿದಂತಿದೆ. ಮುಂದೆ ವಿಜಯನಗರ, ಕೆಳದಿ, ಕೊಡಗು ಅರಸರಲ್ಲಿ ನೆಲೆಪಡೆದು, ಶಾಸನಗಳಲ್ಲಿ ಹೆಜ್ಜೆಮೂಡಿಸುತ್ತ ವೀರಶೈವ ಇಂದಿನ ವರೆಗೆ ನಡೆದುಬಂದಿದೆ.

ಕವಿ ಹರಿಹರನ ಕಾಲ ಇತ್ತೀಚಿನ ಸಂಶೋಧನೆಗಳಿಂದಾಗಿ ಕ್ರಿ.ಶ. ೧೩೦೦ರ ಹತ್ತಿರ ಬರುತ್ತಲಿದೆ. ಇದು ನಿಜವಿದ್ದ ಪಕ್ಷದಲ್ಲಿ ಕೊಂಡಗುಳಿ (೧೧೦೭) ಕಬ್ಬೂರ (೧೧೧೪) ಗೊಬ್ಬೂರು (೧೧೪೮) ಬಿದರೆ (೧೧೬೫) ಭೂಯಾರ (೧೧೬೨) ಚಿಕ್ಕಮುದೇನೂರ (೧೧೬೭) ದೇವರಗುಡಿ (೧೧೬೮) ಅಬ್ಬಲೂರು (೧೧೮೫) ಬೆಣಚಮಟ್ಟಿ (೧೧೮೭) ಸಿರಿವಾಳ (೧೧೮೭) ಹಿಪ್ಪರಗಿ (೧೧೯೨) ಗೀಜಗನಹಳ್ಳಿ (೧೨೦೧) ಕಿರಿಯಿಂಡಿ (೧೨೦೧) ಇಂಗಳಗಿ (೧೨೦೯) ರಟ್ಟಿಹಳ್ಳಿ (೧೨೩೮) ಹಿರಿಯೂರ (೧೨೫೯) ಅರ್ಜುನವಾಡ (೧೨೬೩) ಚೌಡದಾನಪುರ (೧೨೬೦-೧೨೬೫) ಕಲ್ಲೇದೇವರಪುರ (೧೨೭೯) ಮರಡಿಪುರ (೧೨೮೦) ಕುಡತಿನಿ (೧೨೮೦) ಮತ್ತು ಕ್ರಿ.ಶ. ೧೧೯೦ರ ಚೊರ್ಗಿಶಾಸನ ಮೊದಲುಮಾಡಿ ಯಾದವ ರಾಮಚಂದ್ರನ ಆಳಿಕೆಯ ಕಟನೂರ ಶಾಸನ ವರೆಗಣ ಸಿದ್ಧರಾಮನ ಇಪ್ಪತ್ತೆರಡು ಶಾಸನಗಳು ಕವಿ ಹರಿಹರನಿಗೆ ಪ್ರಾಚೀನವೆನಿಸುತ್ತವೆ. ಆದುದರಿಂದ ಶರಣರ ಬದುಕನ್ನು ಪ್ರಥಮವಾಗಿ ಬರವಣಿಗೆಗೆ ಇಳಿಸಿದ ಈತನ ರಗಳೆಗಳಲ್ಲಿಯ ಸಂಗತಿಗಳಿಗಿಂತ ಈ ಶಾಸನೋಕ್ತ ಸಂಗತಿಗಳು ಹೆಚ್ಚು ವಿಶ್ವಸನೀಯವೆನ್ನಬೇಕಾಗುತ್ತದೆ.

ವಸ್ತುಸ್ಥಿತಿ ಹೀಗಿದ್ದರೂ ಶಾಸನಗಳು ಕಾವ್ಯಗಳ ಹಾಗೆ ಕೆಲವುಸಲ ಅಚಾರಿತ್ರಿಕ ಅಲೌಕಿಕ ಘಟನೆಗಳನ್ನೂ ಹೇಳುತ್ತವೆ. ಬಸವಣ್ಣನವರು ನಂದಿಯ ಅವತಾರ, ಮಡಿವಾಳಮಾಚಿದೇವ ಏಕಾಂತರಾಮಯ್ಯರು ವೀರಭದ್ರನ ಅವತಾರ, ನಂದೀಶ್ವರ ಮಲ್ಲಯ್ಯ ಅಮರಗುಂಡದ ಮಲ್ಲಿಕಾರ್ಜುನರು ಶ್ರೀಶೈಲ ಮಲ್ಲಿಕಾರ್ಜುನನ ಅವತಾರ, ಚೌಡದಾನಪುರ ಶಿವದೇವ ತೋಂಟದಸಿದ್ಧಲಿಂಗಯತಿಗಳು ಶಿವನ ಅವತಾರ ಎಂಬ ಹೇಳಿಕೆಗಳು: ಏಕಾಂತರಾಮಯ್ಯನು ರುಂಡ ಕತ್ತರಿಸಿಕೊಂಡುದು, ರೇವಣಸಿದ್ಧೇಶ್ವರನು ೧೪೦೦ ವರ್ಷ ಬದುಕಿದುದು ಮತ್ತು ನಾವೆಯಿಲ್ಲದೆ ನದಿ ದಾಟಿದುದು, ಅರುವತ್ತುಮೂವರು ಹಸ್ತ ನೇತ್ರ ಕರುಳು ಮಸ್ತಕ ಸಮರ್ಪಿಸಿದುದು, ಶ್ರೀಪತಿ ಪಂಡಿತರು ವಸ್ತ್ರದಲ್ಲಿ ಅಗ್ನಿ ಕಟ್ಟಿದುದು, ಬಸವಣ್ಣನವರು ಲಕ್ಷದಮೇಲೆ ತೊಂಬತ್ತಾರುಸಾವಿರ ಜಂಗಮದಾಸೋಹ ನಡೆಸಿ ನಿತ್ಯಪವಾಡ ಮೆರೆದುದು, ಕುರುಗೋಡ ರಾಜಮಲ್ಲನು ಅಶ್ವಾರೂಢನಾಗಿ ಸ್ವರ್ಗಕ್ಕೆ ಹೋದುದು ಮತ್ತು ನಿರ್ಮಾಯಗಣೇಶ್ವರ ಗೋಸಲ ಯತೀಶ್ವರರು ಹಲವು ಪವಾಡಗಳನ್ನು ಮೆರೆದುದು-ಇವು ಪ್ರಶ್ನೆಯ ರೂಪತಾಳಿ ಇತಿಹಾಸಪುಟದಲ್ಲಿ ನಿಲ್ಲುವ ಸಂಗತಿಗಳಾಗಿವೆ. ಅದಕ್ಕಾಗಿ ಶಾಸನಗಳಲ್ಲಿ ಹೇಳಿದ ಈ ಸಂಗತಿಗಳನ್ನೆಲ್ಲ ಕಣ್ಣುಮುಚ್ಚಿ ಸ್ವೀಕರಿಸಲು ಶುದ್ಧ ಇತಿಹಾಸಪ್ರಜ್ಞೆಯುಳ್ಳವನ ಮನಸ್ಸು ಒಪ್ಪದು. ಈ ಅಲೌಕಿಕ ಘಟನೆಗಳಲ್ಲಿ ಚೌಡದಾನಪುರಶಾಸನ ಹೇಳುವ ಬಸವಣ್ಣನವರ ಅರತಾರದ ಕಥೆ ಬಸವರಾಜದೇವರ ರಗಳೆಗಿಂತ ಭಿನ್ನವಾಗಿದೆ. ಕುರುಗೋಡ ರಾಚಮಲ್ಲ ಕುದುರೆ ಏರಿ ಸ್ವರ್ಗಕ್ಕೆ ಹೋದ ಪವಾಡದ ಬಗ್ಗೆ ಕಾವ್ಯಗಳು ಮೌನತಾಳಿವೆ. ಮಿಕ್ಕ ಅವತಾರ ಮತ್ತು ಘಟನೆಗಳನ್ನು ಕಾವ್ಯ, ಶಾಸನಗಳು ಒಮ್ಮತದಿಂದ ಸಾರುತ್ತವೆ. ಸತ್ಯವೆಂದು ಒಪ್ಪಲು ಸಂದೇಹ ಹುಟ್ಟಿಸುವ ಈ ಪವಾಡಗಳನ್ನು ಬಿಟ್ಟರೂ ಕೆಲವು ಚಾರಿತ್ರಿಕ ಅಂಶಗಳನ್ನು ಮಾತ್ರ ಶಾಸನಗಳಿಂದ ಅರಿಯಬಹುದಾಗಿದೆ.

ಈ ಚಾರಿತ್ರಿಕ ಅಂಶಗಳನ್ನೊಳಗೊಂಡ ಶಾಸನಗಳಲ್ಲಿ ಕೆಲವು ಪ್ರಾಸಂಗಿಕವಾಗಿ, ಕೆಲವು ನೇರವಾಗಿ ಶರಣರನ್ನು ಕುರಿತುವಾಗಿವೆ. ಕೊಂಡಗುಳಿ ಕೇಶಿರಾಜ, ಗುಡ್ಡವ್ವೆ, ಹುಳಿಯಮೇಶ್ವರ ಚಿಕ್ಕಯ್ಯ, ಏಕಾಂತರಾಮಯ್ಯ, ಅಮುಗಿದೇವ, ಕುರುಗೋಡ ರಾಮಚಲ್ಲ, ಚೌಡದಾನಪುರ, ಶಿವದೇವ, ಪರ್ವತಯ್ಯ-ಅಪ್ಪಯ್ಯ ದೇವರಸ, ಆಕಾಶವಾಸಿಯತಿ, ಲಕ್ಕಣ್ಣದಂಡೇಶ, ನಿರ್ಮಾಯಗಣೇಶ, ಗೋಸಲಯತೀಶ, ತೋಂಟದ ಸಿದ್ಧಲಿಂಗ, ಎಮ್ಮೆ ಬಸವರ ಶಾಸನಗಳು ನೇರವಾಗಿ ಇವನರ್ನೇ ಕುರಿತು ಬರೆದುವು. ಜೇಡರ ದಾಸಿಮಯ್ಯ, ಬಸವಣ್ಣ, ಸಿದ್ಧರಾಮ ಮೊದಲಾದವರ ಶಾಸನಗಳು ಅನೇಕ ಇದ್ದರೂ ಅವರ ಉಲ್ಲೇಖ ಪ್ರಾಸಂಗಿಕ. ಮಿಕ್ಕ ಅರುವತ್ತುಮೂರು ಪುರಾತನರ, ಬಾಣ ಓಹಿಲ ಮೊದಲಾದವರ, ಉಳಿದ ಶರಣರ ಉಲ್ಲೇಖಗಳಂತೂ ತೀರ ಪ್ರಾಸಂಗಿಕ.

ರಾಯಚೂರು ಜಿಲ್ಲೆಯ ಗೊಬ್ಬೂರಿಗೆ ಸಂಬಂಧಪಟ್ಟ ಜೇಡರದಾಸಿಮಯ್ಯನ ಸಂಪ್ರದಾಯವು ಒಂದು ಶತಮಾನ ಕಳೆಯುವಷ್ಟರಲ್ಲಿ ಅರಸಿಕೆರೆಯಷ್ಟು ದೂರ ವ್ಯಾಪಿಸಿತ್ತೆಂದೂ, ಈತನನ್ನು ಉಲ್ಲೇಖಿಸುವ ಗೊಬ್ಬೂರು, ಗೀಜಗನಹಳ್ಳಿ, ಅರಸಿಕೆರೆ ಶಾಸನಗಳಲ್ಲಿ 'ಗೊಜ್ಜೇಶ್ವರದೇವ'ರ ಉಲ್ಲೇಖ ತಪ್ಪದೇ ಬರುವುದರಿಂದ ಈ ದೇವತೆ ಮತ್ತು ಜೇಡರದಾಸಿಮಯ್ಯನ ಸಂಪ್ರದಾಯಗಳಲ್ಲಿ ಯಾವುದೋ ಒಂದು ಸಂಬಂಧವಿದೆಯೆಂದೂ ತಿಳಿದುಬರುತ್ತದೆ. ಈತನ ತವನಿಧಿಪವಾಡ ಶಾಸನರೂಪದಲ್ಲಿ, ವಸ್ತ್ರ ಪವಾಡ ವಿಗ್ರಹರೂಪದಲ್ಲಿ ಪ್ರಕಟಗೊಂಡಿವೆ "ಪಡೆದಳ್ ಸುಗ್ಗಲದೇವಿ ಮುನ್ನ ಜಯಸಿಂಹೋರ್ವೀಶನೊಳ್ ಸಾಮ್ಯವಂ" "ಜಯಸಿಂಹಕ್ಷಿತಿಪಾಳಕಂಗೆ ಜಗಮೆಲ್ಲಂ ಬಣ್ಣಿಸಲ್ ಪೂಣ್ದು ಭಾಷೆಯನಾ ಸುಗ್ಗಲದೇವಿ ಕೊಟ್ಟ ತೆರದಿಂ" ಎಂದು ಸುಗ್ಗಲದೇವಿಯನ್ನು ತರುವಾಯದ ರಾಜಪತ್ನಿಯರು ಆದರ್ಶಸ್ತ್ರೀಯೆಂದು ಮನ್ನಿಸಿರುವರು; ಗೌರವವನ್ನು ವ್ಯಕ್ತಪಡಿಸಿರುವರು. ಆದರೆ ಆ ಆದರ್ಶದ ವಿವರವಾಗಲೀ ಅವಳ ಶರಣ ಜೀವನದ ಉಲ್ಲೇಖವಾಗಲೀ ಶಾಸನಗಳಲ್ಲಿ ಕಂಡುಬಂದಿಲ್ಲ.

ಕೊಂಡಗುಳಿ ಕೇಶಿರಾಜನ ಆರಾಧ್ಯದೈವತ ಸೋಮನಾಥ, ಅರಸು ಆರನೆಯ ವಿಕ್ರಮಾದಿತ್ಯನೆಂಬ ಹೇಳಿಕೆಯನ್ನು ಕೊಂಡುಗುಳಿಶಾಸನ ಸತ್ಯಗೊಳಿಸಿದೆ. ಅಲ್ಲದೆ ಕೇಶಿರಾಜನದು ವಾಜಿಕುಲ, ತಂದೆ ನಿಂಬಣದಂಡನಾಥ, ಕಲ್ಯಾಣಚಾಲುಕ್ಯರಲ್ಲಿ ಹೇರಿಲಾಳ ಸಂಧಿವಿಗ್ರಹಿಯಾಗಿದ್ದ ಈತನು ಕೊಂಡಗುಳಿಯಲ್ಲಿ ಸೋಮೇಶ್ವರದೇವಾಲಯ ಕಟ್ಟಿಸಿದನೆಂಬ ಹೊಸ ವಿಷಯಗಳನ್ನು ಹೊರಗೆಡವಿದ ಈ ಶಾಸನದಿಂದಾಗಿ ಈತನ ಕಾಲ ಕ್ರಿ.ಶ. ೧೧೬೦ ರಿಂದ ೧೧೦೭ಕ್ಕೆ ಹಿಂದೆ ಸರಿದಿದೆ.

ಬಸವಣ್ಣನವರು ಜನಿಸಿದ ಊರು ತರ್ದಮಾಡಿ ಮಧ್ಯಗ್ರಾಮ ಬಾಗವಾಡಿ, ಆ ಬಾಗವಾಡಿಯ ಪುರಪ್ರಭು ಮಾದಿರಾಜ, ಮಾದಿರಾಜನ ಮಗ ಬಸವಣ್ಣ, ಬಸವಣ್ಣನ ಅಣ್ಣ ದೇವರಾಜ, ದೇವರಾಜನ ಮಗ ಕಲಿದೇವ, ಕಲಿದೇವನ ಮಗ ಹಾಲಬಸವಿದೇವ ಎಂಬ ಚಾರಿತ್ರಿಕ ಸಂಗತಿಗಳೂ, ಅವರ ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಪುರಾತನಭಕ್ತಿ, ಸಮಯಭಕ್ತಿಗಳ ಸಮಗ್ರಚಿತ್ರವೂ ಶಾಸನಗಳಲ್ಲಿ ಸಿಗುತ್ತದೆ. ಪ್ರಭುದೇವ, ಚನ್ನಬಸವಣ್ಣನವರ ಕೆಲವು ಶಾಸನಗಳು ಲಭಿಸುತ್ತಿವೆಯಾದರೂ ಅಲ್ಲಿ ಚಾರಿತ್ರಿಕ ಅಂಶ ತೀರ ಕಡಿಮೆ. ಇಪ್ಪತ್ತಕ್ಕೆ ಮೇಲ್ಪಟ್ಟು ಸಿಗುವ ಸಿದ್ಧರಾಮನ ಶಾಸನಗಳು ಉತ್ತರದ ಉಸ್ಮಾನಾಬಾದ ಜಿಲ್ಲೆಯಿಂದ ದಕ್ಷಿಣದ ಶಿವಮೊಗ್ಗ ಜಿಲ್ಲೆಯವರೆಗೆ ಹಬ್ಬಿವೆ. "ಜಗದೈಕಗುರು ಸಿದ್ಧರಾಮಂ" "ಶ್ರೀ ಪರಮಗುರು ಸಿದ್ಧರಾಮಂ" "ನಿಜದ ಪುರುಷ ಲಿಂಗಂ" "ಸನ್ನಿತಗುರು ಸಿದ್ಧರಾಮಂ" "ಚಾಪಳವಿಶೇಷನಯನಂ" ಎಂಬ ವಿಶೇಷಣಗಳಲ್ಲದೆ ಘಡಕೆನೂರ ಶಾಸನದಲ್ಲಿ "ಅನಾದಿಸಿದ್ಧನುಂ ಜಗತ್ಪ್ರಸಿದ್ಧನುಂ..." ಎಂದು ಮುಂತಾದ ವಿಶೇಷಣಗಳು ಸಾಲುಗಟ್ಟಿ ನಿಂತಿವೆ. ಮಡಿವಳ ಮಾಚಿದೇವನನ್ನು ಅಗಸರು ತಮ್ಮ ಮೂಲಪುರುಷನೆಂದು ಗೌರವ ಸಲ್ಲಿಸಿದ್ದಾರೆ. "ನೆಲುವಿಗೆಯ ಸಾತ್ಯೆಯ(ಗ)ಳ ಶ್ರೀಪಾದಗಳೇ ಶರಣು" ಎಂದು ಶುಭ ನುಡಿದು ಪ್ರಾರಂಭವಾಗುವ ಭೂಯಾರಶಾಸನ (೧೧೬೨) ವೀರಶೈವ ಆಂದೋಲನೆಯ ಜಾಗೃತ ಸಂದರ್ಭದಲ್ಲಿ ಹುಟ್ಟಿದೆ. ಹುಳಿಯಮೇಶ್ವರದೇವರ ಅರ್ಚಕನಾದ ಚಿಕ್ಕಯ್ಯನು ವೀರಶೈವವನ್ನು ಮನ್ನಿಸಿದ ಶೈವನೆಂದು ದೇವರಗುಡಿ ಶಾಸನ (೧೧೬೮) ತಿಳಿಸುತ್ತದೆ. ಶರಣ ಭೈರವರಾಜನ ಚರಿತ್ರೆಯ ಮೇಲೂ ಬೆಳಕು ಚೆಲ್ಲಿದ ಈ ಶಾಸನೋಕ್ತ ಚಿಕ್ಕಯ್ಯನು ವಚನಕಾರ ಚಿಕ್ಕಯ್ಯನೆಂದೂ, ಈತನ ಮುದ್ರಿಕೆ 'ಉಳಿಯುಮೇಶ್ವರ'ವಲ್ಲ, 'ಹುಳಿಯಮೇಶ್ವರ'ವೆಂದೂ ತಿಳಿದುಬಂದಿದೆ. ಏಕಾಂತರಾಮಯ್ಯನ ಮಸ್ತಕಾರ್ಪಣ ಘಟನೆ ಶಾಸನದಲ್ಲಿ ಸಾಹಿತ್ಯದ ಮೂಲಕ, ಶಿಲ್ಪದಲ್ಲಿ ವಿಗ್ರಹಗಳ ಮೂಲಕ ಅಭಿವ್ಯಕ್ತಗೊಂಡಿದೆ. 'ಲಿಂಗೈಕದೇಹಿ' 'ಸರಣಸಂತಾನ' ಎನಿಸಿದ ಅಮುಗಿದೇವನು ಯಾದವರ ಕಾಲದ ಸುಪ್ರಸಿದ್ಧ ಶರಣನೆಂದು ಪುಳಜೆಶಾಸನ ಹೇಳುತ್ತದೆ. ಮಿಕ್ಕ ಕಕ್ಕಯ್ಯ, ಚಿಕ್ಕಯ್ಯ, ಬಂಕಯ್ಯ ಮೊದಲಾದವರು ನಾಮಮಾತ್ರ ಉಲ್ಲೇಖಗೊಂಡಿರುವರು.

ಬಸವೋತ್ತರ ಕಾಲದ ಕುರುಗೋಡು ರಾಚಮಲ್ಲ, ಮೂರುಜಾವಿಪಂಡಿತ, ಲಕ್ಕಣದಂಡೇಶ, ಪುರಾಣದ ಮಾಯಿದೇವ, ಭಕ್ತ್ಯಾಚಾರದ ಚೀಲಾಳ, ಆಕಾಶವಾಸಿಯತಿ, ಹೋಳಿನ ಹಂಪಯ್ಯ, ಪುರಾಣದ ರಾಚವಟ್ಟಿ ಮೊದಲಾದವರನ್ನು ಬಿಟ್ಟರೂ ಎದ್ದುಕಾಣುವ ಬೇರೆ ಶರಣರ ಚರಿತ್ರೆ ಶಾಸನಗಳಲ್ಲಿ ಮನಂಬುಗುವಂತೆ ಬಂದಿದೆ. "ಲಿಂಗಕ್ಕೆ ಜಂಗಮಕ್ಕಂ ಹಿಂಗದೆ ದಾಸತ್ವಂ ಮಾಳ್ಪುದೇ ಬೆಸನೆಂದಾ ಸಂಗನಬಸವಂ ಬೆಸಸೆ" ಅವುಗಳನ್ನು ನಿಷ್ಠೆಯಿಂದ ಆಚರಿಸುತ್ತಿದ್ದವನು, ಶಿವದೇವ. "ಮೃಡಗಣ ವರ ಪ್ರಸಾದವ ಪಡೆದಂ ಜಗವರಿಯಲಂದು ಸಂಗನಬಸವಂ." ಅದೇ ರೀತಿ ಪ್ರಸಾದಸಿದ್ಧಿಯನ್ನು ಪಡೆದ ಈ ಶಿವದೇವನ ಬದುಕಿನಲ್ಲಿ 'ಬಸವತ್ವ'ವನ್ನು ಕಾಣಬಹುದು. ಯಾದವ ಚಕ್ರವರ್ತಿಗಳ ಭಕ್ತಿಗೆ ಪಾತ್ರನಾದ ಈತನು ಗುತ್ತರಸರ ರಾಜಗುರು. ಗೋಸಲಾರ್ಯನನ್ನು 'ಷಟಸ್ಥಳ ಪರಬ್ರಹ್ಮೇಷ್ಟಲಿಂಗಾರಾಧಕ' ಎಂದು ಕರೆಯುತ್ತ 'ಅಪ್ಪಣಾರ್ಯ ನಿಜಗರ್ಭಸಂಜನಿತ' ಎಂದು

ಹೇಳಿದುದು ಬಹುಮುಖ್ಯ ಸಂಗತಿಯಾಗಿದೆ. ತೋಂಟದ ಸಿದ್ಧಲಿಂಗನಂತೂ "ಜ್ಞಾನಕ್ರಿಯಾಸ್ವರೂಪನುಂ, ಸರ್ವಾಂಗಲಿಂಗಿ, ಷಟ್ಸ್ಥಲಜ್ಞಾನಿ, ಸರ್ವಚಾರಸಂಪನ್ನ, ಪಾದೋದಕಪ್ರಸಾದಪ್ರತಿಷ್ಠಾಚಾರ್ಯ. ಅಷ್ಟಾವರಣಾಲಂಕರಣ" ಎಂದು ಕೀರ್ತಿತನಾಗಿರುವನು. ಸಪ್ಪೆದೇವ, ಉಪ್ಪಿನಹಳ್ಳಿದೇವ, ಪಟ್ಟಣದೇವ, ರೇವಣಸಿದ್ಧದೇವ, ಶೀಲವಂತದೇವ, ಚಿಟ್ಟಿಗದೇವ, ಕೊಡಗಿ ಹಳ್ಳಿದೇವರಿಗೆ ಗುರುಸ್ಥಾನದಲ್ಲಿ ನಿಂತ ಈ ದಿವ್ಯ ಶಿವಯೋಗಿಗೆ ಅರಮನೆ, ಗುರುಮನೆಯ ವ್ಯಕ್ತಿಗಳು ಶಾಸನ ಬರೆಯಿಸಿ ಭಕ್ತಿಯಿಂದ ಬಾಗಿರುವರು. ಅನ್ಯಕುಲದ ಅಧಿಕಾರಿ ಕಾಣಿಕೆ ಸಲ್ಲಿಸಿರುವನು. ಈತನ ಒಂದು ವಚನ ಶಾಸನೋಕ್ತವಾದುದಂತೂ ಶಾಸನಪ್ರಪಂಚದ ಒಂದು ಅಪರೂಪ ಉದಾಹರಣೆ. ಗುಮ್ಮಳಾಪುರದ ಶರಣರೆಲ್ಲ ಕೂಡಿ ಶಿವರಾತ್ರಿ ಪುಣ್ಯಕಾಲದಲ್ಲಿ ಬ್ರಾಹ್ಮಣಮತದ ವೆಂಕಟೇಶ್ವರ ಉಪಾಧ್ಯಾಯರಿಗೆ ಒಂದು ಅಗ್ರಹಾರ ನೀಡಿದುದು ಅಭೂತಪೂರ್ವ ಸಂಗತಿಯಾಗಿದೆ. ಶರಣ ವೀರಣ್ಣೊಡೆಯ, ಚಿಕದೇವಪ್ಪ, ನಿಜಲಿಂಗಚಿಕ್ಕಯ್ಯ, ಬಿಟ್ಟಮಂಡೆಯಪ್ರಭು, ಶಂಖದ ಸಿದ್ಧಲಿಂಗ, ಜಂಗುಳಿದೇವ, ಪ್ರಸಾದಿದೇವ, ಮಲ್ಲಿಕಾರ್ಜುನಾರಾಧ್ಯ, ಬಸವಣ್ಣದೇವ ಮೊದಲಾದವರನ್ನು ಉಲ್ಲೇಖಿಸುವ ಈ ಶಾಸನ ಶರಣರ ಚರಿತ್ರೆಗೆ ಆಧಾರವನ್ನೊದಗಿಸುವ ಒಂದು ದೊಡ್ಡ ಗಣಿ ಎನಿಸಿದೆ. ಸಕಲರಾಜುವಿನಿಂದ ಕೊಮರಗೆರೆಯನ್ನು ದಾನವಾಗಿ ಪಡೆದ ನಂಜನಗೂಡ ಶಾಸನೋಕ್ತ ಎಮ್ಮೆಬಸವನು 'ವೀರಶೈವಾಗಮಜ್ಞಾಯ' ಎಂದೂ, ಈತನ ಕಾಲಜ್ಞಾನಸಿದ್ಧಿಯ ಸೂಚನೆಯೆಂಬಂತೆ "ಪ್ರಾಪ್ತಕಾಲತ್ರಯೋದಂತ ಪರಿಜ್ಞಾನಾಯಧೀಮತಾ" ಎಂದು ಕರೆಯಲ್ಪಟ್ಟಿರುವನು. ಹೀಗೆ ವೀರಶೈವರ ಮತ್ತು ವೀರಶೈವ ಶರಣರ ಬಗೆಗೆ ಒಂದಿಲ್ಲೊಂದು ವಿಶೇಷ ಸಂಗತಿಯನ್ನು ಮೇಲಣ ಶಾಸನಗಳು ಒದಗಿಸುತ್ತವೆ. ಈ ರೀತಿ ಕೆಲವು ಶಾಸನಗಳು ಶರಣರ ಚರಿತ್ರೆಯನ್ನು ಹೇಳಿದರೆ ಕೆಳಗಣ ಇಂಗಳಗಿ, ಕುಡತಿನಿ, ತಾಳಿಕೋಟೆ, ಅಬ್ಬಲೂರ, ಚೌಡದಾನಪುರ, ಅಣ್ಣಿಗೇರಿ ಶಾಸನಗಳು ಅವರ ಸಾಮರ್ಥ್ಯ ಮತ್ತು ಸಮಯಾಭಿಮಾನಗಳನ್ನು ಘೋಷಿಸುತ್ತವೆ.

೧. ಕರಕರನಂ ಸೆಂಡಾಡುವ।
ರುರಗಪನಂ ಕೀಱಲಿಟ್ಟು ಬಿಟ್ಟಿಕ್ಕುವರಾ।
ಗಿರಿಕುಟಿಮಂ ಕಿತ್ತೆತ್ತುವ।
ರುರಿಯೊಳು ಪರಿಮರಿಯಾಡುತಿರ್ಪ್ಪರು ಸರಣರು ।। (ಇಂಗಳಗಿ ಶಾಸನ)

೨. ಕ್ರೂರವಿಷಂಗಳಂ ಕುಡಿವರಂತಕನಂ ಜಱಿವರ್ಮಹೋಗ್ರ ಕಾ।
ಳೋರಗನಂ ಕಡಂಗಿ ಪಿಡಿವರ್ಸಿಡಿಲಂ ಪೊಡೆವರ್ಗ್ಗ[ಜಾ]ಱಿಯಂ।
[ಯಾ]ರಿಗೆ ತಪ್ಪ[ರಿ]ಳ್ದು ಶಿವದೂಷಕನೆಂಬವನೊಕ್ಕಲಿಕ್ಕುವ।
ರ್ವೀರಗಣಂಗಳೆಂದೊಡಿದಿರಾರ್ ಪ್ರಮಥರ್ಗೆ ಜಗತ್ರಯಂಗಳೊಳ್।।

ಕರಕಮಳಂಗಳಂ ಮುಱಿದುಮಾಪತಿಗೇಱಿಸಿ ಮೀಂಟಿ ಕಣ್ಗಳಂ।
ಹರನ ಶಿಖಾಗ್ರದೊಳಿ[ಳ್ಳಿ]ಱಿಸಿ ದಂಡೆಗರುಳ್ಗಳೊ[ಳೆ]ಡೆಯಂ ಭಯಂ।
ಕರಮೆನೆ ಮಾಡಿ ಶಂಕರನನರ್ಚ್ಚಿಸಿ ಪಂದಲೆಯಿಂ ನಿವಾಳಿಯಂ।
ಪುರಮಥನಂಗೆ ಕೊಟ್ಟು ಮಗುಳ್ದಂ ಪಡೆವರ್ಪ್ರಮಥರ್ಕಳದ್ಭುತಂ।
(ಕುಡತಿನಿ ಶಾಸನ)

೩. ೧. .....ಪರಸಮಯಗಿರಿವಜ್ರದಂಡರುಂ ಜಗದಲುದ್ದಂ
೨. ಡರುಂ ಜಿನಸಮಯವನದಹನದಾವಾನಳರುಂ ಮುನಿದರ್ಗ್ಗೆ
೩. ಹಾಳಾಹಳರುಂ ಬೌದ್ಧ ಸಮಯವಿಧ್ವಂಸನಪ್ರವೀಣರುಂ ಬಗೆ
೪. ಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರನೆತ್ತುವರುಂ ಸೆ
೫. ಣಸುವರ ನೆತ್ತರಂ ಮರುಳ್ಗಳಿಂ ಕುಡಿಸುವರುಂ ಪರಸಮಯ
೬. ಘರಟ್ಟರುಂ ವೀರ ಕು(ಪ್ರ)ರವಟ್ಟರುಂ ಕಾಲನ ನಾಲಗೆಯ ಕೀಳ್ವರುಂ
೭. [ಬಾ]ರಿಯಂ ಕೂರದರ್ಗ್ಗೀವರುಂ ॥ ನಂಜನಂಜದುಂಬರುಂ
೮. XX ಅಿಸಿ ಮಾರ್ಕ್ಕೊಳ್ವರುಂ ಬಹುವಿಧ ನಿಷ್ಠಾವಶೀಕೃತ ಜ
೯. XXXXX ರುಂ ಅಸಂಖ್ಯಾಂತ ಸಂಖ್ಯಾಭಿಧೇಯ ಮಹಾ
೧೦. XXX ಪರಸಮಯಸರಸಿಜಾತಸಮೂಹಮದಕರಿಗಳಂ
೧೧. XX (ಹು)ವಿಧ ನಿಷ್ಠೆಯಿಂ ಹರನಂ ಪರಿಕ್ಸಿ ಭವಮನಂತರ್ಸ್ಸಿ
೧೨. XXX ಮಂ ಸಂಹರ್ಸ್ಸಿ ಜರಮಂ ಮಾಂಕರಿಸುವುದ್ದಂಡರು
೧೩. XX ತೆ ಗಂಡರುಂ ಪರಿಯಳಿಗೆ ಅಣೆಲೆವಾಡ ಉಣಕಲ್ಲು ಸಂ
೧೪. ಪಗಾವಿ ಅಬ್ಬಲೂರು ಮಾರುಡಿಗೆ ಅಣಂಪುರ ಕರಹಾಡ ಕೆಂ
೧೫. ಬಾವಿ ಬಮ್ಮಕೂರು ಮೊದಲಾಗಿ ಅನನ್ತದೇಶದೇಶಾಂತರದಲಿದಿ
೧೬. ರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮನಾಕಂಪಂಗೊ
೧೭. ಳ್ಸಿ ಬಸದಿಗಳಂ ಹೊಸೆದು ಮುಕ್ಕಿ ಶಿವಲಿಂಗಸಿಂಹಾಸನಮಂ
೧೮. [ಕ]ಣ್ಗೊಳ್ಸಿ ಚಲಮಂ ಮೆಱೆದು ಧೀರರೊಳು ನೆಱೆದು ಸ್ವರ್ಗಮರ್ತ್ಯ
೧೯. ಪಾತಾಳದೊಳನಂಗಾರಿಯ ಹೆಮ್ಮೆಯಂ ತಮ್ಮ ಭ್ರಿ
೨೦. ತ್ಯಾಚಾರದ ತೊಮ್ರೆಯಂ ತಳದಲಿಕ್ಕಿ ತೋರ್ಪನ್ತೆ ತೋರಿದ ಪುರಾತ
೨೧. ನ ನೂತನರೆನಿಸಿದ ಅಸಂಖ್ಯಾತಗಣಂಗಳ ನಾಮಾದಿ ಸ
೨೨. ಮಸ್ತ ಪ್ರಶಸ್ತಿಸಹಿತಂ॥

(ತಾಳಿಕೋಟೆ ಶಾಸನ)

೪. ಅರಗಯ್ಗೊಂಡನೆ ಕಿತ್ತುನೋಡಿದನೆ ಕೂರ್ಪಿಂಗಳ್ಕಿ ಮೆಯ್ಗಾಯ್ದನೇ।
ಸೆರಗಂ ಪಾರ್ದ್ದನೆ ಬಾಳ್ಗೆ ಭಕ್ತರೆನುತುಂ ಬಲ್ಲಾಳು ರಾಮಂ ಸ್ವಕಂ।
ಧರಮಂ ಚಕ್ಕನೆ ಹುಲ್ಲಕಟ್ಟನರಿವಂತಕ್ಲೇಶದಿಂದಾಗಳಂ।
ತರೀದೀಶಾಂಘ್ರಿಯೊಳಿಕ್ಕಿ [ಶಂಕರ] ಗಣಕ್ಕಾನಂದಮಂ ಮಾಡಿದಂ॥
ಬಡಿಗೊಂಡರ್ಬನೆ ಸೊಕ್ಕಿ ಬಾಳೆವನಮಂ ಕಾಡಾನೆ ಪೊಕ್ಕಂತಿರು।
ಕ್ಕಡಗಲ್ ಕಾಪಿನ ವೀರರಂ ತುರಗಮಂ ಸಾಮಂತರಂ ತೂಳ್ದು ಮಾ।
ರ್ಪಡೆಗಳ್ ಜೈನರ ಮಾರಿ ಬಂದುದೆನುತಂ ಬೆ[ಂ]ಗೊಟ್ಟು ಪೋಗಲ್ ಜಿನಂ।
ಕೆಡೆವನ್ನಂ ಬಡಿದಲ್ಲಿ ಕೈಕೊಳಿಸಿದಂ ಶ್ರೀ ವೀರಸೋಮೇಶನಂ॥

(ಅಬ್ಬಲೂರು ಶಾಸನ)

೫. ಎಲೆ ಗಳ ವಾದಿ ಗೀದಿ ಘಡ ವೈಷ್ಣವ ಗೀಷ್ಣವ ಸೌರಗ್ರೀವ ಮಾ।
ಣೆಲೆ ಗಳ ಬೊಂಮಿ ಗಿಂಮಿ ನಿಗಮಾರ್ಥವನರಿಯದಜ್ಜಿ ಗಿಜ್ಜಿ ಬೇ।
ಡೆಲೆಗಳ ಬೌದ್ಧ ಗಿದ್ಧ ಬರಿಯಾಗಮಿ ಗೀಗಮಿ ಮಂತ್ರವಾದಿ ಸಾ।
ಕುಲಿಯದಿರೆಂದು ಬಗ್ಗಿಪುದು ಶ್ರೀ ಶಿವದೇವನ ಕಾಲ ಹೊಂದಡರ್॥

(ಚೌಡದಾಸನಪುರ ಶಾಸನ)

ಇವಲ್ಲದೆ ಇಲ್ಲಿ ಸಮಾವೇಶಗೊಳ್ಳದ ಅಣ್ಣಿಗೇರಿ ಶಾಸನದಲ್ಲಿ[೪] ಶೈವನಾಗಿರಬಹುದಾದ ವೀರಗೊಗ್ಗಿಯನ್ನು–

ಜಯಿನಮ್ರಿಗ ಬೇಂಟೆಕಾರಂ ।
ಜಯಿನಾಗಮಧೂಮಕೇತು ಜಯಿನಕುಠಾರಂ ।
ಜಯಿನಫಣಿ ವಯಿನತೇಯಂ ।
ಜಯಿನಾನ್ತಕನೆನಿಸಿ ನೆಗಳ್ದನೀ ಗೊಗ್ಗರಸಂ॥
ಅಗ್ಗದ ಘಟಾಂತಿಕೆಯಂ ಅದೆ ।
ನುರ್ಗಾಗಿರೆಯೊಡೆದು ಕಳೆದು ಜಿನನಂ ತಾಗಲೆ ।
ದುರ್ಗತಿಯೊಳಿಕ್ಕಿ ಮೆಟ್ಟಿದ ।
ಗೊಗ್ಗರಸನಾಗ್ರಣಿ ಕೊಮಾರನಾಹವಧೀರಂ ॥
ಕಾಂಚನದXXತನುಮನಂ ।
ಕಾಂಚನವಂXXಜಂಗಮಸ್ಥಾನವಕ್ಕಿ ತಾ ।
ಚೀಲಮನೆತ್ತಿಕೊಂಡನು ಯಿ ।
ದೇಂ ಚೋದ್ಯಮೋ ವೀರಗೊಗ್ಗನಗ್ಗಳಂ ॥

ಎಂದು ಕೀರ್ತಿಸಲಾಗಿದೆ. ಈ ಶಾಸನಗಳು ೧೨-೧೩ನೆಯ ಶತಮಾನದ ಶೈವ-ವೀರಶೈವರ ಶಿವಧರ್ಮನಿಷ್ಠೆಯನ್ನು, ಎದುರಾದ ಮತಗಳನ್ನು ಸಮರ್ಥವಾಗಿ ಎದುರಿಸಿದ ರೀತಿಯನ್ನು ಕಣ್ಣಿಗೆ ಕಟ್ಟುತ್ತವೆ. ಈ ತರುವಾಯದ ಶಾಸನಗಳಲ್ಲಿ ಮತನಿಷ್ಠೆ ಕಂಡು ಬಂದರೂ ಇಷ್ಟು ಉಗ್ರಸ್ವರೂಪ ಅಲ್ಲಿಲ್ಲ.

ಕೆಲವು ದಿನಗಳ ಹಿಂದೆ ಲಿಂಗವಂತ, ಲಿಂಗಾಯತ ಮತ್ತು ವೀರಶೈವ ಪದಗಳ ಪ್ರಾಚೀನತೆಯ ಚರ್ಚೆ ತಲೆಯೆತ್ತಿ ನಿಂತುಹೋಯಿತು. ಇವುಗಳಲ್ಲಿ 'ವೀರಶೈವ' ಪದ ೧೩ನೆಯ ಶತಮಾನದಷ್ಟು ಪ್ರಾಚೀನಕಾಲದ ಮತ್ತು ತರುವಾಯದ ಶಾಸನಗಳಲ್ಲಿ ಹೀಗೆ ಗೋಚರಿಸುತ್ತದೆ.

೧. ವಿಶ್ವೇಶ್ವರ ಶಿವಾಚಾರ್ಯೋ ಧೀಮಾನ್ರಾಜಗುರುಃ ಸ್ವಯಂ ।
ಏವಮಾಜ್ಞಾಪಯದ್ವೀರಶೈವಾಚಾರ್ಯ್ಯ ಶತೈರ್ವೃತಃ ॥[೫]

---

೪. SII. XV. NO. 59. ಅಣ್ಣಿಗೆರೆ.
೫. ಮಲಕಾಪುರ ಶಾಸನ (ಕ್ರಿ.ಶ. ೧೨೬೧)-ಶಿವಾ-೬-೧.

ಈ ಶಾಸನದ ಕಾಲ ಕ್ರಿ.ಶ. ೧೨೬೧. ಈಗ ತಿಳಿದಮಟ್ಟಿಗೆ ವೀರಶೈವ ಪದವನ್ನೊಳಗೊಂಡ ಪ್ರಥಮ ಶಾಸನವಿದು. ಆದರೆ ಇಲ್ಲಿಯ ಪಾಠಪರೀಕ್ಷೆ ಅವಶ್ಯ.

೨. ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರಾ ರಾಜ ಪ್ರತಾಪ । ರಾಜ
ಕಂಠೀರವ ವುತ್ತರ ದಕ್ಷಿಣ ಪೂರ್ವ ಪಶ್ಚಿಮ ಚತುಸಮುದ್ರಾಧೀಶ್ವರ
ರಾದ । ರಿಪು ಮಂಡಲೀಕರ ಗಂಡ್ಡ । ಮಲವರಾಯರ ಮಸ್ತಕಶೂಲಾ ।
ಅರಿರಾಯ ಗಂಡ್ಡ ಭೇರುಂಡ । ಶ್ರೀ ವೀರಶೈವ ಶ್ರೀ ವೀರಪ್ರತಾಪ
ಚೋಳರಾಯರವರು...[೬]

ಈ ಶಾಸನದ ಕಾಲ ಕ್ರಿ.ಶ. ೧೩೦೧ ಇಲ್ಲವೆ ೧೪೦೨ ಎಂದು ಶಂಕಿಸಲಾಗಿದೆ. ಇಲ್ಲಿಯ 'ವೀರಶೈವ' ಪದದ ಪರೀಕ್ಷೆ ಅವಶ್ಯ.

೩. "........ಸ್ವಸ್ತಿ ಸಮಸ್ತ ಭುವನ ವಿXXಲ್ಲಜಂ ಮಹಾರಾಜಾಧಿರಾಜಂ
ಧರ್ಮಾವತಾರನಿಪುಣಂXX ಶೈವಾಗಮ ಸಾರಸಂಪನ್ನರು XX ವಂತರ ಆಚಾರಿಯ
ಪಶ್ಚಿಮಸುದ್ರಾಧಿಪತಿXX ವೊಡೆಯರು ರಾಜ್ಯವನಾಳ್ವ ಕಾಲದಲಿ...."[೭]

ಇದು ಕ್ರಿ.ಶ. ೧೪೧೯ರ ಶಾಸನ. ಇಲ್ಲಿಯ 'XXಶೈವಾಗಮಸಾರ ಸಂಪನ್ನರು' ಎಂಬ ಒಡೆದ ಭಾಗದಲ್ಲಿ 'ವೀರ' ಎಂಬ ಪದವಿದ್ದಿರಬೇಕೆಂದು ಪಂಡಿತರ ಊಹೆ. ಇದರ ಪರೀಕ್ಷೆಯೂ ಅವಶ್ಯ.

೪. "ಶ್ರೀಮದೇಕಾಂತರಾಮೇಶ್ವರಾನ್ವಯೋದ್ಭೂತ ಸಕಲಶಾಸ್ತ್ರಪಾರಾವಾರ ಪಾರಂಗತ ವೀರಶೈವಮತಸ್ಥಾಪನಾಚಾರ್ಯ"*

೧೫ನೆಯ ಶತಮಾನಕ್ಕೆ ಸೇರಿದ ಈ ಶಾಸನ ಏಕಾಂತಬಸವೇಶ್ವರನನ್ನು ವೀರಶೈವ ಮತಸ್ಥಾಪನಾಚಾರ್ಯ ಎಂದು ಕರೆದುದು ಗಮನಾರ್ಹ.

೫. ವೀರಶೈವಾಗಮಜ್ಞಾಯ ವಿಜಿತಾಂತರ ವೈರಿಣೇ ।
ಪೃಥಿತಾಯ ಕ್ಷಿತಾವೆಂಮೆಬಸವೇಂದ್ರ ತಪಸ್ವಿನೇ ॥[೮]

ಎಮ್ಮೆಬಸವಣ್ಣನನ್ನು ವೀರಶೈವನೆಂದು ಕರೆದ ಈ ಶಾಸನದ ಕಾಲ ಕ್ರಿ.ಶ. ೧೫೪೩.

೬. "ವೀರಶೈವಸಮಯೋ(ರ್ಜಿ)ತ ಲಿಂಗಾಂಗ ಸಂಮಂಧ ಭಸ್ಮ
ಸ್ನಾನೋದ್ಧೂಲಿತ ತ್ರಿಪುಂಡ್ರಧಾರಣಕ್ರಮ ವೀರಶೈವಾಗಮೋಕ್ತ....॥ **

ಕರಿಸಿದ್ಧೇಶ್ವರನ ವಿಶೇಷಣಗಳಲ್ಲಿ ಬರುವ ಭಾಗವಿದು.

---

೬. EC.IX ಬೆಂಗಳೂರು ೯೬.

೭. MAR ೧೯೨೧. P. ೯೧.

* EC.IV (ಹೊಸ) ಚಾಮರಾಜನಗರ ೧೪೦, ಕೆಂಪನಪುರ.

೮. MAR 1944, No. 25

** ಹೇಮಕೂಟ ೨-೧.

೭. ಮುಕ್ತಿನಾಥೋದ್ಭವಂ ದೇವಂ ಶಿವದೇವಂ ಮಹೇಶ್ವರಂ ।

ವೀರಶೈವಮತಾಚಾರ್ಯಂ ವಂದೇಹಂ ತಂ ಜಗದ್ಗುರು ।[೯]

ಚೌಡದಾನಪುರದ ಈ ಶಾಸನ ಕಾಲದೃಷ್ಟಿಯಿಂದ ತೀರ ಇತ್ತೀಚಿನದು. ಇವುಗಳಲ್ಲದೆ ಕೊಡಗಿನ ಅರಸರ ಶಾಸನಗಳಲ್ಲಿ 'ವೀರಶೈವ ಮತಸ್ತರಾದ' 'ವೀರಶೈವಮತ ಧುರೀಣಪ್ರವೀಣ ರಾದ' ಎಂಬಿವು ಬಿರುದುಗಳಂತೆ ತಪ್ಪದೇ ಬಳಕೆಯಾಗಿವೆ.

ವೀರಶೈವಮತದ ಮೂಲಸ್ತಂಭ ಷಟ್ಸ್ಥಲ. ಹನ್ನೆರಡನೆಯ ಶತಮಾನದಲ್ಲಿ ಸ್ಥಿರಮುದ್ರೆ ಬಿದ್ದಿದ್ದರೂ ಶಾಸನಗಳಲ್ಲಿ ೧೬ನೆಯ ಶತಮಾನದಷ್ಟು ತಡವಾಗಿ ಕಾಣಿಸಿಕೊಳ್ಳುತ್ತದೆ, ಇದು.

೧. "ಷಡುರುತುಗಳೇ ಷಡುಸ್ಥಲ ಮಹಾಸೇಷನೇ ಕಟಿಸೂತ್ರ" "ಷಟ್ಸ್ಥಲಜ್ಞಾನಿ" "ಷಡುಸ್ತಲಗ್ನಾನ ಲಿಂಗಾಂಗಸಂಮಂಧ ಸಮರಸ ಏಕಾರ್ತ್ತಮಂ ಬೋಧಿಸಿ" "ಷಡುಸ್ತಲಯೇಕಾರ್ತವ ಮಾಡುವ"[೧೦]

೧೬ನೆಯ ಶತಮಾನದ ಶಾಸನದಲ್ಲಿ ತೋಂಟದ ಸಿದ್ಧಲಿಂಗೇಶ್ವರನನ್ನು ಕುರಿತು ಬಳಸಿದ ಮಾತುಗಳಿವು.

೨. "ಷಟುಸ್ಥಲದ ಪ್ರXಗಳಾದ ೧೨ಡು ಸಾವಿರ ಸ್ವಯಜಂಗಮೇಶ (?) ಅನುಭಾವಮೂರ್ತಿಯಾಗಿ ಗ್ನಾನಸಂಬವದಿ ಅರುಹಿಕೊಟ್ಟಂಥ ಚಿಕ್ಕದಣ್ಣಾಯಕ ಚೆಂನಬಸವರಾಜೇಂದ್ರನು...."[೧೧]

೩. "ಷಟಸ್ಥಳ ಪರಬ್ರಹ್ಮೇಷ್ಟಲಿಂಗಾರಾಧಕ"[೧೨]

೪. "ಷಟಸ್ಥಲ ಚಕ್ರವರ್ತಿ"*

ಈ ಮೂರು ಶಾಸನದ ಹೇಳಿಕೆಗಳು ೧೭ನೆಯ ಶತಮಾನಕ್ಕೆ ಸಂಬಂಧಿಸಿದವು.

ಅಷ್ಟಾವರಣ ವೀರಶೈವದ ಇನ್ನೊಂದು ಮಹತ್ವಪೂರ್ಣ ಪರಿಭಾಷೆ. ಶಾಸನಗಳನ್ನು, ಶಾಸನೋಕ್ತದತ್ತಿಯನ್ನು ಅಪಹರಿಸುವವರನ್ನು ಉದ್ದೇಶಿಸಿ ಹೇಳುವ 'ವಾರಣಾಸಿಗಂ ಕವಿಲೆಗಂ ಬ್ರಾಹ್ಮಣರ್ಗ್ಗಂ ತಪ್ಪಿದಮ್"[೧೩] ಎಂಬ ಫಲಶ್ರುತಿ ಸ್ಥಾನದಲ್ಲಿ "ಲಿಂಗದವ ತಪ್ಪಿದ ವಿಭೂತ್ತಿರುದ್ರಾಕ್ಷಿಗೆ ತಪ್ಪಿದವನು"[೧೪] ಎಂದು ಕೆಲವು ಸಲ ಕಂಡುಬರುತ್ತಿರುವುದು ಅಷ್ಟಾವರಣದ ಮಹತ್ವವನ್ನು ಸೂಚಿಸುತ್ತಿದ್ದು, ಈ ಪರಿಭಾಷೆ ಇನ್ನೂ ಹಲವು ಶಾಸನಗಳಲ್ಲಿ ಗೋಚರಿಸುತ್ತದೆ. ಹೂಲಿಯ ನವಲಿಂಗೇಶ್ವರ ದೇಗುಲದ ಒಂದು ಶಾಸನದಲ್ಲಿ–

೩. "........... ಅಷ್ಟಾವರಣಸಂಪನ್ನರುಂ

೪. ರುಗ್ಯಜುಃ ಸಾಮಥರ್ವಣಸಮಸ್ತವೇದವೇದಾಂಗಾ

೫. ನೇಕ ಶಾಸ್ತ್ರಪ್ರವೀಣರುಂ...................."[೧೫]

---

೯. ಶಿ. ವಿಜಯ ಅನುಬಂಧ ೪

೧೦. EC.XI ಕುಣಿಗಲ್ಲ ೪೯, ಎಡೆಯೂರ.

೧೧. EC.XII ಮದ್ದಗಿರಿ ೮. ಜೋಡಿದಾಸೇನಹಳ್ಳಿ ಕ್ರಿ.ಶ. ೧೬೮೬.

೧೨. MAR 1930, P. 138 ಹರದನಹಳ್ಳಿ

* EC.V-II ಹಾಸನ ೧೫೫ ಹುಲಕುಂದೆ, ಕ್ರಿ.ಶ. ೧೪೭೮?

೧೩. KI.V. No.4 ಹಿರೆಹಂದಿಗೊಳ ಕ್ರಿ.ಶ. ೯೭೦

೧೪. MAR 1926, APPENDIX 'C' 9 No. 24.

೧೫. ಶಿವಯೋಗಮಂದಿರದ ಬೆಳಗು. ಕಿರಣ ೩-೬೪.

ಎಂಬ ವಾಕ್ಯವಿದೆ. ಅದೇ ದೇವಾಲಯದ ಇನ್ನೊಂದು ಶಾಸನದಲ್ಲಿ–

೨. .... ಸ್ವಸ್ತಿ ಶ್ರೀ ಪೂವಲಿಯೂರೊಡೆಯ ವೀರವಿಜಯ

೩. ರಸಂ ತನ್ನ ಪಿರಿಯ ವೀರವರ್ಮರಸರುಂ ಪಿಂದೆ ಮಾಡಿದೀ ಸ್ಥಾನಾಚಾರ್ಯರಪ್ಪ

೪. ಷ್ಟಾವರಣಸಂಪನ್ನರುಂ............"[೧೬]

ಎಂಬ ವಾಕ್ಯವಿದೆ. ಈ ಶಾಸನಗಳ ಕಾಲ ಶಕವರ್ಷ ೬೦೧ನೆಯ ಪ್ರಮಾಥಿ ಸಂವತ್ಸರ ಅಂದರೆ ಕ್ರಿ.ಶ. ೬೭೯. ಲಿಪಿ ಮಾತ್ರ ೧೩ನೆಯ ಶತಮಾನದ್ದೆಂದು ಲಿಪಿ ಬಲ್ಲಿದರ ಮತ. ಹೀಗಾಗಿ ಕಾಲದೃಷ್ಟಿಯಿಂದ ಸಂದೇಹದಲ್ಲಿ ನಿಂತ ಈ ಶಾಸನಗಳನ್ನು ಬಿಟ್ಟರೆ ತೋಂಟದಾರ್ಯನನ್ನು ವರ್ಣಿಸುವ ಎಡೆಯೂರ ಶಾಸನದಲ್ಲಿ ಮಾತ್ರ 'ಅಷ್ಟಾವರಣಾಲಂಕರಣ'[೧೭] ಎಂಬ ಪದ ಮೊದಲು ಕಂಡುಬರುತ್ತದೆ. ಇದಲ್ಲದೆ ಶೈವ ಮತ್ತು ವೀರಶೈವರಿಗೆ ಪೂಜ್ಯವಾಗಿರುವ ಅಷ್ಟಾವರಣದ ಅಂಗಗಳಾದ ಗುರುಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ಮಂತ್ರ ರುದ್ರಾಕ್ಷಿ ಎಂಬ ಪದಗಳು ಸಾಮಾನ್ಯ ಮತ್ತು ಪರಿಭಾಷೆ ರೂಪದಲ್ಲಿ ಹೀಗೆ ಸಿಗುತ್ತವೆ:

ಸ್ಥಾವರ ಜಂಗಮಂ ದ್ವಿವಿಧ ಲಿಂಗಮುಮೆಂಬ ಮಹಾಮಹ[ತ್ತು] ಮ ।
ತ್ತಾವಗಜಾಂಡಕೋಟಿಗಳು ತಂಮವಳೋಕನಮಾತ್ರ ಪುಟ್ಟಿಕುಂ ।
ಕಾವುದನಂತಕಾಲ ನುಮಿಸಾರ್ದದಿ ಭಕ್ಷಿಪುದೆಂದೊಡಿಂನು ಹೇ ।
ಳಾವನು ಬಣ್ಣಿಪಂ ಸಿವಗಣದೊಂದು ಸಮಗ್ರ ಸಕ್ತಿಯಂ ।[೧೮]

ಎಂಬ ಕೊಕಟನೂರ ಶಾಸನೋಕ್ತ (ಕ್ರಿ.ಶ. ೧೨೩೪) 'ಸ್ಥಾವರಲಿಂಗ' 'ಜಂಗಮಲಿಂಗ' ಎಂಬ ಪರಿಭಾಷೆ, "ಲಾಕುಳಾಗಮ ಸಮಯಸಮುದ್ಧರುಂ ಜಂಗಮಲಿಂಗಾವತಾರರುಂ ಉಭಯಕುಲಸುದ್ಧರುಮಪ್ಪ.... ಶ್ರೀಮತು ರಾಯರಾಜಗುರು ಸರ್ವೇಶ್ವರದೇವರು"[೧೯] ಎಂಬ ಮುನವಳ್ಳಿ ಶಾಸನ(ಕ್ರಿ.ಶ. ೧೨೫೨)ದಲ್ಲಿಯ 'ಜಂಗಮ' 'ಲಿಂಗ' ಎಂಬ ಪರಿಭಾಷೆಗಳು ಗಮನಾರ್ಹವೆನಿಸಿವೆ.

ಲಿಂಗಮೆನೆ ಜನನೀ ಜನಕಂ
ಲಿಂಗಮೆನೆನಗಾಳ್ದನಾಪ್ತ ಬಾಂಧವ ಭ್ರಾತ್ರು ।
ಲಿಂಗಮೆನೆ ಸರ್ವಮೆನಿಸುವ ।
ಸಂಗಂ ದೊರಕೊಳ್ಗೆ ಜನ್ಮಜನ್ಮಾಂತರದೊಳ್ ॥[೨೦]

ಎಂಬಲ್ಲಿ ಲಿಂಗನಿಷ್ಠೆ,

---

೧೬. ಶಿವಯೋಗಮಂದಿರದ ಬೆಳಗು. ಕಿರಣ ೩-೬೪.

೧೭. EC.XI ಕುಣಿಗಲ್ ೪೯ ಎಡೆಯೂರ.

೧೮. INK & KI No. 18

೧೯. KI. I No. 31. A.D. 1252

೨೦. MAR 1926 NO. 41, A.D. 1183.

ಜಂಗಮದಿಚ್ಛೆ ಜಂಗಮದ ನಚ್ಚಿಕೆ ಜಂಗಮ ಮಚ್ಚು ಮತ್ತವಾ।
ಜಂಗಮದಾಟ ಜಂಗಮದ ನೋಟಮೆ ಜಂಗಮಕೂಟವಾಗಳುಂ ।
ಜಂಗಮದಾಸೆ ಜಂಗಮದ ಬಾಸೆಯೊಳುದ್ಧ ವಿಕಾಸೆ ರಾಜಿಸಿ ।
ಪ್ಪಂ ಗಡನೆಂದು ಬಣ್ಣಿಪುದು ಭೂತಳವೆನ್ನದೆ ಹೊನ್ನಬೊಮ್ಮ[ನ]ಂ ॥[೨೧]

ಎಂಬಲ್ಲಿ ಜಂಗಮನಿಷ್ಠೆ,

ತನುವಂ ಜಂಗಮದೆಡೆಯೊಳ್ ।
ಮನಮಂ ಶ್ರೀ ಸೋಮನಾಥ ಪದಪಂಕಜದೊಳ್ ।
ವಿನಿಯೋಗಿಸಿ ಕುಂಜಂ ನೆ ।
ಟ್ಟನೆ ಪಡೆದಂ ಪುಣ್ಯಪದಮನಾ ಶಿವಪದಮಂ ॥[೨೨]

ಎಂಬಲ್ಲಿ ಲಿಂಗಜಂಗಮನಿಷ್ಠೆಗಳ ಉಲ್ಲೇಖವಿದೆ. ಇದಲ್ಲದೆ 'ಲಿಂಗಜಂಗಮೈಕ ಕ್ರಮ'[೨೩] 'ಪಾದೋದಕ ಪ್ರಸಾದಸಂಪನ್ನರ್'[೨೪] 'ಕಕ್ಷಕಂಠಕರವಕ್ಷೋತ್ತಮಾಂಗ ಲಿಂಗೈಕ ಸಂಗಸದ್ಭಾವನುಂ'[೨೫] 'ಗುರುಲಿಂಗಜಂಗಮ'[೨೬] 'ಸಜ್ಜೆಯ ಲಿಂಗ'[೨೭] 'ಇಷ್ಟಲಿಂಗ'[೨೮] 'ಪ್ರಾಣಲಿಂಗ'[೨೯] 'ಪಾರಣೆಯ ಜಂಗಮಾರಾಧನೆಗೆ'[೩೦] 'ಜಂಗಮರಾರೋಗಣೆ'[೩೧] 'ಜಂಗಮದೇವರ ದಾಸೋಹ',[೩೨] 'ಉಭಯಜಂಗಮರಿಗೆ ಆರೋಗಣೆಯ ಧರ್ಮಕೆ'[೩೩] 'ಸಜ್ಜನ ಶುದ್ಧ ಶಿವಾಚಾರ ಸಂಪಂನರಾದಾ ಗುರುಲಿಂಗ ಜಂಗಮ ಪ್ರೇಮಿಗಳಾದಾ । ಹರಗುರು ಭಕ್ತಿ ಪಾರಾಯಣರಾದಾ ಮೇಕಲಿಂಗನಿಷ್ಠ ಪರರಾದ । ಜಂಗಮಲಿಂಗಾ ಪ್ರಾಣಲಿಂಗ ಪೂಜಾವಿಧೇಯಕರದಾ ವಿಭೂತಿ ರುದ್ರಾಕ್ಷಿ ಮಾಲಿಕಾಧರರಾದ....'[೩೪] ಎಂಬ ವಾಕ್ಯಗಳಲ್ಲಿ ತೂರಿಬಂದ ಅಷ್ಟಾವರಣ ಪರಿಭಾಷೆ, ಅಷ್ಟಾವರಣ ನಿಷ್ಠೆಗಳು ಶೈವ-ವೀರಶೈವಪರವಾದುವೆಂಬುದನ್ನು ಗಮನಿಸಬೇಕು. ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಯುಳ್ಳ ಶಿವಭಕ್ತರೆಂದು ಹೆಸರಾದ ಅಪ್ಪಯ್ಯ ದೇವರಸರಲ್ಲಿಯೂ ಇಂಥ ಶೈವ-ವೀರಶೈವಗಳ ಸಮ್ಮಿಶ್ರಣವನ್ನು ಕಾಣಬಹುದು.

---

೨೧. KI. VI NO 44 ರಟ್ಟಿಹಳ್ಳಿ, ಕ್ರಿ.ಶ. ೧೨೩೮.
೨೨. EC.V-ii ಅರಸಿಕೆರೆ ೧೦೮, ಹಿರಿಯೂರ
೨೩. ಚೌಡದಾನಪುರ ಶಾಸನ ನಂ. ೩.
೨೪. EC.XI ಕುಣಿಗಲ್ ೪೯ ಎಡೆಯೂರ.
೨೫. EC.IX ಜಗಳೂರ ೩೦, ಕಲ್ಲೇದೇವರಪುರ.
೨೬. SII. XV 619 ಕೊಟ್ಟಗಿ, ೧೩ನೆಯ ಶತಮಾನ.
೨೭. SII. XV 203 ಕೊಳೂರ A.D. 1307
೨೮. MAR 1930, P. 138 ಹರದನಹಳ್ಳಿ ಕ್ರಿ.ಶ. ೧೩೪೫
೨೯. SII. XV 671, ಕಲ್ಲೂರ, ೧೫ನೆಯ ಶತಮಾನ.
೩೦. EI. XXI ಅರ್ಜುನವಾಡ ಕ್ರಿ.ಶ. ೧೨೬೦.
೩೧. SII. IX-ii ಶ್ರೀಶೈಲ ೪೫೮, A.D. 1458
೩೨. SII. XV 668 ತಂಗಡಗಿ A.D. 1445
೩೩. SII. IX-ii 415 ಕೋಟೇಶ್ವರ A.D. 1372
೩೪. EC.XVI P.34 ಚಾಮನಹಳ್ಳಿ.

ಬ್ರಾಹ್ಮಣರಿಗೆ ದಾನವಾಗಿ ಕೊಡುವ 'ಅಗ್ರಹಾರ'ಗಳನ್ನು ಹೋಲುವ 'ಶಿವಪುರಿ'ಗಳೂ, ಮಠ, ಗಣಮಠ, ಗಣಕುಮಾರ, ಗಣಕುಮಾರಿ, ವಿಭೂತಿಪಟ್ಟ ಎಂಬ ವಿಶಿಷ್ಟಪದಗಳೂ ಹಲವು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಪುಳಜೆಶಾಸನ ಅಮುಗೆದೇವನನ್ನು 'ಸರಣ ಸಂತಾನ'ನೆಂದು, ಮರಡಿಪುರಶಾಸನ ಮಾರೆಯನಾಯಕನನ್ನು 'ಶರಣರ ದಾಸ'ನೆಂದು ಕರೆದರೆ, ಗುಮ್ಮಳಾಪುರ ಶಾಸನದಲ್ಲಿ 'ಶರಣ ವೀರಣ್ಣೊಡೆಯದೇವ', ಚೌಡದಾನಪುರ ಶಾಸನದಲ್ಲಿ 'ಶರಣ ಅಂಬಿಗರ ಚೌಡಯ್ಯ' ಎಂಬ ಉಲ್ಲೇಖಗಳು ಬಂದಿವೆ. ಇವು ವೀರಶೈವ ಪರಿಭಾಷೆಗಳಾಗಿದ್ದರೂ ಇವುಗಳನ್ನೊಳಗೊಂಡ ಶಾಸನಗಳಲ್ಲಿ ಶೈವವಾತಾವರಣ ತಕ್ಕಮಟ್ಟಿಗೆ ತುಂಬಿನಿಂತಿದೆ.

ಇದರಿಂದ ಬಸವಣ್ಣನವರ ತರುವಾಯ ಯಾವುದರಲ್ಲಿ ಯಾವುದು ವಿಲೀನಗೊಂಡಿತು ಎಂದು ಸಂದೇಹ ಬರುವ ರೀತಿಯಲ್ಲಿ ಶೈವ-ವೀರಶೈವಗಳು ಒಂದಾಗತೊಡಗಿದವೆಂದು ಹೇಳಬೇಕಾಗುತ್ತದೆ. ಲಕ್ಕಣಾಮಾತ್ಯನು ವೀರಶೈವನೆಂದು ಪ್ರತೀತಿ ಇದ್ದರೂ ಇವನ ಗುರು ಪಾಶುಪತನಾಗಿರುವುದು, ಶಿವತತ್ವಚಿಂತಾಮಣಿಯ ಮಹಾಪುರುಷರ ಮಾಲಿಕೆಯಲ್ಲಿ ಆಕಾಶವಾಸಿಯತಿ ಮೊದಲಾದ ಶೈವರು ಸಮಾವೇಶಗೊಂಡುದು, ಚೌಡದಾನಪುರ ಶಿವದೇವನು "ಲಿಂಗಕ್ಕೆ ಜಂಗಮಕ್ಕಂ ಹಿಂಗದೆ ದಾಸತ್ವಂ ಮಾಳ್ಪುದೆ ಬೆಸನೆಂದಾ ಸಂಗನಬಸವಂ ಬೆಸಸೆ" ಅದನ್ನು ನಿಷ್ಠೆಯಿಂದ ನೆರವೇರಿಸುತ್ತ, ಈ ಕಡೆ ಸ್ಥಾವರಲಿಂಗಪೂಜೆ, ದೇವಾಲಯ ನಿರ್ಮಾಣಕಾರ್ಯಗಳಲ್ಲಿ ತೊಡಗಿದುದು ಇಂಥ ಮಿಶ್ರಣವನ್ನು ಬೆಂಬಲಿಸುತ್ತದೆ. ಇವರು ಶೈವರೂ ಹೌದು ವೀರಶೈವರೂ ಹೌದು ಎನಿಸುತ್ತದೆ. ಮುಂದೆ ಹೆಸರಿಗೆ ವೀರಶೈವ ಮೇಲುಗೈಯಾದರೂ, ಶೈವದ ದೇವಾಲಯನಿರ್ಮಾಣ, ಮೂರ್ತಿಪೂಜೆಗಳು ಯಾವ ಕಾಲಕ್ಕೂ ವೀರಶೈವದಿಂದ ಹೊರಗಾಗಲಿಲ್ಲ. ಇಷ್ಟೆ ಏಕೆ, ಇವುಗಳನ್ನು ಬಿಟ್ಟರೆ ವೀರಶೈವದ ಆಚರಣೆಗಳಿಲ್ಲ ಎಂಬಷ್ಟರ ಮಟ್ಟಿಗೆ ಅವು ವೀರಶೈವದ ಸೋಗುಹಾಕಿ ತಳವೂರಿದವು. ಅದಕ್ಕಾಗಿ ವೀರಶೈವ ಶರಣರನ್ನು ಕುರಿತ ಎಲ್ಲ ಶಾಸನಗಳಲ್ಲಿ ದೇವಾಲಯ ಜೀರ್ಣೋದ್ಧಾರ, ದಾನಸ್ವೀಕಾರಗಳು ತಪ್ಪದೇ ಬಂದಿವೆ. ಸ್ವತಃ ಬಸವಣ್ಣನವರ ವಂಶದ ಹಾಲಬಸವಿದೇವನೇ ಚೌಡಿಸೆಟ್ಟಿ ನಾಗರಸರಿಂದ ದಾನ ಸ್ವೀಕರಿಸಿದುದನ್ನು ಇಲ್ಲಿ ನೆನೆಯಬೇಕು. ಹೀಗಾಗಿ ಶಾಸನಗಳಲ್ಲಿ ವೀರಶೈವ ತತ್ವ–ಆಚಾರಗಳಿಗೆ ಸಂಬಂಧಿಸಿದ ಅಂಶಗಳು ಅಷ್ಟಾಗಿ ಸಿಗದೆ (ಅದು ಶಾಸನದ ವಿಷಯವೂ ಅಲ್ಲ) ವೀರಶೈವ ಮಹಾಪುರುಷರ ಶುದ್ಧಚರಿತ್ರೆಯ ಸಂಗತಿಗಳು ಮಾತ್ರ ತಕ್ಕಮಟ್ಟಿಗೆ ದೊರೆಯುವುವೆಂದು ಹೇಳಬಹುದು.

ಕೊನೆಯದಾಗಿ, ಕೆಲವು ಶಾಸನಗಳು ಸಾಹಿತ್ಯದೃಷ್ಟಿಯಿಂದ ಸಾಂಪ್ರದಾಯಿಕವಾಗಿದ್ದರೂ ಏಕಾಂತರಾಮಯ್ಯನ ಅಬ್ಬಲೂರ ಶಾಸನ, ಶಿವದೇವನ ಚೌಡದಾನಪುರ ಶಾಸನ ಮೊದಲಾದುವು ವೀರಶೈವಪುರಾಣಗಳ ಚೌಕಟ್ಟನ್ನು ಅನುಸರಿಸಿ ಪುಟ್ಟ ಪುರಾಣಗಳಂತೆ ಶೋಭಿಸಿವೆ. ದೇವತಾಸ್ತುತಿ, ಕೈಲಾಸವರ್ಣನೆ, ಶಿವಸಭೆ, ನಾರದನ ಬಿನ್ನಹ, ಶಿವಗಣದಲ್ಲೊಬ್ಬನ ಅವತಾರ, ಶರಣನಾದ ಆತನ ಲೀಲೆ-ಹೀಗೆ ಮುಂದುವರಿದಿವೆ. ಮರಡಿಪುರ ಶಾಸನದ ಕಲಿದೇವರ ಪ್ರಶಸ್ತಿಗದ್ಯ, ತಾಳಿಕೋಟಿ ಶಾಸನದ 'ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ' ಪ್ರಶಸ್ತಿಗದ್ಯಗಳು ಬಣ್ಣತುಂಬಿ ನಿಂತಿವೆ. ಪ್ರಸಾದಿದೇವ, ಗೋಸಲಾರ್ಯ, ತೋಂಟದಾರ್ಯರ ಮಂಗಲವರ್ಣನೆ ಹೃದಯಂಗಮವಾಗಿದೆ. ಅಬ್ಬಲೂರ, ಕುಡತಿನಿ, ಇಂಗಳಗಿ, ತಾಳಿಕೋಟೆ ಶಾಸನಗಳಲ್ಲಿಯ ಭಾವಭಾಷೆಗಳು ಸಂದರ್ಭಕ್ಕೆ ತಕ್ಕಂತೆ ವೀರೋಚಿತವಾಗಿವೆ. ಅಪ್ಪಯ್ಯ ದೇವರಸರ ಗುರುಕಾರುಣ್ಯ ವರ್ಣನೆ ಹರಿಹರನನ್ನು ನೆನಪಿಗೆ ತರುತ್ತದೆ. ಸಿದ್ಧರಾಮನ ಶಾಸನಗಳಲ್ಲಿ ಕಂಡುಬರುವ ಒಂದು ಗದ್ಯಖಂಡ ಸಂಸ್ಕೃತಕ್ಕೆ ಅನುವಾದಗೊಂಡಿದೆ. ಚೌಡದಾನಪುರ ಮಾವನೂರ ಶಾಸನಗಳಲ್ಲಿ ವಚನಸಾಹಿತ್ಯದ ಪ್ರಭಾವವಿದ್ದರೆ,

ಚಿತ್ರದುರ್ಗ ಶಾಸನದಲ್ಲಿ ತೋಂಟದ ಸಿದ್ಧಲಿಂಗಮಯತಿಗಳ ಒಂದು ವಚನವನ್ನೇ ಬಳಸಲಾಗಿದೆ. ಈ ಎಲ್ಲ ದೃಷ್ಟಿಯಿಂದ ಮೇಲಣ ಸಕಲ ಶಾಸನಗಳನ್ನು ರಕ್ಷಿಸುವುದು, ಅವುಗಳನ್ನು ಪರಿಷ್ಕರಿಸಿ ಒಂದೆಡೆ ಪುಸ್ತಕರೂಪದಲ್ಲಿ ಸಂಗ್ರಹಿಸುವುದು ಅತ್ಯವಶ್ಯವೆನಿಸಿದೆ. ಇಂಥಹದೇ ಇನ್ನೊಂದು ಕಾರ್ಯ, ಶರಣರ ವಿಗ್ರಹಗಳ ರಕ್ಷಣೆ ಮತ್ತು ಅವುಗಳ ಚಿತ್ರಸಂಗ್ರಹ. ನಂಜನಗೂಡ, ಚಾಮರಾಜನಗರ, ಬಳ್ಳಾರಿಗಳಲ್ಲಿ ಅರುವತ್ತುಮೂವರ ವಿಗ್ರಹಗಳು, ಅಬ್ಬಲೂರಲ್ಲಿ ಜೇಡರದಾಸಿಮ್ಮ, ಸಿರಿಯಾಳ ಚೆಂಗಳೆ, ಕುಂಬಾರ ಗುಂಡರ ಪಿಗ್ರಹಗಳಲ್ಲದೆ ಏಕಾಂತರಾಮ್ಯನ ಶಿರಸ್ಸು ಪವಾಡದ ವಿವಿಧ ದೃಶ್ಯಗಳನ್ನು ವ್ಯಕ್ತಪಡಿಸುವ ವಿಗ್ರಹಗಳು, ಅಂತರವಳ್ಳಿಯಲ್ಲಿ ಮೂರುಜಾವಿದೇವನ ವಿಗ್ರಹ, ಬನವಾಸಿಯಲ್ಲಿ ಲದ್ದೆ ಸೋಮಣ್ಣ, ಮೋಳಿಗೆಅಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ, ಹೋಳಿನ ಹಂಪಣ್ಣ, ಅಗ್ಗಣಿ ಹೊನ್ನಯ್ಯ, ಲದ್ದೆ ಸೋಮಣ್ಣ, ಗುಂಡ ಬ್ರಹ್ಮಯ್ಯರ ವಿಗ್ರಹಗಳು ಇವೆ. ಹಾವೇರಿ, ನೀತಿಗೆರೆ, ಚಿತ್ರದುರ್ಗ, ಕುಸ್ಕೂರು, ಗುಂಡೇನಹಳ್ಳಿ ಮತ್ತು ಬಳ್ಳಾರಿಗಳಲ್ಲಿ ಗುಂಡಬ್ರಹ್ಮಯ್ಯನ ವಿಗ್ರಹಗಳು ಲಭಿಸಿವೆ. ಕೆಲವು ಕಡೆ ರೇವಣಸಿದ್ಧ ಮೊದಲಾದವರ ವಿಗ್ರಹಗಳಿವೆಯೆಂದು ತಿಳಿದುಬಂದಿದೆ. ಹಾಳಾಗಿ ಹೋಗುವ ಮೊದಲು ಇವುಗಳನ್ನು, ಕೊನೆಯಪಕ್ಷ ಇವುಗಳ ಚಿತ್ರವನ್ನು ಒಂದೆಡೆ ಸಂಗ್ರಹಿಸುವುದು ಅವಶ್ಯವೆನಿಸಿದೆ. ಇದಲ್ಲದೆ ಹೊಸ ಶಾಸನಗಳ ಸಂಶೋಧನ, ಶರಣರ ಕಾರ್ಯಕ್ಷೇತ್ರಗಳ ಉತ್ಖನನಗಳು ಅತಿ ಮುಖ್ಯಕಾರ್ಯಗಳಾಗಿದ್ದು ಸಂಶೋಧಕರಿಗೆ ದುಡಿಯಲು ಅಲ್ಲಿ ಒಳ್ಳೆಯ ಅವಕಾಶವಿದೆ.

❖❖

ಅನುಬಂಧ

ಶರಣರು : ಶಾಸನದ ಆಕರಗಳು

ಸಾಹಿತ್ಯಋಣ

ಸಂಕ್ಷಿಪ್ತಗಳು

ಶರಣರು : ಶಾಸನದ ಆಕರಗಳು
(ಮುಂದಣ ಅಂಕಿಗಳು ಈ ಪುಸ್ತಕದ ಪುಟಗಳನ್ನು ಸೂಚಿಸುತ್ತವೆ)

EI.V. ಪು. ೨೪೫, ಅಬ್ಬಲೂರು, ಕ್ರಿ.ಶ. ೧೨೦೦?

EI.XXIX. ಪು. ೧೪೨, ಅಬ್ಬಲೂರು, ಕ್ರಿ.ಶ. ೧೨೦೦?

EC.V-ii ಅರಸಿಕೆರೆ ೧೦೯, ಹಿರಿಯೂರ, ಕ್ರಿ.ಶ. ೧೨೫೯

EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ದೇವರಸ

EC.XV ಹೊಳೆನರಸಿಪುರ ೧೧೨, ಮಾವನೂರ, ಕ್ರಿ.ಶ. ೧೨೮೪ ೧೩೨

ದೇವರಾಜ

EI.XXI. ಪು.೯, ಅರ್ಜುನವಾಡ, ಕ್ರಿ.ಶ. ೧೨೬೦ ೬೦

ನಂಜೇದೇವ

EC.XI. ಕುಣಿಗಲ್ ೪೯, ಎಡೆಯೂರ ೧೫೫

ನಂಬಿಯಣ್ಣ (ಸೌಂದರ-)

EI.XX. ನಂ.೧೨, ಬೆಣಚಮಟ್ಟಿ ಕ್ರಿ.ಶ. ೧೧೮೭ ೧೮

EC.V-ii ಅರಸಿಕೆರೆ ೧೦೯, ಹಿರಿಯೂರ, ಕ್ರಿ.ಶ. ೧೧೫೯

EC.XI ಜಗಳೂರ ૩೦, ಕಲ್ಲೆದೇವರಪುರ, ಕ್ರಿ.ಶ. ೧೨೭೯

EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

EC.VI ಅರಕಲಗೂಡ ೪೭, ಕೇರಲಾಪುರ, ಕ್ರಿ.ಶ. ೧೩೬೨

ನಂಬಿ (ಕಡವಲ-)

EC.XI ಜಗಳೂರ ೩೦, ಕಲ್ಲೆದೇವರಪುರ, ಕ್ರಿ.ಶ. ೧೨೭೯ ೧೯

ನಾಗದೇವರು

ಶ.ಸಾ. ೨೧-೨ ಮತ್ತು ೩. ಗುಮ್ಮಳಾಪುರ, ಕ್ರಿ.ಶ. ೧೪೭೪ ೧೪೪

ನಾಚಯ್ಯ (ಮಾರುಡಿಗೆ-)

SII.XV. ೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೨

ನಿರ್ಮಾಯಗಣೇಶ್ವರ

MAR. 1930 ಪು. ೧೩೮, ಹರದನಹಳ್ಳಿ, ಕ್ರಿ.ಶ. ೧೩೪೫ ೧೪೮

ಪಟ್ಟಣದೇವ

EC.XI ಕುಣಿಗಲ್ ೪೯, ಎಡೆಯೂರ ೧೫೫

ಪರ್ವತಯ್ಯ

EC.XV ಹೊಳೆನರಸಿಪುರ ೧೧೨, ಮಾವನೂರ, ಕ್ರಿ.ಶ. ೧೨೮೪ ೧೩೨

ಪ್ರಭು (ಬಿಟ್ಟಮಂಡೆ-)

ಶ.ಸಾ. ೨೧-೨ ಮತ್ತು ೩. ಗುಮ್ಮಳಾಪುರ, ಕ್ರಿ.ಶ. ೧೪೨೪ ೧೪೫

ಪ್ರಭುದೇವ

ಶ.ಸಾ. ೨೦-೪, ಸಿದ್ಧಾಪುರ ಕ್ರಿ.ಶ. ೧೧೫೮ ೭೫

ಶ್ರೀ ಬಸವೇಶ್ವರನ ಕಾಲ ಪು. ೭೩ ಆನಂದಪುರ, ಕ್ರಿ.ಶ. ೧೬೬೦

EC.XII ಮದ್ದಗಿರಿ ೮, ಜೋಡಿದಾಸೇನಹಳ್ಳಿ, ಕ್ರಿ.ಶ. ೧೬೮೬

EC.IX ದೊಡ್ಡಬಳ್ಳಾಪುರ ೮೬, ಚಿಕ್ಕಹೆಜ್ಜಾಜಿ

ಪ್ರಸಾದಿದೇವ

EC.IX ಜಗಳೂರ ೩೦, ಕಲ್ಲೆದೇವರಪುರ, ಕ್ರಿ.ಶ. ೧೨೭೯ ೬೮

ಶಸಾ ೨೧-೨ ಮತ್ತು ೩ ಗುಮ್ಮಳಾಪುರ, ಕ್ರಿ.ಶ. ೧೪೭೪ ೧೪೬

ಪೊನ್ನಯ್ಯ (ಹುಲಿಗೆರೆಯ-)

EC.XI ಜಗಳೂರ ೩೦, ಕಲ್ಲೆದೇವರಪುರ, ಕ್ರಿ.ಶ. ೧೨೭೯ ೧೦೨

EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ಬಂಕಯ್ಯ

EC.XI ಜಗಳೂರ ೩೦, ಕಲ್ಲೆದೇವರಪುರ, ಕ್ರಿ.ಶ. ೧೭೯ ೧೦೨

ಬಸವ (ಎಮ್ಮೆ-)

MAR. 1944 ನಂ. ೨೫ ನಂಜನಗೂಡ, ಕ್ರಿ.ಶ. ೧೫೪೩ ೧೪೨

ಬಸವಣ್ಣ

EC.V-ii. ಅರಸಿಕೆರೆ-೧೦೯, ಹಿರಿಯೂರ, ಕ್ರಿ.ಶ. ೧೨೫೯ ೫೪

EC.XXI ಅರ್ಜುನವಾಡ, ಕ್ರಿ.ಶ. ೧೨೬೦

ಕ.ಭಾ. ೯-೪ ಅರ್ಜುನವಾಡ, ಕ್ರಿ.ಶ. ೧೨೬೦?

ಶಿವದೇವವಿಜಯ, ಅನು, ಚೌಡದಾನಪುರ, ಕ್ರಿ.ಶ. ೧೨೬೦

ಶಿವದೇವವಿಜಯ, ಅನು, ಚೌಡದಾನಪುರ, ಕ್ರಿ.ಶ. ೧೨೬೩

EC.XI. ಜಗಳೂರ ೩೦, ಕಲ್ಲೆದೇವರಪುರ, ಕ್ರಿ.ಶ. ೧೨೭೯

EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

SII.XV. 658, ಗುಡಿಹಾಳ-ಕುಂಟೋಜಿ, ೧೪ನೆಯ ಶತಮಾನ

ಕ.ಭಾ. ೬-೪, ನಾಗಲೋಟಿ, ಕ್ರಿ.ಶ. ೧೬೨೪

ಶ್ರೀಬಸವೇಶ್ವರನ ಕಾಲ, ಪು. ೭೩, ಆನಂದಪುರ, ಕ್ರಿ.ಶ. ೧೬೬೦

EC.XI ಮೊಳಕಾಲ್ಮೂರು-೨೫, ಸಂತೆಗೋವಿ, ಕ್ರಿ.ಶ. ೧೬೬೫

EC.XII. ಮದ್ದಗಿರಿ ೮, ಜೋಡಿದಾಸೇನಹಳ್ಳಿ, ಕ್ರಿ.ಶ. ೧೬೮೬

EC.IX. ಕಾನಕಾನಹಳ್ಳಿ , ಕಾನಕಾನಹಳ್ಳಿ, ಕ್ರಿ.ಶ. ೧೭೦೦

EC.IX. ಕಾನಕಾನಹಳ್ಳಿ ೯೧, ಕಾನಕಾನಹಳ್ಳಿ, ಕ್ರಿ.ಶ. ೧೭೦೦

MAR 1930 ಪು.೧೯೩ ಸುತ್ತೂರು ಕ್ರಿ.ಶ. ೧೭೭೧,

MAR 1935 ಪು.೧೦೩ ಹಿರೇಕೋಗಿಲೂರು, ೧೮ನೆಯ ಶತಮಾನ

MAR 1933 ನಂ. ೩೬, ಸಂತೆಮರಹಳ್ಳಿ,

EC.IX ದೊಡ್ಡಬಳ್ಳಾಪುರ ೪೬, ಚಿಕ್ಕಹೆಜ್ಜಾಜಿ ೧೪೪

ಬಸವಣ್ಣದೇವ

ಶ.ಸಾ. ೨೧-೨ ಮತ್ತು ೩. ಗುಮ್ಮಳಾಪುರ. ಕ್ರಿ.ಶ. ೧೪೭೪

ಬಸವಪ್ಪೊಡೆಯ (ಭಂಡಾರಿ-)

EC.III (೧೯೭೪) ನಂಜನಗೂಡು ೩೯೫, ೩೯೬, ಕ್ರಿ.ಶ. ೧೫೧೪ ೧೪೭

ಬಾಣ

EC.VIII ನಗರ ೩೫, ಹುಮ್ಮಚ, ಕ್ರಿ.ಶ. ೧೦೭೭. ೨೩
BKI-I-i ನಂ. ೧೪೭, ಚಿಕ್ಕಹಂದಿಗೋಳ ಕ್ರಿ.ಶ. ೧೦೯೯
ಧಾ.ತಾ.ಶಾ. ನಂ. ೬೨ ಮುಮ್ಮಿಗಟ್ಟಿ, ಕ್ರಿ.ಶ. ೧೧೨೪
EC.XII ಚಿಕ್ಕನಾಯಕನಹಳ್ಳಿ ೧೮, ತಂಡಗದ ಗ್ರಾಮ, ಕ್ರಿ.ಶ. ೧೧೪೯
EC.XX ನಂ.೧೨, ಬೆಣಚಮಟ್ಟಿ, ಕ್ರಿ.ಶ. ೧೧೮೨
SII.XX ನಂ. ೧೭೮, ಹಿಪ್ಪರಗಿ, ಕ್ರಿ.ಶ. ೧೧೯೨
EI.V. ಪು. ೨೪೫, ಅಬ್ಬಲೂರು, ಕ್ರಿ.ಶ. ೧೨೦೦?
SII.XVII. ಪು.೮, ಕುಡತಿನಿ, ಕ್ರಿ.ಶ. ೧೨೧೦
EC.V-ii ಅರಸಿಕೆರೆ ೧೦೯, ಹಿರಿಯೂರ, ಕ್ರಿ.ಶ. ೧೨೫೯
EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦.

ಬೆಳ್ಳಪ

EC.V-ii ಚೆನ್ನರಾಯಪಟ್ಟಣ ೨೧೦, ಬಿದರೆ, ಕ್ರಿ.ಶ. ೧೧೬೫ ೩೭

ಬೋಳಬಸವರಾಜದೇವರು

EC.XI ಕುಣಿಗಲ್ ೪೯, ಎಡೆಯೂರು ೧೫೫

ಭೋಗಣ್ಣ (ಕೆಂಬಾವಿ-)

SII-XV ನಂ. ೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೪
EC.V-ii ಅರಸಿಕೆರೆ ೧೦೯, ಹಿರಿಯೂರ, ಕ್ರಿ.ಶ. ೧೨೫೯
EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ಭೋಜ

EC.XI ಜಗಳೂರ ೩೦, ಕಲ್ಲೆದೇವರಪುರ, ಕ್ರಿ.ಶ. ೧೨೭೯ ೨೮

ಮಯೂರ

EC.VIII. ನಗರ ೩೫, ಹುಮ್ಮಚ, ಕ್ರಿ.ಶ. ೧೦೭೭ ೨೫
EC.XII. ಚಿಕ್ಕನಾಯಕನಹಳ್ಳಿ ೧೮, ತಂಡಗದ ಗ್ರಾಮ, ಕ್ರಿ.ಶ. ೧೧೪೯
SII.XX. ನಂ. ೧೭೮, ಹಿಪ್ಪರಗಿ, ಕ್ರಿ.ಶ. ೧೧೯೨
EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ಮಲ್ಲಣಾರ್ಯ (ಗುಬ್ಬಿಯ-)

EC.XVI ಪು. ೩೦, ಗುಬ್ಬಿ, ಕ್ರಿ.ಶ. ೧೮೯೬. ೧೫೨

ಮಲ್ಲಿಕಾರ್ಜುನ (ಅಮರಗುಂಡ-)

EC.XVI ಪು. ೩೦, ಗುಬ್ಬಿ, ಕ್ರಿ.ಶ. ೧೮೯೬. ೪೭

ಮಲ್ಲಿಕಾರ್ಜುನಾರಾಧ್ಯ

ಶ.ಸಾ. ೨೧-೨ ಮತ್ತು ೩ ಗುಮ್ಮಳಾಪುರ, ಕ್ರಿ.ಶ. ೧೪೭೪ ೧೪೪

ಮಸಣಯ್ಯ (ಅಂ + ಗಜೇಶ)

ಕರ್ನಾಟಕ ಭಾರತಿ ೬-೨ ೧೦೩

ಮಳಯೇಶ್ವರ

EI.V. ಪು. ೨೪೫, ಅಬ್ಬಲೂರು, ಕ್ರಿ.ಶ. ೧೨೦೦? ೨೮

ಮಾಚಿದೇವ (ಮಡಿವಳ-)

ಕರ್ನಾಟಕ ಭಾರತಿ ೬-೪, ಅಮ್ಮಿನಭಾವಿ, ಕ್ರಿ.ಶ. ೧೨೮೪ ೮೬

ಕರ್ನಾಟಕ ಭಾರತಿ ೬-೪ ಮುಳುಗುಂದ (ವಿಗ್ರಹ)

EC.IX ಕಾನಕಾನಹಳ್ಳಿ ೮೯, ಕಾನಕಾನಹಳ್ಳಿ, ಕ್ರಿ.ಶ. ೧೭೦೦

Basaveshvara and his times, p. 264, ಕಲ್ಯಾಣ (?)

ಮಾಯಿದೇವಪಂಡಿತ (ಪುರಾಣದ-)

EC.V ಬೇಲೂರ ೨೪೪, ಗಿರಿಸಿದ್ಧಾಪುರ, ಕ್ರಿ.ಶ. ೧೨೮೪ (ಪರಿಶಿಷ್ಟ) ೧೧೬

ಮಾಯಿದೇವ (ಶಿವರಾತ್ರಿ-)

EC.V ಬೇಲೂರ ೨೪೪, ಗಿರಿಸಿದ್ಧಾಪುರ, ಕ್ರಿ.ಶ. ೧೨೮೪ (ಪರಿಶಿಷ್ಟ) ೧೧೬

ಮಾರಯ್ಯ (ಆಯ್ದಕ್ಕಿ-)

ವಿಭೂತಿ ೨೭೩, ಬನವಾಸಿ ಮಧುಕೇಶ್ವರ ದೇವಾಲಯದ ವಿಗ್ರಹ ೧೦೩

ಮಾರಯ್ಯ (ಮೋಳಿಗೆಯ-)

ವಿಭೂತಿ ೨೭೩, ಬನವಾಸಿ ಮಧುಕೇಶ್ವರ ದೇವಾಲಯದ ವಿಗ್ರಹ ೧೦೩

ಮಾರೆಯನಾಯಕ

EC.III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦. ೬೯

ಮುರಿಗೆಸ್ವಾಮಿ

EC.v-ii ಹಾಸನ ೧೫೫, ಹುಲಕುಂದೆ, ಕ್ರಿ.ಶ. ೧೪೭೮. ೧೬೪

ಮೂರುಜಾವದ ದೇವರು

SII-IX-i ೧೨೪, ಹಿರೇಮಗಲಗೇರಿ, ಕ್ರಿ.ಶ. ೧೦೫೯ ೧೦೮

SII-XX 198 ಲಕ್ಷ್ಮೇಶ್ವರ, ಕ್ರಿ.ಶ. ೧೨೨೭

KI-VI No. 44 ರಟ್ಟಿಹಳ್ಳಿ, ಕ್ರಿ.ಶ. ೧೨೩೮

SII-XX 228, 332 ಕಲಕೇರಿ

ಮೊಲ್ಲೆ ಬೊಮ್ಮಣ್ಣ

ಕೊಪ್ಪಳ ಜಿಲ್ಲೆಯ ಶಾಸನಗಳು - ಯಲಬುರ್ಗಾ, ೧೨, ೧೭ ಕಲ್ಲೂರು ೧೧೫೪, ೧೧೮೬

ರಾಚಮಲ್ಲ (ಕುರುಗೋಡ-)

ಸಿದ್ಧರಾಮಪುರಾಣ, ಮುನ್ನುಡಿ ಪು. ೨೦ ೧೦೭

ರಾಚವಟ್ಟಿದೇವ (ಪುರಾಣದ-)

EC.VIII-ii ತೀರ್ಥಹಳ್ಳಿ ೯೫, ಕವಲೇದುರ್ಗ ಕ್ರಿ.ಶ. ೧೭೦೯ ೧೬೪

ರಾಮಚಂದ್ರ (ಯಾದವ-)

ಶಿವತತ್ವಚಿಂತಾಮಣಿ, ೩೮-೧೩೮ ೧೧೪

ರಾಮಯ್ಯ(ಏಕಾಂತ-)

SII-XV ನಂ.೫೬, ತಾಳಿಕೋಟೆ ಕ್ರಿ.ಶ. ೧೧೮೪

EI.V. ಪು. ೨೪೫, ಅಬ್ಬಲೂರ, ಕ್ರಿ.ಶ. ೧೨೦೦?

EI.XIX ಪು. ೧೪೧, ಅಬ್ಬಲೂರ, ಕ್ರಿ.ಶ. ೧೨೦೦?

EI.XIX ಪು. ೧೪೧, ಅಬ್ಬಲೂರ, ಕ್ರಿ.ಶ. ೧೨೦೦?

EC.VII (ಹೊಸ) ಶಿಕಾರಿಪುರ ೨೩೫, ಬಂದಳಿಕೆ ಕ್ರಿ.ಶ. ೧೨೦೭

SII-XVII ಪು.೮, ಕುಡತಿನಿ, ಕ್ರಿ.ಶ. ೧೨೧೦

EC-III-i ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ARSIE 1958-59 ನಂ.೫೪೩, ಭೋಗಾವಿ.

EC.IV (ಹೊಸ) ಚಾಮರಾಜನಗರ, ೧೪೪, ಕೆಂಪನಪುರ, ೧೫ನೆಯ ಶತಮಾನ.

ಶಿವಯೋಗಿ ಶಾಂತಿಮಯ್ಯ

ಮಾರ್ಗ IV ರಲ್ಲಿಯ 'ಕುರುಬರ ಗುರು ಶಾಂತಮುತ್ತಯ್ಯ' ಲೇಖನದಲ್ಲಿ ಇವನ ೪ ಶಾಸನಗಳ ಚರ್ಚೆಯಿದೆ.

ರೇವಣಸಿದ್ಧ ೪೮

EC. IX. ಹೊಸಕೋಟೆ ೧೨೩, ಬಯಿರತ್ತಿ, ಕ್ರಿ.ಶ. ೧೦೦೦?

ಕ.ಭಾ. ೯-೩ ಸಿರಿವಾಳ, ಕ್ರಿ.ಶ. ೧೧೮೭

ಶಿವದೇವವಿಜಯ, ಅನು. ಚೌಡದಾನಪುರ, ಕ್ರಿ.ಶ. ೧೨೬೩

SII-X.390 , ಲಕ್ಷ್ಮೇಶ್ವರ, ಕ್ರಿ.ಶ. ೧೫೧೩

ಶ್ರೀ ರೇವಣಸಿದ್ಧರು ಪು. ೩೨೬.

ಮಾರ್ಗ IV ಕೃತಿಯಲ್ಲಿ 'ರೇವಣಸಿದ್ದ' ಲೇಖನ ನೋಡಿರಿ.

ರೇವಣಸಿದ್ಧದೇವ

EC.XI. ನಂ.೫೬, ಕುಣಿಗಲ್ ೪೬, ಎಡೆಯೂರ ೧೫೫

ಲಕ್ಕಣದಂಡೇಶ

EC.XI. ಹೊಳಲ್ಕೆರೆ ೭೫, ರಾಮಗಿರಿ ಕ್ರಿ.ಶ. ೧೪೧೦ ೧೩೭

EC.X. ಕೋಲಾರ ೧೦೪, ಅಚಟ್ನಹಳ್ಳಿ, ಕ್ರಿ.ಶ. ೧೪೨೮

V.R. Volume II. 1229, ತೀರ್ಥಮಲ್ಲೈ, ಕ್ರಿ.ಶ. ೧೪೨೮

EC.X. ಬೌರಿಂಗಪೇಟೆ ೭೨, ಮರಗಲ್ಲು, ಕ್ರಿ.ಶ. ೧೪೩೦

EC.X. ಮುಳಬಾಗಿಲ ೭, ಮುಳಬಾಗಿಲ, ಕ್ರಿ.ಶ. ೧೪೩೧

EC.X. ಮುಳಬಾಗಿಲ ೯೬, ಮುಳಬಾಗಿಲ, ಕ್ರಿ.ಶ. ೧೪೩೧

EC.X. ಬೌರಿಂಗಪೇಟೆ ೮೭, ಮಿಟ್ಟಹಳ್ಳಿ, ಕ್ರಿ.ಶ. ೧೪೩೩

EC.X. ಮಾಲೂರ ೧, ತೇಕಲ್ಲು, ಕ್ರಿ.ಶ. ೧೪೩೪

MAR 1936 p. 36 ಕಿರಗಸೂರ, ಕ್ರಿ.ಶ. ೧೪೪೦?

SII.XVII. ೬೧೨, ತಿರುವರೂರ್, ಕ್ರಿ.ಶ. ೧೪೪೦

V.R. Volume II. ಪು. ೮೬೧, ಬಾರಕೂರ, ಕ್ರಿ.ಶ. ೧೪೪೦

V.R. Volume III. ಪು. ೧೫೩೮, ಆಡುತುರೈ, ಕ್ರಿ.ಶ. ೧೪೪೦

SII.XVII. ೬೧೧, ತಿರುವರೂರ್, ಕ್ರಿ.ಶ. ೧೪೪೦

V.R. Volume II. ಪು. ೧೩೪೭, ಸಿಕ್ಕೈಲ್, ಕ್ರಿ.ಶ. ೧೪೪೪

V.R. Volume II. ಪು. ೮೬೫, ಬಾರಕೂರ, ಕ್ರಿ.ಶ. ೧೪೬೩

EC.IX. ಹೊಸಕೋಟೆ ೧೩೦, ವಾಗಟ.
MAR 1936 p. 36 ಮಾದಾಪಟ್ನ (?)

ವಜ್ರರಾಯ (ಗೋವೆಯ-)
ಸಾನಂದಚರಿತೆ ೧೯-೮೩ ೧೧೫

ವೀರಕನ್ನಾದೇವಿ
ಶಿವದೇವವಿಜಯ, ಅನು, ಚೌಡದಾನಪುರ, ಕ್ರಿ.ಶ. ೧೨೬೩ ೧೨೯

ವೀರಣ್ಣದೇವರು (ಶರಣ-)
ಶ.ಸಾ. ೨೧-೨ ಮತ್ತು ೩ ಗುಮ್ಮಳಾಪುರ, ಕ್ರಿ.ಶ. ೧೪೭೪ ೧೪೪

ವೈಜಕವ್ವೆ (ಪರಿಯಳಿಗೆ-)
SII.XV. ನಂ. ೫೬, ತಾಳಿಕೋಟೆ ಕ್ರಿ.ಶ. ೧೧೮೪ ೩೩

ಶಾಂತದೇವರು
ಶ.ಸಾ. ೨೧-೨ ಮತ್ತು ೩. ಗುಮ್ಮಳಾಪುರ, ಕ್ರಿ.ಶ. ೧೪೭೪. ೧೪೪

ಶಾಂತದೇವರು (ವೀರಮಾಹೇಶ್ವರಗೋತ್ರದ-)
ಶ.ಸಾ. ೨೧-೨ ಮತ್ತು ೩. ಗುಮ್ಮಳಾಪುರ, ಕ್ರಿ.ಶ. ೧೪೭೪. ೧೪೪

ಶಾಂತಯ್ಯ (ನೆಲುವಿಗೆ-)
SII.XX. ೧೩೮, ಭೂಯಾರ, ಕ್ರಿ.ಶ. ೧೧೬೨ ೮೮
EC.VIII ಅರಕಲಗೂಡು ೮೩,ಕ್ರಿ.ಶ. ೧೨೬೧
EC.III-i. ಮಂಡ್ಯ ೮೩, ಮರಡಿಪುರ, ಕ್ರಿ.ಶ. ೧೨೮೦

ಶಿವದೇವ (ಚೌಡದಾನಪುರ-)
ಶಿವದೇವವಿಜಯ ಅನು. ಚೌಡದಾನಪುರ ಕ್ರಿ.ಶ. ೧೨೬೦ ೧೧೮
ಶಿವದೇವವಿಜಯ ಅನು. ಚೌಡದಾನಪುರ ಕ್ರಿ.ಶ. ೧೨೬೩
ಶಿವದೇವವಿಜಯ ಅನು. ಚೌಡದಾನಪುರ ಕ್ರಿ.ಶ. ೧೨೬೩
ಶಿವದೇವವಿಜಯ ಅನು. ಚೌಡದಾನಪುರ ಕ್ರಿ.ಶ. ೧೨೬೩
ಶಿವದೇವವಿಜಯ ಅನು. ಚೌಡದಾನಪುರ ಕ್ರಿ.ಶ. ೧೨೬೫
ಶಿವದೇವವಿಜಯ ಅನು. ಚೌಡದಾನಪುರ ಕ್ರಿ.ಶ. ೧೨೯೫
ಶಿವದೇವವಿಜಯ ಅನು. ಚೌಡದಾನಪುರ ?

ಶಿವದೇವ (ಗೊಪೆಯ-)
EC.V. ಬೇಲೂರ ೨೪೪, ಗಿರಿಸಿದ್ಧಾಪುರ, ಕ್ರಿ.ಶ. ೧೨೮೪ (ಪರಿಶಿಷ್ಟ) ೧೧೬

ಶಿವಶರಣ
EC.V. ಬೇಲೂರ ೨೪೪, ಗಿರಿಸಿದ್ಧಾಪುರ, ಕ್ರಿ.ಶ. ೧೨೮೪ (ಪರಿಶಿಷ್ಟ) ೧೧೬

ಶೀಲವಂತದೇವ
EC.XI. ಕುಣಿಗಲ್ ೪೯, ಎಡೆಯೂರ ೧೫೫

ಶ್ರೀಪತಿಪಂಡಿತ
SII.X. ನಂ. ೧೦, ಬೆಜವಾಡ ೪೭

ಸಕಳೇಶ ಮಾದರಸ
ರಾಯಚೂರು ಜಿಲ್ಲೆಯ ಶಾಸನಗಳು, ಮಾನ್ವಿ ೧೦೨, ಕ್ರಿ.ಶ.೧೧೯೬
ರಾಯಚೂರು ಜಿಲ್ಲೆಯ ಶಾಸನಗಳು, ಲಿಂಗಸೂಗೂರ ೪೦, ಕ್ರಿ.ಶ.ಸು.೧೨ನೆಯ ಶತ.

ಸಪ್ಪೇದೇವ

EC.XI. ಕುಣಿಗಲ್ ೪೯, ಎಡೆಯೂರ ೧೫೫

ಸಿಂಗಿದೇವ (ದಶಗಣ-)

ಶ.ಸಾ. ೨೧-೧ ಇಂಗಳಗಿ, ಕ್ರಿ.ಶ. ೧೨೦೯ ೩೨

ಸಿದ್ಧರಾಮ

SII.XX. ೧೧೭, ಚೊರ್ಗಿ, ಕ್ರಿ.ಶ. ೧೨೯೦

ಕರ್ನಾಟಕ ಭಾರತಿ ೪-೩, ನಿಲೇಗಾವ, ಕ್ರಿ.ಶ. ೧೧೯೨

SII.XX. ೧೮೧, ಸಂಖ, ಕ್ರಿ.ಶ. ೧೧೯೪

ಕರ್ನಾಟಕ ಭಾರತಿ ೪-೩, ಜಂಬಗಾವ, ಕ್ರಿ.ಶ. ೧೧೯೫

ಕರ್ನಾಟಕ ಭಾರತಿ ೪-೩, ಕೇಶೇಗಾವ, ಕ್ರಿ.ಶ. ೧೧೯೭

SII.XX. ೧೮೫, ಕೂಡಗಿ, ಕ್ರಿ.ಶ. ೧೨೦೧?

ಕರ್ನಾಟಕ ಭಾರತಿ ೪-೩, ಇಟ್ಕಲ್, ಕ್ರಿ.ಶ. ೧೨೧೭?

ಕರ್ನಾಟಕ ಭಾರತಿ ೩-೪, ಮಂತ್ರವಾಡಿ, ಕ್ರಿ.ಶ. ೧೨೩೪

SII.XX. ೨೦೧, ಕಪ್ಪನಿಂಬರಗಿ, ಕ್ರಿ.ಶ. ೧೨೪೩

SII.XX. ೧೮೪, ಗುಂಡಕರ್ಜಗಿ, ಕ್ರಿ.ಶ. ?

KI.II. ಪು. ೧೩೭, ಅಕ್ಕಲಕೋಟ, ಕ್ರಿ.ಶ. ೧೨೫೫

SII.XX. ೨೧೮, ಟಾಕಳಿ, ಕ್ರಿ.ಶ.?

SII.XX. ೧೯೦, ಘಡೇಕನೂರ, ಕ್ರಿ.ಶ. ೧೨೫೬

ECVIII. ಸೊರಬ ೫೬೧ ಕೋಳಿಸಾಲೆ, ಕ್ರಿ.ಶ. ೧೨೫೬

SII.XV. ೧೯೧, ಜತ್ತಿಗಿ, ಕ್ರಿ.ಶ. ೧೨೫೭?

KI.II. ಪು. ೧೪೧, ತಡವಳ, ಕ್ರಿ.ಶ. ೧೨೫೭?

KUJ.VI. 1962 ಬುಡರಸಿಂಗಿ, ಕ್ರಿ.ಶ. ೧೨೫೭?

SII.XV. ೧೯೫, ಕೊಟಬಾಗಿ, ಕ್ರಿ.ಶ. ೧೨೬೪

EI.XXIII. ಪು. ೧೮೯, ಸಂಗೂರ, ಕ್ರಿ.ಶ. ೧೨೬೫

SII.XV. ೨೦೬, ಯಡಹಳ್ಳಿ, ಕ್ರಿ.ಶ. ?

KUJ.VI. 1962 ಕಟನೂರ

SII.XX. ೩೪೨, ಚಡಚಣ, ಕ್ರಿ.ಶ. ೧೩೦೦

ಶ.ಶಾ. ೨೧-೧, ಇಂಗಳಗಿ, ಕ್ರಿ.ಶ. ೧೨೦೯

EC.III-i, ಮಂಡ್ಯ, ೮೩, ಮರಡಿಪುರ, ಕ್ರಿ.ಶ. ೧೨೮೦

EC.XVI. ಪು.೩೦, ಗುಬ್ಬಿ, ಕ್ರಿ.ಶ. ೧೮೯೬

ಸಿದ್ಧಲಿಂಗದೇವ (ಗುಮ್ಮಳಾಪುರ-)

EC.XI. ಕುಣಿಗಲ್ ೪೯, ಎಡೆಯೂರ ೧೫೫

ಸಿದ್ಧಲಿಂಗ (ತೋಂಟದ-)

EC.XI. ಕುಣಿಗಲ್ ೪೯, ಎಡೆಯೂರ ೧೫೩

EC.XII. ಕುಣಿಗಲ್ ೪೬, ಕಗ್ಗೇರಿ ೧೬೬೩

KI.VI. 44 ರಟ್ಟಿಹಳ್ಳಿ, ಕ್ರಿ.ಶ. ೧೨೩೮ ೧೧೩

EI.VI. 37 ರಟ್ಟಿಹಳ್ಳಿ

ಅಪ್ರಕಟಿತ, ಮಂತ್ರವಾಡಿ

EC.VII. ಹೊನ್ನಾಳಿ ೪೩, ಬೆಳಗುತ್ತಿ

EC.VIII. ಸೊರಬ ೧೭೫, ಹಕ್ಕಲುಗ್ರಾಮ

EC.VIII. ಸೊರಬ ೧೭೬, ಹಕ್ಕಲುಗ್ರಾಮ

ಶಿವದೇವವಿಜಯ, ಅನು. ಚೌಡದಾನಪುರ, ಕ್ರಿ.ಶ. ೧೨೬೦

ಇತರ

ಶಿವನಿಗೆ ಕರುಳನ್ನು ಅರ್ಪಿಸಿದ ಶರಣ ೨೧

SII.XVII. ಪು.೮, ಕುಡತಿನಿ, ಕ್ರಿ.ಶ. ೧೨೧೦

ಶಿವನಿಗೆ ಹಸ್ತಗಳನ್ನು ಅರ್ಪಿಸಿದ ಶರಣ ೨೧

SII.XVII. ಪು.೮, ಕುಡತಿನಿ, ಕ್ರಿ.ಶ. ೧೨೧೦

ಶಿವನಿಗೆ ಮಸ್ತಕವನ್ನು ಅರ್ಪಿಸಿದ ಶರಣ ೨೧

SII.XVII. ಪು.೮, ಕುಡತಿನಿ, ಕ್ರಿ.ಶ. ೧೨೧೦

ಅಣೆಲೆವಾಡಗ್ರಾಮದ ಶರಣ

SII.XV. ನಂ.೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೩

ಕರಹಾಡಗ್ರಾಮದ ಶರಣ

SII.XV. ನಂ.೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೪

ಉಣಕಲ್ಲುಗ್ರಾಮದ ಶರಣ

SII.XV. ನಂ.೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೩

ಬಮ್ಮಕೂರುಗ್ರಾಮದ ಶರಣ

SII.XV. ನಂ.೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೪

ಸಂಪಗಾವಿಗ್ರಾಮದ ಶರಣ

SII.XV. ನಂ.೫೬, ತಾಳಿಕೋಟೆ, ಕ್ರಿ.ಶ. ೧೧೮೪ ೩೩

ಪುರಾತನರು

SII.XV. ನಂ.೫೬, ತಾಳಿಕೋಟೆ, ಕ್ರಿ.ಶ. ೧೧೮೪ ೧೫

EI.V. ಪುಟ. ೨೪೫, ಅಬ್ಬಲೂರು, ಕ್ರಿ.ಶ. ೧೨೦೦

EI.XXI. ಪು.೯, ಅರ್ಜುನವಾಡ, ಕ್ರಿ.ಶ. ೧೨೬೦

EC.V. ಅರಕಲಗೂಡ ೪೭ ಕೇರಲಾಪುರ, ಕ್ರಿ.ಶ. ೧೩೬೨

ಪುರಾತನರು (ವಿಗ್ರಹ)

EC.IV-ii Appendix, ಪು.೭ ನಂಜನಗೂಡ ೧೪

EC.XVI. 247. ಚಾಮರಾಜನಗರ

ಬಳ್ಳಾರಿಯ ಮಲ್ಲಿಕಾರ್ಜುನ ದೇವಾಲಯ?

❖❖

ಸಾಹಿತ್ಯ ಋಣ

ಗ್ರಂಥಗಳು

ಅಲ್ಲಮನ ವಚನಚಂದ್ರಿಕೆ–ಸಂ. ಡಾ ಎಲ್. ಬಸವರಾಜು

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ–ಎಂ.ಎಂ. ಕಲಬುರ್ಗಿ, ಬಿ.ಆರ್. ಹಿರೇಮಠ

ಏಕಾಂತರಾಮಯ್ಯನ ರಗಳೆ-ಸಂ.ಡಾ. ಆರ್.ಸಿ. ಹಿರೇಮಠ

ಕರ್ನಾಟಕ ಕವಿಚರಿತೆ–ಆರ್. ನರಸಿಂಹಾಚಾರ್

ಕೆಲವು ಕನ್ನಡ ಕವಿಗಳ ಕಾಲವಿಚಾರ-ಎ. ವೆಂಕಟಸುಬ್ಬಯ್ಯ

ಗಿರಿಜಾಕಲ್ಯಾಣ ಮಹಾಪ್ರಬಂಧಂ (ಸಂಗ್ರಹ)-ಸಂ.ಎಚ್. ದೇವಿರಪ್ಪ ಮತ್ತು ದೇ. ಜವರೇಗೌಡ

ಗುರುರಾಜಚಾರಿತ್ರ–ಸಂ.ಎಸ್.ಎಸ್. ಭೂಸನೂರಮಠ

ಗುಂಡಬ್ರಹ್ಮಯ್ಯಗಳ ಚರಿತ್ರೆ–ಸಂ.ವಿ. ಶಿವಾನಂದ

ಗ್ರಾಮೀಣ–ಎಂ. ಚಿದಾನಂದಮೂರ್ತಿ

ಚಿತ್ರಭೆ–ಶ್ರೀ ಮೂರುಸಾವಿರಮಠ, ಹುಬ್ಬಳ್ಳಿ

ಚೆನ್ನಬಸವಪುರಾಣ–ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಚೆನ್ನಬಸವಣ್ಣನವರ ವಚನಗಳು–ಸಂ.ಆರ್.ಸಿ. ಹಿರೇಮಠ

ದಾಸಿಮಾರ್ಯ ಪ್ರಶಸ್ತಿ–ಸಂ.ಜ.ಚ.ನಿ.

ನಿರಂಜನವಂಶರತ್ನಾಕರ–ಸಂ.ಫ.ಗು. ಹಳಕಟ್ಟಿ

ಪದ್ಮರಾಜಪುರಾಣ–ಸಂ.ಆರ್.ಸಿ. ಹಿರೇಮಠ

ಬಸವಣ್ಣನವರ ವಚನಗಳು–ಸಂ.ಆರ್.ಸಿ. ಹಿರೇಮಠ

ಬಸವಣ್ಣನವರನ್ನು ಕುರಿತ ಶಾಸನಗಳು–ಎಂ.ಎಂ. ಕಲಬುರ್ಗಿ

ಬಸವನಾಳ ಸ್ಮಾರಕಸಂಪುಟ–ಬಸವನಾಳ ಸ್ಮಾರಕ ಸಮಿತಿ, ಧಾರವಾಡ

ಭಕ್ತಿಭಂಡಾರಿ ಬಸವಣ್ಣನವರು–ಎಂ.ಆರ್. ಶ್ರೀನಿವಾಸಮೂರ್ತಿ

ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ–ಸಂ.ಆರ್.ಸಿ. ಹಿರೇಮಠ

ಮಾದೇಶ್ವರ ಸಾಂಗತ್ಯ–ಬಿ. ಶಿವಮೂರ್ತಿಶಾಸ್ತ್ರಿ

ಮೂರು ಉಪನ್ಯಾಸಗಳು–ಗೋವಿಂದ ಪೈ

ರಾಘವಾಂಕಚರಿತೆ–ಸಂ.ಎಸ್.ಎಸ್. ಭೂಸನೂರಮಠ

ವಚನಕಾರ ಸಿದ್ಧಲಿಂಗಯತಿ–ಬೆಂಗಳೂರು ವಿ.ವಿ.

ವಿಭೂತಿ–ಶಿವಾದ್ವೈತ ತತ್ತ್ವ ಪ್ರಚಾರಕ ಸಮಿತಿ, ಗಿರಿಯಾಪುರ

ವೀರಶೈವಾಮೃತಮಹಾಪುರಾಣ–ಪ್ರ. ನಂಜುಂಡಶಾಸ್ತ್ರಿಗಳವರ ಶಿವಪ್ಪಶಾಸ್ತ್ರಿಗಳು

ಶಾಸನ ವ್ಯಾಸಂಗ- II– ಎಂ.ಎಂ. ಕಲಬುರ್ಗಿ

ಶಿವತತ್ವಚಿಂತಾಮಣಿ–ಸಂ. ಎಚ್. ದೇವೀರಪ್ಪ
ಶಿವದಾಸ ಗೀತಾಂಜಲಿ–ಸಂ. ಡಾ.ಎಲ್. ಬಸವರಾಜು
ಶಿವದೇವವಿಜಯ–ಸಂ.ಎಂ.ಜಿ. ನಂಜುಂಡಾರಾಧ್ಯ
ಶಿವಯೋಗಮಂದಿರದ ಬೆಳಗು–ಸಂ.ಜಿ.ಎಂ. ಉಮಾಪತಿಶಾಸ್ತ್ರಿಗಳು
ಶಿವಶರಣ ಕಥಾರತ್ನಕೋಶ–ತ.ಸು. ಶಾಮರಾಯ
ಶೂನ್ಯಸಂಪಾದನೆ–ಸಂ. ಎಸ್.ಎಸ್. ಭೂಸನೂರಮಠ
ಶ್ರೀಕಂಠತೀರ್ಥ–ಸಂ.ಎಂ. ಚಿದಾನಂದಮೂರ್ತಿ
ಶ್ರೀ ಬಸವೇಶ್ವರನ ಕಾಲ–ಚನ್ನಮಲ್ಲಿಕಾರ್ಜುನ
ಶ್ರೀ ಮಾದೇಶ್ವರಚರಿತ್ರೆ–ಬಿ. ಶಿವಮೂರ್ತಿ ಶಾಸ್ತ್ರಿ
ಶ್ರೀ ರೇವಣಸಿದ್ಧರು–ಚನ್ನಮಲ್ಲಿಕಾರ್ಜುನ
ಸಾನಂದಚರಿತೆ–(ಅಪ್ರಕಟಿತ)–ಕುಮಾರಪದ್ಮರಸ
ಸಿದ್ಧರಾಮಪುರಾಣ–ಸಂ.ಡಿ.ಎಲ್. ನರಸಿಂಹಾಚಾರ್
ಷಡಕ್ಷರಮುತ್ರಮಹಿಮೆ–ಸಂ.ಬಿ. ಶಿವಮೂರ್ತಿಶಾಸ್ತ್ರಿ
Basaveshvara and his time- P.B. Deasi
Karanataka Darshan-Commemmortion volume of R.R. Diwakar

ಪತ್ರಿಕೆಗಳು

ಶಿವಾನುಭವ

ಅಮುಗಿದೇವ ಅಥವಾ ಅಮಾಕಸಿದ್ಧನ ಶಿಲಾಶಾಸನ(೯-೬) – ಫ.ಗು. ಹಳಕಟ್ಟಿ.
ಅರ್ಜುನವಾಡದ ಶಿಲಾಶಾಸನದಲ್ಲಿರುವ ಶ್ರೀ ಬಸವೇಶ್ವರನ ವಂಶಜರ ವಿಚಾರವು (೨೨-೨)-ಟಿ.ಎನ್. ಮಲ್ಲಪ್ಪ
ಇತಿಹಾಸದ ಕಣಗಳು (೩-೧೧)–ಮಧುರಚೆನ್ನ
ಏಕಾಂತದ ರಾಮಯ್ಯ ಮತ್ತು ಅಬ್ಬಲೂರ ಶಿಲಾಶಾಸನ (೩-೧೨)–ಫ.ಗು. ಹಳಕಟ್ಟಿ
ಐತಿಹಾಸಿಕ ಟಿಪ್ಪಣಿಗಳು (೫-೯, ೧೦, ೧೧, ೧೨)–ಶಿ.ಚೆ. ನಂದೀಮಠ
ಚೌಡದಾನಪುರದ ಶಿಲಾಶಾಸನಗಳು (೪-೨,೩,೪)–ಶಿ.ಚೆ. ನಂದೀಮಠ
ಡಾ. ಚಿಲಕೂರಿ ನಾರಾಯಣರಾಯರ ವಿಧಾನಗಳು (೧೫-೧)–ಫ.ಗು. ಹಳಕಟ್ಟಿ
ಪುಲಿಗೆರೆ (ಲಕ್ಷ್ಮೇಶ್ವರ)ಯಲ್ಲಿ ಹೊಸದಾಗಿ ದೊರೆತ ಶಿಲಾಶಾಸನವು (೪-೩)–ವೀ.ರು. ಕೊಪ್ಪಳ
ಪೆರ್ಮಾಡಿರಾಯ (೧೩-೩)–ಫ.ಗು. ಹಳಕಟ್ಟಿ
ಬಸವಣ್ಣನಕಿಂತ ಪೂರ್ವದ ಕಾಲ (೧೩-೫, ೬)–ಫ.ಗು. ಹಳಕಟ್ಟಿ
ಬಸವಣ್ಣನವರ ಬಗ್ಗೆ ಹೊಸದಾಗಿ ಸಿಕ್ಕ ಶಿಲಾಲೇಖವು (೩-೯)–ಫ.ಗು. ಹಳಕಟ್ಟಿ
ಬಸವನ ಜನ್ಮಸ್ಥಳವಾವುದು? ೧೩-೮,೯)–ಫ.ಗು. ಹಳಕಟ್ಟಿ
ಬಸವೇಶ್ವರನು ಅವ ಬಿಜ್ಜಳನಲ್ಲಿದ್ದನು (೧೪-೬)–ಫ.ಗು. ಹಳಕಟ್ಟಿ
ಬಸವೇಶ್ವರನ ಕಾಲನಿರ್ಣಯ (೧೪-೨, ೩, ೪, ೫)–ಗೋವಿಂದ ಪೈ
ಬಸವೇಶ್ವವನು ಚಾರಿತ್ರಿಕಪುರುಷನೋ ಹೇಗೆ? (೧೪-೯)–ಫ.ಗು. ಹಳಕಟ್ಟಿ
ಬಸವೇಶ್ವರನು ಯಾವ ಬಿಜ್ಜಳನ ಕಾಲದಲ್ಲಿ ಇದ್ದನು (೧೩-೧೧)–ಫ.ಗು. ಹಳಕಟ್ಟಿ

ಬಿಜ್ಜಳ (೧೪-೧)–ಎಸ್. ಶ್ರೀಕಂಠಶಾಸ್ತ್ರಿ
ಮನಗೋಳಿಯ ಶಿಲಾಶಾಸನಗಳು (೧೩-೮,೯)–ಜೀರಗೆಕಟ್ಟೆ ಬಸವಪ್ಪ
ಮನಗೋಳಿ ಶಿಲಾಶಾಸನದ ಬಸವನು ಕಲ್ಯಾಣದ ಬಸವನೇ? (೧೩-೧೨)–ಜೀರಗೆಕಟ್ಟೆ ಬಸವಪ್ಪ
ಲಕ್ಷ್ಮೇಶ್ವರ ಶಾಸನದ ಸ್ಪಷ್ಟೀಕರಣವು (೪-೬)–ಸಿದ್ಧಾಂತಿ ಶಿವಬಸವಶಾಸ್ತ್ರಿಗಳು
ವರದಾನಿ ಗುಡ್ಡವ್ವೆಯ ಶಿಲಾಶಾಸನ (೧೩-೧೧)–ಫ.ಗು. ಹಳಕಟ್ಟಿ
ವೀರಶೈವದ ಪೂರ್ವದ ಹೆಸರು ಆವುದು (೧೩-೭, ೮)–ಫ.ಗು. ಹಳಕಟ್ಟಿ
ವೀರಶೈವ ಧರ್ಮದ ಪ್ರವರ್ತಕರ ಚರಿತ್ರ ಸಂಶೋಧನೆಯ ಆವಶ್ಯಕತೆ (೧-೨)–ಫ.ಗು. ಹಳಕಟ್ಟಿ
ವೀರಶೈವ ರಾಜಮನೆತನಗಳ ಚರಿತ್ರೆಗಳು (೧೭-೧,೨)–ಫ.ಗು. ಹಳಕಟ್ಟಿ
ವೀರಶೈವ ವಾಙ್ಮಯಾವತಾರ (೧೪-೭,೮,೯)–ಫ.ಗು. ಹಳಕಟ್ಟಿ
ವೀರಶೈವಾಙ್ಮಯಾವತಾರವನ್ನು ಕುರಿತು (೧೫-೩)–ಚಿದರೆಮಠ ವೀರಭದ್ರಶಾಸ್ತ್ರಿ
ವೀರಶೈವ ವಚನಕಾರರ ಕಾಲ (೧೪-೫,೬)–ಫ.ಗು. ಹಳಕಟ್ಟಿ
ಶಿಲಾಲೇಖಗಳಲ್ಲಿ ವೀರಶೈವಧರ್ಮದ ವಿವರಣೆ (೧೩-೯,೧೦)–ಫ.ಗು. ಹಳಕಟ್ಟಿ
ಶಿವಶರಣರ ಕಾಲ (೧೪-೪)–ಫ.ಗು. ಹಳಕಟ್ಟಿ
ಸಿದ್ಧರಾಮೇಶ್ವರನ ಸಂಗೂರ ಶಿಲಾಶಾಸನ (೧೩-೨)–ಫ.ಗು. ಹಳಕಟ್ಟಿ
ಸುಗ್ಗಲದೇವಿಯರ ಶಿಲಾಶಾಸನವು ತೊರಗಲ್ಲ (೩-೧೧)–ಶಿ.ಚೆ. ನಂದಿಮಠ

ಶರಣಸಾಹಿತ್ಯ

ಅರ್ಜುನವಾಡದ ಶಿಲಾಶಾಸನದಲ್ಲಿ ಬಸವೇಶ್ವರನ ವಂಶವಿಚಾರ (೧೦-೧೧)–ಟಿ.ಎನ್. ಮಲ್ಲಪ್ಪ
ಅರ್ಜುನವಾಡದ ಶಿಲಾಶಾಸನದ ೧೦ನೆಯ ಕಂದಪದ್ಯ (೧೦-೧೦, ೧೨)–ಗೋವಿಂದ ಪೈ
ಗುಮ್ಮಳಾಪುರದ ದಾನಶಾಸನಗಳು (೨೧-೨, ೩)–ಶಿ.ಚೆ. ನಂದಿಮಠ
ಬಸವೇಶ್ವರನ ವಂಶಕ್ರಮ (೧೦-೬, ೭)–ಕಪಟ್ರಾಳ ಕೃಷ್ಣರಾಯರು
ಲಿಂಗದೇವರ ನಿರ್ದೇಶನವುಳ್ಳ ಇಂಗಳಗಿಯ ಶಾಸನ (೨೧-೧)–ಪಿ.ಬಿ. ದೇಸಾಯಿ
ವೀರಶೈವ ಚರಿತ್ರೆಯ ನೂತನಾಂಶಗಳು (೨೦-೪)–ಪಿ.ಬಿ. ದೇಸಾಯಿ
ಶರಣಸಾಹಿತ್ಯದಲ್ಲಿ ನಡೆದಿರುವ ಇತಿಹಾಸ ಸಂಶೋಧನೆ (೧೩-೪)–ಹುಲ್ಲೂರ ಕೃಷ್ಣಜೋಯಿಸ
ಶಾಸನೋಕ್ತ ವೀರಶೈವರು (೨೩-೭)–ಬಿ.ಎಸ್. ಗದ್ದಿಗಿಮಠ
ಶ್ರೀ ಕೊಪ್ಪಳ ಗವಿಮಠದ ಚರಿತ್ರೆ (೯-೧೧)–ಬಿ. ಶಿವಮೂರ್ತಿಶಾಸ್ತ್ರಿ
ಶ್ರೀ ಶಾಸನ ಮಂಜರಿ (೧೮-೧೦) ಹುಲ್ಲೂರ ಕೃಷ್ಣಜೋಯಿಸ

ಪ್ರಬುದ್ಧ ಕರ್ನಾಟಕ

ಅಲಂಪೂರು (೨೫-೨)–ಪಿ.ಬಿ. ದೇಸಾಯಿ
ವೀರಶೈವ ವಾಙ್ಮಯಾವತಾರ (೨೧-೪)–ಚಿಲಕೂರಿ ನಾರಾಯಣರಾಯ
ಕೊಂಡಗುಳಿ ಕೇಶಿರಾಜ–ಒಂದು ಹೊಸ ಶಾಸನ, ಒಂದು ಹೊಸ ಕೃತಿ (೫೦-೩)–ಎಂ.ಎಂ. ಕಲಬುರ್ಗಿ
ಸಿದ್ಧನಂಜೇಶನ ಕಾಲ (೩೬-೨)–ಎಚ್. ದೇವೀರಪ್ಪ
ಬಸವ ಬಿಜ್ಜಳರ ಇತಿಹಾಸದ ಪುನರ್ವಿಮರ್ಶೆ (೨೯-೨)–ಕಟಪ್ರಾಳ ಕೃಷ್ಣರಾಯರು
ಬಸವೇಶ್ವರನು ನಾಥಸಿದ್ಧಪಂಥದ ಅನುಯಾಯಿ (೨೪-೧)–ಕಟಪ್ರಾಳ ಕೃಷ್ಣರಾಯರು
ಲಕ್ಕಣದಂಡೇಶ ಮತ್ತು ಇನ್ನು ಕೆಲವು ಕವಿಗಳ ಕಾಲ (೩೦-೪)–ಎಚ್. ದೇವೀರಪ್ಪ

ಅಬ್ಬಲೂರ ಚರಿತೆ: ಒಂದು ಲಘುಪುರಾಣ (೪-೧)–ಎಂ.ಎಂ. ಕಲಬುರ್ಗಿ
ಅಂಗಜೇಶ್ವರ ಮಸಣಯ್ಯ (೬-೨)–ಎಂ.ಎಂ. ಕಲಬುರ್ಗಿ
ಅರ್ಜುನವಾಡ ಶಾಸನದ ಕವಿಳಾಸಪುರ (೨-೧)–ಆರ್.ಆರ್. ಮುತಾಲಿಕ
ಉಳಿಯು(=ಹುಳಿಯ)ಮೇಶ್ವರ ಚಿಕ್ಕಯ್ಯ (೨-೧)–ಎಂ.ಎಂ. ಕಲಬುರ್ಗಿ
ಏಕಾಂತರಾಮಯ್ಯಗಳ ಮಂಮ ರಾಮದೇವಭಟ್ಟ (೧೦-೩)–ಕು.ಎಚ್.ಸಿ. ಗೋಗಿ
ಏಕಾಂತರಾಮಯ್ಯನ ಅನ್ವಯದ ಮೇಲೆ ಹೊಸಬೆಳಕು (೯-೪)–ಬಿ.ಆರ್. ಹಿರೇಮಠ
ಕೊಂಡಗುಳಿ ಕೇಶಿರಾಜನ ನವರತ್ನಮಾಲಿಕಾ (೯-೪)–ವ್ಹಿ.ಬಿ. ರಾಜೂರ
ಗುಂಡಬ್ರಹ್ಮಯ್ಯಗಳ ವಿಗ್ರಹ (೬-೪)–ಎಂ.ಎಂ. ಕಲಬುರ್ಗಿ
ಚಿತ್ರದುರ್ಗದಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ (೭-೧)–ಎಂ.ಎಂ. ಕಲಬುರ್ಗಿ
ನೀತಿಗೆರೆಯಲ್ಲಿಯ ಗುಂಡುಬ್ರಹ್ಮಯ್ಯಗಳ ವಿಗ್ರಹ (೯-೪)–ಬಿ.ಆರ್. ಹಿರೇಮಠ
ಬಸವಣ್ಣನವರ ವಂಶಜರ ಕವಿಳಾಸಪುರ (೯-೪)–ಎಂ.ಎಂ. ಕಲಬುರ್ಗಿ
ಬಸವಣ್ಣನವರ ವಿಗ್ರಹ (೬-೪)-೨೦, ೩೦, ಎಂ.ಎಂ. ಕಲಬುರ್ಗಿ
ಬಳ್ಳಾರಿಯಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ(೧೦-೨)–ಕು.ಎಚ್.ಸಿ.ಗೋಗಿ
ಮಡಿವಳ ಮಾಚಿದೇವನ ವಿಗ್ರಹಗಳು (೬-೪)ಆರ್.ಎನ್. ಗುರವ
ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು (೬-೩)–ವ್ಹಿ.ಶಿವಾನಂದ
ಮಧುಕೇಶ್ವರ ದೇವಾಲಯದ ವಿರಿಗ್ರಹಗಳು (೭-೧)–ಎಂ.ಎಂ. ಕಲಬುರ್ಗಿ
ರೇವಣಸಿದ್ಧನನ್ನು ಕುರಿತ ಸಿರಿವಾಳ ಶಾಸನ(೯-೩)–ಕು.ಎಚ್.ಸಿ. ಗೋಗಿ
ಶಿವಶರಣ ಸಾತಯ್ಯ, ಶಾನ್ತಿಮಯ್ಯ, ಸಾತಿಮಯ್ಯ(೧೦-೨)–ಬಿ.ಆರ್. ಹಿರೇಮಠ
ಸಿದ್ಧರಾಮನ ಎರಡು ಶಾಸನಗಳು (೩-೪)–ಎಂ.ಎಸ್. ನಾಗರಾಜರಾವ್
ಸಿದ್ಧರಾಮನ ವಚನವುಳ್ಳ ಅಪ್ರಕಟಿತ ಶಾಸನಗಳು (೪-೩)–ಎಂ.ಎಸ್. ನಾಗರಾಜರಾವ್

ಸಾಧನೆ

ಶಾಸನದಲ್ಲಿ ಮಂತ್ರಿ ಬಸವಣ್ಣ (೨-೧)--ಜಿ. ಎಸ್. ಗಾಯಿ, ಮಾಧವಕಟ್ಟಿ
ಅರ್ಜುನವಾಡ ಶಾಸನ ಸಮೀಕ್ಷೆ (೩-೧)–ಬಿ. ರಾಮಯ್ಯ
ಅರ್ಜುನವಾಡ ಶಿಲಾಶಾಸನ ಸಮೀಕ್ಷೆ (೩-೩)–ಸೀತಾರಾಮ ಜಾಗೀರ್‌ದಾರ್
ಮತ್ತೆರಡು ಶೂಲಬ್ರಹ್ಮ ಶಿಲ್ಪಗಳು (೬-೩)–ಎಂ. ಚಿದಾನಂದಮೂರ್ತಿ

ಇತರ ಪತ್ರಿಕೆಗಳು

ಬಸವೇಶ್ವರ (ಸಾ.ಪ. ೨೩-೪)–ಶ್ರೀಕಂಠಶಾಸ್ತ್ರಿ
ಮಂಗಳವಾಡವು ಬಿಜ್ಜಳನ ರಾಜಧಾನಿಯಾಗಿತ್ತೆ? (ಸಾ.ಪ.೨೬-೨)–ಎನ್. ಲಕ್ಷ್ಮೀನಾರಾಯಣರಾಯರು
ಒಂದು ಅಪ್ರಕಟಿತ ಶಾಸನ (ಹೇಮಕೂಟ ೨-೧)–ಸಿ.ಟಿ.ಎಂ. ಕೊಟ್ರಯ್ಯ
ಮನಗೂಳಿ ಶಾಸನ (ವೀರಶೈವ ೩-೧೧, ೧೨)–ಶಿ.ಚಿ. ನಂದಿಮಠ
ಶ್ರೀ ಬಸವೇಶ್ವರನ ಜೀವನದ ಬಗ್ಗೆ ಹುಟ್ಟಿದ ವಿವಾದಗಳ ಒಂದು ಸಮೀಕ್ಷೆ (ವೀರಶೈವ ೫-೩, ೪)–ಎಂ.ಪಿ. ಪಾಟೀಲ
ಶರಣ ಗೋವೆಯ ವಜ್ರರಾಯ (ಬಸವಜರ್ನಲ್ ೨-೩)–ಎಂ.ಎಂ. ಕಲಬುರ್ಗಿ

ನೆಲುವಿಗೆಯ ಶಾಂತಯ್ಯನನ್ನು ಕುರಿತ ಒಂದು ಶಾಸನ (ಕ.ನು. ಬಸವಸಂಚಿಕೆ ೧೯೬೮) –ಎಂ.ಎಂ. ಕಲಬುರ್ಗಿ
ಶರಣರನ್ನು ಕುರಿತ ಒಂದು ಶಾಸನ (KUJ. ೧೯೬೭)–ಎಂ.ಎಂ. ಕಲಬುರ್ಗಿ
ಶಾಸನಗಳಲ್ಲಿ ಶ್ರೀ ಸಿದ್ಧರಾಮನ ವಚನಗಳು (KU.x 1967)–ಎಸ್.ಎಂ. ವೃಷಭೇಂದ್ರಸ್ವಾಮಿ
ಬಸವಣ್ಣನವರ ಚರಿತ್ರೆಯ ಮೇಲೆ ಶಾಸನಗಳ ಬೆಳಕು (ಬಸವ ಜರ್ನಲ್-೨-೩) ಟಿ.ಎನ್. ಮಲ್ಲಪ್ಪ
Arjunavada Inscription of Yadava Kannara (EI.XXI)-ಎ. ಶ್ರೀಕಂಠಶಾಸ್ತ್ರಿ
A note on the Arjunavada Inscription of Yadava Kannara (EI.XXI)-
ಎನ್. ಲಕ್ಷ್ಮೀನಾರಾಯಣರಾಯ
More Inscriptions at Ablur (EI.XXIX)-ಪಿ.ಬಿ. ದೇಸಾಯಿ
Sangur Inscription of Yadava Mahadevaraya (EI.XXIII)-ಆರ್.ಎಸ್.ಪಂಚಮುಖಿ
Two Sinda Inscriptions from Benanchamatti (EI.XX)–ಆರ್.ಎಸ್.ಪಂಚಮುಖಿ.

❖❖

ಸಂಕ್ಷಿಪ್ತಗಳು

ಏ.ರಾ. ರಗಳೆ	ಏಕಾಂತರಾಮಯ್ಯನ ರಗಳೆ
ಕ.ಕ.ಚ	ಕರ್ನಾಟಕ ಕವಿಚರಿತೆ
ಕ.ನು.	ಕನ್ನಡ ನುಡಿ
ಕ.ಭಾ.	ಕರ್ನಾಟಕ ಭಾರತಿ
ಗು.ಚಾ.	ಗುರುರಾಜ ಚಾರಿತ್ರ
ಗುಮ್ಮಳಾಪುರ ಶೂ.ಸಂ.	ಗುಮ್ಮಳಾಪುರ ಸಿದ್ಧಲಿಂಗನ ಶೂನ್ಯಸಂಪಾದನೆ
ಗೂಳೂರ ಶೂ.ಸಂ.	ಗೂಳೂರ ಸಿದ್ಧವೀರನ ಶೂನ್ಯಸಂಪಾದನೆ
ಚೆ.ಬ.ಪು.	ಚೆನ್ನಬಸವ ಪುರಾಣ
ಚೆ.ಬ.ವ.	ಚೆನ್ನಬಸವಣ್ಣನವರ ವಚನಗಳು
ಪ್ರ.ಕ.	ಪ್ರಬುದ್ಧ ಕರ್ನಾಟಕ
ಬ.ಕು. ಶಾಸನಗಳು	ಬಸವಣ್ಣನವರನ್ನು ಕುರಿತ ಶಾಸನಗಳು
ಬ.ವ.	ಬಸವಣ್ಣನವರ ವಚನ
ಭೈ.ಕ.ರ.	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ
ರಾ.ಚ.	ರಾಘವಾಂಕ ಚರಿತೆ
ವೀ.ಮ.ಮ.	ವೀರಶೈವಾಮೃತ ಮಹಾಪುರಾಣ
ಶ.ಸಾ.	ಶರಣ ಸಾಹಿತ್ಯ
ಶಿ.ಗೀ.	ಶಿವದಾಸ ಗೀತಾಂಜಲಿ
ಶಿ.ತ.ಚಿ.	ಶಿವತತ್ವಚಿಂತಾಮಣಿ
ಶಿವಾ	ಶಿವಾನುಭವ
ಶಿ.ವಿಜಯ	ಶಿವದೇವವಿಜಯ
ಸಿ.ಪು.	ಸಿದ್ಧರಾಮಪುರಾಣ
ARSIE	Annual Report on South Indian Epigraphy
BKI	Bomany Karnatak Inscriptions
EC	Epigrahpia Carnatica
EI	Epigraphia Indica
HAS	Hyderabad Archaeological Series
INK & KS	Inscriptions in Northern Karnataka and Kolhapur State
JBBRAS	Journal of Bombay Branches Royal Asiatic Society
KI	Karnataka Inscriptions
KUJ	Karnataka University Journal
MAR	Mysore Archaeological Report
SII	South Indian Inscriptions
V.R. Volume	V. Rangacharya Volume.

ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು

ಡಾ. ಎಂ. ಎಂ. ಕಲಬುರ್ಗಿ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಐಬಿಎಚ್. ಪ್ರಕಾಶನ
ಗಾಂಧಿನಗರ ಬೆಂಗಳೂರು–೫೬೦೦೦೯
೧೯೮೦

ನನ್ನ ಮಾತು

'ವಿಶ್ವವಿದ್ಯಾಲಯ ಧನಸಹಾಯ ಆಯೋಗ' ನನ್ನನ್ನು ೧೯೭೭-೭೮ನೆಯ ವರ್ಷದ ರಾಷ್ಟ್ರೀಯ ಉಪನ್ಯಾಸಕನೆಂದು ಪರಿಗಣಿಸಿ, ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ವಿಶೇಷೋಪನ್ಯಾಸಗಳನ್ನು ನೀಡುವ ಅವಕಾಶ ಕಲ್ಪಿಸಿಕೊಟ್ಟಿದ್ದಿತು. ಆ ಮೇರೆಗೆ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ನೀಡಿದ "ಸಾಹಿತ್ಯ ಸಂಪಾದನೆ" ಹೆಸರಿನ ಉಪನ್ಯಾಸ ಈಗಾಗಲೇ ಪ್ರಕಟವಾಗಿದೆ. ಈಗ ಹೈದ್ರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ೯, ೧೦, ೧೧ ಮಾರ್ಚ ೧೯೭೮ರಂದು ನೀಡಿದ "ಸಮಾಧಿ -ಬಲಿದಾನ-ವೀರಮರಣ ಸ್ಮಾರಕಗಳು" ಹೆಸರಿನ ಉಪನ್ಯಾಸ ಪ್ರಕಟವಾಗುತ್ತಲಿದೆ.

ಪ್ರಾಚೀನ ಕರ್ನಾಟಕದಲ್ಲಿ ಜರುಗುತ್ತಲಿದ್ದ ಜೈನ ಸಮಾಧಿಮರಣ, ಹಿಂದು ಬಲಿದಾನ-ವೀರಮರಣಗಳ ಮತ್ತು ಈ ಪ್ರಸಂಗದಲ್ಲಿ ನಿರ್ಮಿಸುತ್ತಲಿದ್ದ ಸ್ಮಾರಕಗಳ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಈ ಪುಸ್ತಕದ ವಸ್ತು. ಶಾಸನ-ಸ್ಮಾರಕ-ಸಾಹಿತ್ಯ ಈ ಮೂರೂ ಮಗ್ಗಲುಗಳಿಂದ ನಡೆಸಿದ ಅಭ್ಯಾಸ ಈ ಕೃತಿಯ ವೈಶಿಷ್ಟ್ಯ. ಈ ಮೊದಲು ಕೆಲವರು ಪ್ರಸ್ತುತ ವಿಷಯವನ್ನು ಕುರಿತು ಆಗಾಗ ವಿವೇಚನೆ ಮಾಡಿದ್ದರೂ ವೇಳವಾಳಿಯ ನಿಷ್ಪತ್ತಿ, ಗರುಡ ಸಂಪ್ರದಾಯದ ಅಸ್ತಿತ್ವ ಇತ್ಯಾದಿ ವಿಷಯಗಳನ್ನು ಹೊಸದಾಗಿ ಪರಾಮರ್ಶಿಸಿದ, ಇನ್ನೂ ಕೆಲವು ವಿಷಯ ಮತ್ತು ಶಿಲ್ಪಗಳನ್ನು ಪ್ರಥಮಸಲ ಬೆಳಕಿಗೆ ತರುತ್ತಲಿರುವ ಈ ಕೃತಿ, 'ಮರಣ ಸ್ಮಾರಕ'ಗಳಿಗೆ ಸಂಬಂಧಿಸಿದ ಇಂದಿನ ನಮ್ಮ ತಿಳುವಳಿಕೆಯನ್ನು ತಕ್ಕಮಟ್ಟಿಗೆ ವಿಸ್ತಾರಗೊಳಿಸೀತೆಂದು ನನ್ನ ನಂಬಿಕೆ.

ರಾಷ್ಟ್ರೀಯ ಉಪನ್ಯಾಸಗಳ ಅವಕಾಶವನ್ನು ಒದಗಿಸಿದ 'ವಿಶ್ವವಿದ್ಯಾಲಯ ಧನಸಹಾಯ ಆಯೋಗ'ಕ್ಕೂ ಉಪನ್ಯಾಸ ನೀಡಲು ಆಮಂತ್ರಿಸಿದ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಕೆ. ಎಂ. ಕೃಷ್ಣರಾವ್ ಅವರಿಗೂ ಉಪನ್ಯಾಸ ವ್ಯವಸ್ಥೆಯಲ್ಲಿ ಸಹಕರಿಸಿದ ಹೈದ್ರಾಬಾದ್ ಕರ್ನಾಟಕ ಸಂಘದ ಪದಾಧಿಕಾರಿಗಳಿಗೂ ಪ್ರೊ. ಎಂ. ಎಸ್. ಮಹಾಂತಯ್ಯ ಮೊದಲಾದ ಸ್ನೇಹಿತರಿಗೂ ವಂದನೆಗಳು.

'ಇತಿಹಾಸ', 'ಸ್ನೇಹ'ಗಳ ಮೇಲಿನ ಗೌರವಾದರಗಳ ದ್ಯೋತಕವಾಗಿ ಈ ಕೃತಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಸ್ನೇಹಿತ ಡಾ. ಎಸ್. ಶೆಟ್ಟರ್ ಅವರಿಗೆ ಅರ್ಪಿಸಲು ಸಂತೋಷವೆನಿಸುತ್ತದೆ. ಇದು, ಒಂದು ಶಿಕ್ಷಣಸಂಸ್ಥೆಯ ಅಂತರ್ವಿಭಾಗಗಳಲ್ಲಿ ಇರಬೇಕಾದ ಪರಸ್ಪರ ಗೌರವದ ಸಂಕೇತವೆಂದೂ ಬಗೆಯುತ್ತೇನೆ.

ಉಪನ್ಯಾಸ ನೀಡಿ ಎರಡು ವರ್ಷಗಳಾದರೂ ಪ್ರಕಟನೆಯ ಯೋಗ ಕೂಡಿ ಬಂದಿರಲಿಲ್ಲ. ಮಾತಿನ ಮಧ್ಯ ಪ್ರಾಸಂಗಿಕವಾಗಿ ಪ್ರಸ್ತಾಪವಾದ ಈ ಕೃತಿಪ್ರಕಟನೆಯ ವಿಷಯವನ್ನು ಒಪ್ಪಿಕೊಂಡು, ಹಸ್ತಪ್ರತಿಯನ್ನು ಒಪ್ಪಿಸಿಕೊಂಡು, ತಮ್ಮ ಐಬಿಎಚ್ ಪ್ರಕಾಶನದ ಮೂಲಕ ಪ್ರಕಟಿಸಿಯೇ ಬಿಟ್ಟ ಕ್ರಿಯಾಶೀಲ ಸ್ನೇಹಿತರಾದ ಶ್ರೀ ಜಿ.ಕೆ. ಅನಂತರಾಮ್ ಅವರಿಗೆ ಕೃತಜ್ಞತೆಗಳು.

ಇಲ್ಲಿ ಬಳಸಿದ ಬಹಳಷ್ಟು ಚಿತ್ರಗಳು ಈ ವರೆಗೆ ಯಾವ ಗ್ರಂಥದಲ್ಲಿಯೂ ಬೆಳಕು ಕಾಣದವು. ಇಂಥ ಅಪರೂಪದ ಚಿತ್ರಗಳನ್ನು ಒದಗಿಸಿದ ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ

ಡಾ. ಎಸ್. ಶೆಟ್ಟರ್, ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಡಾ. ಬಿ.ಎಸ್. ಕುಲಕರ್ಣಿ ಅವರಿಗೆ, ಈ ಮೊದಲು ಪ್ರಸ್ತುತ ವಿಷಯವನ್ನು ಕುರಿತು ಲೇಖನ-ಗ್ರಂಥ ಬರೆದು ಅಪ್ರತ್ಯಕ್ಷವಾಗಿ ನೆರವಾದ ಅನೇಕ ವಿದ್ವಾಂಸರಿಗೆ, ಬರವಣಿಗೆಯುದ್ದಕ್ಕೂ ಪ್ರತ್ಯಕ್ಷ ಸಹಾಯ ನೀಡಿದ ಪ್ರೊ. ಬಿ.ಆರ್. ಹಿರೇಮಠ, ಪ್ರೊ. ಚೆನ್ನಕ್ಕ ಎಲಿಗಾರ ಮತ್ತು ಶ್ರೀಮತಿ ಎಚ್.ಸಿ. ಗೋಗಿ ಅವರಿಗೆ ಕೃತಜ್ಞತೆಗಳು.

ಅಚ್ಚಿನ ಕಾರ್ಯವನ್ನು ಯಂತ್ರವೇಗದಿಂದ ಅಂದವಾಗಿ ಪೂರೈಸಿದ ಐಬಿಎಚ್ ಪ್ರಕಾಶನದ ಮುದ್ರಣ ವಿಭಾಗದ ಸ್ನೇಹಿತರಿಗೆ ಧನ್ಯವಾದಗಳು.

ಕನ್ನಡ ಅಧ್ಯಯನ ಪೀಠ - ಎಂ.ಎಂ. ಕಲಬುರ್ಗಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧-೧೨-೧೯೮೦

ದ್ವಿತೀಯ ಆವೃತ್ತಿ

೩೦ ವರ್ಷಗಳ ಬಳಿಕ ಈ ಕೃತಿಯ ದ್ವಿತೀಯ ಆವೃತ್ತಿ ಪ್ರಕಟವಾಗುತ್ತಲಿದೆ. 'ಧಾರ್ಮಿಕ ಬಲಿದಾನ' ಪ್ರಕರಣದ ಕೊನೆಯ ಭಾಗದಲ್ಲಿ ವೀರಮಾಹೇಶ್ವರ ವರ್ಗದವರ ಆತ್ಮಬಲಿದಾನ ವಿಷಯವನ್ನು ಹೊಸದಾಗಿ ಸೇರಿಸಲಾಗಿದೆ. ನಾನು ಪರಿಷ್ಕರಿಸಿ ಪ್ರಕಟಿಸಿದ ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುವ ಸಮಾಧಿ ಬಲಿದಾನ ವೀರಮರಣಗಳಿಗೆ ಸಂಬಂಧಿಸಿದ ಪಾಠಗಳನ್ನು ಹೊಸದಾಗಿ ಅನುಬಂಧವಾಗಿ ಜೋಡಿಸಲಾಗಿದೆ. ಇಷ್ಟನ್ನು ಬಿಟ್ಟರೆ ಈ ಆವೃತ್ತಿ ಮೂಲರೂಪದಲ್ಲಿಯೇ ಹೊರಬರುತ್ತಿದೆ. ಈ ಅನುಬಂಧದಿಂದಾಗಿ ಹೊಸ ಆಕರಗಳನ್ನು ಅಭ್ಯಾಸಿಗಳ ಗಮನಕ್ಕೆ ತಂದ ಸಂತೋಷ ನನ್ನದಾಗಿದೆ. ಪ್ರಸ್ತುತ ಆವೃತ್ತಿಯನ್ನು ಬೆಳಕಿಗೆ ತರುತ್ತಲಿರುವ ನನ್ನ ಪ್ರೀತಿಯ ಸಪ್ನಾ ಬುಕ್ ಹೌಸ್ ಸಂಸ್ಥೆಯ ಮಾಲಕರಾದ ಶ್ರೀ ನಿತಿನ್ ಶಹಾ ಅವರಿಗೂ, ಅಲ್ಲಿಯ ಕನ್ನಡ ವಿಭಾಗದ ವ್ಯವಸ್ಥಾಪಕರಾದ ಶ್ರೀ ದೊಡ್ಡೇಗೌಡ ಅವರಿಗೂ ಕೃತಜ್ಞತೆಗಳು.

ಧಾರವಾಡ - ಎಂ.ಎಂ. ಕಲಬುರ್ಗಿ
೧ ನವೆಂಬರ್ ೨೦೧೧

*

ಪರಿವಿಡಿ

ಅಧ್ಯಾಯ : ಒಂದು

ಪೀಠಿಕೆ

ಸಮಾಧಿಮರಣ - ಸಮಾಧಿಮರಣ ಸ್ಮಾರಕಗಳು

ಪೀಠಿಕೆ

ಮಾನವಸಂಸ್ಕೃತಿಯ ವಿಕಾಸವನ್ನು ವಿದ್ವಾಂಸರು ಶಿಲಾಯುಗ, ಲೋಹಯುಗ ಎಂದು ಮುಂತಾಗಿ ಅಭ್ಯಸಿಸುವುದನ್ನು ಗಮನಿಸಿದರೆ, ಮನುಷ್ಯನ ಜೀವನದಲ್ಲಿ ಶಿಲೆ ವಹಿಸಿದ್ದ, ವಹಿಸುತ್ತಲಿರುವ ಪಾತ್ರ ಸ್ಪಷ್ಟವಾಗುತ್ತದೆ. ಮೊದಮೊದಲು ಬಿಸಿಲು ಮಳೆಯ ರಕ್ಷಣೆಗಾಗಿ. ಬರಬರುತ್ತ ಬದುಕಿನ ಮೌಲ್ಯಪ್ರಸಾರಕ್ಕಾಗಿ ಬಳಕೆಗೊಂಡ ವಸ್ತು, ಈ ಶಿಲೆ. ಕೊರೆದು ಕಲೆಯಾಗಿಸಿದ, ಬರೆದು ಕೃತಿಯಾಗಿಸಿದ ಈ ಮಾಧ್ಯಮವನ್ನು ಕ್ರಮವಾಗಿ ಶಿಲ್ಪ ಮತ್ತು ಶಾಸನವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಶಿಲ್ಪಗಳು ನಿರಕ್ಷರರಿಗೆ, ಶಾಸನಗಳು ಸಾಕ್ಷರರಿಗೆ ಆಯಾ ಜನಾಂಗಗಳ ಮೌಲ್ಯವನ್ನು ಬೋಧಿಸುವ ಪ್ರಸಾರಫಲಕಗಳಾಗಿ ಅಲ್ಲಲ್ಲಿ ನಿಂತಿವೆ.

ಶಿಲ್ಪ ಮತ್ತು ಶಾಸನಗಳ ದೃಷ್ಟಿಯಿಂದ ಕರ್ನಾಟಕ ಶ್ರೀಮಂತವಾದುದು. ಕ್ರಿಸ್ತ ಪೂರ್ವಕಾಲದಿಂದಲೂ ಈ ನಾಡಿನಲ್ಲಿ ಬೆಳೆದುಬಂದ ಶಿಲ್ಪವರ್ಗದ ವಾಸ್ತುಶಿಲ್ಪ -ಮೂರ್ತಿಶಿಲ್ಪಗಳು ಮತ್ತು ಶಾಸನವರ್ಗದ ದಾನಶಾಸನ - ವೀರಶಾಸನ - ಇತರ ಶಾಸನಗಳು ಈ ಮಾತಿಗೆ ನಿದರ್ಶನವಾಗಿವೆ.

ಮರಣಸ್ಮಾರಕಗಳು ಕೇವಲ ಶಿಲ್ಪ ಇಲ್ಲವೆ ಕೇವಲ ಶಾಸನವಾಗಿರಬಹುದಾದರೂ ಸಾಕ್ಷರ-ನಿರಕ್ಷರರಿಗೂ ವೇದ್ಯವಾಗಲೆಂದು ಕೆಲವು ಸಲ ಎರಡನ್ನೂ ಒಳಗೊಂಡಿರುವುದುಂಟು. ಇಂಥವು ಶಿಲ್ಪಕ್ಕೆ ಶಿಲ್ಪ, ಶಾಸನಕ್ಕೆ ಶಾಸನ ಎನಿಸುತ್ತವೆ. ಹೀಗಾಗಿ ಇವುಗಳ ಅಭ್ಯಾಸಕ್ಕೆ ಶಿಲ್ಪಶಾಸ್ತ್ರ ಮತ್ತು ಶಾಸನಶಾಸ್ತ್ರಗಳ ತಿಳಿವಳಿಕೆ ಅವಶ್ಯವೆನಿಸುತ್ತದೆ.

ದುರ್ದೈವದಿಂದ ನಮ್ಮ ನಾಡಿನ ಮತ್ತು ಹೊರನಾಡಿನ ಎಲ್ಲ ಮರಣಸ್ಮಾರಕಗಳ ಪರಿವೀಕ್ಷಣಾಕಾರ್ಯ ಪೂರ್ಣವಾಗಿಲ್ಲ. ಪರಿವೀಕ್ಷಿತ ಮರಣಸ್ಮಾರಕಗಳಿಗೆ ಸಂಬಂಧಿಸಿದಂತೆ ಅಲ್ಲಿಯ ಬರವಣಿಗೆಗಳು ಪ್ರಕಟವಾಗಿವೆಯೇ ಹೊರತು, ಚಿತ್ರಗಳಲ್ಲ. ಕೇವಲ ಚಿತ್ರವಿರುವ ಮರಣಸ್ಮಾರಕಗಳನ್ನು ನಾವು ಕಣ್ಣೆತ್ತಿ ಸಹ ನೋಡಿಲ್ಲ. ಹೀಗೆ ಮೂರು ರೀತಿಯಲ್ಲಿ ಇವುಗಳ ಕ್ಷೇತ್ರಕಾರ್ಯ ಅಪೂರ್ಣವಾಗಿ ಉಳಿದಿರುವುದರಿಂದ, ಮರಣಸ್ಮಾರಕಗಳ ಬಗೆಗೆ ವಿವೇಚಿಸುವುದು ಇಂದು ಕಷ್ಟದ ಕೆಲಸವೇ ಸರಿ.

ಭಾರತೀಯರ ಬದುಕಿನ ಪರಮಗುರಿ, ಸದ್ಗತಿ ಸಂಪಾದನೆ. ಇವರು ಆತ್ಮಾನುಸಂಧಾನ, ಆದರ್ಶಾನುಸಂಧಾನ, ಮೌಲ್ಯಾನುಸಂಧಾನಗಳನ್ನು ಈ ಸದ್ಗತಿಗೆ ಸಾಧನಗಳನ್ನಾಗಿ ಪರಿಭಾವಿಸಿಕೊಂಡರು. ಇವುಗಳಲ್ಲಿ ಧ್ಯಾನ, ತಪಸ್ಸು ಮೊದಲಾದ ಆತ್ಮಾನುಸಂಧಾನ ವ್ಯಕ್ತಿಜೀವನ ಪರಿಶುದ್ಧಿಯ ಸಾಧನವಾದರೆ, ಅಹಿಂಸೆ - ಸತ್ಯ ಮೊದಲಾದ ಆದರ್ಶಾನುಸಂಧಾನ ಸಮಾಜಜೀವನ ಪರಿಶುದ್ಧಿಯ ಸಾಧನವಾದರೆ, ಸತಿಪದ್ಧತಿ ಮೊದಲಾದ ಮೌಲ್ಯಾನುಸಂಧಾನ ಸಮಾಜಜೀವನದ ಪರ್ಯಾಯ ಶೋಷಣೆಗಳಾಗಿವೆ. ಇವುಗಳಲ್ಲಿ ಜೈನ ಸಮಾಧಿಮರಣವು ಆತ್ಮಾನುಸಂಧಾನ ವರ್ಗಕ್ಕೆ ಸೇರುತ್ತದೆ. ಜೈನ ಸಿದ್ಧಾಂತದಲ್ಲಿ ಕರ್ಮಕ್ಷಯಕ್ಕೋಸುಗ ಮಧ್ಯಮಧ್ಯ ಏಕಭುಕ್ತಿ, ಪಕ್ಷೋಪವಾಸ, ಮಾಸೋಪವಾಸಗಳೆಂಬ ಅನಶನವ್ರತಗಳನ್ನು ಆಚರಿಸುತ್ತಿದ್ದು, ಮರಣಸನ್ನಿಹಿತ ಪ್ರಸಂಗದಲ್ಲಿ ಪ್ರಾಣೋತ್ಕ್ರಮಣಪರ್ಯಂತ ಆಚರಿಸಿದರೆ, ಅದು 'ಸಲ್ಲೇಖನವ್ರತ'ವೆನಿಸಿಕೊಳ್ಳುತ್ತದೆ.

ಅನಾರೋಗ್ಯ (ವ್ಯಾಧಿ, ಮುಪ್ಪು), ಅಪಾಯ (ಪ್ರಾಣಿಹಿಂಸೆ, ಕ್ಷಾಮ ಹಿಂಸೆ)ಗಳೊದಗಿ, ಇನ್ನೇನು ಬದುಕಲಾರೆನೆಂದು ನಿಶ್ಚಯವಾದ ಪ್ರಸಂಗದಲ್ಲಿ ಮಾತ್ರ ಸಲ್ಲೇಖನವ್ರತ ಹಿಡಿಯಬೇಕು. ಮುತ್ತು-ರತ್ನಗಳಿಂದ ತುಂಬಿದ ಮನೆಗೆ ಬೆಂಕಿ ಬಿದ್ದರೆ ಆರಿಸಲು ಅಸಾಧ್ಯವೆನಿಸಿದ ಪಕ್ಷದಲ್ಲಿ, ಮನೆಯನ್ನು ಕೆಡವಿ ದ್ರವ್ಯಭಂಡಾರ ಉಳಿಸುವಂತೆ ಇದರ ಪರಿ. ರತ್ನಕಂಡಕ, ಶಾಸ್ತ್ರಸಾರಮುಚ್ಚಯ, ಭಗವತೀ ಆರಾಧನಾ ಮೊದಲಾದ ಗ್ರಂಥಗಳು ಈ ಮರಣದ ಪ್ರಕಾರ, ವಿಧಾನ ಇತ್ಯಾದಿಗಳನ್ನು ವಿವರಿಸುತ್ತವೆ.

ಸಲ್ಲೇಖನವ್ರತದ ಮರಣವಿಧಾನಗಳು ಅನೇಕವಾಗಿದ್ದು, ವ್ರತಸ್ಥನು ಅವುಗಳಲ್ಲಿ ಒಂದನ್ನು ಮಾತ್ರ ಪ್ರಾಣೋತ್ಕ್ರಮಣಪರ್ಯಂತ ಪಾಲಿಸಬೇಕು. ನಮ್ಮ ನಾಡಿನಲ್ಲಿ ಸಮಾಧಿಮರಣವಿಧಾನವನ್ನೇ ಪ್ರಧಾನವಾಗಿ, ಇಂಗಿಣಿಮರಣ. ಪ್ರಾಯೋಪಗಮನಮರಣ, ಪಂಡಿತಮರಣ ವಿಧಾನಗಳನ್ನು ಕ್ವಚಿತ್ತಾಗಿ ಅನುಸರಿಸಿದುದು ಶಾಸನಗಳಿಂದ ತಿಳಿದುಬರುತ್ತದೆ. ಸಲ್ಲೇಖನವ್ರತವನ್ನು ಯಾವುದೇ ಪ್ರಶಸ್ತ ಸ್ಥಳದಲ್ಲಿ, ವಿಶೇಷವಾಗಿ ಪವಿತ್ರಸ್ಥಳದಲ್ಲಿ ಸ್ವೀಕರಿಸಬಹುದೆಂದು ಜೈನಧರ್ಮಗ್ರಂಥಗಳು ಹೇಳುತ್ತವೆ. ಆ ಮೇರೆಗೆ ಪ್ರಾಚೀನಕಾಲದಲ್ಲಿ ಕೆಲವರು ಸ್ವಗ್ರಾಮದ ಬಸದಿಯಲ್ಲಿ, ಇನ್ನು ಕೆಲವರು ಬೆಳ್ಗೊಳ, ಕೊಪ್ಪಳ ಮೊದಲಾದ ಜೈನ ಪುಣ್ಯಸ್ಥಳಗಳಲ್ಲಿ ವ್ರತ ಹಿಡಿದಿದ್ದಾರೆ. ಚಾವುಂಡರಾಯ ಪುರಾಣ

ಅಸಿಧಾರಾವ್ರತದಿಂದೆ ಪೆಂಪೆಸೆವಿನಂ ಮುಳ್ಗುಂದದೊಳ್ ಮುನ್ನೆ ಸ
ನ್ಯಸನಕ್ಕೆಯ್ದೆ ನಿವೃತ್ತಿಗೆಯ್ದು ಕೊಪಣಾದ್ರೀಂದ್ರಕ್ಕೆ ವಂದಾಗಮೋ
ಕ್ತ ಸಮಾಧಾನ ವಿಧಾನದಿಂ ಮುಡಿಪಿ ಮುಕ್ತಿಸ್ಥಾನಮಂ ಮುಂಚೆ ಸಾ
ಧಿಸಿಕೊಂಡೊಳ್ಪ ಕುಮಾರಸೇನಮುನಿಪಂಗಕ್ಕುಂ ಪೆರರ್ಗಕ್ಕುಮೇ ॥

ಎಂದು ಹೇಳುತ್ತ, ಮುಳಗುಂದದಲ್ಲಿ ವ್ರತ ಹಿಡಿದ ಕುಮಾರಸೇನನು ಅಲ್ಲಿ ಸೊಗಸುಗಾಣದೆ ಕೊಪ್ಪಳಕ್ಕೆ ಹೋಗಿ ಸಮಾಧಿಮರಣವನ್ನಪ್ಪಿದನೆಂದು ತಿಳಿಸುತ್ತದೆ.[೧] ಗಂಗ ದೊರೆ ಮಾರಸಿಂಹನು[೨] ಬಂಕಾಪುರಕ್ಕೆ ಬಂದು, ರಾಷ್ಟ್ರಕೂಟ ನಾಲ್ಕನೆಯ ಇಂದ್ರರಾಜ[೩] ಮತ್ತು ಶಾಂತಲೆಯ ತಾಯಿ ಮಾಚಿಕಬ್ಬೆ[೪] ಬೆಳ್ಗೊಳಕ್ಕೆ ಬಂದು ವ್ರತಹಿಡಿದು ಸತ್ತುದನ್ನು ಇಲ್ಲಿ ನೆನೆಯಬೇಕು. ಹೀಗಾಗಿ ಪವಿತ್ರಕ್ಷೇತ್ರಗಳಲ್ಲಿ ನಿಷಿಧಿಶಿಲೆಗಳು ಅಧಿಕಸಂಖ್ಯೆಯಲ್ಲಿ ಸಿಗುತ್ತವೆ. ಶ್ರವಣಬೆಳ್ಗೊಳದ ಸುಮಾರು ೧೦೮ ನಿಷಿಧಿಶಾಸನಗಳಲ್ಲಿ "ಹೊರಗಿನಿಂದ ಬಂದವರ ಊರುಗಳು ಹೀಗಿವೆ : ಶ್ರೀತೀರ್ಥ (ನಂ.೫), ಉಳ್ಳಿಕಲ್ಲ (೬) ಪೆರುಮಾಳು, (೭), ಅಗಟಿ (೮) ನೆಡುಬೊರೆ (೯), ವೇಗೂರು (೧೩), ಜಂಬು ನಾಯ್ಗಿರ್ (೧೮), ಅದೆಯಜಿನಾಡು (೨೦), ಕಳನ್ತೂರು (೨೨.೯೩), ಕಿತ್ತೂರು (೨೪.೮೧), ಮಲನೂರು (೨೫), ಇನುಜ್ಗೂರು (೨೮), ವೆಟ್ಟಡೆ (೩೨), ತರೆಕಾಡು (೩೧), ನವಿರಾಷ್ಟ್ರ (೮೪), ನವಿಲೂರು (೯೭, ೯೮, ೧೦೨, ೧೦೬, ೧೦೮, ೧೦೯, ೧೧೪), ಬೈಗೂರು (೧೫೯), ಮೋಜಿಂಗೆಜೆ (೧೪೧), ಬೆಳಿಕುಂಬ (೩೮೯)."[೫]

ಸಲ್ಲೇಖನವ್ರತವನ್ನು ಕ್ವಚಿತ್ತಾಗಿ ತೀರ್ಥಂಕರವಿಗ್ರಹದ ಸನ್ನಿಧಿಯಲ್ಲಿ ಆಚರಿಸುತ್ತಿದ್ದುದಕ್ಕೆ ಮಲ್ಲಿಷೇಣನ ಸಮಾಧಿಮರಣದಂತಹ (ಚಿತ್ರ ೧) ಉದಾಹರಣೆಯನ್ನು ಬಿಟ್ಟರೆ, ಸಾಮಾನ್ಯವಾಗಿ ಎಲ್ಲರೂ ಗುರುಸನ್ನಿಧಿಯಲ್ಲಿಯೇ ಕೈಕೊಳ್ಳುತ್ತಾರೆ. ಗುರುವಾದವನು ವ್ರತಧಾರಿಗೆ ವ್ರತವಿಧಾನಗಳ ಮಾರ್ಗದರ್ಶನ ನೀಡುವ,

---

೧. ಚಾವುಂಡರಾಯ ಪುರಾಣಂ ೧-೧೫

೨. EC. IIಶ್ರವಣಬೆಳ್ಗೊಳ ೫೯ (ಕ್ರಿ.ಶ. ೯೭೪).

೩. EC. II ಶ್ರವಣಬೆಳ್ಗೊಳ ೧೩೩ (ಕ್ರಿ.ಶ. ೯೮೨).

೪. EC. II ಶ್ರವಣಬೆಳ್ಗೊಳ ೧೪೩ (ಕ್ರಿ. ಶ. ೧೧೩೧)

೫. ಶ್ರವಣಬೆಳ್ಗೊಳ (ಡಾ. ಬಿ.ವಿ. ಶಿರೂರ) ಪು. ೩೧೮.

ಅಲ್ಲಿ ಧರ್ಮಸಂಕೀರ್ತನ ನಡೆಸುವ ಕಾರ್ಯ ಕೈಕೊಳ್ಳುತ್ತಾನೆ. ಆತನಿಗೆ ಧೈರ್ಯ ಕುಸಿಯದಂತೆ ಈ ಮೊದಲು ವ್ರತಹಿಡಿದು ಧರ್ಮಸಂಕಟಗಳನ್ನು ಸಹಿಸಿದವರ ಕಥೆಗಳನ್ನೂ ಹೇಳುವುದುಂಟು. ಕನ್ನಡ ವಡ್ಡಾರಾಧನೆಯ ಕಥೆಗಳೆಲ್ಲ ಇಂಥವು. ತುಂಬ ಕಠೋರವಾದ ಈ ತಪೋಪ್ರಸಂಗದಲ್ಲಿ ಕ್ರಮೇಣ ಉತ್ಕ್ರಮಣವಾಗುತ್ತಿರುವ ಜೀವ ಸದ್ಗತಿಗೆ ಹೋಗುವುದೆಂಬುದು ಸಾಮಾನ್ಯಭಾವನೆ. ಮಾನೇಸರ ಸದ್ಗತಿಪ್ರಯಾಣವನ್ನು 'ಪ್ರಾಸಾದಾನ್ತರಮಾನ್ ವಿಚಿತ್ರಕನಕಪ್ರಜ್ವಲ್ಯದಿನ್ಮಿಕ್ಕುದಾನ್ ಸಾಸಿರ್ವ್ವರ ಪೂಜೆದನ್ದಾಯೆ ಅವರ್ ಸ್ವರ್ಗ್ಗಾಗ್ರಮಾನೇಱಿದಾರ್" ಎಂದು ಬೆಳ್ಗೊಳದ ಶಾಸನ,[೬] ಹರ್ಯಲೆಯ ನಿರ್ವಾಣವನ್ನು

ಬರವಂ ಕೇಳ್ದಮರಾವತೀಪುರದ ದೇವೀಸಂಕುಲಂ ಬಂದು ನೂ
ಪುರಮಂ ಮುತ್ತಿನ ಹಾರಮಂ ಕಟಕಮಂ ಕೇಯೂರಮಂ ವಜ್ರದುಂ
ಗುರಮಂ ಮಾಣಿಕದೋಲೆಯಂ ತುಡಿಸಿ ಬೇಗಂ ದೇವಿ ನೀನೇಱು ರಾ
ಗರಸಂ ಕೆಯ್ಮುಗಲೀ ವಿಮಾನಮನೆನುತ್ತುಂ ತಂದವರ್ ಸಾರ್ಚ್ಚಿದರ್ ||

ಏಱಿ ವಿಮಾನವಂ ಬರೆ ಸುರಾಂಗನೆಯರ್ ನಳಿತೋಳ ನುಣ್ಬೊಗರ್
ತೋಱುವಿನಂ ಮಹೋತ್ಸವದೆ ಸೇಸೆಯನಿಕ್ಕಿ ಸುರಾನಕಧ್ವನಂ
ಮೀಱೆ ಘನಾಘನಧ್ವನಿಯನೆತ್ತಿದ ಸತ್ತಿಗೆ ಚಂದ್ರಬಿಂಬಮಂ
ಬೀಱೆ ವಿಲಾಸದಿಂ ಹಿಡಿದು ಚಾಮರವಿಕ್ಕೆ ಸಮಂತು ಪೊಕ್ಕಳಾ
ನೀಱೆ ಮಹಾನುಭಾವೆ ಸತಿ ಹರ್ಯಲದೇವಿ ಸುರೇಂದ್ರಲೋಕಮಂ ||

ಎಂದು ಕರಡಾಳು ಗ್ರಾಮದ ಶಾಸನ ಹೇಳುತ್ತವೆ.[೭] ಈ ಸಂದರ್ಭದಲ್ಲಿ 'ಮುಡಿಪಿದಾರ್' ಎಂಬ ಪದವನ್ನು ಶಾಸನಗಳು ಅನೇಕ ಸಲ ಬಳಸಿವೆ. ಇದಕ್ಕೆ 'ಮುಡಿ = ಮುಗಿಸು, ಸಾಯು> ಮುಡಿಪು = ಕೊನೆ, ಸಾವು' ಎಂಬ ಅರ್ಥವನ್ನು ಬಿ.ಎಂ. ಶ್ರೀ ಸೂಚಿಸಿದ್ದಾರೆ.[೮]

ಮರಣೋತ್ತರ ಕಾಲದಲ್ಲಿ ಶವ ಸಾಗಿಸುವ ಪ್ರಸಂಗದ ಅರಿತಕ್ಕೆ "ಅರಸನುಂ ಮಹಾದೇವಿಯುಂ ಮಂತ್ರಿಯುಂ ಪೆರ್ಗ್ಗಡೆಯುಂ ಮೊದಲಾಗಿ ಪೊಟಲೊಳಗುಳ್ಳ ಜನಮೆಲ್ಲಮರ್ಚನೆಗಳಂ ಕೊಂಡುಬಂದು... ಪಲವುಂ ನೇತ್ರದ ಪಟಿವುಲ್ಲಂಗಳ್ ಧ್ವಜ ಪತಾಕೆಗಳುಮನೆತ್ತಿಸಿ ಚಾತುರ್ವರ್ಣ್ಣಶ್ರವಣಸಂಘಸಹಿತಂ ಪಟುಪಟಹ ತುಣುವ ಬಂಭಾಮರ್ದಳೆ ಝಲ್ಲರಿ ಮುಕುಂದ ತಾಳೆ ಕಾಹಳ ಶಂಖ ವಂಶ ವೀಣಾಸ್ವರಂಗಳೆಸೆಯೆ ಕವಿವರರುಂ ಪೆಣ್ಡಾವಸದೊಳ್ವೆಂಡಿರ್ಕ್ಕಳುಂ ವಿಮಾನಂಗಳ ಮುಂದಾಡುತ್ತಂ ದಮ್ಮಮುಮಂ ಪೊನ್ನುಮಂ ಕೇಳಿಮಾಡಿ ಮುಂದೆ ಸೂಸುತ್ತಮೊಯ್ವುದಂ"[೯] ಎಂಬ ವಾಕ್ಯ ನಿದರ್ಶನವೆನಿಸಿದೆ. ಅಂತ್ಯೋತ್ಸವದ ತರುವಾಯ ದಹನಕಾರ್ಯ ಜರುಗುತ್ತದೆ. ಹೀಗೆ ಸಲ್ಲೇಖನವ್ರತದಿಂದ ಮಡಿದ ಇಲ್ಲವೆ ಸುಟ್ಟ ಸ್ಥಳಗಳನ್ನು ಜಾಗೃತಸ್ಥಾನಗಳೆಂದು ಜನರು ಭಾವಿಸುತ್ತಿದ್ದರು. ಬ್ರಹ್ಮಶಿವನ ಸಮಯಪರೀಕ್ಷೆಯ

---

೬. EC. II ಶ್ರವಣಬೆಳ್ಗೊಳ ೮೮ (ಕ್ರಿ.ಶ. ೭ನೆಯ ಶತಮಾನ)

೭. EC. XII ತಿಪಟೂರು ೯೩. ಕರಡಾಳುಗ್ರಾಮ (ಕ್ರಿ.ಶ. ೧೧೭೪)

೮. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೯೬ ಅ.ಟಿ.

೯. ವಡ್ಡಾರಾಧನೆ (ಕ್ರಿ.ಶ. ೧೯೭೨) ಪು. ೮೨ - ೮೩

ಧರೆಯೊಳ್ ಸಂದ ಮೊರಂಬದೊಳ್ ನಿಜ ನಿಷೀಧಿ ಸ್ಥಾನದೊಳ್ಮ್ರಣ್ಣನಾ
ದರದಿಂದೊಮ್ಮ್ರೆಯೆ ತಂದು ಪೂಸಲೊಡನತ್ಯುಗ್ರ ಗ್ರಹಾನೇಕ ಸ
ರ್ವರುಜಾ ಪೀಡೆಗಳಾಗದಂತೆ ಕೆಡುಗುಂ ತಾನೆಂದೊಡಮ್ಮ್ರಮ್ಮ ಭಾ
ಳ್ಪರೆ ಸಾಮಾನ್ಯಮೆ ಮೇಘಚಂದ್ರಮುನಿಮಾಹಾತ್ಮ್ಯಂ ಧರಾಚಕ್ರದೊಳ್॥

ಎಂಬ ಪದ್ಯ ಮೇಘಚಂದ್ರನೆಂಬ ಮುನಿ ಮೊರಂಬದಲ್ಲಿ ಮಡಿದ ಸ್ಥಳದ ಮಣ್ಣು ಔಷಧಿಯಾಗಿ ಪರಿಣಮಿಸಿತೆಂದು ಹೇಳುತ್ತದೆ.[೧೦] ಕನ್ನಡ ವಡ್ಡಾರಾಧನೆಯಂತೂ "ಉಜ್ಜೇನಿಯ ತೆಂಕಣದೆಸೆಯೊಳವಂತಿಸುಕುಮಾರಸ್ವಾಮಿಯ ಕಾಲಂಗೆಯ್ದಿಡೆ ಈಗಳುಂ ಪುಣ್ಯಮುಂ ಪವಿತ್ರಮುಮಾದುದು. ಮತ್ತಂ ಮಹಾಪುರುಷನ ಶರೀರಮಂ ಚತುರ್ನಿಕಾಯಾಮರತತಿಗಳ್ ಭಕ್ತಿಯಿಂದಗರು ಕಾಳಾಗರು ಗೋಶೀರ್ಷ ಚಂದನಂ ಮೊದಲಾಗೊಡೆಯ ಅನೇಕ ಸುಗಂಧದ್ರವ್ಯಗಳಿಂದಂ ಪೂಜಿಸಿದ ವಸ್ತುಗಳು ಕಾಲಾಂತರದಿಂ ಕರಗಿ ಬಿಟ್ಟುದಾಸ್ಥಾನಕ್ಕಂ ಗಂಧವತಿಯೆಂಬ ತೊಱೆಯಾದುದು, ದೇವರ್ಕಳ್ ಪೊಗಳ್ದ ಕಳಕಳಧ್ವನಿಯಿಂ ಪೆಂಡಿರ್ಕಳ ಪ್ರಳಾಪಂಗೆಯ್ದಟ್ಟ ಧ್ವನಿಯಿಂದಂ ಕಳಕಳಾಯತವೆಂಬ ಸಿದ್ಧಾಯತನಮಾದುದು" ಎನ್ನುತ್ತ ಆ ಸ್ಥಳಗಳಿಗೆ ಪ್ರಾಪ್ತವಾದ ತೀರ್ಥಪಾವಿತ್ರ್ಯವನ್ನು ಸಾರುತ್ತದೆ.[೧೧]

ಕರ್ಮಕ್ಷಯಗೊಳಿಸಿಕೊಳ್ಳುವುದೇ ಈ ವ್ರತದ ಉದ್ದೇಶವಾದುದರಿಂದ ಶ್ರಾವಕರಂತೆ ಶ್ರಾವಿಕೆಯರೂ, ಸನ್ಯಾಸಿಗಳಂತೆ ಕಂತಿಯರೂ ಇದನ್ನು ಅನುಸರಿಸುತ್ತಾರೆ. ಹೀಗೆ ವ್ರತ ಹಿಡಿದು ಸಾವನ್ನಪ್ಪಿದವರ ಸ್ಮಾರಕವಾಗಿ ನಿಲ್ಲಿಸಿದವುಗಳೇ ನಿಷಿಧಿಶಿಲೆಗಳು.

ಶಾಸನಗಳಲ್ಲಿ ನಿಶೀಧಿಕಾ, ನಿಶಿದಿ, ನಿಶಿಧಿ, ನಿಶಿದಿಗೆ, ನಿಶೀಧಿಗೆ, ನಿಷದ್ಯಿಕಾ ಇತ್ಯಾದಿಯಾಗಿ ಸಿಗುವ ಈ ಪದದ ಸರಿಯಾದ ರೂಪ, ಸರಿಯಾದ ಅರ್ಥ ಇನ್ನೂ ಚರ್ಚೆಯ ವಲಯದಲ್ಲಿ ನಿಂತಿದೆ. ಸದ್ ಧಾತುವಿನಿಂದ ವ್ಯುತ್ಪನ್ನವಾಗುವ ನಿಷತ್ತಿ, ನಿಷಾದಿನ್ ಪದಗಳಿಗೆ ಕುಳಿತುಕೊಳ್ಳುವಿಕೆ, ವಿಶ್ರಮಿಸುವಿಕೆ ಎಂದು ಅರ್ಥ. ಇದರಿಂದ ಹೊರಡುವ ನಿಷೀಧಿಕಾ ಎಂಬುದೇ ಸರಿಯಾದ ರೂಪವೆಂದೂ "ವ್ರತಧಾರಿ ಕುಳಿತ ಸ್ಥಳದಲ್ಲಿ ಮಾಡಿದ ಗುರುತು" ಎಂಬುದು ಇದರ ಅರ್ಥವೆಂದೂ ಕೆಲವರು ಹೇಳುತ್ತಾರೆ. "ನಿಷೀಧಿಯಂ ನಿಱಿಸಿ", "ನಿಶೀಧಿಯಂ ಮಾಡಿಸಿ' ಇತ್ಯಾದಿ ಹೇಳಿಕೆಗಳ ಬಲದಿಂದ 'ನಿಷಿಧಿ' ಎಂಬುದಕ್ಕೆ ದಹನಸ್ಥಳದಲ್ಲಿ ರಚಿಸಿದ ಸ್ಮಾರಕ ಎಂಬ ಅರ್ಥವನ್ನೂ ಕೆಲವರು ಹೇಳುತ್ತಾರೆ.[೧೨]

ಹೀಗೆ ಮೂಲತಃ ನಿಷಿಧಿನಿರ್ಮಾಣವಾಗುವುದು ವ್ರತ ಹಿಡಿದ ಸ್ಥಳದಲ್ಲಿಯೋ ವ್ರತಧಾರಿಯನ್ನು ಸಹಿಸಿದ ಸ್ಥಳದಲ್ಲಿಯೋ ಎಂಬ ಸಂದೇಹವಿರುವಾಗ ಈ ಎರಡನ್ನೂ ಬಿಟ್ಟು ಬೇರೊಂದು ಸ್ಥಳದಲ್ಲಿಯೂ ನಿಲ್ಲಿಸಬಹುದೆಂಬ ಸೂಚನೆಗಳು ದೊರೆಯುತ್ತವೆ. ಗಂಗಮಾರಸಿಂಹನು ಬಂಕಾಪುರದಲ್ಲಿ,[೧೩] ಭಾನುಕೀರ್ತಿದೇವನು ಹೂವಿನ ಬಾಗೆಯಲ್ಲಿ ಮಡಿದರೂ ಬೆಳ್ಗೊಳದಲ್ಲಿ ಅವರ ನಿಷಿಧಿಶಿಲೆಗಳು ನಿಂತುದಕ್ಕೆ ಸ್ಥಳಪಾವಿತ್ರ್ಯವೇ ಕಾರಣವಾಗಿರಬಹುದು.

---

೧೦. ಸಮಯ ಪರೀಕ್ಷೆ (ಕ್ರಿ.ಶ. ೧೯೫೮) ಪು. ೫

೧೧. ವಡ್ಡಾರಾಧನೆ (೧೯೭೨) ಪು. ೩೧

೧೨. A.N. Upadhye - A note on nisidhi (Annals of the Bhadarkar Oriental Research Institute XIV p. 265).

೧೩. EC. II ಶ್ರವಣಬೆಳ್ಗೊಳ ೫೯ (ಕ್ರಿ.ಶ. ೯೭೪). ೭೧, ೭೨ (ಕ್ರಿ. ಶ. ೧೨೦೦).

ಕರ್ನಾಟಕದಲ್ಲಿ ತುಂಬ ಪ್ರಾಚೀನಕಾಲದಿಂದಲೂ ಈ ನಿಷಿಧಿ ಕುರುಹುಗಳು ಗೋಚರಿಸುತ್ತವೆ. ಜೈನಮತವನ್ನು ಈ ನಾಡಿಗೆ ಪರಿಚಯಿಸಿದ ಪ್ರಥಮರಾದ ಭದ್ರಬಾಹು, ಚಂದ್ರಗುಪ್ತ,[೧೪] ಆಮೇಲೆ ಆಗಿಹೋದ ಕಳನ್ತೂರ, ಮಾಸೇನ, ನನ್ದಿಸೇನ, ಮಲ್ಲಿಷೇಣ (ಬೆಳ್ಗೊಳ),[೧೫] ಮೋನಿಭಟಾರ (ಬಸ್ತಿಹಳ್ಳಿ),[೧೬] ಜಟಾಸಿಂಗನಂದಿ (ಕೊಪ್ಪಳ),[೧೭] ಅನನ್ತಮತಿ, ಸಸಿಮತಿ (ಬೆಳ್ಗೊಳ)[೧೮] ಮೊದಲಾದ ಮುನಿ-ಕಂತಿಯರ ನಿಷಿಧಿಗಳು ಸುಪ್ರಸಿದ್ಧವಾಗಿವೆ. ಪ್ರಾಪಂಚಿಕರಲ್ಲಿ ರಾಜಪರಿವಾರಕ್ಕೆ ಸೇರಿದ ಗಂಗಮಾರಸಿಂಹ, ರಾಷ್ಟ್ರಕೂಟ ಇಂದ್ರ IV (ಬೆಳ್ಗೊಳ),[೧೯] ಶ್ರೀ ವಿಜಯ ದಂಡನಾಥ (ದಾನವುಲಪಾಡು),[೨೦] ಕುಪ್ಪಟೂರಪ್ರಭು ಗೋಪಗೌಡ (ಕುಪ್ಪಟೂರು),[೨೧] ಶಾನ್ತಲೆಯ ತಾಯಿ ಮಾಚಿಕಬ್ಬೆ (ಬೆಳ್ಗೊಳ),[೨೨] ಪಡೆಯರ ದೋರಪಯ್ಯನ ಅರಸಿ ಪಾಂಬಬ್ಬೆ (ಕಡೂರು),[೨೩] ನಾಗಾರ್ಜುನನ ಅರಸಿ ಜಕ್ಕಿಯಬ್ಬೆ (ಬಂದಳಿಕೆ),[೨೪] ಹರ್ಯಲೆ (ಕರಡಾಳು),[೨೫] ಚಂದಿಗವುಡಿ (ಕಡಕೋಳ)[೨೬] ಮೊದಲಾದ ಪುರುಷ-ಸ್ತ್ರೀಯರೂ, ಪ್ರಜಾಪರಿವಾರಕ್ಕೆ ಸೇರಿದ ಯೋಜಣಸೆಟ್ಟಿ ಮಡದಿ ರಾಮಕ್ಕ (ಗೇರಸೊಪ್ಪೆ),[೨೭] ಭಾರಂಗಿಯ ಬುಳ್ಳಪ್ಪ (ಭಾರಂಗಿ)[೨೮] ಮೊದಲಾದ ಸ್ತ್ರೀಪುರುಷರೂ ಸಲ್ಲೇಖನವಿಧಿಯಿಂದ ಮಡಿದಿರುವರು. ಶ್ರವಣಬೆಳ್ಗೊಳವೊಂದನ್ನೇ ತೆಗೆದಕೊಂಡರೆ ಅಲ್ಲಿಯ ೧೦೮ ನಿಷಿಧಿಶಾಸನಗಳಲ್ಲಿ "ಸುಮಾರು ೨೨ ಶಾಸನಗಳು ಮುನಿಗಳ, ಗುರುಗಳ ಮರಣವನ್ನು, ಸುಮಾರು ೧೦ ಶಾಸನಗಳು ಅರಸರ, ಮಂತ್ರಿಗಳ ಮರಣವನ್ನು, ಸುಮಾರು ೯ ಶಾಸನಗಳು ಸಾಮಾನ್ಯರ ಮರಣಗಳನ್ನು ಅರಹುತ್ತವೆ. ಸ್ತ್ರೀಯರಿಗೆ ಸಂಬಂಧಿಸಿದ ಶಾಸನಗಳಲ್ಲಿ ಸುಮಾರು ೪ ಶಾಸನಗಳು ರಾಜಪರಿವಾರದ ಸ್ತ್ರೀಯರ, ಇನ್ನುಳಿದ ೭ ಶಾಸನಗಳು ಸಾಮಾನ್ಯ ಸ್ತ್ರೀಯರ ಮರಣವನ್ನು ಹೇಳುತ್ತವೆ."[೨೯] ಇದೆಲ್ಲವನ್ನು ಗಮನಿಸಿದರೆ ಪ್ರಜಾಪರಿವಾದವರಿಗಿಂತ ರಾಜಪರಿವಾರದವರ ನಿಷಿಧಿಶಾಸನಗಳು ಹೆಚ್ಚು, ರಾಜಪರಿವಾರದವರಲ್ಲಿ ಶ್ರಾವಕರಿಗಿಂತ ಶ್ರಾವಿಕೆಯರವು ಹೆಚ್ಚು. ಬಹುಶಃ ರಾಜಪರಿವಾರದ ಪುರುಷರ ಯುದ್ಧ ಮೊದಲಾದ ಆಕಸ್ಮಿಕ ಮರಣವೇ ಇದಕ್ಕೆ ಕಾರಣವಾಗಿರಬಹುದು. ಈ ರಾಜಪರಿವಾರದವರಿಗಿಂತ ಮುನಿವರ್ಗದ ಸ್ತ್ರೀಪುರುಷರ ನಿಷಿಧಿಶಾಸನ ಅಧಿಕ. ಇವರು ಪಾರಮಾರ್ಥಮುಖಿಗಳಾದುದೇ ಇದಕ್ಕೆ ಕಾರಣ.

---

೧೪. EC. II ಶ್ರವಣಬೆಳ್ಗೊಳ ೧ (ಕ್ರಿ.ಶ. ೬೦೦ ಅಥವಾ ೭೦೦).
೧೫. EC. II ಶ್ರವಣಬೆಳ್ಗೊಳ ೨೨ (ಕ್ರಿ.ಶ. ೭೦೦). 27 (ಕ್ರಿ.ಶ. ೭೦೦). ೮೮ (ಕ್ರಿ.ಶ. ೭೦೦). ೬೭ (೧೧೨೯)
೧೬. EC. V ಬೇಲೂರು ೧೨೩. ಬಸ್ತಿಹಳ್ಳಿ (ಕ್ರಿ.ಶ. ೯೫೨).
೧೭. ಶಾಸನ ಪರಿಚಯ -ಕೊಪ್ಪಳ ೧೪ (ಕ್ರಿ.ಶ. ೧೦ನೆಯ ಶತಮಾನ).
೧೮. EC. II ಶ್ರವಣಬೆಳ್ಗೊಳ ೯೮ (ಕ್ರಿ.ಶ. ೭೦೦), ೭೬ (ಕ್ರಿ.ಶ. ೭೦೦)
೧೯. EC. II ಶ್ರವಣಬೆಳ್ಗೊಳ ೧೩೩ (ಕ್ರಿ.ಶ. ೯೮೨)
೨೦. EI. X ಪು. ೧೫೦-೧೫೨ ದಾನವುಲಪಾಡು (ಕ್ರಿ.ಶ. ೧೦-೧೧ನೆಯ ಶತಮಾನ)
೨೧. EC. VII ಸೊರಬ ೨೬೧. ಕುಪ್ಪಟೂರು (ಕ್ರಿ.ಶ. ೧೪೦೮).
೨೨. EC. II ಶ್ರವಣಬೆಳ್ಗೊಳ ೧೪೩ (ಕ್ರಿ.ಶ. ೧೧೩೧)
೨೩. EC. VI ಕಡೂರು ೧. ಕಡೂರು (ಕ್ರಿ.ಶ. ೯೭೧)
೨೪. EC, VII ಶಿಕಾರಿಪುರ ೨೧೯, ಬಂದಳಿಕೆ (ಕ್ರಿ.ಶ. ೯೧೮)
೨೫. EC. XII ತಿಪಟೂರು ೯೩. ಕರಡಾಳು (ಕ್ರಿ.ಶ. ೧೧೭೪)
೨೬. IA. XII ೨ ಕಡಕೋಳ (ಕ್ರಿ.ಶ. ೧೨೭೯)
೨೭. MAR ೧೯೨೮, ನಂ. ೧೧೯, ಗೇರುಸೊಪ್ಪೆ (ಕ್ರಿ.ಶ. ೧೩೯೨)
೨೮. EC. VIII ಸೊರಬ ೩೩೦. ಭಾರಂಗಿ (ಕ್ರಿ.ಶ. ೧೪೬೫).
೨೯. ಶ್ರವಣಬೆಳ್ಗೊಳ (ಡಾ. ಬಿ.ವಿ. ಶಿರೂರ) ಪು. ೩೧೫.

ಮುನಿ-ರಾಜ-ಪ್ರಜೆ ಈ ಮೂರೂ ವರ್ಗದವರೂ 'ಮೃತ್ಯುವರವಾನಜಿದು'[೩೦] "ತನು ರುಜೆಯಂ ಪುದುಂಗೊಳಿಸೆ"[೩೧] ಮುಡಿದುದು ಸಾಮಾನ್ಯವಾಗಿದ್ದರೆ, "ಪಾವು ಮುಟ್ಟೆ"[೩೨] "ಅರಸಿ ಸುರಗತಿಯನೆಯ್ದಿದಳಿರಲಾಗ"[೩೩]ದೆಂದು ಮಡಿದಂತಹ ವಿಶಿಷ್ಟ ಉದಾಹರಣೆಗಳೂ ಇವೆ. ಇವುಗಳಿಗಿಂತ ವಿಶಿಷ್ಟವಾದುದು ಕೊಲ್ಲಾಪುರದ ಗಂಡರಾದಿತ್ಯನ ಪರವಾಗಿ ನಿಂತು ಬಿಜ್ಜಳನ ಸೈನ್ಯವನ್ನು ಎದುರಿಸಿದ ನಿಂಬಸಾಮಂತನು "ವೀರಮರಣವ್ರತ"ಕ್ಕೆ ಪರ್ಯಾಯವಾಗಿ "ಸಲ್ಲೇಖನಮರಣವ್ರತ" ಹಿಡಿದು ರಣಭೂಮಿಯನ್ನು ಪ್ರವೇಶಿಸಿ ಹೋರಾಡಿ ಮಡಿದುದು.

ಹೀಗೆ ವ್ರತ ಹಿಡಿದವರಲ್ಲಿ ಗಂಗ ಮಾರಸಿಂಹ ಮೂರು ದಿವಸ,[೩೪] ದೇವಿಯಬ್ಬೆ ಕಂತಿ ಐದು ದಿವಸ,[೩೫] ಹೈವಣರಸನ ಹೆಂಡತಿ ಶಾಂತಲದೇವಿ ಹತ್ತುದಿನ,[೩೬] ಹುಬ್ಬಳ್ಳಿಯ ಚಿಕ್ಕಮಲ್ಲಣ ಇಪ್ಪತ್ತೊಂದು ದಿವಸ,[೩೭] ಶಾಂತಲೆಯ ತಾಯಿ ಮಾಚಿಕಬ್ಬೆ ಒಂದು ತಿಂಗಳು,[೩೮] ನಾಗಮತಿಕಂತಿ ಮೂರು ತಿಂಗಳು[೩೯] ನೋಂತು ತೀರಿಕೊಂಡಿರುವರು.

ವ್ರತಹಿಡಿದು ತೀರಿಕೊಂಡವರ ಸ್ಮಾರಕಶಿಲೆಗಳನ್ನು ಗುರುಶಿಷ್ಯ ಸಂಬಂಧ, ಕೌಟುಂಬಿಕ ಸಂಬಂಧದವರು ನಿಲ್ಲಿಸಿರುವರು. ಶ್ರೀಮತಿಗಂತಿಗೆ ಶಿಷ್ಯೆ ಮಾಂಕಬ್ಬೆಕಂತಿ,[೪೦] ಭಾನುಕೀರ್ತಿದೇವನಿಗಾಗಿ ಹೆಗ್ಗಡತಿ ಬಾಗಣಬ್ಬೆ,[೪೧] ತಾಯಿ ಪೋಚಾಂಬಿಕೆಗಾಗಿ ಮಗ ಗಂಗರಾಜ,[೪೨] ಪತಿ ಹೊಯ್ಸಳಶೆಟ್ಟಿ, ಹಾಗೂ ಮಗ ಬೂಚಣನಿಗಾಗಿ ಚೆಟ್ಟಿಕಬ್ಬೆ[೪೩] ನಿಷಿಧಿಶಿಲೆ ನಿಲ್ಲಿಸಿದುದನ್ನು ಗಮನಿಸಬೇಕು. ಹೊಯ್ಸಳ ಮಂತ್ರಿ ಗಂಗರಾಜನ ಮನೆತನಕ್ಕೆ ಸಂಬಂಧಿಸಿದಂತೆ ಗಂಗರಾಜನ ಹೆಂಡತಿ ಲಕ್ಷ್ಮಿ ತನ್ನ ಸೋದರ ಬೂಚಣನಿಗಾಗಿ, ಗಂಗರಾಜ ಲಕ್ಷ್ಮಿಯರು ಮೇಘಚಂದ್ರತ್ರೈವಿದ್ಯರಿಗಾಗಿ, ಗಂಗರಾಜ ಲಕ್ಷ್ಮಿಗಾಗಿ, ಗಂಗರಾಜ ಗುರು ಶುಭಚಂದ್ರದೇವರಿಗಾಗಿ, ಗಂಗರಾಜನ ಮಗ ಬೊಪ್ಪನು ತನ್ನ ದೊಡ್ಡಪ್ಪನ ಮಗ ಏಚಿರಾಜನಿಗಾಗಿ ನಿಷಿಧಿ ನಿಲ್ಲಿಸಿದುದನ್ನು ನಾವು ಕಾಣುತ್ತೇವೆ.[೪೪] ಕೆಲವು ಸಲ ಏಕಕಾಲಕ್ಕೆ ಸಲ್ಲೇಖನವ್ರತದಿಂದ ಮಡಿದ ಒಂದು ಮನೆತನದವರ ನಿಷಿಧಿಯನ್ನು ಒಂದೇ ಕಲ್ಲಿನಲ್ಲಿ ಬರೆಯಬಹುದೆಂಬುದಕ್ಕೆ "ದೇವಿಸೆಟಿ ಸೋಮವೆ ಲಿಂಗವೆ ಯಿಂತೀ ಮೂವರು ಸಮಾಧಿಯಿಂದಂ ಮುಡಿಪಿ ಸ್ವರ್ಗಸ್ತರಾದರು" ಎಂಬ ಈ ನಿಷಿಧಿಗಲ್ಲು ಉದಾಹರಣೆಯಾಗಿದೆ.[೪೫] ಇನ್ನು ಕೆಲವು ಸಲ ಬೇರೆ ಬೇರೆ ಕಾಲದಲ್ಲಿ

---

೩೦. EC. II ಶ್ರವಣಬೊಳ್ಗೊಳ ೧೧೩ (ಕ್ರಿ.ಶ. ೭೦೦).
೩೧. EC. VII ಶಿಕಾರಿಪುರ ೨೧೯, ಬಂದಳಿಕೆ (ಕ್ರಿ.ಶ. ೯೭೧).
೩೨. EC. II ಶ್ರವಣಬೆಳ್ಗೊಳ ೨೧(ಕ್ರಿ.ಶ. ೭೦೦)
೩೩. EC II ಶ್ರವಣಬೆಳ್ಗೊಳ ೧೪೩ (ಕ್ರಿ.ಶ. ೧೧೩೧).
೩೪. EC. II ಶ್ರವಣಬೆಳ್ಗೊಳ ೫೯ (ಕ್ರಿ.ಶ. ೯೭೪)
೩೫. EC. XV ಹೊಳೆನರಸೀಪುರ ೬೫ ಅಂಕನಾಥಪುರ (ಕ್ರಿ.ಶ. ೯೫೦)
೩೬. MAR ೧೯೨೮ ನಂ. ೧೧೦, ಗೇರಸೊಪ್ಪೆ (ಕ್ರಿ. ಶ. ೧೪೦೪).
೩೭. ಕರ್ನಾಟಕ ಭಾರತಿ ೮-೨. ಕವಿ ಚಿಕ್ಕಮಲ್ಲಣ್ಣನ ಅಳ್ನಾವರ ಶಾಸನ.
೩೮. EC. II ಶ್ರವಣಬೆಳಗೊಳ ೧೪೩ (ಕ್ರಿ.ಶ. ೧೧೩೧).
೩೯. EC. II ಶ್ರವಣಬೆಳಗೊಳ ೨೦ (ಕ್ರಿ.ಶ. ೭೦೦)
೪೦. EC. II ಶ್ರವಣಬೆಳಗೊಳ ೩೫೧ (ಕ್ರಿ.ಶ. ೧೧೧೯)
೪೧. EC. II ಶ್ರವಣಬೆಳಗೊಳ ೭೧-೭೨ (ಕ್ರಿ.ಶ. ೧೨೦೦)
೪೨. EC. II ಶ್ರವಣಬೆಳಗೊಳ ೧೧೮ (ಕ್ರಿ.ಶ. ೧೧೨೦)
೪೩. EC. II ಶ್ರವಣಬೆಳಗೊಳ ೧೫೯ (ಕ್ರಿ. ಶ. ೧೧೩೦)
೪೪. EC. II ಶ್ರವಣಬೆಳಗೊಳ ೧೨೬(ಕ್ರಿ.ಶ. ೧೧೧೩).೧೨೭ (ಕ್ರಿ.ಶ. ೧೧೧೫). ೧೨೮ (ಕ್ರಿ.ಶ. ೧೧೨೧),೧೧೭ (ಕ್ರಿ.ಶ.೧೧೨೩). ೩೮೪ (ಕ್ರಿ.ಶ. ೧೧೩೫)
೪೫. EC. VII ಶಿಕಾರಿಪುರ ೭, ಈಸೂರು

ಮಡಿದ ಒಂದು ಮನೆತನದವರ ನಿಷಿಧಿಗಳನ್ನು ಒಂದೇ ಕಲ್ಲಿನಲ್ಲಿ ಆಗಾಗ ಬರೆಯಬಹುದು. ಉದಾ: ಗುಬ್ಬಿ ತಾಲೂಕಿನ ನಿಟ್ಟೂರಿನಲ್ಲಿ ಮಾಳವ್ವೆ ಮತ್ತು ಸೊಸೆ ಚೌಡಿಯಕ್ಕರು ನಿಷಿಧಿಮರಣ ಹೊಂದುತ್ತಾರೆ. ಕಾಲಕ್ರಮದಲ್ಲಿ ಈ ಮಾಳವ್ವೆಯ ಇನ್ನೊಬ್ಬ ಸೊಸೆ ಬೂಚವ್ವೆ ಕೆಲವು ವರ್ಷಗಳಾದ ಬಳಿಕ ಮಾಳವ್ವೆಯ ಮಗನಾಗಿರಬಹುದಾದ ಮಲ್ಲಿಸೆಟ್ಟಿ ಮತ್ತು ಅವನ ಮಗ ಮಾಳಯ್ಯ ನಿಷಿಧಿಮರಣ ಹೊಂದುತ್ತಾರೆ.[೪೬] ಹೀಗೆ ಬೇರೆ ಬೇರೆ ಕಾಲಗಳಲ್ಲಿ ಘಟಿಸಿದ ಈ ಮೂರೂ ನಿಷಿಧಿ ಘಟನೆಗಳನ್ನು ಒಂದೇ ಕಲ್ಲಿನ ಮೇಲೆ ಎಡಬಲ ಪಕ್ಕಗಳಲ್ಲಿ ಕೆತ್ತಲಾಗಿದೆ. ಇಲ್ಲಿ ಸಮಾಧಿಮರಣವೂ ಆಗಾಗ ಜೋಳವಾಳಿ ಮರಣಸ್ವರೂಪ ಪಡೆದುದಕ್ಕೆ ವ್ರತಹಿಡಿದು ಯುದ್ಧದಲ್ಲಿ ಹೋರಾಡಿ ಮಡಿದ ನಿಂಬಸಾಮಂತ, ವೇಳೆವಾಳಿ ಮರಣಸ್ವರೂಪ ಪಡೆದುದಕ್ಕೆ ಮಗಳು ಶಾಂತಲೆಗಾಗಿ ತಾಯಿ ಮಾಚಿಕಬ್ಬೆ, ಮಲ್ಲಿಸೆಟ್ಟಿಗಾಗಿ ಪ್ರಿಯಪುತ್ರ ಮಾಳಯ್ಯ, ಅತ್ತೆ ಮಾಳವ್ವೆಗಾಗಿ ಸೊಸೆ ಚೌಡಿಯಕ್ಕ ಹಿಡಿದ ಸಲ್ಲೇಖನಗಳು ಉದಾಹರಣೆಯಾಗಿವೆ. ಇವು ಜೈನಸಮಾಧಿಮರಣದ ವಲಯ ವಿಸ್ತಾರವಾಗುತ್ತಿದ್ದುದರ ಅಂದರೆ ಹಿಂದೂ ಮರಣಕ್ಕೆ ಹೊಂದಿಕೊಳ್ಳುತ್ತಿದ್ದುದರ ಸೂಚನೆಗಳಾಗಿವೆ. ಪ್ರತಿಷ್ಠೆಗಾಗಿ ಇನ್ನೊಬ್ಬರಿಗೋಸುಗ ವೇಳೆವಾಳಿ ಮರಣವನ್ನಪ್ಪುತ್ತಿದ್ದಂತೆ ಸಮಾಧಿಮರಣವನ್ನೂ ಅಪ್ಪುತ್ತಲಿದ್ದ ವ್ಯಾಹಾರಿಕ ದೃಷ್ಟಿಯನ್ನೂ ಇಲ್ಲಿ ಗಮನಿಸಬಹುದಾಗಿದೆ.

ಸಾಮಾನ್ಯವಾಗಿ ಈ ಸ್ಮಾರಕಗಳು ಶಿಲಾಫಲಕಗಳಾಗಿರುತ್ತಿದ್ದರೂ ಸ್ತಂಭಾಕಾರದ ನಿಷಿಧಿಗಳನ್ನೂ ನಿಲ್ಲಿಸುತ್ತಿದ್ದುದುಂಟು.

ಗುರುಗಳ ಸುಕೀರ್ತಿಲತಿಕಾ
ಪರಮೆನಿಸಿ ನಿಶೀಧಿಕಾ ಶಿಳಾಸ್ತಂಭಮನಾ
ದರದಿಂ ನಿರಿಸಿದರುರ್ವ್ವರೆ
ಪರಿಕೀರ್ತ್ತಿಸೆ ನೆಗಳ್ದ ಬಾಹುಬಲಿ ಮುನಿನಾಥರ್ ॥

ಎಂದು ಈ ಪದ್ಯ ಕನಕಶಾಂತಿಮುನಿಗಾಗಿ ಶಿಷ್ಯ ಬಾಹುಬಲಿ ಸ್ತಂಭಾಕಾರದ ನಿಷಿಧಿಶಿಲೆ ನಿಲ್ಲಿಸಿದುದನ್ನು ತಿಳಿಸುತ್ತದೆ.[೪೭] ಚಾಮುಂಡದೇವನ ಮಡದಿ ದೇವಿಯಕ್ಕನ ನಿಷಿಧಿ ಮರಣದ ಶಿಲಾಸ್ತಂಭವು, ಜಯಸ್ತಂಭದಂತಿದೆ ಎಂಬ ವರ್ಣನೆಯನ್ನು ಇಲ್ಲಿ ಲಕ್ಷಿಸಬೇಕು.[೪೮] ಸಾಮಾನ್ಯವಾಗಿ ಇವುಗಳನ್ನು ಬಯಲಿನಲ್ಲಿ ನಿಲ್ಲಿಸುತ್ತಿದ್ದರೂ ಸುಂದರವಾದ ಮಂಟಪಯುಕ್ತ ವೇದಿಕೆಯ ಮೇಲೆಯೂ ನಿಲ್ಲಿಸಿದ ಉದಾಹರಣೆಗಳಿವೆ. ದೇವಕೀರ್ತಿಪಂಡಿತ ಮತ್ತು ಶುಭಚಂದ್ರಯತಿಗಳ ಜೋಡು ಸ್ಮಾರಕಗಳನ್ನೊಳಗೊಂಡ ಮಂಟಪ, ಮಲ್ಲಿಷೇಣನ ಸ್ಮಾರಕವನ್ನೊಳಗೊಂಡ ಮಂಟಪಗಳನ್ನು (ಚಿತ್ರ ೨) ಇಲ್ಲಿ ಉದಾಹರಿಸಬಹುದು.

ವಿಶೇಷವ್ಯಕ್ತಿಗಳಿಗಾಗಿ ನಿಷಿಧಿ ಹೆಸರಿನಲ್ಲಿ ಬಸದಿ ಮುಂತಾದ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಸ್ವಾಮಿ ಕಾರ್ತಿಕಋಷಿಯ ನಿಷಧಿ ಸ್ಮರಣೆಗಾಗಿ ತಂಗಿ ವೀರಶ್ರೀ ಬಸದಿ ಕಟ್ಟಿಸಿದ ವಿಷಯ ವಡ್ಡಾರಾಧನೆಯಲ್ಲಿದೆ.[೪೯] ಮೋಱಿಂಗೆಱೆತೀರ್ಥದಲ್ಲಿ ಮುಡುಪಿದ ಬಲದೇವನಿಗಾಗಿ ತಾಯಿ ನಾಗಿಯಕ್ಕ, ತಂಗಿ ಏಚಿಯಕ್ಕ ಒಮ್ಮಾಳಿಗೆಯಲ್ಲಿ ಪಟ್ಟಸಾಲೆ ಕಟ್ಟಿಸಿದರೆಂದು ತಿಳಿದುಬರುತ್ತದೆ.[೫೦] ಶಾಸನಗಳಲ್ಲಿ ಬರುವ 'ನಿಷದ್ಯಾಲಯ' ಇದನ್ನೇ

---

೪೬. EC. XII ಗುಬ್ಬಿ ೫, ೬, ೭ ನಿಟ್ಟೂರು (ಕ್ರಿ.ಶ. ೧೨೦೦)
೪೭. ಧಾರವಾಡ ತಾಲೂಕಿನ ಶಾಸನಗಳು ನಂ. ೪೨. ನರೇಂದ್ರ
೪೮. EC. XII ಶ್ರವಣಬೆಳಗೊಳ ೧೨೯ (ಕ್ರಿ.ಶ. ೧೧೨೦)
೪೯. ವಡ್ಡಾರಾಧನೆ (೧೯೭೨) ಪು. ೧೧೭
೫೦. EC. II ಶ್ರವಣಬೆಳಗೊಳ ೧೪೧ (ಕ್ರಿ.ಶ. ೧೧೩೯)

ಸೂಚಿಸುತ್ತಿರಬೇಕು. ಹೀಗೆ ಸ್ಥಾಪಿತವಾದ ನಿಷಿಧಿಗಳ ಪೂಜೆ ಪುರಸ್ಕಾರಕ್ಕೋಸುಗ ಕ್ವಚಿತ್ತಾಗಿ ದಾನ ನೀಡುತ್ತಿದ್ದುದನ್ನು 'ನಿಶಿದಿಯಂ ಮಾಡಿಸಿ ಆ ನಿಶಿದಿಯ ಅರ್ಚನೆಗೆ ಬಿಟ್ಟಂತಹ ಕ್ಷೇತ್ರ, ಬಸದಿಗೆ ಪೂರ್ವದಲುಳ್ಳ ಗದ್ದೆಯಿಂ ತೆಂಕಣ ಒತ್ತಿನ ಆ ಸರಿಸದಲು ಹತ್ತು ಖಂಡುಗ ಗದ್ದೆಯನು ಧಾರಾಪೂರ್ವಕವಾಗಿ ನಡೆವ ಹಾಂಗೆ ಆ ಹಿರಿಯ ಮಾದಣ್ಣನವರು ಬಿಟ್ಟ ದತ್ತಿ"[೫೧] ಎಂಬ ಉಲ್ಲೇಖ ಸ್ಪಷ್ಟಪಡಿಸುತ್ತದೆ.

ಕಾಲಕಾಲಕ್ಕೆ ನಿಲ್ಲಿಸಿದ ನಿಷಿಧಿಶಿಲೆಗಳ ಅಂಕಿಸಂಖ್ಯೆ ಅನೇಕ ವಿಷಯಗಳನ್ನು ಹೊರಗೆಡಹುತ್ತದೆ. ಕೇವಲ ಶ್ರವಣಬೆಳ್ಗೊಳವನ್ನೇ ನೋಡಿದರೆ ಇಲ್ಲಿಯ ೧೦೮ ನಿಷಿಧಿ ಶಾಸನಗಳಲ್ಲಿ "ಸುಮಾರು ೫೬ ಶಾಸನಗಳು ಕ್ರಿ. ಶ. ೭ನೆಯ ಶತಮಾನಕ್ಕೆ ಸಂಬಂಧಿಸಿದುವು. ಕ್ರಿ.ಶ. ೮ನೆಯ ಶತಮಾನದಲ್ಲಿ ೩, ೯ನೆಯ ಶತಮಾನದಲ್ಲಿ ೧, ೧೦ನೆಯ ಶತಮಾನದಲ್ಲಿ ೭. ೧೧ನೆಯ ಶತಮಾನದಲ್ಲಿ ೪, ೧೨ ನೆಯ ಶತಮಾನದಲ್ಲಿ ೧೨, ೧೩ನೆಯ ಶತಮಾನದಲ್ಲಿ ೩, ೧೪ನೆಯ ಶತಮಾನದಲ್ಲಿ ೬, ಅನಂತರದ ಶತಮಾನಗಳಲ್ಲಿ ೪ ಶಾಸನಗಳು ಈ ವಿಷಯವನ್ನು ನಿರೂಪಿಸುತ್ತವೆ. ಇದರಿಂದ ಕ್ರಿ.ಶ. ೭ ಮತ್ತು ೧೨ನೆಯ ಶತಮಾನಗಳಲ್ಲಿ ಸಮಾಧಿಮರಣವನ್ನಪ್ಪುವ ಪದ್ಧತಿ ಅಧಿಕವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ".[೫೨] ಇಂಥ ಅಂಕಿಸಂಖ್ಯೆಗಳನ್ನು ವಿಶ್ಲೇಷಿಸಿ ಈ ಹೆಚ್ಚು ಕಡಿಮೆಗಳ ಕಾರಣವನ್ನು ಹುಡುಕುವುದು ಅವಶ್ಯವಿದೆ.

ನಿಷಿಧಿಶಿಲೆಗಳನ್ನು ಚಿತ್ರವುಳ್ಳವು, ಬರವಣಿಗೆಯುಳ್ಳವು, ಚಿತ್ರ ಮತ್ತು ಬರವಣಿಗೆಯುಳ್ಳವು ಎಂದು ವರ್ಗೀಕರಿಸಬಹುದು. ಬೋಧಿಸುವ ಗುರು, ಆಲಿಸುವ ಶಿಷ್ಯ ಇಬ್ಬರ ಮಧ್ಯ ಪುಸ್ತಕ ಹೊತ್ತ ವ್ಯಾಸಪೀಠ - ಈ ಚಿತ್ರವೇ ಸಾಮಾನ್ಯವಾಗಿ ನಿಷಿಧಿ ಶಿಲೆಗಳ ಶಿಲ್ಪವಾಗಿದೆ. ಕೆಲವು ಸಲ ಕೇವಲ ಜಿನವಿಗ್ರಹವನ್ನು ಕೆತ್ತಿರಬಹುದು. ಅಲ್ಲದೆ ಕೆಳಗಿನ ಸ್ತರದಲ್ಲಿ ವ್ಯಾಸಪೀಠ ಸಹಿತ ಗುರುಶಿಷ್ಯ, ಮೇಲಿನ ಸ್ತರದಲ್ಲಿ ತೀರ್ಥಂಕರನ ಪಾದ ಸಮೀಪ ಕೈಮುಗಿದು ಕುಳಿತ ಶಿಷ್ಯಚಿತ್ರ ಇರುತ್ತವೆ. ವಿಶೇಷವಾಗಿ ಉಬ್ಬು ಚಿತ್ರಗಳಾಗಿರುವ ಇವು ಶಿಲೆಯ ಅಗ್ರದಲ್ಲಿ ಕೆತ್ತಲ್ಪಟ್ಟಿದ್ದರೂ ಮಧ್ಯದಲ್ಲಿ ಕೆತ್ತಿದ ಉದಾಹರಣೆಗಳೂ ಉಂಟು. ಪ್ರಸಿದ್ಧ ವ್ಯಕ್ತಿಯ ನಿಷಿಧಿಕಲ್ಲುಗಳು ಸುಂದರವಾಗಿದ್ದರೆ, ಅಪ್ರಸಿದ್ಧ ವ್ಯಕ್ತಿಯವು ಸಾಮಾನ್ಯವಾಗಿರುವುದು ವ್ಯಾವಹಾರಿಕವೇ ಸರಿ. ಇದಲ್ಲದೆ ಸಾಮಾನ್ಯರ ಸಾವಿರಾರು ನಿಷಿಧಿಗಳು ಬರವಣಿಗೆಯಿಲ್ಲದೆ ಕೇವಲ ಸಾಮಾನ್ಯಚಿತ್ರದೊಂದಿಗೆ ಹಳ್ಳಿ-ಪಳ್ಳಿಗಳಲ್ಲಿ ಬಿದ್ದಿರುವುದುಂಟು.

ಅರಸರ ಜೈನ ಒಲವು ಕಾರಣವಾಗಿ ಹೊಯ್ಸಳರ, ಶಾಂತರಸರ, ಭೈರರಸರ ಕಾಲದಲ್ಲಿ ಇವು ಹೆಚ್ಚು ವಿವರಪೂರ್ಣವೂ ಸುಂದರವೂ ಆಗಿವೆ. ನಿಷಿಧಿಕಲ್ಲುಗಳಲ್ಲಿ ಅಭ್ಯಾಸಿಗಳ ಗಮನ ಸೆಳೆಯುವ ಅಂಶವೆಂದರೆ ಶಿಲ್ಪಕ್ಕಿಂತ ಬರವಣಿಗೆಯೇ ಆಗಿದೆ. ಅಂದರೆ ಶಿಲ್ಪದಲ್ಲಿ ವೈವಿಧ್ಯವಾಗಲಿ, ಆಕರ್ಷಣೆಯಾಗಲಿ ಕಡಿಮೆ. ಬರವಣಿಗೆ ಮಾತ್ರ ಧರ್ಮ, ಸಮಾಜ, ಸಾಹಿತ್ಯಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒದಗಿಸುತ್ತದೆ.

ಕನ್ನಡಸಾಹಿತ್ಯದ ಪ್ರಥಮಘಟ್ಟದ ಅವಶೇಷಗಳೆಂದರೆ ಶಾಸನಗಳು. ಇವು ಕ್ರಿ.ಶ. ೫ನೆಯ ಶತಮಾನದಿಂದ ಪ್ರಾರಂಭವಾಗುತ್ತಿದ್ದರೂ ಅಲ್ಲಿ ಶ್ರೀಮಂತ ಸಾಹಿತ್ಯ ಮೊದಲು ಕಂಡುಬರುವುದು ನಿಷಿಧಿಶಾಸನಗಳಲ್ಲಿಯೇ. ಹೀಗಾಗಿ ನಿಷಿಧಿ ಶಾಸನಗಳನ್ನು ಕನ್ನಡನಾಡಿನ ಪ್ರಥಮಸಾಹಿತ್ಯಪಾಠಗಳೆಂದು ಕರೆಯಬಹುದು. ಶ್ರವಣಬೆಳ್ಗೊಳದ ಅನೇಕ ಶಾಸನಗಳು ಇದಕ್ಕೆ ಉದಾಹರಣೆಯೆನಿಸಿವೆ.

---

೫೧. EC. V ಮೈಸೂರು ೧೮೫. ಹಡಜನ (ಕ್ರಿ.ಶ. ೧೩೮೪).
೫೨. ಶ್ರವಣಬೆಳಗೊಳ (ಡಾ. ಬಿ.ವಿ. ಶಿರೂರ) ಪು. ೩೧೫

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೋಲ್ ಮಂಜುವೋಲ್ ತೋರಿ ಬೇಗಂ
ಪಿರಿಗುಂ ಶ್ರೀರೂಪಲೀಲಾಧನವಿಭವ ಮಹಾರಾಶಿಗಳ್ನಿಲ್ಲವಾರ್ಗ್ಗಂ
ಪರಮಾರ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆಂದು ಸನ್ಯಸಂಗ್ಯೆ
ದುರು ಸತ್ವನ್ ನಂದಿಸೇನಪ್ರವರಮುನಿವರನ್ ದೇವಲೋಕಕ್ಕೆ ಸಂದಾನ್ ॥

ಈ ಪದ್ಯವಂತೂ ಸುರಚಾಪ, ವಿದ್ಯುಲ್ಲತೆ, ಮಂಜುಗಳಿಂದ ಭೂಷಿತವಾದ ಸಾಹಿತ್ಯಿಕ ವಾತಾವರಣವನ್ನು ಹೊತ್ತು ನಿಂತಿದೆ.[೫೩] ಇದೇ ಸಮಯದ ಪದ್ಯಗಳಲ್ಲಿ ಕಂಡುಬರುವ 'ನೋನ್ತೆಯ್ದಿದೋರ್ಸಿದ್ಧಿಯಾನ್'[೫೪] 'ಅವರ್ ಸ್ವರ್ಗ್ಗಾಗ್ರಮಾನೇಱಿದಾರ್'[೫೫] "ದೇವಲೋಕಕ್ಕೆ ಸನ್ದಾನ್'[೫೬] ಎಂಬಲ್ಲಿಯ ಕ್ರಿಯಾಪದದ ದೀರ್ಘೀಕರಣಗಳು ವ್ರತಿಯು ಸ್ವರ್ಗಕ್ಕೆ ಏರಿಹೋದುದನ್ನು ದೃಶ್ಯವತ್ತಾಗಿ ಚಿತ್ರಿಸುತ್ತವೆ. ಇಲ್ಲಿಯ ಕ್ರಿಯೆಗೆ ತಕ್ಕ ಅಭಿನಯಾತ್ಮಕ ಶೈಲಿ ತುಂಬ ಆಕರ್ಷಕವಾಗಿದೆ. ಜಕ್ಕಲೆಯನ್ನು ಕುರಿತು

ಸಲೆ ಮೋಹಧ್ವಾಂತದಿಂದಂ ಮುಗಿದ ಹೃದಯನೀರೇಜಮಂ ಜೈನವಾಕ್ಯಾ
ಮಲಭಾನುಜ್ಯೋತಿಯಿಂದಂ ವಿಕಸಿಸಿ, ಅದರೊಳ್ ದೇವದೇವೇಶನಂ ನಿ
ಶ್ಚಲಮಾಗಿರ್ದಾತ್ಮಸಂತೋಷದೊಳ್ ಜಿನನಂ ಜಾನಿಸುತ್ತ ಲತಾಕೋ
ಮಲೆ ಬಿಟ್ಟಳ್ ಜಕ್ಕಿಯಕ್ಕಂ ತನುವನುೞಿದರಾರ್ ಪೋಲ್ವರ್ ತನ್ನಂ ॥[೫೭]

ಎಂಬ ಪದ್ಯದಲ್ಲಿ, ತಣ್ಣನೆಯ ನಿಶ್ಚಲ ಜ್ಯೋತಿಯೊಂದು ಕ್ರಮೇಣ ನಂದಿದಂತೆ ಪ್ರಾಣೋತ್ಕ್ರಮಣ ಚಿತ್ರವನ್ನು ಬಿಡಿಸಲಾಗಿದೆ.

ಅಳ್ನಾವರದ ಶಾಸನವೊಂದು 'ಸಮ್ಯಕ್ತ್ವ ಕೌಮುದಿ" ಕರ್ತೃವಾದ ಹುಬ್ಬಳ್ಳಿಯ ಚಿಕ್ಕಮಲ್ಲಣ್ಣಸೆಟ್ಟಿಯ ಸಮಾಧಿಮರಣವನ್ನು ಹೇಳುತ್ತ

ಮತ್ತಮತಿಶಯ ಜಿನಪದಾಂಭೋಜಚರಣ
ಬಿತ್ತರಿಪ ಪಂಚಪದಪೂರಿತಾಂತಃಕರಣ
ಗುರುಪದಾಂಬುಜ ಪರಾಗರಂಜಿತ ಭಾಳ
ಭರತಕಾವ್ಯಪ್ರಮುಖ ನಾನಾಕಳಾಭಾಳ
ವಸುಧಾಂತರಾಳ ವಿಶ್ರುತ ವಿವಿಧಸುಚರಿತ್ರ
ಲಸಿತ ಜಿನಗಂಧಪುಷ್ಕರ ಪವಿತ್ರಿತಗಾತ್ರ
ಧರೆಯೊಳಗೆ ಹುಬ್ಬಳ್ಳಿ ಸಿದ್ಧೇಂದ್ರ ತನುಜಾತ
ಸರಸಕೋವಿದ ಚಿಕ್ಕಮಲ್ಲಣ್ಣನತಿ ಖ್ಯಾತ

ಎಂದು ರಗಳೆಬಂಧದಲ್ಲಿ ಅವನ ವ್ಯಕ್ತಿತ್ವವನ್ನು ಬಿಡಿಸಿದೆ.[೫೮]

---

೫೩. EC. II ಶ್ರವಣಬೆಳ್ಗೊಳ ೮೮ (ಕ್ರಿ.ಶ. ೭ನೆಯ ಶತಮಾನ).
೫೪. EC. II ಶ್ರವಣಬೆಳ್ಗೊಳ ೨೨ (ಕ್ರಿ.ಶ. ೭ನೆಯ ಶತಮಾನ).
೫೫. EC. II ಶ್ರವಣಬೆಳ್ಗೊಳ ೨೭ (ಕ್ರಿ.ಶ. ೭ನೆಯ ಶತಮಾನ).
೫೬. EC. II ಶ್ರವಣಬೆಳ್ಗೊಳ ೮೮ (ಕ್ರಿ.ಶ. ೭ನೆಯ ಶತಮಾನ)
೫೭. EC. VII ಶಿಕಾರಿಪುರ ೧೯೬. ಚಿಕ್ಕಮಾಗಡಿ (ಕ್ರಿ.ಶ. ೧೨೧೨)
೫೮. ಕರ್ನಾಟಕ ಭಾರತಿ ೮-೨. ಕವಿ ಚಿಕ್ಕಮಲ್ಲಣ್ಣನ ಅಳ್ನಾವರ ಶಾಸನ.

ಸಾಮಾನ್ಯವಾಗಿ ನಿಷಿಧಿಶಾಸನಗಳು ಘಟನೆಯನ್ನು ಮಾತ್ರ ನಿರೂಪಿಸುವ ಚಿಕ್ಕ ಬರವಣಿಗೆಗಳಾಗಿದ್ದರೂ ಗಂಗ ಮಾರಸಿಂಹ, ರಾಷ್ಟ್ರಕೂಟ ಇಂದ್ರರಾಜ,[೫೯] ಮಂತ್ರಿ ಹುಳ್ಳನ ಗುರು ದೇವಕೀರ್ತಿಪಂಡಿತ,[೬೦] ಸಾಧ್ವಿ ಹರ್ಯಲದೇವಿ,[೬೧] ಗೋಪಗೌಡ[೬೨] ಮೊದಲಾದವರ ನಿಷಿಧಿಗಳು ಸುದೀರ್ಘವೂ ಕಾವ್ಯಮಯವೂ ಆಗಿವೆ, ಶ್ರವಣಬೆಳ್ಗೊಳದ ಮಾರಸಿಂಹನ ನಿಷಿಧಿ 'ನುಡಿದನೆ ಕಾವುದನೆ' ಎಂಬ ಶಬ್ದಮಣಿದರ್ಪಣ ಪದ್ಯವನ್ನು, ಗೋಪಗೌಡನ ನಿಷಿಧಿ 'ಜಿನಧರ್ಮಾವಾಸದತ್ತು.... ಚಾರುಕರ್ಣಾಟದೇಶಂ"[೬೩] ಎಂಬ ಸುಪ್ರಸಿದ್ಧ ಪದ್ಯವನ್ನು ಒಳಗೊಂಡಿವೆ.

ನಿಷಿಧಿಶಾಸನಗಳು ಜೈನಧರ್ಮದ ತತ್ತ್ವ ಮತ್ತು ಆಚರಣೆಗಳ ನಿಶ್ಚಯ - ವ್ಯವಹಾರ ಮುಖಗಳನ್ನೂ ತಿಳಿಸಿಕೊಡುತ್ತವೆ. ಉದಾ: ಈಗ ನಡೆಯುತ್ತಿರುವುದು ದುಷಮಕಾಲ. ಈ ಕಾಲದಲ್ಲಿ ಜೈನಮತದ ಪ್ರಕಾರ ಯಾರೂ ಮೋಕ್ಷಕ್ಕೆ ಹೋಗಲಾರರು. ಹೀಗಿದ್ದೂ "ಮೋಕ್ಷಪದವನೆಯ್ದಿದರು",[೬೪] "ಶಿವನಿಲೆ ಪಡೆದಾನ್"[೬೫] ಮೊದಲಾದ ನಿಷಿಧಿಶಾಸನಗಳಲ್ಲಿಯ ಮಾತುಗಳು ತತ್ತ್ವವಿರುದ್ಧವಾಗಿ ತೋರುತ್ತವೆ. ಮರಣ ಅನಿವಾರ್ಯವೆನಿಸಿದ ಸಂದರ್ಭದಲ್ಲಿ ಮಾತ್ರ ಸಲ್ಲೇಖನ ಹಿಡಿಯುವುದಕ್ಕೆ ಬದಲು ಸತ್ತ ಅತ್ತೆಗಾಗಿ ಸೊಸೆ, ಮಗಳಿಗಾಗಿ ತಾಯಿ. ಒಡೆಯನಿಗಾಗಿ ಆಳು, ಸಲ್ಲೇಖನ ಹಿಡಿಯವುದು (ಪು. ನೋಡಿ) ತತ್ತ್ವವಿರೋಧವೇ ಸರಿ. ಆಚರಣೆಗೆ ಸಂಬಂಧಿಸಿದಂತೆ 'ಏಕಪಾರ್ಶ್ವನಿಯಮದಿಂ, ಪಲ್ಯಂಕಾಸನದೊಳಿರ್ದು, ಮಾಸೋಪವಾಸಂ ಮಾಡಿ, ಕುಕ್ಕುಟಾಸನದೊಳಿರ್ದು, ಶುಕ್ಲಧ್ಯಾನದಿಂ..." ಇತ್ಯಾದಿ ಅಂಶಗಳೂ ಇಲ್ಲಿ ಕಂಡು ಬರುತ್ತವೆ.

ಒಟ್ಟಿನಲ್ಲಿ ಈ ಸರ್ವ ನಿಷಿಧಿಶಾಸನಗಳ ಸಹಾಯದಿಂದ ಆಯಾ ಶತಮಾನದ ಸಮಾಧಿಮರಣಗಳ ಸಂಖ್ಯೆ, ಮರಣವನ್ನಪ್ಪಿದ ಸ್ತ್ರೀ-ಪುರುಷರ ಪ್ರಮಾಣ, ಅವರ ಘನತೆ ಗೌರವ, ಗುರುಶಿಷ್ಯ ಸಂಬಂಧ, ಕೌಟುಂಬಿಕ ಸಂಬಂಧ, ಗಣಗಚ್ಛಗಳ ವಿವರ, ಸಲ್ಲೇಖನವ್ರತದ ಕಾರಣ, ಆ ವ್ರತದ ಪ್ರಾಯೋಗಿಕ ಸ್ವರೂಪ ಮೊದಲಾದ ಅಂಶಗಳನ್ನು ಸಂಗ್ರಹಿಸಿದರೆ, ಪ್ರಾಚೀನ ಜೈನಸಮಾಜದ ಧಾರ್ಮಿಕ ಆಚರಣೆಯ ಒಂದು ಅಂಗವಾದ ಸಮಾಧಿಮರಣದ ಸ್ವರೂಪ, ಇತಿಹಾಸಗಳನ್ನು ಚಿತ್ರಿಸಲು ಸಾಧ್ಯವಾಗುತ್ತದೆ.

❖❖

೫೯. EC. II ಶ್ರವಣಬೆಳ್ಗೊಳ ೫೯ (ಕ್ರಿ.ಶ. ೯೭೪) ೧೩೩ (ಕ್ರಿ.ಶ.ಸು. ೯೮೨)

೬೦. EC. II ಶ್ರವಣಬೆಳ್ಗೊಳ ೬೪ (ಕ್ರಿ.ಶ. ೧೧೬೩)

೬೧. EC. XII ತಿಪಟೂರು ೯೩. ಕರಡಾಳು (ಕ್ರಿ.ಶ. ೧೧೭೪)

೬೨. EC. VIII ಸೊರಬ ೯೩. ಕುಪ್ಪಟೂರು (ಕ್ರಿ.ಶ. ೧೪೦೮)

೬೩. EC. VIII ಸೊರಬ ೨೬೧. ಕುಪ್ಪಟೂರು (ಕ್ರಿ.ಶ. ೧೨೦೮)

೬೪. ಧಾರವಾಡ ತಾಲೂಕಿನ ಶಾಸನಗಳು ನಂ. ೨೧, ಗರಗ (ಕ್ರಿ.ಶ.ಸು. ೧೨೯೦)

೬೫. EC. II ಶ್ರವಣಬೆಳ್ಗೊಳ ೮೪ (ಕ್ರಿ.ಶ. ೭೦೦)

ಅಧ್ಯಾಯ : ಎರಡು

ಬಲಿದಾನಮರಣ - ಬಲಿದಾನಮರಣ ಸ್ಮಾರಕಗಳು

ಬಲಿದಾನಮರಣ - ಬಲಿದಾನಮರಣ ಸ್ಮಾರಕಗಳು

ದೈವವನ್ನು ಗುರಿಯಿಟ್ಟು ನಡೆಸುವ ಆತ್ಮಾನುಸಂಧಾನದಿಂದ ಸದ್ಗತಿ ಸಾಧ್ಯವೆಂದು ಭಾವಿಸಿದ ಹಿಂದುಗಳು, ದೇವರಿಗಾಗಿ ಕೈಕೊಳ್ಳುವ ಬಲಿದಾನದಿಂದಲೂ ಸದ್ಗತಿ ಸಾಧ್ಯವೆಂದು ನಂಬಿದುದು, "ಧಾರ್ಮಿಕಸಂದರ್ಭ"ಗಳಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವ ಸಂಪ್ರದಾಯಕ್ಕೆ ದಾರಿಮಾಡಿಕೊಟ್ಟಿತು.

೧. ಧಾರ್ಮಿಕ ಬಲಿದಾನ

ಭಾರತದಲ್ಲಿ ಧಾರ್ಮಿಕ ಬಲಿದಾನಪದ್ಧತಿ ಬಹುಪುರಾತನವಾದುದು. ಈ ಮರಣಕ್ಕೆ ಸಂಬಂಧಪಟ್ಟ ವಿಧಾನ, ಫಲಗಳನ್ನು ಹಿಂದೂ - ಸ್ಮೃತಿ - ಪುರಾಣಗಳು, ಘಟನೆಗಳನ್ನು ಪ್ರವಾಸಿ ದಿನಚರಿ,. ಶಾಸನ, ಕೆಲವೊಮ್ಮೆ ಕಾವ್ಯಗಳು ಉಲ್ಲೇಖಿಸುವುದುಂಟು. ವಿಶೇಷವಾಗಿ ಸೂರ್ಯಗ್ರಹಣ ಸಂದರ್ಭಗಳಲ್ಲಿ ಜರುಗುತ್ತಿದ್ದ ಈ ಮರಣಗಳನ್ನು ಚಿತಾಪ್ರವೇಶ, ಜಲಪ್ರವೇಶ ಮತ್ತು ಊರ್ಧ್ವಪತನ ಎಂದು ಬಿಡಿಸಿ ಹೇಳಬಹುದು.

ಸೂರ್ಯಗ್ರಹಣ, ಹಿಂದುಗಳ ದೃಷ್ಟಿಯಲ್ಲಿ ಸೂರ್ಯನನ್ನು ರಾಹು ನುಂಗುವ ಸಂದರ್ಭ. ಆಗ ಸೂರ್ಯ ಪಡುತ್ತಿರುವ ಸಂಕಟದಲ್ಲಿ ತೋರಿಸುವ ಸಹಾನುಭೂತಿರೂಪದ ಈ ಚಿತಾಪ್ರವೇಶಮರಣದಿಂದ ಮೋಕ್ಷಪ್ರಾಪ್ತಿಯೆಂದು ಹಿಂದುಗಳ ಭಾವನೆಯಾಗಿದ್ದಿತು. ಬ್ರಹ್ಮಶಿವನು,

ರವಿಯ ವಿಮಾನಂ ರಾಹುವಿ
ನ ವಿಮಾನಕಡ್ಡಮಾಗೆ ತತ್ಪತಿಯಂ ರಾ
ಹುವೆ ನುಂಗಿತೆಂದು ತಡೆದಿರ
ದೆ ವಹ್ನಿಯಂ ಪೊಕ್ಕು ಮುರುಟಿ ಸಾವರ್ ಮೂಢರ್ ॥[೧]

ಎಂದು ಹಿಂದುಗಳ ಈ ಮರಣವನ್ನು ತೆಗಳುವನಾದರೂ ಪ್ರಾಚೀನ ಕರ್ನಾಟಕದಲ್ಲಿ ಇಂಥ ಕೆಲವು ಮರಣೋಲ್ಲೇಖಗಳು ದೊರೆಯುತ್ತವೆ.

ಸೂರ್ಯಗ್ರಹಣದಂದು ಜಯನಾಗನ್ (ಪಡುಪಟ್ಲ),[೨] ದೇವರಬಂಟ ಬಾಚಿಗ (ನಾಗವಂದ),[೩] ರಾಚೇಯಜೀಯ.... ಭಟ್ಟ (ಮೂಗೂರು),[೪] ಸಾಹಣಿ ಮಲ್ಲಯ್ಯನ ಮಗ ಚಂಡ (ಬಾಳೂರು)[೫] (ಚಿತ್ರ ೩),

---

೧. ಸಮಯ ಪರೀಕ್ಷೆ (೧೯೫೪)ಪು. ೩೮೦.

೨. SII. IX-I ೧೯ ಪಡುಪಟ್ಲ -ಜಮೀನ್ದಾರಿ- ಚಿತ್ತೂರು (ಕ್ರಿ.ಶ. ೬೦೦)

೩. KI. VI ೧೯ ನಾಗವಂದ - ಹಿರೇಕೆರೂರ -ಧಾರವಾಡ (ಕ್ರಿ.ಶ. ೧೧೨೦)

೪. EC. VIII ಸೊರಬ ೩೧೦, ಮೂಗೂರು (ಕ್ರಿ.ಶ. ೧೧೨೯).

೫. KI. V ೬೭, ಬಾಳೂರು - ಹಾನುಗಲ್ಲು-ಧಾರವಾಡ (ಕ್ರಿ.ಶ. ೧೧೩೦)

ಬೀರಯ್ಯ (ಬೆಳಗುತ್ತಿ),[೬] ಕೇತವೆಯ ಮಗ ಬೊಪ್ಪ (ತಿಳವಳ್ಳಿ),[೭] (ಚಿತ್ರ ೪), ಕೇತಿಸೆಟ್ಟಿಯ ಪುತ್ರ ಮಲ್ಲೆಯ (ಮುಗುಳಗೇರಿ),[೮] ಚಟ್ಟನಹಳ್ಳಿಯ ದೞಾಜಿತರಾ ಬೊಮ್ಮ (ಮುಗುಳಗೇರಿ)[೯] ಚಿತಾಪ್ರವೇಶದಿಂದ ಮಡಿದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಇವರಲ್ಲಿ ಜಯನಾಗನ್ ಮಕರಮಾಸದಲ್ಲಿ ಅಂದರೆ ಎಳ್ಳ ಅಮವಾಸ್ಯೆಯಂದು, ಬೀರಯ್ಯ ಮಾಘ ಬಹುಳ ಅಮಾನಾಸ್ಯೆ ಅಂದರೆ ಶಿವರಾತ್ರಿಯಂದು ಅಗ್ನಿಪ್ರವೇಶ ಮಾಡಿದ್ದು, ಆಗ ಸೂರ್ಯಗ್ರಹಣ ಇದ್ದಿರಬೇಕು. ಬೀಚಿಗನು ಕಾರ್ತಿಕದಮವಾಸ್ಯೆಯಂದು, ರಾಚೇಯಜೀಯನು ಮಾಘ ಬಹುಳ ಅಮಾವಾಸ್ಯೆಯಂದು, ಚಂಡನು ದೀಪಾವಳಿಯಂದು, ಬೊಪ್ಪನು ತಳಿರ ಅಮಾವಾಸ್ಯೆಯಂದು ಅಗ್ನಿಪ್ರವೇಶ ಮಾಡುವಾಗ ಸೂರ್ಯಗ್ರಹಣವಿದ್ದಿತೆಂದು ವ್ಯಕ್ತವಾಗಿಯೇ ಇದೆ. ಜಯನಾಗನ್ ಮಕರಮಾಸದಂದು ಚಿತಾಪ್ರವೇಶ ಮಾಡಿದುದು ಉತ್ತರಾಯಣ ಪುಣ್ಯಕಾಲವನ್ನು (ಭೀಷ್ಮರಂತೆ) ಧ್ವನಿಸುತ್ತದೆ. ಇವುಗಳಲ್ಲಿ ತಿಳವಳ್ಳಿ ಶಾಸನವು ರಾಹು ಹಾವಿನ ರೂಪದಿಂದ ಸೂರ್ಯನನ್ನು ನುಂಗುತ್ತಿರುವ, ಬೊಪ್ಪನು ಬೆಂಕಿಯಲ್ಲಿ ಹಾರುತ್ತಿರುವ ಚಿತ್ರವನ್ನೊಳಗೊಂಡಿದೆ.

ಗಂಗೆ ಮುಂತಾದ ಪವಿತ್ರನದಿಗಳಲ್ಲಿ ಮುಳುಗಿ ಸಾಯುವುದೂ ಪುಣ್ಯಪ್ರದವೆಂದು ಭಾವಿಸಿ ಕೆಲವರು ಕಾಶಿ ಮುಂತಾದ ಸ್ಥಳಗಳಿಗೆ ಹೋಗಿ ತಾವೇ ಸ್ವಸಂತೋಷದಿಂದ ಇಲ್ಲವೆ ಇನ್ನೊಬ್ಬರ ಸಹಾಯದಿಂದ ಈ ಕಾರ್ಯವನ್ನು ಕೈಕೊಳ್ಳುತ್ತಿದ್ದರು. ಕರ್ನಾಟಕದಲ್ಲಿ ಜರುಗಿದ ಇಂಥ ಮರಣದ ಏಕೈಕ ಉಲ್ಲೇಖವೆಂದರೆ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆಹವಮಲ್ಲನು ಕುರುಗೋಡದ ಸಮೀಪದ ತುಂಗಭದ್ರೆಯನ್ನು ಪ್ರವೇಶಿಸಿ ಪ್ರಾಣ ಬಿಟ್ಟುದು.[೧೦] ಬ್ರಹ್ಮಶಿವ ತನ್ನ ಸಮಯಪರೀಕ್ಷೆಯಲ್ಲಿ

ವ್ಯರ್ಥಮುಳಿದಲ್ಲಿ ಪೆಱತೇಂ
ಸಾರ್ಥಂ ತೀರ್ಥದೊಳು ಸಾವುದೆಂದೊಡೆ ತೊರೆಗ
ಳ್ತೀರ್ಥಂಗಳಿಂದೆ ಮುಳುಗಿ ನಿ
ರರ್ಥಮುಸುರ್ ಮಿಡಿಕೆಗೊಂಡು ಸಾವರ್ ಮೂಢರ್ ॥[೧೧]

ಒಡಲಂ ದುರ್ಧರಮಪ್ಪುದೊಂದು ತಪದಿಂ ಸ್ವರ್ಗಂಗಳೋಳುಬ್ಬೆಗಂ
ಬಡಿಸುತ್ತಿಪ್ಪವರೇಕೆ .... ಕೊಂದಿಕ್ಕಿ ತತ್ಕಾಮ್ಯಮ
ಪ್ಪೆಡೆಯಂ ಪೊರ್ದಿಸಿ ಪುಣ್ಯಮಂ ಪಡೆವೆನೆಂಬೊಂದಿಷ್ಟದಿಂ ಗಂಗೆಯಾ
ತಡಿಯೊಳ್ ಧರ್ಮಪರರ್ಕೆಲರ್ ಕೊಲುತಮಿರ್ಪರ್ಧರ್ಾಚಕ್ರದೊಳ್ ॥[೧೨]

ಎಂದು ಈ ಜಲಪ್ರವೇಶ ಮರಣವನ್ನು ತೆಗಳುತ್ತಾನೆ.

---

೬. MAR. ೧೯೪೨.೬೭ ಬೆಳಗುತ್ತಿ -ಹೊನ್ನಾಳಿ -ಶಿವಮೊಗ್ಗ (ಕ್ರಿ.ಶ.೧೧೩೩).
೭. KI. V ೯೧ ತಿಳವಳ್ಳಿ - ಹಾನುಗಲ್ಲು-ಧಾರವಾಡ (ಕ್ರಿ.ಶ. ೧೧೪೧).
೮. EC. VII ಶಿಕಾರಿಪುರ ೨೯೦. ಮುಗಳಗೇರಿ (ಕ್ರಿ.ಶ. ೧೧೪೧)
೯. EC. VII ಶಿಕಾರಿಪುರ ೨೮೯. ಮುಗುಳಗೇರಿ (ಕ್ರಿ.ಶ. ೧೪೩೨)
೧೦. EC. VII ಶಿಕಾರಿಪುರ ೧೩೬. ಬಳ್ಳಿಗಾವಿ, (ಕ್ರಿ.ಶ. ೧೦೬೮).
ಗಗನನವಾಂಕಸಂಖ್ಯೆ ಸಕಕಾಳದೊಳಾಗಿರೆ ಕೀಳಕಾಬ್ದಕಂ
ನೆಗಳೆ ತದೀಯ ಚೈತ್ರಬಹುಳಾಷ್ಟಮಿಯೊಳ್ ರವಿವಾರದೊಳ್ ಜಸಂ
ಮಿಗೆ ಕುಱುವತ್ತಿಯೊಳ್ಪರಮಯೋಗ ನಿಯೋಗದ ತುಂ(ಗಭ)ದ್ರೆಯೊ
ಳ್ಜಗದಧಿಪಂ ತ್ರಿವಿಷ್ಟರಮನೇಱಿದನಾಹನವಮಲ್ಲವಲ್ಲಭಂ ॥
೧೧. ಸಮಯ ಪರೀಕ್ಷೆ (೧೯೫೮) ಪು. ೩೮೦
೧೨. ಸಮಯಪರೀಕ್ಷೆ (೧೯೫೮) ಪು. ೩೮೧.

ಬೆಟ್ಟ, ಮರ, ದೇವಾಲಯಶಿಖರಗಳಿಂದ ಕೆಳಗೆ ಬೀಳುವ ಊರ್ಧ್ವಪತನ ಬಲಿದಾನದ ಉಲ್ಲೇಖ ಸ್ಮೃತಿ, ದಿನಚರಿಗಳಲ್ಲಿ ಬರುತ್ತದೆ. ೧೦೮೮ರ ಶಾಸನವು ನವಲಾಪಿರಾಜನ "ಎಳೆತಿ ತಪಜೆಯ ಕಮ್ಮಾರಿವುಯ್ದು" ಪತಿಮರಣಾನಂತರ ಸತ್ತಳೆಂಬುದು ಬಹುಶಃ ಊರ್ಧ್ವಪತನಮರಣವನ್ನೇ ಸೂಚಿಸುತ್ತಿರಬೇಕು.[೧೩] ಇದನ್ನು ಬಿಟ್ಟರೆ ಇಂಥ ಬೇರೆ ಉದಾಹರಣೆಗಳು ಸಿಗುವುದಿಲ್ಲ. ಬ್ರಹ್ಮಶಿವ ಮಾತ್ರ ಜೈನಬಾಹಿರವಾದ ಈ ವಿಧಾನವನ್ನು

ಬೆಟ್ಟೇರಿವಾಯ್ದೊಡಾತಂ
ಸಿಟ್ಟಿಗೆ ತಾನೊಡೆಯನಿಪ್ಪನೊಂದೊರ್ವಂ ಕ
ಣ್ಗಟ್ಟಿ ಕರುಗೊಳಿಸಿ ಸಾಯಲೆ
ನೆಟ್ಟನೆ ಪೇಳ್ದಾಗಳಂತೆ ಸಾವರ್ ಮೂಢರ್ ॥[೧೪]

ಎಂದು ಖಂಡಿಸುತ್ತಾನೆ.

ವೀರಶೈವಪೂರ್ವದ ಶೈವಸಮಾಜದಲ್ಲಿ ಸ್ಥಾವರಲಿಂಗಕ್ಕೆ ತಮ್ಮ ಭಕ್ತಿ ತೋರ್ಪಡಿಸಲು ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ.

ತಮಿಳುನಾಡಿನ ೬೩ ಪುರಾತನರಲ್ಲಿ ಕೆಲವರು ದೇವರ ಹೆಸರಿನಲ್ಲಿ ರುಂಡ ಕತ್ತರಿಸಿಕೊಳ್ಳುವ, ಕೈಕಾಲು ಕಡಿದುಕೊಳ್ಳುವ, ಕಣ್ಣು ಕಿತ್ತಿಕೊಳ್ಳುವ ಉಗ್ರ ಆಚರಣೆ ಜರುಗಿಸಿದುದು ಸಾಹಿತ್ಯ-ಶಿಲ್ಪಗಳಲ್ಲಿ ಕಂಡಬರುತ್ತದೆ. ಬಹುಶಃ ಇವರು ಭೈರವ ಸಂಪ್ರದಾಯ (ಕಾಪಾಲಿಕ)ದವರಾಗಿದ್ದು, ಈ ಪರಂಪರೆ ಕರ್ನಾಟಕದಲ್ಲಿಯೂ ಇದ್ದು, ಇಲ್ಲಿಯ ಭೈರವ ಮತ್ತು ನಾಥ ಕೇಂದ್ರಗಳಲ್ಲಿ ಕತ್ತರಿಸಿದ ರುಂಡ ಶಿಲ್ಪಗಳು ಅನೇಕ ಸಂಖ್ಯೆಯಲ್ಲಿ ಸಿಗುತ್ತವೆ. ಇವುಗಳಲ್ಲಿ ಕೆಲವು ನರಬಲಿಶಿಲ್ಪಗಳಾಗಿದ್ದರೂ, ಕೆಲವಾದರೂ ಆತ್ಮಬಲಿ ಶಿಲ್ಪಗಳಾಗಿರಬಹುದು.

ತಮಿಳುನಾಡು ಪ್ರವೇಶಿಸಿದ ಕಾಶ್ಮೀರ ಮೂಲದ ಮಾಹೇಶ್ವರರು ಈ ೬೩ ಪುರಾತನರ ಸಂಪ್ರದಾಯವನ್ನು ತಮ್ಮ ಸಂಪ್ರದಾಯಕ್ಕೆ ತಿರುಗಿಸಿಕೊಂಡರು ಮತ್ತು ಅಲ್ಲಿಯ "ವೀರವೈಷ್ಣವ" ಪಡೆಯನ್ನು ಎದುರಿಸಲು ತಮ್ಮ ಮಾಹೇಶ್ವರ ಸಮಾಜದಲ್ಲಿ "ವೀರಮಾಹೇಶ್ವರ" ಪಡೆಗಳನ್ನು ಬೆಳೆಸಿದರು. ಈಗ ಸ್ಥಳೀಯ ಭೈರವನ ಬದಲು, ಅವನನ್ನೇ ಹೋಲುವ (ತ್ರಿಭಂಗಿ, ಉಗ್ರ ನಿಲುವು) ವೀರಭದ್ರನನ್ನು ಕಲ್ಪಿಸಿಕೊಂಡು, ಈ ದೇವತೆಯ ಮುಂದೆ ವೀರವ್ರತಧಾರಣೆ ಮಾಡುತ್ತಿದ್ದರು. ಈ ವೀರಮಾಹೇಶ್ವರವ್ರತದಿಂದಾಗಿ ಕರ್ನಾಟಕದಲ್ಲಿಯೂ ವೀರಮಾಹೇಶ್ವರ ಹೆಸರಿನಲ್ಲಿ ಆತ್ಮಬಲಿ ಸಂಪ್ರಾದಯ ಬೆಳೆದು ಬಂದಿತು. ಶಿವತತ್ವಚಿಂತಾಮಣಿಯಲ್ಲಿ 'ವೀರಮಾಹೇಶ್ವರವ್ರತ' (೩೮-೮೮೬) ಮತ್ತು 'ವೀರಶೈವವ್ರತ' (೩೮-೨೦೪) ಪದಗಳನ್ನು ಸಮಾನಾರ್ಥದಲ್ಲಿ ಬಳಿಸಿರುವುದನ್ನು ನೋಡಿದರೆ ವೀರಶೈವವೆನ್ನುವುದು ವೀರಮಾಹೇಶ್ವರ ಪದಕ್ಕೆ ಸಮಾನವಾದುದೂ, ವೀರಶೈವೆನ್ನುವುದು ಒಂದು ಧರ್ಮದ ಹೆಸರಲ್ಲ, ಒಂದು ವ್ರತದ ಹೆಸರೆಂದೂ ಇದರಿಂದ ಸ್ಪಷ್ಟವಾಗುತ್ತದೆ. ಶಾಸನಗಳು ಈ ವ್ರತಧಾರಿಗಳನ್ನು 'ಅಸಂಖ್ಯಾತರು' ಎಂದು ಕರೆದಿವೆ. ಆಂಧ್ರಪ್ರದೇಶದ ಮಲ್ಕಾಪುರ ಶಾಸನದಲ್ಲಿ (೧೨೬೧) ಮಾಹೇಶ್ವರ ವರ್ಗದ ಗೋಳಕಿಮಠದವರು ಆತ್ಮಸಮರ್ಪಣೆಗಾಗಿ ಬರುವ ಭಕ್ತರ ಬೀಜಚ್ಛೇದ, ಕುಕ್ಷಿಚ್ಛೇದ, ಶಿರಚ್ಛೇದ ಕಾರ್ಯನಿರ್ವಹಿಸುವ 'ವೀರಭದ್ರ' ನಾಮಧೇಯರಿಗೂ, ಇವರಿಗೆ ಈ ಕಾರ್ಯದಲ್ಲಿ ನೆರವಾಗುವ ೨೦ ಜನ 'ವೀರಮುಷ್ಠಿ'ಗಳಿಗೂ ಉಂಬಳಿ ನೀಡಿದ ಉಲ್ಲೇಖವಿದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ವೀರಭದ್ರ ದೇವಾಲಯದ ಎದುರು ಮತ್ತು ಕಾಪಾಲಿಕರ ದೇವರಾದ (ಸೋಮೇಶ್ವರ ದೇವಾಲಯದ ಎದುರು)

---

೧೩. EC. IV ಹೆಗ್ಗಡದೇವನಕೋಟೆ ೧೦೦, ಹೆಬ್ಬಲಗುಪ್ಪೆ (ಕ್ರಿ.ಶ. ೧೦೮೮).
೧೪. ಸಮಯಪರೀಕ್ಷೆ (೯೫೮) ಪುಟ ೩೮೦.

ಕತ್ತರಿಸಿದ ರುಂಡಗಳಿದ್ದರೆ, ಅವು ವೀರಮಾಹೇಶ್ವರರ ಆತ್ಮಬಲಿಯ ನಿದರ್ಶನವೆಂದೇ ಹೇಳಬೇಕು. ದಾವಣಗೆರೆ ಸಮೀಪದ ಆವರಗೊಳ ವೀರಭದ್ರೇಶ್ವರ ದೇವಾಲಯದ ಮುಂದೆ ಕತ್ತರಿಸಿದ ಎರಡು ರುಂಡ ಶಿಲ್ಪವಲ್ಲದೆ, ಈ ಕಾರ್ಯಕ್ಕೆ ಬಳಸಲಾಗುತ್ತಿದ್ದ ಗಂಡಗತ್ತರಿಯ ಅಳವಡಿಕೆಗಾಗಿ ನಿಲ್ಲಿಸಿರುವ ಎರಡು ಶಿಲಾಸ್ತಂಭಗಳನ್ನು ಈಗಲೂ ಕಾಣಬಹುದು.

ವೀರಶೈವ ಸಾಹಿತ್ಯದಲ್ಲಿ ಕಂಡುಬರುವ ಷೋಡಶರು ಗುಡ್ಡಾಪುರ ಗುಡ್ಡವ್ವೆಗಳ ನೇತೃತ್ವದಲ್ಲಿ ವೀರನಾರಾಯಣ ವಿಗ್ರಹವನ್ನು ಕಿತ್ತಿಹಾಕಿ, ಬ್ರಹ್ಮೇಶ್ವರಲಿಂಗ ಸ್ಥಾಪಿಸಿ "ಶೋಡಶ ಶಿರಃಕಮಲಮಂ ಶಿವಂಗಾರಾಧಿಸಲು" ಅವನು ಸಂತೃಪ್ತನಾದನೆಂದು ಶಿವತತ್ವ ಚಿಂತಾಮಣಿ (೩೬-೫೭) ತಿಳಿಸುತ್ತದೆ. ಇದೇ ಕೃತಿಯಲ್ಲಿ (೩೭-೧೧೫) ವೀರಶಂಕರನೆಂಬ ಭಕ್ತನು ಭವಿ ಮುಟ್ಟಿದರೆ ತಾನು ಅಳಿಯುವೆನೆಂಬ ವ್ರತದಲ್ಲಿರಲು, ಕನಸಿನಲ್ಲೊಬ್ಬ ಜೈನ ಮುಟ್ಟಿದಂತೆನಿಸಲು ಕಾಯ್ದು ನೀರಲ್ಲಿ ಮುಳುಗಿ ಸತ್ತ ವಿಷಯವಿದೆ. ಮುಂದಿನ ಪ್ರಕರಣವಾಗಿರುವ (೩೮) ನೂತನ ಗಣಂಗಳ ಕಥೆಯಲ್ಲಿ ಇಂಥ ಇನ್ನೂ ಕೆಲವು ಉದಾಹರಣೆಗಳು ಹೀಗೆ ಕಂಡುಬರುತ್ತವೆ: ನೂತುಲುಪಾಡು ಗ್ರಾಮದ ವೀರಾಭಕ್ತನೆಂಬವನು ತಾನು ಕಾಯಕದಿಂದ ಗಳಿಸಿದ ಹಣ ಜಂಗಮದಾಸೋಹಕ್ಕೆ ಸಾಲದಿದ್ದರೆ ಶಿರ ಕತ್ತರಿಸಿಕೊಳ್ಳುವೆನೆಂಬ ಭಾಷೆಗೆ ಅನುಗುಣವಾಗಿ ಕುತ್ತಿಗೆ ಕತ್ತರಿಸಿಕೊಂಡನು (೩೮-೪೪). ಕನ್ನಕಿಗೆರೆಯ ಗಿರಿಯ ವೀರೇಶ್ವರನ ಮುಂದೆ ಚೆನ್ನಬಸವಣ್ಣ ಜುಂಜುವೀರಭದ್ರರು ಪರಸ್ಪರ ಶಿರವನ್ನು ಕತ್ತರಿಸಿದರು (೩೭ -೯೧). "ತೆತ್ತಿಸಿರ್ದೆರಡು ಕಂಬದ ಮಧ್ಯದಲ್ಲಿ ಕತ್ತರಿಯ ಸೂತ್ರದ ಗುಂಡನು ಎತ್ತಿಬಿಡಲೊಡ್ಡಿದ ಶಿರಂ ಪರಿಯೆ ಪಿಡಿದು ಬಾಪ್ಪತ್ಯದ್ಭುತದೊಳು ವೀರೇಶನ ಮೆಚ್ಚಿಸಿದುದಾತ್ತನಾನೆಯಗೊಂದಿ ವೀರಣಯ್ಯ" ಎಂಬ ಮಾತು ಶಿವತತ್ವ ಚಿಂತಾಮಣಿ (೩೮- ೨೦೩) ಯಲ್ಲಿದೆ. ಎರಡು ಕಂಬಗಳ ನಡುವೆ ಗಂಡ ಕತ್ತರಿಯ ಸೂತ್ರದ ಗುಂಡನ್ನು ಎತ್ತಿಬಿಡಲಾಗಿ ಅಲ್ಲಿ ಒಡ್ಡಿದ ಶಿರಸ್ಸು ಹರಿಯಲು ಅದನ್ನು ಹಿಡಿದುಕೊಂಡು ವೀರಭದ್ರನ ಸನ್ನಿಧಿಗೆ ಅರ್ಪಿಸಿದವನು ಆನೆಗೊಂದಿಯ ವೀರಣಯ್ಯನೆಂದು ಇಲ್ಲಿ ಹೇಳಲಾಗಿದೆ. ಅಂದು ರುಂಡ ಕತ್ತರಿಸಲು ಬಳಸುತ್ತಿದ್ದ ಗಂಡಕತ್ತರಿ, ಕತ್ತರಿಸಲು ಅನುಕೂಲವಾಗುವಂತೆ ಅದನ್ನು ವಿನ್ಯಾಸಗೊಳಿಸುತ್ತಿದ್ದ ರೀತಿ, ಕತ್ತರಿಸಿಕೊಂಡ ತನ್ನ ರುಂಡವನ್ನು ಕೈಯ್ಯಲ್ಲಿ ಹಿಡಿದು ನಡೆದು ಹೋಗಿ ವೀರಭದ್ರನಿಗೆ ಅರ್ಪಿಸಿದ ಬಗೆ - ಇವೆಲ್ಲ ಅವಶ್ಯ ಗಮನಿಸಬೇಕಾದ ಅಂಶಗಳೆನಿಸಿವೆ. ಮೇಲೆ ಹೇಳಿದ ಆವರಗೊಳದ ರುಂಡಶಿಲ್ಪ, ಗಂಡಗತ್ತರಿ ಕಂಬಗಳನ್ನು ಇಲ್ಲಿ ನೆನೆಯಬಹುದು.

ಹರಿಹರನ ಕೋವೂರ ಬ್ರಹ್ಮಯ್ಯನ ರಗಳೆಯಲ್ಲಿ ಅವನು ತನ್ನ ೩೦೦ ಜನ ಅನುಯಾಯಿ ಸಹಿತ ಅಂಬುಧಾರಾ ರಾಮನಾಥನಿಗೆ ಪ್ರಾಣಾರ್ಪಣೆ ಮಾಡಿಕೊಂಡ ಸಂದರ್ಭದ ವರ್ಣನೆ ಹೀಗಿದೆ.

ಮೊಳೆಯ ಹಾವುಗೆಗಳಂ ಮೆಟ್ಟಿ ದುಮ್ಮಿಕ್ಕುತಂ
ಕಳಿದವಂ ಮೀರಿ ಪದಖಂಡವಂ ಮಾಡುತಂ
ಕಡಿದ ಕಾಲೊಳಗೆ ನಾರಾಚವಂ ಬೆಟ್ಟುತಂ
ಅಡಿಗೆ ಮುಂದಡಿಯಿಟ್ಟು ಎತ್ತುತಂ ನಡೆವುತಂ
ಬಂದು ಶಿವಲಿಂಗಕ್ಕೆ ಮಜ್ಜನಕ್ಕೆರೆವುತಂ
ನಿಂದು ಕರುಳಂ ತೆಗೆದು ಕೊರೆಕೊರೆದು ತರಿವುತಂ
ಕರುಳಿಂದವಿಂಡೆದಂಡೆಗಳನೊಲವಿಂ ಕಟ್ಟಿ
ಹರುಷದಿಂ ಹರನ ಪುರಹರನ ಸಿರಿಮುಡಿಗೊಟ್ಟಿ
ತಿರುಗಿದರ್ ವೀರರಾರುತ್ತ ಬೊಬ್ಬಿಡುತಲ್ಲಿ
ಧರಣೀಶ ಬೊಮ್ಮಿತಂದೆಗೆ ಪೊಡಮಡುತ್ತಲ್ಲಿ

ಸುರಗಿಯಿಂದಿರಿದುಕೊಳುತಂ ಕಿತ್ತು ಸೆಳೆಯುವುತಂ
ಪರಶುವಿಂ ಕಡಿದುಕೊಳುತಂ ಕೆಲಕ್ಕಿಕ್ಕುತಂ
ಎತ್ತಿದ ಕಠಾರಿಯಿಂದೊಪ್ಪಿ ನಲಿದುರ್ಬುತಂ
ಸುತ್ತಿ ಕರಗಸದಿಂದೆ ಕೊರೆದುಕೊಂಡಾಡುತಂ
ಸರಳಿಂದೆ ಹೊಸೆದುಕೊಳುತೆಣ್ದೆಸೆಗೆ ಮಸಗುತಂ
ಸುರಿವ ರಕ್ತಾಂಬುವಂ ಬಳಿದು ಮಿಗೆ ಚಲ್ಲುತ
ಇಟ್ಟಿಯಿಂದಿರಿದು ಚಕ್ರದೊಳಿಟ್ಟುಕೊಳುತಲ್ಲಿ
ಪಟ್ಟೆಹವನೊಳಗೆ ಪೊಗಿಸುತ್ತೆ ಕರವಾಳಲ್ಲಿ
ಅಮ್ಮಮ್ಮ ಕೂರುಹಿಂ ಕೊಯ್ದು ಬಿಸುಡುತ್ತಲ್ಲಿ
ಚಿಮ್ಮುಟಗಳಿಂದಲಿರಿದಿರು ಚಿಮ್ಮುತ್ತಲ್ಲಿ
ಚಿಟಿಚಿಟಿಲೆನಲು ಶಿರನರಂಗಳಂ ಪರಿವುತಂ
ಚಿಟಿಲೆನಲು ದೇಹದೆಲುಗಳನಂದು ಮುರಿವುತಂ
ಅಂಗವಿಸಿ ನೆಗೆವುತಂ ಹಿಂಗಿ ಮತ್ಸರಿಸುತಂ
ಜಂಗಳಂ ಜಾರುತಂ ರಿಂಗಣಂಗುಣಿವುತಂ
ಜಾರಿ ರಕ್ತದ ಹೊನಲೊಳಗೆ ಬಿದ್ದು ಕೈಯೂರಿ
ಮೀರಿಯೆದ್ದೆದ್ದು ಬಿದ್ದಿದ್ದು ಬಲ್ಪಂ ತೋರಿ
ನೋಡಲಾ ದಾರುಣವದೆಳ್ಳೆನಿತ್ತಲ್ಲದಿರೆ
ನೋಡೆ ರಂಧ್ರಂ ಶರೀರಂಗಳೆಲ್ಲೆಡೆಯೊಳಿರೆ
ಅಲ್ಲಿ ಬತ್ತೀಸಾಯುಧಂ ಬೇಸರುತ್ತಮಿರೆ
ಬಿಲ್ಲಾಳ್ಗಳಂಜದಳ್ಕದೆ ಬೊಬ್ಬಿಡುತ್ತಮಿರೆ

ಹೀಗೆ ಸಾಹಿತ್ಯ ಕೃತಿಗಳಲ್ಲಲ್ಲದೆ ಅಲ್ಲಲ್ಲಿ ಶಿಲ್ಪಗಳೂ ಸಿಗುತ್ತವೆ. ಉದಾ: ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ವೀರಶಿರೋಮಂಟಪದ ಕಂಬಗಳಲ್ಲಿ ದೇಹವನ್ನರ್ಪಿಸುವ ವೀರಮಾಹೇಶ್ವರರ ಶಿಲ್ಪಗಳನ್ನು ಬಿಡಿಸಲಾಗಿದೆ. ಇದೇ ರೀತಿ ಈ ದೇವಾಲಯದ ಆವರಣಗೋಡೆಯಲ್ಲಿ ಇಂಥ ಅನೇಕ ಶೀಲ್ಪಗಳನ್ನು ಜೋಡಿಸಲಾಗಿದೆ. ಕರ್ನಾಟಕದಲ್ಲಿಯೂ ಫಲಾಹಾರಮಠ, ಚಂದ್ರಗುತ್ತಿ, ಚುಂಚನಗಿರಿ, ಹುಲಿಗೊಂದಿ, ಲುಂಕೆಮಲೆ, ಡಂಬಳಗಳಲ್ಲಿಯೂ ಇಂಥ ಶಿಲ್ಪಗಳಿದ್ದು, ಇವುಗಳಲ್ಲಿ ನರಬಲಿಯಲ್ಲದ ಆತ್ಮಬಲಿ ಶಿಲ್ಪಗಳೂ ಕೆಲವು ಇರಬಹುದು.

ಈ ವೀರಮಾಹೇಶ್ವರರ ಆತ್ಮಾರ್ಪಣಾ ಕಾರ್ಯ ಸಾಮರ್ಥ್ಯವನ್ನು ಬಳ್ಳಾರಿ ಜಿಲ್ಲೆಯ ಕುಡತಿನಿ ಶಾಸನ (ಬಳ್ಳಾರಿ ಜಿಲ್ಲೆಯ ಶಾಸನಗಳು ಪು. ೩೬. ಕ್ರಿ.ಶ. ೧೨೧೦) ಹೀಗೆ ವರ್ಣಿಸುತ್ತದೆ.

ಕ್ರೂರ ವಿಷಯಂಗಳಂ ಕುಡಿವರಂತಕನಂ ಜರೆವರ್ ಮಹೋಗ್ರ ಕಾ
ಳೋರಗನಂ ಕಡಂಗಿ ಪಿಡಿವರ್ ಸಿಡಿಲಂ ಪೊಡೆವರ್ ಗಜಾರಿಯಂ
ಬಾರಿಗೆ ತಪ್ಪದಿಲ್ದು ಶಿವದೂಷಕನೆಂಬವನೊಕ್ಕಲಿಕ್ಕುವರ್
ವೀರಗಣಂಗಳೆಂದೊಡಿದಿರಾರ್ ಪ್ರಮಥರ್ಗೆ ಜಗತ್ರಯಂಗಳೊಳ್ ॥

ಕರಕಮಳಂಗಳಂ ಮುರಿದುಮಾಪತಿಗೇರಿಸಿ ಮೀಂಟಿ ಕಂಗಳಂ
ಹರನ ಶೀಖಾಗ್ರದೊಳ್ನಿರಿಸಿ ದಂಡೆಗರುಳ್ಗಳೊಳೆಡೆಯಂ ಭಯಂ

ಕರಮೆನೆ ಮಾಡಿ ಶಂಕರನನರ್ಚಿಸಿ ಪಂದಲೆಯಿಂ ನಿವಾಳಿಯಂ
ಪುರಮಥನಂಗೆ ಕೊಟ್ಟು ಮಗಳ್ವಂ ಪಡೆವರ್ ಪ್ರಮಥರ್ಕಳದ್ಭುತಂ ||

ಇದಲ್ಲದೆ, ಅಣ್ಣಿಗೆರೆ ವೀರಭದ್ರದೇವಾಲಯದ ಶಾಸನ (SII XV-59.1184) ದಲ್ಲಿ ಬರುವ ವೀರಗೊಗ್ಗಿದೇವನು ಅನ್ಯಧರ್ಮೀಯ ವ್ಯಕ್ತಿ ದೇವಾಲಯಗಳನ್ನು ನಾಶಮಾಡಿದವನಾಗಿದ್ದು, ಇತ್ತೀಚೆ ಇಲ್ಲಿ ಲಭಿಸಿದ ಜೋಡಿಸಿ ಇಡಲಾಗಿರುವ ೫೦೦ ತಲೆ ಬುರುಡೆಗಳು ಆತ್ಮಾರ್ಪಣೆಮಾಡಿಕೊಂಡ ಈ ಸಂಪ್ರದಾಯದವರನ್ನೇ ಸೂಚಿಸುತ್ತಿರಬಹುದು. ಈ ವೀರಮಾಹೇಶ್ವರರಿಗೆ ಮುಂದಿನ ದಿನಗಳಲ್ಲಿ ವೀರಶೈವರೆಂಬ ಪರ್ಯಾಯ ನಾಮ ಬಳಕೆಗೆ ಬಂದಿತು. ಇನ್ನೂ ಮುಂದಿನ ದಿನಗಳಲ್ಲಿ ಆ ವೀರಶೈವವೆಂಬುದು ಲಿಂಗಾಯತಕ್ಕೂ ತಪ್ಪಾಗಿ ಅನ್ವಯವಾಗುತ್ತ ಬಂದಿತು. ಅದೇನೆ ಇರಲಿ, ಅಂಗದ ಮೇಲಿನ ಲಿಂಗ ಕಳೆದುಹೋದರೂ ಕೆವು ಜನ ಭಾವಭ್ರಮಿತರು ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರು. ಈ ಬಗೆಯ ಧಾರ್ಮಿಕ ಆತ್ಮಬಲಿದಾನವನ್ನು ಶರಣರು ನಿರಾಕರಿಸಿದರು. "ಅಂಗದೊಳಗೆ ಮಹಾ ಲಿಂಗವಿರಲು ಕೈಯ ಲಿಂಗವು ಬಿದ್ದಿತೆಂದು ನೆಲದೊಳಗಂಗವ ಹೂಳುವರು ಭಂಗಬಡುವರಲ್ಲಾ" ಎಂಬ ಅಲ್ಲಮನ ಮತ್ತು "ಇಷ್ಟಲಿಂಗ ಬಿದ್ದಿತೆಂದು ಶಸ್ತ್ರವನಿಕ್ಕಿಕೊಂಡು ಸಾವರು ಅರಿಯದವರು", "ಪ್ರತಿಯಿಲ್ಲದ ಲಿಂಗವು ಭಿನ್ನವಾಯಿತ್ತೆಂದು ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಬ ಆತ್ಮದ್ರೋಹಿಯ ಮುಖವ ನೋಡಲಾಗದು", "ಅಂಗದ ಮೇಲಣ ಲಿಂಗ ಹಿಂಗಿತ್ತೆಂದು ಆತ್ಮಘಾತವ ಮಾಡಿಕೊಳ್ಳಬೇಕೆಂಬವರು ಅಜ್ಞಾನಿಗಳು" ಎಂಬ ಚೆನ್ನಬಸವಣ್ಣನವರ[೧೫] ಮಾತುಗಳನ್ನು ಇಲ್ಲಿ ಗಮನಿಸಬೇಕು. ಅಂಗದ ಮೇಲಿನ ಲಿಂಗ ತೊರೆಯಲ್ಲಿ ಬೀಳಲು ಕೊಂಡಗುಳಿ ಕೇಶಿರಾಜ ಆತ್ಮಘಾತಮಾಡಿಕೊಳ್ಳಲು ಸಿದ್ಧನಾದ ಕಥೆಯನ್ನು ಇಲ್ಲಿ ನೆನೆಯಬಹುದು. ಒಂದರ್ಥದಲ್ಲಿ ಇವರು ಇಷ್ಟಲಿಂಗದ ವೇಳವಾಳಿಗಳು.

೨. ಲೌಕಿಕ ಬಲಿದಾನಮರಣ

ದೇವರ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮಾಡಿಕೊಳ್ಳುವ ಧಾರ್ಮಿಕ ಬಲಿದಾನ, ಆಮೇಲೆ ಪ್ರಿಯವ್ಯಕ್ತಿಯ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮಾಡಿಕೊಳ್ಳುವ ಲೌಕಿಕ ಬಲಿದಾನಕ್ಕೆ ದಾರಿಮಾಡಿಕೊಟ್ಟಿತೆಂದು ತೋರುತ್ತದೆ. ಈ ಲೌಕಿಕ ಬಲಿದಾನವು ಪತಿಗಾಗಿ ಪ್ರಿಯಸತಿಯ ಪ್ರಾಣೋತ್ಕ್ರಮಣ, ವ್ಯಕ್ತಿಗಾಗಿ ಪ್ರಿಯವ್ಯಕ್ತಿಯ ಪ್ರಾಣೋತ್ಕ್ರಮಣ, (ಇದು ಒಡೆಯ-ಸೇವಕ ಪ್ರಧಾನವಾಗಿಯೇ ಬೆಳೆಯಿತು)ವೆಂದು ಎರಡು ವಿಧವಾಗಿದ್ದು ಅವುಗಳಿಗೆ ಕ್ರಮವಾಗಿ ಸಹಗಮನ, ವೇಳವಾಳಿ (ಲೆಂಕವಾಳಿ) ಎಂದು ಹೆಸರು. ಸಾಮಾನ್ಯವಾಗಿ ಮೇಲೆ ಹೇಳಿದ ಧಾರ್ಮಿಕ ಬಲಿದಾನ 'ಪುರೋಹಿತ ವರ್ಗ' ಯೋಜಿಸಿದ ಶೋಷಣೆಯಾದರೆ, ಇಲ್ಲಿ ಹೇಳಿದ ಸಹಗಮನವು 'ಪುರುಷವರ್ಗ' ಯೋಜಿಸಿದ, ವೇಳವಾಳಿಯು 'ಪ್ರಭುವರ್ಗ' ಯೋಜಿಸಿದ ಶೋಷಣೆಗಳೇ ಸರಿ.

I. ಮಾಸ್ತಿ ಮರಣ

ಜಗತ್ತಿನ ಬೇರೆ ಭಾಗಗಳಂತೆ ಭಾರತದಲ್ಲಿ, ಹಾಗೆಯೇ ಕರ್ನಾಟಕದಲ್ಲಿ ಈ ಪದ್ಧತಿ ತುಂಬ ಪ್ರಾಚೀನವಾದುದು. ಸತ್ತ ವ್ಯಕ್ತಿಯೊಂದಿಗೆ ಅವನ ಪ್ರಿಯವಸ್ತುಗಳನ್ನು ಹೂಳಬೇಕೆಂಬ ಇಲ್ಲವೆ ಸುಡಬೇಕೆಂಬ ಭಾವನೆ ಈ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟಿರಬಹುದಾದರೂ ಇದರ ಉಗಮಕ್ಕೆ ಮೂರು ವ್ಯಾವಹಾರಿಕ ಕಾರಣಗಳನ್ನು ಊಹಿಸಬಹುದು.

---

೧೫. ಚೆನ್ನಬಸವಣ್ಣನವರ ವಚನಗಳು ನಂ. ೬೭೩, ೬೭೪, ೬೭೮

ಒಂದು : ಮರಣದ ತರುವಾಯ ತನ್ನ ಸತಿ ಮನಸಾ ಇಲ್ಲವೆ ಮನಸ್ಸಿಲ್ಲದೆ ಅನ್ಯರಿಗೆ ವಶವಾಗಬಹುದೆಂಬ 'ಪುರುಷನ ಪ್ರತಿಷ್ಠೆ' ಈ ಸಂಪ್ರದಾಯವನ್ನು ಸ್ತ್ರೀಯರಿಗೆ ರೂಪಿಸಿಕೊಟ್ಟಿರಬಹುದು.

ಎರಡು : ಪತಿಯ ಮರಣದ ತರುವಾಯ ತನ್ನ ಬದುಕುವಿಕೆ ಮತ್ತು ಪಾವಿತ್ರ್ಯಗಳ ಅನಿಶ್ಚಿತತೆ ಕಾರಣವಾಗಿ ಸ್ತ್ರೀವರ್ಗವೇ ಇದನ್ನು ರೂಪಿಸಿಕೊಂಡಿರಬಹುದು.

ಮೂರು : ಪತಿಯ ಮರಣದ ತರುವಾಯ ಸತಿಯನ್ನೂ ಮರಣಕೂಪಕ್ಕೆ ತಳ್ಳಿ, ಅವಳ ಆಸ್ತಿಯನ್ನು ಸೆಳೆಯಲು 'ಪ್ರಭುವರ್ಗ' ಇಲ್ಲವೆ 'ಪುರೋಹಿತವರ್ಗ' ಈ ಯೋಜನೆಯನ್ನು ರೂಪಿಸಿರಬಹುದು. ಇವುಗಳಲ್ಲಿ ಒಂದನೆಯ ಮತ್ತು ಮೂರನೆಯ ಅಂಶಗಳೇ ಬಲವತ್ತರವಾಗಿ ಕಾಣುತ್ತಿದ್ದು. ಬ್ರಹ್ಮಶಿವ ಮಾತ್ರ

ಪುರುಷಂ ಸತ್ತಡೆ ಪುತ್ರನುಳ್ಳವರು ಸಾಯಲ್ಸಲ್ಲದೆಂಬರ್ಥರಾ
ಮರರೇಕಾಗಮ ನಿಯಮಮಾಗಿ ಧನಮಂ ನಿಃಪುತ್ರನಾವಾಗಳಾ
ದರದಿಂದಂ ತವಗಿತ್ತು ಸಾವಡೆನತುಂ ಸಾಯಲ್ಕೆ ಪೇಳ್ವರ್ಮಹಾ
ಪುರುಷರ್ಸತ್ತಡೆ ಬದ್ದರೊಂದೊಡಮೆಯಂ ಕೊಳುವೊಂದುಪಾಯಮ್ಮಿಗಲ್॥[೧೬]

ಎಂಬ ಪದ್ಯದ ಮೂಲಕ ಮೂರನೆಯ ಅಂಶವನ್ನು ಅನುಮೋದಿಸುತ್ತಾನೆ. ಇಷ್ಟೇ ಏಕೆ

ಪುರುಷನ ಪರೋಕ್ಷದೊಳ್ ಪೆರ
ಗಿರದಾಗಡೆ ಸತ್ತಳಪ್ಪೊಡಾಕೆಗೆ ಸಗ್ಗಂ
ದೊರಕೊಳ್ಗುಮೆಂಬ ದುರ್ಬೋ
ಧರ ಮಾತಂ ಕೇಳ್ದು ನಂಬಿ ಕಿಚ್ಚಂ ಪುಗುವರ್ ॥[೧೭]

ಎಂಬ ಪದ್ಯದ ಮೂಲಕ ಸಹಗಮನಪದ್ಧತಿಯನ್ನೇ ತಿರಸ್ಕರಿಸುತ್ತಾನೆ. ಈ ವ್ಯಾವಹಾರಿಕ ಶೋಷಣೆಯೇ ಧಾರ್ಮಿಕ ಮುಖವಾಡ ಧರಿಸಿ ಪತಿಯೊಂದಿಗೆ ಸ್ವರ್ಗ ಸೇರುವುದು, ಅವನನ್ನು ನರಕದಿಂದ ಎತ್ತಿ ಸ್ವರ್ಗಕ್ಕೆ ತರುವುದು, ಮರುಜನ್ಮದಲ್ಲಿ ಅವನ ಜೊತೆಗೂಡುವುದು- ಇತ್ಯಾದಿ ಭಾವನೆಗಳಿಗೆ ಎಡೆಮಾಡಿಕೊಟ್ಟುದರ ಪರಿಣಾಮವಾಗಿ, ಪ್ರಾಚೀನ ಕಾಲದಲ್ಲಿ ಈ ಸಂಪ್ರದಾಯ ತುಂಬ ಪ್ರಚಾರ ಪಡೆಯಿತು. ಕೆಲವೊಮ್ಮೆ ಪ್ರತಿಷ್ಠೆಗೆ ಬಲಿಯಾಗಿ, ಒತ್ತಾಯಕ್ಕೆ ಒಳಗಾಗಿ ಕೆಲವರು ಈ ಕಾರ್ಯವನ್ನು ಕೈಕೊಳ್ಳುತ್ತಿರಬಹುದು.[೧೮]

ಸತಿ, ಈ ಪದ್ಧತಿಗೆ ಬಳಸುವ ಪದ. ಬಹುಶಃ ಶಿವನ ಪತ್ನಿ ದಾಕ್ಷಾಯಣಿ ಅಥವಾ ಸತೀದೇವಿ ಪತಿಯ ಪರವಾಗಿ ನಿಂತು, ದಕ್ಷಬ್ರಹ್ಮನ ಯಜ್ಞನದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಗಂಡನಿಗಾಗಿ ಹೆಂಡತಿ ಚಿತಾಪ್ರವೇಶ ಮಾಡುವ ಈ 'ಸತಿ' ಪದ್ಧತಿಗೆ ಮೂಲವಾಗಿರಬೇಕು. ಈ ಪದ್ಧತಿಯ ಗೌರವಸೂಚಿ ಪದ 'ಮಹಾಸತಿ', ಇದರ ತದ್ಭವ ರೂಪ ಮಾಸ್ತಿ.

---

೧೬. ಸಮಯಪರೀಕ್ಷೆ (೧೯೫೪)ಪು. ೩೯೨.

೧೭. ಸಮಯ ಪರೀಕ್ಷೆ (೧೯೫೪)ಪು. ೩೪೦

೧೮. ಚಂಡಶಾಸನನು ಸುನಂದೆಯೊಂದಿಗೆ ಚಿತೆಯೇರಲು ನಿಶ್ಚಯಿಸಿದಾಗ ಅವನ ರಾಣಿಯರು ಮಾಸ್ತಿಯಾಗಲು ಸಿದ್ಧರಾಗುತ್ತಾರೆ. ಅವರಲ್ಲಿ 'ಉನ್ಮತ್ತೆಯಾಗ ಮಾನಿನಿಯಿಂತೆಂದಳ್-

ನಗೆಗಂ ನಾಣ್ಚದೆ ನಮ್ಮನೊಲ್ಲದೆ ಪರಸ್ತ್ರೀಗೊಲ್ದವಳ್ಸತ್ತೊಡಾ
ಕೆಗೆ ತಾಂ ಪ್ರಾಣಮನಿತ್ತಪಂ ಗಡರಸಂ ನೋಡಕ್ಕ ಮಾವಿಂಗೆ ಮ
ಲ್ಲಿಗೆಗಳ್ಕೂರ್ತೊಡೆ ಮಾವು ಕೂರ್ತುದು ವಸಂತಶ್ರೀಗೆನಿಪ್ಪಂತೆ ಲ
ಜ್ಜೆಗೊಡಲ್ನಮ್ಮಳಿವೋಪದಿನ್ನುಟಿವಿದಕ್ಕೇಗೆಯ್ವುಮಬ್ಜೇಕ್ಷಣೇ (ಅನಂತನಾಥ ಪುರಾಣ ೧೨-೧೩)

ಎಂಬ ಮಾತಿನಲ್ಲಿ 'ಸತಿ' ನಿರಾಕರಣೆಯ ಧ್ವನಿಯಿದೆ.

ಮಾಸ್ತಿ, ಎರಡು ಬಗೆಯಾಗಿದೆ : ೧. ಸಹಗಮನ (=ಸಹಮರಣ) ೨. ಅನುಗಮನ (=ಅನುಮರಣ). ಗಂಡನ ಶವದೊಂದಿಗೆ ಚಿತೆಯೇರುವುದು ಸಹಗಮನ. ಗಂಡ ದೂರದ ಸ್ಥಳದಲ್ಲಿ ಮಡಿದರೆ ಅವನ ಪ್ರಿಯವಸ್ತುವನ್ನು ಹಿಡಿದು ಚಿತೆಯೇರುವುದು ಅನುಗಮನ. ಗಂಡ ಯಾವುದೇ ರೀತಿಯಿಂದ ಸತ್ತಿರಲಿ ಹೆಂಡತಿ ಚಿತೆಯೇರಬೇಕೆಂಬುದು ಇಲ್ಲಿಯ ನಿಯತಿ.

ಪ್ರಾಚೀನ ಕರ್ನಾಟಕದಲ್ಲಿ ಈ ಪರಂಪರೆಯನ್ನು ಅರಿಯಲು ನೆರವಾಗುವ ಸಾಮಗ್ರಿಯೆಂದರೆ ೧.ಗ್ರಂಥಸಾಹಿತ್ಯ, ೨. ದಿನಚರಿ ಸಾಹಿತ್ಯ, ೩. ಜನಪದ ಸಾಹಿತ್ಯ ೪. ಶಾಸನಸಾಹಿತ್ಯ. ೫. ಶಿಲ್ಪಸಾಮಗ್ರಿ, ೬. ಅವಶೇಷಗಳು, ೭. ವದಂತಿಗಳು. ಇವುಗಳಲ್ಲಿ ಸತಿಘಟನೆಯ ದಾಖಲೆಗಳಾದ ಶಾಸನಗಳು ತುಂಬ ವಿಶ್ವಸನೀಯ ಆಧಾರಗಳೆನಿಸಿವೆ. ಇವು ಆಯಾಕಾಲದ ಸಹಗಮನದ ಕಾರಣ - ವಿಧಾನ, ಬಾಹುಳ್ಯ - ವಿರಳತೆ ಇತ್ಯಾದಿ ಸಂಗತಿಗಳನ್ನು ಒದಗಿಸುತ್ತವೆ.

೫ ಅಥವಾ ೬ನೆಯ ಶತಮಾನದ ಕವಡಿ ಶಾಸನ ಬಹುಶಃ ಕಂದಬ ರವಿವರ್ಮನ ರಾಣಿಯ ಸಹಗಮನವನ್ನು ಸೂಚಿಸುತ್ತಿದ್ದು, ಇದು ನಮ್ಮ ನಾಡಿನಲ್ಲಿಯ ಸತಿ ಪದ್ಧತಿಯನ್ನು ಕುರಿತ ಪ್ರಥಮ ದಾಖಲೆಯಾಗಿದೆ.[೧೯] ಆಮೇಲೆ ಒಮ್ಮೆಲೇ ಕಂಡುಬರುವವು ೯೦೮ರಲ್ಲಿ ಹೆಗ್ಗಡೆ ತೊಮ್ಮನೆಂಬವನು ಯುದ್ಧದಲ್ಲಿ ಮಡಿಯಲು ಅವನ ಮಡದಿ ಬಳಕ್ಕ ಕೈಕೊಂಡ ಸಹಗಮನದ ಉಲ್ಲೇಖ,[೨೦] ಮತ್ತು ೯೭೨ರಲ್ಲಿ ಬಿದಿಯಣ್ಣನ ಮಡದಿ ಜಕ್ಕಬ್ಬೆ ಮಹಾಸತಿಯಾಗಲು ಅವಳ ತಂಗಿ ಜಾಬೆ ಮಾಸ್ತಿ ಶಿಲೆ ನಿಲ್ಲಿಸಿದಳೆಂಬ ಉಲ್ಲೇಖ.[೨೧] ಹೀಗೆ ೧೦ನೆಯ ಶತಮಾನಪೂರ್ವದಲ್ಲಿ ಸಿಗುವ ಈ ಉದಾಹರಣೆಗಳು ಈ ಪದ್ಧತಿಯ ವಿರಳತೆಯ ದ್ಯೋತಕವೆನ್ನಬಹುದು. ಹೀಗಿದ್ದೂ ಪಂಪಭಾರತದ ಮಾದ್ರಿಯ ಚಿತಾಪ್ರವೇಶ, ಆಶ್ರಮದ ಮುನಿಗಳಿಂದಲೂ ದೇವತೆಗಳಿಂದಲೂ ಪ್ರಶಂಸಿತವಾದುದೂ,[೨೨]

ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
ಣ್ದಾಂ ಗಡಮಿರ್ಪೆನಂತನಿತು ಬೆಳ್ಳನೆ ಮುನ್ನಮೆ ಪೋಗಿ ನಲ್ಮೆ ಗೆ
ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆಯನೋವೊ ಸ
ಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳಟ್ಟಿಯನಾಗಲೀವೆನೇ ||[೨೩]

ಎಂಬ ಪಂಪಭಾರತದ ಸೈನಿಕನ ಮಡದಿ ಉತ್ಸಾಹ ತೋರಿದುದೂ, ಜೈನವಿರೋಧವಾಗಿದ್ದರೂ 'ಎರಡೆ ವಲಂ ಕುಲವಧುಗಾಚರಿಸಲ್ ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾಚರಣಂ ಮೇಣ್ ಶುಭಚರಿತದೆ ಮರಣಂ"[೨೪] ಎಂದು ಭಾವಿಸಿ ಗುಂಡಮಬ್ಬೆ ಚಿತಾಪ್ರವೇಶ ಮಾಡಿದುದೂ, ಈ ಪದ್ಧತಿಯ ಗಾಢತೆಯನ್ನು ಸೂಚಿಸುತ್ತವೆಯೆಂದೇ ಹೇಳಬೇಕು.

ಹತ್ತನೆಯ ಶತಮಾನದಿಂದ ಈಚೆ ಬಂದರೆ ೧೦೫೧ರ ಉತ್ತರಾಣೆಹಳ್ಳಿ ಶಾಸನವು ಬೋಗಾರ ಕರಡಿಸೆಟ್ಟಿಯ ಮಡದಿ ನಾಗಮ್ಮನ ಚಿತಾಪ್ರವೇಶವನ್ನು ಹೇಳುತ್ತದೆ.[೨೫] ಮಾಸ್ತಿಶಾಸನದ ಮುಡಿಯ ಮಾಣಿಕ್ಯವೆನಿಸಿದ

---

೧೯. EC. VIII ಸೊಬರ ೫೨೩. ಕವಡಿ (ಕ್ರಿ.ಶ.ಸು. ೬ನೆಯ ಶತಮಾನ).

೨೦. SII. IX-I ೫೬, ಕೋಗಳಿ (ಕ್ರಿ.ಶ. ೯೦೮-೯).

೨೧. EC.VIII ಸೊರಬ ೪೫೭, ಬೆನ್ನೂರು (ಕ್ರಿ.ಶ. ೯೭೨)

೨೨. ಪಂಪಭಾರತ ೨-೨೬ ವ

೨೩. ಪಂಪಭಾರತ ೧೦-೪೫.

೨೪. ಅಜಿತಪುರಾಣ ೧-೪೬.

೨೫. EC. VII ಶಿಕಾರಿಪುರ ೭೨. ಉತ್ತರಾಣೆಹಳ್ಳಿ (ಕ್ರಿ.ಶ. ೧೦೫೧).

೧೦೫೭ರ ಬೆಳತೂರ ಶಾಸನವು ದೇಕಬ್ಬೆಯ ಅನುಗಮನವನ್ನು,[೨೬] ೧೦೮೮ರ ಹೆಬ್ಬಲಗುಪ್ಪೆ ಶಾಸನವು ನವಲಾಪಿರಾಜನ "ಎಳೆತಿ ತಪಜೆಯ ಕಮ್ಮಾರಿವುಯ್ದು" ಸತ್ತುದನ್ನು ಹೇಳುತ್ತವೆ.[೨೭] ಹಡವಳ್ತಿ ಕನಕವ್ವೆಗೆ ವೇಳೆವಾಳಿಯಾಗಿ ಸತ್ತ ಹಟ್ಟಿಗೊರವನಾಯಕನ ಪತ್ನಿ ಬೊಮ್ಮಕ್ಕ ಸತಿ ಹೋದ ವಿಷಯ ೧೧೯೦ರ ಕೋಟೆವೂರ ಶಾಸನದಲ್ಲಿದೆ.[೨೮] ೧೧೩೪ರ ಹುತ್ತಗ್ರಾಮ ಶಾಸನ ಸೂರ್ಯಲೋಕಪ್ರಾಪ್ತನಾದ ಪತಿಯ ಮರಣಾನಂತರ ದೇವಿಯಕ್ಕ 'ಪುರುಷಬ್ರತ'ದಿಂದ ಸತ್ತುದನ್ನು ಸೂಚಿಸುತ್ತದೆ.[೨೯] "ಮಾರದೇವನ ರಮಣಿ ಮನೋಹರಿ ಮಹಾಸತಿ ಶೀಲಗುಣೌಘಭೂಮಿ ಕಾಮಿನಿ ಮಹದೇವಿ"ಯ ಸಹಗಮನ ೧೧೫೦ರ ಕಸಲಗೆರೆ ಶಾಸನದಲ್ಲಿದೆ.[೩೦] ೧೧೮೦ರ ಒಂದು ಶಾಸನವು ಬೀಚಿರಾಜನ ಇಬ್ಬರು ಸತಿಯರಾದ ಬೈಲಿಯಕ್ಕ, ಮಲಪನೀಯಕ್ಕರ ಸಹಗಮನವನ್ನು[೩೧] ತಿಳಿಸುತ್ತದೆ. ೧೨೮೬ರ ಹಾಪೋಬೆನವಳ್ಳಿ ಶಾಸನ ತುರುಗೋಳದಲ್ಲಿ ಸತ್ತ ಬೊಮ್ಮರಸನ ಮಡದಿ... ಬವೆನಾಯಕಿತ್ತಿ 'ತೋಳುಕೆಯಿಗೊಟ್ಟ' ವಿಷಯವನ್ನು ಹೇಳುತ್ತ, ಅವಳ ಮಗ ಪಿಳ್ಳೆಯ ನಾಯಕ ಹೊನ್ನೇಶ್ವರದೇವರ ಅಮೃತಪಡಿಗೂ ಬೀರಗಲ್ಲ ಪೂಜೆ ನಡೆಸುವಂತಾಗಿಯೂ ೧೦ ಕಂಬ ಗದ್ದೆಯನ್ನು ಆಂಜನೇಯ ಗುರುಗಳಿಗೆ ನೀಡುತ್ತಾನೆ. (ಇಲ್ಲಿ ಇದನ್ನು 'ಬೀರಗಲ್ಲು' ಎಂದು ಕರೆದಿದೆ.[೩೨] ಮಗ್ಗುಲಲ್ಲಿರುವ ಬೊಮ್ಮರಸನ ವೀರಗಲ್ಲ[೩೩] ಪೂಜೆಯನ್ನೂ ಈ ಗುರುಗಳೇ ಮಾಡಬೇಕೆಂಬ ವಿಷಯವಿಲ್ಲಿದೆ). ೧೨ನೆಯ ಶತಮಾನದ ಉತ್ತರಾರ್ಧದ ಸಿದ್ಧಾಪುರ ಶಾಸನ ರಾಮಗೌಡನ ಸತಿ ಮಸಣಿಗವುಡಿಗಾಗಿ 'ವೀರಮಹಾಸತಿ ಕಂಬ" ನಿಲ್ಲಿಸಿದುದನ್ನು ಹೇಳುತ್ತದೆ.[೩೪] ಸಾಹಿತ್ಯಕ್ಕೆ ಬಂದರೆ

"ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ
ಪರಿಪರಿಯಲು ಬಣ್ಣಿಸಲು ಬಹುದಲ್ಲದೆ
ಪುರುಷನಿರ್ವಾಣಕ್ಕುರಿವಗ್ನಿಯ ಬಂದು ಹೊಕ್ಕುತೋರಲು ಬಾರದು"[೩೫]

'ಧೀರೆಯಾದ ಮಾಸ್ತಿಗೆ ವೀರತ್ವವಲ್ಲದೆ
ಧಾರುಣಿಯ ಜನರೆಲ್ಲರೂ ಹೇಡಿಮಾಸ್ತಿ ಎಂಬ ಬಳಿಕ ವೀರತ್ವಯೆಲ್ಲಿದೋ ?
ಧೀರೆಯಾದ ಮಾಸ್ತಿಯ, ವೀರರಾಗಿದ್ದವರು
ಮುಡಿಯಲರ ಹಿಡಿದ ಲಿಂಬೆಯಹಣ್ಣ ಬೇಡಿದಡೆ ಕೊಡುವಳು;
ದೃಢವುಳ್ಳ ವೀರರು ತರುವರು;
ದೃಷ್ಟವ ನೋಡಿರಣ್ಣ, ಕೊಡುವಾಕೆ ದಹನವಾದಳು, ಕೊಂಬಾತ ರೂಪಾದ.

---

೨೬. EC. IV ಹೆಗ್ಗಡದೇವಕೋಟೆ ೧೮. ಬೆಳತೂರು (ಕ್ರಿ.ಶ. ೧೦೫೭).
೨೭. EC.IV ಹೆಗ್ಗಡದೇವನಕೋಟೆ ೧೦೦. ಹೆಬ್ಬಲಗುಪ್ಪೆ (ಕ್ರಿ.ಶ. ೧೦೮೮)
ಇದು ಬಹುಶಃ ಕೊಳ್ಳದಲ್ಲಿ ಹಾರಿಕೊಂಡುದನ್ನು ಸೂಚಿಸುತ್ತದೆ.
೨೮. EC. VI ಚಿಕ್ಕಮಗಳೂರು ೬೬. ಕೋಟೆವೂರು (ಕ್ರಿ.ಶ. ೧೧೯೦).
೨೯. EC. VII ಶಿಕಾರಿಪುರ ೩೨. ಹುತ್ತಗ್ರಾಮ (ಕ್ರಿ.ಶ. ೧೧೩೪).
೩೦. EC. IV ನಾಗಮಂಗಲ ೯೬. ಕಸಲಗೆರೆ (ಕ್ರಿ.ಶ. ೧೧೫೦).
೩೧. EI XIV ಪು. ೨೭೩. (ಕ್ರಿ.ಶ. ೧೧೮೦).
೩೨. EC. VII ಶಿವಮೊಗ್ಗ ೬೧. ಹಾರೋಬೆನವಳ್ಳಿ (ಕ್ರಿ.ಶ. ೧೨೮೬).
೩೩. EC. VII ಶಿವಮೊಗ್ಗ ೬೨, ಹಾರೋಬೆನವಳ್ಳಿ (ಕ್ರಿ.ಶ. ೧೨೮೬).
೩೪. KI. V ನಂ. ೧೧೬, ಬೇಡಕಣಿ (ಕ್ರಿ.ಶ. ೧೨ರ ಉತ್ತರಾರ್ಧ).
೩೫. ಬಸವಣ್ಣನವರ ವಚನಗಳು ೬೭೮.

ಈತ ಬೇಡಿದ ಇಷ್ಟವ ಕೊಟ್ಟಾತನುಯಾತವೋ
ಆತ್ಮನೋ ಬಲ್ಲಡೆ ನೀವು ಹೇಳಿರಣ್ಣ.
ನಿಮ್ಮಜ್ಞಾನದ ಮುಸುಕು ತೆಜೆದು ನಿಮ್ಮ ಬಲ್ಲವಂತಿಕೆಯ ಕಾಣಬಹುದು.
ಕಾಮಧೂಮ ಧೂಳೇಶ್ವರಲಿಂಗನಱಿವುದಕ್ಕೆ ಇದೆ ದೃಷ್ಟ"[೩೬]

ಕೊಂಡಕ್ಕೆ ಬೀಳ್ವಂತ ಲಂಡಸ್ತ್ರೀಯಳು ತಾನು
ದಂಡೆಯ ಕುಣಿಕೆ ಸಡಿಲಿಸಿ । ಕೊಂಡದ
ಕೆಂಡದೊಳಾಳಿ ಮುಳುಗಿದಳು ||[೩೭]

ಎಂಬ ಬಸವಣ್ಣನವರ ಮತ್ತು ಮಾದಾರ ಧೂಳಯ್ಯಗಳ ವಚನ, ಮಹಾದೇವಿಯಕ್ಕನ ತ್ರಿವಿಧಿಗಳು ಆ ಕಾಲದಲ್ಲಿ ಸಹಗಮನವು ಪರಿಪರಿಯಲಿ ಬಣ್ಣಿಸುವಷ್ಟು ಶ್ಲಾಘ್ಯವೆನಿಸಿದ್ದಿತೆಂದೂ ವೀರರಾದವರು ಅವಳಿಂದ ಮುಡಿದ ಹೂ, ಹಿಡಿದ ಲಿಂಬೆಯನ್ನು ಕೇಳಿ ಪಡೆಯುತ್ತಿದ್ದರೆಂದೂ ವಿವರಿಸುತ್ತವೆ. ಬಿಜ್ಜಳನ ತಾಯಿ ಸಹಗಮನ ಮಾಡಿದ ವಿಷಯ ಸಿಂಗಿರಾಜಪುರಾಣದಲ್ಲಿದೆ.[೩೮] ಅನಂತನಾಥಪುರಾಣವಂತೂ ಹೊಯ್ಸಳ ಸಾಮ್ರಾಜ್ಯದಲ್ಲಿ ಜರುಗುತ್ತಲಿದ್ದ ಸಹಗಮನವನ್ನು ತುಂಬ ಶ್ರೀಮಂತನಾಗಿ ಚಿತ್ರಿಸುತ್ತದೆ. ಸಿಂಹಚೂಡನು ಮರಣಪ್ರಸಂಗದ 'ಸಹಗಮನ ಸಮುತ್ಸುಕತೆಯಂ ಕೈವಿಡಿಸೆ ಕೈಗುಡುವ ಕೈದುಬರ್ಪ ಕೈವಿಡಿದ ಪೆಂಡಿರ ತಂಡ"[೩೯] ಎಂಬ ಮಾತೂ, ಚಂಡಶಾಸನ ಸುನಂದೆಯೊಂದಿಗೆ ಚಿತಾಪ್ರವೇಶಕ್ಕೆ ಸಿದ್ಧನಾದ ಸಂದರ್ಭದ

ತುಡುಗೆಯನಾಯ್ದುಕೊಂಡುೞಿದುವಂ ಸಖಿಯರ್ಗಿರವೇಟ್ಟು ಬಂಧುಗ
ಳ್ತೊಡರ್ದಿರೆ ಮೋಹಮಂ ಬಿಡಿಸುವಾಶ್ರಿತರ್ಗಾದೆಡರಂ ಕಟಲ್ಚಿ ಬೀ
ಟ್ಕೊಡಿಸುವ ಪೊನ್ನ ಮಾಣಿಕದ ಬಾಯಿನಮಂ ಸಮಕಟ್ಟುವಟ್ಟಿ ಬಂ
ದೊಡೆ ಮಿಡಿಹಾರಮೀವೆಳವಿಯಚ್ಚರಿಯಾದುದು ಪೆಂಡವಾಸದೊಳ್ ||[೪೦]

ಎಂಬ ವಿವರಗಳೂ ಸಹಗಮನದ ಉತ್ಸುಕತೆಯನ್ನು ಸೂಚಿಸುತ್ತವೆ.

ಮುಸಲ್ಮಾನ್ ಪ್ರವೇಶ ಪೂರ್ವದ ಕರ್ನಾಟಕದಲ್ಲಿ ಜರುಗುತ್ತಲಿದ್ದ ಸಹಗಮನದ ವಿವರ - ಸ್ವರೂಪಗಳಿವು. ಹದಿಮೂರನೆಯ ಶತಮಾನದಲ್ಲಿ ಮುಸಲ್ಮಾನರು ಕರ್ನಾಟಕವನ್ನು ಪ್ರವೇಶಿಸಿದರು. ಅಹಿಂದು ಜನಾಂಗದೊಂದಿಗೆ ಜರುಗಿದ ಈ ಪ್ರಥಮ ಸಂಘರ್ಷ ಹಿಂದುಗಳ ಬದುಕಿನ ಮೇಲೆ ಹೊಸ ಪರಿಣಾಮವನ್ನೇ ಮಾಡಿರಬೇಕು. ಇಲ್ಲಿಂದ ಮುಂದೆ ಸಿಗುವ ಮಾಸ್ತಿ ಉದಾಹರಣೆಗಳು ಹೀಗಿವೆ; ಮಾಲಗವುಂಡನ ಮಡದಿ ಚೆನ್ನಕ್ಕ (ಹಿರೇಆವಲಿ),[೪೧] ಹಾವಲಿ ಬೀಚಗವುಡನ ಕಿರಿಯಪತ್ನಿ ಮುದ್ದಿಗಾವುಂಡಿ (ಹಿರೇಆವಲಿ),[೪೨] ಹಾವು ಕಡಿದು ಸತ್ತ ದೇವನಾಯಕನ ಸತಿ ಮದ್ದನಕೇತಿ (ದೂಗೂರು),[೪೩] ಬೀರೂರ ಬಮ್ಮಗವುಡನ ಮಗ ಮಾದಪ್ಪನ

---

೩೬. ಸಕಲಪುರಾತನರ ವಚನಗಳು ೧೭೬೧.
೩೭. ಶಿವಶರಣೆಯರ ವಚನಗಳು ಪು. ೧೫೩.
೩೮. ಸಿಂಗಿರಾಜ ಪುರಾಣ ೩೯-೪೦.
೩೯. ಅನಂತನಾಥಪುರಾಣಂ. ೧೧-೭೩ ಗ.
೪೦. ಅನಂತನಾಥಪುರಾಣಂ ೧೨-೧೨.
೪೧. EC. VIII ಸೊರಬ ೧೦೪, ಹಿರೇಆವಲಿ (ಕ್ರಿ.ಶ. ೧೩೫೪).
೪೨. EC. VIII ಸೊರಬ ೧೦೬. ಹಿರೇಆವಲಿ (ಕ್ರಿ.ಶ. ೧೩೭೬)
೪೩. EC. VIII ಸೊರಬ ೪೮೩ ದೂಗೂರು (ಕ್ರಿ.ಶ. ೧೩೮೮)

ಸತಿ ಮಸಣಕ್ಕ (ಮರೂರು.),[೪೪] ಬುತಿಖರನ ಮೂವರು ಮಡದಿಯರು (ಪುರಗ್ರಾಮ),[೪೫] ಸೋದೆಯ ಅರಸಪ್ಪನಾಯಕನ ಒಂಬತ್ತು ಜನ ಮಡದಿಯರು[೪೬] ಮಧುವರಸನಾಯ್ಕನ ಹೆಂಡಂದಿರಾದ ಬುಳ್ಳರಸಿ ಮತ್ತು ಕಂನಾಯಿ (ಬಂದಳಿಕೆ),[೪೭] ಸತಿಹೋದರೆಂದು ತಿಳಿದುಬರುತ್ತದೆ. ಈಗಿನ ಮಟ್ಟಿಗೆ ಕೊನೆಯ ಮಾಸ್ತಿಕಲ್ಲು "..... ಕೆಳದಿಯ ಕರಿಯ ತಿಮ್ಮೇಗೌಡನು ಸ್ವರ್ಗಸ್ಥನಾಗಲು ಆತನ ಮದವಳಿಗೆ ರಾಮಕ್ಕನು ಮಹಾಸತಿಯಾದಳು" ಎಂದು ಉಲ್ಲೇಖಿಸುವ ೧೬೧೯ರ ಕೆಳದಿ ಶಾಸನ.[೪೯]

ಈ ಕಾಲದ ಕುಮಾರರಾಮನ ಸಾಂಗತ್ಯವು, ಕುಮಾರರಾಮನ ಮರಣದ ಸುಳ್ಳು ಸುದ್ದಿಯನ್ನು ನಿಜವೆಂದು ನಂಬಿ ಅವನ ಐದು ಜನ ಮಡದಿಯರು ಸಹಗಮನಕ್ಕೆ ಸಿದ್ಧರಾದ ಪ್ರಸಂಗವನ್ನು

ಪಿಡಿದ ನಿಂಬೆಯ ಹಣ್ಣು ಕನ್ನಡಿ ಕೈಯೊಳು
ಬಿಡದೆ ಮೆಱೆಯಲಂದವರು
ಸಡಗರದಿಂ ಬಂದು ಹರಿಹರದೇವಿಯ
ರಡಿಗೆಱಗಿದರು ಮೋಹರಿಸಿ ||

ಪಲ್ಲಕ್ಕಿಗಳ ಮೇಲೆ ಚೆನ್ನಗರಾಮನ
ವಲ್ಲಭೆಯರ ಕುಳ್ಳಿರಿಸಿ
ನಿಲ್ಲದೆ ಕೊಂಡೊಯ್ದಾ ಕೊಂಡದ ಕೆಲ
ದಲ್ಲಿ ನಿಲ್ಲಿಸಿ ತೆರೆವಿಡಿದು ||

ಬಳಿಕ ಕೃತಕದ ಮಾಸತಿಯರು ಪುರಜನ
ಗಳ ಪರಸುತ ಲೀಲೆ ಮಿಗಲು
ಘುಳಿಲನುರಿಯ ಕೊಂಡದೊಳಗೆ ಬಿದ್ದರು ಪುರ
ಲಲನೆಯರೆಲ್ಲ ಘೋಳಿಡಲು ||[೫೦]

ಎಂದು ವರ್ಣಿಸುತ್ತದೆ. ಕಾಲಾಂತರದಲ್ಲಿ ಅತ್ತ ಮಾತಂಗಿಯೊಡನೆ ಕುಮಾರರಾಮನು ಯುದ್ಧಕ್ಕೆ ಹೊರಡಲು ಇತ್ತ ಆತನ ಮಡದಿಯರು ಚಿತೆಯ ಸಿದ್ಧತೆ ಮಾಡಿಕೊಳ್ಳುತ್ತಾರೆ. ಆಗ ಹೇಳಿದ

ಕಂಡನಗಿಲು ಬಾವನ್ನಗೊರಡುಗಳ
ಕೆಂಡಗಳಿಂದಿಡಿದಿರ್ದ
ಕುಂಡಗಳನು ರಾಜಾಂಗಣದೊಳು ಮುಂ
ಕೊಂಡು ನಿಂದಿರ್ದ ಪೆಣ್ಗಳನು ||

---

೪೪. EC. VIII ಸಾಗರ ೮ ಮರೂರ (ಕ್ರಿ.ಶ. ೧೪೧೦)
೪೫. EC. VIII ಮಂಡ್ಯ ೧೦೩. ಪುರಗ್ರಾಮ (ಕ್ರಿ.ಶ. ೧೪೧೭)
೪೬. ARSIE ೧೯೩೯-೪೦ ನಂ. ೭೧ (ಕ್ರಿ.ಶ. ೧೪೩೧)
೪೭. EC. VIII ಶಿಕಾರಿಪುರ ೨೩೯. ಬಂದಳಿಕೆ (ಕ್ರಿ.ಶ. ೧೪೪೭).
೪೮. EC. VIII ಸೊರಬ ೫೫೯. ಕಂಡಗಳತಿ (ಕ್ರಿ.ಶ. ೧೪೫೦).
೪೯. EC. VIII ಸಾಗರ ೩೫. ಕೆಳದಿ (ಕ್ರಿ.ಶ. ೧೬೧೯)
೫೦. ರಾಮನಾಥ ಚರಿತೆ ೩೬-೧೬೦, ೧೬೨, ೧೬೪.

ಕೇಸುರಿಗೆದರುವ ಕೆಂಡಗಳಿಂದ ವಿ
ಲಾಸವಡೆದ ಕುಂಡಗಳೊಳು
ಸೂಸುತ ಕರ್ಪುರಗಳನು ನಿಂದಿರ್ದ ಮ
ಹಾಸತಿಯರ ಕಂಡನಲ್ಲಿ ||

ತನ್ನಳಿವುಳಿವ ಕೇಳುತ ಕೆಳದಿಯರಿಂದ
ಕನ್ನಡಿ ನಿಂಬೆವಣ್ಗಳನು
ಮನ್ನಿಸುತಲ್ಲಿರ್ದ ನಿಜಸತಿಯರ ಮೊಗ
ಗನ್ನಡಿಗಳ ಕಂಡನೊಸೆದು ||

ಎಂಬ ಪದ್ಯಗಳಲ್ಲಿ ಸಹಗಮನದ ವಿವರಗಳಿವೆ. ಕುಮಾರ ರಾಮನು "ಇಂದು ನನ್ನ ವೀರಮರಣ ನಿಶ್ಚಯ"ವೆನ್ನುವುದೆ ತಡ

ನುಡಿಯಲಾ ಮಾತು ಹಿಂಚಿತು ಕುವರನನೊಡ
ನೊಡನಮರ್ದಮರ್ದಪ್ಪಿಕೊಂಡು
ಮಡದಿಯರಾನಂದ ಕೈಮಿಗೆ ಬೀಳ್ದರಂ
ದಡಿಗಡಿಗಗ್ನಿ ಕುಂಡದೊಳು ||[೫೧]

ಈ ಪದ್ಯದಲ್ಲಿ ಸಹಗಮನದ ಕೊನೆಯ ಕ್ರಿಯೆಯಿದೆ. ಇಂತಹ ಇನ್ನೊಂದು ಕೃತಿ ವಿರಕ್ತತೋಂಟದಾರ್ಯನ ಸಿದ್ಧೇಶ್ವರ ಪುರಾಣ. ಅಲ್ಲಿಯ ಒಂದು ಸಹಗಮನ ಪ್ರಸಂಗ

ಸತಿಯದೊರ್ವಳು ತನ್ನ ಪತಿ ದೂರದೊಳು ಪೋಗಿ
ಕ್ಷಿತಿವರರ ಸಮರಾಂಗಣದೊಳು ಯುದ್ಧಂಗೆಯ್ದು
ಹತನಾದನೆಂಬುದಂ ತನ್ನ ಬಂಧುಗಳಾಪ್ತರಿಂ ಕೇಳ್ದು ನಿಜವಾಗಲು
ಮೃತವಪ್ಪೆನುಳಿಯೆನೆಂದಾವೂರನಾಳ್ವ ಭೂ
ಪತಿಯೊಳವಪ್ಪಣೆಯಾಂತು ಬಂದು ಸೂಸಕದಂಡೆ
ಯುತವಾದ ಮಂಡೆಯಿಂದರಿಸಿನದ ಸೀರೆಯುಟ್ಟಾಭರಣಗಳನು ತೊಟ್ಟು ||

ಪರಿಪರಿಯ ಪುಷ್ಪಮಾಲಾನುಲೇಪಗಳಿಂ
ಪಿರಿದಲಂಕರಿಸಿ ಜಂಬೀರ ಫಲಮಂ ಪಿಡಿದು
ತರದೆ ನತ್ತೊಂದು ಕಯ್ಯೊಳಗೆ ಕೈಪಿಡಿವಿಡಿದು ಘನವೀರನಾದಿಂದೆ
ಉರುತರದೊಳಾರ್ದು ಬೀದಿಯೊಳು ಕುಣಿದಾಡುತ್ತೆ
ಬರುತೆ ಪುರಜನದ ಸಂದಣಿಯಿಂದ ವಾದ್ಯಂಗ
ಳುರು ಘೋಷದಿಂದೆ ಕಂಡಾನಂದದಿಂದೆ ಸಿದ್ಧೇಂದ್ರಂಗೆ ವಂದಿಸಿದಳು ||[೫೨]

೫೧. ರಾಮನಾಥ ಚರಿತೆ ೪೫-೫೧, ೫೨, ೫೩, ೬೦.
೫೨. ಶ್ರೀ ಸಿದ್ಧೇಶ್ವರ ಮಹಾಪುರಾಣ ೧೨-೩೫, ೩೬

ಎಂದು ವರ್ಣಿತವಾಗಿದೆ. ಇತ್ತೀಚೆ ಪ್ರಕಟವಾದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ತೋಂಟದರಾಯನ ಮಡದಿ ಚೆನ್ನಬಸಮ್ಮನ ಮಾಸ್ತಿಪ್ರಸಂಗ:

ಆ ಕುಮಾರನ ರಾಣಿ ಚನ್ನಬಸಮ್ಮ
ತಾ ಕಲಿಯಾಗಿ ಸಿಂಗರಿಸಿ
ಶ್ರೀ ಕೈಲಾಸಕೆಯ್ದಿದ ತನ್ನ ಗಂಡನೆಂ
ದಾ ಕಮಲಾಯತನೇತ್ರೆ ॥
ಎಡಗೈಯ ಮಣಿಗನ್ನಡಿ ಬಲಗೈಯ್ಯೊಳು
ಪಿಡಿದಲಗುವ ಜಮದಾಡೆ
ಮುಡಿದ ಗರಿಯ ಬಾಸಿಗವಮರಿದ ರನ್ನ
ದೊಡವೊಪ್ಪಲೈತಂದಳಾಗ ॥

ಬಾಳು ಸದ್ಗುಣೇಶ ಬಾಳು ಮತ್ಪ್ರಾಣೇಶ
ಬಾಳು ಬಾಳೆನ್ನೆದೆಯಾಣ್ಮ
ಬಾಳು ನಿನ್ನೊಡನೆನಗೆಂದು ನಿಜೇಶನ
ಬಾಳಾಂತು ಮೆರೆವುತರ್ಥಿಯಲಿ ॥

ನರ್ತಿಸಿದಳು ನಲಿದಳು ಮನದನ್ನನ
ಮೂರ್ತಿಯ ವಿಮಲ ಸದ್ಗುಣವ
ಕೀರ್ತಿಸುತಾ ಸತಿ ಮಾಸತಿಯಾಗಿ ಪ್ರ
ವರ್ತಿಸಿದುದನೇನೆಂಬೆ ॥

ಅತ್ತೆಮಾವಂದಿರ ಪಾದಕೆರಗಿ ತನ್ನ
ಚಿತ್ತವಲ್ಲಭನ ಮೂರ್ತಿಯನು
ಚಿತ್ತದೊಳಿಟ್ಟು ಜಾನಿಸುತೆ ಶ್ರೀ ಗುರುರಾಯ
ನಿತ್ತ ಲಿಂಗಕ್ಕೆ ಪೊಡುವಡುತೆ ॥

ಪರಮ ಪಂಚಾಕ್ಷರಿಯನು ಜಪಿಸುತೆ ಶ್ರೀ
ಗುರುಸಿದ್ಧಮಲ್ಲಿಕಾರ್ಜುನನ
ಚರಣ ಮಂಡೆಯೊಳಿಟ್ಟು ಲಿಂಗವ ನೋಡಿ
ವೆರಸಿದಳಾತ್ಮವಲ್ಲಭನ ॥

ಕಂಡಚ್ಚರಿಗೊಂಬುತೆ ಶಿವಭಕ್ತರ
ತಂಡವುಘೇವುಘೇಯೆನಲು
ಖಂಡೇಂದುಧರನ ತೊಡೆಯೊಳಿಪ್ಪ ತನ್ನಯ
ಗಂಡನನಮರ್ದಪ್ಪಿದಳು ॥[೫೩]

---

೫೩. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ XVI : ೭೦-೭೨, ೭೫, ೮೩, ೮೫, ೮೬.

ಎಂದು ವಿವರವಾಗಿ ಬರುತ್ತದೆ. ಕಲಿ ಸಿರುಮನ ಸಾಂಗತ್ಯ (ಅಪ್ರಕಟಿತ)ದಲ್ಲಿ ಎರಡು ಸಲ ಮಾಸ್ತಿ ಪ್ರಸಂಗಗಳನ್ನು, ಒಂದು ಸಲ ಮಾಸ್ತಿಗಿಂತ ಭೀಕರವಾದ 'ಜೋಹರ್' ಪ್ರಸಂಗವನ್ನು ಚಿತ್ರಿಸಲಾಗಿದೆ. ಸತಿಯರು ವಿಶ್ವರಾಜನ ಮರಣಸಂದರ್ಭದಲ್ಲಿ ಅಗ್ನಿ ಪ್ರವೇಶ ಮಾಡಿದರೆ,[೫೪] ವೀರಣ್ಣನ ಮರಣಪ್ರಸಂಗದಲ್ಲಿ

ಎತ್ತಿಕೊಂಡೊಯ್ದು ಕುಮಾರ ವೀರಣ್ಣನ
ಮತ್ತೆ ಸಮಾಧಿಯೊಳಿಡಿಸಿ
ಒತ್ತಿಲಿ ಅವನ ಸತಿಯರ ಕುಳ್ಳರಿಸಿದ
ಹೆತ್ತ ತಂದೆಯು ಸಿರುಮೇಂದ್ರ ।

ಮುಂದೆ ಕೈಲಾಸಕೆ ನಡೆದೆ ವೀರಣ್ಣ ನಿನ್ನ
ಒಂದಿ ಎಲ್ಲರು ಬಂದೆವೆನುತ
ಬಂದ ಜನರುಗಳು ನಂಬುಗೆಯನು ಕೊಟ್ಟು
ನೊಂದೆಲ್ಲ ಮಣ್ಣ ಮುಚ್ಚಿದರು ॥[೫೫]

ಹೀಗೆ ಸಮಾಧಿಪ್ರವೇಶ ಮಾಡುತ್ತಾರೆ.[೫೬] ಈ ಎರಡು ಸಂದರ್ಭಗಳಲ್ಲಿ ಬರುವ ಮೊಲೆಗಟ್ಟು, ಕಾಲಕುಪ್ಪಸ ಧರಿಸುವುದು, ಲಿಂಬೆ-ಕನ್ನಡಿ-ಕಠಾರಿ ಹಿಡಿದಿರುವುದು, ಕುದುರೆಯೇರಿ ಬರುವುದು, ಹಾಡುತ್ತ ಬಂದು ಗೌರಿವ್ರತ ಆಚರಿಸುವುದು, ಕೊಂಡವನ್ನು ಸುತ್ತಿ ಬಂದು ಎಣ್ಣೆಯಲ್ಲಿ ನೆರಳು ನೋಡಿ ಕೊಂಡದಲ್ಲಿ ಬೀಳುವುದು ಇಲ್ಲವೆ ಸಮಾಧಿ ಪ್ರವೇಶಿಸುವುದು ಇತ್ಯಾದಿ ವಿಧಿ-ವಿಧಾನಗಳ ವಿವರ ಅಭ್ಯಾಸಿಗೆ ತುಂಬ ಉಪಯುಕ್ತವಾದುದು.

ಸೋಲು ಖಚಿತವೆನಿಸಿದಾಗ ವೈರಿಗಳಿಂದುಂಟಾಗುವ ಅಪಮಾನವನ್ನು ತಪ್ಪಿಸಿಕೊಳ್ಳಲು ಮಕ್ಕಳನ್ನು, ಹೆಣ್ಣುಮಕ್ಕಳನ್ನು (ಕಡಿದು) ಅಗ್ನಿಗೆ ಅರ್ಪಿಸಿ, ತಾವೂ ಹೋರಾಡಿ ಸಾಯುವುದು ಇಲ್ಲವೆ ಅಗ್ನಿಪ್ರವೇಶ ಮಾಡುವುದು 'ಜೋಹರ್'. ರಾಜಸ್ತಾನಪ್ರಾಂತದಲ್ಲಿ ತುಂಬ ಪ್ರಚಲಿತವಿದ್ದ ಸಂಪ್ರದಾಯವಿದು. ಚಿತ್ತೂರಿನಲ್ಲಿ ಅಲ್ಲಾವುದ್ದೀನ ಖಿಲ್ಜಿಯ ದಾಳಿಕಾಲಕ್ಕೆ ಸಾವಿರಾರು ಸ್ತ್ರೀಯರು, ೧೬ನೆಯ ಶತಮಾನದಲ್ಲಿ ೧೩ ಸಾವಿರ ಸ್ತ್ರಿಯರು ಹೀಗೆ ಸತ್ತುದನ್ನು ಇಲ್ಲಿ ನೆನೆಯಬಹುದು. ಕರ್ನಾಟಕದಲ್ಲಿ ಜರುಗಿದ ಇಂಥ ಸಾಮೂಹಿಕ ಹತ್ಯೆಯನ್ನು ಉಲ್ಲೇಖಿಸುವ ಏಕೈಕ ಕೃತಿ, ಸಿರುಮನ ಸಾಂಗತ್ಯ.[೫೭] ತನ್ನ ಪಕ್ಷದ ಪರಾಕ್ರಮಿಗಳು ಸೈನಿಕರು ಸತ್ತು, ಸೋಲು ಸಮೀಪಿಸಲು ರಾಜಧಾನಿಯ ಸರ್ವಪರಿವಾರ, ಪರಿಕರಗಳನ್ನೆಲ್ಲ ಅಗ್ನಿಕುಂಡಕ್ಕೆ ನೂಕಿ, ತಂದೆ ಸಿರುಮ ಮಗ ಕೊಮಾರಮಲ್ಲ ತಾವೂ ಅಗ್ನಿಗೆ ಆಹುತಿಯಾಗುತ್ತಾರೆ.

ಇದೆಲ್ಲವನ್ನು ಗಮನಿಸಿದರೆ ಸಹಗಮನೋಲ್ಲೇಖ ಸಂಖ್ಯೆ ವಿಜಯನಗರದ ಪೂರ್ವ ಕಾಲಕ್ಕಿಂತ ವಿಜಯನಗರೋತ್ತರ ಕಾಲದಲ್ಲಿ ತುಂಬ ಬೆಳೆದುದು ಸ್ಪಷ್ಟವಾಗುತ್ತದೆ. ಮುಸಲ್ಮಾನರ ದಾಳಿ, ಪಾಳೆಯಗಾರರಲ್ಲಿ ಪದೇ ಪದೇ ಜರುಗುತ್ತಲಿದ್ದ ಒಳಜಗಳ, ಮೇಲುವರ್ಗದ ಚಕ್ರವರ್ತಿಗಳಿಗಿಂತ ಮಧ್ಯಮವರ್ಗದ ಪಾಳೆಯಗಾರರ ಪೊಳ್ಳು ಪ್ರತಿಷ್ಠೆ, ಚಕ್ರವರ್ತಿಗಳಿಗಿಂತ ಪಾಳೆಯಗಾರರ ಸಂಖ್ಯೆಯ ಆಧಿಕ್ಯ ಕಾರಣವಾಗಿ ಈ ಸಹಗಮನಗಳ ಸಂಖ್ಯೆ ವರ್ಧಿಸಿರಬೇಕು. ಈ ಕಾಲದ ನಿರಾಲಂಬ ಶರಣ ಹೆಸರಿನ ಷಣ್ಮುಖ ಶಿವಯೋಗಿ

---

೫೪. ಗೊಲ್ಲ ಸಿರುಮನ ಸಾಂಗತ್ಯ ೩. ೧೮೫ ರಿಂದ ೧೯೪.
೫೫. ಗೊಲ್ಲಸಿರುಮನ ಸಾಂಗತ್ಯ ೫ - ೨೨೦ ರಿಂದ ೨೪೪.
೫೬. ಗೊಲ್ಲಸಿರುಮನ ಸಾಂಗತ್ಯ ೩- ೨೩೮ ಮತ್ತು ೨೪೩.
೫೭. ಗೊಲ್ಲಸಿರುಮನ ಸಾಂಗತ್ಯ ೫ನೆಯ ಸಂಧಿಯ ಉತ್ತರಾರ್ಧ ಮತ್ತು ೬ನೆಯ ಸಂಧಿ.

"ಗಂಡ ಸತ್ತನೆಂದು ಗಂಡನೊಡನೆ ಬೀಳುವೆನೆಂದು
ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು ಖಂಡೆಯವ ಪಿಡಿದು
ತಂಡ ತಂಡದ ಜನರ ಮುಂದೆ ಮೆರೆದುಕೊಂಡು ಬಂದು
ಕಿಚ್ಚಿನ ಹೊಂಡವ ಕಂಡು ಹೆದರಿ ಹಿಮ್ಮೆಟ್ಟಿದರೆ
ಅವಳಿಗದೆ ಭಂಗವಲ್ಲದೆ ಶೃಂಗಾರ ಮೆರೆವುದೆ ಅಯ್ಯಾ?
ಪತಿಲಿಂಗ, ಸತಿಶರಣ ತನ್ನ ಪತಿವ್ರತಾಭಾಷೆಯ ನುಡಿದು ನಡೆಯಲ್ಲಿ ತಪ್ಪಿದಡೆ
ಅವನ ಭಂಗಕ್ಕೆ ತುದಿಮೊದಲಿಲ್ಲ ನೋಡಾ ಅಖಂಡೇಶ್ವರಾ"[೫೮]

ಎಂಬ ವಚನವು ಸತಿಪದ್ಧತಿಯ ಚಿತ್ರವನ್ನೊದಗಿಸುತ್ತದೆ. ಹಿಂದೆ ಹೇಳಿದ ಬಸವಣ್ಣನವರ ವಚನಕ್ಕೆ ಬರೆದ ೧೨ನೆಯ ಶತಮಾನದ ಟೀಕೆ ಹೀಗಿದೆ: "ಪುರುಷನಿರ್ವಾಣಕ್ಕೆ ಉರಿವ ಅಗ್ನಿಯ ಹೊಕ್ಕು ತೋರಲು ಬಾರದು - ಒಬ್ಬಾವೊಬ್ಬ ಪುರುಷನು ರಣಮಂಡಲಕ್ಕೆ ಹೋಗಿ ಕಡಿದಾಡಿ ಮಡಿದಲ್ಲಿ ಅವನ ಸ್ತ್ರೀಯಳು ಎಣ್ಣೆ ಅರಿಷಿಣವನ್ನು ಹಚ್ಚಿಕೊಂಡು ಹೂವನ್ನು ಮುಡಿದುಕೊಂಡು ಮನೆ ಮನೆಗೆ ಕೋರೂಟವನ್ನು ಉಂಬುತ್ತ ಇಪ್ಪತ್ತೇಳು ದಿವಸ ಮಾಸ್ತಿಯಾಗಿ ಮೆರೆವ ಪರಿಯಂತರ ಪರಿಣಾಮವಾಗಿರುವುದು. ಕಡೆಯಲ್ಲಿ ಸತಿಕಲ್ಲ ಮೇಲೆ ನಿಂತುಕೊಂಡು ಕೈಯ್ಯಲ್ಲಿ ನಿಂಬೆಹಣ್ಣನ್ನು ಪಿಡಿದುಕೊಂಡು ಕಿಚ್ಚಿನಲ್ಲಿ ಬಿದ್ದು ಪತಿವ್ರತಾಭಾವದ ಪರೀಕ್ಷೆಯನ್ನು ಕಾಣಿಸಿಹೆನೆಂದರೆ ಅಶಕ್ಯವಾಗಿರ್ಪುದು.'[೫೯] ಈ ಟೀಕೆಯಲ್ಲಿಯ ಕೋರೂಟ, ೨೭ ದಿನ ಇತ್ಯಾದಿಗಳನ್ನು ಗಮನಿಸಬೇಕು.

ಮುಂದೆ ಬ್ರಿಟಿಷರ ಕಾಲದಲ್ಲಿಯೂ ಈ ಪದ್ಧತಿ ಸಾಗಿಬಂದುದನ್ನು ಬಾರ್ಬೋಸ್ (೧೫೦೦), ನ್ಯೂನಿಝ್, ಸೀಜರ್ ಫ್ರೆಡರಿಕ್ (೧೫೬೦), ಪಿಯೆಟ್ರಡಲ್ಲೆವಲ್ಲೆ (೧೬೨೩) ಮೊದಲಾದವರ ದಿನಚರಿಗಳು ತಿಳಿಸುತ್ತವೆ.[೬೦] ಈ ಕಾಲದಲ್ಲಿ ಸತಿಹೋಗುವುದನ್ನು ಸರಕಾರಕ್ಕೆ ತಿಳಿಸಿ ಅಪ್ಪಣೆ ಪಡೆಯುವುದು ತೀರ ಕಡ್ಡಾಯವಾಯಿತೆಂದು ತೋರುತ್ತದೆ. "ಸರಕಾರದಿಂದ ಅರಿಷಿಣ ಕುಂಕುಮ, ಹಳದೀ ಸೀರೆ ಮುಂತಾದವುಗಳನ್ನು ಕಳುಹಿಸುತ್ತಿದ್ದುದು ಮಾತ್ರವಲ್ಲದೆ ಬೆಂಕಿಗೆ ಹೆದರಿ ಓಡಿ ಬಂದ ಹೆಣ್ಣಿಂದ ದೇಶಕ್ಕೆ ಹಾನಿಯಾಗುತ್ತದೆಯೆಂದು ಸೂಕ್ತ ಏರ್ಪಾಡೂ ಮಾಡುತ್ತಿದ್ದರು."[೬೧] ಬ್ರಾಹ್ಮಣಸ್ತ್ರೀಗೆ ಸಹಗಮನ ನಿಷಿದ್ಧವಿದ್ದರೂ ತಲಕಾಡಿನ ಬ್ರಾಹ್ಮಣತಿಯೊಬ್ಬಳು ಅಗ್ನಿಪ್ರವೇಶಕ್ಕೆ ಹಟಹಿಡಿದಾಗ ಆ ಬಗ್ಗೆ ಮೈಸೂರು ಸರಕಾರಕ್ಕೆ ಬರೆದ ಅರ್ಜಿ ಅದಕ್ಕೆ ನೀಡಿದ ಒಪ್ಪಿಗೆಗಳು M.A.R. ೧೯೩೮ರಲ್ಲಿ ಪ್ರಕಟವಾಗಿವೆ. ಅವುಗಳ ಪಾಠ ಹೀಗಿದೆ" "ಶ್ರೀಮತು, ಪೂರ್ಣೈಯ್ಯನವರು ಸೋಸಲೆ ಅಮಲದಾರ ವೆಂಕಟರಮಣ್ಣೆಯಗೆ ಆಶೀರ್ವಾದ, ಅದಾಗಿ ಕಳುಹಿಸ್ದ ಅರ್ಜಿಯಿಂದಾ ವಿವರ ಯಾವತ್ತು ಶ್ರುತವಾಯಿತ್ತು. ತಲಕಾಡು, ತಲಕಾಡಿನಲ್ಲಿ ವೆಂಕಟ್ರಾಮಶಾಸ್ತ್ರಿಗಳುಗೆ ಯಿದದಕೆ ಯಿದ ಹಾಗೆ ನಾಲ್ಕು ತಡವೆ ಪ್ರವರ್ತಿ ಆಗಿ ತೀರಿಹೋದದ್ರಿಂದ, ಅವರ ಕುಟುಂಬ ಸಹಗಮನ ಮಾಡಬೇಕೆಂಬುದಾಗಿ ಯಾರು ಹೇಳಿದಾಗ್ಯೂ ಕೇಳದೆ ಮುಕ್ಷರ ಮಾಡಿಕೊಂಡು ಅಪ್ಪಣೆ ಕೊಡ್ಸಿಬೇಕೆಂಬುದಾಗಿ ಯಿದಾರೆಂಬ

---

೫೮. ಅಖಂಡೇಶ್ವರ ವಚನ (ಷಣ್ಮುಖ ಸ್ವಾಮಿ) ವ. ೧೩೮.

೫೯. ಬಸವಣ್ಣನವರ ಟೀಕಿನ ವಚನಗಳು ವ. ೬೮೦. ಇಲ್ಲಿಯ 'ಸತಿಕಲ್ಲು' ಅಪರೂಪ ಸೂಚನೆ.
ಅತ್ತಿತ್ತ ನೋಡ್ಯಾಳ । ಹತ್ಯಾಳೆ ಸತಿಕಲ್ಲ
ಹತ್ತೀರ ಬರುತಾರೆ ಅವರಪ್ಪ । ತಾಯಮ್ಮ
ನೂರು ಕೊಟ್ಟೇನು ಇರು ಮಗಳೇ
ಎಂಬ ಜನಪದ ತ್ರಿಪದಿಯಲ್ಲಿ ಬರುವ 'ಸತಿಕಲ್ಲು' ಸೂಚನೆಯನ್ನು ಗಮನಿಸಿರಿ. (ಜಾನಪದ ಕಥನ ಗೀತಗಳು ಪು. ೧೬೦).

೬೦. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (೧೯೭೫) ಪು. ೩೯-೪೦.

೬೧. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (೧೯೭೫)ಪು. ೪೧.

ವಿವರಗಳಿಗಾಗಿ ಬರದು ಸರಿಯಷ್ಟೆ. ಆ ಬಗ್ಗೆ ಅವರು ದೊಡ್ಡ ಬ್ರಾಂಹ್ಮರು. ಅವರು ಯಿದುದಕ್ಕೆ ಯೀಕೆ ಈ ಮೇರೆಗೆ ಮಾಡಬಾರದು. ಬೇಡವೆಂಬುದಾಗಿ ಹೇಳಿದರೆ ಕೇಳದ ಮೇಲೆ ಆಕೆ ಹೇಳಿದ ಮೇರೆಗೆ ನಡೆದುಕೊಳ್ಳುವಂತೆ ಅಪ್ಪಣೆ ಕೊಟ್ಟು ಬಿಡುವದು. ರಕ್ತಾಕ್ಷಿ ಸಂವತ್ಸರದ ಪಾಲ್ಗುಣ ಬ ೬ ಲು ರುಜು ಶ್ರೀ"

"ಪೈವಸ್ತಗಿ ಪಾಲ್ಗುಣ ೯ಲು ಸಾಗಮನ ಮಾಡುವ ಹೆಂಗಸಿಗೆ ಅಪ್ಪಣೆ." ಇದು ೧೮೦೫ರ ಸನ್ನದು. ಫಾಲ್ಗುಣ ೬ ರಂದು ಬರೆದ ಅರ್ಜಿಗೆ ೩ ದಿನಗಳ ತರುವಾಯ ಅಂದರೆ ಫಾಲ್ಗುಣ ೯ರಂದು ದಿವಾನ ಪೂರ್ಣಯ್ಯನವರಿಂದ ಒಪ್ಪಿಗೆ ಸಿಕ್ಕಿದೆ.

ಹೀಗೆ ದಾಖಲೆ, ಶಾಸನ, ಕಾವ್ಯಗಳಲ್ಲದೆ ಜನಪದ ಸಾಹಿತ್ಯದಲ್ಲಿಯೂ ಇಂಥ ಪ್ರಸಂಗಗಳು ಗೀತಿಸಲ್ಪಟ್ಟಿವೆ. ಈರೋಬಿ, ವಡ್ಡಗೆರೆ ನಾಗಮ್ಮ, ನಾಗವ್ವ, ಜಗುನೆಯ ಜಕ್ಕಣ್ಣ ಮಗುನೆಯ ಬ್ಯಾಟಿಗಾರ ಮೊದಲಾದ ಜನಪದ ಕಥನಗೀತಗಳು ಈ ಮಾತಿಗೆ ನಿದರ್ಶನವೆನಿಸಿವೆ.[೬೨] ಇವಲ್ಲದೆ ಮಾಸ್ತಿಯಾದವರನ್ನು ಕುರಿತ ಅನೇಕ ರೋಮಾಂಚಕ ಹೇಳಿಕೆಗಳು ಅಲ್ಲಲ್ಲಿ ಕಿವಿಗೆ ಬೀಳುತ್ತವೆ. 'ಆಯ್ದ ಜನಪದ ಕಥೆಗಳು' ಸಂಕಲನದಲ್ಲಿಯ ಕೊಂಡದ ಚೆನ್ನಮ್ಮ, ತೋಳಗೈ ಚೆನ್ನಮ್ಮ, ಕಳಗುಚ್ಚಮ್ಮ ಕಥೆಗಳನ್ನೂ[೬೩] "ಉತ್ತರ ಕರ್ನಾಟಕದ ಜನಪದ ಕಥೆಗಳು" ಸಂಕಲನದಲ್ಲಿಯ 'ಕೈಬಳೆ' ಕಥೆಯನ್ನೂ[೬೪] ಮಾತನಾಡುವ ಕಲ್ಲು" ಪುಸ್ತಕದಲ್ಲಿಯ 'ಕಂಕಣದ ಕೈ' ಕಥೆಯನ್ನೂ[೬೫] ಇಲ್ಲಿ ನೆನೆಯಬೇಕು.

ಹೀಗೆ ಸಾಗಿಬಂದ ಪದ್ಧತಿ ರಾಜಾರಾಮ ಮೋಹನರಾಯರ ಪ್ರಯತ್ನದಿಂದಾಗಿ ಲಾರ್ಡ್ ಬೆಂಟಿಂಕನ ಕಾಲದಲ್ಲಿ (೧೮೨೯) ಕಾನೂನು ಮೂಲಕ ನಿಂತುಹೋಯಿತು.

ಈ ಕಾವ್ಯ, ಶಾಸನಾದಿಗಳನ್ನು ಗಮನಿಸಿದಾಗ ಕೆಲವು ಸಂಗತಿಗಳು ಎದ್ದು ತೋರುತ್ತವೆ. ಶಾಸನಗಳಲ್ಲಿ ಈ ಬಗೆಯ ಬಲಿದಾನಕ್ಕೆ ಸತಿ, ಮಹಾಸತಿ, ಮಾಸ್ತಿ, ಸಹಗಮನ, ಅನುಗಮನ, ಸಹಮರಣ, ಅನುಮರಣ, ತೋಳುಗೆಯ್ ಕೊಡು,[೬೬], ಪುರುಷವ್ರತ, ಸಹಾನುಭೂತಿ ಹೊಂದು, ಸಹಸಂಗತಿ ವಿಡು, ಅಗ್ನಿಪ್ರವೇಶ ಮಾಡು ಪದಗಳನ್ನು ಬಳಸಲಾಗಿದೆ. ಮಾಸ್ತಿಕಲ್ಲು ಎಂಬುದಕ್ಕೆ ಬದಲು 'ವೀರಗಲ್ಲು', 'ಮದವಳಿಗೆ ಕಲ್ಲು'[೬೭] ಎಂದೂ ಒಂದೆಡೆ ಬಳಸಲಾಗಿದೆ. "ರಾಮಂಣನು ಆಯಿಸೂರ ಹುಯಲಿ ಬಿದ್ದನು. ಆತನ ಮದವಳಿಗೆ ರಾಮಾಯಿ ವೀರಮಾಸ್ತಿಯಾದಲಿ ನಿಲಿಸಿದ ವೀರಗಲ್ಲು" ಎಂಬಲ್ಲಿ ವೀರಸ್ವರ್ಗವೇರಿದ ಗಂಡನೊಡನೆ ಸತ್ತವಳ ಮಾಸ್ತಿ ಪ್ರಸಂಗವನ್ನು 'ವೀರಮಾಸ್ತಿ' ಎಂದು ಕರೆದುದು ವಿಶೇಷ ಉಲ್ಲೇಖವೇ ಸರಿ.[೬೮]

---

೬೨. ಈರೋಬಿ (ಜಾನಪದ ಖಂಡಕಾವ್ಯಗಳು - ಜೀ. ಶಂ. ಪ). ವಡ್ಡಗೆರೆ ನಾಗಮ್ಮ (ಬಯಲು ಸೀಮೆಯ ಲಾವಣಿಗಳು -ಕಾಳೇಗೌಡ ನಾಗವಾರ). ನಾಗವ್ವ (ಜಾನಪದ ಖಂಡಕಾವ್ಯ - ಜೀ. ಶಂ. ಪ), ಜಗುನೆಯ ಜಕ್ಕಣ್ಣ - ಮಗುನೆಯ ಬೇಟೆಗಾರ (ಲಾವಣಿಗಳು - ಬೆಂಗಳೂರು ವಿ.ವಿ.)

೬೩. ಆಯ್ದ ಜನಪದ ಕಥೆಗಳು (೧೯೭೦) ಜೀ. ಶಂ.ಪ. ಪು ೧೫೮. ೧೬೧. ೧೬೩

೬೪. ಉತ್ತರಕರ್ನಾಟಕದ ಜನಪದ ಕಥೆಗಳು (೧೯೭೨) ಸಿಂಪಿ ಲಿಂಗಣ್ಣ, ಪು. ೧೪೦

೬೫. ಮಾತನಾಡುವ ಕಲ್ಲು (೧೯೭೭) ಬೆಟಗೇರಿ ಕೃಷ್ಣಶರ್ಮ. ಪು. ೪೮

೬೬. ಅನಂತಪುರಾಣ (೧೧-೭೪ಗ)ದಲ್ಲಿ ಬರುವ "ಸಹಗಮನ ಸಮುತ್ಸುಕತೆಯಂ ಕೈಬಿಡಿಸೆ ಕೈಗುಡುವ ಕೈದುವರ್ಪ ಕೈವಿಡಿದ ಪೆಂಡಿರ ತಂಡದ" ಎಂಬ ವಾಕ್ಯವು 'ತೋಳುಗೆಯ್' ಕೊಡುವುದನ್ನು ಸೂಚಿಸುತ್ತಿರಬಹುದು.

೬೭. MAR. ೧೯೨೮, ನಂ. ೮೮. EC. VII ಶಿವಮೊಗ್ಗ ೬೧. ಹಾರೋಬೆನವಳ್ಳಿ (ಕ್ರಿ.ಶ. ೧೨೮೬).

೬೮. EC. VIII ಸಾಗರ ೪೭. ಹುಣಸೂರು (ಹೋರಾಡಿ ಮಡಿದವನ ಹೆಂಡತಿಗಾಗಿ ನಿಲ್ಲಿಸಿದ ಕಲ್ಲುಗಳನ್ನೇ 'ವೀರಮಾಸ್ತಿ' ಎಂದು ಕರೆಯುತ್ತಿದ್ದರೆಂದೂ ಮಿಕ್ಕವರ ಸ್ಮಾರಕಗಳನ್ನು ಕೇವಲ 'ಮಾಸ್ತಿ' ಎಂದು ಕರೆಯುತ್ತಿದ್ದರೆಂದೂ ಕಡ್ಡಾಯವಾಗಿ ಹೇಳುವಂತಿಲ್ಲ).

ಗಂಡನ ಆಯುಷ್ಯ ತೀರಿದ ಸಹಜಮರಣ, ಕದನದಲ್ಲಿ ಸಂಭವಿಸಿದ ವೀರಮರಣ ಸಂದರ್ಭಗಳಲ್ಲಿ ಸತಿ ಹೋಗುವುದು ಸಹಜ. ಆದರೆ ಹಡವಳ್ತಿ ಕನಕವ್ವೆಗೆ ವೇಳೆವಾಳಿಯಾಗಿ ಗಂಡ ಹಟ್ಟಿಗೊರವನಾಯಕ ಸಾಯಲು ಹೆಂಡತಿ ಬೊಮ್ಮಕ್ಕ ಚಿತೆಯನ್ನು ಪ್ರವೇಶಿಸುತ್ತಾಳೆ.[೧೯] ಗಂಡ ದೇವನಾಯಕನು 'ಸರ್ಪದಷ್ಟ'ವಾಗಿ ಸಾಯಲು ಸತಿ ಮುದ್ದನಕೇತಿ ಮಹಾಸತಿಯಾದ ವಿಷಯ ೧೩೮೮ರ ದೂಗೂರ ಶಾಸನದಲ್ಲಿದೆ.[೨೦] ಜೈನ ಪರಂಪರೆಯಲ್ಲಿ ಪತಿಯ ಮರಣಾನಂತರ ಸತಿಯು ಚಿತಾಪ್ರವೇಶ ಮಾಡುವುದು ತತ್ತ್ವವಿರುದ್ಧ. ಹೀಗಿದ್ದರೂ ಬಾಳೂರಿನ ಮುದ್ದುಗೌಡ ಸಲ್ಲೇಖನ ವಿಧಿಯಿಂದ ಸಮಾಧಿ ಮರಣ ಹೊಂದಲು, ಆತನ ಸತಿ ಸಹಗಮನ ಹೊಂದಿದಳೆಂದು (ಚಿತ್ರ೫) ೧೧೯೭ರ ಬಾಳೂರು ಶಾಸನ[೨೧], ಗಂಡ ಬೀಚಿಗೌಂಡನು "ಪಂಚನಮಸ್ಕಾರದಿಂದ ಮುಡಿಪಿ ಸ್ವರ್ಗಸ್ಥ"ನಾಗಲು ಅಂದರೆ ಸಲ್ಲೇಖನವ್ರತದಿಂದ ಸಾಯಲು ಕಿರಿಯ ಹೆಂಡತಿ ಮುದ್ದಿಗೌಂಡಿ ಸಹಗಮನ ಮಾಡಿದಳೆಂದು ೧೯೭೬ರ ಹಿರೇಅವಲಿ ಶಾಸನ ಹೇಳುತ್ತವೆ.[೨೨] ಹೀಗೆ ಗಂಡಂದಿರು ಯಾವುದೇ ಬಗೆಯಿಂದ ತೀರಿಕೊಂಡರೂ ಹೆಂಡಂದಿರು ಸಹಗಮನ ಕೈಕೊಂಡುದು ಸ್ಪಷ್ಟವಾಗುತ್ತದೆ.

ಸಾಮಾನ್ಯವಾಗಿ ಊರೊಡೆಯನ ಮನ್ನಣೆ ಪಡೆದು, ಹಳದಿಸೀರೆಯನ್ನುಟ್ಟು, ಒಂದು ಕೈಯಲ್ಲಿ ಲಿಂಬೆಹಣ್ಣು ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದು, ದಂಡೆ-ಬಾಸಿಗ, ಕಾಲಕುಪ್ಪಸ ಮೊಲೆಗಟ್ಟುಗಳಿಂದ ಸಿಂಗರಿಸಿಕೊಂಡು, ಬೀದಿಯಲ್ಲಿ ಕಾಲುನಡಿಗೆಯಿಂದ ಇಲ್ಲವೆ ಕುದುರೆ-ಪಲ್ಲಕ್ಕಿಗಳನ್ನೇರಿ ಮಾಸ್ತಿಯಾಗುವವಳು ಬರುತ್ತಲಿದ್ದಳು. ಆಗ ವೀರರು ಅವಳಿಂದ ಲಿಂಬೆ, ಮುಡಿಯ ಹೂ ಪಡೆಯುತ್ತಿದ್ದರು. ಆಮೇಲೆ ಗೌರಿವ್ರತ ಪೂರೈಸಿ, ಎಣ್ಣೆಯಲ್ಲಿ ಮುಖನೋಡಿ, ಕೊಂಡದ ಹತ್ತಿರ ಹಿಡಿದ ತೆರೆಗೆ ಎದುರಾಗಿ ಸತಿಕಲ್ಲ ಮೇಲೆ ನಿಲ್ಲುತ್ತಿದ್ದಳು. ಕಟ್ಟಿಗೆ ಕರ್ಪುರಗಳಿಂದ ಬೆಂಕಿ ಉಜ್ವಲಗೊಳ್ಳುತ್ತಿದ್ದಂತೆ ಆಕೆ ಚಿತೆಯನ್ನು ಪ್ರವೇಶಿಸುವುದೇ ತಡ, ಆಗ ಜನ ಗೋಳಿಡುತ್ತಿದ್ದರೆಂದೂ ಜಯಘೋಷ ಮಾಡುತ್ತಿದ್ದರೆಂದೂ ಕಾವ್ಯಗಳು ತಿಳಿಸುತ್ತವೆ. ಸಹಗಮನ ಬೇಡವೆಂಬ ಒತ್ತಾಯಗಳೇ ಅಲ್ಲಲ್ಲಿ ಉಲ್ಲೇಖಿತವಾಗಿವೆ. ಉದಾ: ದೇಕಬ್ಬೆಯ ಬೆಳತೂರ ಶಾಸನ. ಗಂಡನ ಶವದೊಂದಿಗೆ ಹೆಂಡತಿಯನ್ನು ಮಲಗಿಸುತ್ತಿದ್ದರೆಂಬ ಒಂದೆರಡು ಸೂಚನೆಗಳು ನಿಕೋಲೋಕೊಂಟಿ ಮೊದಲಾದವರ ವರದಿಯಲ್ಲಿ ಸಿಗುತ್ತವೆ.[೨೩] ಜೋಹರವಾಗಿದ್ದರೆ ಯುದ್ಧಕ್ಕೆ ಮೊದಲು ಹೆಂಡಂದಿರನ್ನು ಕಡಿದು ಚಿತೆಗೆ ಎಸೆಯುತ್ತಿದ್ದರೆಂದು ತೋರುತ್ತದೆ.

ಹೀಗೆ 'ಚಿತಾಪ್ರವೇಶವಿಧಾನ' ಸಾಮಾನ್ಯವಾಗಿ ರೂಢಿಯಲ್ಲಿದ್ದರೂ ಬೇರೆ ವಿಧಾನಗಳಿಂದಲೂ ಸತಿಯಾದ ಉಲ್ಲೇಖಗಳು ಸಿಗುತ್ತವೆ. ನವಲಾಪಿರಾಜನು ಸಾಯಲು 'ಆತನ ಎಳೆತಿ ತಪಚೆಯ ಕಮ್ಮಾರಿವುಯ್ದು' ಅಂದರೆ ಬಹುಶಃ ಬೆಟ್ಟ (=ಕಮರಿ) ದಿಂದ ಬಿದ್ದು ಸತ್ತಿರಬಹುದು.[೨೪] ದೇವಿಯಕ್ಕ 'ಪುರುಷಬ್ರತ'ದಿಂದ ಸತ್ತಳೆಂಬುದಕ್ಕೆ ವಿಶಿಷ್ಟ ಅರ್ಥವಿರದೆ ಪುರುಷನಿಷ್ಠೆಯಿಂದ (ಚಿತೆಯ ಮೂಲಕ) ಸತ್ತಳೆಂದೇ ಅರ್ಥವಿರಬೇಕು.[೨೫] ಜೈನವಿರುದ್ಧವಾದ ಚಿತಾಪ್ರವೇಶವನ್ನು ಗುಂಡಮಬ್ಬೆ ಕೈಕೊಂಡಿದ್ದರೂ ಜೈನಸ್ತ್ರೀಯರು ಕೆಲವೊಮ್ಮೆ ಪತಿಯ ಮರಣಾನಂತರ 'ಸನ್ಯಸನವಿಧಿ'ಯಿಂದ ತೀರಿಕೊಂಡ ಉಲ್ಲೇಖಗಳಿವೆ. ಉದಾ: "ಬೊಮ್ಮಗಾವುಂಡ ಸ್ವರ್ಗಸ್ಥನಾದಲ್ಲಿ

---

೧೯. EC. VI ಚಿಕ್ಕಮಗಳೂರು ೬೬. ಕೋಟೆಪೂರು (ಕ್ರಿ.ಶ. ೧೧೯೦).

೨೦. EC. VIII ಸೊರಬ ೪೮೩. ದೂಗೂರು (ಕ್ರಿ.ಶ. ೧೩೩೮).

೨೧. ಈ ಶಾಸನ ಈಗ ಕೆ.ಆರ್.ಆಯ್ (ಧಾರವಾಡ)ದಲ್ಲಿದೆ.

೨೨. EC. VIII ಸೊರಬ ೧೧೬. ಹಿರೇಆವಲಿ (ಕ್ರಿ. ಶ. ೧೩೭೬)

೨೩. ಪ್ರವಾಸಿ ಕಂಡ ಇಂಡಿಯಾ ಸಂಪುಟ ೨. ಪು ೧೨೫

೨೪. EC. IV ಹೆಗ್ಗಡದೇವನಕೋಟೆ ೧೦೦. ಹೆಬ್ಬಲಗುಪ್ಪೆ (ಕ್ರಿ.ಶ. ೧೦೮೮)

೨೫. EC. VII ಶಿಕಾರಿಪುರ ೩೨. ಹುತ್ತಗ್ರಾಮ (ಕ್ರಿ.ಶ. ೧೧೩೪).

ಆತನ ಮದವಳಿಗೆ ಬೊಮ್ಮಗವುಡಿ ಸಮಧಿ ಕುಳಿತು ಸ್ವರ್ಗಕ್ಕೆ ಸಂದಳು" ಎಂಬ ವಾಕ್ಯಕ್ಕೆ "ಜೀವವಿರುವಾಗಲೇ ಮಣ್ಣನ್ನು ಮುಚ್ಚಿಸಿಕೊಂಡಳು'[೨೬] ಎಂದು ಅರ್ಥಹಚ್ಚದೆ, ಜೈನ ಸಮಾಧಿಮರಣದಿಂದ ತೀರಿಕೊಂಡಳು ಎಂದು ಅರ್ಥ ಹೇಳುವುದು ಹೆಚ್ಚು ಯೋಗ್ಯ. ಪತಿಯ ಮರಣಾನಂತರದ ಚಿತಾಪ್ರವೇಶ ವೀರಶೈವತತ್ವಕ್ಕೆ ವಿರುದ್ಧವಾದುದು. ಹೀಗಾಗಿ ತೋಂಟದರಾಯನ ಮರಣ ಸಂದರ್ಭದಲ್ಲಿ ರಾಣಿ ಚೆನ್ನಬಸವಮ್ಮ 'ಮಾಸತಿಯಾಗಿ ಪ್ರವರ್ತಿಸಿದಳು' ಎಂದು ಕವಿ ತೇಲಿಸಿ ಹೇಳುತ್ತಾನೆ. ಆದರೆ ವೀರಶೈವನಾದ ಗಂಡ ವೀರಣ್ಣನ ಶವದೊಂದಿಗೆ ಹೆಂಡತಿಯನ್ನು ಗೋರಿಯಲ್ಲಿ ಕುಳ್ಳಿರಿಸಿ ಮಣ್ಣು ಮುಚ್ಚಿದುದನ್ನು ಸಿರುಮನ ಸಾಂಗತ್ಯ ತಿಳಿಸುತ್ತದೆ. ಕೆಲವು ವೀರಶೈವ ಸ್ತ್ರೀಯರೂ ಚಿತೆಹೋಗಿರುವ ಸಂಭವವೂ ಉಂಟು.[೨೭]

ಕದನ ಪ್ರಸಂಗ, ವೇಳೆವಾಳಿ ಪ್ರಸಂಗಗಳಲ್ಲಿ ಬಹುಸಂಖ್ಯೆ ಪುರುಷರು ಸಾಯುತ್ತಿದ್ದು, ಆಗ ಸತಿಯರ ಸಹಗಮನವೂ ಬಹುಸಂಖ್ಯೆಯಲ್ಲಿ ಜರುಗುತ್ತಿದ್ದಿತು. ಹೀಗಾಗಿ ವೀರಗಲ್ಲು, ಬಲಿದಾನ ಕಲ್ಲುಗಳ ಕಾಲದಲ್ಲಿಯೇ ಮಾಸ್ತಿಕಲ್ಲುಗಳೂ ಅಧಿಕವಾಗಿ ಕಂಡುಬರುತ್ತವೆ.

ಪತಿಗಾಗಿ ಸತಿ ಮಡಿಯುವುದು ಸಾಮಾನ್ಯ. ಆದರೆ 'ಹೆಗೋಡೆ ಬಯಿರ ಗವುಡರು ಅವನ ಸತಿ ಸಂಗಡ ವಯಿಕುಂಠ ಪ್ರಾಪಿತರಾದರು"[೨೮] ಎಂಬುದು ಮಾತ್ರ ಸತಿಯನ್ನು ಪತಿ ಹಿಂಬಾಲಿಸಿದ ಏಕೈಕ ಉಲ್ಲೇಖವಾಗಿದ್ದು, ಅನಂತಪುರಾಣದ ಚಂಡಶಾಸನದ, 'ಕೆರೆಗಾ ಹಾರ' ಹಾಡಿನಲ್ಲಿ ಭಾಗೀರಥಿಯನ್ನು ಹಿಂಬಾಲಿಸಿದ ಮಲ್ಲನಗೌಡನ ಮಗ ಮಹದೇವನನ್ನು ನೆನಪಿಸುತ್ತದೆ. ಇಂಥ ಪುರುಷಮರಣಗಳನ್ನು 'ಮಾಸ್ತಿ' ಎನ್ನುವುದಕ್ಕಿಂತ 'ವೇಳೆವಾಳಿ'ಯೆನ್ನುವುದು ಲೇಸು.

ಹೀಗೆ ಮಡಿದವರ ಸ್ಮಾರಕಗಳನ್ನು ಸಂಬಂಧಿಕರು ನಿರ್ಮಿಸುತ್ತಿದ್ದರು. ದೇಕಬ್ಬೆಯ ಮಾಸ್ತಿಸ್ಮಾರಕವನ್ನು ಅವಳ ತಂದೆ ನುಗುನಾಡ ಅಧಿಪತಿ ರವಿಗ, ಜಕ್ಕಬ್ಬೆಯ ಮಾಸ್ತಿ ಸ್ಮಾರಕವನ್ನು ತಂಗಿ ಜಾಬೆ, ಬಮ್ಮಕ್ಕನ ಮಾಸ್ತಿ ಸ್ಮಾರಕವನ್ನು ಮಗ ಮಲ್ಲೆಯ, ಕಾಮಾಯಿಯ ಮಾಸ್ತಿ ಸ್ಮಾರಕವನ್ನು ಮಾವ ಕೀತಗೊಂಡ ನಿರ್ಮಿಸಿದುದನ್ನು ಗಮನಿಸಬೇಕು.[೨೯]

ಮರಣಾನಂತರ ಮಾಸ್ತಿಕಲ್ಲುಗಳನ್ನು ಚಿತೆಯೇರಿದ ಸ್ಥಳದಲ್ಲಿ, ಇಲ್ಲವೆ ಬೇರೆಡೆಯಲ್ಲಿ ನಿಲ್ಲಿಸುತ್ತಿರಬಹುದು. ಬೊಮ್ಮನಾಯಕನ ವೀರಮರಣಾನಂತರ ಹೆಂಡತಿ '...ಬವೆನಾಯಕಿತ್ತಿ' ಸತಿ ಹೋಗುತ್ತಾಳೆ. ಇವರಿಗೆ ಸಂಬಂಧಿಸಿದ ಎರಡೂ ಸ್ಮಾರಕ ಶಿಲೆಗಳಲ್ಲಿ 'ಶ್ರೀ ಹೊಂನೇಶ್ವರದೇವರ ಸನ್ನಿಧಿಯಲು ಬೀರಗಲ್ಲ ನಿಲ್ಸಿ"[೩೦] ಎಂಬ ವಾಕ್ಯ ಬರುವುದನ್ನು ಇಲ್ಲಿ ಗಮನಿಸಬೇಕು.

ಈ ಸ್ಮಾರಕಗಳು ೧. ಶಿಲೆ, ೨. ಶಿಲ್ಪ, ೩. ಬರಹ, ೪. ಶಿಲ್ಪ-ಬರಹ, ೫. ಗುಡಿ, ೬. ಊರು, ೭. ಅವಶೇಷ- ಹೀಗೆ ಏಳು ವಿಧಗಳಲ್ಲಿ ಸಿಗುತ್ತವೆ.

---

೨೬. EC. VIII ಸೊರಬ ೧೬೫. ಹರೂರು (ಕ್ರಿ.ಶ. ೧೫೯೦) ಮತ್ತು "ಕರ್ನಾಟಕದಲ್ಲಿ ಮಾಸ್ತಿ" (ಸಾಧನೆ ೪-೨ ಪು ೧೨೧).

೨೭. ಬಸವಣ್ಣನವರ ಮರಣ ಕ್ಷಣದಲ್ಲಿ ನೀಲಮ್ಮನವರು ಲಿಂಗೈಕ್ಯರಾದುದು ಸ್ಥೂಲವಾಗಿ ಸಹಗಮನ (ಗಂಡನ 'ಸಹ' ಮರಣ ಹೊಂದಿದುದು)ವೆನಿಸಬಹುದು.

೨೮. EC. VIII ಸೊರಬ ೫೬೫. ಹೆಗ್ಗೋಡು (ಕ್ರಿ.ಶ. ೧೪೨೪).

೨೯. EC. IV ಹೆಗ್ಗಡದೇವನಕೋಟೆ ೧೮. ಬೆಳತೂರ (ಕ್ರಿ.ಶ. ೧೦೫೭).
EC. VIII ಸೊರಬ ೪೫೭. ಬೆನ್ನೂರು (ಕ್ರಿ.ಶ. ೯೭೨).

೩೦. EC. VII ಶಿವಮೊಗ್ಗ ೬೦. ೬೧. ಹಾರೋಬೆನವಳ್ಳಿ (ಕ್ರಿ.ಶ. ೧೨೮೬).

೩೧. ಹಾನಗಲ್ಲ ತಾಲೂಕಿನ ಹೇರೂರು ಗ್ರಾಮದ ಮಾಸ್ತಿಕಲ್ಲು.

೧. ಶಿಲೆ : ಕೆಲವು ಊರುಗಳಲ್ಲಿ ಮಾಸ್ತಿಯಾದವಳ ನೆನಪಿಗೆ ಕೇವಲ ಗುಂಡುಕಲ್ಲನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ಇವುಗಳನ್ನು ಮಾಸ್ತಿ ಶಿಲೆಗಳೆನ್ನಬಹುದು. ಇಂಥ ಸ್ಮಾರಕಗಳು ಬೆಳಗಾವಿ ಜಿಲ್ಲೆಯ ಚಿಕ್ಕುಂಬಿ ಮೊದಲಾದ ಗ್ರಾಮಗಳಲ್ಲಿ ಸಿಗುತ್ತವೆ.

೨. ಶಿಲ್ಪ : ಮಾಸ್ತಿಶಿಲ್ಪದಲ್ಲಿ ಎತ್ತಿದ ಬಲಗೈ ಇರಲೇಬೇಕು. ಮುಂಗೈಯಲ್ಲಿ ಬಳೆ, ಅಂಗೈಯಲ್ಲಿ ಸಾಮಾನ್ಯವಾಗಿ ಲಿಂಬೆಹಣ್ಣು, ವಿರಳವಾಗಿ ಪದ್ಮ[೮೧] ಇರುತ್ತವೆ. ಸತಿಹೋಗುವ ಪೂರ್ವದಲ್ಲಿ ಅವಳ ಬಲಗೈಯನ್ನು ಕುಂಕುಮ ದ್ರವದಲ್ಲಿ ಅದ್ದಿಸಿ ಕಲ್ಲಮೇಲೆ ಮುದ್ರಿಸಿಕೊಂಡು ಆಮೇಲೆ ಶಿಲ್ಪ ಬಿಡಿಸುತ್ತಿದ್ದರೆಂದು ಕೆಲವರು ಹೇಳುವುದು ಕೇವಲ ಊಹೆಯೇ ಸರಿ.[೮೨] ಎತ್ತಿದ ಕೈಗೆ, ಹಿಡಿದ ಲಿಂಬಿಹಣ್ಣಿಗೆ ವಿದ್ವಾಂಸರು ಬೇರೆ ಬೇರೆ ಅರ್ಥ ಹೇಳುವುದುಂಟು. ರಾಮನಾಥ ಚರಿತೆಯಲ್ಲಿ ಬರುವ "ಮಾಸತಿಯರು ಪುರಜನರ ಪರಸುತ"ಎಂಬ ಮಾತನ್ನು ಆಧಾರವಾಗಿಟ್ಟುಕೊಂಡು ಇದು ಹರಸುವ ಹಸ್ತವನ್ನು ಸಂಕೇತಿಸುತ್ತದೆಂದು ಹೇಳಬಹುದು. ಅವಳ ಅಂಗೈಯಲ್ಲಿದ್ದುದು ಲಿಂಬೆಹಣ್ಣೆಂದು ಕನ್ನಡ ಕಾವ್ಯಗಳು, ಇಕ್ಕೇರಿಯಲ್ಲಿ ಸತಿಹೋದ ಒಬ್ಬಳು ಒಂದು ಕೈಯಲ್ಲಿ ಲಿಂಬೆ, ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದಿದ್ದಳೆಂದು ಪಿಯೆಟ್ರಡಲ್ಲೆವಲ್ಲೆ ಹೇಳುವುದರಿಂದ ಕೆಲವರು ಭಾವಿಸಿರುವಂತೆ ಅವಳ ಕೈಯ್ಯಲ್ಲಿದ್ದುದು ಮಾದಲಹಣ್ಣಲ್ಲ, ಲಿಂಬೆಹಣ್ಣು. ಸ್ವರೂಪದೃಷ್ಟಿಯಿಂದ ಮಾಸ್ತಿಶಿಲ್ಪಗಳು ಅ. ಎತ್ತಿದ ಬಲದೋಳು ಶಿಲ್ಪ, ಆ. ಎತ್ತಿದ ಬಲದೋಳಿನ ಸ್ತ್ರೀ ಶಿಲ್ಪ, ಇ. ಪತಿಯೊಂದಿಗೆ ನಿಂತು ಎತ್ತಿದ ಬಲದೋಳಿನ ಸ್ತ್ರೀ ಶಿಲ್ಪ, ಈ. ಇತರ ಸ್ವರೂಪದ ಶಿಲ್ಪ- ಎಂದು ೪ ಬಗೆಯಲ್ಲಿ ತೋರಿಬರುತ್ತವೆ.

ಅ. ಸಾಮಾನ್ಯವಾಗಿ ಎಲ್ಲಕಡೆಗೂ ತೋರಿಬರುವವು, ಎತ್ತಿದ ಬಲದೋಳಿನ ಶಿಲ್ಪಗಳು. ಇವು ಕೆಲವೊಮ್ಮೆ ಕಂಬದಿಂದ ಹೊರಟಿರುವಂತೆ ಚಿತ್ರಿತವಾಗಿರುತ್ತವೆ. ಹಳ್ಳಿಗಳಲ್ಲಿ ಭ್ರಾಂತಿಯಿಂದ ಇವುಗಳನ್ನು ವ್ಯಾಸನ ತೋಳುಗಳೆಂದು ಕರೆಯುತ್ತಾರೆ.

ಆ. ಎತ್ತಿದ ಬಲದೋಳುಳ್ಳ ಸ್ತ್ರೀಶಿಲ್ಪಗಳು ಹೆಗ್ಗೆರೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಹಾವೇರಿ ಪರಿಸರದ ಮುತ್ತೂರು, ಅಬ್ಬಲೂರು, ಹೆರೂರು (ಚಿತ್ರ ೫೮) ಮುಂತಾದ ಕಡೆಗಳಲ್ಲಿ ಸಿಗುತ್ತವೆ. ಕೆಲವೊಮ್ಮೆ ಈ ವಿಗ್ರಹದ ಮಗ್ಗುಲಿಗೆ ಇಲ್ಲವೆ ಮೇಲಿನ ಮೂಲೆಯಲ್ಲಿ ಅಪ್ರಧಾನವಾಗಿ ಪತಿವಿಗ್ರಹವಿರುವುದೂ ಉಂಟು. ಇಳಿಬಿಟ್ಟ ಎಡಗೈ ತೆರವಾಗಿರಬಹುದು. ಇಲ್ಲವೆ ಕನ್ನಡಿಯನ್ನು ಹಿಡಿದಿರಬಹುದು. ಕ್ವಚಿತ್ತಾಗಿ ತಲೆಯ ಹಿಂದೆ ಸೂರ್ಯಕಿರಣರೂಪದ ರೇಖೆಗಳಿರುತ್ತವೆ. ಇವು ಜ್ವಾಲೆಗಳೆಂದು ಹೇಳುವರಾದರೂ ಬಹುಶಃ ಕೇದಗೆಯ ಗರಿಗಳಿರಬಹುದು. (ಕುಮಾರರಾಮನ ಸಾಂಗತ್ಯ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯಗಳು ಗರಿಯನ್ನು ತಪ್ಪದೇ ಉಲ್ಲೇಖಿಸುತ್ತವೆ). ಸ್ತ್ರೀವಿಗ್ರಹಗಳಿಗೆ ಪ್ರಸಿದ್ಧವಾಗಿರುವ ಕನ್ನಡ ನಾಡಿನಲ್ಲಿ ಮಾಸ್ತಿ ಸ್ತ್ರೀವಿಗ್ರಹಗಳು ಅಷ್ಟು ಸುಂದರವಾಗಿಲ್ಲದಿರುವುದು ಆಶ್ಚರ್ಯವೇ ಸರಿ. ಹೀಗಿದ್ದರೂ ಚನ್ನಗಿರಿ ತಾಲೂಕಿನ ಬೊಮ್ಮೆಯನಹಳ್ಳಿಯ ಮತ್ತು ಕಿತ್ತೂರ ಮ್ಯೂಸಿಯಂದಲ್ಲಿರುವ ಮಾಸ್ತಿವಿಗ್ರಹಗಳು ತುಂಬ ಮೋಹಕವಾಗಿವೆ.[೮೩]

ಇ. ಪತಿಯೊಂದಿಗಿನ ಸ್ತ್ರೀವಿಗ್ರಹಗಳೂ ಅಲ್ಲಲ್ಲಿ ಸಿಗುತ್ತವೆ. ಇಲ್ಲಿ ಪತಿಯ ಎಡಗಡೆ ನಿಂತು ಸತಿ ಬಲಗೈ ಎತ್ತಿರುತ್ತಾಳೆ. ಪತಿಯೊಂದಿಗೆ ಆತನ ಎಲ್ಲ ಸತಿಯರ ವಿಗ್ರಹಗಳನ್ನು ಕೆತ್ತಲಾಗಿರುವ ಮಾಸ್ತಿಕಲ್ಲು ಮನಗುಂಡಿಯಲ್ಲಿದೆ.[೮೪] ದಂಪತಿಗಳು ಪರಸ್ಪರ ಹೆಗಲಮೇಲೆ ಕೈಹಾಕಿದ್ದರೆ ಅವಳ ಬಲಗೈ ಗಂಡನ ಹೆಗಲ

---

೮೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಪುಟ ೩೧೮). ಬಲಗೈ ಮುದ್ರೆ ಕಲ್ಲ ಮೇಲೆ ತಿರುವು ಮುರುವು ಆಗುತ್ತದೆ. ಕಾರಣ ಹೆಣ್ಣಿಗೆ ಎಡಗೈ ಶುಭವಾದುದರಿಂದ ಅರಿಷಿಣ ದ್ರವದಲ್ಲಿ ಅದ್ದಿದ ಎಡಗೈಯನ್ನು ಕಲ್ಲಮೇಲೆ ಮೂಡಿಸುತ್ತಿಬಹುದೇ?

೮೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ). ಮಾಸ್ತಿಕಲ್ಲು (ಪ್ರೊ. ಚೆನ್ನಕ್ಕ ಎಲಿಗಾರ) -ಈ ಎರಡೂ ಪುಸ್ತಕಗಳಲ್ಲಿಯ ವಿಗ್ರಹ ಚಿತ್ರಗಳನ್ನು ನೋಡಿರಿ.

೮೪. ಧಾರವಾಡ ತಾಲೂಕಿನ ಶಾಸನಗಳು (೧೯೭೬) ನಂ. ೫೫ ಮನಗುಂಡಿ (ಕ್ರಿ.ಶ. ೧೩೮೪)

ಮೇಲಿರುವ ಕಾರಣ ಎತ್ತಿದ ಬಲಗೈಯೊಂದನ್ನು ಪ್ರತ್ಯೇಕ ಬಿಡಿಸಿರುತ್ತಾರೆ. ಪತಿಯ ಚಿತ್ರ ಆಯುಧವನ್ನು ಹಿಡಿದಿದ್ದರೆ ಅದು ಅವನ ವೀರಮರಣವನ್ನು ಸಂಕೇತಿಸುತ್ತದೆ (ಚಿತ್ರ೬).

ಈ. ಇತರ ಸ್ವರೂಪದ ಚಿತ್ರಗಳಲ್ಲಿ ಒಂದು ಕಂಬದಿಂದ ಎರಡು ಕೈ ಹೊರಟ 'ಇಕ್ಕೈಮಾಸ್ತಿ', ಸವತಿಯರಿಬ್ಬರು ಸತಿಹೋದುದನ್ನು ಸೂಚಿಸುತ್ತಿರಬಹುದು (ಚಿತ್ರ ೭). ಕೆಲವು ಮಾಸ್ತಿ ಸ್ತ್ರೀವಿಗ್ರಹಗಳು ಎರಡೂ ಕೈ ಎತ್ತಿದುದುಂಟು[೮೫] (ಚಿತ್ರ ೮). ಕಲ್ಯಾಣದ ನೆರೆಯ ಸಸ್ತಾಪುರ ಗ್ರಾಮದ ಮಾಸ್ತಿ ಶಿಲೆಯಲ್ಲಿ ಕಂಬದಿಂದ ಒಂದು ಕೈ ಹೊರಟಿದ್ದು ಅದರ ಮೇಲ್ಭಾಗದಲ್ಲಿ ಸ್ವರ್ಗದಲ್ಲಿ ಕುಳಿತ ದಂಪತಿಗಳ ಚಿತ್ರ, ಕೆಳಭಾಗದಲ್ಲಿ ಚಿತೆಯ ಕುಂಡದಲ್ಲಿ ಮಲಗಿರುವ ದಂಪತಿಗಳ ಚಿತ್ರವಿದೆ (ಚಿತ್ರ ೯). ಇದನ್ನು ಹೋಲುವ ಇನ್ನೊಂದು ವಿಗ್ರಹ ಗುಲ್ಬರ್ಗ ಮ್ಯೂಸಿಯಂದಲ್ಲಿದೆ. ನೆರೆಯ ಸೊಲ್ಲಾಪುರ ಜಿಲ್ಲೆಯ ಮಾಳಸಿರಸ ತಾಲೂಕಿನ ಬಾವಡೇ ಗ್ರಾಮದ ಮಾಸ್ತಿಶಿಲ್ಪ ನಾಲ್ಕು ಸ್ತರಗಳನ್ನೊಳಗೊಂಡಿದ್ದು, ಕೆಳಗಿನ ಸ್ತರದಲ್ಲಿ ಚಿತಾವೇದಿಕೆಯೇರುತ್ತಿರುವ ಹೆಂಡತಿಯ ಚಿತ್ರವನ್ನು, ಮೇಲಿನ ಸ್ತರದಲ್ಲಿ ಗಂಡನ ಕೋಟೆಕಾಳಗವನ್ನು ಕಾಣಬಹುದು (ಚಿತ್ರ ೧೦). ಅರ್ದಿನಿಗದ್ದೆಯ ಒಂದು ಮಾಸ್ತಿಕಲ್ಲಿನಲ್ಲಿ ಐದು ಸ್ತರಗಳಿದ್ದು ಕೆಳಗಿನ ಮೂರು ಸ್ತರಗಳಲ್ಲಿ ಪುರುಷರ ಹೋರಾಟ, ನಾಲ್ಕನೆಯ ಸ್ತರದಲ್ಲಿ ದಂಪತಿಗಳನ್ನು ಪಲ್ಲಕ್ಕಿಯಲ್ಲಿ ಒಯ್ಯುವುದು, ಐದನೆಯ ಸ್ತರದಲ್ಲಿ ಎತ್ತಿದ ತೋಳು ಮತ್ತು ಅದರ ಮೇಲ್ಭಾಗದಲ್ಲಿ ಕೈಮುಗಿದು ಕುಳಿತ ದಂಪತಿಗಳ ಚಿತ್ರವಿದೆ. ಇದಕ್ಕೂ ಮೇಲಿನ ಸ್ತರದಲ್ಲಿ ಸೊಂಡಿಲು ಎತ್ತಿದ ಎರಡು ಆನೆಗಳ ಮಧ್ಯೆ ಈಶ್ವರಲಿಂಗದ ಚಿತ್ರವಿದೆ.[೮೬] "ಕೆಲವೊಮ್ಮೆ ತುರುಬನ್ನು ಗಂಟು ಹಾಕಿ ಮುಗುಳ್ನಗೆ ನಗುತ್ತ ಪದ್ಮಾಸನ ಹಾಕಿಕೊಂಡು ಕುಳಿತಿರುವ ಹೆಂಗಸನ್ನು ಕೆತ್ತಿರುತ್ತಾರೆ."[೮೭]

೩. **ಬರಹ :** ಶಿಲ್ಪವಿಲ್ಲದೆ ಕೇವಲ ಬರಹವಿರುವ ಮಾಸ್ತಿಶಿಲೆಗಳು ವಿರಳ. ಇಂತಹ ಸುಪ್ರಸಿದ್ಧ ಬೆಳತೂರು ಶಾಸನ ಇಂತಹ ವಿರಳ ಪಂಕ್ತಿಗೆ ಸೇರುವುವೆಂದು ಹೇಳುತ್ತಿದ್ದರೂ ನೆಲದ ಮೇಲೆ ಮಲಗಿರುವ ಈ ಸ್ಮಾರಕದ ಹಿಂಭಾಗದಲ್ಲಿ ಶಿಲ್ಪ ಬಿಡಿಸಲಾಗಿದೆ.

೪. **ಶಿಲ್ಪ - ಬರಹ :** ಮಾಸ್ತಿ ವಿಗ್ರಹದ ಕೆಳಗೆ, ಮೇಲೆ, ಸುತ್ತಲೂ ಇಲ್ಲವೆ ಸ್ತರಗಳಿದ್ದ ಪಕ್ಷದಲ್ಲಿ ಅವುಗಳ ಮಧ್ಯದ ಪಟ್ಟಿಕೆಗಳಲ್ಲಿ ಬರಹ ಗೋಚರಿಸುತ್ತದೆ.

೫. **ಗುಡಿ :** ಮಾಸ್ತಿಶಿಲೆ ಇಲ್ಲವೆ ಮಾಸ್ತಿಶಿಲ್ಪದ ಮೇಲೆ ಕಟ್ಟಿದ ಗುಡಿಗಳು ಚೆನ್ನಗಿರಿ ತಾಲೂಕಿನ ಕೊಂಡದಹಳ್ಳಿ, ಚಿಕ್ಕುಡೆವು, ಕಾರವಾರ ಜಿಲ್ಲೆಯ ಮಾಸ್ತಿಕಟ್ಟಾ, ಬಳ್ಳಾರಿ ಜಿಲ್ಲೆಯ ಕಬ್ಬರಿಗಗಳಲ್ಲಿ ನೋಡಲು ದೊರೆಯುತ್ತವೆ. ಸಿರುಮನ ಪರಿವಾರವೆಲ್ಲ 'ಜೋಹರ್' ವಿಧಿಯಿಂದ ಅಗ್ನಿಗೆ ಆಹುತಿಯಾಗಲು ಚಂದ್ರಗಿರಿಯಲ್ಲಿ ಆಳುವ ಸಾಳ್ವ ನರಸಿಂಗರಾಯನು ಆ ಅಗ್ನಿಕುಂಡದ ಮೇಲೆ ದೇವಾಲಯ ಕಟ್ಟಿಸಿದನೆಂದು

ಭರದಿಂದ ಕೊಂಡವ ಹೂಣಿಸದರ ಮೇಲೆ
ಗಿರಿಗೋಪುರವ ಕಟ್ಟಿಸಿದನು. ||

ಆದಿಗೋಪುರದೊಳು ಆದಿ ಲಿಂಗವನಿಟ್ಟು
ನಾಗಭೂಷಣ ಜಯ ಎನುತ
ಬೇಗ ಠಾಣ್ಯಕ್ಕೆ ರುದ್ರರಾಜನೆಂಬವನಿಟ್ಟು
ಸಾಗಿದ ವಿಜಯನಗರಕೆ ||[೮೮]

ಎಂಬ ಪದ್ಯಗಳು ತಿಳಿಸುತ್ತವೆ.

---

೮೫. ಇಂಥ ಒಂದು ವಿಗ್ರಹ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆಯ ಆವರಣದಲ್ಲಿದೆ.

೮೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೨೨೧ (ಡಾ. ಎಂ. ಚಿದಾನಂದಮೂರ್ತಿ)

೮೭. ಕರ್ನಾಟಕದಲ್ಲಿ ಮಾಸ್ತಿ -ಸಾಧನೆ ೪-೨ ಪು. ೧೧೮

೮೮. ಗೊಲ್ಲ ಸಿರುಮನ ಸಾಂಗತ್ಯ. ಸಂಧಿ ೬. ಪದ್ಯ ೭೮ ಮತ್ತು ೭೯. (ನನ್ನಲ್ಲಿರುವ ಹಸ್ತಪ್ರತಿ).

೬. ಊರು : ಮಹಾಸತಿಯಾದವಳ ನೆನಪನ್ನು ಹೊತ್ತು ಮಾಸ್ತಿ, ಮಾಸ್ತಿಕಟ್ಟಾ, ಮಾಸ್ತಿಹೊಳೆ, ಮಾಸ್ತಿಮನೆ, ಮಾಸ್ತಮರಡಿ ಹೆಸರಿನ ಊರುಗಳು ತಲೆಯೆತ್ತಿ ನಿಂತಿವೆ. ಇವಲ್ಲದೆ ಸಾಗರ್ ತಾಲೂಕಿನ ಮಾಲಂದೂರು ಗ್ರಾಮದ ನೆರೆಯಲ್ಲಿ 'ಮಾಸ್ತಿ ಹಕ್ಕಲು' ಹೆಸರಿನ ಸ್ಥಳವಿದೆ.

೭. ಅವಶೇಷಗಳು : ಕೆಲವು ಸಲ ಮಾಸ್ತಿಯಾದವಳ ವಂಶಜರ ಮನೆಯಲ್ಲಿ ಅವಳ ಬಳೆ, ನತ್ತು ಮೊದಲಾದ ಆಭರಣಗಳು ಇನ್ನೂ ಪೂಜೆಗೊಳ್ಳುತ್ತವೆ. ಅವರ ಮನೆತನದಲ್ಲಿ ತಲೆಮಾರಿನಿಂದ ತಲೆಮಾರಿಗೆ ಅವಳ ಹೆಸರನ್ನು ಮಕ್ಕಳಿಗೆ ಇಡುತ್ತ ಬಂದಿರುತ್ತಾರೆ. ಮಾಸ್ತಿ ಪ್ರಸಂಗದಲ್ಲಿ ಆಕಾಶದಿಂದ ಬಿದ್ದುವೆನ್ನಲಾದ ಬೆಳ್ಳಿಯ ಲಿಂಬೆಹಣ್ಣು, ಕನ್ನಡಿ, ಖಡ್ಗಗಳು ಮಾಸ್ತ್ಯಮ್ಮನ ಗುಡಿ ಇರುವ ಚಿಕ್ಕುಡೆವು ಗ್ರಾಮದ ಒಬ್ಬರ ಮನೆಯಲ್ಲಿದ್ದು ಇನ್ನೂ ಪೂಜೆಗೊಳ್ಳುತ್ತಲಿವೆ.

ಒಟ್ಟಿನಲ್ಲಿ ಕರ್ನಾಟಕದ ಮಾಸ್ತಿ ಅವಶೇಷಗಳನ್ನು ಸಮೀಕ್ಷಿಸಿದರೆ ದಕ್ಷಿಣ ಕರ್ನಾಟಕದಲ್ಲಿ ಇವುಗಳ ಸಂಖ್ಯೆ ಬಹಳ ಹೆಚ್ಚು ; ಉತ್ತರ ಕರ್ನಾಟಕದಲ್ಲಿ ಬಹಳ ಕಡಿಮೆ. ಈಗಲೂ ವೀರಶೈವ ಸಮಾಜದಲ್ಲಿ ವಿಧವಾ ವಿವಾಹಕ್ಕೆ ಮುಕ್ತ ಮನ್ನಣೆಯಿರುವುದರಿಂದ ಶರಣರ ಕ್ರಾಂತಿಯೇ ಇದಕ್ಕೆ ಕಾರಣವೆನ್ನಬಹುದು.

ಮಾಸ್ತಿಶಿಲ್ಪದಂತೆ ಮಾಸ್ತಿಸಾಹಿತ್ಯವೂ ತೀರ ಸಾಧಾರಣ ಮಟ್ಟದ್ದಾಗಿದೆ. ಇವು ಸಾಮಾನ್ಯವಾಗಿ ಆಡುಮಾತಿನ ತುಣುಕು ಗದ್ಯದಲ್ಲಿದ್ದು ಕೆಲವು ಮಾತ್ರ ಸುಂದರ ಕಾವ್ಯಗಳಾಗಿವೆ. ಬಹುಶಃ ಸ್ತ್ರೀ ಬಗ್ಗೆ ಸಮಾಜದಲ್ಲಿರುವ ಉಪೇಕ್ಷಾಭಾವವೇ ಇದಕ್ಕೆ ಕಾರಣವಾಗಿರಬಹುದು. ಸಾಹಿತ್ಯದ ದೃಷ್ಟಿಯಿಂದ ಗಂಡನ ವೀರಗಲ್ಲು ಸುಂದರವಾಗಿದ್ದು, ಅದೇ ಕಾಲಕ್ಕೆ ಬರೆದ ಹೆಂಡತಿಯ ಮಾಸ್ತಿಕಲ್ಲು ಸುಂದರವಾಗಿಲ್ಲದುದನ್ನು ತುಲನೆಗಾಗಿ ನೋಡಬಹುದು. ಇವುಗಳಲ್ಲಿ ತುಂಬ ಪ್ರಸಿದ್ಧವಾದುದು ದೇಕಬ್ಬೆಯ ಬೆಳತೂರ ಶಾಸನ. ಇಲ್ಲಿಯ

ಶ್ರೀರಮಣಿ ಗೌರಿ ಸಚಿ ಧಾರಿಣಿಯ ಪುತ್ರಿ ರತಿ ಭೂರಮಣಿಯನ್ದದ ಸರೂಪವಳುವೊಳ್ಪಾ
ದಾರೆ ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿಭಕ್ತೆ ಧೃತಿಶಕ್ತೆಯೆನೆ ಸಂದೀ
ವೀರನಿಧಿಯಂ ಚಲದ ವಾರಿನಿಧಿಯಂ ಗುಣದ ಚಾರುನಿಧಿಯಂ ನೆಗರ್ದ್ದ ದೇಕಲೆಯನಿನ್ತೀ
ನಾರಿಜನರನ್ನಮನದಾರೂ ಮಱಿವರ್ ಸಕಳಧಾರಣಿಯೊಳಿನ್ತು ವರಕಾನ್ತೆ ದೊರೆಯಾವಳ್॥

ಈ ಅಪೂರ್ವ ವೃತ್ತ ಅತ್ಯಪೂರ್ವ ಸೊಗಸನ್ನು ಬೀರುತ್ತದೆ.

ಹಳ್ಳಿಗರ ದೃಷ್ಟಿಯಲ್ಲಿ ಮಾಸ್ತಿಯು ಪುರಾಣದಿಂದ ಇಳಿದು ಬಂದ ದೇವತೆಯಲ್ಲ; ಪರಿಸರದಿಂದ ಎದ್ದುನಿಂತ ದೇವತೆ.ಅವಳ ಚರಿತ್ರೆ ಅವರ ರಕ್ತಕ್ಕೆ ತೀರ ಹತ್ತಿರದ್ದು. ಅಲ್ಲಿರುವುದು ಅತಿಥಿಗಳ ಸಂಬಂಧವಲ್ಲ. ಅಕ್ಕ-ತಂಗಿಯರ ಸಂಬಂಧ. ಹೀಗಾಗಿ ಜನತೆಗೆ ಅವಳ ಬಗ್ಗೆ ಬಹಿರಂಗದ ಆಡಂಬರ ಭಕ್ತಿಗಿಂತ ಅಂತರಂಗದ ನಿರಾಡಂಬರ ಭಕ್ತಿ ಹೆಚ್ಚು. ದನ-ಕರು, ಬಾಲ-ವೃದ್ಧ, ಸ್ತ್ರೀ-ಪುರುಷ, ಹೊಲ-ಮನೆಗಳಿಗೆ ಸಂಬಂಧಪಟ್ಟ ಪೀಡೆ ನಿವಾರಕಳೆನಿಸಿ ಅವಳು ಆ ಊರ ಮನಸ್ಸನ್ನಾಳುವ ಶಿಲಾಶಕ್ತಿ.

II. ವೇಳವಾಳಿ ಮರಣ

ದೇವರಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುವ 'ಧಾರ್ಮಿಕ ಬಲಿದಾನ'ಕ್ಕೆ ಸಮಾಂತರವಾಗಿ ತಲೆಯೆತ್ತಿದ ವ್ಯಕ್ತಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುವ 'ಲೌಕಿಕ ಬಲಿದಾನ'ವು ಪತಿಗಾಗಿ ಪ್ರಿಯಸತಿಯ ಸಹಗಮನ ಮತ್ತು ವ್ಯಕ್ತಿಗಾಗಿ ಪ್ರಿಯವ್ಯಕ್ತಿಯ ವೇಳವಾಳಿ ಎಂದು ಎರಡು ಕವಲುಗಳಲ್ಲಿ ಬೆಳೆದು ಬಂದಿತು. (ಇದರ ಶುದ್ಧರೂಪ ವೇಳವಾಳಿ; ವಿದ್ವಾಂಸರು ಹೇಳುವಂತೆ ವೇಳೆವಾಳಿಯಲ್ಲ. ಮುಂದೆ ಈ ಬಗ್ಗೆ ಚರ್ಚಿಸಲಾಗಿದೆ.) ಈ ಎರಡರ ಹಿಂದಿರುವ ಉದ್ದೇಶ ಒಂದೇ ಇದ್ದರೂ 'ಸಹಗಮನ' ನಿರ್ದಿಷ್ಟವಾಗಿ ಸತಿವರ್ಗಕ್ಕೆ ಮೀಸಲಾಗಿದ್ದರೆ, 'ವೇಳವಾಳಿ' ಪ್ರಧಾನವಾಗಿ ಪುರುಷವರ್ಗಕ್ಕೆ (ಕ್ವಚಿತ್ತಾಗಿ ಸ್ತ್ರೀವರ್ಗಕ್ಕೆ) ಸಂಬಂಧಪಟ್ಟಿರುತ್ತದೆ.

ಒಡೆಯನಿಗಾಗಿ ಪ್ರಾಣವನ್ನು ಮುಡುಪಿಟ್ಟ ಈ ವ್ಯಕ್ತಿಗಳಿಗೆ ಪ್ರಾಚೀನ ಶಾಸನಗಳು ವೇಳವಡಿಚ ಎಂಬ ಪದವನ್ನು ಬಳಸಿವೆ. ಪ್ರೇಮಾಲಯಸುತನ್,[೮೯] ಮನೆಮಗತಿನ್,[೯೦] ಪ್ರಿಯಪುತ್ರನ್ - ಪೊರೆದಮಗನ್[೯೧] ಎಂಬಿವು ಇದರ ಪರ್ಯಾಯ ಪದಗಳಾಗಿವೆ. ಕನ್ನಡ ಶಾಸನೋಕ್ತ ಮನೆಮುದ್ದ, ಕುಲಮುದ್ದ[೯೨] ಎಂಬಿವೂ ಬಾಣನ ಹರ್ಷಚರಿತೆಯ ಕುಲಪುತ್ರನ್, ಪಾಂಡ್ಯರ ಶಾಸನೋಕ್ತ 'ಆಪತ್ತುದವಿ' ಎಂಬಿವೂ ಇದೇ ಸಂಪ್ರದಾಯವನ್ನು ಸೂಚಿಸುತ್ತವೆ.[೯೩] ಇದರ ವಿಷಯವಾಗಿ ಬಳಕೆಯಾದ ಇನ್ನೊಂದು ಪದ ಕಿಟ್ಟುಗಂಟೆ. ಈ ಕಿಟ್ಟುಗಂಟೆ ಮತ್ತು ವೇಳವಡಿಚಗಳ ಚರ್ಚೆ ಅವಶ್ಯವಿದೆ.

೧. "ಕೀಟ್ಟಿಗಂತೆಯಾದಂ ಎಂದರೆ ತನ್ನ ಒಡೆಯನ ಚಿತೆಯ ಕೆಳಗೆ ಅಥವಾ ಸಮಾಧಿಯ ಕೆಳಗೆ ಹೂಳಲ್ಪಟ್ಟವನು..." "ರಾಜನ ವೇಳೆ+ಪಾಟಿ ಎಂದರೆ ರಾಜನ ಸಾವಿನ ಸಮಯದಲ್ಲಿ ತಮ್ಮ ಕರ್ತವ್ಯವವನ್ನು ನಡೆಸುವವನು ಎಂದರ್ಥ."[೯೪] ಇದು ಸಾಮಾನ್ಯವಾಗಿ ಇಂದು ಎಲ್ಲರೂ ಒಪ್ಪಿಕೊಂಡ ಅಭಿಪ್ರಾಯ.

೨. ಈವರೆಗೆ "ವೇಳೆವಾಳಿ" ಎಂಬುದೇ ಸತ್ಯಪಾಠವೆಂದು ನಂಬಿ ಪೂರ್ವಪದವಾದ "ವೇಳೆ"ಗೆ ಸಮಯ (Occasion) ಎಂದು ವಿದ್ವಾಂಸರು ಅರ್ಥ ಹೇಳುತ್ತ ಬಂದಿದ್ದಾರೆ.[೯೫] ಈಗ ತಿಳಿದಮಟ್ಟಿಗೆ ಶಾಸನಗಳಲ್ಲಿ ಈ ಪದ ಪ್ರಧಾನವಾಗಿ

ಅ. ಬೆಳಾ[ವ]ಡಿಚ, ಬೆಳವಡಿಚ, ವೇಳವಾಳಿ, ವಳವಾಳಿ.[೯೬]

ಆ. ವೇಳೆ, ವೇಳೆವಡಿಯ, ವೇಳೆವಾಳಿ, ವೇಳೆಗೊಂಡು.[೯೭]

ಇ. ವೆಳೆ, ವೆಳೆವಾಳಿ, ವೆಳೆಗೊಂಡು[೯೮]

ಇಷ್ಟು ರೂಪಗಳಲ್ಲಿ ಸಿಗುತ್ತದೆ. ಈ ಪದದ ಪ್ರಥಮಾಕ್ಷರದಲ್ಲಿ ಒಮ್ಮೊಮ್ಮೆ ಕಾಣದಿರುವ ದೀರ್ಘ, ಪದ್ಯದಲ್ಲಿ ತಪ್ಪದೇ ಬರುವುದರಿಂದ ಇಲ್ಲಿ ಮೂಲತಃ ದೀರ್ಘ ಇರಲೇಬೇಕು. ನಮ್ಮ ಲಿಪಿಕಾರರು ಸ್ವತಂತ್ರದೀರ್ಘ ಚಿಹ್ನೆ ಬಳಸುತ್ತಿರಲಿಲ್ಲ (ಬೇವು > ಬೆವು) ವೆಂಬುದನ್ನು ಇಲ್ಲಿ ಗಮನಿಸಬೇಕು. ಹೀಗಾಗಿ ಇಲ್ಲಿಯ ಪ್ರಥಮಾಕ್ಷರ

---

೮೯. MAR ೧೯೩೬ ಹಲ್ಮಿಡಿ ಶಾಸನ (ಕ್ರಿ.ಶ. ೪೫೦)

೯೦. ತುಳುನಾಡಿನ ಶಾಸನಗಳು ; ಸಂಪುಟ -೧ ನಂ. ೧೫, ಉದಿಯಾವರ ಶಾಸನ (೯ನೆಯ ಶತಮಾನದ ಉತ್ತರಾರ್ಧ).

೯೧. EC. V ಬೇಲೂರ ೧೧೨ ಹಳೇಬೀಡು (ಕ್ರಿ.ಶ. ೧೨೨೦).

೯೨. MAR ೧೯೨೭ ಪು. ೯೦ರಲ್ಲಿ ಮನೆಮುದ್ದ ಮಲ್ಲಯ್ಯನೆಂಬವನು ಗೋಗ್ರಹಣದಲ್ಲಿ ಹೋರಾಡಿ ಮಡಿದ ವಿಷಯವಿದೆ. ಮಾವಳಿ ಶಾಸನದಲ್ಲಿ (EC. VIII ಸೊರಬ ೧೦) ಕುಲಮುದ್ದ ಎಂಬವನು ವೀರಸ್ವರ್ಗವೇರಿದ ವಿಷಯವಿದ್ದು, ಇದು ವ್ಯಕ್ತಿನಾಮವೋ ವೇಳವಾಳಿ ಸೂಚಕವೋ ಸ್ಪಷ್ಟವಾಗುವುದಿಲ್ಲ. ಶಾಸನಗಳಲ್ಲಿ ಬರುವ 'ಶಿವಮುದ್ದ' ಎಂಬುದು ದೇವರಿಗೆ ಮೇಳವಾಳಿಯಾದವನನ್ನು ಸೂಚಿಸುತ್ತಿರಬೇಕು.

೯೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ) ಪು. ೩೦೭-೩೧೩.

೯೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ)ಪು. ೩೧೨-೩೧೩.

೯೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ) ಪು. ೩೧೩

೯೬. SII XI ನಂ. ೧೧ ಮೇವುಂಡು (೮೦೫), EC XI ದಾವಣಗೆರೆ ೧೧೯, ನಂದಿಗುಡಿ (೯೩೦).
ತುಳುನಾಡಿನ ಶಾಸನಗಳು ಸಂಪುಟ ೧ ನಂ. ೩೦. ಪೊಳಲಿ ಅಮ್ಮುಂಜೆ ಶಾಸನ (೧೧ನೇ ಶತಮಾನ). EC VIII ಸಾಗರ ೨೭, ಕಂಬಳಿಕೊಪ್ಪ (೧೨೪೧)

೯೭. ಬಸವರಾಜ ದೇವರ ರಗಳೆ (೧೯೬೮) ಪು. ೭೮. MAR. ೧೯೩೯ ನಂ. ೪೮. ನಾಗೇನಹಳ್ಳಿ(೧೧೦೦) MAR ೧೯೩೨ ನಂ. ೩೧, ಕೆಳಗೂರು (೧೧೨೪)

೯೮. EC. VIII ಶಿಕಾರಿಪುರ ೧೫೨, ಕಿಟ್ಟದಹಳ್ಳಿ, EC. VIII ಹೊನ್ನಾಳಿ ೪೭. ಬೆಳಗುತ್ತಿ (೧೧೪೫) EC. IX ಬೆಂಗಳೂರು ೮೮, ಬೇವೂರು (೯೦೦)

ಬೇ ಇಲ್ಲವೆ ವೇ ಇರಲೇಬೇಕು. ಎರಡನೆಯದಾಗಿ ಬೆಳಾ[ವ]ಡಿಚ, ಬೆಳವಡಿಚ, ವೇಳವಾಳಿ, ವಳವಾಳಿ ಎಂಬಿವುಗಳ ದ್ವಿತೀಯಸ್ಥಾನದಲ್ಲಿ ಕಾಣಿಸಿಕೊಂಡ ಳಾ, ಳ ಅಕ್ಷರಗಳು ಮೂಲತಃ ಇಲ್ಲಿ ಳೆ ಇಲ್ಲದುದನ್ನು ಅಂದರೆ ಳ ಇರುವುದನ್ನು ಸಮರ್ಥಿಸುತ್ತವೆ. ಹೀಗಾಗಿ ಬೇಳವಡಿಚ, ವೇಳವಾಳಿಗಳೇ ಇಲ್ಲಿಯ ಶುದ್ಧರೂಪವೆನ್ನಬೇಕಾಗುತ್ತದೆ. ಅಪರಿಚಿತಪದವನ್ನು ಹೋಲಿಕೆಯುಳ್ಳ ಪರಿಚಿತಪದವನ್ನಾಗಿ ಭ್ರಮಿಸುವುದು ಭಾಷೆಯಲ್ಲಿ ನಡೆಯುವ ಸಹಜಪ್ರಕ್ರಿಯೆಯಾದುದರಿಂದ, ಅಪರಿಚಿತಪದವಾದ 'ವೇಳ'ವನ್ನು ಪರಿಚಿತಪದವಾದ 'ವೇಳೆ'ಯೆಂದು ಆ ಕಾಲದ ಜನತೆ ಭಾಷೆ ಮತ್ತು ಬರವಣಿಗೆಗಳಲ್ಲಿ ರೂಢಿಸಿಕೊಂಡಿರಬಹುದು; ಇದಲ್ಲದೆ ಶಾಸನಸ್ಥ ಳಕಾರವನ್ನು ಶಾಸನ ಸಂಪಾದಕರು ಳೆ ಎಂದು ಭ್ರಮಿಸಿರುವುದು ಇನ್ನೂ ಸಂಭವನೀಯ. ಕಾರಣ ಮೂಲರೂಪ "ವೇಳೆ" ಅಲ್ಲ, "ವೇಳ". ಮುಂದೆ ಇದರಿಂದ ವೇಳವಡಿಚ, ವೇಳವಾಳಿ ಎಂಬ ರೂಪಗಳು ಸಾಧಿತವಾಗಿವೆ. ಇದಕ್ಕೆ ಆಧಾರವಾಗಿ ನಂದಿಗುಡಿ ಶಾಸನದಲ್ಲಿಯ "ಬೆಳ(ವೇಳ)ವಡಿಚ" ಮತ್ತು ಪೊಳಲಿ ಅಮ್ಮುಂಜೆ ಶಾಸನದಲ್ಲಿಯ "ವೇಳವಾಳಿ" ಎಂಬಿವು ನಮಗೆ ಸಿಗುವ ಅಧಿಕೃತ ಪ್ರಯೋಗಗಳಾಗಿವೆ.[೯೯]

ಇನ್ನು ವೇಳ, ವೇಳವಡಿಚ, ವೇಳವಾಳಿಗಳ ಅರ್ಥವಿವೇಚನೆ: ಮೇಲೆ ನಿರ್ಣಯಿಸಿದಂತೆ ಪೂರ್ವಪದದ ಶುದ್ಧರೂಪ 'ವೇಳ' (ಬೇಳ); ಇದರ ಪ್ರಕೃತಿರೂಪ ಬೇಳ್(ಸುಡು). ಬೇಳ್+ಅಂ =ಬೇಳಂ (ಬೇಳನಾಗಿರುವವನು) ಎಂಬ ಕೃನ್ನಾಮವು ಬಿಂದು ಕಳೆದುಕೊಂಡು "ಬೇಳ" ಎಂದು ಬಳಕೆಗೊಂಡಿರಬೇಕು.

ಇನ್ನು ಬೇಳವಡಿಚದಲ್ಲಿಯ ಉತ್ತರಪದದ ಕೊನೆಯಲ್ಲಿ ಅಲರಿಚ, ಪೊಳಲಿಚಗಳಲ್ಲಿಯಂತೆ 'ಇಚ" ಎಂಬ ತದ್ಧಿತ ಪ್ರತ್ಯಯವಿದೆ. ಆದುದರಿಂದ ಇದರ ಒಟ್ಟು ರೂಪ ಬೇಳ್+ಪಡೆ+ಇಚ=ಬೇಳ್ವಡಿಚ ಎಂದಿದ್ದು, ೯ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಇದು ಬೇಳವಡಿಚ ಎಂಬ ಸರಳರೂಪ ಪಡೆದಿದ್ದಿತೆಂದೂ, ಸುಟ್ಟುಕೊಳ್ಳುವಿಕೆಯನ್ನು ಪಡೆಯುವಲ್ಲಿಯೇ ವರ್ತಿಸುವವನು ಎಂಬುದು ಇದರ ಅರ್ಥವೆಂದೂ ಹೇಳಬಹುದು.

"ಜೋಳವಾಳಿ" ಪದದ ಜೋಳ+ಪಾಳಿ ಎಂಬ ವಿಗ್ರಹವನ್ನು ಅನುಸರಿಸಿ ವೇಳೆ(ಳ) ವಾಳಿ" ಎಂಬುದನ್ನು "ವೇಳೆ(ಳ)+ಪಾಳಿ" ಎಂದು ಬಿಡಿಸುತ್ತ, ಇಲ್ಲಿಯ ಉತ್ತರಪದವೂ ಮೂಲತಃ ರಳ ಯುಕ್ತವೇ ಆಗಿರಬಹುದೆಂದು ವಿದ್ವಾಂಸರು ಹೇಳುತ್ತಾರೆ.[೧೦೦] ಹಾಗೆ ಹೇಳಲು ಊಹೆಯನ್ನು ಬಿಟ್ಟರೆ ಇವರಿಗೆ ಬೇರೆ ಆಧಾರವೇ ಇಲ್ಲ. ಆದುದರಿಂದ "ನಡೆಯಿಸುವನೀತನಿದನ್"[೧೦೧] ಎಂಬ ಸಂದರ್ಭದಲ್ಲಿ "ವಳ"ತದ್ಧಿತಪ್ರತ್ಯಯ ಹತ್ತುವ ಮಾದರಿಯಲ್ಲಿ ವೇಳ+ವಳ =ವೇಳ್ವಳ=ವೇಳವಳ ರೂಪ ರೂಢಗೊಂಡು, ಇದರ ಭಾವನಾಮ 'ವೇಳವಳಿ'ಯಾಗಿ, ಕೊನೆಗೆ ಜೋಳವಾಳಿಯ ಅನುಕರಣೆಯಿಂದ ವೇಳವಾಳಿ ರೂಪಗೊಂಡು, ಈ ಪದದ ಅಪರಿಚಿತತೆಯಿಂದಾಗಿ ಆಮೇಲೆ 'ವೇಳೆವಾಳಿ'ಯೆಂಬುದು ಚಲಾವಣೆಗೆ ಬಂದಿರಬಹುದು.

೩. ಶಾಸನಗಳಲ್ಲಿ ಬರುವ "ಬೆಳಾವಡಿಚ... ಕಿಟ್ಟುಂಟೆಯಾಗಲ್ ..."[೧೦೨] "... ಮನೆಮಗತ್ತಿನ್ ..... ಕಿಟ್ಟುಂಟೆಯಾದಂ"[೧೦೩] "... ಬೆಳವಡಿಚ ಕಿಟ್ಟುಗೆಯಾಗಿ"[೧೦೪] "ಮ್ಮಯ್ದಮ್ಮ ಕಿಟ್ಟುಗೆಯಾಗಿ ಸತ್ತೊಡೆ..."[೧೦೫] ಎಂಬ ಪ್ರಯೋಗಗಳನ್ನು ಪರೀಕ್ಷಿಸಿದರೆ ವೇಳವಡಿಚನೆಂಬುದು ಕರ್ತೃಸ್ಥಾನದಲ್ಲಿ,

---

೯೯. EC. IX ದಾವಣಗೆರೆ ೧೧೯, ನಂದಿಗುಡಿ (೯೩೦), ತುಳುನಾಡಿನ ಶಾಸನಗಳು ಸಂಪುಟ ೧, ನಂ. ೩೦. ಪೊಳಲಿ ಅಮ್ಮುಂಜೆ ಶಾಸನ (೧೧ನೆಯ ಶತಮಾನ).

೧೦೦. ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ) ಪು ೩೦೨.

೧೦೧. ಶಬ್ದಮಣಿದರ್ಪಣಂ ಸೂತ್ರ ೨೧೯.

೧೦೨. BKI -I ನಂ. ೧೧ ಮೇವುಂಡಿ (ಕ್ರಿ.ಶ.. ೮೬೫)

೧೦೩. EI.VI P ೪೧ ದೊಡ್ಡಹುಂಡಿ (ಕ್ರಿ.ಶ. ೯೨೧)

೧೦೪. EC. XI ದಾವಣಗೆರೆ ೧೧೯ (ನಂದಿಗುಡಿ ಕ್ರಿ.ಶ. ೯೩೦).

೧೦೫. SII. IX-I ನಂ. ೪೦ ಕಲುಗೋಡು (ಕ್ರಿ.ಶ. ೯೭೭).


ಕಿಱ್ಗುಂಟೆಯೆಂಬುದು ಕ್ರಿಯಾಸ್ಥಾನದಲ್ಲಿ ತಪ್ಪದೇ ಬಂದಿರುವುದರಿಂದ, ವೇಳವಡಿಚ ತದ್ಧಿತನಾಮ, ಕಿಱ್ಗುಂಟೆ ಕ್ರಿಯಾರೂಪವೆಂದು ಸ್ಪಷ್ಟವಾಗುತ್ತದೆ. ಈ ವೇಳವಡಿಚ ಅಥವಾ ವೇಳವಳದ ಭಾವನಾಮ (ವೇಳವಳಿ>) ವೇಳವಾಳಿ. ಕೆಲವು ಸಲ ವೇಳವಡಿಚಕ್ಕೆ ಬದಲು ವೇಳವಾಳಿ, ವೇಳ ಪದಗಳೂ ಕ್ರಿಯಾರೂಪ ಕಿಱ್ಗುಂಟೆಗೆ ಬದಲು ವೇಳಗೊಳ್ ಎಂಬುದೂ ಬಳಕೆಯಾಗಿವೆ. ಒಟ್ಟಿನಲ್ಲಿ 'ವೇಳ್' ಧಾತು ಪ್ರತಿಜ್ಞೆಯನ್ನು, 'ವೇಳವಡಿಚ' ಕರ್ತವ್ಯನಿರ್ವಹಿಸುವ ವ್ಯಕ್ತಿಯನ್ನು, 'ಕಿಱ್ಗುಂಟೆ' ಕ್ರಿಯಾವಿಧಾನವನ್ನು ಸೂಚಿಸುವ ಪದಗಳಾಗಿವೆ ಎಂದು ಹೇಳಬಹುದು.

೪. 'ಕಿಱ್ಗುಂಟೆ' ಎಂಬುದು ಒಡೆಯನ ಸಮಾಧಿಯ ಕೆಳಗೆ, ಚಿತೆಯ ಕೆಳಗೆ ಆಳು ಹೂಳಿಸಿಕೊಳ್ಳುವುದನ್ನು ಸೂಚಿಸುವುದೆಂದು ಈವರೆಗೆ ವಿದ್ವಾಂಸರು ಸರಿಯಾಗಿಯೇ ಹೇಳುತ್ತ ಬಂದಿದ್ದರೂ ಮೂಲತಃ ಇದು ಕೇವಲ ಸಮಾಧಿಯ (ಕುಂಟೆ =ತಗ್ಗು) ಕೆಳಗೆ ಹೂಳಲ್ಪಡುವುದನ್ನು ಮಾತ್ರ ಸೂಚಿಸುತ್ತಿದ್ದು, ಆಮೇಲೆ ಅಗ್ನಿಪ್ರವೇಶ ಮಾಡಿದವನಿಗೂ ಕ್ರಿಯಾಪದವಾಗಿ ರೂಢಿಗೊಂಡಿತೇನೋ. ಹಾಗಿದ್ದರೆ ಮೂಲತಃ ಕಿಱ್ಗುಂಟೆ ಸಮಾಧಿ (=ಕುಂಟೆ) ಸಂಸ್ಕಾರವನ್ನು, 'ಬೇಳ್ವಡಿಚ'ವು ಅಗ್ನಿಸಂಸ್ಕಾರವನ್ನು ಪ್ರತಿನಿಧಿಸುವ ಶಬ್ದಗಳಾಗಿದ್ದು, ಆಮೇಲೆ ತಪ್ಪುತಪ್ಪಾಗಿ ಬಳಕೆಗೊಳ್ಳತೊಡಗಿರಬಹುದು.

ಒಟ್ಟಿನಲ್ಲಿ ಇಂಥ ವ್ಯಕ್ತಿಗಳಿಗೆ ಮನೆಮಗತಿನ್, ಪ್ರೇಮಾಲಯ ಸುತನ್, ಕುಲಮುದ್ದ, ಮನೆಮುದ್ದ, ಪೊರೆದಮಗನ್, ಪ್ರಿಯಪುತ್ರ ಎಂದು ಕರೆಯುತ್ತಿದ್ದರು. **ಇವರು ಒಡೆಯನಿಗಾಗಿ ಹುಗಿಸಿಕೊಂಡರೆ ಕಿಱ್ಗುಂಟೆ, ಸುಡಿಸಿಕೊಂಡರೆ ವೇಳವಾಳಿ** ಎಂದು ಮೂಲದಲ್ಲಿ ಅರ್ಥವಿದ್ದಿತೆಂದು ಹೇಳಬಹುದೇನೋ.

ಒಬ್ಬನ ವೇಳವಾಳಿತನವನ್ನು ಒಪ್ಪಿಕೊಂಡ ಬಳಿಕ ಇವರು ಅದಕ್ಕೆ ನಿಷ್ಠರಾಗಿ ನಡೆದುಕೊಳ್ಳುತ್ತಿದ್ದರು. ಹೀಗಿದ್ದೂ ಕೆಲವರು ವಚನಭ್ರಷ್ಟರಾಗುತ್ತಿದ್ದರೆಂಬುದನ್ನು ಶಾಸನಗಳು ವ್ಯಂಗ್ಯವಾಗಿ ಸೂಚಿಸುತ್ತವೆ.[೧೦೬] ಚಂದಯ್ಯನೆಂಬುವನು 'ವೇಳವಾಳಿಗೆ' ತಪ್ಪಿದಲ್ಲಿ ಬಹುಶಃ ಅವನಿಗೆ ದಂಡ ವಿಧಿಸಿದುದನ್ನು ಶಾಸನವೊಂದು ತಿಳಿಸುತ್ತದೆ.[೧೦೭] ಆದರೆ ಇಂಥ ಘಟನೆಗಳು ಇಲ್ಲವೆನ್ನುವಷ್ಟು ಕಡಿಮೆ.

ವೇಳವಾಳಿಗಳು ಅರಸನ ಮರಣಪ್ರಸಂಗದಲ್ಲಿ ಇಲ್ಲವೆ ಅವನ ಶುಭಪ್ರಸಂಗದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದರ ಮೂಲಕ ಸಾಯುತ್ತಿದ್ದರೂ ಅವನ ಪರವಾಗಿ ಹೋರಾಟದಲ್ಲಿ ಭಾಗವಹಿಸಿ ಯುದ್ಧವಿಜಯಿಗಳೂ ಆಗುತ್ತಿದ್ದುದಕ್ಕೆ 'ಆಳುವರಸರಾ ಮನೆಮಗತಿನ್ ಸಿಜ್ಗಪುಲಿ ಎಱಿದು ಸ್ವರ್ಗಲಯಕ್ಕೇರಿದಾನ್[೧೦೮] ಎಂಬಂಥ ಹೇಳಿಕೆಗಳು ಸಾಕ್ಷಿಯಾಗಿರುವುದರಿಂದ, ವೇಳವಾಳಿಗಳು ಯುದ್ಧದಲ್ಲಿಯೂ ಭಾಗವಹಿಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಹೀಗಾಗಿ



೧೦೬. EC. V ಬೇಲೂರು ೧೧೨. ಹಳೆಬೀಡು (ಕ್ರಿ.ಶ. ೧೨೨೦)
೧೦೭. ತುಳುನಾಡಿನ ಶಾಸನಗಳು ಸಂಪುಟ ೧ ನಂ. ೩೦. ಪೊಳಲಿ ಅಮ್ಮುಂಜೆ.
೧೦೮. ತುಳುನಾಡಿನ ಶಾಸನಗಳು ಸಂಪುಟ ೧ ನಂ. ೧೫ ಉದಿಯಾವರ.

ಎಂದು ಈ ಮರಣವನ್ನು ಬಿಡಿಸಿ ಹೇಳಬಹುದು. ಇವರಲ್ಲಿ ಯುದ್ಧ ಪ್ರಸಂಗದವರು ಬಲಶಾಲಿಯಾಗಿರಬೇಕು. ಉಳಿದ ಪ್ರಸಂಗದವರು ಬಲಶಾಲಿಗಳಾಗಿರಬೇಕೆಂದೇನೂ ಇಲ್ಲ. ಹೀಗಾಗಿ ಒಬ್ಬನೇ ವ್ಯಕ್ತಿ ಪ್ರಸಂಗಾನುಸಾರವಾಗಿ ಈ ಮೂರರಲ್ಲಿ ಯಾವುದೇ ಒಂದು ಮರಣವನ್ನಪ್ಪುತ್ತಿದ್ದನೋ, ವೀರಮರಣದವರೇ ಬೇರೆ ಉಳಿದೆರಡು ಮರಣದವರೇ ಬೇರೆ ಇರುತ್ತಿದ್ದರೋ ಹೇಳುವುದು ಕಷ್ಟ.

ಪ್ರಾಚೀನ ಕರ್ನಾಟಕದಲ್ಲಿ ಒಡೆಯನಿಗೆ ಶುಭಕೋರಿ ಪ್ರಾಣಾರ್ಪಣೆ ಮಾಡಿದ ಪ್ರಸಂಗಗಳು ಹೀಗಿವೆ : ಅರಸನಿಗೆ ಗಂಡುಮಗನಾಗಲಿ ಎಂಬ ಹರಕೆ ಹೊತ್ತು ಆಕಟೆ ಎಂಬವನು ಶಿರವನ್ನು ಕತ್ತರಿಸಿಕೊಂಡ ವಿಷಯ ೯೧೧ರ ಹೆಚ್ಚೆ ಶಾಸನದಲ್ಲಿದೆ.[೧೦೯] ಮಹಾ ಸಾಮಂತ ಬೊಪ್ಪರಸನ ರಾಣಿ ಮಾಯಾದೇವಿ ಗಂಡು ಹಡೆಯಬೇಕೆಂದು ಕೊಂಡಸ ಬಾವಿಯ ಬ್ರಹ್ಮದೇವರಿಗೆ ಹರಕೆ ಹೊತ್ತ ದೇಕೆನಾಯಕ ಸಿಡಿದಲೆ ಕೊಟ್ಟುದನ್ನು ಒಂದು ಶಾಸನ ಹೇಳುತ್ತದೆ. [೧೧೦] ಸಿಡಿದಲೆ ಎಂಬುದು ರುಂಡ ಹಾರಿಸಿಕೊಳ್ಳುವ ಒಂದು ವಿಧಾನ. ಬಗ್ಗಿಸಿದ ಗಿಡದ ಟೊಂಗೆ ಅಥವಾ ಬಗ್ಗಿಸಿದ ಗಳದ ತುದಿಗೆ ವೇಳವಾಳಿಯ ಕೂದಲನ್ನು ಕಟ್ಟಿ, ಒಬ್ಬನು ಖಡ್ಗದಿಂದ ಹೊಡೆದರೆ ರುಂಡ ಚಂದನೆ ನೆಗೆಯುತ್ತದೆ.

ಒಡೆಯನ ಮರಣ ಪ್ರಸಂಗದ ವೇಳವಾಳಿಗಳ ವಿವರ ಹೀಗಿದೆ : ರೆಟ್ಟಿಯಣ್ಣನೆಂಬ 'ಬೆಳಾವಡಿಚ' ಮಡಿದ ಒಡೆಯನ ಅಗ್ನಿಸಂಸ್ಕಾರದೆದುರು ಆತ್ಮಹತ್ಯೆ ಮಾಡಿಕೊಂಡು 'ಕಿಟ್ಟುಗಣ್ಟೆ'ಯಾದನೆಂಬ ಘಟನೆಯನ್ನು ಹೇಳುವ ೮೬೫ರ ಮೇವುಂಡಿ ಶಾಸನವೇ ಈ ಪದ್ಧತಿಯ ಪ್ರಥಮ ದಾಖಲೆಯಾಗಿದೆ.[೧೧೧] ೯೦೦ರ ಬೇಗೂರು ಶಾಸನಗಳು ನಾಗತ್ತರನಿಗಾಗಿ ಮನೆಮಗನ್ ಪೆಗೂರನು ಸತ್ತ,[೧೧೨] ನಾಗತ್ತರನ ಮಗಳು ಕೊಂಡಬ್ಬೆ ಕರ್ತವ್ಯಗೊಂಡು ಸತ್ತ ಉಲ್ಲೇಖಗಳನ್ನೊಳಗೊಂಡಿವೆ.[೧೧೩] ಕ್ರಿ. ಶ. ೯೦೦ರ ಕೋಟೂರು ಶಾಸನ ಚಾಳುಕ್ಯರಾಜನಿಗಾಗಿ ವೇಳವಡಿಚ ಶಂಭು ಅಗ್ನಿಪ್ರವೇಶ ಮಾಡಿದುದನ್ನು ಹೇಳುತ್ತದೆ.[೧೧೪] ಗಂಗ ಪೆರ್ಮಾನಡಿ ಸಾಯಲು ಬಚೆಯಮ್ಮ ಅಗ್ನಿಪ್ರವೇಶ ಮಾಡಿದನೆಂಬ ಸಂಗತಿ ಕ್ರಿ.ಶ. ೯೧೫ರ ಮರೂರು ಶಾಸನದಲ್ಲಿದೆ.[೧೧೫] ಇದೇ ಅರಸನಿಗಾಗಿ ರಾಚೇಯನು ಕಿಚ್ಚು ಹೊಕ್ಕನೆಂದು ಕ್ರಿ.ಶ. ೯೧೫ರ ಮುತ್ತಿಗೆ ಶಾಸನ ಹೇಳುತ್ತದೆ.[೧೧೬] ಗಂಗ ಅರಸು ಪೆರ್ಮಾನಡಿಗಳ್ ಸಾಯಲು ಅವರ 'ಮನೆಮಗತ್ತಿನ್' ಅಗರಯ್ಯನು 'ಕಿಟ್ಟುಂಟೆಯಾದ' ಉಲ್ಲೇಖವನ್ನೊಳಗೊಂಡ ದೊಡ್ಡಹುಂಡಿ ಶಾಸನ (ಕ್ರಿ.ಶ. ೮೪೦ ಅಥವಾ ೯೧೨) ಸುಪ್ರಸಿದ್ಧವಿದೆ.[೧೧೭] ೯೩೦ರ ನಂದಿಗುಡಿ ಶಾಸನ 'ಕಿಟ್ಟಣೆ'ಯಾದ 'ಬೆಳವಡಿಚ' ಅಲ್ಲಿಗನನ್ನು ಉಲ್ಲೇಖಿಸುತ್ತದೆ.[೧೧೮] ಮೈದಮ್ಮನು ಎರೆಗಂಗಯ್ಯ ಮಡಿಯಲಾಗಿ 'ಕಿಟ್ಗೊಂಟೆ'ಯಾಗಿ ಸತ್ತುದನ್ನು ೯೭೭ರ ಕುಲಗೋಡ ಶಾಸನ ಹೇಳುತ್ತದೆ.[೧೧೯] ಹೀಗೆ ಒಂದೇ ಶಾಸನದಲ್ಲಿ ಆಗಾಗ ಕಿಟ್ಟುಂಟೆ. ವೇಳವಾಳಿ ಎರಡೂ ಪದಗಳು ಬಳಕೆಯಾಗುತ್ತ ಬಂದಿದ್ದು, ಕಲುಗೋಡ ಶಾಸನ (೯೭೭) ಮಾತ್ರ ಕಿಟ್ಟುಂಟೆ ಪದವನ್ನು

---

೧೦೯. EC. VIII ಸೊರಬ ೪೭೬. ಹೆಚ್ಚೆ (ಕ್ರಿ.ಶ. ೯೧೧).

೧೧೦. MAR. ೧೯೧೪-೧೫ ಪು. ೩೨.

೧೧೧. BKI. I ನಂ. ೧೧ ಮೇವುಂಡಿ (ಕ್ರಿ.ಶ. ೮೬೫).

೧೧೨. EC. IX ಬೆಂಗಳೂರು ೮೭. ಬೇಗೂರು (ಕ್ರಿ.ಶ. ೯೦೦).

೧೧೩. EC. IX ಬೆಂಗಳೂರು ೮೮. ಬೆಂಗಳೂರು (ಕ್ರಿ.ಶ. ೯೦೦)

೧೧೪. IA. XX ಪು. ೬೯ ಕೋಟೂರು ಬೆಳಗಾವ ಜಿಲ್ಲೆ (ಕ್ರಿ.ಶ. ೯೦೦)

೧೧೫ EC. V ಅರಕಲಗೂಡು ೨೭. ಮರೂರು (ಕ್ರಿ.ಶ. ೯೧೫).

೧೧೬. EC. V ಅರಕಲಗೂಡು ೫, ಮುತ್ತಿಗೆ (ಕ್ರಿ.ಶ. ೯೧೫)

೧೧೭. EC. III ತಿರುಮಕೂಡಲು ನರಸೀಪುರ ೯೧. ದೊಡ್ಡಹುಂಡಿ (ಕ್ರಿ.ಶ. ೮೪೦ ಅಥವಾ ೯೨೧)

೧೧೮. EC. XI ದಾವಣಗೆರೆ ೧೧೯. ನಂದಿಗುಡಿ (ಕ್ರಿ.ಶ. ೯೩೦)

೧೧೯. SSI.X-I ೪೦ ಕಲುಗೋಡು (ಕ್ರಿ.ಶ. ೯೭೭))

ಬಳಸಿದ ಕೊನೆಯ ಶಾಸನವಾಗಿದೆ; ವೇಳವಾಳಿ ಪದಮಾತ್ರ ಆ ತರುವಾಯವೂ ಬಳಕೆಯಾಗಿದೆ. ಇನ್ನೂ ಒಂದು ವಿಶೇಷವೆಂದರೆ ಕಿಟ್ಟುಗಂಟೆ ಎಂಬ ಪದ ಕೇವಲ ಶಾಸನಗಳಲ್ಲಿದೆಯೇ ಹೊರತು ಕಾವ್ಯಗಳಲ್ಲಿಲ್ಲ; ವೇಳವಾಳಿ ಮಾತ್ರ ಶಾಸನ, ಕಾವ್ಯ ಎರಡರಲ್ಲಿಯೂ ಇದೆ.

ಒಡೆಯನಿಗಾಗಿ ತುಳುವ ಚಂಡಿಗ ಭೇರುಂಡೇಶ್ವರ ಕಂಬವನ್ನೇರಿ ಕೆಳಗೆ ನಿಲ್ಲಿಸಿದ್ದ ಬಾಣಗಳ ಮೇಲೆ ಬಿದ್ದು ಸತ್ತ ಉಲ್ಲೇಖ, ೧೦೬೦ರ ಬಳ್ಳಿಗಾವಿ ಶಾಸನದಲ್ಲಿ ಚಿತ್ರ ಸಹಿತ ಇದೆ.[೧೨೦] ಸಾಂತರದೇವ ಮಡಿಯಲು ಪೊರವಳೆಯಗಾವುಂಡನು ಬೆನ್ನ ಚರ್ಮವನ್ನು ಸುಲಿಸಿಕೊಂಡು ೩ ದಿನಗಳ ವರೆಗೆ ನೋವನ್ನನುಭವಿಸಿ ಸತ್ತನೆಂದು ೧೦೭೦ರ ಕಣ್ಣೂರು ಶಾಸನದಲ್ಲಿ ಬರುತ್ತದೆ.[೧೨೧] ರಾಣಿ ಪದ್ಮಲದೇವಿ ಮಡಿಯಲು ವೇಳಗೊಂಡ ಉತ್ತಮ ಚೋಳಸೆಟ್ಟಿ, ಹೆಂಡತಿಯ ತಲೆಕಡಿದು ತಾನೂ ಸತ್ತ ಉಲ್ಲೇಖ ೧೦೭೭ರ ಮುಳ್ಳೂರು ಶಾಸನದಲ್ಲಿದೆ.[೧೨೩] ಉದಯಾದಿತ್ಯನ ಮಗಳು ಏಚಲದೇವಿ ಮಡಿಯಲು ಮಾದೆಯನು ವೇಳವಾಳಿಯಾದನೆಂದು ೧೧೧೭ರ ಕೋಡವಳ್ಳಿ ಶಾಸನ ಹೇಳುತ್ತದೆ.[೧೨೪] ಹೊಯ್ಸಳ ಉದಯಾದಿತ್ಯನ ಮರಣ ಸಂದರ್ಭದಲ್ಲಿ ಬಿದಿರೂರಿನ ರಾಹತಗೌಡ ತಲೆಗೊಟ್ಟ ಉಲ್ಲೇಖ ೧೧೨೪ರ ಕೆಳಗೂರು ಶಾಸನದಲ್ಲಿ,[೧೨೫] ಚಾಳುಕ್ಯ ತೈಲಪನು ಮಡಿಯಲು ಬೊಪ್ಪನು ವೇಳವಾಳಿಯಾದ ಉಲ್ಲೇಖ ೧೧೩೧ರ ಬೆಳಗುತ್ತಿ ಶಾಸನದಲ್ಲಿ ಬರುತ್ತವೆ,[೧೨೬] ಶ್ರೀ ನಾರಸಿಂಹದೇವನ ರಾಣಿ ಬಮ್ಮಲದೇವಿಗೆ ಚಾಕಗೌಡನು "ಜೋಳವಾಳಿಗಂ ವಾ(ವೇ)ಳವಾಳಿಗಂ" ತೀರಿಕೊಂಡನೆಂಬ ಸಂಗತಿ ೧೧೫೦ರ ಇಂಟಿತೊಳಲು ಶಾಸನದಲ್ಲಿದೆ.[೧೨೭] ಮಹಾಮಂಡಲೇಶ್ವರ ಅರಸಿ ಲಚ್ಚಲದೇವಿಯ ಮರಣಸಂದರ್ಭದಲ್ಲಿ ವೇಳವಾಳಿ ಬೊಪ್ಪಣನು ಮಡಿದನೆಂದು ೧೧೮೫ರ ಬಂದಳಿಕೆ ಶಾಸನ ತಿಳಿಸುತ್ತದೆ.[೧೨೮] ಶಿವೋದಯನಾಯಕನ ಅವ್ವೆ ಹೊನ್ನವ್ವೆ ನಾಯಕಿತಿ ಮಡಿಯಲು ಮಲೆಯ ...... ಕಿತ್ತಿ ಹೊನ್ನಿ ಸಿಡಿತಲೆಗೊಡುತ್ತಾಳೆ.[೧೨೯] ಹೆಣ್ಣುಮಗಳಿಗೆ ಹೆಣ್ಣುಮಗಳೊಬ್ಬಳು ವೇಳವಾಳಿಯಾದ ಉದಾಹರಣೆಯಿದು.

ಇವುಗಳಿಗೆ ಪೋಷಕವಾಗಿ ಕಾವ್ಯಗಳೂ ಕೆಲವು ದಾಖಲೆಗಳನ್ನು ಒದಗಿಸುತ್ತವೆ. ವಡ್ಡಾರಾಧನೆಯಲ್ಲಿ "ವೇಳೆಗೊಂಡಿರ್ದತ್ಯುಗ್ರ ಭಟರ್ಕಳುಂ.... ಶರಣಪ್ಪೊಡೇಕೆ ಮಡಿದರ್ ಪನ್ನಿರ್ವರುಂ ಚಕ್ರಿಗಳ್" ಎಂಬ ಮಾತು ಬರುತ್ತದೆ.[೧೨೯] ಪಂಪಭಾರತದಲ್ಲಿ ಧರ್ಮರಾಜನು ತಮ್ಮಂದಿರಿಗಾಗಿ ವೇಳೆಗೊಂಡಿದ್ದನೆಂದು ಚಿತ್ರಿಸಲಾಗಿದೆ.[೧೩೦] ಬಿರಿದ ಮಲ್ಲಿಗೆಗಳು ಪ್ರೇಯಸಿಯರ ನೆನಪನ್ನು ಕೊಟ್ಟು ಪ್ರಿಯತಮರ ಎದೆಬಿರಿಯುವಂತೆ ಮಾಡುತ್ತಿದ್ದುದರಿಂದ ಅವರ ಎದೆಗಳು ಮಲ್ಲಿಗೆಗೆ ವೇಳೆಗೊಂಡಂತೆ ತೋರುತ್ತಲಿದ್ದವು[೧೩೧] ಎಂಬ ಉಲ್ಲೇಖ ಅದೇ ಕಾವ್ಯದಲ್ಲಿ ಬರುತ್ತದೆ.

---

೧೨೦. EC. VII ಶಿಕಾರಿಪುರ ೧೫೨, ಬಳ್ಳಿಗಾವೆ (ಕ್ರಿ.ಶ. ೧೦೬೦)

೧೨೧. EC. VII ಶಿಕಾರಿಪುರ ೬೨. ಕಣ್ಣೂರು (ಕ್ರಿ.ಶ. ೧೦೭೦)

೧೨೨. EC. IX ಕೊಡಗುಸೀಮೆ ೪೩. ಮುಳ್ಳೂರು (ಕ್ರಿ.ಶ. ೧೦೭೭).

೧೨೩. EC. VI ಚಿಕ್ಕಮಗಳೂರು ೭೦ ಕೋಡವಳ್ಳಿ (ಕ್ರಿ.ಶ. ೧೧೧೭)

೧೨೪. MAR ೧೯೩೨ ಚಿಕ್ಕಮಗಳೂರು ೩೧ ಕೆಳನೂರು (ಕ್ರಿ.ಶ. ೧೧೭೪)

೧೨೫. EC. VII ಹೊನ್ನಾಳಿ ೯೭, ಬೆಳಗುತ್ತಿ (ಕ್ರಿ.ಶ. ೧೧೩೧)

೧೨೬. MAR ೧೯೩೬ ಬೇಲೂರು ೩೩ ಇಂಟಿಕೊಳಲು (ಕ್ರಿ.ಶ. ೧೧೫೦)

೧೨೭. EC. VII ಶಿಕಾರಿಪುರ ೨೪೯. ಬಂದಳಿಕೆ (ಕ್ರಿ.ಶ. ೧೧೮೫)

೧೨೮. EC. XI ಮೊಳಕಾಲ್ಮೂರ ೧೨, ಸಿದ್ದಾಪುರ (ಕ್ರಿ.ಶ. ೧೨೧೫).

೧೨೯. ವಡ್ಡಾರಾಧನೆ - ಗುರುದತ್ತಭಟಾರಕ ಕಥೆ.

೧೩೦. ಪಂಪಭಾರತ ೧೩-೧೫

೧೩೧. ಪಂಪಭಾರತ ೫-೩೩.

ಕಾಯದೆ ಚಲಮಂ ಪಲರುಂ
ಚೀಯೆನೆ ಪತಿಸಾಯೆ ಸಯ್ಯಲಂಜಿದನಾಯಂ
ನಾಯೆಂಬೆನಾಳ್ದನಂ ಕಾ
ದಾಯತಿ ನಿಲೆ ಸತ್ತನಾಯನಾಂ ನಾಯೆಂಬೆಂ ||[೧೩೨]

ಎಂದು ಕ್ರಿ.ಶ. ೧೦೪೦ರ ಕಾವ್ಯಾವಲೋಕನ, ಪತಿ ಸಾಯಲು ಸಾಯದವ ನಾಯಿ ಸಮಾನವೆಂದು ತಿಳಿಸುತ್ತದೆ. ಬಂಧುವರ್ಮನ ಜೀವಸಂಬೋಧನೆಯಲ್ಲಿಯ

೧. "ಮನಮನೊಡಂಬಡಿಸದೆ ವೇಳೆಗೊಂಡಡಂ ತನುವನೊಡಂಬಡಿಸದೆ ತಪಂಗೊಂಡಡಂ ದೋಷಂ ಪುಟ್ಟಿದೊಡೇಗೇ ಯಲಕ್ಕುಂ"

೨. "ವೇಳೆಗೊಂಡಾತಂ ಸಾವಿಗಂಜುವೊಡಂ ತಪಂಗೊಂಡಾತನನುಷ್ಠಾನಕ್ಕಂಜುವೊಡಂ ಅದೆಲ್ಲಿಯ ವೇಳೆ ? ಅದೆಲ್ಲಿಯ ತಪಂ ?"

೩. "ಆಯುಗೆ ವೇಳೆಗೊಂಡುದೆಂಬವೊಲಟಿಗುಂ ಶರೀರಂ'

೪. "ಉರಿವ ಕೊಂಡಕೆವಂದ ವೇಳೆವಡಿಚಂಗಂ ಮನುಷ್ಯಭವಕ್ಕೆ ಬಂದ ಜೀವಕ್ಕಂ ಗತಿಯಂ ಬಗಿಯಲಲ್ಲದೆ ಪೆಱತು ಮೋಹದೊಳ್ ನೆಗಳಲೆಡೆಯಿಲ್ಲ."

ಎಂಬ ಮಾತುಗಳು ಆ ಕಾಲದ ವೇಳವಾಳಿ ಸಂಪ್ರದಾಯವನ್ನು ಸ್ಪಷ್ಟಪಡಿಸುತ್ತವೆ.[೧೩೩] ವಚನ ಮತ್ತು ರಗಳೆಸಾಹಿತ್ಯದಲ್ಲಿ

"ಜೋಳವಾಳಿಯಾನಲ್ಲ ವೇಳೆವಾಳಿಯವ ನಾನಯ್ಯಾ'[೧೩೪]
"ಜೋಳವಾಳಿಯೊಳಿರ್ಪನಾ ಧರಾನಾಥಂಗೆ
ವೇಳೆವಾಳಿಯೊರ್ಪನಾ ಭೀಮನಾಥಂಗೆ"[೧೩೫]

ಇತ್ಯಾದಿ ಉಲ್ಲೇಖಗಳು ಎಡೆ ಪಡೆದಿವೆ. ಪ್ರಾಚೀನ ಕನ್ನಡಿಗರ ಬದುಕಿಗೆ ವೈಚಾರಿಕ ಪ್ರತಿಕ್ರಿಯೆನ್ನು ವ್ಯಕ್ತಪಡಿಸಿದ ಶರಣರು ಈ ಆತ್ಮಾಘಾತಪದ್ಧತಿಯನ್ನು ವಿರೋಧಿಸಿದುದುಂಟು.

"ಭಾಷೆಗೇಱಿಸಿ ತನುವಿಂಗೆ ಅಲಗಕೊಂಡಡೆ ಲಿಂಗವೋಸರಿಸಿತ್ತಯ್ಯಾ
ಆತ ವೀರನೆನಿಸುವ, ಲಿಂಗಕ್ಕೆ ದೂರ, ಜಂಗಮಕ್ಕೆ ದೂರ,
ಪ್ರಸಾದಕ್ಕೆ ದೂರವಾಗಿ ವ್ರತಗೇಡಿಯಪ್ಪ,
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಬ್ರಹ್ಮೇತಿಕಾಱನೆನಿಸುವ'[೧೩೬]

---

೧೩೨. ಕಾವ್ಯಾವಲೋಕನ (೧೯೬೭) ಪದ್ಯ ೩೧೭.
೧೩೨. ಕಾವ್ಯಾವಲೋಕನ (೧೯೬೭) ಪದ್ಯ ೩೧೭.
೧೩೩. ಜೀವಸಂಬೋಧನೆ (೧೯೫೫) ಪು. ೨೧೧, ೧೬೦, ೧೨, ೧೦.
೧೩೪. ಬಸವಣ್ಣನವರ ವಚನಗಳು ೬೪೮. ಬಸವಣ್ಣನವರ ವಚನಗಳಲ್ಲಿ ಬರುವ (೩೧೩, ೧೮೯) 'ವೇಳೆ' ಎಂಬ ಪದಗಳೂ ವೇಳವಾಳಿಯನ್ನು ಸೂಚಿಸುತ್ತಿರಬೇಕು.
೧೩೫. ತೆಲುಗು ಜೊಮ್ಮಯ್ಯನ ರಗಳೆ. ಸ್ಥಲ ೧ ಸಾಲು ೩೦-೩೯.
೧೩೬. ಚೆನ್ನಬಸವಣ್ಣನವರ ವಚನಗಳು ೬೭೬. ಇದೇ ಭಾವವನ್ನು ಸೂಚಿಸುವ ೬೭೭ನೆಯ ವಚನವನ್ನೂ ನೋಡಿರಿ.

ಎಂಬ ಚೆನ್ನಬಸವಣ್ಣನವರ ಮಾತನ್ನು ಇಲ್ಲಿ ನೆನೆಯಬಹುದು. ಈವರೆಗೆ ಸಾಮಾನ್ಯವಾಗಿ ರಾಜನಿಗೆ ಸೇವಕನು ವೇಳವಾಳಿಯಾಗುತ್ತಿದ್ದುದನ್ನು ವಿರೋಧಿಸುವ ರೀತಿಯಲ್ಲಿ. ಬಸವಣ್ಣನವರು 'ಜಂಗಮದ ವೇಳೆ'[೧೩೭] ಅಂದರೆ ಪ್ರಜೆಯ ವೇಳೆಯಾಗಿದ್ದರೆಂದು ಹರಿಹರ ಹೇಳುವುದರಿಂದ ಈ ಮೌಲ್ಯವನ್ನು 'ರಾಜಭಕ್ತಿ'ಯಿಂದ, 'ಪ್ರಜಾಭಕ್ತಿ'ಗೆ ಉದಾತ್ತರೀತಿಯಲ್ಲಿ ತಿರುಗಿಸುವ ಪ್ರಯತ್ನ ಶರಣರದಾಗಿದ್ದಿತೆಂದು ಭಾವಿಸಬಹುದು. ಅದೇನೇ ಇದ್ದರೂ ಪ್ರಾಚೀನ ಕರ್ನಾಟಕದಲ್ಲಿ ಈ ಪದ್ಧತಿ ತುಂಬ ಪ್ರಚಾರದಲ್ಲಿದ್ದುದು ಸ್ಪಷ್ಟ. ಇಲ್ಲಿ ತಂದೆಗಾಗಿ ಮಗಳು, ತಮ್ಮಂದಿರಿಗಾಗಿ ಅಣ್ಣ ಧರ್ಮರಾಯ, ಸ್ತ್ರೀಗಾಗಿ ಪುರುಷ, ಹೆಣ್ಣುಮಗಳಿಗಾಗಿ ಹೆಣ್ಣುಮಗಳೊಬ್ಬಳು ವೇಳೆಗೊಂಡರೆಂಬ ಉಲ್ಲೇಖಗಳು ಗಮನಾರ್ಹವಾಗಿವೆ.

ಸುಮಾರು ೧೧ನೆಯ ಶತಮಾನದ ಸಮಯಕ್ಕೆ ವೇಳ. ವೇಳವಾಳಿ ಎಂಬ ಪದಗಳನ್ನು ಹಿಂದೆ ಸರಿಸಿ ಲೆಂಕ, ಲೆಂಕವಾಳಿಯೆಂಬ ಪದಗಳು ಈ ಸಂಪ್ರದಾಯದಲ್ಲಿ ಕ್ರಮೇಣ ಕಾಣಿಸತೊಡಗಿವೆ. ಮುಂದೆ ಈ ಪದ್ಧತಿ ಸಂವರ್ಧಿಸಿದಂತೆ ಇವರು 'ಲೆಂಕ ಸಾಸಿರ್ವರು" ಎಂಬ ಸಾಂಘಿಕನಾಮದಿಂದ ಕರೆದುಕೊಂಡ ಉಲ್ಲೇಖಗಳು ಮೋರಿಂಗೆರೆ ಮೊದಲಾದ ಶಾಸನಗಳಲ್ಲಿ ಸಿಗುತ್ತವೆ.[೧೩೮] ಉದರಪೋಷಣೆಗೋಸುಗ ಅರಸನಿಂದ ಗ್ರಾಮಗಳನ್ನು 'ಅಣುಗಜೀವಿತ'ವಾಗಿ ಪಡೆಯುತ್ತಿದ್ದ ಇವರು ರಾಜನಿಗಾಗಿ ಹೋರಾಡುತ್ತಿದ್ದರು; ಇಲ್ಲವೆ ಅವನ ಮರಣ ಪ್ರಸಂಗದಲ್ಲಿ ಪ್ರಾಣಘಾತ ಮಾಡಿಕೊಳ್ಳುತ್ತಿದ್ದರು; ಇಲ್ಲವೆ ಅವನಿಗೆ ಶುಭಹಾರೈಸಿ ಆತ್ಮಬಲಿಯಾಗುತ್ತಿದ್ದರು. ಈ ಮಾತಿಗೆ ಲೆಂಕ ಕೇತನು ಉಣಕಲ್ಲು ಕೋಟೆಯ ಕಾಳಗದಲ್ಲಿ ಹೋರಾಡಿ ವೀರಸ್ವರ್ಗವೇರಿದುದು,[೧೩೯] ಕುವರ ಲಕ್ಷ್ಮ ಮೊದಲಾದ ಲೆಂಕರು ಅರಸನ ಮರಣಪ್ರಸಂಗದಲ್ಲಿ ಪ್ರಾಣಘಾತ ಮಾಡಿಕೊಂಡು ಸತ್ತುದು ಉದಾಹರಣೆಯೆನಿಸಿವೆ.[೧೪೦] ಆದರೆ ಅರಸನಿಗೆ ಶುಭಹಾರೈಸಿ ಆತ್ಮಬಲಿಯಾದ ಲೆಂಕ ವಿಶೇಷಣದ ವ್ಯಕ್ತಿಯ ಉಲ್ಲೇಖವನ್ನು ಶೋಧಿಸಬೇಕಾಗಿದೆ.[೧೪೧]

ಹೊಯ್ಸಳರ ಕಾಲದಲ್ಲಿ ಹೀಗೆ ಪ್ರಾಣಘಾತ ಮಾಡಿಕೊಳ್ಳುತ್ತಿದ್ದವರನ್ನು "ಗರುಡ' ಹೆಸರಿನಿಂದ ಕರೆಯಲಾರಂಭಿಸಿದರೆಂದು ವಿದ್ವಾಂಸರು ಹೇಳುತ್ತ ಬಂದಿರುವರು.[೧೪೨] ಇವರು "ದೊರೆ ಪತಿಭಕ್ತಿಗೆ ತನ್ನೊಳ್ ಗರುಡಂ, ಗರುಡಂಗೆ ತಾನೆ ದೊರೆ" ಎಂಬ, "ಗಜಮಸ್ತಕದಲ್ಲಿ ಆರು ಬಾರಿ ಗರುಡನನಪ್ಪಿ ಬಾಸೆಯಂ ಪೂರೈಸಿದರ್" ಎಂಬ ಹಳೆಬೀಡು ಮತ್ತು ಬಾಚಹಳ್ಳಿ ಶಾಸನೋಕ್ತ[೧೪೩] ವಾಕ್ಯಗಳಲ್ಲಿಯ 'ಗರುಡ' ಪದಗಳನ್ನು ಪ್ರಾಣಘಾತ ಸಂಪ್ರದಾಯದ ವ್ಯಕ್ತಿಗಳಿಗೆ ಅಂಟಿಸಿದುದು ಸರಿಯಲ್ಲವೆಂದು ತೋರುತ್ತದೆ. ಈ ಸಂಪ್ರದಾಯವನ್ನು ಕಥಿಸುವ ಹೇಳಬೀಡು ಬಾಚಹಳ್ಳಿ ಶಾಸನಗಳೂ ಸಮಕಾಲೀನ ಕೃತಿಗಳಾದ ಅನಂತನಾಥ ಪುರಾಣ ಮೊದಲಾದವೂ ಇವರಿಗೆ ಲೆಂಕ, ಲೆಂಕವಾಳಿ ಪದಗಳನ್ನು ಪದೇ ಪದೇ ಬಳಸಿದ್ದು ತಪ್ಪಿಯಾದರೂ ಗರುಡ ಪದವನ್ನು ಬಳಸಿಲ್ಲವೆಂಬುದನ್ನು ಇಲ್ಲಿ ನೆನೆಯಬೇಕು. ಕಾರಣ ಹೊಯ್ಸಳರ ಕಾಲದಲ್ಲಿಯೂ ಆ ಸಂಪ್ರದಾಯ 'ಗರುಡ' ಹೆಸರಿನಿಂದಲ್ಲ, ಲೆಂಕ-ಲೆಂಕವಾಳಿ ಹೆಸರಿನಿಂದಲೇ ಮುಂದುವರಿಯಿತೆಂದು ಹೇಳಬೇಕಾಗುತ್ತದೆ.

---

೧೩೭. ಬಸವರಾಜದೇವರ ರಗಳೆ (೧೯೬೮) ಪು. ೭೮.

೧೩೮. SII. IX -೧೦, ಮೋರಿಂಗೆರೆ (ಕ್ರಿ.ಶ. ೧೦೪೫)

೧೩೯. SII. IX -೫೧ ಎಲಿಶಿರೂರ (ಕ್ರಿ.ಶ. ೧೦೦೫)

೧೪೦. EC. V. ಬೇಲೂರು ೧೧೨. ಹಳೆಬೀಡು (ಕ್ರಿ.ಶ. ೧೨೨೦).

೧೪೧. ಕುವರಲಕ್ಷ್ಮನದು ಶುಭಹಾರೈಕೆಯ ಬಲಿದಾನವೆಂದೂ ಊಹಿಸಲು ಅವಕಾಶವಿದೆ.

೧೪೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಚಿದಾನಂದಮೂರ್ತಿ) ಪುಟ ೩೦೯.

೧೪೩. EC. V. ಬೇಲೂರು ೧೧೨. ಹಳೆಬೀಡು (ಕ್ರಿ.ಶ. ೧೨೨೦). EC. IV ಕೃಷ್ಣರಾಜಪೇಟೆ ೯೧೦. ಬಾಚಳ್ಳಿ (ಕ್ರಿ.ಶ. ೧೨೫೭, ೧೨೯೨)

ಹೀಗೆ ಲೆಂಕಪ್ರತಿಜ್ಞಾಬದ್ಧರಾದ ಸ್ತ್ರೀ ಮತ್ತು ಪುರುಷರು ಎಡಗಾಲಲ್ಲಿ ಬಂಗಾರದ 'ತೊಡರ'ನ್ನು ಧರಿಸುತ್ತಿದ್ದರು. ಇದು ಮುತ್ತು ಗೊಂಬೆಗಳಿಂದ ಅಲಂಕೃತವಾಗಿರುತ್ತಿದ್ದು ನಡೆಯುವಾಗ ಝಣ್ ಝಣ್ ಸದ್ದು ಕೇಳಿಬರುತ್ತಿದ್ದಿತೆಂದು ಕುವರಲಕ್ಷ್ಮನ ಶಾಸನದಿಂದ ತಿಳಿದುಬರುತ್ತದೆ. ಈ ಕಾಲಕ್ಕೆ ಸಂಬಂಧಪಟ್ಟ 'ವೇಳವಾಳಿ' ಸ್ವರೂಪದ ವಿವರಗಳಿಗಾಗಿ ಹಳೇಬೀಡಿನ ಒಂದು, ಬಾಚಹಳ್ಳಿಯ ಎರಡು ಶಾಸನಗಳನ್ನು ಇಲ್ಲಿ ಅವಲೋಕಿಸಬಹುದು.

೧೨೨೦ರ ಹಳೆಬೀಡು ಶಾಸನವು ಕುವರಲಕ್ಷ್ಮ, ಆತನ ಸತಿ ಸುಗ್ಗಲೆ ಮತ್ತು ಕೆಲವು ಜನ ಲೆಂಕರು[೧೪೪] ಬಲ್ಲಾಳನಿಗಾಗಿ ಪ್ರಾಣಾರ್ಪಣೆ ಮಾಡಿಕೊಂಡುದನ್ನು ಹೇಳುತ್ತದೆ. (ಚಿತ್ರ ೧೦ಎ). ಬಾಚಹಳ್ಳಿಯಲ್ಲಿಯ ಎರಡು ಶಾಸನಗಳು ಒಂದೇ ಮನೆತನದ ಲೆಂಕರು "ಅನ್ವಯಾಗತ'ವಾಗಿ ಹೊಯ್ಸಳ ಅರಸರಿಗೋಸುಗ ಪ್ರಾಣಘಾತ ಮಾಡಿಕೊಂಡುದನ್ನು ತಿಳಿಸುತ್ತವೆ.[೧೪೫] ಇಲ್ಲಿಯ

"ಗಂಡ ನಾರಾಯಣಸೆಟ್ಟಿ ಮಾರವ್ವೆ ನಾಯಿಕಿತಿಯುಂ ಐಯ್ವರು ಲೆಂಕರುಂ ಎಱೆಯಂಗರಸನ ಕೂಡಿ ವೊಡಸಂದರು. ಅವರ ಮಗ ಹೊಯಿಸಳಸೆಟ್ಟಿ ಮಾಚವೆನಾಯಿಕಿತಿಯುಂ ಅಱುವರು ಲೆಂಕರುಂ ಬಿಟ್ಟಿದೇವರಸರ ಕೂಡೆ ಸಂದರು. ಅವರ ಪುತ್ರ ಕೂರೆಯನಾಯಕ ಮಾರವ್ವೆನಾಯಿಕಿತಿ ಚಿಕ್ಕಮಾದವ್ವೆನಾಇಕಿತಿಯುಂ ಏಳು ಪ್ರಜೆ ಲೆಂಕರು ನಾರಸಿಂಹದೇವರಸರ ಕೂಡೆ ಸಂದರು. ಅವರ ಪುತ್ರ ಲಖೆಯನಾಯಕಂ ಅಯ್ವರು ಲೆಂಕರುಂ ಮೂವರು ಲೆಂಕತಿಯರುವೆರಸು ಬಲ್ಲಾಳದೇವನೊಡನೆ ಬಾಸೆಯಂ ಪೂರೈಸಿದ. ನಾರಸಿಂಹದೇವರಸನೊಡನೆ ಅವರ ಪುತ್ರ ಲಖೆಯನಾಯಕಂ ತಂನ ಹೆಂಡತಿ ಗಂಗಾದೇವಿಯುಂ ಅಯ್ವರು ಲೆಂಕರುಂ ಮೂವರು ಲೆಂಕತಿಯರುವೆರಸಿ ಬಾಸೆಯಂ ಪೂರೈಯ್ಸಿದನು. ಸೋಮೇಶ್ವರದೇವನೊಡನೆ ಕಂನೆಯನಾಯಕಂ ತಂನ ಹೆಂಡತಿಯರು ವೊಮ್ಮವ್ವೆ ಜವನವ್ವೆ ಕಲ್ಲವ್ವೆಯುಂ ಹತ್ತು ಮಾನಿಸ ಲೆಂಕತಿಯರುಂ ಯಿಪ್ಪತ್ತೊಂದು ಮಾನಿಸಲೆಂಕರುವೆರಸಿ ಗಜಮಸ್ತಕದ ಮೇಲೆ ಅಱು ಬಾರಿ ಗರುಡನನಪ್ಪಿ ಬಾಸೆಯಂ ಪೂರೈಯ್ಸಿದನು. ಸಕವರುಶದ ೧೨೧೪ನೆಯ ಖರಸಂವತ್ಸರದ ಆಸ್ವಇಜ ಸು ಬಿದಿಗೆ ಸೋಮವಾರದಲ್ಲು ನಾರಸಿಂಹದೇವರಸರ ಕೂಡಿ ಕಂನೆಯನಾಯಕನ ಮಗ ರಂಗೆನಾಯಕಂ ತಂನ ಹೆಂಡತಿ ಕೇತವ್ವೆನಾಯಕಿತಿ ಹೊಂನವ್ವೆನಾಯಕಿತಿ ಮಂಚವ್ವೆನಾಯಕಿತಿ ಹತ್ತು ಮಾನಿಸಲೆಂಕಿತಿಯಿರುಂ ಇಪ್ಪತ್ತು ಮಾನಿಸಲೆಂಕರುಂ ಬೆರಸಿ ಗಜಮಸ್ತಕದ ಮೇಲೆ ಆಱುಬಾರಿ ಗರುಡನನಪ್ಪಿ ಬಾಸೆಯಂ ಪೂರೈಯ್ಸಿದನು" ಎಂಬ ವಿವರಗಳು ರೋಮಾಂಚನಕಾರಿಯಾಗಿವೆ.

ಮೇಲೆ ಹೇಳಿದ ಕುವರಲಕ್ಷ್ಮನು "ಭಾಸ್ವಚ್ಛಿಲಾಸ್ತಮ್ಭಮಂ ..... ಸುದತೀಸಂಯುತನೇಱಿದಂ", "ಕಂಬದ ಮೇಲೆ ಲಕ್ಷ್ಮಿವೆರಸಾ ಗರುಡಂ ಬೆರಗಾದಮಟ್ಟಿಱಿನ್ದಂ" ಎಂದು ಹಳೆಬೀಡಿನ ಶಾಸನ, ಲೆಂಕರು "ಗಜಮಸ್ತಕದ ಮೇಲೆ ಆರು ಬಾರಿ ಗರುಡನನಪ್ಪಿ ಬಾಸೆಯಂ ಪೂರೈಸಿದರು" ಎಂದು ಬಾಚಹಳ್ಳಿಯ ಶಾಸನಗಳು ತಿಳಿಸುತ್ತವೆ. ಈ ವಾಕ್ಯಗಳಿಗೆ ಅರ್ಥ ಹಚ್ಚುವುದು ಅಂದರೆ ಅವರು ಮರಣಹೊಂದಿದ ವಿಧಾನವನ್ನು ತಿಳಿದುಕೊಳ್ಳುವುದು ಇನ್ನೂ ಸಾಧ್ಯವಾಗಿಲ್ಲ. ಕುವರಲಕ್ಷ್ಮನ ಶಾಸನ ಮುರಿದ ಕಂಬದ ಮೇಲಿದೆ. ಬಾಚಹಳ್ಳಿಯ ಶಾಸನಗಳನ್ನು ಕಂಬಗಳ ಮೇಲೆ ಕೆತ್ತಲಾಗಿದ್ದು, ತುದಿಯಲ್ಲಿ ಒಂದು ಆನೆಯ ಮೇಲೆ ಕುಳಿತ ಅನೇಕ ವ್ಯಕ್ತಿಗಳು ಗರುಡನೊಂದಿಗೆ ಹೋರಾಡುವ ವಿಗ್ರಹವಿದೆ. ಇಲ್ಲಿಯೇ ಕನ್ನೆಯ ನಾಯಕನ, ಆತನ ಹೆಂಡಿರ ಮತ್ತು ಲೆಂಕ-ಲೆಂಕಿತಿಯರ ಮರಣ ಸ್ವರೂಪವನ್ನು ಹೇಳುವ

---

೧೪೪. ಹಳೆಬೀಡು ಶಾಸನದ ಸಾಲು ೯೩-೯೫ನ್ನು ಸೂಕ್ಷ್ಮವಾಗಿ ಓದಿದರೆ, ಕುವರಲಕ್ಷ್ಮನ ಕೂಡ ಪ್ರಾಣಾರ್ಪಣೆ ಮಾಡಿಕೊಂಡವರು ಲೆಂಕಸಾಸಿರ್ವರಾದ ಕೆಲವೇ ಜನ ಎಂದು ಅರ್ಥ ಹೊರಡುವಂತಿದೆ. 'ಲೆಂಕಸಾಸಿರ್ವರು' ಅರ್ಥದಲ್ಲಿ ಬಳಸಿರಬಹುದಾದ ಅಲ್ಲಿಯ 'ಸಾಸಿರ'ಪದವನ್ನು ವಾಚ್ಯಾರ್ಥದಲ್ಲಿ ಗ್ರಹಿಸಬಾರದೆಂದು ತೋರುತ್ತದೆ. ವಿದ್ವಾಂಸರು ಈ ಬಗೆಗೆ ವಿಚಾರಿಸಬೇಕು.

೧೪೫. EC. IV (೧೨೭೭) ಕೃಷ್ಣರಾಜಪೇಟೆ ೯, ೧೦. ಬಾಚಹಳ್ಳಿ (ಕ್ರಿ.ಶ. ೧೨೫೭, ೧೨೯೨)

ಪಡೆಮಾತೇಂ ರಾಯಲೆಂಕರ್ಪ್ಪತಿಯ ಪೆಱಗೆ ಕೀಳ್ಪಟ್ಟು ಬಾಳ್ವೇವವೆತ್ತಂ
ಸುಡೆ ತಂತಂಮಂಗಮಂ ಸತ್ತಳಿಯದೆ ತಲೆಯಂ ಬೇಱಿವೇಱೂಱಿ ಮೇಂಗಾ
ಲೆಡೆಯೊಳ್ ಮೇಲ್ವಾಹೆಯೆಂಬೀ ನೆವದೊಳ್ ತಪಮಂ ಮಾಡುತ್ತಿರ್ದ್ದಪ್ಪರೆಂಬಂ
ತೆಡಗಾಲೊಳ್ ಹೊಂದೊಡರ್ ಕಂಗೊಳಿಸೆ ಸೊಗಯಿಸುವಂ ವೀರಸಾವಂತ ಕಂನಂ||

ಅತಿಧ್ರಿಯಿಂದವಂಗಯಿಸಿ ಕಂನೆಯನಾಯಕನಿರ್ದ್ದು ನೋಡೆ ಸಂ
ತತಿ ಬೆರಗಾಗೆ ಬಂಧುಜನವಾಯೆನೆ ಲೋಕದ ಪೆಂಡಿರೆಲ್ಲವಾ
ಯತಿಕೆಗೆ ಮೆಚ್ಚೆ ಬಿತ್ತರಿಸೆ ಕಲ್ಲವೆಯಾ ಜವನವ್ವೆಯುಂಮವಾ
ರತಿಗಳನೆತ್ತಿದರ್ ತೊಳಪ ಪಂದಲೆಯಿಂ ಪತಿಮಚ್ಚೆ ಮೂವರುಂ ||

ಎಂಬ ಪದ್ಯಗಳು ತುಂಬ ದೋಷಯುಕ್ತವಾಗಿರುವುದಿಂದ ಇಲ್ಲಿಯೂ ಇವರ ಮರಣಸ್ವರೂಪ ಸ್ಪಷ್ಟವಾಗುವುದಿಲ್ಲ. ಇಲ್ಲಿ ಮೂರು ಮಾತು ಗಮನಾರ್ಹ.

೧. ಇವರ ಅನ್ವರ್ಥಕನಾಮ 'ಲೆಂಕ'ವೇ ಹೊರತು 'ಗರುಡ'ವಲ್ಲ, ಇವರ ಕರ್ತವ್ಯ ಲೆಂಕವಾಳಿ.

೨. ವಂಶಪಾರಂಪರ್ಯವಾಗಿ ಈ ಬಲಿದಾನವನ್ನು ಆಚರಿಸುವುದು "ಅನ್ವಯಾಗತ ಲೆಂಕವಾಳಿ".

೩. ಬಹುಶಃ ಲೆಂಕವಾಳಿ ಸಾಮೂಹಿಕ ಪ್ರಾಣಾಘಾತ (ಜೋಹರದ ಪ್ರಥಮ ಹಂತ ?) ಇದರಲ್ಲಿ ಸ್ತ್ರೀಯರೂ ಭಾಗವಹಿಸುತ್ತಿದ್ದರು. ಈವರೆಗಿನ ವಿವರಣೆಯನ್ನು ಬೆಂಬಲಿಸುವಂತೆ ಜನ್ನನ ಅನಂತನಾಥಪುರಾಣದಲ್ಲಿ

ಊದುವ ಕಾಳೆ ವೀರವಱಿಯೆತ್ತುವ ಪುಷ್ಪಕಮೋರ್ವರೋರ್ವರಂ
ಮೂದಲೆಗೆಯ್ವ ಸೂಳ್ನೆರೆದ ವಂದಿಗೆ ಸಬ್ಬವಮಪ್ಪ ಭಾಗಮೊ
ಲ್ದೋದಿಪ ಗಾಹೆ ಪಾಡೆ ಪದಮಂ ಪೊಸಪೂವಿನ ಪೊನ್ನ ಪಚ್ಚಮಂ
ದಾದುರಿ ಚಂಡಶಾಸನನ ಬಾಸೆಯ ಲೆಂಕರ ಕೇರಿಕೇರಿಯೊಳ್ ||[೧೪೬]

ಎಂಬ ಪದ್ಯ ಬರುತ್ತಿದ್ದು, ಆ ಸಂದರ್ಭದಲ್ಲಿ ನಡೆಯುತ್ತಿದ್ದ ಸಂಭ್ರಮವನ್ನು ವಿವರಿಸುತ್ತದೆ. ಇನ್ನೊಂದೆಡೆ ಬರುವ "ತಲೆಗೆ ಮುಂದಲೆಯಾಗಿ ಲೆಂಕರ್ಕುಡುವ ಸಿಡಿದಲೆಯ"[೧೪೭] ಎಂಬ ಮಾತನ್ನೂ ಇಲ್ಲಿ ಗಮನಿಸಬೇಕು.

ಏಳಿಗೆಯಿಂದಿರಿದಾಡಿ ಕುಮಾರಕ
ನೂಳಿಗದ ಚಿನನಾಗ
ಆಳಿದೊಡೆಯನಡಿಗಳ ಮುಂದೆ ತಲೆಯಿತ್ತು
ಮೇಳಿಸಿದನು ಸಗ್ಗವೆಣ್ಣು ||[೧೪೮]

ಎಂಬ ೧೬ನೆಯ ಶತಮಾನದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದ ಪದ್ಯ ರಾಜಕುಮಾರ ತೋಂಟದರಾಯನಿಗಾಗಿ ಚಿನನಾಗನೆಂಬವನು ಪ್ರಾಣಾರ್ಪಣೆ ಮಾಡಿಕೊಂಡ ವಿಷಯವನ್ನು ಹೇಳುತ್ತದೆ. ಮುಂದೆ ಈ 'ಲೆಂಕವಾಳಿ' ಪದ್ಧತಿ ಕಿತ್ತೂರ ಸಂಸ್ಥಾನದಲ್ಲಿ "ಭೈರವ" ಹೆಸರಿನಿಂದ ಪ್ರಚಾರದಲ್ಲಿದ್ದುದಾಗಿ ತಿಳಿದುಬರುತ್ತದೆ. ರಾಣಿ ಚನ್ನಮ್ಮನ ಮಗ ಶಿವಲಿಂಗಸರ್ಜ ಕಿತ್ತೂರ ರಾಜ್ಯಕ್ಕಾಗಿ 'ಭೈರವ'ನಾಗಿದ್ದುದು ಇದಕ್ಕೆ ಉದಾಹರಣೆಯಾಗಿದೆ.

---

೧೪೬. ಅನಂತನಾಥಪುರಾಣಂ (೧೯೭೫) ೧೨-೧೧.

೧೪೭. ಅನಂತನಾಥಪುರಾಣಂ ೧೧-೭೪ ಗ.

೧೪೮. ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ ೧೬, ೧೦.

ಒಡೆಯನಿಗಾಗಿ ವೇಳವಾಳಿ (>ಲೆಂಕವಾಳಿ) ಹೋರಾಡಿ ಸತ್ತರೆ ವೀರಗಲ್ಲು, ಅವನಿಗೆ ಶುಭಹಾರೈಸಿ ಇಲ್ಲವೆ ಅವನ ಮರಣಪ್ರಸಂಗದಲ್ಲಿ ಪ್ರಾಣಾಘಾತ ಮಾಡಿಕೊಂಡರೆ ವೇಳವಾಳಿಕಲ್ಲು[೧೪೯] ನಿಲ್ಲಿಸುತ್ತಾರೆ. ಈ ವೇಳವಾಳಿ ಕಲ್ಲುಗಳನ್ನು ಬರಹ, ಶಿಲ್ಪ, ಬರಹ-ಶಿಲ್ಪ ಎಂದು ವರ್ಗೀಕರಿಸಬಹುದು. ಈವರೆಗೆ ಬರಹವರ್ಗದ ವೇಳವಾಳಿಕಲ್ಲುಗಳು ಪ್ರಕಟವಾಗಿವೆ. "ಬರಹ-ಶಿಲ್ಪವರ್ಗ"ದವುಗಳಲ್ಲಿ ಬರಹ ಮಾತ್ರ ಪ್ರಕಟವಾಗಿ ಶಿಲ್ಪ ಅಲಕ್ಷಿತವಾಗಿದೆ. ಕೇವಲ ಶಿಲ್ಪವಿರುವ ವೇಳವಾಳಿ ಕಲ್ಲುಗಳ ಕಡೆಗೆ ಕಣ್ಣೆತ್ತಿ ಸಹ ನೋಡಿಲ್ಲ. ಹೀಗಾಗಿ ಇವೆಲ್ಲವುಗಳ ಶಿಲ್ಪವನ್ನು ಸಮಗ್ರವಾಗಿ ವಿವೇಚಿಸುವುದು ಇಂದು ಅಸಾಧ್ಯವೇ ಸರಿ.

ಈಗ ತಿಳಿದಮಟ್ಟಿಗೆ ಕೆಲವು ವೇಳವಾಳಿ ವಿಧಾನಗಳು ಹೀಗೆ ಕಂಡುಬಂದಿವೆ. ೧. ಅಗ್ನಿ ಪ್ರವೇಶಗೆಯ್ಯುವುದು, ೨. ಸಿಡಿತಲೆಗೊಡುವುದು, ೩. ಕಂಬಗಳ ಮೇಲಿಂದ ಜಿಗಿಯುವುದು, ೪. ಇತರ ವಿಧಾನಗಳು.

ಅಗ್ನಿ ಪ್ರವೇಶಗೆಯ್ದ ಲೌಕಿಕ ವೇಳವಾಳಿಗಳ ಉಲ್ಲೇಖಗಳಿವೆಯೇ ಹೊರತು ಚಿತ್ರಗಳು ನನ್ನ ಗಮನಕ್ಕೆ ಬಂದಿಲ್ಲ.

ಬಸುರಾಳದ ಎರಡು ಶಾಸನಗಳಲ್ಲಿ ೩ ಸ್ತರಗಳಿದ್ದು, ಕೆಳಗಿನ ಸ್ತರದಲ್ಲಿ ಕುದುರೆಯ ಮೇಲೆ ಕುಳಿತ ವೇಳವಾಳಿಯ (?) ಮೆರವಣಿಗೆ, ಮಧ್ಯದ ಸ್ತರದಲ್ಲಿ ಬಗ್ಗಿಸಿದ ಗಳಕ್ಕೆ ಕೂದಲು ಕಟ್ಟಿಕೊಂಡು ಕೈಮುಗಿದು ಕುಳಿತ ವೇಳವಾಳಿ, ಅವನ ಮಗ್ಗಲು ಬಾಗಿದ ಖಡ್ಗ ಹಿಡಿದು ರುಂಡ ಹಾರಿಸಲು ಸಿದ್ಧನಾದ ವ್ಯಕ್ತಿ, ಮೇಲಿನ ಸ್ತರದಲ್ಲಿ ಈಶ್ವರಲಿಂಗದೆದುರು ಕೈಮುಗಿದು ಕುಳಿತ ವೇಳವಾಳಿ ಚಿತ್ರಗಳಿವೆ.[೧೫೦] ನಗರಗೆರೆಯಲ್ಲಿಯೂ ಬಹುಶಃ ರುಂಡ ಕತ್ತರಿಸಲು ಸಿದ್ಧನಾದ ವ್ಯಕ್ತಿ ಕೆಳಗಿನ ಸ್ತರದಲ್ಲಿ, ಗಳಕ್ಕೆ ಕೂದಲು ಕಟ್ಟಿಕೊಂಡು ಕೈಮುಗಿದು ಕುಳಿತ ವೇಳವಾಳಿ ಮಧ್ಯದ ಸ್ತರದಲ್ಲಿ, ಸ್ವರ್ಗದ ಚಿತ್ರ ಮೇಲಿನ ಸ್ತರದಲ್ಲಿವೆ. [೧೫೧] ಬಗ್ಗಿಸಿದ ರೆಂಬೆಗೆ ತಲೆಗೂದಲು ಕಟ್ಟಿಸಿಕೊಂಡು ರುಂಡ ಹಾರಿಸಿಕೊಂಡ ಗಂಡ, ಇಬ್ಬರು ಹೆಂಡಿರ ಸಿಡಿದಲೆ ಅಬ್ಬಲೂರಿನಲ್ಲಿದೆ (ಚಿತ್ರ ೧೦ಬಿ).[೧೫೨] ಇವು ಸಿಡಿತಲೆಗೆ ಉದಾಹರಣೆಗಳು.

ಅರಸನೊಬ್ಬನಿಗೆ ವೇಳವಾಳಿಯಾದ ತುಳುವ ಚಂಡಿಗನು ಬಳ್ಳಿಗಾವಿಯ ಪೆರುಮಾಳು ದೇವಸ್ಥಾನದ ಭೇರುಂಡೇಶ್ವರ ಕಂಬದ ತುದಿಯಿಂದ ಕೆಳಗೆ ನಿಲ್ಲಿಸಲಾದ ಬಾಣಗಳ ಮೇಲೆ ಬಿದ್ದು ಸತ್ತ ಚಿತ್ರವಿದೆ.[೧೫೩] ಕುವರಲಕ್ಷ್ಮ ಮತ್ತು ಆತನ ಅನುಯಾಯಿಗಳೂ ಬಾಚಹಳ್ಳಿಯ 'ಅನ್ವಯಾಗತ ಲೆಂಕವಾಳಿ'ಗಳೂ ಕಂಬವನ್ನೇರಿ ಪ್ರಾಣಾರ್ಪಣಮಾಡಿದಂತಿದೆ. (ಬಾಚಹಳ್ಳಿಯ ಸ್ತ್ರೀಯರು ಮಾತ್ರ ರುಂಡ ಕತ್ತರಿಸಿಕೊಂಡಿರಬಹುದು). ಇವು ಕಂಬವನ್ನೇರಿ ಮಡಿದ ಉದಾಹರಣೆಗಳಿವೆ.

ಇತರ ವಿಧಾನಗಳಿಗೆ ಬಂದರೆ ದೊಡ್ಡ ಹುಂಡಿಶಾಸನದಲ್ಲಿ[೧೫೪] ನೀತಿಮಾರ್ಗನಿಗೆ ವೇಳವಾಳಿಯಾದ ಅಗರಯ್ಯನ ಕೈಯಲ್ಲಿ ಕಠಾರಿ ಇರುವುದರಿಂದ, ಈ ಚಿತ್ರ ಇರಿದುಕೊಂಡು ಸತ್ತುದನ್ನು ಸೂಚಿಸುತ್ತಿರಬೇಕೆಂದು ವಿದ್ವಾಂಸರ ಊಹೆ.[೧೫೫]

---

೧೪೯. 'ವೇಳವಾಳಿ ಕಲ್ಲು' ಎಂದು ಕರೆಯುವ ರೂಢಿಯಿಲ್ಲ. ವೀರಗಲ್ಲಿನಿಂದ ಬೇರ್ಪಡಿಸುವ ಸಲುವಾಗಿ ಇನ್ನು ಮೇಲೆ ಹೀಗೆ ಕರೆಯುವುದು ಉಚಿತ.

೧೫೦. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ) ಪು. ೩೦೯.

೧೫೧. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (ಡಾ. ಎಂ. ಚಿದಾನಂದಮೂರ್ತಿ) ಚಿತ್ರ ೧೧ಎ

೧೫೨. ಈ ಶಿಲ್ಪದ ಚಿತ್ರ ನನ್ನ ಸಂಗ್ರಹದಲ್ಲಿದೆ.

೧೫೩. EC VII ಶಿಕಾರಿಪುರ ೧೫೨. ಬಳ್ಳಿಗಾವೆ (ಕ್ರಿ.ಶ. ೧೦೬೦)

೧೫೪. EC. III ತಿರುಮಕೂಡಲು ನರಸೀಪುರ ೯೧, ದೊಡ್ಡಹುಂಡಿ (ಕ್ರಿ.ಶ. ೮೪೦)

೧೫೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಎಂ.ಚಿದಾನಂದಮೂರ್ತಿ) ಪು. ೩೦೬

ಸಾಹಿತ್ಯದೃಷ್ಟಿಯಿಂದ ವೇಳವಾಳಿ ಕಲ್ಲುಗಳು ತುಂಬ ಅತೃಪ್ತಿಯನ್ನುಂಟುಮಾಡುತ್ತವೆ. ರೋಮಾಂಚನಗೊಳಿಸುವ ಈ ಘಟನೆಗಳನ್ನು ನಿರೂಪಣರೂಪದ ಗದ್ಯದಲ್ಲಿ ಬರೆದಿರುವುದೇ ಅಧಿಕಲ ಸಲ ತೋರಿಬರುತ್ತದೆ. ಕುವರಲಕ್ಷ್ಮನನ್ನು ಕುರಿತ ಹಳೇಬೀಡು ಶಾಸನ, ಶಂಭುವಿನ ಅಗ್ನಿಪ್ರವೇಶಗಳನ್ನು ಹೇಳುವ ಕೋಟೂರಿನ ಶಾಸನಗಳು ಮಾತ್ರ ಸನ್ನಿವೇಶಕ್ಕೆ ತಕ್ಕಂತೆ ಬರೆಯಲ್ಪಟ್ಟಿವೆ.

ಇಲ್ಲದ ಸಲ್ಲದ ಭಾಷೆಗೆ
ಕಲ್ಲಂ ನಿಱಿಸುವರನುಱಿದೆ ನಗುವವೊಲಿರ್ಕುಂ
ಪಲ್ಲವಿಸಿ ಕುವರಲಕ್ಷ್ಮನ
ಕಲ್ಲ ಕವಲ್ತೆಸೆವ ಕಾಂತಿ ದಿಗ್ಭಿತ್ತಿಗಳೊಳ್ ॥

ಎಂಬ ಹಳೆಬೀಡು ಶಾಸನದ ಪದ್ಯವಂತೂ ಶಾಸನಪ್ರಪಂಚದ ಅಪರೂಪ ಅಭಿವ್ಯಕ್ತಿಯೆನಿಸಿದೆ. ಕೋಟೂರು ಶಾಸನ

ಪೊಗಟಲ್ಕಳುಂಬಮಪ್ಪೊ
ಳ್ಪುಗಳನೆ ತನಗವನೆ ಶಾಶ್ವತಂ ಮಾಡಿ ಧಗ
ದ್ಧಗಿತ ಶಿಖಿ ಸೆಕೆಯ ಕೊಳೆ ನಗೆ
ಮೊಗದಿಂ ಶಂಭುವನೆ ಶಂಭು ನೆನೆಯುತ್ತಿರ್ದಂ ॥

ಮುನ್ನೆಗಟ್ಟಿ ವೇಳೆವಡಿಚರು
ವಿನ್ನಪ್ಪೊರುಮೀಗಡುಳ್ಳೊರುಂ ಬಗೆವೊಡವರ್
ನಿನ್ನನ್ನರೆ ನಿನ್ನನ್ನರೆ
ನಿನ್ನನ್ನರೆ ನಿನಗೆ ನೀನೆ ದೊರೆಯಯ್ ಶಂಭೂ ॥

ಎಂದು ವೇಳವಾಳಿ ಶಂಭುವಿನ ರಾಜಭಕ್ತಿಯನ್ನು ಚಿತ್ರವತ್ತಾಗಿ ವರ್ಣಿಸುತ್ತದೆ. ಬಾಚಹಳ್ಳಿ ಶಾಸನೋಕ್ತ ಪದ್ಯಗಳನ್ನೂ ಇಲ್ಲಿ ಗಮನಿಸಬಹುದು. ಅದೇನೇ ಇದ್ದರೂ ಈ ಶಾಸನಗಳು ಸಾಹಿತ್ಯ ದೃಷ್ಟಿಯಿಂದಲ್ಲ; ಸಾಮಾಜಿಕ ದೃಷ್ಟಿಯಿಂದ ಮುಖ್ಯವಾದವು.

❖❖

ಅಧ್ಯಾಯ : ಮೂರು

ವೀರಮರಣ - ವೀರಮರಣ ಸ್ಮಾರಕಗಳು

ವೀರಮರಣ - ವೀರಮರಣ ಸ್ಮಾರಕಗಳು

ಧ್ಯಾನ, ದಾನ ಮೊದಲಾದ ಧರ್ಮಮಾರ್ಗಗಳಲ್ಲಿ ನಡೆವ 'ಧರ್ಮವೀರ'ನಿಗೆ ಸಾಧ್ಯವಾಗುವ ಮೋಕ್ಷಸಾಧನೆಯು ಧಾರ್ಮಿಕ ಬಲಿದಾನ ಮತ್ತು ಲೌಕಿಕ ಬಲಿದಾನ ಮಾರ್ಗಗಳಿಂದಲೂ ಸಾಧ್ಯವೆಂಬ ಭಾವನೆ ಬೆಳೆದು, ಕೊನೆ ಕೊನೆಗೆ ಯುದ್ಧಮಾರ್ಗದಲ್ಲಿ ಮಡಿದ 'ಯುದ್ಧವೀರ'ನಿಗೂ ಸಾಧ್ಯವೆಂಬ ವಿಸ್ತಾರ ಪಡೆಯಿತು. ಗ್ರಾಮರಕ್ಷಣೆ, ದೇಶರಕ್ಷಣೆಯ ಆವಶ್ಯಕತೆ ಅಧಿಕವಾದಂತೆ, ಕ್ಷತ್ರಿಯರ ಭೂದಾಹ ಹೆಚ್ಚಿದಂತೆ

ಜಿತೇನ ಲಭ್ಯತೇ ಲಕ್ಷ್ಮೀ ಹತೇನಾಪಿ ಸುರಾಂಗನಾ
ಕ್ಷಣವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇ ರಣೇ ||[೧೫೫]

ಇವೇ ಮೊದಲಾದ ಘೋಷಣೆಗಳು ಹುಟ್ಟಿಕೊಂಡು, 'ಧರ್ಮವೀರ'ನಿಗೆ ಸಮಾನವಾದ ಸ್ಥಾನ 'ಯುದ್ಧವೀರ'ನಿಗೂ ಲಭಿಸಿತು; ಅವನಿಗಾಗಿ ವೀರಸ್ವರ್ಗದ ಕಲ್ಪನೆ ಆಕಾರ ಪಡೆಯಿತು. ಇದರ ಸ್ವರೂಪವನ್ನು "ವೈದ್ಯುತವೆಂಬ ನಾಲ್ಕನೆಯ ಪವನಾಧಾರದ ಮೇಘಾಶ್ರಯದ ಪಟ್ಟಣದಲ್ಲಿ ಸುರಪನಾಣತಿಯ ಅಪ್ಸರರೆನಿಸುವ ವೀರದೇವತೆಗಳಿಹರಲ್ಲಿಗೀ ನರಲೋಕದ ಕಮರಿ, ಅಗ್ನಿ, ಜಲ, ಸಂಗ್ರಾಮ, ಗೋಗ್ರಹಾದಿಗಳಲ್ಲಿ ಪರಾಕ್ರಮದಿಂದಳಿದವರನಲ್ಲಿಯ ದೇವಕನ್ನಿಕೆಯರನಂತ ಸಂಭ್ರಮದಿಂ ಮಣಿಖಚಿತ ವಿಮಾನದಿಂದೊಯ್ವರದೆ ವೀರಸ್ವರ್ಗನಕ್ಕುಂ"[೧೫೬] ಎಂಬ ವಿವೇಕಚಿಂತಾಮಣಿಯ ಹೇಳಿಕೆಯಿಂದ ಅರಿಯಬಹುದು. ಈ ವೀರಮರಣ - ವೀರಸ್ವರ್ಗಗಳ ಮೌಲ್ಯ ಪ್ರಸಾರಕ್ಕಾಗಿ ಪ್ರಾಚೀನರು ಕಾವ್ಯಗಳನ್ನು, ಶಾಸನಗಳನ್ನು ಮಾಧ್ಯಮವನ್ನಾಗಿ ಬಳಸಿಕೊಂಡರು. ಇದರ ಫಲ ವೀರಕಾವ್ಯಗಳು, ವೀರಶಾಸನಗಳು.

ಉತ್ತರದ ಗೂರ್ಜರ - ಚೇದಿಯರೊಂದಿಗೆ ಒಂದು ಕೈಯಿಂದ, ದಕ್ಷಿಣದ ಚೋಳ-ಚೇರರೊಂದಿಗೆ ಇನ್ನೊಂದು ಕೈಯಿಂದ ಹೋರಾಡುವುದು ಕನ್ನಡಿಗರಿಗೆ ಅನಿವಾರ್ಯವಾಗಿದ್ದುದರಿಂದ ಪ್ರಾಚೀನ ಕರ್ನಾಟಕ "ದಕ್ಷಿಣಭಾರತದ ಯುದ್ಧಭೂಮಿ"ಯಾಗಿ ಪರಿಣಮಿಸಿತು. ಜಗತ್ಪ್ರಸಿದ್ಧ ಯುದ್ಧಗಳು ಜರುಗುವುದರೊಂದಿಗೆ ಆಂತರಿಕ ಕಲಹಗಳೂ ಎಡೆಪಡೆದು ವೀರಪ್ರಜೆಗಳ ಆವಶ್ಯಕತೆ ಅಧಿಕವಾಯಿತು. ಹೀಗಾಗಿ ವೀರಜೀವನವನ್ನು ಪ್ರತಿಪಾದಿಸಲು ವಿಕ್ರಮಾರ್ಜುನವಿಜಯ, ಸಾಹಸಭೀಮವಿಜಯಗಳಂತಹ ಕೃತಿಗಳೂ ವೀರಘಟನೆಗಳನ್ನು ಪ್ರತಿನಿಧಿಸಲು ಸಾವಿರಾರು ವೀರಗಲ್ಲುಗಳೂ ನಾಡಿನ ತುಂಬ ತಲೆಯೆತ್ತಿ ನಿಂತವು. ಸಮಕಾಲೀನ ಸಮಾಜದಿಂದ ಈ ಸಾಹಿತ್ಯ ಪ್ರೇರಣೆ ಪಡೆದಂತೆ, ಈ ಸಾಹಿತ್ಯದಿಂದಲೂ ಸಮಕಾಲೀನ ಸಮಾಜ ಪ್ರೇರಣೆ ಪಡೆಯಿತು. ಹೀಗಾಗಿ ಆಗಿನ ಜನರು 'ಜೀವಮುಳ್ಳಿನಂ ಇಱಿವುದು ಅರ್ಥಮುಳ್ಳಿನಂ ಈವುದು' ಎಂಬ ಮಾತನ್ನು ಮಂತ್ರವಾಗಿ

---

೧೫೫. ಹತೋ ವಾ ಪ್ರಾಪ್ಯಸಿ ಸ್ವರ್ಗಂ । ಜಿತ್ವಾ ವಾ ಭೋಕ್ಷ್ಯಸೇ ಮಹಿಮ್ ||
ತಸ್ಮಾದುತ್ತಿಷ್ಠ ಕೌಂತೇಯ । ಯುದ್ಧಾಯ ಕೃತನಿಶ್ಚಯಃ ||
ಭಗವದ್ಗೀತೆಯ ಈ ಶ್ಲೋಕ (II-೩೭) ವನ್ನು ಹೋಲಿಸಿರಿ.

೧೫೬. ವಿವೇಕಚಿಂತಾಮಣಿ (ಸಂ. ಪ್ರೊಜಿ. ಎಂ. ಉಮಾಪತಿಶಾಸ್ತ್ರಿ) ಪು. ೨೧೨

ಗ್ರಹಿಸಿದರು; ತಾಯಿ ವೀರಮಾತೆಯೆನಿಸಿಕೊಳ್ಳಲು, ಹೆಂಡತಿ ವೀರಪತ್ನಿಯೆನಿಸಿಕೊಳ್ಳಲು ತವಕಿಸಿದರು. 'ವಿಸಸನದೊಳ್ ವಿರೋಧಿ ನೃಪರಂ ತಱಿದೊಟ್ಟಲ್... ಕರಂ ನೆಱೆವ ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದಿಕ್ಷುಪುಷ್ಪದವೊಲೆನ್ನಯ ನಿಷ್ಫಲ ಪುಷ್ಪದರ್ಶನಂ'[೧೫೭] ಎಂಬ ಕುಂತಿಯ ಮಾತಿನಲ್ಲಿ,

> ಮಣಿಕನಕಂ ವಸ್ತುವಿಭೂ
> ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡರ್
> ಗುಣಮನೆ ನಿನ್ನಂತೆ ಮೆಱೆವುದು ಶಸ್ತ್ರ
> ವ್ರಣಮಂ ನಿನ್ನಂತೆ ಮೆಱೆವುದಿಱಿವಬೆಡಂಗಾ ॥[೧೫೮]

ಎಂಬ ದ್ರೌಪದಿಯ ಮಾತಿನಲ್ಲಿ ೧೦ನೆಯ ಶತಮಾನದ ಕನ್ನಡಿತಿಯರ ವಿರೋಚಿತ ಧ್ವನಿ ಕೇಳಿಬರುತ್ತದೆ. ಇಂಥ ಭಾವನೆ ಕಾರಣವಾಗಿ ಸಮಾಜದಲ್ಲಿ ವೀರಪಡೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದಿತು. "ಆಯುಧಯುಕ್ತನಂ .... ಮೆಚ್ಚುದರಾರ್"?[೧೫೯] "ಆಭರಣದೊಳಗೆ ತಾನೊಂದಾಭರಣಂ ಸುರಿಗೆ'[೧೬೦] ಎಂಬ ಮಾತು-ರೀತಿಗಳು ಸಮಾಜದಲ್ಲಿ ಜೀವಂತವಾಗಿದ್ದವು. ಇಂಥ ಸಮಾಜವನ್ನು ಕಾಣಿಸಿಕೊಡುವ ಒಂದು ಸಣ್ಣ ಕಿಂಡಿಯೆನಿಸಿದೆ, ಪಂಪಭಾರತದ ಪಾಂಡವರ ಪಾಳೆಯದಲ್ಲಿ ಯುದ್ಧದ ಹಿಂದಿನ ರಾತ್ರಿ ಸ್ವಾಮಿ-ಭೃತ್ಯ, ಪತಿ-ಪತ್ನಿಯರ ನಡುವೆ ಜರುಗಿದ ಸಂಭಾಷಣೆ. ಒಡೆಯನ ಸಮ್ಮುಖದಲ್ಲಿ ನಿಂತು ಒಬ್ಬ, ನಾಳೆ ರಣದಲ್ಲಿ ರುಂಡಹೋದರೂ ಮುಂಡವನ್ನು ಮುನ್ನಡೆಸಿ ಹೋರಾಡುವೆನೆಂದರೆ; ಇನ್ನೊಬ್ಬ ನಿನ್ನ ಪೋಷಣೆ-ನನ್ನ ಪರಾಕ್ರಮಗಳನ್ನು ವೈರಿ ಗಜದಂತ ತಕ್ಕಡಿಯಲ್ಲಿ ತೂಗಿ ತೋರಿಸುತ್ತೇನೆ ಎನ್ನುತ್ತಾನೆ. ಒಬ್ಬ "ಇಱಿಯದಿರ್ದೊಡೆ ಜೋಳಮನೆಂತು ನೀಗುವೆಂ" ಎಂದು ವಾದಿಸಿದರೆ; ಇನ್ನೊಬ್ಬ "ಗೆಲ್ದನಂ ಶ್ರೀವಧು ಪತ್ತುಗಂ ಮಡಿದನಂ ದೇವಾಂಗನಾನೀಕಮುತ್ಸವದಿಂದುಯ್ಗುಂ"[೧೬೧] ಎಂಬ ಪರಮಮೌಲ್ಯವನ್ನು ಸಾರುತ್ತಾನೆ.

"ಈ ಪೊಟ್ಟೆ ಪೊಟ್ಟು ನಾಳೆ ದೇವಲೋಕದ ಕನ್ನೆಯರೋಲಗದೊಳಿರ್ಪೆಂ" ಎಂದು ಗಂಡ ಹೇಳಿದರೆ, ಆತನ ಗೆಲುವಿನ ಭರವಸೆಯುಳ್ಳ ಹೆಂಡತಿ "ನೀನೆಂದಂತು ಪೋಗಲ್ ತೀರದು, ನಾಳೆ ಮಗುಟ್ದು ಬಂದೆನ್ನೊಳ್ ನೆರೆವೆ" ಎಂದು ನುಡಿಯುತ್ತಾಳೆ. ಒಬ್ಬಳಂತೂ

> ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
> ಣ್ಬಾಂ ಗಡಮಿರ್ಪೆನಂತನಿತು ಬೆ(ಳ್ಳ)ನೆ ಮುನ್ನಮೆ ಪೋಗಿ ನಲ್ಮೆಗೆ
> ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವೊ ಸ
> ಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳಟ್ಟಿಯನಾಗಲೀವೆನೇ ॥

ಎಂದು ನುಡಿದು, ಗಂಡ ವೀರಸ್ವರ್ಗವೇರುವ ಮೊದಲೇ ಮಹಾಸತಿಯಾಗಿ ಅವನನ್ನು ಸ್ವರ್ಗದಲ್ಲಿ ಎದುರುಗೊಳ್ಳಲು ನಿಶ್ಚಯಿಸುತ್ತಾಳೆ. ಇನ್ನೊಬ್ಬಳು 'ಸಮುದ್ರದಲ್ಲಿ ಸಿಗುವ ಮುತ್ತುಗಳು ಸಾಕು. ವೈರಿ ಗಜಗಳ ಮಸ್ತಕದ ಮುತ್ತು ಬೇಕು, ನಾಳೆ ತೆಗೆದುಕೊಂಡು ಬಾ"ಯೆಂದು ಗಂಡನಿಗೆ ನಗೆನುಡಿಯಾಡುತ್ತಾಳೆ.

---

೧೫೭. ಪಂಪಭಾರತಂ : ೧-೧೧೭

೧೫೮. ಗದಾಯುದ್ಧ ಸಂಗ್ರಹ (ತೀ.ನಂ. ಶ್ರೀ)೨-೨೧.

೧೫೯. ಕವಿರಾಜಮಾರ್ಗಂ ೧-೧೨೩.

೧೬೦. ಸಮಯಪರೀಕ್ಷೆ (೧೯೫೮) ೫-೧೨೭

೧೬೧. ಪಂಪಭಾರತಂ : ೧೦-೩೯ ರಿಂದ ೪೬

ಕಾವ್ಯಗಳಲ್ಲಿ ಬರುವ ಇಂಥ ಸನ್ನಿವೇಶಗಳು ಆ ಕಾಲದ "ಯುದ್ಧವೀರ" ಸಮಾಜದ ಮನಸ್ಸನ್ನು ಸ್ಪಷ್ಟಪಡಿಸುತ್ತವೆ.[೧೬೨]

ಈ "ಯುದ್ಧವೀರ"ರಲ್ಲಿ ಅಪೇಕ್ಷಣೀಯವಾದುದು ಕೇವಲ ಪಶುಶಕ್ತಿಯಲ್ಲ; ಅವರಿಗೆ ಶಕ್ತಿ ಸ್ಥಾಯಿ, ಮಿಕ್ಕ ಸದ್ಗುಣಗಳು ಸಂಚಾರಿ. "ಏಗೆಯ್ವುದೋ ಶುಚಿಯಿಲ್ಲದವನ ಗಂಡುಂ ತೊಂಡುಂ" ಎಂಬ ಮಾತು ಶೌರ್ಯಕ್ಕೆ ಶುಚಿತ್ವದಿಂದ ಬೆಲೆ ಬರುವುದೆಂದು ಸಾರುತ್ತದೆ. ಪಂಪನು ಶರಶಯನರಾದ ಭೀಷ್ಮರನ್ನು "ಅಟ್ಟವಣಿಕೋಲ್ಗಳ ಮೇಲೆಸೆದಿರ್ದ ವೀರಸಿದ್ಧಾಂತದ ಶಾಸನಂ ಬರೆದ ಪೊತ್ತಗೆಯಂತಮರಾಪಗಾತ್ಮಜಂ"[೧೬೨] ಎಂದು ವರ್ಣಿಸುವಲ್ಲಿ ಆತನನ್ನು "ವೀರಸಿದ್ಧಾಂತ"ದ ವ್ಯಕ್ತಿರೂಪವೆಂದು ಕರೆದಿರುವನು. "ವೀರಸಿದ್ಧಾಂತದ ಪೊಸ್ತಕದ ಠವಣೆ ಕೋಲೊಳಗೆ ... ಯನಾಸೆವಟ್ಟು ಕಲಿ ಬೀರನಮೆಯ್ವಿದ ದೇವಲೋಕವನು"[೧೬೩] - ಇಂಥ ಶಾಸನೋಲ್ಲೇಖಗಳೂ "ವೀರಸಿದ್ಧಾಂತ" ತತ್ವದ ದಟ್ಟ ಪ್ರಸಾರವನ್ನು ಸ್ಪಷ್ಟಪಡಿಸುತ್ತವೆ. ಈ ವೀರಸಿದ್ಧಾಂತಕ್ಕೆ ವಿವರಣೆ ನೀಡುತ್ತದೆ, ಹರಿವಂಶಾಭ್ಯುದಯ. ಯುದ್ಧದ ಹಿಂದಿನ ರಾತ್ರಿ, ರಣಕುತೂಹಲಿಗಳಾದ ಕಾರಣ ನಿದ್ರೆ ಬಾರದ ಕರ್ಣನ ಪಾಳೆಯದ ಸೈನಿಕರು ತಮ್ಮತಮ್ಮಲ್ಲಿ "ವೀರಸಿದ್ಧಾಂತ"ವನ್ನು ಕುರಿತು ಚರ್ಚಿಸುತ್ತಲಿದ್ದಾರೆ. ಅವರ ಚರ್ಚೆಯ ಫಲನೆನಿಸಿದ

ಕಲಿತನಭಿಮಾನಂ ನಿ
ರ್ಮಳ ಧರ್ಮಂ ತ್ಯಾಗಮೆಸೆವ ಸತ್ಯಂ ಶೌಚಂ
ನೆಲಸಿರ್ದೀ ಗುಣಮಾಱುಂ
ನೆಲೆಯುಳ್ಳಂ ತುೞಿಲಸಂದನಲ್ಲದಡಲ್ಲಂ ||

ಎಂಬ ಪದ್ಯ "ವೀರಸಿದ್ಧಾಂತಿ" (=ತುೞಿಲಸಂದ)ಯು ಷಡ್ಗುಣಸಂಪನ್ನನಾಗಿರಬೇಕೆಂದು ಸಾರುತ್ತದೆ.[೧೬೪] ಇಂಥ ವೀರವನ್ನು ಅನುಷ್ಠಾನಗೊಳಿಸುವುದೇ ಆ ಕಾಲದ ವೀರರ ಆದರ್ಶವಾಗಿದ್ದಿತು.

ಕರ್ನಾಟಕದಲ್ಲಿ ಈ ವೀರಸ್ತೋಮ ಮೂರು ವಿಧವಾಗಿದ್ದಿತು. ಒಂದು :ಗ್ರಾಮದ ಪ್ರಜಾ ಸಮೂಹ, ಎರಡು : ಗ್ರಾಮದ ಕಾಯ್ದಿಟ್ಟಪಡೆ , ಮೂರು : ರಾಜನ ಸೈನ್ಯಪಡೆ, ಗ್ರಾಮದ ಪ್ರಜಾಪರಿವಾರ ಸ್ವಯಂ ವೀರರು. ಗ್ರಾಮದ ಕಾಯ್ದಿಟ್ಟಪಡೆ, ಅರಸನಿಂದ "ಅಣುಗಜೀವಿತ"ವನ್ನು ಭೋಗಿಸುತ್ತ ಸ್ವಗ್ರಾಮಗಳಲ್ಲಿದ್ದು ಯುದ್ಧಪ್ರಸಂಗದಲ್ಲಿ ಮಾತ್ರ ರಾಜನ ನೆರವಿಗೆ ಹೋಗುವವರು. ಇವರನ್ನು ಶಾಸನಗಳು ಲೆಂಕಸಾಸಿರ್ವರು, ಬಂಟಸಾಸಿರ್ವರು ಎಂದು ಕರೆದಿವೆ.[೧೬೫] ರಾಜನ ಸೈನ್ಯ ಪಡೆಯವರು ವೃತ್ತಿವೀರರು. ಕನ್ನಡ ನಾಡಿನಲ್ಲಿ ಈ ವೃತ್ತಿವೀರರ ಸಂಬಳ ಮೂಲತಃ ಜೋಳವೇ ಆಗಿರಬೇಕು.

ಬೇಟೌಗದೆ ನೆಲದರಸರು
ಜೋೞಕ್ಕಾಪ್ಪರೆಂದು ಗುರು ಕೈಕೊಂಡಾ
ಜೋೞಮನೆ ಬೆಳೆಯಿಕುಂ ಗಡ
ಜೋೞಕಗ್ಗಳದ ಧಾನ್ಯಮುಂ ಪೆಱತುಂಟೇ ||[೧೬೬]

---

೧೬೨. ಪಂಪಭಾರತಂ : ೧೧-೪೬

೧೬೩. EC. VIII ಸಾಗರ ೧೪೭,. ಹೊಸಗುಂದ (ಕ್ರಿ.ಶ. ೧೨೫೦)

೧೬೪. ಹರಿವಂಶಾಭ್ಯುದಯ : ೧೧-೮೧ (ಸಾಧನೆ ೬-೧ರಲ್ಲಿ ಪ್ರಕಟವಾದ 'ವೀರಸಿದ್ಧಾಂತ' ಎಂಬ ನನ್ನ ಲೇಖನವನ್ನು ನೋಡಿರಿ.).

೧೬೫. ಕರ್ನಾಟಕ ಭಾರತಿ :೧೦-೧ 'ಆಯುಧಜೀವಿಗಳ ಸಂಘಗಳು'

೧೬೬. ವೀರಾವಳಿ (ವಜ್ರಭಟ್ಟ) ೭-೧೨ ಅಪ್ರಕಟಿತ.

ಎಂಬ ವಜ್ರಭಟ್ಟನ 'ವೀರಾವಳಿ'ಯ ಮಾತನ್ನು ಇಲ್ಲಿ ಲಕ್ಷಿಸಬೇಕು. ಹೀಗೆ ಯುದ್ಧದಲ್ಲಿ ಭಾಗವಹಿಸುವುದಕ್ಕೋಸುಗ ಅರಸನಿಂದ ಜೋಳಪಡೆಯುತ್ತಿದ್ದವರೇ ಜೋಳವಾಳಿಗಳು. ಕಾಲಕ್ರಮದಲ್ಲಿ ಯಾವುದೇ ರೂಪದ ಸಂಬಳವನ್ನು 'ಜೋಳ' ಎಂದೂ, ಯಾವುದೇ ರೂಪದ ಸಂಬಳ ಪಡೆಯುವವರನ್ನು 'ಜೋಳವಾಳಿ' ಎಂದೂ ಲಕ್ಷ್ಯಾರ್ಥದಲ್ಲಿ ಕರೆಯತೊಡಗಿದಂತಿದೆ.

ತೋಳೊಂದಕೆ ಹನ್ನೆರಡು ಸಾವಿರ ಹೊನ್ನ
"ಜೋಳವ"ವ ಕೊಂಬ ರಾಹುತರ
ಮೇಳದಿಂದವನೊಡನೆಯ್ತಂದರು ಸುರ
ತಾಳನ ಮೈಗಾವಲವರು ||[೧೬೭]

ಎಂಬ ಪದ್ಯದಲ್ಲಿ 'ಹೊನ್ನ' ರೂಪದ ಸಂಬಳಕ್ಕೂ "ಜೋಳ" ಎಂದು ಕರೆದುದನ್ನು ಗಮನಿಸಬೇಕು. ಹೀಗೆ ಜೋಳವನ್ನು ಪಡೆದು, ಅದಕ್ಕೆ ತಪ್ಪಿದರೆ ನರಕಪ್ರಾಪ್ತಿಯೆಂದು ಅವರ ಭಾವನೆಯಾಗಿದ್ದಿತು. ಪಂಪಭಾರತದ ಕರ್ಣ "ಜೋಳಕ್ಕೆ ತಪ್ಪಿಯುಮಿಂ ಬಾಳ್ವುದೇ"[೧೬೮] ಎಂದು ಹೇಳಿದರೆ, ಅನೇಕ ಶಾಸನಗಳು ಯುದ್ಧದಲ್ಲಿ ಹಿಮ್ಮುಖನಾಗುವವನನ್ನು 'ಜೋಳಗಳ್ಳ' ಎಂದು ಕರೆದಿವೆ.[೧೬೯] ಹೀಗಾಗಿ ವ್ಯಕ್ತಿ, ಸಮಾಜ, ದೇಶಗಳಿಗೆ ಅಪಾಯ ಒದಗಿದ ಸಂದರ್ಭಗಳಲ್ಲಿ ವೀರರು ಕಾದಿ ವೀರ ಸ್ವರ್ಗವೇರುತ್ತಿದ್ದರು. ಸಮಾಜ ಅವರಲ್ಲಿ ದೈವತ್ವವನ್ನು ಭಾವಿಸಿಕೊಳ್ಳುತ್ತಿದ್ದಿತು. ಆದರೆ ಜೈನನಾದ ಬ್ರಹ್ಮಶಿವನು ಮಾತ್ರ

........ತುಱುಗೋಳೊಳ್ ಸ
ತ್ತಱನಾಗಳಂತೆ ಬೇಗಂ
ಸುಱಗಣಿಕೆಯರೊಯ್ವರೆಂಬರಱಿವಿಲ್ಲದವರ್ ||[೧೭೦]

ತುಱುಗೋಳೊಳ್ ತಳ್ತ ಪುಯ್ಯಲೊ
ಳೆಱೆಯನ ಕಾರ್ಯದೊಳಮಣ್ಮಿ ಸತ್ತವನಂ ಕಂ
ಡೆಱಗಿ ಬಳಿಕವನ ನೆತ್ತರೊ
ಳಱಿವಿಂದೆ ಬೊಟ್ಟನಿಟ್ಟುಕೊಳುವರ್ ಮೂಢರ್ ||[೧೭೧]

ಎಂದು ಈ ಹಿಂದೂಮರಣವನ್ನು ಅವಿವೇಕದ ಆಚರಣೆಯೆಂದು ತೆಗಳುತ್ತಾನೆ. ಆದರೆ ಜೈನಮತದ ಪ್ರಕಾರ ಸಮಾಧಿಮರಣದಿಂದ ಮಾತ್ರ ಸ್ವರ್ಗಪ್ರಾಪ್ತಿಯಾಗುವುದರಿಂದ ಜೈನ ವೀರರು ಸಲ್ಲೇಖನವ್ರತ ಹಿಡಿದು ರಣಾಂಗಣದಲ್ಲಿ ಹೋರಾಡುತ್ತ ಸಮಾಧಿ ಮರಣ ಹೊಂದುತ್ತಿದ್ದುದಕ್ಕೆ ನಿಂಬಸಾಮಂತ ನಿದರ್ಶನವೆನಿಸಿರುವನು.[೧೭೨] ಇಲ್ಲಿ ಹಿಂದೂ ವೀರ ಮರಣ ಜೈನ ಸಮಾಧಿಮರಣಗಳ ಸೂಕ್ಷ್ಮ ಒಪ್ಪಂದವನ್ನು ಕಾಣಬಹುದು. ಹೀಗಿದ್ದರೂ ಹಿಂದುಗಳ ವೀರಮರಣ ಸಂಪ್ರದಾಯಕ್ಕೆ ಜೈನರು ಒಳಗಾಗಿದ್ದುದನ್ನು ನೆನೆದರೆ ವೀರಮರಣದ ಪರಿಭಾವನೆ ಆ ಕಾಲದಲ್ಲಿ ಎಷ್ಟು ಬಲವತ್ತರವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ಮೂರೂ ಪಡೆಯವರು ರನ್ನನ ಪ್ರಕಾರ

---

೧೬೭. ರಾಮನಾಥ ಚರಿತೆ. ೪೨-೪೭

೧೬೮. ಪಂಪಭಾರತ ೯-೮೪.

೧೬೯. EC. II ಶ್ರಣಬೆಳ್ಗೊಳ ೧೩೪ (ಕ್ರಿ.ಶ. ೯೮೨).

೧೭೦. ಸಮಯಪರೀಕ್ಷೆ (೧೯೫೮) ೯-೩೪

೧೭೧. ಸಮಯಪರೀಕ್ಷೆ (೧೯೫೮) ಅನುಬಂಧ ೧-೩೧.

ತುಱುಗೋಳೊಳ್ ಪೆಣ್ಬುಯ್ಯಲೊ
ಳೆಱಿವೆಸದೊಳ್ ನಣ್ಪನೆಡರೊಳೂರಳಿವಿನೊಳಂ
ತಱಿಸಂದು ಗಂಡುತನಮನೆ
ನೆಱಿಪದವಂ ಗಂಡನಲ್ಲನೆಂತುಂ ಷಂಡಂ ||[೧೭೩]

ಅಂದರೆ ಒಂದು : ತುಱುಗೋಳ್, ಎರಡು : ಪೆಣ್ಬುಯ್ಯಲ್, ಮೂರು : ಎಱವೆಸ, ನಾಲ್ಕು :ನಂಟನೆಡರು. ಐದು : ಊರಳಿವು - ಈ ಪ್ರಸಂಗಗಳಲ್ಲಿ ಹೋರಾಡಿ ಸಾಯುತ್ತಿದ್ದರು. ಇವುಗಳಲ್ಲಿ ಎಱವೆಸ (ರಾಜಕಾರ್ಯ) ಕಡ್ಡಾಯ, ಮಿಕ್ಕುವು ಐಚ್ಛಿಕವಾಗಿದ್ದು, ನಮ್ಮ ನಾಡಿನಲ್ಲಿ ಈ ಎಲ್ಲ ಪ್ರಸಂಗಗಳಿಗೆ ಸಂಬಂಧಪಟ್ಟ ವೀರಗಲ್ಲುಗಳು ಸಿಗುತ್ತವೆ.

ತುಱುಗೋಳ್ : ಗೋವು, ಪ್ರಾಚೀನ ಭಾರತೀಯರಿಗೆ ವಿನಿಮಯದ ಪ್ರಧಾನ ವಸ್ತುವಾಗಿದ್ದಿತು. ಆಗ ಒಂದು ಆಕಳ ಬೆಲೆ ಪರಮೋಚ್ಚನಾಣ್ಯವಾದ ಒಂದು 'ಸುವರ್ಣ'ಕ್ಕೆ ಸಮಾನ. ಈ ಕಾರಣದಿಂದಲೇ ಸಂಪತ್ತಿನ ಸಾಲಿನಲ್ಲಿ 'ಗೋಧನ'ವೂ ಪರಿಗಣಿತವಾಯಿತು. ಪಂಪಭಾರತದ "ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡು ವೆಣ್ಗಂ ಲೆಕ್ಕಮಿಲ್ಲ"[೧೭೪] ಎಂಬ ಮಾತಿನಲ್ಲಿಯ 'ಜೀವಧನ' ಎಂಬುದಕ್ಕೆ 'ಆಕಳು' ಎಂದೇ ಅರ್ಥ. ಹೀಗೆ 'ಮೌಲಿಕ'ವೆನಿಸಿದ ಆಕಳು ಸ್ವಾಭಾವಿಕವಾಗಿ ಕ್ರಮೇಣ 'ಪೂಜ್ಯತೆ'ಯನ್ನು ಪಡೆದಾಗ, ಅದರ ಬಗ್ಗೆ ಭಾರತೀಯನ ಭಾವನೆ ತುಂಬ ಪವಿತ್ರವಾಯಿತು. ಇದರ ಸೆರೆ ಲೌಕಿಕವಾಗಿ ದೊಡ್ಡ ಹಾನಿಯೆನಿಸಿದರೆ, ಸೆರೆಹಿಡಿದುದುನ್ನು ನೋಡುತ್ತ ನಿಲ್ಲುವುದು ಪಾರಲೌಕಿಕವಾಗಿ ದೊಡ್ಡ ಪಾಪವೆನಿಸಿತು. ಹೀಗಾಗಿ 'ತುರುಸೆರೆ' ಪ್ರಸಂಗದಲ್ಲಿ ಹೋರಾಡುವುದು ವ್ಯಕ್ತಿಜೀವನದ ಅದರಲ್ಲಿಯೂ ವೀರವ್ಯಕ್ತಿ ಜೀವನದ 'ಕರ್ತವ್ಯ'ವೆನಿಸಿತು. ವೀರರಾದ ಪಾಂಡವರನ್ನು ಅಜ್ಞಾತವಾಸದಿಂದ ಪ್ರಕಟಗೊಳಿಸುವಲ್ಲಿ ಕೌರವನು ವಿರಾಟನ ಗೋವು ಸೆರೆಹಿಡಿದುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಮಹಾಭಾರತದ ಈ ವಿರಾಟಪರ್ವದ ಕಾಳಗ 'ತುರುಗೋಳ್' ಯುದ್ಧವೇ ಆಗಿದ್ದು, ನಮ್ಮ ದೇಶದಲ್ಲಿ ತುರುಗೋಳ್ ಯುದ್ಧಘಟನೆ ಅಷ್ಟು ಪ್ರಾಚೀನಕ್ಕೆ ಹೋಗುತ್ತದೆ.

ಕರ್ನಾಟಕಕ್ಕೆ ಬಂದರೆ ತುರುಗೋಳ್ ಯುದ್ಧದ ಬಗ್ಗೆ ಮಾಹಿತಿ ಸಿಗುವುದು ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ. ಹಿಂದೂ ಮಹಾಭಾರತ, ಜೈನ ಮಹಾಭಾರತ ಕೃತಿಗಳಾದ ಪಂಪಭಾರತ, ಕುಮಾರವ್ಯಾಸಭಾರತ, ಕರ್ಣಪಾರ್ಯನ ನೇಮಿನಾಥ ಪುರಾಣ, ಬಂಧುವರ್ಮನ ಹರಿವಂಶಾಭ್ಯುದಯಗಳಲ್ಲಿ ಬರುವ ವಿರಾಟಪರ್ವದ ಗೋಗ್ರಹಣಪ್ರಸಂಗಗಳು 'ತುಱುಗೋಳ್' ತಿಳುವಳಿಕೆಗೆ ತುಂಬ ನೆರವಾಗುತ್ತವೆ. ಪಂಪಭಾರತದ

ತುಱು ಪರಿವಾಗಳೆಮ್ಮ ಪೆಣನಂ ತುೞಿದುಂ ಪರಿಗುಂ ದಲೆಂದು, ಚಿಃ
ತುಱುಗೊಳೆ ಬಾೞಿಮೆಂದು, ತುಱುಗೋಳೊಳೆ ಸಾವುದು ಸೈಪಿದೆಂದು ಪಾ
ಯ್ದುಱಿಕೆಯ ಗೋವರಣ್ಮೆ ಬರೆ ಪಾಯಿಸಿ ಘೋೞಿಯಿಲರ್ ತಗುಳ್ದು ತ
ತ್ತಱಿತಱಿದಿಕ್ಕಿ ದೇಗುಲಕೆ ಪೆರ್ಮರನಂ ಕಡಿವಂತೆ ಮಾಡಿದರ್ ||[೧೭೫]

---

೧೭೨. ಕೊಲ್ಲಾಪುರ ನಿಂಬಸಾಮಂತ ಚರಿತೆ (ಅಪ್ರಕಟಿತ).
೧೭೩. ಗಧಾಯುದ್ಧ ಸಂಗ್ರಹ (ತೀ.ನಂ. ಶ್ರೀ) ೩-೮.
೧೭೪. ಪಂಪಭಾರತಂ ; ೧೪-೫೫.
೧೭೫. ಪಂಪಭಾರತಂ : ೮-೯೫.

ಎಂಬ ಪದ್ಯ ಗೋಗ್ರಹಣದ ಪ್ರಸಂಗದ ಭಾರತೀಯರ ಭಾವನೆಯನ್ನು ಸ್ಪಷ್ಟಪಡಿಸುತ್ತದೆ. ಇವುಗಳನ್ನು ಬಿಟ್ಟರೆ ಗೋಗ್ರಹಣ ಘಟನೆಯನ್ನು ಹೇಳುವುವು ಏಕೈಕ ಜನಪದ ಕಾವ್ಯ "ಗ್ವಾಲಣ್ಣನ ವೀರಗಾಥಾ"[೧೭೬] ಮತ್ತು ಕರ್ನಾಟಕದ ತುಂಬ ಹರಡಿರುವ ವೀರಗಲ್ಲುಗಳು.

ಗೋವುಗಳ ಬಗ್ಗೆ ಲೌಕಿಕ ಬೆಲೆ, ಪಾರಮಾರ್ಥಿಕ ಪೂಜ್ಯತೆಗಳು ಕಡಿಮೆಯಾದ ಪ್ರಸಂಗದಲ್ಲಿ ಅವುಗಳನ್ನು ಸೆರೆಹಿಡಿಯುವುದು ಕೇವಲ "ಯುದ್ಧ ಸಾರಿದ ಸಂಕೇತ"ವಾಗಿ ಉಳಿದುದಲ್ಲದೆ, ಕೆಲವೊಮ್ಮೆ ಎತ್ತು-ಎಮ್ಮೆಗಳ ಸೆರೆಹಿಡಿಯುವಿಕೆಗೂ ಇಳಿಯಿತು[೧೭೭] (ಚಿತ್ರ೧೧). ಈ ಎರಡೂ ಘಟ್ಟಗಳಲ್ಲಿ ಅನೇಕ "ಗೋಗ್ರಹಣ ಯುದ್ಧ"ಗಳು ಕರ್ನಾಟಕದಲ್ಲಿ ಜರುಗಿವೆ. 'ಕಂಡದೊಳಿಂಡೆಯಾಡಿ ಬಿಸುನೆತ್ತರೊಳೋಕುಳಿಯಾಡಿ ಪೆರ್ಚಿ, ಮಾರ್ಕೊಂಡೊಡನೆಚ್ಚ ಪೂಣಿಗರ ಪಂದಲೆಯಂ ಪೊಡೆಸೆಂಡ ನಾಡಿ ..."[೧೭೮] ಎಂಬಂತೆ ಅನೇಕರು ಈ ಪ್ರಸಂಗದಲ್ಲಿ ಹೋರಾಡಿ ವೀರಸ್ವರ್ಗ ವೇರಿದ್ದಾರೆ.

ಗೋಗ್ರಹಣಯುದ್ಧವನ್ನು ಎದುರಿಸಿ ವೀರಸ್ವರ್ಗವೇರಿದ ಉಲ್ಲೇಖವುಳ್ಳ ಏಕೈಕ ಸ್ತ್ರೀ ಲಕ್ಷಮ್ಮ ಗಾವುಂಡಿ. ಈಕೆಯ ಬಗ್ಗೆ ಕ್ರಿ.ಶ. ೧೦೪೧ರ ಸಿದ್ಧನಹಳ್ಳಿಯ ವೀರಗಲ್ಲು "ಮಾಚಗಾವುಣ್ಡನವನ ಮಗಳ್ ಲಕ್ಷಮ್ಮಗಾವುಣ್ಡಿ ಸಜಿಕ್ಕನೂಱ ಎರ್ಮ್ಮೆ ತುಱು ಪರಿದಟ್ಟೆ ಪುಯ್ಯಲ್ವರಿದು ಪಗಿರೆಯಲ್ಪಟ್ಟಿ ಕಾದಿ ತುಱುವಂ ಮಗುಟ್ಚಿ ಸತ್ತು ಸ್ವರ್ಗ್ಗ..." ಎಂದು ಹೇಳುತ್ತದೆ.[೧೭೯] ಹೊಯ್ಸಳ ಬಲ್ಲಾಳನ ರಾಣಿ ಉಮಾದೇವಿ ಬೆಳಗವರ್ತಿಯ ಮಂಡಳೇಶ್ವರ ಮಲ್ಲದೇವರಸನೊಂದಿಗೆ ಕಾದಲು ಒಂದೇ ವರ್ಷದ ಅವಧಿಯಲ್ಲಿ ೩ ಸಲ ದಂಡೆತ್ತಿ ಹೋಗುತ್ತಾಳೆ. ಕೊನೆಯ ಸಲ "ಕವುಡಿವೊಳೆಯಲ್ಲಿ ಬೀಡು ಬೆಳಗವತ್ತಿಗೆ ಬಂದು ಕಾದಿ ಕೆಟ್ಟುಹೋಗುತ್ತ ಕತ್ತ್ರಗಿಯಲ್ಲಿದ್ದಟ್ಟಿ ದನವಂ ಕೊಣ್ಡು ಹೋಹಾಗ" ಚೀಲಯನೆಂಬವನು ಎದುರಿಸಿ ವೀರಸ್ವರ್ಗ ಏರುತ್ತಾನೆ.[೧೮೦] ಸ್ತ್ರೀಯೊಬ್ಬಳು ತುಱುಸೆರೆಹಿಡಿದ ಪ್ರಸಂಗವಿದು. ಕೇತಮಹಾದೇವಿ ಎಂಬವಳೂ ಹೀಗೆ ಗೋಗ್ರಹಣ ಕಾರ್ಯವನ್ನು ಕೈಕೊಂಡು ಕರುಣ ಉಕ್ಕಿ ಅವನ್ನು ಬಿಟ್ಟುಕೊಟ್ಟ ಉಲ್ಲೇಖ ಕೆಂಬಾಳು ಶಾಸನದಲ್ಲಿ ಬರುತ್ತದೆ.[೧೮೧] ಇವನ್ನು ಬಿಟ್ಟರೆ ಪುರುಷರು ಗೋವುಗಳನ್ನು ಸೆರೆಹಿಡಿದ ಮತ್ತು ಸೆರೆಹಿಡಿದ ಪ್ರಸಂಗದಲ್ಲಿ ಹೋರಾಡಿ ಮಡಿದ ಸಂಗತಿಯನ್ನು ಸಾವಿರಾರು ಶಾಸನಗಳು ಸಾರುತ್ತವೆ. ತುರುಗೋಳ್‌ಯುದ್ಧದ ಸುಂದರ ಚಿತ್ರವೊಂದನ್ನು ಕೊರಕೋಡ ಶಾಸನ ಹೀಗೆ ಕೊಡುತ್ತದೆ.[೧೮೨]

೧. ಸ್ವಸ್ತಿ ಶ್ರೀಮಚ್ಚಾಳುಕ್ಯ ಚಕ್ರವರ್ತಿ ತ್ರೈಳೋಕ್ಯಮಲ್ಲದೇವಂ ಸುಖದಿಂ ರಾಜ್ಯಂಗೆಯ್ಯುತ್ತಿರೆ ಸಕನೃಪ

೨. ಕಾಳಾತೀತ ಸಂವತ್ಸರಂಗಳುಂ ೧೦೧೭ನೆಯ ಯುವಸಂವತ್ಸರದಧಿಕ ಫಾಲ್ಗುಣ ಬಹುಳ ೩ ಸೋಮವಾರದಂ-

೩. ದು ಶ್ರೀಮನ್ಮಹಾಮಂಡಳೇಶ್ವರಂ ಜಗದೇವರಸರ ಬೆಸದಿಂ ಮದಸಾಲೆಯ ಕಾಳರಸಂ ಸಮಸ್ತ ಸಾಮಾ-

೪. ತ್ತಿಯಂ ಬೆರಸು ಬಂದು ಶ್ರೀಮದನಾದಿಯಗ್ರಹಾರಂ ಕುಪ್ಪಗಡೆಯ ಹಳ್ಳಿ ಕೊರಕೋಡನಿಱಿದು ತುರುವಂ ಕೊಂ -

---

೧೭೬. ಕರ್ನಾಟಕ ಭಾರತಿ ೬-೨ ಸಂ. ಬಿ. ಆರ್. ಸುರಪುರ.

೧೭೭. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (ಡಾ. ಎಂ. ಚಿದಾನಂದಮೂರ್ತಿ) ಪು. ೧೧.

೧೭೮. EC. VII ಹೊನ್ನಾಳಿ ೩೫, ಬೆಳಗುತ್ತಿ (ಕ್ರಿ. ಶ. ೧೧೮೭)

೧೭೯. EC. IV ಹೊಸಕೋಟೆ ೧೧. ಸಿದ್ಧನಹಳ್ಳಿ (ಕ್ರಿ.ಶ. ೧೦೪೧)

೧೮೦. EC. VII ಹೊನ್ನಾಳಿ ೨೮. ಚಿಕ್ಕಯರೆಹಳ್ಳಿ (ಕ್ರಿ.ಶ. ೧೧೯೭)

೧೮೧. EC. V ಚೆನ್ನರಾಯಪಟ್ಟಣ ೨೦೫. ಕೆಂಬಾಳು (ಕ್ರಿ.ಶ. ೧೨೦೦)

೧೮೨. EC. VIII ಸೊರಬ ೧೭೫. ಕೊರಕೋಡು (ಕ್ರಿ.ಸಾ ೧೧೫೬)

೫. ಡುಡೆಯುಚ್ಚಿ ಹೋಪಾಗಳಲ್ಲಿ ಹುಟ್ಟಿದ ಬಾವಗಾವುಂಡನ ಮಗಂದಿರು ದೇವಗಾವುಂಡನುಂ ಮಲ್ಲಗಾವು-

೬. ಡನುಂ ಬಿಲ್ಲಮಂಬುಮಂ ಕೊಂಡೀರ್ವ್ವರುಂ ಹೆಬ್ಬಾಗಿಲೊಳಡ್ಡಂ ನಿಂದು ಗುಹೆಯ ಬಾಗಿಲೊಳು ಸಿಂ -

೭. ಹನಿರ್ಪ್ಪಂತೆ ತಾಗಿ ತಳ್ತೆಸುವಾಗಳು ಕಾರಮಳೆ ಕಱೆದಂತೆಯುಂ ಕಂಜುರ ಹುಟ್ಟಿಯು

೮. ಕೆಣಕಿದಂತೆಯುಂ ಕವಿದ ಕಾಲ ಬಾಯೊಳಂ ಜವನೊಕ್ಕಲಿಕ್ಕಿದಂತೆ ತೊತ್ತ -

೯. ಳದುಳಿದವೋಲುತಂ ಕಯ್ಯನರೆದುಂ ಬಿಲ್ಲ ತಿರುವಂ ಪಱಿವಂನ್ನವೆಚ್ಚು ನೆಱೆಯದೆ ಕಟ್ಟಿದಲಗಂ ಕಿ -

೧೦. ತ್ತು.....ಲ್ಕುಱಿಯ ಹಿಂಡಂ ತೋಳಂ ಪೊಕ್ಕಂತೆಯುಂ ಕರ್ಬ್ಬುದೋಂಟವನಾನೆ ಪೊಕ್ಕಂತೆಯುಂ ...

೧೧. ನಿಕ್ಕುರಳಿಲು ಪೊಕ್ಕುದೋಳ ಹಿಂದು ಕುತ್ತಿ ನೂಂಕುತ್ತ ಬಪ್ಪಾಗಳು ||ವ್ರಿತ್ತ|| ಮಲೆದಿದಿರಾಂತ ಮಾರ್ವ್ವಲ-

೧೨. ಮನಳ್ಕುಱೆ ತಾಗಿ ಭುಜಪ್ರತಾಪದಿಂದಲಗನೆ ಕಿರ್ತ್ತು ಪೊಯ್ಯೆನಿರತಂ ಕಣಕಾಲು ಮೊಳಕಾಲ್ಮು-

೧೩. ಖಂ ಭುಜೆನುರಿತಲೆ ಬಳೆಯಾಗೆ ಸಂಬಳಿತ ಯೋಪಿನದೊಂದೆರಡಟ್ಟಿ ಯೋಡಲುಂ ತೊಲಗದೆ ನಿಂದು

೧೪. ...... ಳಿಱಿದರಿರ್ಬ್ಬರುಮಾಹವರಂಗಭೂಮಿಯೊಳು | ಅಂತವರಿಬ್ಬರುಂ ಪೋಗದೆ ನಿಂದುದಂ ಕಂಡು ಪೊ -

೧೫. ರಿದಾಳು ಕುದುರೆಯಮೊರ್ಬ್ಬಂ ತಾಗಿಯೆಸಲ್ವಱಿಯಲುಂ ಕೋಲ್ಕೊಂ ತಂಗಳೂಡಾಗಿ ಬಿರ್ದ್ದು

೧೬. ಸುರಲೋಕ ಪ್ರಾಪ್ತರಾದರಿರ್ಬ್ಬರ ಪೆಣಮಂ ಮೆಟ್ಟಿ ತುಱು ಪರಿಯಲವರಿಬ್ಬರಿಂ ಕಿಱಿಯ ಬೊಪ್ಪಗಾ -

೧೭. ವುಂಡಂ ತಂಮಣಂದಿರಿಬ್ಬರ ಕಳೇಬರವಂ ಕಂಡು ಸೈರಿಸಲಾಱದೆ ನೀಮ್ಮಾ ದುದನಪ್ಪನಲ್ಲದೊಡೇಂ ತುಱು -

೧೮. ವಂ ಮಗುಳ್ಚಿದಪ್ಪೆನೆರದೊಂದ ಮೆಯ್ಯೊಳು ಹಿಂದ ಹತ್ತಲಾತಂಗೆ ಪಡಿ ಬಲವಾಗಿ ಮಂಡಳಿಕಂ ವುದ್ಧ

೧೯. ರೆಯೆಕ್ಕರಸನಾಳ್ಕುದಿರೆಯಂ ಹೇಳಲಾ ನೆಱವಂ ಕೂಡಿಕೊಂಡು ಹಾಲ್ಗಟ್ಟದ ಬಯಲ

೨೦. ಲೊಡ್ಡನೊಡ್ಡಿದರಿಬಲವಂ ಬೊಪ್ಪಗವುಂಡ ಕೊಂದು ತುಱುವಂ ಮಗುಳ್ಚಿಕೊಂಡು ಬಂದಣ್ಣಂ

೨೧. ದಿರಂ ಸಂಸ್ಕಾರಿಸಿ ಜಳದಾನಕ್ರಿಯೆಯಂ ಪರೋಕ್ಷವಿನಯಮುಮಂ ಮಾ

೨೨. ಡಿ ಯಿರ್ಬ್ಬರ್ಗ್ಗಂ ಕಲ್ಲಂ ನಿಱಿಸಿದಲ್ಲಿ ಮಂಗಳಮಹಾಶ್ರೀ ಶ್ರೀ.

ಪೆಣ್ಬುಯ್ಯಲ್ : 'ಪೆಣ್ಬುಯ್ಯಲ್' ಎಂದರೆ ಹೆಣ್ಣಿನ ಆರ್ತಧ್ವನಿ. ನೆರೆ ರಾಜ್ಯದ ಅಥವಾ ನೆರೆ ಗ್ರಾಮದ ದಾಳಿಕಾರರು ಕದನಕ್ಕೆ ಬಂದು ಹೆಣ್ಣುಮಕ್ಕಳ ಮಾನಭಂಗಕ್ಕೂ ತೊಡಗುತ್ತಿದ್ದರು. ಅಥವಾ ಸೀರೆ ಸೆಳೆಯುವುದರ ಮೂಲಕ ಯುದ್ಧವನ್ನು ಸಾರುತ್ತಿದ್ದರು. ಇಂಥ ಪ್ರಸಂಗದಲ್ಲಿ ಅಲಿಪ್ತನಾಗಿರಕೂಡದು ಎಂಬ ಮೌಲ್ಯಕ್ಕೆ ಕಟ್ಟುಬಿದ್ದು ಪ್ರಾಚೀನರು ಸ್ತ್ರೀವಿಮೋಚನೆಗೆ ಹೋರಾಡುತ್ತಿದ್ದರು.

ಹಿಂದೂ ಮತ್ತು ಜೈನ ರಾಮಾಯಣಗಳಲ್ಲಿ ಈ ಪ್ರಸಂಗದ ಚಿತ್ರ ಕೆಲಮಟ್ಟಿಗೆ ಬಂದಿದೆ. ಜಟಾಯುವನ್ನು ಕೊಂದು, ರಾವಣನು ಸೀತೆಯನ್ನು ಅಪಹರಿಸಿಕೊಂಡು, ಲಂಕಾಪ್ರವೇಶ ಮಾಡುವಾಗ "ವೈದೇಹಿ ಪುಯ್ಯಲ್ಚಿದಳ್." ಅದನ್ನು ಕೇಳಿದ ರತ್ನಜಟಿಯೆಂಬವನು "ಪೆಣ್ಬುಯ್ಯಲಂ ಶ್ರುತಿ ಕೈಕೊಂಡುದು, ಕೇಳ್ದೊಡೆ ತೆವಳೆಗಂಡಂದೆನ್ನ ವಿಖ್ಯಾತಿ ದೂಷಿತಮಕ್ಕುಂ' ಎಂದು ಭಾವಿಸಿ, ರಾವಣನೊಂದಿಗೆ ಹೋರಾಡಿ ಮಡಿಯುತ್ತಾನೆ.[೧೮೩] ಇದೇ ರೀತಿ ಅನಂತನಾಥಪುರಾಣದಲ್ಲಿ ಸುನಂದೆಯನ್ನು ಅಪಹರಿಸಿದ ಚಂಡಶಾಸನನೊಂದಿಗೆ ಹೋರಾಡಿ ಮಡಿದ ಸಿಂಹಚೂಡನ ಪ್ರಂಸಗವೂ 'ಪೆಣ್ಬುಯ್ಯಲ್' ಕದನವೆನಿಸಿದೆ.[೧೮೪] ಆದರೆ ಕಾಲಕಾಲಕ್ಕೆ ಜರುಗಿದ ಘಟನೆಗಳ ದಾಖಲೆಗಳೆಂದರೆ ವೀರಗಲ್ಲುಗಳು. ಏರಿ ಬಂದ ವೈರಿಗಳು ಹೆಂಡಿರ ಮಾನಹರಣಕ್ಕೆ ಪ್ರಯತ್ನಿಸುತ್ತಿದ್ದುದನ್ನು

---

೧೮೩. ಪಂಪರಾಮಾಯಣಂ ೯-೧೮೪.

೧೮೪. ಅನಂತನಾಥಪುರಾಣಂ (೯೭೨) ೧೧ನೆಯ ಆಶ್ವಾಸ.

ಈ ವೀರಗಲ್ಲುಗಳು 'ಪೆಂಡಿರ ಉಡೆಯುರ್ಚುವಲ್ಲಿ" ಎಂದು ಸೊಗಸಾದ ಶಬ್ದದಿಂದ ಸೂಚಿಸುತ್ತವೆ. ಹಿಂದೆ ಹೇಳಿದ ಕೊರಕೋಡಶಾಸನ ಇದಕ್ಕೆ ಉದಾಹರಣೆಯಾಗಿದೆ. ಅಬ್ಬಲೂರಿನಲ್ಲಿ ಪೆಣ್ಬುಯ್ಯಲ್ ಚಿತ್ರದ ಮೂರು ಅಪರೂಪದ ವೀರಗಲ್ಲುಗಳಿವೆ.

ಎಱಿವೆಸ : ಎಱಿವೆಸವೆಂದರೆ ಒಡೆಯನ ಅಪ್ಪಣೆ. ಆತನ ಉಪ್ಪಿನ ಋಣಕ್ಕಾಗಿ ಹೋರಾಡುವುದು ಇಲ್ಲಿಯ ಧ್ಯೇಯ. ಈ ಮೊದಲು ಹೇಳಿದ ತುಱುಗೋಳ್, ಪೆಣ್ಬುಯ್ಯಲ್‌ಗಳು, ಮುಂದೆ ಹೇಳುವ ಊರಳಿವು ನಂಟನೆಡರುಗಳು ಐಚ್ಛಿಕ; ಎಱಿವೆಸ ಮಾತ್ರ ಕಡ್ಡಾಯ. ಅವು ಸಾಮಾನ್ಯವಾದ ದಾಳಿಗಳು, ಇದು ಯುದ್ಧ. ತರಬೇತು ಪಡೆದ ಸೈನ್ಯ ನಿರ್ವಹಿಸುವ ಈ ಸಂಘರ್ಷಣೆ ರಾಜ್ಯದ ಹಣೆಬರಹವನ್ನು ನಿರ್ಧರಿಸುತ್ತಿದ್ದಿತು. ಇಂಥ ಯುದ್ಧಗಳಲ್ಲಿ ಹೋರಾಡಿ ಮಡಿದವರ ನೆನಪಿಗೆ ನಿಲ್ಲಿಸಿದ ವೀರಗಲ್ಲುಗಳು ನಮ್ಮ ನಾಡಿನ ತುಂಬ, ಅದರಲ್ಲಿಯೂ ಯುದ್ಧ ನಡೆದ ಗ್ರಾಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಿಗುತ್ತವೆ. ಗದಗ-ಬೆಟಗೇರಿ ಬಯಲಲ್ಲಿ ಹಲವಾರು ವೀರಗಲ್ಲುಗಳು ತಲೆಯೆತ್ತಿ ನಿಂತಿವೆ (ಚಿತ್ರ ೧೨). ಗಂಗ-ರಾಷ್ಟ್ರಕೂಟರ ಮಧ್ಯೆ ತುಮಕೂರು ತಾಲೂಕಿನ ಹಿರಿಗುಂಡಲು ಗ್ರಾಮದಲ್ಲಿ ನಡೆದ ಯುದ್ಧವನ್ನು ಸೂಚಿಸುವ ೧೯ ವೀರಗಲ್ಲುಗಳಿವೆ. ತುಮಕೂರ ಜಿಲ್ಲೆಯ ಮಿಡಿಗೇಸಿ ಹೋಬಳಿಯ ಶ್ರವಣಗುಡಿ ಗ್ರಾಮದ ನೆರೆಯಲ್ಲಿ ಚೋಳ-ರಾಷ್ಟ್ರಕೂಟರ ಮಧ್ಯೆ ಜರುಗಿದ ಯುದ್ಧವನ್ನು ಪ್ರಸ್ತಾಪಿಸುವ ೧೦ ವೀರಗಲ್ಲುಗಳಿವೆ. ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲೂಕಿನ ಚಿಕ್ಕೆರೂರು, ಉತ್ತರ ಕನ್ನಡ ಜಿಲ್ಲೆಯ ಕೈಕಿಣಿಯಲ್ಲಿ ಅನೇಕ ವೀರಗಲ್ಲುಗಳಿವೆ (ಚಿತ್ರ ೧೩). ಮೈಸೂರಿನ ನೆರೆಯ ಮಲ್ಲಿಗನೂರಿನ ಬಯಲಲ್ಲಿ ಬಹುಶಃ ಕರಿಯಬಂಟನ ಕಾಳಗವನ್ನು ಸೂಚಿಸುವ ಸುಮಾರು ನೂರಾರು ವೀರಗಲ್ಲುಗಳು ನಿಂತುಕೊಂಡಿದ್ದು, ಇವುಗಳಲ್ಲಿ ಅನೇಕಗಳ ಮೇಲೆ ಆಯಾ ವೀರರ ಹೆಸರುಗಳನ್ನು ಕೆತ್ತಲಾಗಿದೆ.[೧೮೫] ಈ ಎಱಿವೆಸದ ವೀರಗಲ್ಲಿಗೆ ಕೆಳಗಿನ ಮಾವಳಿಶಾಸನ ಉತ್ತಮ ಉದಾಹರಣೆಯಾಗಿದೆ.[೧೮೬]

೧. ಸ್ವಸ್ತಿಪ್ರಭೂತವರ್ಷ ಶ್ರೀ ಪ್ರಥಿವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರಕ ಶ್ರೀ ಗೋಇನ್ದರಸಚ್ಚ್ತುಸ್ಸಮುದ್ರಾ

೨. ನ್ತ ವಸುಧೆಯಾ ಧವಳೈಕ ಛತ್ರಛಾಯೆ ಇನ್ದಾಳೆ। ಬನವಾಸಿ ಮಣ್ಡಲಮನಾ ಸಮುದ್ರಾನ್ತ ರಾಜಾದಿತ್ಯರಸನ್

೩. ಆಳೆ। ಅಳುವಖೇಡಮಱುಸಾಸಿರನುಮಾನ್ ಚಿತ್ರವಾಹನನಾಳುತ್ತುಂ ಬಾಯ್ಕೇಳದಿರೆ ಮುನಿದು ಕೊಲ್ಲಿಪಲ್ಲ

೪. ವ ನೊಳಮ್ಬಂ ನೊಳಮ್ಬರಾದಿತ್ಯನನ್ಪೆಸಸಲಾ ಕಾಕರಾಸುಮೇಟ್ಟಿ ಪೆರ್ಗ್ಗುಂಜಿಯ ಕೋಟೆಯಾನ್ ರೋಹಿಸಿ ಬಿಟ್ಟು

೫. ಎರಡುಮ್ಬಲದ ವೀರಭಟ್ಟರ್ಕ್ಕಳೊಟ್ಟಿ ಪೊಱಮಟ್ಟು ಬಿಲ್ವಲ್ಲಳ್ಕುದುರೆ ಕುದುರೆಯೊಳ್ಕಿಟ್ಟಿ ಅತಿ ತುಮುಲ

೬. ಕಾಳೆಗ ಪೆಟ್ಟಿ ಬಲದ ಕಯ್ಯಂ ಚಿತ್ರವಾಹನನೊತ್ತಿ ಪುಗುತ್ತನ್ದು ಕಾದಿಸೆ ಕಣ್ಡು ಕುಲಮುದ್ದ ನೀನೀ ಕಯ್ಯ ಪೊಕ್ಕು ಕಾದೆನ್ದು

೭. ಬೆಸಸೆ ಪ್ರಸಾದಮೆನ್ದಯ್ದಿ ಕಿಟ್ಟಿ ಕಾದಿ ಮಱುವಕ್ಕದವರ ಮೆಯ್ಮೆಯ್ಯಮ್ಬಾಗೆ ಎಚ್ಚೋಡಿಸಿ ಆ ಕಯ್ಯಂ ಗೆಲ್ದು

೮. ತಾನು ಪಲವುಂ ಎಸುವೆತ್ತು ಎಯ್ದೊದೆದಪ್ಪಿದಪ್ಪೊಲ್ಕಣೆ ಪಂಜರದೊಳೆಱಿಗಿ ಭೀಷ್ಮನ್ಬಿಟ್ಟನ್ತೆ ಮೆಲಮುಟ್ಟದೆ

---

೧೮೫. ಈ ವಿಷಯವನ್ನು ನನಗೆ ತಿಳಿಸಿದವರು ಶ್ರೀ ಹ. ಕ. ರಾಜೇಗೌಡ ಅವರು.

೧೮೬. EC. VIII ಸೊರಬ ೧೦. ಮಾವಳಿ (ಕ್ರಿ.ಶ.ಸು ೮೦೦)

೯. ಬಿಟ್ಟೊನಾನ್ದೇವಗಣಿಕೆಯರಾರ್ಗಮ್ಬಿಡಿದು ಬನ್ದಿದಿರ್ಗೊಣ್ಡುಯೆ ವೀರಲೋಕಕ್ಕೆ ಸನ್ದೋನ್ ॥ ಅರಬದ್ದಗಿಯರ ವಾದಪುಲಿ ಮಾಡಿದಾನ್ ॥

೧೦. ಪರಿಗೆಯ ಬನ್ದುಗಿಯರ್ ಈ ಊರ್ಗೆ ಬನ್ದು ಆರಿದರೊಳ್ ಛಲವಿನೆ ನಾಲ್ಕೆಟ್ಟಿನ ಬಳನ ಕಿಡಿಸಿ ಆಟೆಟ್ಟು ಮಾಡಿ ಮತ್ತಂ ನಿಲ

೧೧. ಲಾಱದೆ ಓಡಿದ । ಅದನ್ವಟಿಕೆ ಕುಲಮುದ್ದಗಾಮಿಗಾಗೆ ಅರಸದರ್ವ್ವಯೆ ಗೆಯ್ದು ಪೂರ್ವ್ವಾಚಾರದ ನಾಲ್ಕೆಟ್ಟಿನೊಳ್ವೊಟಿಸಿ ಗಟ್ದೆಯ

೧೨. ನಳದು ದಯೆಗೆಯ್ದು ಬಿಟ್ಟ ಕುನ್ದಗೆಸೇವೆಯ ಕಲಿಯಮ್ಮ ಬೆಳ್ಮಣಿಯ ಪದುಮಣ್ಣನ್ ಕರ್ಬುರ ಸೋಮದಿ ಮಿಟ್ಟೆಸೆಯ ನರಸಿಂಗನ್

೧೩. ಸಿಮ್ಮನೂರು ಕಿಳಮ್ಮನ್ ಅಣ್ಡುಗಿಯರೆಟ್ಟಿಗನ್ ಬೆದೆಮೆಟ್ಟಿಯಾಲಮ್ಮಾನ್ ಗುಂದುಗುಡೆಯಾ ಸಾತ್ತುಗಾಮುಣ್ಡನ್

೧೪. ಇನ್ತಿ ಎನೆಬ್ಬರು ಶ್ರೀಕರಣ ಸಹಿತಂ ಬಿಟ್ಟಾರಿದಮ್ ಕೆಡಿಪೋನುಂ ಕೆಡೆ ಬಾಳ್ವೋನುಂ ಪಞ್ಚಮಹಾಪಾತಕ ಸಂಯುಕ್ತನಕ್ಕುಂ

೧೫. ಬಾರಣಾಸಿಯೊಳ್ ಸಾಸಿರ ಕವಿಲೆಯನ್ ಕೊನ್ದೋನ ಲೋಕಕ್ಕೆ ಸನ್ದೋನುಮಕ್ಕುವ್ ॥

ನಂಟನೆಡರು : ಸಂಬಂಧಿಕರಿಗೆ, ಸ್ನೇಹಿತರಿಗೆ ಸಂಭವಿಸಿದ ಆಪತ್ಕಾಲದಲ್ಲಿ ನೆರವಾಗುವುದೂ ಒಂದು ಮೌಲ್ಯ. ಇಂತಹ ಘಟನೆಗಳು ಕೆಲವು ವೀರಗಲ್ಲುಗಳಲ್ಲಿ ಉಲ್ಲೇಖಿತವಾಗಿವೆ. ದೇವಗಾವುಂಡ ಮಲ್ಲಗಾವುಂಡರ ತುಱುಗೋಳ್ ವೀರಮರಣವನ್ನು ಕೇಳಿ ಸೈರಿಸದೆ ತಮ್ಮನಾದ ಬೊಪ್ಪಗಾವುಂಡ "ನೀಮ್ಮಾದುದನಪ್ಪೆಂ" ಎಂದು ವೈರಿಗಳನ್ನೆದುರಿಸಿ ಜಯಶಾಲಿಯಾಗಿ ಅಣ್ಣಂದಿರಿಬ್ಬರಿಗೆ ವೀರಗಲ್ಲು ನಿಲ್ಲಿಸಿದ ವಿಷಯ ಹಿಂದೆ ಹೇಳಿದ ಕೊರಕೋಡು ವೀರಗಲ್ಲಿನಲ್ಲಿದೆ, ತುಱುಗೋಳ್ ಕಾಳಗದಲ್ಲಿ ಭಾಗವಹಿಸಿ ವೀರಗಾವುಂಡ ಮಲ್ಲಿಗಾವುಂಡರು ಮಡಿಯಲು ಸೋದರ ಜೋಧಗಾವುಂಡ ವೈರಿಗಳನ್ನು ಗೆದ್ದು "ಅಣ್ಣಂದಿರ ಕಳೇಬರಮಂ ಕಂಡು ಶೋಕಾಕ್ರಾಂತನಾಗಿ ಅವರಿರ್ವ್ವರುಮಂ ಸಂಸ್ಕರಿಸಿ ಜಳದಾನಕ್ರಿಯೆಯಂ ಪರೋಕ್ಷವಿನೆಯಂ ಮಾಡಿ" ಕಲ್ಲು ನಿಲ್ಲಿಸಿದನೆಂಬ ಸಂಗತಿ ಕೊಂಡಗಳಲೆ ವೀರಗಲ್ಲಿನಲ್ಲಿ ಉಲ್ಲೇಖಿತವಾಗಿದೆ.[೧೮೭] ತಂದೆ -ಮಕ್ಕಳು ಜೊತೆಯಾಗಿ ಹೋರಾಡಿ ಗೋವುಗಳನ್ನು ಮರಳಿಸಿದ ವಿಷಯ ಸೊರಬದ ಒಂದು ಶಾಸನದಲ್ಲಿ ಬರುತ್ತದೆ.[೧೮೮] ಹೂಲಿಯ ಗೋಗ್ರಹಣ ಪ್ರಸಂಗದಲ್ಲಿ ಬೋಸಿಗನು ಹೋರಾಡಿ ಸಾಯಲು ಮಲ್ಲಿಗನೂ ಹೋರಾಡಿ ಸತ್ತುದನ್ನು

ಒಡನುಂಡ ಕೆಳೆಯನುಂ ಸಂ
ಗಡದಾಳಂ ಮೇಳದಾಳನನುವರದೆಡೆಯೊಳ್
ಬಿಡಲಾಗದೆಂದು ಬೋಸಿಗ
ನೊಡನಳಿದಂ ಮಲ್ಲಿಗಂ ಪ್ರತಾಪೋನ್ನತಿಯಿಂ ॥

ಎಂದು ವೀರಗಲ್ಲೊಂದರ ಪದ್ಯ ಸಾರುತ್ತದೆ.[೧೮೯] ತಂದೆ ಮಾದಿಗೌಡ ವೀರಸ್ವರ್ಗವೇರಲು ವೈರಿಗಳನ್ನು ಎದುರಿಸಿ ಮಗಳು ಹರಿಯಕ್ಕ ವೀರಮರಣವನ್ನಪ್ಪಿದಳೆಂದು ೧೪೪೬ರ ಶಿಕಾರಿಪುರ ವೀರಗಲ್ಲು ತಿಳಿಸುತ್ತದೆ.[೧೯೦]

---

೧೮೭. EC. VIII ಸೊರಬ ೧೭೬. ಕೊರಕೋಡು (ಕ್ರಿ.ಶ. ೧೧೫೬).
೧೮೮. EC. VIII ಸೊರಬ ೫೫೯. ಕೊಂಡಗಳಲೆ (ಕ್ರಿ.ಸ. ೧೪೪೮)
೧೮೯. EI. XVIII ೧೧೯. ಹೂಲಿ (ಕ್ರಿ.ಶ. ೧೧೦೭).
೧೯೦. EC.VII ಶಿಕಾರಿಪುರ ೨. ಶಿಕಾರಿಪುರ (ಕ್ರಿ.ಶ. ೧೪೪೬).

ಊರಳಿವು : ಪ್ರಾಚೀನಕಾಲದಲ್ಲಿ ಹಳ್ಳಿಗಳ ಸಾಮೂಹಿಕ ರಕ್ಷಣೆಗೆ ಸರಿಯಾದ ವ್ಯವಸ್ಥೆಯಿರಲಿಲ್ಲ. ಹೀಗಾಗಿ ರಾಜನ ಸೈನ್ಯ ಇಲ್ಲವೆ ನೆರೆಹಳ್ಳಿಯ ದಾಳಿಕಾರರು ಆಗಾಗ ಊರುಗಳನ್ನು ಲೂಟಿ ಮಾಡುತ್ತಿದ್ದರು. "ಊರು ಕೆಟ್ಟು ಸೂರೆಯಾಡುವಾಗ ಆರಿಗಾರೂ ಇಲ್ಲ" ಎಂಬಂತೆ ಆಗ ಇಡೀ ಗ್ರಾಮವೇ ಚೆಲ್ಲಾಪಿಲ್ಲಿಯಾಗುತ್ತಿದ್ದಿತು. ಇಂಥ ಸಮಯದಲ್ಲಿ ಗಟ್ಟಿಯಾಗಿ ನಿಂತು ವೈರಿಗಳನ್ನು ಎದುರಿಸಿ ಊರನ್ನು ರಕ್ಷಿಸುವುದು ವೀರರ ಧ್ಯೇಯವಾಗಿದ್ದಿತು. ಗೆಂಡ್ಲ ಗ್ರಾಮದ ವೀರಗಲ್ಲು ಜಿವನ ಎಂಬವನು ಊರನ್ನು ಮುತ್ತಿದ ಕಳ್ಳರೊಡನೆ ಕಾದಿ "ಜವನುಂಡು ಕಾರಿದಂದದಿ ಅವರಂ ಕೊಂದು" ಸತ್ತನೆಂದು ಹೇಳುತ್ತದೆ.[೧೯೧] ಗಂಗ ರಾಜಕುಮಾರ ದುರ್ವಿನೀತನು ಗ್ರಾಮವೊಂದನ್ನು ಹೀಗೆ 'ಇಱಿ'ದಾಗ ಆ ಗ್ರಾಮದ ಎಪ್ಪತ್ತು ಜನರು ಒಗ್ಗಟ್ಟಾಗಿ ಪ್ರತಿಭಟಿಸಿ ನಿಂತು ಊರನ್ನು ಕಾಪಾಡಿದರು. ಕ್ರಿಸ್ತಶಕ ೮೮೮ರಲ್ಲಿ ಬಟ್ಟಗೆಱೆಯನ್ನು (ಈಗಿನ ಬೆಟಗೇರಿ) ಸಾದೇವನೆಂಬಾತನು "ಮರ್ಯಾದೆಯಂ ತಪ್ಪಿ" ನಾಶಪಡಿಸಲು ಬಂದಾಗ, ಗಣರಮ್ಮ ಎಂಬ "ದ್ವಿಜಜನೋತ್ತಮ"ನು ಧೈರ್ಯದಿಂದ ಕಾದುತ್ತಾನೆ. ಮಹಾಮಾಂಡಲಿಕ ಭೂತಾರ್ಯನು ರೋಣದ ಜನರನ್ನು 'ಭತ್ತಾಯ' (=ಭತ್ಯ) ಎಂಬ ಸುಂಕವನ್ನು ಕೊಡಲು ಒತ್ತಾಯಪಡಿಸುತ್ತಾನೆ. ಅದು ಅಗ್ರಹಾರವಾದ್ದರಿಂದ ಜನರು ಪ್ರತಿಭಟಿಸುತ್ತಾರೆ. ಅವರಲ್ಲಿ ಪಂಪಯ್ಯ ಎಂಬವನು ಒಂದು ಅಕ್ಷತೆಯನ್ನೂ ಕೊಡುವುದಿಲ್ಲವೆಂದು ನಿಶ್ಚಯಿಸಿ ಕಾದಿ ಮಡಿಯುತ್ತಾನೆ.[೧೯೨] ಇತ್ಯಾದಿ ಸಂಗತಿಗಳು ಊರಳಿವಿನ ಕಾರಣ, ಪರಿಣಾಮಗಳನ್ನು ತಿಳಿಸುತ್ತವೆ.

ಕವಿ ರನ್ನ ಹೇಳುವ ಈ ಐದು ಪ್ರಸಂಗದವರಲ್ಲದೆ ಕಳ್ಳರನ್ನು ಎದುರಿಸಿ ಸತ್ತವರ, ಕ್ರೂರ ಪ್ರಾಣಿಗಳನ್ನು ಬೇಟೆಯಾಡುತ್ತ ಸತ್ತವರ ವೀರಗಲ್ಲುಗಳೂ ಸಿಗುತ್ತವೆ. "ವೀರಣನ ತಂಮ ಪೊಡಲೆಯ ಹಂದಿ ಬೇಟೆಯ ಪೋದಲ್ಲಿ ಕಲಿತನಂ ಬೆರಸಿ ತಳ್ತಿಱಿದು ಸುರಲೋಕ ಪ್ರಾಪ್ತನಾದ" ಎಂದು ಬಳ್ಳಿಗಾವೆ ಶಾಸನ ಹೇಳುತ್ತದೆ.[೧೯೩] ದುಗ್ಗಣನು ಹರಿಹರಕ್ಕೆ ಹೋಗಿಬರುತ್ತಿದ್ದಲ್ಲಿ "ಬಟ್ಟೆಯ ಕಳ್ಳರಂ ತಾಗಿ ತಳ್ತಿಱಿದು" ಸತ್ತನೆಂದು ಸಾಸಿವೆಹಳ್ಳಿ ವೀರಗಲ್ಲು ಹೇಳುತ್ತದೆ.[೧೯೪]

ಇದಲ್ಲದೆ ಪರಸ್ಪರ ಹೋರಾಟದಲ್ಲಿ ಸತ್ತ ಪ್ರಾಣಿಗಳ ಸ್ಮಾರಕವಾಗಿಯೂ ನಿಲ್ಲಿಸಿದ ಕೆಲವು ವೀರಗಲ್ಲುಗಳು ಸಿಗುವುದುಂಟು. ಹಂದಿಯನ್ನು ಕೊಂದು ತಾವೂ ಸತ್ತ ಕಾಳಿ, ಪೂಣೆಗ, ಕೇಸರಿ ಹೆಸರಿನ ನಾಯಿಗಳಿಗಾಗಿ ನಿಲ್ಲಿಸಿದ ವೀರಗಲ್ಲುಗಳು ಆತಕೂರು, ಗೊಲ್ಲರಹಟ್ಟಿ, ಯಲಹಂಕಗಳಲ್ಲಿವೆ.[೧೯೫]

* * *

ಮೇಲೆ ಹೇಳಿದ ಯಾವುದೇ ಪ್ರಸಂಗದಲ್ಲಿ ಮಡಿದ ವೀರರನ್ನು ತಕ್ಷಣ ದೇವಲೋಕದ ಅಪ್ಸರೆಯರು ನಾ ಮುಂದು ತಾ ಮುಂದು ಎನ್ನುತ್ತ ಎತ್ತಿಕೊಳ್ಳುವರೆಂದು ಜನರು ನಂಬಿದ್ದರು. ಇದನ್ನು ಅಭಿಮನ್ಯುವಿನ ಮರಣಪ್ರಸಂಗದಲ್ಲಿ

ಅನಿತಣ್ಮಿ ಸತ್ತ ನರನಂ
ದನಂಗೆ ಕಣ್ ಸೋಲ್ತು, ಬಗೆಯದಮರೇಂದ್ರನ, ನೀ
ನೆನಗೆ ತನಗೆಂಬ ದೇವಾಂ
ಗನೆಯರ ಕಳಕಳಮೆ ಪಿರಿದುಮಾಯ್ತಂಬರದೊಳ್ ||[೧೯೬]

ಎಂದು ಪಂಪ ನಿರೂಪಿಸುತ್ತಾನೆ.

---

೧೯೧. EC.VIII ಸೊರಬ ೨೨೪. ಗೆಂಡ್ಲಗ್ರಾಮ (ಕ್ರಿ.ಶ. ೧೨೧೯).
೧೯೩. EC. VIII ಶಿಕಾರಿಪುರ ೧೫೯. ಬಳ್ಳಿಗಾವೆ (ಕ್ರಿ.ಶ. ೧೧೮೩)
೧೯೪. EC. VII ಹೊನ್ನಾಳಿ ೮೫, ಸಾಸುವೆಹಳ್ಳಿ (ಕ್ರಿ. ಶ. ೧೧೧೯)
೧೯೫. EC. III ಮಂಡ್ಯ ೪೧. ಆತಕೂರು (ಕ್ರಿ.ಶ. ೯೫೦), SII, IX-i ನಂ. ೩೭ ಗೊಲ್ಲರ ಹಟ್ಟಿ. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (ಡಾ. ಚಿದಾನಂದಮೂರ್ತಿ) ಪು. ೧೪.
೧೯೬. ಪಂಪಭಾರತಂ : ೧೧-೧೦೬

ಸುರಿದರ್ ಪೂವಿನ ಮಳೆಯಂ
ಸುರದುಂದುಭಿಯೊಡನೆ ಶಂಖ ಕಹಳಾರವಮಂ
ಬೆರಸು ಸುರಾಂಗನೆಯರ್ ತಾಂ
ಪಿರಿಯನನಾ ರಾಮಗೌಡನಂ ದಿವಕುಯ್ದರ್ ||[೧೯೬]

ಎಂಬ ಅಭಿಪ್ರಾಯದ ಹೇಳಿಕೆಯನ್ನು ಎಲ್ಲ ವೀರಗಲ್ಲುಗಳೂ ಸಾರುತ್ತವೆ.

ದೇವಗಣಿಕೆಯರು ಒಯ್ದರೆಂಬ ವೈದಿಕ ಅಭಿಪ್ರಾಯ ಆಗಮಿಕಶೈವರಿಗೆ ಅಮಾನ್ಯ. ಕಾರಣ ವೀರಚೌಡರಸನ ಅಂತ್ಯಯಾತ್ರೆಯನ್ನು

ಭೂತಳದಲ್ಲಿಯ ಭೋಗಂ
ತೀರ್ದುದು ಈತಂಗೆ ಮರ್ತ್ಯದಲ್ಲಿರಬಾರದು ಬೇಗಂ
ತನ್ನಿರೆ ಎಂದಚಳೇಶ್ವರ
ನಂದೊಪ್ಪುಗೊಂಡ ಚಾವುಂಡನುಮಂ ||

ಮಱದಿರ್ದನಂದು ಮರ್ತ್ಯದ
ಬಳಕೆಯ ನೆಱಿಯಱಿದನಲ್ಲಿ ಮೋಕ್ಷಲಕ್ಷ್ಮಿಯಂ
ಸದುಗುರು ಲಕ್ಷ್ಮೀನಾಥಂ
ಇದಿರ್ಗೊಂಡಂ ಚಟ್ಟನಣುಗ ಚಾವುಂಡನುಮಂ ||

ಕಟ್ಟಿಸಿದುಪ್ಪರ ಗುಡಿಯಂ
ಎತ್ತಿಸಿದಂ ಅಭವನೊಲ್ದು ನಂದಿಯ ಸಿಂದಂ
ಹೋ ಉಘೇ ಉಘೇ ಎಂದೆನುತಂ
ವೀರೇಶ್ವರನೊಪ್ಪುಗೊಂಡ ಚಾವುಂಡನುಮಂ ||

ಎಂದು ಬೇರೊಂದು ರೀತಿಯಲ್ಲಿ ಹಿರೇಕೋಗಿಲೂರು ಶಾಸನ ಹೇಳಿದುದನ್ನು ಗಮನಿಸಬೇಕು.

ಹೀಗೆ ವೀರಮರಣವನ್ನಪ್ಪಿದವನ ಶವದ ರಕ್ತವನ್ನು ನೆರೆದ ಜನ ಹಣೆಗೆ ತಿಲಕವಾಗಿಟ್ಟುಕೊಂಡು ನಮಸ್ಕಾರ ಸಲ್ಲಿಸುತ್ತಿದ್ದುದು ಆ ಕಾಲದ ಆಚರಣೆಯಾಗಿದ್ದಿತೆಂದು ಸಮಯಪರೀಕ್ಷೆ ತಿಳಿಸುತ್ತದೆ. ಆದುದರಿಂದ ವೀರಮರಣವನ್ನಪ್ಪಿದ ಅಭಿಮನ್ಯುವಿನ ಶವಕ್ಕೆ ದುರ್ಯೋಧನನು "ನಿನ್ನನಾನಿನಿತಂ ಪ್ರಾರ್ಥಿಸುವೆನಭಿಮನ್ಯು ನಿಜಸಾಹಸ್ಯೆ ಕದೇಶಾನುಮರಣಮೆನಗಕ್ಕೆ" ಎಂದು ನುಡಿಯುತ್ತ "ಕೈಗಳಂ ಮುಗಿದುದು"[೧೯೯] ಅಂತಹ ವೈಶಿಷ್ಟ್ಯವಾಗಿರದೆ, ಆ ಕಾಲದ ಸಹಜ ಆಚರಣೆಯಾಗಿದ್ದಿತೆಂದೇ ಹೇಳಬೇಕು. ಹೀಗೆ ಸತ್ತವರಿಗಾಗಿ ವೀರಗಲ್ಲು ನಿಲ್ಲಿಸುವ ಮೊದಲು ಅನ್ನಸಂತರ್ಪಣೆ ನಡೆಯುತ್ತಿದ್ದಿತೆಂದೂ ಅದಕ್ಕೆ "ಬೀರಗೂಳ್" ಎಂದು ಕರೆಯುತ್ತಿದ್ದರೆಂದೂ ತಿಳಿದುಬರುತ್ತದೆ.[೨೦೦]

---

೧೯೬. MAR ೧೯೨೬ ನಂ. ೧೩೬ ಗುತ್ತನಹಳ್ಳಿ, ಶಿಕಾರಿಪುರ ತಾಲೂಕು.
೧೯೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೮೫
೧೯೮. EC. VIII ಚೆನ್ನಗಿರಿ ೨೪. ಹಿರೇಕೋಗಿಲೂರು (ಕ್ರಿ.ಶ. ೧೨೮೦)
೧೯೯. ಗದಾಯುದ್ಧಂ. ೪-೬೦ ಗ.
೨೦೦. ಬೀರಗೂಳು -ವೀರಗೂಳು - ರಣಗೂಳ್ (ಆರ್. ಶೇಷಶಾಸ್ತ್ರಿ - ಸ್ನೇಹಕಾರ್ತಿಕ ಪುಟ ೬೦೮).

ಯುದ್ಧಮರಣವನ್ನಪ್ಪಿದವನ ಕುಟುಂಬದ ನಿರ್ವಹಣೆ ಸಮಾಜ, ಸರಕಾರದ ಹೊಣೆಯಾಗಿದ್ದಿತು. ಈ ಪ್ರಸಂಗಗಳಲ್ಲಿ ರಾಜರು, ಸಾಮಂತರು, ಗಾವುಂಡರು ಅವನ ಮನೆತನಗಳಿಗೆ ದಾನ ನೀಡುತ್ತಿದ್ದರು. ಇಂತಹ ದಾನಗಳಿಗೆ ರಕ್ತಮಾನ್ಯ, ರುಧಿರಮಾನ್ಯ, ರಕ್ತಕೊಡುಗೆ, ನೆತ್ತರ ಕೊಡುಗೆ, ಡಿಂಗರಿವೃತ್ತಿ ಎಂದು ಕರೆಯುತ್ತಿದ್ದರು. ಆ ವೀರನ ಅಂತಸ್ತಿಗೆ ತಕ್ಕಂತೆ ಈ ಮಾನ್ಯಗಳು ಸಲ್ಲುತ್ತಿದ್ದವು; ಇಂದು ಮರಣೋತ್ತರ ಪ್ರಶಸ್ತಿಗಳು ಸಲ್ಲುವಂತೆ.

ಯುದ್ಧದಲ್ಲಿ ಒಬ್ಬ ಮಡಿದರೆ ಸಾಕು, ಅವನ ಬಗ್ಗೆ ಕಥೆಗಳು, ಗೀತೆಗಳು, ರಾಜ್ಯಮಟ್ಟದ ಯೋಧನಾಗಿದ್ದರೆ ಕಾವ್ಯಗಳು ಶಿಷ್ಟಪದ ಮತ್ತು ಜನಪದಗಳಲ್ಲಿ ಹುಟ್ಟುತ್ತಲಿದ್ದವು. "ವೀರನ ಸಾವು ಕಥೆಯಾಗಿ ಪರಿದುವೀ ಮೂರುವೀ ಲೋಕದೊಳೆಲ್ಲಂ"[೨೦೧] ಎಂದು ವೀರಗಲ್ಲೊಂದು ಸಾರುವುದನ್ನು ಗಮನಿಸಬೇಕು. ಕುಮಾರ ರಾಮನನ್ನು ಕುರಿತ ೫ ಕಾವ್ಯಗಳು, ಸಿರುಮನನ್ನು ಕುರಿತ ೩ ಕಾವ್ಯಗಳು, ಕಾಳಗದ ವೀರವರ ತೋಂಟದಾರಾಯನನ್ನು ಕುರಿತ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ಈ ಮಾತಿಗೆ ಉದಾಹರಣೆಯೆನಿಸಿವೆ.

ರಣರಂಗದಲ್ಲಿ ವೀರಸ್ವರ್ಗವೇರಿದವರಲ್ಲಿ ದೈವತ್ವವನ್ನು ಕಾಣುತ್ತಿದ್ದುದರಿಂದ ಅವರ ಹೆಸರಿನಲ್ಲಿ ಕಲ್ಲನಿಡುವುದು, ವೀರಗಲ್ಲು ನೆಡುವುದು, ದೇವಾಲಯ ಎತ್ತಿಸುವುದು ಸಾಮಾನ್ಯವಾಗಿದ್ದಿತು ; ಇಂದು ಹುತಾತ್ಮರ ಸ್ಮಾರಕಗಳನ್ನು ನಿಲ್ಲಿಸುವಂತೆ. ಜನತೆ ಅವುಗಳಿಗೆ ದೀಪ, ಧೂಪ, ಹೂವು-ಪತ್ರೆ, ಕಳಶ-ಕನ್ನಡಿ, ವಾದ್ಯ-ಓಲಗಗಳ ಗೌರವ ಸಲ್ಲಿಸಿ ತಲೆತಲಾಂತರ ಪೂಜಿಸುತ್ತ ಬರುತ್ತಿದ್ದರು. ಊರ ಗೌಡರು, ಪ್ರಮುಖರು ಈ ಪೂಜಾಕ್ರಿಯೆ ಮತ್ತು ಜಾತ್ರೋತ್ಸವಗಳು ಅನೂಚಾನವಾಗಿ ನಡೆದುಕೊಂಡು ಬರಲು ದಾನ ದತ್ತಿ ನೀಡುತ್ತಿದ್ದರು. ಮಣಲರತನು ತನ್ನ ನಾಯಿ 'ಕಾಳಿ'ಗಾಗಿ ವೀರಗಲ್ಲನ್ನು ನಿಲ್ಲಿಸಿ "ಪಿರಿಯಕೆಜೆಯ ಕೆಟಗೆ ಮಲ್ತಿಕಾಲಜ್ಞದೊಳಿರ್ಕ್ಕ(ರ್ಖ್ಬ)ಣ್ಣುಗ ಮ(ಣ್ಣ)೦" ದಾನವಾಗಿ ನೀಡಿದುದನ್ನೂ "ಆ ಸ್ಥಾನಮನಾಳ್ವ ಗೊರವನಾ ಕಲ್ಲಂ ಪೂಜಿಸದುಣ್ಡಾರಪ್ಪೊಡೆ ನಾಯಗೆಯ್ದ ಪಾಪಮ(೦) ಕೊಣ್ಡೊನ್" ಎಂದು ಹೇಳಿದುದನ್ನೂ ಇಲ್ಲಿ ಗಮನಿಸಬೇಕು.[೨೦೨] ಯುದ್ಧದಲ್ಲಿ ಸಂಗಿಯನಾಯ್ಕ ಸಾಯಲು "ಯೀ ಬೀರಗಲ್ಲ ಪೂಜೆ ಪುನಸ್ಕಾರಕೆ"ಯೆಂದು ಸಂಕಿಯಸಹಣಿ ಎನ್ನುವವ ೧೨ ಕಂಬ ಭೂಮಿಯನ್ನು ದಾನ ನೀಡಿದುದಾಗಿ ಹನಗವಾಡಿ ವೀರಗಲ್ಲಿನಿಂದ ತಿಳಿದುಬರುತ್ತದೆ.[೨೦೩] ಒಂದು ವೇಳೆ ಮರೆಯಲಾರದ ರೀತಿಯಲ್ಲಿ ಮರಣವನ್ನಪ್ಪಿದ್ದರೆ ಆತನು ತಕ್ಷಣ ರಾಜ್ಯಮಟ್ಟದ ನಾಯಕನ ಅಂತಸ್ತಿಗೆ ಏರಿ ಪ್ರಜೆಗಳ ಭಕ್ತಿ, ಅನುಕಂಪೆಗಳಿಗೆ ಪಾತ್ರವಾಗಿ, ಅನೇಕ ಕಡೆಗಳಲ್ಲಿ ಪೂಜೆಗೊಳ್ಳುತ್ತಿದ್ದನು. ಕರ್ನಾಟಕದಲ್ಲಿ ಇಂಥ ವ್ಯಕ್ತಿ ಕುಮಾರರಾಮ. ಮೇಲೆ ಹೇಳಿದಂತೆ ಇವನ ಬಗ್ಗೆ ಶಿಷ್ಟಪದ, ಜನಪದ ಸಾಹಿತ್ಯವಲ್ಲದೆ ಈಗ ತಿಳಿದ ಮಟ್ಟಿಗೆ ಸಂಗೂರ, ಬಿದರಕಟ್ಟೆ, ಹೊಳೆ ಆನವೇರಿ, ಸಿರಗೋಡ, ವರಾಹ ಗ್ರಾಮಗಳಲ್ಲಿ[೨೦೪] ಆ ಕಾಲಕ್ಕಾಗಲೇ ಆತನ ವಿಗ್ರಹಗಳು ಸ್ಥಾಪಿತವಾಗಿ ಇಂದಿಗೂ ಪೂಜೆಗೊಳ್ಳುತ್ತಲಿವೆ.

ಹೋರಾಟದಲ್ಲಿ ಮಡಿದ ವೀರನಿಗೆ ನಿಲ್ಲಿಸುವ ಸ್ಮಾರಕಗಳು ಮೂರುಬಗೆಯಾಗಿವೆ.

೧. ಗುಂಡುಕಲ್ಲುಗಳು, ೨. ವೀರಗಲ್ಲುಗಳು, ೩. ದೇವಾಲಯಗಳು.

ಶಿವಮೊಗ್ಗ ಜಿಲ್ಲೆಯ ದೊಂಬರು ದೀವರು ಪೂಜಿಸುವ "ಜಟಿಗ್ಯಾನಕಲ್ಲು" ಅಂದರೆ ಜಟಿಂಗನ ಕಲ್ಲುಗಳು ವೀರರ ಸ್ಮಾರಕಗಳೇ ಆಗಿವೆ. ಹಳ್ಳಿ ಹಳ್ಳಿಗಳಲ್ಲಿ ಬೀರ, ಜಟಿಂಗ ಹೆಸರುಗಳಲ್ಲಿ ಸಿಗುವ ಗುಂಡುಕಲ್ಲುದೇವರು ಮೂಲತಃ ಹೀಗೆ ಮಡಿದ ವೀರರ ಸ್ಮಾರಕಗಳೇ ಆಗಿರಬೇಕು. ಕ್ರಮೇಣ ಇವು ಸಮಾಜದಲ್ಲಿ ಸಾಂಸ್ಕೃತಿಕ ದೇವತೆಗಳಾಗಿ ಬೆಳೆದುಬಂದವೆಂದು ತೋರುತ್ತದೆ. ಇವಲ್ಲದೆ ಊರ ಹೊರಗೆ ಬಿದ್ದ ಬಂಡೆಕಲ್ಲುಗಳ

---

೨೦೧. SII. IX-I ಮಡಕಶಿರಾ ೩೧. ಹೇಮಾವತಿ (ಕ್ರಿ.ಶ. ೯೬೬-೬೭)

೨೦೨. EC. III ಮಂಡ್ಯ ೪೧ ಆತಕೂರು (ಕ್ರಿ.ಶ. ೯೫೦)

೨೦೩. EC. VII ಹೊನ್ನಾಳಿ ೧೧೭. ಹನಗವಾಡಿ (ಕ್ರಿ.ಶ. ೧೩೧೯).

೨೦೪. ಧಾರವಾಡ ಜಿಲ್ಲೆಯ ಶಾಸನಸೂಚಿ. ಪುಟ ೪೭, ೫೨, ೫೭, ೬೭, ೭೮.

ಸುತ್ತಲೂ ಇಂಥ ಕಥೆಗಳನ್ನು ಅಲ್ಲಲ್ಲಿ ಹೇಳುತ್ತಾರೆ. ಉದಾ : ಒಂದು ಊರಿನ ಕಾರಹುಣ್ಣಿವೆ ಕರಿಯನ್ನು ಬೇರೊಂದು ಊರಿನವರು ಪ್ರತಿಷ್ಠೆಗಾಗಿ ಹರಿದುಕೊಂಡು ಹೋಗಲು ಪ್ರಯತ್ನಿಸುವುದುಂಟು. ಅಂಥ ಸಮಯದಲ್ಲಿ ಅದನ್ನು ರಕ್ಷಿಸುವುದು ಊರವರ ಪರಮಕರ್ತವ್ಯ. ಈ ಬಗೆಯ ಒಂದು ಸಂಘರ್ಷಣೆ, ಸಿಂದಗಿ ತಾಲೂಕಿನ ಎರಗಲ್ಲು ಗ್ರಾಮದಲ್ಲಿ ನಡೆದು, ಕರಿಯನ್ನು ಹರಿದುಕೊಂಡು ಹೊರಟವನು ವೀರ ಮರಣವನ್ನಪ್ಪಿದುದರ ಸ್ಮಾರಕವಾಗಿ ಒಂದೆರಡು ಬಂಡೆಗಲ್ಲುಗಳು ಬಯಲಲ್ಲಿ ಬಿದ್ದಿವೆ. ಕಾರಹುಣ್ಣಿವೆ ದಿವಸ ಆ ಊರವರು ವಾದ್ಯ-ಓಲಗದೊಂದಿಗೆ ಬಂದು ಆ ಸ್ಮಾರಕವನ್ನು ಪೂಜಿಸುತ್ತಾರೆ.

ಇವುಗಳನ್ನು ಬಿಟ್ಟರೆ ವೀರಗಲ್ಲುಗಳದೇ ಪ್ರಾಧಾನ್ಯತೆ. ಬರವಣಿಗೆಯುಳ್ಳವು, ಶಿಲ್ಪವುಳ್ಳವು, ಉಭಯ ರೀತಿಯವು ಎಂದು ಇವು ಮೂರು ವಿಧವಾಗಿವೆ. ಕೇವಲ ವೀರನ ಮರಣ ವಿಷಯದ ಬರವಣಿಗೆಯುಳ್ಳ ಕೆಲವು ಶಾಸನಗಳನ್ನು ಬಿಟ್ಟರೆ ಶಿಲ್ಪವುಳ್ಳ ವೀರಗಲ್ಲುಗಳೇ ಹೇರಳ. ಈ ಶಿಲ್ಪವೀರಗಲ್ಲು ಸಾಮಾನ್ಯವಾಗಿ ಮೂರು ಸ್ತರಗಳನ್ನು ಒಳಗೊಂಡಿರುತ್ತದೆ. ಗೋಗ್ರಹಣಯುದ್ಧವಾಗಿದ್ದರೆ ಕೆಳಗಿನ ಸ್ತರದಲ್ಲಿ ಸೈನಿಕರ ಹೋರಾಟ, ಓಡುತ್ತಿರುವ ಆಕಳುಗಳನ್ನು ಚಿತ್ರಿಸಿರುತ್ತಾರೆ (ಚಿತ್ರ ೧೪). ಸನ್ನಿವೇಶಕ್ಕೆ ತಕ್ಕಂತೆ ಕೆಲವೊಮ್ಮೆ ಗಜಯುದ್ಧ, ಅಶ್ವಯುದ್ಧ, ಯೋಧಯುದ್ಧ ಪ್ರಧಾನವಾದ ಚಿತ್ರಗಳೂ ಇರುತ್ತವೆ. ಹಿಟ್ಟೆಯನಾಯಕನು 'ವಿಷಮಹಯಾರೂಢ" ನಾಗಿದ್ದುದರಿಂದ ಅವನನ್ನು ಕುರಿತ ಅಮ್ಮಿನಭಾವಿ ವೀರಗಲ್ಲು ಅಶ್ವಯುದ್ಧ ಚಿತ್ರಪ್ರಧಾನವಾಗಿದೆ[೨೦೫] (ಚಿತ್ರ ೧೫). ಬಿಜ್ಜಳ ಆನೆಯ ಮೇಲೆ ಕುಳಿತು ಯುದ್ಧವಾಡುತ್ತಿರುವ ತಂಬೂರು ವೀರಗಲ್ಲು (ಚಿತ್ರ ೧೬), 'ಆನೆಯೊಳಾನ್ತಿಱಿದು' ಸತ್ತ ನಾಗತ್ತರನ[೨೦೬] ವೀರಗಲ್ಲು ಗಜಚಿತ್ರ ಪ್ರಧಾನವಾಗಿವೆ. ಪದಾತಿ ಪ್ರಧಾನವಾದ ದೃಶ್ಯಗಳು ಸರ್ವಸಾಮಾನ್ಯ. ಈ ಸ್ತರವು ಆ ಕಾಲದ ಯೋಧರ ವೇಷಭೂಷಣ, ಬಳಸುವ ಶಸ್ತ್ರಾಸ್ತ್ರ, ಯುದ್ಧದ ರೀತಿಗಳನ್ನು ತಿಳಿಸಿಕೊಡುತ್ತದೆ. ಮಧ್ಯದ ಸ್ತರವು ಮಡಿದ ವೀರನನ್ನು ದೇವಗಣಿಕೆಯರು ಎತ್ತಿಕೊಂಡೊಯ್ಯುವ ದೃಶ್ಯವನ್ನು ಒಳಗೊಂಡಿರುತ್ತದೆ. ಈಗ ಅವನು ಎಡ-ಬಲದ ದೇವಗಣಿಕೆಯರ ಭುಜದ ಮೇಲೆ ಎರಡೂ ಕೈಗಳನ್ನಿಟ್ಟಿರುತ್ತಾನೆ. ಇಲ್ಲವೆ ಅವನು ಕುಳಿತ ವಿಮಾನವನ್ನು ದೇವಗಣಿಕೆಯರು ಹೊತ್ತಿರುತ್ತಾರೆ. ಮೇಲಿನ ಸ್ತರ, ಅವನು ಸ್ವರ್ಗದಲ್ಲಿ ದೇವಸನ್ನಿಧಿ ಸೇರಿದುದನ್ನು ಅಂದರೆ ಶಿವಲಿಂಗದೆದುರು ಕೈಮುಗಿದು ಕುಳಿತುದನ್ನು, ಜೈನನಾಗಿದ್ದರೆ ಜಿನವಿಗ್ರಹದೆದುರು ಕೈಮುಗಿದು ಕುಳಿತುದನ್ನು (ಚಿತ್ರ ೧೭) ಒಳಗೊಂಡಿರುತ್ತದೆ. ಕೆಲವೊಮ್ಮೆ ಈ ಸ್ತರಗಳು ೪-೫ ರ ವರೆಗೆ ಇದ್ದು, ಹೆಚ್ಚಿನ ಸ್ತರಗಳಲ್ಲಿ ಯೋಧರು ಅರಸನಿಂದ ಬೀಳ್ಕೊಳ್ಳುವ ದೃಶ್ಯ, ಪಲ್ಲಕ್ಕಿಯಲ್ಲಿ ಕುಳಿತು ಯುದ್ಧಕ್ಕೆ ಹೋಗುವ ದೃಶ್ಯ (ಚಿತ್ರ ೧೮), ಯುದ್ಧ ಅಥವಾ ಸ್ವರ್ಗಾರೋಹಣದ ಎರಡೆರಡು ದೃಶ್ಯಗಳು ಕೆತ್ತಲ್ಪಟ್ಟಿರುತ್ತದೆ.

ಹಿಂದೆ ಹೇಳಿದ ಲಕ್ಷ್ಮಮ್ಮಗಾವುಂಡಿ, ಹರಿಯಕ್ಕಗಳ ವೀರಗಲ್ಲುಗಳಲ್ಲದೆ ಹೇರೂರು (ಚಿತ್ರ ೧೮ಎ), ಅರಸಿಬೀದಿ, ಗುಡೂರುಗಳಲ್ಲಿ ಸ್ತ್ರೀಯ ಹೋರಾಟ ಮತ್ತು ವೀರಮರಣದ ಶಿಲ್ಪಗಳಿವೆ. ವೀರನ ಘನತೆಗೆ ತಕ್ಕಂತೆ ವೀರಗಲ್ಲು ವಿಸ್ತಾರವೂ ಕಲಾತ್ಮಕವೂ ಆಗಿರುತ್ತದೆ. ಸಾಮಾನ್ಯವಾಗಿ ಇವು ಉಬ್ಬು ಚಿತ್ರಗಳಿದ್ದು ಅಮ್ಮಿನಭಾವಿ, ಬೇಗೂರು, ಬೆಟಗೇರಿ (ಚಿತ್ರ ೧೯ಎ-ಬಿ) ಮೊದಲಾದ ಗ್ರಾಮಗಳಲ್ಲಿಯವು ಸುಂದರ ಮತ್ತು ಸುಪ್ರಸಿದ್ಧ ವೀರಗಲ್ಲುಗಳಾಗಿವೆ. ಅಬ್ಬಲೂರಿದಲ್ಲಿ ಪೆಣ್ಬುಯ್ಯಲಕ್ಕೆ ಸಂಬಂಧಿಸಿದ ೩ ವೀರಗಲ್ಲುಗಳಿದ್ದು, ಸ್ತ್ರೀಯ ಉಡೆ ಬಿಚ್ಚುತ್ತಿರುವ, ನಗ್ನಗೊಳಿಸಿದ, ಸ್ತ್ರೀಯರು ಕೂಸುಗಳನ್ನು ಎದೆಗವಚಿಕೊಂಡು ಭಯಭೀತರಾಗಿ ನಿಂತ ಚಿತ್ರಗಳನ್ನು ಬಿಡಿಸಲಾಗಿದೆ (ಚಿತ್ರ ೨೦). ಇವುಗಳ ಸ್ತರಮಧ್ಯ ಪಟ್ಟಿಕೆಗಳಲ್ಲಿ ಕೆಲವೊಮ್ಮೆ ಪಾಠವನ್ನು ಬರೆದಿರುತ್ತಾರೆ.

---

೨೦೫. ಧಾರವಾಡ ತಾಲೂಕಿನ ಶಾಸನಗಳು ನಂ. ೭, ಅಮ್ಮಿನಬಾವಿ (ಕ್ರಿ.ಶ. ೧೨೪೮). ಆಗ ಈ ಕಲ್ಲು ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಮುಂದಿದೆ.

೨೦೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಪು. ೨೮೦)

ಇಂಥ ಸ್ವರಸಂಯೋಜಿತ ವೀರಗಲ್ಲುಗಳಿಗೆ ಹೊರತಾಗಿ ಬೇರೆ ಬೇರೆ ರೂಪದ ವೀರಗಲ್ಲುಗಳೂ ಕ್ವಚಿತ್ತಾಗಿ ಸಿಗುತ್ತವೆ. ಕೈಯಲ್ಲಿ ಬಿಲ್ಲು, ಖಡ್ಗ ಹಿಡಿದುನಿಂತ ವೀರನ ಚಿತ್ರವನ್ನೊಳಗೊಂಡ ವೀರಗಲ್ಲುಗಳು ಬಸವಕಲ್ಯಾಣ ಭಾಗದಲ್ಲಿ ಸರ್ವಸಾಮಾನ್ಯವಾಗಿದ್ದು, ಅಲ್ಲಿಯ ಇಲಿಹಾಳದಲ್ಲಿ ಇಲಿಹಾಳ ಬೊಮ್ಮಯ್ಯನೆಂದು, ಬೇಲೂರಿನಲ್ಲಿ ಬಿಲ್ಲೇಶ ಬೊಮ್ಮಯ್ಯನೆಂದು, ಕೆಲವು ಊರುಗಳಲ್ಲಿ ವೀರಭದ್ರನೆಂದೂ ಭಾವಿಸಿ ಇವುಗಳನ್ನು ಪೂಜಿಸುತ್ತಾರೆ. ವೀರರಿಬ್ಬರು ಹೋರಾಡುವ ಚಿತ್ರವಿರುವ ವೀರಗಲ್ಲು ಹಿರೇಗುಂಡಗಲ್ಲು ಗ್ರಾಮದಲ್ಲಿದೆ. 'ಆನೆಯೊಳಾನ್ತಿಱಿದು ಸತ್ತ' ನಾಗತ್ತರ ವೀರಗಲ್ಲಿನ (ಬೇಗೂರು) ಕೆಳಭಾಗದಲ್ಲಿ ಗಜಯುದ್ಧಪ್ರಧಾನವಾದ ಚಿತ್ರವಿದ್ದು, ಮೇಲ್ಭಾಗದಲ್ಲಿ ಬರವಣಿಗೆಯಿದೆ. ಕೋಟೂರಿನ ವೀರಗಲ್ಲಿನ ತುದಿಯಲ್ಲಿ ಗಂಭೀರವಾಗಿ ನಿಂತ ಆನೆಯ ಚಿತ್ರವಿದೆ. ಹಂದಿಯೊಡನೆ ನಾಯಿ ಹೋರಾಡುವ ಚಿತ್ರವಿರುವ ವೀರಗಲ್ಲುಗಳು ಆತಕೂರು ಗೊಲ್ಲರಹಟ್ಟಿ, ಯಲಹಂಕಗಳಲ್ಲಿವೆ. ಕೆಳಗಿನ ಸ್ತರದಲ್ಲಿ ಆಕಳ ಮೇಲೆ ಹುಲಿ ಆಕ್ರಮಣ ಮಾಡಿದ, ಮೇಲಿನ ಸ್ತರದಲ್ಲಿ ವೀರಸ್ವರ್ಗವೇರಿದವನನ್ನು ಅಪ್ಸರೆಯರು ಮೇಲಕ್ಕೊಯ್ಯುವ ಚಿತ್ರಗಳನ್ನೊಳಗೊಂಡ ವೀರಗಲ್ಲು ಶ್ರವಣಗುಡಿಯಲ್ಲಿದೆ. ಹಿರೇಕೋಗಿಲೂರು ಮೊದಲಾದ ಗ್ರಾಮಗಳಲ್ಲಿ ವೀರಗಲ್ಲುಗಳನ್ನು ಲಿಂಗದ ಪೀಠದ ಮೇಲೆ ನಿಲ್ಲಿಸಿ, ಈಶ್ವರ ಲಿಂಗದಂತೆ ಪೂಜಿಸುತ್ತಿರುವುದು ಆ ಜನರಿಗೆ ವೀರಗಲ್ಲುಗಳ ಬಗ್ಗೆ ಇರುವ ದೈವೀಭಾವವನ್ನು ವ್ಯಕ್ತಪಡಿಸುತ್ತದೆ.

ವೀರಸ್ವರ್ಗವೇರಿದವರಿಗೆ ದೇವಾಲಯ ಕಟ್ಟಿಸಿದ ಉಲ್ಲೇಖಗಳೂ ಸಿಗುತ್ತವೆ. ಈ ಮಾತಿಗೆ ಚಾಲುಕ್ಯ ಒಂದನೆಯ ಜಯಸಿಂಹನ ಮಹಾಸಾಮಂತ ಆಲಯ್ಯನು ಕುಪ್ಪಗಡ್ಡೆಯಲ್ಲಿ ಮಾಂಡಲಿಕ ಕುಂದಮನೊಡನೆ ಕಾದಿ ಸಾಯಲು, ಅವನ ಮಗ ಜಯಸಿಂಹನು ತಂದೆಯ ಹೆಸರಿನಲ್ಲಿ ಆಲೇಶ್ವರ ದೇವಾಲಯವನ್ನು ಕಟ್ಟಿಸಿದುದು ಉದಾಹರಣೆಯಾಗಿದೆ.[೨೦೭] ಬೂದಿಹಾಳು ಯುದ್ಧದಲ್ಲಿ ವೀರಮರಣವನ್ನಪ್ಪಿದ್ದ ಕುಮಾರ ಮಲ್ಲಯ್ಯನಿಗೆ ದೇವಾಲಯ ಕಟ್ಟಿಸಿದುದಾಗಿ ಸಿರುಮನ ಸಾಂಗತ್ಯ ತಿಳಿಸುತ್ತದೆ.[೨೦೮] ದೇವನಹಳ್ಳಿ ತಾಲೂಕಿನ ನಲ್ಲೂರಿನ ಬಯಲಲ್ಲಿ ಅನೇಕ ವೀರರ ಗುಡಿಗಳು ತೋರಿ ಬರುತ್ತವೆ.[೨೦೯]

ಯುದ್ಧಘಟನೆಯೊಂದು ಸಾಮಾನ್ಯಯೋಧರಿಗೆ ಸಂಬಂಧಿಸಿದ್ದರೆ ಗದ್ಯವನ್ನು, ಮಹಾಯೋಧರಿಗೆ ಸಂಬಂಧಿಸಿದ್ದರೆ ಪದ್ಯವನ್ನು ಬಳಸಿದುದು ಕಂಡುಬರುತ್ತದೆ. ಆದಿ ಇಲ್ಲವೆ ಅಂತ್ಯದಲ್ಲಿ 'ಜಿತೇನ ಲಭ್ಯತೇ ಲಕ್ಷ್ಮೀ ....' ಎಂಬ ಶ್ಲೋಕ ಸರ್ವ ಸಾಮಾನ್ಯ. ಕ್ವಚಿತ್ತಾಗಿ

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲಭೇದಿನೌ ।
ಪರಿವ್ರಾಟ್ ಯೋಗಯುಕ್ತಶ್ಚ ರಣೇಚಾಭಿಮುಖೇ ಹತಃ ॥

ಅಂದರೆ ಸೂರ್ಯಮಂಡಲವನ್ನು ಭೇದಿಸಿ. ಸ್ವರ್ಗಸೇರುವವರು ಇಬ್ಬರು ಮಾತ್ರ. ಒಬ್ಬ ಯೋಗಿ, ಇನ್ನೊಬ್ಬ ರಣಾಂಗಣದಲ್ಲಿ ಮಡಿದ ಪರಾಕ್ರಮಿಯೆಂಬ ಅರ್ಥದ ವ್ಯಾಸಭಾರತೋಕ್ತ ಶ್ಲೋಕ ಕಂಡುಬರುತ್ತದೆ. ಪಂಪಭಾರತದಲ್ಲಿ ಕರ್ಣನ ಅವಸಾನವನ್ನು ಕುರಿತು

ಕುಡುಮಿಂಚಿನ ಸಿಡಿಲುರುಳಿಯೊ
ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್

---

೨೦೭. EC. VIII ಸೊರಬ ೧೮೪. ಕುಪ್ಪಗಡ್ಡೆ (೧೦೩೨)
೨೦೮. ಸಿರುಮನ ಸಾಂಗತ್ಯ (ಅಪ್ರಕಟಿತ) ಸಂಧಿ ೬ ಪದ್ಯ ೭೮-೭೯
೨೦೯. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು (ಡಾ. ಎಂ. ಚಿದಾನಂದಮೂರ್ತಿ) ಪು. ೨೭.

ನಡೆ ನೋಡೆ ನೋಡೆ ದಿನಪನೊ
ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ||[೨೧೦]

ಎಂದು ಹೇಳುವಲ್ಲಿ ಆತನು ಸೂರ್ಯಮಂಡಲ ಭೇದಿಸಿ ವೀರಸ್ವರ್ಗವೇರಿದ ಜೋಳವಾಳಿಯೆಂಬ ಧ್ವನಿಯಡಗಿದೆ. ವೀರಗಲ್ಲುಗಳಲ್ಲಿ ಯುದ್ಧವರ್ಣನೆ ಪ್ರಧಾನವಾಗಿರುವುದು ಸ್ವಾಭಾವಿಕ.

ಕಿಡಿಕಿಡಿ ಸೂಸೆ ಮಸ್ತಕದ ಸಿಪ್ಪುಗಳಾಗಳೆ ಪಾಱೆ ವಾಜಿಗಳ್
ಕಡಿಕಡಿಯಾಗೆ ನೆತ್ತರಕಡಲ್ ಪರಿಯಲ್ ಕಲಿಯಾತನೇಱೆ ಪೊ
ಯ್ದೊಡೆ ಹರಿಪಾಳನಳಿದ ಸಾಳುವನೋಡಿದನೇವೆನೆಂದು ಬಾ
ಯ್ಬಿಡುತುಮೆ ಜೇವಿದೇವನನುವಿಲ್ಲದೆ ಮೆಯ್ದೆಗೆದಂ ಮಹಾಜಿಯೊಳ್ ||[೨೧೧]

ಜೀಯೆನುತಿರೆ ಪರಿವಾರಂ
ರಾಯಂ ಬಲ್ಲಾಳದೇವ ಚಾಗೆನೆ ರಿಪುಗಳ
ಬಾಯನೊಱೆಮಾಡಿ ಖಡ್ಗಮ
ನಾಯತದಿಂ ತೊಡಿಸುತಿರ್ದ ಮೈದುನ ಸೋಮಂ ||[೨೧೨]

ಕಂಡದೊಳಿಂಡೆಯಾಡೆ ಬಿಸುನೆತ್ತರೊಳೋಕುಳಿಯಾಡಿ ಪೆರ್ಚಿ ಮಾ
ರ್ಕೊಂಡೊಡನೆಚ್ಚ ಪೂಣಿಗರ ಪಂದಲೆಯಂ ಪೊಡೆಸೆಂಡನಾಡಿದೊ
ಳ್ಗಂಡನಿವಂ ದಲೆಂದು ಪೊಸಮುತ್ತಿನ ಸೇಸೆಯನಿಕ್ಕಿ ಕೂಡೆ ಕೈ
ಕೊಂಡೊಡನೊಯ್ದರಚ್ಚರಸೆಯಲ್ ಕಲಿ ಚಟ್ಟನನಾಜಿರಂಗದೊಳ್ ||[೨೧೩]

ಮೊದಲಾದ ಪದ್ಯಗಳನ್ನು ಇಲ್ಲಿ ನೋಡಬೇಕು. ಕಟಿಪಲ್ಲಟಮಾಗಿರೆ ಪೊಯ್ದು, ಮಾರಿಯ ಮೂಱೆಯಂತಿರೆ, ಕಣೆಹಂಜರದಲ್ಲಿ ಕನ್ನಗೋ... (ಮ)ಱೆದೊಱಗಿರ್ದಂ, ಪೆಣನಂ ಬಿತ್ತಿದ ತೆಱನಾಯ್ತು, ಪಗೆಯಂ ಪರ್ದಿಂಗೆ ಬಿರ್ದಿಕ್ಕಿದಂ, ನಾಗಂಗಳ ಕಂಡ ಗರುಡನಂತೆ....., ಜವನುಂಡು ಕಾಱೆದಂದದಿ - ಮೊದಲಾದ ಅಭಿವ್ಯಕ್ತಿಗಳನ್ನು ಅವಲೋಕಿಸಬೇಕು.

ವೀರಗಲ್ಲು ನಿಲ್ಲಿಸುವ ಸಂಪ್ರದಾಯ ಕರ್ನಾಟಕದಲ್ಲಿ ತುಂಬ ದಟ್ಟವಾದುದು. ನೆರೆಯ ಮಹಾರಾಷ್ಟ್ರದಲ್ಲಿ ಇಂಥ ಸ್ಮಾರಕಗಳಿಗೆ "ವೀರಗಳ" ಎಂದು ಕರೆಯುವರೆಂಬ, ಅಲ್ಲಿ ಈವರೆಗೆ ಬೆಳಕಿಗೆ ಬಂದಿರುವ ಸಾವಿರಾರು ವೀರಗಲ್ಲುಗಳಲ್ಲಿ ಆರೆ ಲಿಪಿಯವು ಎಷ್ಟು ಹುಡುಕಿದರೂ ಹತ್ತು ಹದಿನೈದಕ್ಕಿಂತ ಹೆಚ್ಚು ದೊರೆತಿಲ್ಲ[೨೧೪] ಎಂಬ ಡಾ. ಶಂ. ಬಾ. ಜೋಶಿಯವರ ಮಾತು ಗಮನಾರ್ಹವಾಗಿದೆ.

೨೧೦. ಪಂಪಭಾರತಂ : ೧೨-೨೧೫

೨೧೧. EC. V. ಬೇಲೂರು ೧೬೫. ಕಟ್ಟೆಸೋಮನಹಳ್ಳಿ (ಕ್ರಿ.ಶ. ೧೨೭೬) ಶಾಸನಪದ್ಯ ಮಂಜರಿ ಪು. ೩೦೩ (೧೯೭೫)

೨೧೨. EC. VII ಹೊನ್ನಾಳಿ ೩೫. ಬೆಳಗುತ್ತಿ (ಕ್ರಿ.ಶ. ೧೧೮೭).

೨೧೩. EC. VII ಹೊನ್ನಾಳಿ ೫೧. ಬೆಳಗುತ್ತಿ (ಕ್ರಿ.ಶ. ೧೧೯೫), EC. VII ಹೊನ್ನಾಳಿ ೫೫. ಕುಳ್ಳಹಳ್ಳಿ (ಕ್ರಿ.ಶ. ೧೨೪೭)
EC. VIII. ಸೊರಬ ೩೬೯, ಕಾಚವಳ್ಳಿ (ಕ್ರಿ.ಶ. ೧೧೫೭) EC. V ಬೇಲೂರು ೨೦೨, ದಬ್ಬೆ ಅಗ್ರಹಾರ (ಕ್ರಿ.ಶ. ೧೧೩೮)
EC. VII ಹೊನ್ನಾಳಿ ೪೮. ಬೆಳಗುತ್ತಿ (ಕ್ರಿ.ಶ. ೧೨೧೬), EC VIII ಸೊರಬ ೨೨೪, ಗೆಂಡ್ಲಗ್ರಾಮ (ಕ್ರಿ.ಶ. ೧೨೧೮)

೨೧೪. ಕನ್ನಡದ ನೆಲೆ (೧೯೩೯) ಪು. ೧೭೪.

ಸಮಾರೋಪ

ಈವರೆಗೆ ವಿವೇಚಿಸಿದ ಮೂರು ಬಗೆಯ ಮರಣಗಳಲ್ಲಿ ಸಮಾಧಿ ಜೈನಪರ, ಮಿಕ್ಕ ಎರಡೂ ಹಿಂದೂಪರ. ಜೈನಕೃತಿಗಳು ಈ ಹಿಂದೂ ಮರಣಗಳನ್ನು ಲೋಕಮೂಢವೆಂದು ಜರೆಯುವುದಕ್ಕೆ ಹಿಂದೆ ಬ್ರಹ್ಮಶಿವನ ಸಮಯಪರೀಕ್ಷೆಯ ಪದ್ಯಗಳಂತೆ ನಯಸೇನನ ಧರ್ಮಾಮೃತದ

ಧುರದೊಳ್ ಕಮ್ಮರಿಯೊಳ್ ಮದೋರ್ವಿರುಹದೊಳ್ ಸಪ್ತಾರ್ಚಿಯೊಳ್‌ನೀರ್ಗಳೊಳ್
ಭರದಿಂ ದೇಹಮನಿಕ್ಕಿಯುಜ್ಜುಗದೆ ಮಿಥ್ಯಾತಿರ್ಥಮಂ ಮಿಂದುಮಾ
ದರದಿಂ ದುಷ್ಟರ ಪೇಟ್ಕೆಯೊಳ್ ನೆಗಟ್ದುಮತ್ಯಾನಂದದಿಂದೆಯ್ದುವೆಂ
ಸುರಲೋಕಂಗಳನೆಂಬ ಗಾವಿಲನವಂ ತಾಂ ಲೋಕಮೂಢಂ ನೃಪಾ ||[೨೧೫]

ಈ ಪದ್ಯವೂ ನಿದರ್ಶವೆನಿಸಿದೆ. ಚೆನ್ನಬಸವಣ್ಣನವರೂ "ಶಸ್ತ್ರ, ಸಮಾಧಿ, ಜಲ, ತಾಡನ, ದಿಗ್ಬಲಿ, ದಹನ ಈ ಆಱಱಲ್ಲಿ ಸತ್ತಡೆ ಅಘೋರನರಕದಲ್ಲಿಕ್ಕುವ ಕೂಡಲ ಚೆನ್ನಸಂಗಮದೇವ"[೨೧೬] ಎಂದು ಈ ಹಿಂದೂ ಮರಣಗಳನ್ನು ನಿರಾಕರಿಸುತ್ತಾರೆ. ಹೀಗಿದ್ದರೂ ಆಗಾಗ ಜೈನರೂ ವೀರಶೈವರೂ ಈ ಹಿಂದೂ ಲೌಕಿಕ ಬಲಿದಾನಮರಣ-ವೀರಮರಣಗಳನ್ನು ಅನುಸರಿಸಿದುದಕ್ಕೆ ಪರಿಸರದ ಪ್ರಭಾವವೇ ಕಾರಣವೆನ್ನಬೇಕು.

ಇವುಗಳಲ್ಲಿ ನಿಷಿಧಿಮರಣ ಧಾರ್ಮಿಕ ಆಚರಣೆಯಾಗಿ ಜೈನರಲ್ಲಿ ಇನ್ನೂ ಬಳಕೆಯಲ್ಲಿದೆ. ಸಾಮಾಜಿಕ ಮೌಲ್ಯವಾದ ವೀರಮರಣ ಮಾತ್ರ 'ಸ್ವಾಮಿಭಕ್ತಿ' ಸ್ವರೂಪ ಬದಲಿಸಿಕೊಂಡು 'ರಾಷ್ಟ್ರಭಕ್ತಿ' ಸ್ವರೂಪದಲ್ಲಿ ಇನ್ನೂ ಜರುಗುತ್ತಲಿದೆ. ಇವು ಮುಂದೆಯೂ ಜರುಗಲಿವೆ. ಆದರೆ ಒಂದು ಕಾಲದಲ್ಲಿ ಮಹಾಮೌಲ್ಯವಾಗಿದ್ದ ಹಿಂದೂ ಬಲಿದಾನಮರಣ ವರ್ಗದ ಧಾರ್ಮಿಕ ಮರಣ, ಸಹಗಮನಮರಣ, ವೇಳವಾಳಿ ಮರಣಗಳನ್ನು ಕಾನೂನುಬದ್ಧವಾಗಿ ನಿಲ್ಲಿಸಲಾಗಿದೆ. ಇವುಗಳನ್ನು ನಿಲ್ಲಿಸಿದುದು ಸ್ವಾಗತಾರ್ಹವಾದರೂ ಪ್ರಾಚೀನಕಾಲದಲ್ಲಿ ದೇವರಿಗಾಗಿ ಭಕ್ತ, ಗಂಡನಿಗಾಗಿ ಹೆಂಡತಿ, ಒಡೆಯನಿಗಾಗಿ ಆಳುಮಾಡಿಕೊಂಡ ಆತ್ಮಾರ್ಪಣೆಯ ಈ ಘಟನೆಗಳು ಅವರ ಬಗ್ಗೆ ನಮ್ಮಲ್ಲಿ ಭಕ್ತಿಯನ್ನು ಉಕ್ಕಿಸುತ್ತವೆ.

ಸಮಾಧಿಮರಣಕ್ಕಿಂತ ವೀರಮರಣ, ಬಲಿದಾನಮರಣಗಳು ಹೆಚ್ಚು ಅನುಕಂಪೆಯನ್ನು ಗಳಿಸಿಕೊಳ್ಳುತ್ತವೆ. ಇದಕ್ಕೆ ಕಾರಣ, ಸಮಾಧಿ ಒಂದು ವಿಧವಾದ ನೈಸರ್ಗಿಕ ಮರಣ. ಮಿಕ್ಕವು ಅನೈಸರ್ಗಿಕಮರಣಗಳು, ನೈಸರ್ಗಿಕಮರಣಕ್ಕಿಂತ ಅನೈಸರ್ಗಿಕ ಮರಣ ನಮ್ಮಲ್ಲಿ ಅಧಿಕ ಕರುಣೆ ಹುಟ್ಟಿಸುವುದು ಸ್ವಾಭಾವಿಕ.

ಅನೈಸರ್ಗಿಕ ಮರಣಗಳಲ್ಲಿ ವೀರಮರಣಕ್ಕಿಂತ ಬಲಿದಾನ ಮರಣ ನಮ್ಮ ಮನಸ್ಸನ್ನು ಹೆಚ್ಚು ಕರಗಿಸುತ್ತದೆ. ಇದಕ್ಕೆ ಕಾರಣ ವೀರಮರಣವು ವೈರಿಯಿಂದ ಆಕಸ್ಮಿಕವಾಗಿ ಪ್ರಾಪ್ತವಾಗುತ್ತದೆ; ಬಲಿದಾನಮರಣವನ್ನು ಪ್ರಜ್ಞಾಪೂರ್ವಕ ಬರಮಾಡಿಕೊಳ್ಳಬೇಕಾಗುತ್ತದೆ.

---

೨೧೫. ಧರ್ಮಾಮೃತ ೫ -೨೪೧.

೨೧೬. ಚೆನ್ನಬಸವಣ್ಣನವರ ವಚನಗಳು, ನಂ. ೬೭೫

ಬಲಿದಾನಮರಣಗಳಲ್ಲಿ ದೇವರಿಗಾಗಿ ಭಕ್ತ ಕೈಕೊಂಡ ಧಾರ್ಮಿಕಬಲಿದಾನವು ಅವ್ಯಕ್ತಶಕ್ತಿಗಾಗಿ ಪ್ರಾಣವನ್ನು ಅರ್ಪಿಸಿದನೆಂಬ ಒಂದು ಬಗೆಯ ನೆಮ್ಮದಿಯನ್ನು ನಮಗುಂಟುಮಾಡುತ್ತದೆ. ಆದರೆ ಪತಿಗಾಗಿ ಸತಿ, ಒಡೆಯನಿಗಾಗಿ ಆಳು ಕೈಕೊಳ್ಳುವ ಲೌಕಿಕ ಬಲಿದಾನಗಳು ಮಾತ್ರ ತೀರ ದುರಂತವೆನಿಸುತ್ತವೆ. ಇವುಗಳಲ್ಲಿಯೇ ಆಳಿನ ಮರಣಕ್ಕಿಂತ ಸತಿಯ ಮರಣ ಅತಿ ದುರಂತವೆನಿಸಿ, ಅವಳ ಬಗ್ಗೆ ಅನುಕಂಪೆಗಿಂತ ಪೂಜ್ಯತೆಯನ್ನು ಹುಟ್ಟಿಸುತ್ತದೆ. ಜನತೆ ಮಡಿದುಹೋದ ತಮ್ಮ ಗ್ರಾಮದ ಜೋಳವಾಳಿ, ವೇಳವಾಳಿಗಳನ್ನು ಮರೆತರೂ ಸತಿಯನ್ನು ಮರೆಯದಿರುವುದೇ ಇದಕ್ಕೆ ನಿದರ್ಶನ.

ಸ್ಮಾರಕಶಿಲೆಗಳು ಮೂಲತಃ ಘಟನೆಯ ದಾಖಲೆ, ವ್ಯಕ್ತಿಯ ಗುಣಗಾನಗಳಾಗಿದ್ದರೂ ಪ್ರಾಚೀನಮೌಲ್ಯಗಳನ್ನು ಪ್ರಚುರಗೊಳಿಸುವ ಪ್ರಸಾರಫಲಕಗಳೂ ಆಗಿವೆ. ಅಂದರೆ ಸಾಹಿತ್ಯ ಮೊದಲಾದ ಮಾಧ್ಯಮಗಳಂತೆ ಈ ಸ್ಮಾರಕಶಿಲೆಗಳೂ ಮೌಲ್ಯಗಳ ಪ್ರಸಾರ ಮಾಧ್ಯಮಗಳೇ ಸರಿ. ಹೀಗಾಗಿ ಇವು ಅಕ್ಷರದ ಮೂಲಕ ಓದುವ, ಚಿತ್ರದ ಮೂಲಕ ನೋಡುವ ಪ್ರಜೆಗಳಿಗೆ ಯುದ್ಧವೀರ, ದಾನವೀರ, ಮಹಾಸತಿ ಮೊದಲಾದ ಆದರ್ಶಗಳನ್ನು ಪ್ರೇರೇಪಿಸುತ್ತಿದ್ದವು. "ರಾಷ್ಟ್ರಕೂಟರ ಕಾಲದ ಶಾಸನವೊಂದರಲ್ಲಿ ಯುದ್ಧದಲ್ಲಿ ಮಡಿದ ಇಬ್ಬರು ಶೂರರ ಸ್ಮಾರಕವಾಗಿ ನಟ್ಟ ವೀರಗಲ್ಲನ್ನು ನೊಳಂಬರು ಸುಟ್ಟರು ಎಂಬ ವಿಷಯ ಬರುತ್ತದೆ. (ಊರಿನ ಜನರು ಸೇರಿ ಆ ವೀರಗಲ್ಲನ್ನು ಮತ್ತೆ ಪ್ರತಿಷ್ಠಿಸುತ್ತಾರೆ). ಇದರಿಂದ ಒಂದು ವಿಷಯವು ಸೂಚಿತವಾಗುತ್ತದೆ. ವೀರನ ಸಾವನ್ನು ಹೇಳುವ ವೀರಗಲ್ಲು ಅವರ ಹೆಸರನ್ನು ಶಾಶ್ವತವಾಗಿ ಮಾಡುತ್ತಿತ್ತಲ್ಲದೆ ಅವನ ಕಡೆಯವರಿಗೆ ಧೈರ್ಯ, ಶಕ್ತಿ, ಉತ್ಸಾಹಗಳನ್ನು ತುಂಬುತ್ತಿತ್ತು. ಇದನ್ನು ತಪ್ಪಿಸುವ ಸಲುವಾಗಿ ನೊಳಂಬರು ಆ ವೀರಗಲ್ಲನ್ನು ಸುಟ್ಟಿರಬಹುದೆ? ಎಂಬ ಶಂಕೆ ಮೂಡುತ್ತದೆ."[೨೧೭]

ಈ ಮಾತುಗಳನ್ನು ಗಮನಿಸಿದರೆ ಸಮಾಜದಲ್ಲಿ ಮೌಲ್ಯಗಳನ್ನು ಜೀವಂತವಾಗಿಡಲು ಸ್ಮಾರಕಶಿಲೆಗಳು ವಹಿಸುತ್ತಿದ್ದ ಪಾತ್ರ ಸ್ಪಷ್ಟವಾಗುತ್ತದೆ.

ನಿಜವಾಗಿಯೂ ನಮ್ಮ ರಾಷ್ಟ್ರದ ಇತಿಹಾಸವೆಂದರೆ ಕೇವಲ ಕವಿಗಳು ಬರೆದಿಟ್ಟ 'ಕಾಳಗದ ಕಥೆಯಲ್ಲ', ಕರಣಿಕರು ಬರೆದಿಟ್ಟ ಕೃತಕ ದಾಖಲೆಗಳಲ್ಲ. ಈ ರಾಷ್ಟ್ರದ ಪ್ರಜೆಗಳು ಯಾವ ಆದರ್ಶಗಳಿಗಾಗಿ ಯಾವ ಮೌಲ್ಯಗಳಿಗಾಗಿ ಬಾಳಿದರೆಂಬುದು; ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಹೇಗೆ ನಡೆದುಕೊಂಡರೆಂಬುದು. ಕಾರಣ, ಕರ್ನಾಟಕದ ಪ್ರಾಚೀನ ಇತಿಹಾಸವನ್ನು ಪುನರ್ರಚಿಸುವುದಕ್ಕೆ ಈ 'ಅಸಾಮಾನ್ಯ ಮರಣ'ಗಳ ಅಭ್ಯಾಸ ತುಂಬ ಪೂರಕವೆನಿಸುತ್ತದೆ. ಆದರೆ ಶಾಸನ, ಕಾವ್ಯ, ವಿಗ್ರಹ, ವದಂತಿ, ಅವಶೇಷ-ಹೀಗೆ ಹಲವು ಹತ್ತು ಮುಖಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಇವುಗಳನ್ನು ಅಕ್ಷರರೂಪದಲ್ಲಿ, ಚಿತ್ರರೂಪದಲ್ಲಿ, ಚಲನಚಿತ್ರರೂಪದಲ್ಲಿ, ಧ್ವನಿಮುದ್ರಿಕೆರೂಪದಲ್ಲಿ ಸಂಗ್ರಹಿಸಬೇಕು, ಸಂಶ್ಲೇಷಿಸಬೇಕು, ಸಂಯೋಜಿಸಬೇಕು. ಆಗ ಭೂತಕಾಲದ ಭವ್ಯ ಪರಂಪರೆ ವರ್ತಮಾನಕಾಲಕ್ಕೆ ಬೆಳಕು ನೀಡುತ್ತದೆ; ಭವಿಷ್ಯತ್ ಕಾಲಕ್ಕೆ ಬೆಳಕಾಗಿ ನಿಲ್ಲುತ್ತದೆ.

❖❖

೨೧೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಡಾ. ಎಂ. ಚಿದಾನಂದಮೂರ್ತಿ)ಪು. ೨೫೦

ಅನುಬಂಧ

* ಮಹಾಮರಣ ಸಂದರ್ಭದ ಪದ್ಯಗಳು

ಮಹಾಮರಣ ಸಂದರ್ಭದ ಪದ್ಯಗಳು

೧. ನಿಂಬಸಾಮಂತ ಚರಿತೆ

ಕೊಲ್ಲಾಪುರ ರಾಜಧಾನಿಯಿಂದ ಆಳುತ್ತಲಿದ್ದ ಶಿಲಾಹಾರ ಗಂಡರಾದಿತ್ಯನ ಮೇಲೆ ಕಲಚುರಿ ಬಿಜ್ಜಳ ಏರಿಬಂದ, ಗಂಡರಾದಿತ್ಯನ ಸಾಮಂತ ನಿಂಬನು ತನ್ನ ಜೈನಧರ್ಮದ ರೀತಿ ಸಲ್ಲೇಖನ ವ್ರತಧರಿಸಿ ಬಿಜ್ಜಳನನ್ನು ಎದುರಿಸಿದ, ಹೋರಾಟದ ಕೊನೆಯ ದಿನ ದಣಿದ ಅವನ ಕುದುರೆ ರಣರಂಗ ಪ್ರವೇಶಕ್ಕೆ ಅಸಮ್ಮತಿಸಲು ತನ್ನ ಉತ್ತರೀಯದಿಂದ ಕಣ್ಣು ಕಟ್ಟಿ, ಅದನ್ನು ಸೈನ್ಯದ ಮಧ್ಯ ಹರಿಬಿಟ್ಟು ಹೋರಾಟ ಮುಂದುವರಿಸಿ ಬಿಜ್ಜಳ ಏರಿದ ಆನೆಯನ್ನು ಕೊಂದು, ತಾನೂ ವೀರಮರಣ ಅಪ್ಪಿದ ವಿವರಗಳನ್ನೊಳಗೊಂಡ ಸಂದರ್ಭ.

ಸಂಧಿ : ೩

ಮುದದಿ ಬಿಜ್ಜಳನೆಂಬ [ರೋ]ಷವ। ನೊದಗಿಸುವ ಮದಗಜವ ಹಣಿವೆನು।
ತ್ರಿದಶಪತಿನತ ಮಹಿಮೆಯರ[ಸಿಯೆ] ಭಾಷೆಯಾಜ್ಞೆಯಲಿ।
ಸದಳವೆಂಬ ಭವಾಂಬುಧಿಯನಿಂ। ದೊ[ದೆದು] ದಾಂಟುವೆ ನಿವೃತಿ ಮಹಾ।
ಸುದುರಿಪತಿಗೆರಮನು ನಿ[ಶ್ಚಿತ [ಜೀವಿತವ ಪಡೆವೆ] ॥೭೮॥

ಮುನಿಗಳಾ ಸಜ್ಜನಜನರು [ಧು]ರ।ದನುವರದೊಳಗೆ ನಿಂಬ ತನ್ನಯ।
ತನುವನಳಿವುದನರಿತವರು ಕಣ್ಬನಿಯ ತೀವಿದರು।
ಜನಪನನುವರ[ಕಾದೆ ವಲ ನೀ। ತನುವನಳ್ಕಾಡಿದಿರೆನುತ ಘೋ]॥
ಳೆನುತ ಮರುಗಿದುದಾಗ ಚಾತುರ್ವರ್ಣ ಸಂದೋಹ ॥೮೩॥

ಸಂಧಿ : ೫

ಒಂದು ತುರಗವನೇರಿ ಬೀದಿಯ।ನೊಂದ ಮಾಡಿದನೆಡಬಲನ ಬಲು।
ಬಂದ ದೊರೆ[ಗಳ] ನೋಡಿ ಬೋಳೈಸಿದನು ಕತ್ತಳನ।
ದಂದುಗದ ಭವಶರದಿಯನು ನಾ।ನೆಂದು ದಾಂಟುವೆನೆಂದು ಮನದೊಳ।
ಗೆಂದು ಸನ್ಯಾಸವನು ರಣಮೋನವನು ಕೈಕೊಂಡ ॥೧॥

ಇಟ್ಟಗಲ ದಾಂಟಿದುದು ಕತ್ತಳ। ಬಟ್ಟೆಗೊಟ್ಟುದು ಸಮರದಲಿ ಬಲ।
ಕಟ್ಟಿದಿರಿನಲಿ ನೂಂಕಲಾ ಹಯ ಗಜಕೆ ಹಿಮ್ಮೆಟ್ಟಿ।
ಉಟ್ಟ ಪಟ್ಟಾವಳಿಯ ದಟ್ಟಿಯ।ಕಟ್ಟಿದನು ಕತ್ತಳನ ಕಣ್ಣನು।
ಬಿಟ್ಟನತಿ ವೇಗದಲಿ ಬಿಜ್ಜಣನೆಡೆಗೆ ಸಾಮಂತ ॥೬೩॥

ನುಡಿದ ಬಾಸೆಗೆ ಬಿಜ್ಜಣನ ಮೇ।ಲಡರಿದೊಡೆ ಸಾವಂತನನು ಗಜ।
ವೊಡನೆ ಕತ್ತಳ ಸಹಿತ ಹಿಡಿದೀಡಾರಿತಂಬರಕೆ।
ಕಡುಭರದೊಳಬ್ಬರಿಸಿ ಬೀಳುತ। ಲೆಡೆಗುಡದೆ ಗಜಮಸ್ತಕವ ಬರ।
ಸಿಡಿಲೆರಗಿ ಹೊಯ್ವಂದದಲಿ ಹೊಯ್ದೊರಗಿದನು ಧರೆಗೆ ॥೬೫॥

ತನುಧರೆಯೊಳೆರಗಿದುದು ನಿಂಬನ। ಮನ ಜಿನರ ಪದಕೆರಗಿದುದನರಿ।
ತನಿಮಿಷರು ಪುಷ್ಪಕದೊಳುರವಣಿಸಿದರು ತಮತಮಗೆ।
ಘನಮಹಾ ದುಂದುಭಿ ಮೊಳಗಲಾ। ತನ ತನುವನು ಪ್ರದಕ್ಷಣಂಗೆ।
ಯ್ದನುನಯದಿ ಪೂಜಿಸಲು ಪಂಚಮಶಬ್ದ ಮೊಳಗಿದುದು ॥೮೮॥

ಕರಿಯ ಮಲ್ಲಿಗೆ ಪುಷ್ಪ ಜಾಜಿಯ। ಬಿರಿಮುಗುಳ ಸೇವಂತಿಗೆಯ ಸಿಂ।
ಧುರುವ ಪೊಂದಾವರೆಯ ಸುರಗಿಯ ನೀಲಕೈರವದ।
ಸುರಕುಜದ ಪಲ್ಲವದ ಕುಂಕುಮ।ವರಸುಗಂಧಾಕ್ಷತೆಯ[ಲಿಂ]ದ್ರರು।
ಸರಿವೆರಸಿ ನಿಂಬನ ತನುವಿಗಭಿಷೇಕವಂ ಮಾಡಿ ॥೮೯॥

ಸುರರ ಸುರಕನ್ನಿಕೆಯರಿರಿದಿರ್ಗೊಂ। ಡುರುಮುದದಿ ಸೌಧರ್ಮಕಲ್ಪದೊ।
ಳಿರಲು ಪರಮಾಯುಷ್ಯದಿಂದದು ಸಾಗರರೋಪಮವು।
ಪರಮಜಿನಪದ ಭಕ್ತಿಯಿಂದನ। ವರತ ಸುಖದಿಂ ಬಾಳ್ವದಿದು ನಿ।
ರ್ಧರವೆನುತ ನಂಬುವುದು ರತ್ನತರಯವಿಭೂಷಣರು ॥೯೧॥

■■

೨. ಸಿರುಮಣನಾಯಕನ ಸಾಂಗತ್ಯ

ಸಿರುಮನ ಮಗ ಕಾಟಣ್ಣ ಸೈನ್ಯ ಕೂಡಿಸಿ ಬಾಗೂರ ಭೈರನ ಮೇಲೆ ಏರಿಹೋದನು.

ಸಂಧಿ : ೨

ಮಡದಿ ಮಕ್ಕಳ ಮೇಲಣಾಸೆಯುಳ್ಳವರೆಲ್ಲ। ಕಡೆಗೆ ಸನ್ನಿರೊ ಬೇಗಲೆನುತ।
ಉಡಿದಾರವ ಕಿತ್ತು ಕಡುಗಲಿ ವೀರರು। ಹಿಡಿಯಿರೊ ಬೇಗ ವೀಳೆಯವ ॥೩೭॥

[ತೋಟಿಗೆ] ಹೋಗುವ ಕಂದ ಕಾಚನ ತಾಯಿ। ಊಟಕೆ ಕರೆದು ಬೋಳೈಸಿ।
ಮೂಟಿನ ಮನ್ನೇರ ಗಂಡನ ಭಟರಿಗೆ। ಚಾಪೆಗೂಳುಗಳನಿಕ್ಕಿದಳು ॥೩೮॥

ಮಜ್ಜನ ಭೋಗನವನು ಮಾಡಿ ಕಾಚಯ್ಯ। ಗರ್ಜಿಸಿ ಹೊರಟ ಮಂದಿರವ।
ಅಬ್ಜಮುಖಿಯರಾರತಿ ಸೇಸೆಯನಿಟ್ಟು। ಜುರ್ಝೂರವಾಗುವಿನೆಂದ(?) ॥೩೯॥

ಬಾವನ್ನ ವೀರಕುಮಾರ ಕಾಚನ ಮಂದಿ। ಜೀವದಾಸೆಗೆ ಅಳುಕುವರೆ।
ಹೇವ[ಗೆ]ಡಿಸಿ ತುಂಡುಗಡಿದು ಹೋಗುವೆನೆಂದ। ಸಾಹಸಮಲ್ಲ ಬಾಗೂರ। ॥೪೧॥

ಕೊಂಡಕೆ ವೀರರು ನಡೆವಂತೆ ಕಾಚಣ್ಣ। ಗಂಡುಗಲಿಯು ನಸುನಗುತ।
ಹಿಂಡೊಡೆಯದೆ ಕೂಡ ಬನ್ನಿರೊ ನನಗುಳ್ಳ। ಗಂಡಗಲಿಗಳೆಡಬಲದಿ ॥೪೫॥

ಬಲ[ವ]ಂತ ವೀರ ಕಾಚನ ಮಂದಿ ನಿಂದರು। ತೊಲಗದ ಕಂಬದಂದದಲಿ।
ತಲೆವಿಲ್ಲುಗೊಂಡು ಬಾಣದ ಮಳೆಗರೆಯಲು। ಕೊಲೆಯನದೇನ ಹೇಳುವೆನು ॥೬೬॥

ಡೆಂಕಣಿ ತಿಪ್ಪನ ಗುಂಡಿನೇಟಿಗೆ ಸಿರುಮನ ಮಗ ಮಲ್ಲಣ್ಣ ಮಡಿದ. ಆಗ ಅವನ ಮಡದಿರು ಸತಿಹೋದರು.

ಸಂಧಿ : ೩

ನೆತ್ತವನಾಡುತ ಸಿರುಮಯ್ಯ ಮಗ ವೀರ। ಸತ್ತನೆಂಬುದ[ನು] ಕೇಳುತಲಿ।
ಚಿತ್ತವಿಭ್ರಮನಾಗಿ ಸೋಮಯ್ಯ ಒಲ್ಲನೆಂ। ದೊತ್ತಿಕೊಂಡನು ಕಣ್ಣನೀರ। ॥೧೫೩॥

ಪಚ್ಚೆಕರ್ಪುರವ ಬಾಯಲಿ ತುಂಬಿ ವೀರಗೆ। ಉತ್ತಮ ನಾಣ್ಯವ ಪೊದಿಸಿ।
ಎತ್ತಿ ತಕ್ಕೈಸಿ ಶೃಂಗಾರ ಮಾಡಿದರಾಗ। ಮೊತ್ತದ ಜನರು ಶೋಕಿಸುತ ॥೧೫೫॥

ಕಡುಗಲಿ ವೀರನ ರಾಣಿವಾಸವು ಬನ್ನಿ। ಒಡನೆ ಒಕ್ಕಲ ಹೋಗಬೇಕು।
ನುಡಿಯಡಗದ ಮುನ್ನ[ವೆ] ಬೊಬ್ಬೆಗುಡತಲಿ। ನಡೆದು ಬಂದರು ಪತಿಯೆಡೆಗೆ ॥೧೬೬॥

ಹೊನ್ನ ಪುತ್ಥಳಿಯ ಹೋಲುವ ಮುಖಕಾಂತಿಯ। ರನ್ನಗನ್ನಡಿಗದಮುಗ[ಳ]।
ಚೆನ್ನ ಮುತ್ತಿನ ಬಯಿತಲೆಬೊಟ್ಟನಿಟ್ಟ[ರು]। ರನ್ನ ಮಾಣಿಕದ ಹಾರಗ[ಳ] ॥೧೬೭॥

ಉತ್ತಮ ನಾಣ್ಯದುಕೂಲ ಸೀರೆಗಳನು। ಮತ್ತೆ [ನಿ]ರಿಯ ತೆಗೆದುಟ್ಟು।
ಕತ್ತುರಿ ಪುಣುಗು ಜವಾದಿಯ ಲೇಪಿಸಿ। ಹಸ್ತಕಿಟ್ಟರು ರನ್ನಬಳೆಯ ॥೧೬೮॥

ಕಾರ್ಮಿಂಚು ಹೊಳೆವಂತೆ ಶೃಂಗಾರವ ಮಾಡಿ। ನಾರಿಯರತಿ ಪುಟವೇರಿ।
ವೀರಣ್ಣನಡಿಗೆ ವಂದಿಸಿ ಬೇಡಿಕೊಂಡರು। ವೀರಸ್ವರ್ಗವನು ಕೊಡೆಂದು ॥೧೬೯॥

ಕಾಮಿನಿಯರು ಶೃಂಗರವಾಗಿ ಕಳೆಯೇರಿ। ಹೇಮಾಭರಣವ ರಚಿಸಿ।
ತಾಮಸವಿಲ್ಲದೆ ನಡೆದು ವಂದಿಸಿದರು। ಸೋಮೇಶಲಿಂಗನಂಘ್ರಿಯಲಿ ॥೧೭೦॥

ಗುರುಹಿರಿಯರ ಪಾದಕೆರಗಿ ಭಾವಕಿಯರು। ತಿರುಗಿ ಬಂದರು ಪತಿಯೆಡೆಗೆ।
ಕರವ ಮುಗಿದು ಸಿರುಮಯ್ಯ ನುಡಿದನಾಗ। ಗರುವ ಮಗನ ರಾಣಿಯರಿಗೆ ॥೧೭೧॥
ತಪವಿರ್ದು ಹಡೆದೆನೀ ಕಂದ ವೀರಯ್ಯನ। ತಪವಿಂದು ನಿಷ್ಫಲವಾಯ್ತು।
ತಪಸಿ ವೀರೇಶ್ವರಲಿಂಗನಾಲಯದಲಿ।ವಿಪರೀತವಾಯ್ತು ಸಮಾಧಿ ॥೧೭೨॥

ಪನ್ನಂಗ [ತೊ]ಳಗೆ ಕುಮಾರ ವೀರಯ್ಯನ। ಕನ್ನೆವೆಂಡಿರು ತುರಗದಲಿ।
ಚೆನ್ನ ಸ್ವರ್ಗವ ಸೂರೆಗೊಂಬಂತೆ ನಡೆದರು। ಉನ್ನಂತವರಸಮಗೃಹಕೆ ॥೧೭೩॥

ಕೆಂಡಗಣ್ಣನ [ರು]ಂಡಗೈಯನಸಮವಹಿ। ಕುಂಡಲ ಕೊರಳಗರಳನ।
ಖಂಡ ಪರಶುಗೆಣೆ[ಯರ] ಮಾನ್ಯರಂಘ್ರಿಗೆ। ದಿಂಡುಗೆಡೆದು ಹೊರಳಿದರು ॥೧೭೪॥

ಬಾಗಿನವನು ಕೊಟ್ಟು ಬಂದರು ಸತಿಯರು। ಬೇಗ ಸಮಾಧಿಗೆ ಕುಳಿತು।
ಭೋಗಿಭೂಷಣ ಕೈಲಾಸಕೆ ನಡೆಯೆನು।ತಾಗ ಸಮಾಧಿ[ಯು]ಮುಗಿಯೆ ॥೧೭೫॥

ನರಸಿಂಹನ ಪರವಾಗಿ ಹೋರಾಡಿ ಮಡಿದ ಕಾಕೀಶನ ಶವವನ್ನು ಸಂಸ್ಕಾರಗೊಳಿಸಿದರು.

ಸಂಧಿ : ೪

ಮಡಿದ ಕಾಕೀಶನ ಪಲ್ಲಕ್ಕಿ ಸಹಿತಲಿ। ಒಡೆಯ ಸಾಳುವನ ಮುಂದಣಿಗೆ।
ನುಡಿಯ ಕೇಳುತಲಿ ಹವ್ವನೆ ಹಾರಿ ನರಸಿಂಹ। ಮಿಡಿದನು ಕಣ್ಣನೀರುಗಳ ॥೧೬॥

ತರಿಸಿದ ಗಂಧ ಕಸ್ತೂರಿ ಜವಾದಿಯ। ಬೆರೆಸಿ ಪನ್ನೀರ ಕರ್ಪುರವ।

ಧರಿಸಿ ಮಸ್ತಕ[ಕೆ]ಸರ್ವಾಂಗಕ್ಕೆ ಲೇಪಿಸಿ। ವರದುಕೂಲವನಂದು ಹೊದಿಸೆ ॥೧೮॥

ಗಂಧದ ಕೊರಡನೊಟ್ಟಿಸಿ ನಾಣ್ಯನಾಣ್ಯವ। ತಂದೆಣ್ಣೆಯೊಳಗದ್ದಿಸುತ್ತ।
[ವೊಂದಿ]ದ ಕಾಕೀಶನ ಪಾವಕಗಿಡೆ। ಬೆಂದನು ನಿರ್ಧೂಮವಾಗಿ ॥೧೯॥

ಸೋಲು ಖಚಿತವಾಗಲು ಸಿರುಮ ತನ್ನ ಅರಮನೆಯಲ್ಲಿ ಸಕಲ ಪರಿವಾರ ಸಂಪತ್ತನೆಲ್ಲ ಅಗ್ನಿಗಾಹುತಿ ಮಾಡಿದ.

ಸಂಧಿ : ೫

ತೊಟ್ಟಿಯ ಮಾಳಿಗೆಯನು ಕಿತ್ತು ಕೊಂಡದೊ।ಳೊಟ್ಟಿ ಕೆಂಡವ ಬೇಗ ಮಾಡಿ ॥೨೧॥

ಅರುನೂರು ರಂಭೆವೆಣ್ಣಿಗೆ ತಂದು ಕೊಟ್ಟರು। ಕುರಿಹಿನ ಕಾಲಕುಪ್ಪಸವ।
ಮೆರೆವ ರಭಸಕೆ ಸೂಸಕ ದಂಡೆಯ ತಮ್ಮ। ತುರುಬಿನೊಳಳವಡಿಸಿದರು ॥೨೨॥

ದರುಶನ ಕಳೆಯುಳ್ಳ ಹೆಣ್ಣುಮಕ್ಕಳಿಗೆಲ್ಲ। ಬೆರಸಿ ಕರ್ಪೂರ ತೈಲವನು।
ತರಸಿ ಹೇಮದ ಬಟ್ಟಲೊಳು ಕೊಡೆ ವಿಷಕೊಂಡು। ಸೊರಗಿ ಬಿದ್ದರು ಅವನಿಯಲಿ ॥೨೩॥

ಹಿರಿಯ ಕಾಚಣ್ಣ ರಾಟಿಯ ಸೋಮಯ್ಯಗೆ। ಬೆರಸಿ ಕೊಟ್ಟರು ಬಟ್ಟಲೊಳಗೆ।
ಮರವಟ್ಟು ಸೊರಗಿ ಬೀಳಲು ಕೊಂಡಕೆಳೆದ[ನು]। ದುರಳ ಕುಮಾರ ಮಲ್ಲಣನು ॥೨೪॥

ಬೇಕಾದ ನಾಣ್ಯನಾಣ್ಯವನೆಣ್ಣೆಯೊಳಗದ್ದಿ। ಹಾಕುತಿರ್ದರು ಕೊಂಡದೊಳಗೆ।
ಆಕರವಾದ ವಸ್ತುವನೆಲ್ಲ ತಂದೊಡ್ಡಿ। ನೂಕಿದರಾ ಪಾವಕ[ನೊಳು] ॥೨೫॥

ಉತ್ತಮ ರತ್ನ ಮೌಕ್ತಿಕ ವೈಢೂರ್ಯವ। ಮತ್ತೆ ಕಲ್ಲೊಳಗೊಡೆದೊಡೆದು।
ಕಸ್ತೂರಿ ಝುಲ್ಲಿ ಪಟ್ಟೆಯ ದಿಂಡು ಮೊದಲಾಗಿ। ಒಟ್ಟುತಿರ್ದರು ಕಿಚ್ಚಿನೊಳಗೆ ॥೨೬॥

ಹರಿವಾಣ ಗಿಂಡಿ ಬಟ್ಟಲು ಚೆಂಬು ಹೂಜೆಯ।ಪರಿಪರಿಯುಪಕರಣವನು।
ಪರರಿಗೆ ಸಿಕ್ಕದಂದದಿ ಕಿಚ್ಚಿನೊಳು ಹಾಕಿ।ಕರೆಸಿದ ರಾಣಿವಾಸವನು। ॥೨೭॥

ಉಡಿಗೆ ರವಿಕೆ ಜಡೆ ತೊಡೆಯ ಕುಪ್ಪಸ ಮೈಯೊ।ಳಿಡಿದ ಗಂಧದ ಲೇಪವನು।
ಮಡದಿಯರಲ್ಲಿ ಬೊಬ್ಬಿಡುತ ಬರಲು ಕಂಡು।ಕಡುಗಲಿಗಳು ಕೈಮಾಡಿದರು ॥೨೮॥

ಮಂಡೆಯ ಬೀಳ ಹೊಯಿದು ಕೊಂಡಕೆಳೆವರ। ಕಂಡು ನಗುತ ಸಿರುಮಯನು।
ಭಂಡಾರಿ ಬಸವಣ್ಣ ಬಲ್ಲನೀ ನೋವನು। ಕಂಡು ಸೈರಿಸುವವರುಂಟೆ ॥೨೯॥

ಮೊಲೆಯ ಕಣ್ಣಿನ ಮೇಲೆ ಗೆಲತಾಗಲಿದರೆ। ನೆಲವ ಕಚ್ಚುತ ಬಾಯಬಿಡುತ।
ಕಲಿಗಳ ದೇವ ಕುಮಾರ ಮಲ್ಲಣ್ಣನು। ಸಲೆ ಕೊಂಡಕೆಳೆದು ನೂಕುತಲಿ ॥೩೦॥

ಮಿಡಿಯ ಗಾಯಕೆ ಬಿದ್ದ ಮಡದಿಯರೆಲ್ಲರ। ಕೆಡಹಿ ಕೊರಳ ಕೊಯ್ಯುತಲಿ।
ಹಿಡಿಹಿಡಿದೆತ್ತಿ ಕೊಂಡಕೆ ಹಾಕಿ ಮಲ್ಲಣ್ಣ। ಸುಡು ಸಂಸಾರವೇಕೆಂದ ॥೩೧॥

ಮದನನ ಮದದಾನೆಯಂತೆ ಬಾಲೆಯರೆಲ್ಲ। ಇದಿರಾಗಿ ಬಂದು ನಿಲ್ಲುತಲಿ।
ಮಿದುಳು ಸುರಿದು ಬಲುಗಾಯದ ಹೆಂಗಳ। ಕದುಬಿ ಕೊಂಡಕೆ ಹಾಕುತಿರಲು ॥೩೨॥

ಸೆಳೆನಡು ಬಳಕುತ ಕಳಕಳಿಸುತ ಮೆಯ್ಯ।[ಲಳವಟ್ಟ] ಪರಿಮಳದಿಂದ।
ಹೊಳೆವ ಹೊಂಬಣ್ಣ ಮೆಯ್ಯವರನಿರಿದು ಬೇಗ।ಲೆಳೆದು ಕೊಂಡೆಕೆ ನೂಕುತಲಿ ॥೩೩॥

ಎಳೆಯ ಮಕ್ಕಳು ಮುಪ್ಪಿನವರೆನ್ನದೆಲ್ಲರು। ಕಳಕಳಿಸದೆ ಕಂಗೆಡದೆ
ಮೊಳಗಿ ಬೊಬ್ಬೆಯ ಕೊಟ್ಟು ಕುಣಿವುತ ಬಿದ್ದರು। ನಳನಳಿಸುವ ಕಿಚ್ಚಿನೊಳಗೆ। ॥೩೪॥

ಹೆಣ್ಣುಗಳೆರಡು ಶೋಕವ ಪಾಡಿ ಕುಣಿವುತ। ಅಣ್ಣಾಜಿ ನೋಡೆಂದು ನಗುತ।
ಕಣ್ಣುಕುಳದ ಮುನ್ನ ಕೊಂಡಕೆ ಬಿದ್ದರು। ಮಣ್ಣಾದರು ಕಿಚ್ಚಿನೊಳಗೆ। ॥೩೫॥

ಮಿಸುನಿ ಬಣ್ಣ[ದ] ಮೋಹದ ರಾಣಿವಾಸವ। ಕುಸುರಿದರಿದು ಕೊಂಡಕೆಳೆದು।
ಉಸಿರಲರಿಯೆ ಒಬ್ಬರುಳಿಯದೆಲ್ಲರ ಕೊಂದು। ಅಸಮವೀರನು ತಿರುಗಿದನು। ॥೩೬॥

ಹೆಂಡತಿ ಚಿಕ್ಕಾಯಿಯನ್ನು ಕೊಲ್ಲಲು ಕೈಯೇಳದಿರಲು ಸಿರುಮ ಅವಳನ್ನು ತನ್ನ ತಮ್ಮ ಮಲ್ಲಣ್ಣನಿಂದ ಕೊಲ್ಲಿಸಿದ.

ಹೆಂಗಳ ರನ್ನೆ ಚಿಕ್ಕಾಯಿ ನಿನ್ನಯ ಕೊಲೆ।ಗಂಗೈಸೆ ಕೈಯೇಳವೆಂದಾ।
ತುಂಗವಿಕ್ರಮ ಮಯಿದುನ ಮಲ್ಲಭೂಪನ। ಅಂಗನೆ ಮುಖ ನೋಡಿ ನಗುತಾ ॥೪೧॥

ಅತ್ತಿಗೆಯಲ್ಲ ಭಾವಿಸುವರೆ ಚಿಕ್ಕಮ್ಮ। ಹೆತ್ತ ತಾಯೋಪಾದಿ ನೀನು।
ಚಿತ್ತದೊಳಗೆ ಕಲಿತನವೆಗ್ಗಳಿಸುತ। ಹಸ್ತವ ಮುಗಿದಳು ಪತಿಗೆ ॥೪೨॥

ಹಿಡಿದ ಖಂಡೆಯವನು ಝಡಿದು ಬೊಬ್ಬಿಡುತಲಿ। ನಡುವ ತುಂಡಿಗೆ ಬೀಳ ಹೊಯಿದ।
ಮೃಡ ಸೋಮಧರ ಬಲ್ಲನೆನುತ ತಲೆಯನೆತ್ತಿ।ಪಿಡಿದು ಕೊಂಡಕೆ ಹಾಕುವಾಗ ॥೪೩॥

ಗಾಯಗೊಂಡ ತಮ್ಮ ಮಲ್ಲಣ್ಣನು ಅಣ್ಣ ಸಿರುಮನಿಗೆ ಬಿನ್ನವಿಸಿಕೊಂಡು, ಅವನಿಂದ ಹತನಾದ.

ಬಿಡು ಬಿಡು ತಡವೇತಕೆ ನಿನ್ನ ಮನಸಿನ। ಕಡುಮರುಕವ ತಲ್ಲಣವ।
ಮಡದಿಮಕ್ಕಳು ದೂರ ಹೋಗದ ಮುನ್ನಲಿ।ಕೊಡು ಬೇಗ ಅಗ್ನಿಗಾಹುತಿಯ ॥೬೮॥

ಪಿಡಿದ ಖಡ್ಗವನೆತ್ತಿ ಜಡಿದು ಹೊಯ್ಯಲು ತಲೆ। ಸಿಡಿದು ಬಿದ್ದಿತು ಕೊಂಡದೊಳಗೆ।
ಮೃಡ ಸೋಮಧರ ಬಲ್ಲನೆನುತಲಾ ಮುಂಡವ।ಪಿಡಿದು ನೂಕಿದನು ಪಾವಕಗೆ ॥೬೯॥

ತಂದೆ ಸಿರುಮನ ಒತ್ತಾಯದ ವಿನಂತಿಯ ಮೇರೆಗೆ ಮಗ ಮಲ್ಲಣ್ಣ ಅವನನ್ನು ಕೊಂದು ಕೊಂಡಕ್ಕೆ ಹಾಕಿದ.

ಹರಸುರ ಬ್ರಹ್ಮಾದಿಗಳಿವರು ಕಂದ। ನರಜೀವರುಗಳ ಪಾಡೇನು।
ಅರಿದು ತಲೆಯ ಕೊಂಡಕೆ ಹಾಕಿ ಹೊಕ್ಕು ಸಂ। ವರಿಸು ಸಾಳ್ವ ಮಾರ್ಬಲವ ॥೮೦॥

ಬೇಡ ಬೇಡಕಟ ಮಗನೆ ನಿನ್ನ ಶೌರ್ಯವು। ರೂಢಿಗೀಶ್ವರ ನೋಡಬೇಕು।
ಖೋಡಿಯಾಗದಲೆನ್ನ ಶಿರವನರಿದು ಬೇಗ। ನೀಡು ಪಾವಕಗೆ ಮಲ್ಲಣ್ಣ ॥೮೧॥

ತಂದೆಯ ಮುಖವನು ನೋಡಿ ಮಲ್ಲಣ್ಣ। ಮುಂದ್ಯೈಸಿದ ತಳಿರಂತೆ।
ಚಂದ್ರಧರನ ಪುರಕೈದು ನೀನೆನುತಲಿ। ಚಂದ್ರಾಯುಧವನೆತ್ತಿ ಜಡಿದು ॥೮೨॥

ಅದೆ ಅದೆ ಕಡಿದ ತಲೆಯ ನಿಂದು ದೇವರ್ಕ।ಳೊದವಿ ನೋಡಿದರು ಖೇಚರದಿ।
ಮದನದಹನನರಸಿಯು ದೇವಗಣಿಕೆ।ರೊದವಿ ನೋಡಿದರು ನಭದೊಳಗೆ ॥೮೩॥

ಅಲಿ ಬೊಬ್ಬಿರಿದು [ಹೊ] ಯ್ಯಲು ಸಿರುಮನ ತಲೆ। ಶೂಲಧರನ ನೆನೆವುತಲಿ।
ಆಲಿಗಚ್ಚರಿ ಮಲ್ಲ ತಲೆಯ ಮುಂಡಾಡಿದ। ಜ್ವಾಲೆಯ ಕೊಂಡ ಮಂಡಲದಿ ॥೮೪॥

ಕೊಂಡಕೆ ತಲೆಯನು ಹಾಕುತ ಮಲ್ಲಣ್ಣ। ಕಂಡುನು ಉರುಬಿ ಹೊಕ್ಕವರ।
ಗಂಡೆದ್ದು ರಣದೊಳು ದಿಂಡುದರಿಯೆ ಸೂಸು। ಕಂಡವೊಕ್ಕವು ರಣದೊಳಗೆ ॥೮೮॥

ಯುದ್ಧದಲ್ಲಿ ಮಡಿದ ಮಲ್ಲಣ್ಣನ ತಲೆಯನ್ನು ನರಸಿಂಹ ಕೊಂಡಕ್ಕೆ ಹಾಕಿಸಿದ. ಮಂತ್ರಿ ಅರಮನೆ ಪ್ರವೇಶಿಸಿ, ಅದು ಸುಟ್ಟು ಹೋದ ವಿವರವನ್ನು ನರಸಿಂಹನಿಗೆ ಒಪ್ಪಿಸಿದ.

ಸುತ್ತ ತಾಗಿದ ಸಬಳ ಗಾಯಕೆ ಮಲ್ಲ। ಚಿತ್ತವ ಮರೆದೊರಗಿದನು।
ಚಿತ್ತಕೆ ಕಳವಳವಿಲ್ಲವೆನುತಲಂಜಿ। ಹತ್ತಿರೆ ಬರಲಮ್ಮದಿರಲು ॥೯೩॥

ಮಂಡಲಪತಿ ಮನದೊಳು ನೊಂದು ಕಳುಹಿದ। ಗಂಡಾಳು ಮಲ್ಲನ ತಲೆಯ।
ಕೊಂಡಕೆ ಹಾಕಿ ಗೊಲ್ಲನ ಮನೆ ಬೊಕ್ಕಸ। ಭಂಡಾರವ ಮುದ್ರಿಸೆಂದ ॥೯೮॥

ಕಸ್ತೂರಿ ಪುಣುಗುಜವಾದಿಯ ತರಿಸಿಯೆ। ಸುತ್ತಿಸಿ ಪಟ್ಟೆಸೀರೆಯನು।
ಮೊತ್ತದ ಪುರಜನ ಸಹಿತ ಬಂದನು ಮಂತ್ರಿ। ಇತ್ತ ಗೊಲ್ಲರ ಅರಮನೆಗೆ ॥೯೯॥

ಕಂಡನು ಅರಮನೆಯನು ಹೊಕ್ಕು ಮಂತ್ರಿಯು। ಕೊಂಡದ ಕೆಂಡ ದಳ್ಳುರಿಯ।
ಮಂಡೆ ತೊನೆದು ರಘುಪತಿ ಬಲ್ಲನೆನುತಲಿ। ರುಂಡ ಮುಂಡಗಳ ಹಾಕಿಸಿದ। ॥೧೦೦॥

ಬೊಕ್ಕಸ ಭಂಡಾರ ಪೆಟ್ಟಿಗೆ ನಾಣ್ಯವ। ಧಿಕ್ಕನೆ ತರಿಸ ಹೇಳಿದನು।
ಹೊಕ್ಕು ಶೋಧಿಸಿದರುಗ್ರಾಣದ ಮನೆಯನು।ಮಿಕ್ಕ ಮಾಳಿಗೆ ತೊಟ್ಟಿಯನು ॥೧೦೧॥

ಅರಮನೆಯೆಲ್ಲವನುರಿ ಕೊಂಡು ಸಿರುಮನ। ಅರಸಿಯರೆಲ್ಲರು ಮಡಿದು।
ಹರುಷವಡಗಿ ಮನನೊಂದು ಮಂತ್ರೀಶನು। ತಿರುಗಿ ಬಂದನು ಚಾವಡಿಗೆ। ॥೧೦೨॥

ಕರೆಸಿದ ಮಂತ್ರಿಗಳರಸನು ಸಿರುಮನ। ಕರಣಿಕರಧಿಕಾರಿಗಳ।
ಅರಮನೆಯುಗ್ರಾಣ ಬೊಕ್ಕಸ ಭಂಡಾರ। ತರಿಸಿ ನೀವೆಂದನಾಗ್ರದಲಿ ॥೧೦೩॥

ಮಂಡಲಪತಿ ಮಂತ್ರಿ ಚಿತ್ತೈಸು ಗೊಲ್ಲನು।ದ್ದಂಡತನದ ಬುದ್ಧಿಯನು।
ಕಂಡವರಿಗೆ ಕೊಟ್ಟು ಚೆಲ್ಲಿ ಕೆಲವ ತನ್ನ। ಕೊಂಡದೊಳಗೆ ಹಾಕಿಸಿದ ॥೧೦೪॥

ಹಿರಿಯರು ಮಾನ್ಯರುಗಳಿಗಿತ್ತ ಕೆಲವನು। ಪುರಜನಗಳಿಗಿತ್ತ ಕೆಲವ।
ಹರಳುಕಲ್ಲು ಮುತ್ತು ಮಾಣಿಕವೆಲ್ಲವ। ತರಿಸಿ ಕೊಂಡಕೆ ಹಾಕಿಸಿದನು ॥೧೦೫॥

ಚಿತ್ರಲಾವಣ್ಯ ದೀಹದ ಹಕ್ಕಿ ಮೊದಲಾಗಿ। ಎತ್ತಿಕೊಂಡಕೆ ಹಾಕಿಸಿದನು।
ಉತ್ತಮ ನಾಣ್ಯ ಪಟ್ಟೆಯ ದಿಂಡು ಮೊದಲಾಗಿ। ಸುತ್ತಿ ಕೊಂಡಕೆ ಹಾಕಿಸಿದನು ॥೧೦೬॥

ಬಳಿಕೊಂದು ಚಿತ್ರವ ಕೇಳು ಮಂತ್ರೀಶ್ವರ। ಉಳಿದ ಹೊನ್ನುಗಳನೆಲ್ಲವನು।
ದಳದ ಮುಂದಕೆ ಚೆಲ್ಲಿ ಕಡಿವುತ ಮಲ್ಲಣ್ಣ। ಇಳೆಯ ಪಾಲರ ಕೆಡಹಿದನು ॥೧೦೭॥

ಝುಲ್ಲಿಯ ಚೌರಿ ಬಂಗಾರವೆಲ್ಲವ ಚಿಕ್ಕ। ಮಲ್ಲಣ್ಣ ಕೊಂಡಕೆ ಚೆಲ್ಲಿ।
ವಲ್ಲಭೆ ಮಾತೆಪಿತರುಗಳೆಲ್ಲರ ಕೊಂದು। ಕಲ್ಲೋಲವಾಗಿ ಮಾಡಿದನು ॥೧೦೮॥

ಎಂದೆಂಬ ನುಡಿಯನು ಕೇಳಿ ಈಶ್ವರ ಮಂತ್ರಿ। ಬಂದನು ರಾಯನೋಲಗಕೆ।
ಹಿಂದುಮುಂದಳ ಕಥೆಯಲ್ಲ ಚಿತ್ತೈಸೆಂದು। ಹೇಳಿದ ಕೈಯನು ಮುಗಿದು ॥೧೦೯॥

ಒಡವೆಯ ಗೊಡವೆ ಎಳ್ಳಿನಿತಿಲ್ಲ ಗೊಲ್ಲನ। ಮಡದಿ ಮಕ್ಕಳು ಮುನ್ನವಿಲ್ಲ।
ಪೊಡವಿಯೊಳಚ್ಚರಿಮಾಡಿ[ದ] ಗೊಲ್ಲನು। ಕಡುಗಲಿ ಎನ್ನಬಹುದವನ ॥೧೧೦॥

■■

೩. ಸಿರುಮನ ಚರಿತೆ

ಸಂಧಿ : ೧೦

ನರಸಿಂಹನ ಪರವಾಗಿ ಎದುರಿಸಿದ ಕಾಕೀಶ ವಿಶ್ವರಾಜಯ್ಯನನ್ನು ಸಿರುಮನ ಮಗ ಮಲ್ಲಯ್ಯ ಕೊಂದುಹಾಕಿದ. ವಿಶ್ವರಾಜನ ಸತಿಯರು ಸಹಗಮನ ಹೊಂದಿದರು.

ನಿಮ್ಮ ರಾಯಗೆ ಕಾಣಿಕೆಯೆಂದು ಮಲ್ಲಣ್ಣ। ಗಮ್ಮನೆ ಕರವೆತ್ತಿ ಪೊಯ್ಯೆ।
ಒಮ್ಮೆಗೆ ವಿಶ್ವರಾಜನ ಪ್ರಾಣವೋಗಲು। ಸುಮ್ಮಾನವಳಿದನಾ ರಾಯ ॥೨೦॥

ಸತ್ತನಯ್ಯ ವಿಶ್ವರಾಜ ಮಂತ್ರೀಶ್ವರ। ಅತ್ತಲವನ ರಾಣಿಯರಿಗೆ।
ಇತ್ತಲು [ಕಿ]ಚ್ಚ ಕಾಣಿಸಿಯೆಂದು। ಮತ್ತೆ ಮಂತ್ರಿಯ ಕಳುಹಿದನು ॥೨೧॥

ನಿಮ್ಮ ಗಂಡನು ಸತ್ತ ಸಹಗಮ[ನ]ಕೇಳಿ। ನಮ್ಮ ರಾಯನು ಕಳುಹಿಸಿದನು।
ಇಮ್ಮಡಿಸಿಯೆ ದುಃಖ ರಾಯನ ಬೈದರು। ಸುಮ್ಮನೆ ಸಾವೊದುಚಿತವೆ ॥೨೨॥

ಗಂಡನ ಶಿರವ ಕಂಡಲ್ಲದೆ ಮಂತ್ರೀಶ। ಕೊಂಡದೊಳಗೆ ಬೀಳರಲಾ।
ಕಂಡಾಗ ಸತಿಯಾ[ಗುವೆವೆಂದು] ಪೇಳ್ದರು। ಚಂಡ ವಿಕ್ರಮ ನರಸಿಂಗಗೆ ॥೨೩॥

ಸತ್ತ ವಿಶ್ವರಾಜನ ತಲೆಗಾಗ। ಮುತ್ತ ನಿವಾಳಿಸಿ ಬಿಸುಟು।
ಅತ್ತಲವನ ಸತಿಯರ ಅಗ್ನಿಗಿಡಿಯೆಂದು। ಮತ್ತೆ ಶಿರವ ಕಳುಹಿದನು ॥೩೦॥

ಚಂಡವಿಕ್ರಮ ಮಂತ್ರೀಶ್ವರ ಪಾಳೆಯದಿ। ಕೊಂಡಗಳನು ಮಾಡಿಸಿದನು।
ತಂಡ ತಂಡದಿ ವಿಶ್ವರಾಜನ। ಹೆಂಡಿರುಗಳ ಕೊಲ್ಲಿಸಿದನು ॥೩೧॥

ನರಸಿಂಹರಾಯನ ಆಜ್ಞೆಯ ಪ್ರಕಾರ ಡೆಂಕಣಿ ತಿಪ್ಪನ ಗುಂಡಿನೇಟಿಗೆ ಸಿರುಮನ ಮಗ ವೀರಣ್ಣ ಮಡಿದ. ಅವನ ಹೆಂಡಿರು ಸತಿಹೋದರು.

ಗುಡುಗುಡುಗುಡು ಢಂಮೆಂದು ಡೆಂಕಣೆ ಗುಂಡು। ಕಡುಗಲಿ ಸಿರುಮನ ಮಗನ।
ಕೆಡಹಿ ಎದೆಯ ತಾಕೆ ಬಿಡಲು ವೀರನು ಪ್ರಾಣ। ಒಡನೆ ಇರ್ದವರು ಗೋಳಿಡಲು ॥೪೩॥

ಕಟ್ಟಿ ಕೂರಿಸಿ ಚಿಮ್ಮುರಿ ಸುತ್ತುಗಳ ಸುತ್ತಿ। ಇಟ್ಟರು ಗಂಧ ಕಸ್ತುರಿಯ।
ಕಟ್ಟಳೆಯಿಲ್ಲದ ಶೃಂಗಾರಗಳ ಮಾಡಿ। ಪಟ್ಟಾವಳಯ ಪೊದಿಸಿದರು ॥೫೨॥

ಬಸವಳಿಯುತ ಒಳಯಿಕೆ ಪೋಗಿ ಚಿಕ್ಕಮ್ಮ। ಸೊಸೆಯರ ಶೃಂಗರಿಸಿದಳು।
ಶಶಿಮುಖಿಯರು ಸಹವೆರಸಿ ಊಟವ ಮಾ[ಡೆ]। ಒಸರಿ ಕಂಬನಿ ಕುಚಕಳಿಯೆ ॥೫೪॥

ಕಾಲ ಕುಪ್ಪಸಗಳ ತೊಡಿಸಿ ರವಿಕೆಗಳ। ಮೇಲೆ ಚಿತ್ರಾವಳಿವುಡಿಸಿ।
ಬಾಲೆಯರ್ ಸಕಲ ಬಂಗಾರ ಭೂಷಣವಿಟ್ಟು। ಲೀಲೇಯಿಂ ನಡೆದರೇನೆಂಬೆ ॥೫೫॥

ಚಿಕ್ಕತ್ತೆ ಸಿರುಮಯ್ಯಗೆ ಶರಣೆಂದು। ಉಕ್ಕುವ [ಅಳಲ] ಸಂತೈಸಿ।
ವಿಕ್ರಮ ವೀರ ಮಾಸ್ತಿಯರು ಮೆರೆದರಾಗ। ಲೆಕ್ಕವಿಲ್ಲದ ವಾದ್ಯಗತಿಗೆ ॥೬೧॥

[ನಿರಿ]ಯ ತಿದ್ದುತ ಮುಂಗುರಳ ನೇವರಿಸುತ। ಸೆರಗ[ನೆ] ಬಿಡಿಸಿ ಸಿಕ್ಕಿಸುತ।
[ಮೆ]ರೆವುತ ಕಿರಿನಗೆ ನಗುತಡಿಯಿಟ್ಟರು। ಪುರದ ಕೇರಿಯೊಳು ನೋಳ್ಪಂತೆ ॥೬೨॥

ನಗೆವೆಣ್ಣುಗಳ ತಕ್ಕಿಸಿಕೊಂಡು ಮುಂಡಾಡಿ। ಬಗಸೆಗಂಗಳ ಭಾವಕಿಯರು।
ಮೊಗ ನೋಡಿ ಮಾತಾಡಿ ಅಕ್ಕಗಳಿರ ಇಂದು। ಅಗಲಿ ಹೋ[ಗುತಲಿವೆ]ಯೆನುತ ॥೬೩॥

ಗಂಗೆಯ ತಡಿಯ ಬಾಗಿನಗಳ ಕೊಟ್ಟರು। ಅಂ[ಗನಾ] ದೇವತೆಯರು।
ಮಂಗಳ ಜಯವೆಂದು ನಡೆತಂದರಾಗಲು। ಹಿಂಗದೆ ಸಮಾಧಿಯೆಡೆಗೆ ॥೬೪॥

ಎತ್ತಿ ತಂದಾರು ಕುಮಾರ ವೀರಣ್ಣನ। ಮತ್ತೆ ಸಮಾಧಿಯೊಳಿರಿಸಿ।
ಹತ್ತಿರಲವನ ಸ್ತ್ರೀಯರ ಕುಳ್ಳಿರಿಸಿಯೆ। [ಹೆತ್ತ] ತಂದೆಯು ಸಿರುಮಯ್ಯ ॥೬೬॥

ಮಗನ ಸೊಸೆ[ಯರ] ಮುಖ ನೋಡುತ ಸಿರು[ಮ]। ಬಗೆಗುಂದಿ ಬಾಯಿಗಕ್ಕಿಯನು।
ಮಿಗೆಯಿಕ್ಕಿ ಸಿರುಮನ ರಮಣಿ ಚಿಕ್ಕಮ್ಮನು। ಅಗಲಿ ಹೋಹರೆ ಕಂದಾಯೆನುತ ॥೬೭॥

ನಂಬುಗೆಗಳ ಕೊಟ್ಟು ಬಂದ ಸಜ್ಜನರೆಲ್ಲ। ತುಂಬಿಯೆ ಮಣ್ಣ ಮುಚ್ಚಿದರು।
ರಂಭೆಯರ್ ಮ[ಡಿಯೆ] ಮುಚ್ಚಿದರು ಸಮಾಧಿ। ಗಳಂಬುಜದಂತೆ ಮುಗಿದವು ॥೬೮॥

■■

೪. ಗೊಲ್ಲ ಸಿರುಮನ ಚರಿತೆ

ದೊರೆ ನರಸಿಂಹನಿಗೂ ಸಿರುಮನಿಗೂ ಬೂದಿಹಾಳದಲ್ಲಿ ಯುದ್ಧಜರುಗಿತು. ನರಸಿಂಹನ ಭಾವ ಕಾಕಿಯ ವಿಶ್ವರಾಜ ಸಿರುಮನ ಮಗ ವೀರಣ್ಣಿ ಎದುರಾಗಿ ಕಾದಿದರು. ಈ ಯುದ್ಧದಲ್ಲಿ ವಿಶ್ವರಾಜ ಮಡಿದ. ಈ ಸಂದರ್ಭದಲ್ಲಿ ಜರುಗಿದ ಮಾಸ್ತಿ ಆಚರಣೆ.

ಸಂಧಿ : ೩

ಇರಿದ ಘಾಯಕೆ ಕರುಳು ಪರಿದ್ವಿಶ್ವರಾಜೇಂದ್ರ। ಕೊರಗಿ ಬಿದ್ದನು ಅಗಳೊಳಗೆ
ಮೊರೆದು ನೆಲನ ಕಚ್ಚಿ ಮುರಿಯಿತು ಪರಿವಾರ। ಅರಸು ಮಡಿಯೆ ದೆಸೆ ದೆಸೆಗೆ ॥೧೬೨॥

[ತ]ಲೆ ಕೊಟ್ಟು ಭಟ್ಟರ ಮಲ್ಲನ ಕಳುಹಿದ। ಛಲದಂಕ ನರಸಿಂಹರಾಯ
ಮೊಲೆಕಟ್ಟು ಕಾಲಕುಪ್ಪಸಗಳ ಹೊಲಿಸಿದ। ಬಲು ಬಿಂಕದ ಮಾಸ್ತಿಯರಿಗೆ ॥೧೬೮॥

ಕಳುಹಿದ ಕಾಲಕುಪ್ಪಸಗಳ ತೊಟ್ಟರು। ಮೊಲೆಕಟ್ಟು ಕಟ್ಟಿ ಸಿಂಗರಿಸಿ।
ಬೆಳಗಿದ ಕನ್ನಡಿವಿಡಿದು ಬಂದರು ಕೂಡೆ। ಥಳಿಲನೆ ರಾಯನೋಲಗಕೆ ॥೧೬೯॥

ಒಂದೊಂದು ಪರಿಯ ಶೃಂಗರಿಸಿ ಮಾಸ್ತಿಯರೆಲ್ಲ। ಇಂದು ಷೋಡಶಕಳೆವೆರಸಿ
ಬಂದರು ರಾಣಿವಾಸಿಯರೆಲ್ಲ ರಾಯರಿಗೆ। ನಿಂದು ಬಿನ್ನಹವ ಮಾಡಿದರು ॥೧೯೦॥

ಪುರುಷನ ಕೊಂದವನ ತಲೆಯ ತಂದಲ್ಲದೆ। ಬೆರಸೆವು ಒಡೆಗಿಚ್ಚ ನಾವು
ಅರಸಿಯರಾಡೆ ಚಿಂತಿಸಿ ಕರ ಕರ ಗುಂದಿ। ವೆರಸಿ ನಂಬುಗೆಗೊಟ್ಟ ರಾಯ ॥೧೯೧॥

ಕಡಿವೆನು ಛಿನ್ನಭಿದ್ರವಮಾಡಿ ವಿಶ್ವನ। ಮಡುಹಿದ ಕೊಮಾರ ವೀರುಗನ
ತಡಬೇಡ ನಿಮ್ಮ ಗಂಡನ ಕೂಡಿಕೊಳ್ಳೆಂದು। ಕಡು ನಂಬುಗೆಯನಿತ್ತ ರಾಯ ॥೧೯೨॥

ಹೆಚ್ಚಿನ ನಂಬುಗೆಗೊಡಲು ರಾಣಿಯರೆಲ್ಲ। ಕಿಚ್ಚ ಹಾಯಲು ತಿರುಗಿದರು
ಅಚ್ಚ ನಿಂಬೆಯ ಹಣ್ಣು ಕನ್ನಡಿವಿಡಿದಾಗ। ಹೆಚ್ಚಿನ ವೀರ ಮಾಸ್ತಿಯರು ॥೧೯೩॥

ತುರಗವನೇರಿ ಮನದಲ್ಲುಬ್ಬಿ ಹರುಷದಿ। ಕಿರುನಗೆಯಿಂದಲಿ ನಗುತ
ಮೆರೆದರು ವೀರ ಮಾಸ್ತಿಯರೆಲ್ಲ ನಲವಿಂದ। ಗರುವ ವಿಶ್ವನ ಪಾಡಿದರು ॥೧೯೪॥

ಮಂಡಲಪತಿ ಪ್ರಧಾನ ಈಶ್ವರಿನಾಯಕ। ಕೊಂಡಗಳನು ಮಾಡಿಸಿದನು।
ಬಂಡಿಬಂಡಿಯಲಿ ಸದೆಯನೊಟ್ಟಿ ಸುಡಿಸುತ। ....ಡಿಸಿದರು ॥೧೯೫॥

ಇತ್ತ ಮಾಸ್ತಿಯರು ಪಾಡುತ ಬಂದು ಗೌರಿಯ। ಅರ್ತಿಯಿಂದಲಿ ನೋಂಪಿ ನೋಂತು
ಮತ್ತೋಡಿ ಬಂದು ಕೊಂಡವ ಸುತ್ತಿ ನಿಂದಾಗ। ಬುತ್ತಿ ಸಂಚಿಗಳ ಹಾಕಿದರು ॥೧೯೬॥

ಅರಸುಮಕ್ಕಳು ರಾಣಿಯ ರಾಹುತರಿಗೆಲ್ಲ। ಹರಸಿ ಕೈಮುಗಿದು ಎಣ್ಣೆಯೊಳು।
ಇರದೆ ನೆಳಲ ನೋಡಿ ಮಸ್ತಕದೊಳಗಾಗ। ಎರಗಿ ಬಿದ್ದರು ಕೊಂಡದೊಳಗೆ ॥೧೯೭॥

ಘೋಳಿಟ್ಟು ಪಾಳೆಯವೆಲ್ಲ ಘೀಳಿಟ್ಟು। ಬೇಳುವೆಗೊಂಡು ನರಸಿಂಹ।
ಆಲೋಚನೆಗೊಂಡು ಮರುಗಿ ದುಃಖವ ತಾಳಿ। ಕಾಳಗಕವ ತಿರುಗಿದನು ॥೧೯೮॥

ವಿಶ್ವರಾಜನನ್ನು ಕಳೆದುಕೊಂಡ ನರಸಿಂಹನ ಆಜ್ಞೆಯಂತೆ ವೀರಣ್ಣನನ್ನು ಗುಂಡಿಕ್ಕಿಕೊಂದ. ತಿಪ್ಪನು ವೀರಣ್ಣನ ತಾಯಿ ಚಿಕ್ಕಮ್ಮ ತಂದೆ ಸಿರುಮ ಸೊಸೆಯಂದಿರ ಮಾಸ್ತಿ ಆಚರಣೆ ಪೂರೈಸಿದರು.

ಬೆರಳ ತೋರಿದರಿಟ್ಟೇನೆಂಬ ಡೆಂಕಣಿ ತಿಪ್ಪ। ಬರಸು ಪಂಥವನೆಂದ ರಾಯ
ಬಿರುದಿನ ಉಡುಗೊರೆ ಕೊಟ್ಟು ಕೊಲ್ಲು ವೀರನ। ಉರಕಿಟ್ಟು ಧರೆಗೆ ಕೆಡಹೆಂದ ॥೨೦೨॥

ಘುಡು ಘುಡು ಘುಮ್ಮೆಂದು ನುಡಿವ ಡೆಂಕಣಿಗುಂಡು।ಕಡುಗಲಿ ಸಿರುಮನ ಮಗನ
ಕೆಡಹಿ ಎದೆಯ ತಾಕಿಬಿಡಲು ವೀರನು ಪ್ರಾಣ। ಒಡನೆ ಇದ್ದವರು ಘೋಳಿಡಲು ॥೨೧೧॥

ಬಂದು ಹೇಳಿದರು ಚಿಕ್ಕರಸಿ ನಿನ್ನ ಕಿರಿಯ। ಕಂದ ವೀರಣ್ಣ ಕಾದಿ ಮಡಿದ।
ಸಂದನೆ ಶಿವನ ಪಾದಕೆ ಎಂದು ಶೋಕದಿ। ಮಂದಿರದ ಸತಿಯರಳಲಿದರು ॥೨೧೮॥

ಕಟ್ಟಿ ಕುಳ್ಳಿರಿಸಿ ಚಿಮ್ಮುರಿ ಸುತ್ತಿ ವೀರಗೆ। ಇಟ್ಟರು ಗಂಧ ಕಸ್ತುರಿಯ।
ಕಟ್ಟಳಿಲ್ಲದೆ ಬಂಗಾರ ಶೃಂಗಾರ ಮಾಡಿ। ಪಟ್ಟಾವಳಿಯ ಹೊದಿಸಿದರು ॥೨೨೦॥

ಬಸವಳಿವುತ ಒಳಯಕೆ ಬಂದು ಚಿಕ್ಕಮ್ಮ। ಸೊಸೆಯರ ಶೃಂಗರಿಸಿದಳು।
ಶಶಿಮುಖಿಯರು ಸಹ ಬೆರಸಿ ಊಟವ ಮಾಡಿ। ಒಸರಿ ಕಣ್ಜರಲ ಕುಚಕಿಳಯೆ ॥೨೨೪॥

ಕಾಲ ಕುಪ್ಪಸಗಳ ತೊಡಿಸಿ ರವುಕಿಗಳ। ಮೇಲೆ ಚಿತ್ರಾಂಬರ ಉಡಿಸಿ
ಬಾಲಯರು ಮೊದಲಿಟ್ಟ ಬಂಗಾರ ತೆಗೆಯದೆ। ಸಾಲಂಚೆಗಮನೇರು ಮೆರೆಯೆ ॥೨೨೫॥

ಕನ್ನಡಿ ಕಠಾರವ ಪಿಡಿದೊಲವಿಂದ। ಹೊನ್ನ ಪುತ್ಥಳಿಗಳಂದಲಿ।
ಚೆನ್ನಾಗಿ ಮಣಿದು ಕುಣಿದು ಅತ್ತೆ ಮಾವಗೆ। ಬಿನ್ನೈಸಿ ಕರಗಳ ಮುಗಿದು ॥೨೨೯॥

ಚಿಕ್ಕತ್ತೆ ಮಾವ ಸಿರುಮೇಂದ್ರಗೆ ಶರಣೆಂದು। ಉಕ್ಕುವಳಲನು ಸಂತೈಸಿ।
ವಿಕ್ರಮ ವೀರನ ಸತಿಯರು ಮೆರದರು। ಲೆಕ್ಕವಿಲ್ಲದ ವಾದ್ಯಗತಿಗೆ ॥೨೩೩॥

ನಿರಿಯ ತಿದ್ದುತ ಮುಂಗುರುಳ ನೇವರಿಸುತ। ಸೆರಗ ಕಿಬ್ಬದಿಗೆ ಸಿಕ್ಕಿಸುತ।
ಮೆರೆವುತ ಕಿರುನಗೆ ನಗುತ ವೀರನ ಮೇಲೆ। ಹೊರಳಿ ಗೋಳಿಟ್ಟೊರಲಿದರು ॥೨೩೪॥

ಸೋಗೆನವಿಲ ಸೊಂಪಿಲಿ ನಲಿದಾಡುತ। ಸಾಗಿಬಂದರು ಅರಮನೆಗೆ
ಆಗಲತ್ತೆ ಮಾವ ಭಾವಗಳಿಗೆ ತಲೆವಾಗಿ ಕೈಮುಗಿದು ವೀರನಿಗೆ ॥೨೩೫॥

ಹೊಳೆವ ಕನ್ನಡಿ ಮುಖ ಕಳಸ ಕುಚಗಳೆವೆ। ಹಳಚದೆ ಕಣ್ಣಾರತಿಯ।
ಬೆಳಗುತ ಜಯ ಜಯ ಎನುತ ವೀರನ ಮೇಲೆ। ತಳಿದರು ಮುತ್ತಿನ ಸೇಸೆಯನು ॥೨೩೬॥

ನಗೆವೆಣ್ಣುಗಳು ತಾವು ತರ್ಕೈಸಿ ಮುಂಡಾಡಿ। ಬಗಸೆಗಂಗಳ ಬಾಲೆಯರು।
ಮೊಗ ನೋಡಿ ಮಾತಾಡಿ ಅಕ್ಕಗಳಿರ ನಾವು। ಅಗಲಿ ಹೋಗುತಲಿವೆ ಎನುತ ॥೨೩೭॥

ಎತ್ತಿಕೊಂಡೊಯ್ದು ಕುಮಾರ ವೀರಣ್ಣನ। ಮತ್ತೆ ಸಮಾಧಿಯೊಳಿರಿಸಿ
ಒತ್ತಿಲಿ ಅವನ ಸತಿಯರ ಕುಳ್ಳಿರಿಸಿದ। ಹೆತ್ತ ತಂದೆಯು ಸಿರುಮೇಂದ್ರ ॥೨೪೩॥

ಮಗನ ಸೊಸೆಯರ ಮೊಗ ನೋಡಿ ಮಾತಾಡಿ। ಬಗೆಗುಂದಿ ಬಾಯಲಕ್ಕಿಯನು।
ಮಿಗೆ ಇಕ್ಕಿ ಸಿರುಮನ ರಾಣಿ ಚಿಕ್ಕಮ್ಮ। ಅಗಲಿ ಹೋಹರೆ ಎನ್ನ ಕಂದ ॥೨೪೪॥

ಮುಂದೆ ಕೈಲಾಸಕೆ ನಡೆದೆ ವೀರಣ್ಣ ನಿನ್ನ। ವೊಂದಿ ಎಲ್ಲರು ಬಂದೆವೆನುತ।
ಬಂದ ಜನರುಗಳು ನಂಬುಗೆಯನು ಕೊಟ್ಟು। ನೊಂದೆಲ್ಲ ಮಣ್ಣ ಮುಚ್ಚಿದರು ॥೨೪೮॥

ಉಘೆ ಉಘೆ ಎನುತ ಸಮಾಧಿಯನಿಕ್ಕಿ ಬಂದು। ದುಗುಡದೆಲ್ಲರು ಮಂದಿರಕೆ
ಜಗದೊಳು ಪೊಸತೆನಿಸುವ ಸಿರುಮೇಂದ್ರಗೆ। ಮಿಗಿಲಾದುದು ಮೂರು ಸಂಧಿ ॥೭೪॥

ಮಗ ವೀರಣ್ಣನನ್ನು ಕಳೆದುಕೊಂಡರೂ ಸಿರುಮನು ನರಸಿಂಹನೊಂದಿಗೆ ಯುದ್ಧ ಮುಮದುವರಿಸಿದ. ಈಗ ಸಿರುಮನ ಸೈನ್ಯದ ಕೆಲವು ಮುಖ್ಯರು ತಮ್ಮ ಅನುಯಾಯಿಗಳೊಡನೆ ನರಸಿಂಹನತ್ತ ಹೋದುದು. ಈ ಮೋಸ ಕಾರಣವಾಗಿ ತನಗೆ ಸೋಲು ಖಚಿತವೆಂದು ಬಗೆದು, ಅರಮನೆಯಲ್ಲಿ ಚಿತೆ ಸಿದ್ಧಪಡಿಸಿ, ತನ್ನ ವಸ್ತು–ವಾಹನ, ಗಂಡು–ಹೆಣ್ಣು ಅದರಲ್ಲಿ ನೂಕಿದ. ಸೊಸೆಯಂದಿರು ಮಾಸ್ತಿಯಾದರು. ಕಾದಿ ಬಳಲಿದ ತನ್ನ ಮಗ ಕಾಚನನ್ನು ಕಿಚ್ಚಿಗೆ ನೂಕಿದ. ಮಗ ಮಲ್ಲಣ್ಣ ತಂದೆ ಸಿರುಮನ ಆಜ್ಞೆಯಂತೆ ಅವನನ್ನೂ ಕಿಚ್ಚಿಗೆ ಹಾಕಿದ.

ಸಂಧಿ : ೫

ಸಾವುದು ಸತ್ಯವು ಕಾವಲಾಯಿತು ಸುತ್ತ। ನೀವಿಲ್ಲಿ ತೆಗೆಸಿ ಕೊಂಡವನು।
ಆ ವೇಳೆಯದಿ ಪಟ್ಟಸಾಲೆಯ ಬಿಚ್ಚಿಸಿ। ಬಾವನ್ನಗೊರಡನೊಟ್ಟಿಸಿದ ॥೮೯॥

ಇಂದ್ರಗೋಪುವು ಸಕಲಾತಿ ಪಟ್ಟೆಯ ಝುಲ್ಲಿ। ಚಂದ ಚಂದದ ನಸುನಾಣ್ಯ।
ಕುಂದದೆ ಚೀನಿಚೀನಾಂಬರಗಳ ಬೇಗ। ತಂದು ತುಪ್ಪದಲದ್ದಿಸಿದ ॥೯೦॥

ಕೊಮಾರ ಮಲ್ಲಣ್ಣ ಬಂಟರ ಭಾವ ಸೋಮಯ್ಯ। ನಿಮುಷ[ಕುದುರ] ಇರಿಯೆಂದ।
ಕ್ರಮ ಕ್ರಮದಕ್ಕಿ ಕಡಲೆ ನೆಲ್ಲಗಳನು। ಕಣಜವನೊಡೆದು ಸುಡಿಸಿದ ॥೯೨॥

ಧುರಗಲಿ ಸಿರುಮ ತನ್ನರಮನೆಯನು ಹೊಕ್ಕು। ಕರೆದು ಕೊಮಾರ ಮಲ್ಲ ಕೇಳೊ।
ಇರಿಸದೆ ಹೆಮ್ಮಕ್ಕಳೆಲ್ಲರ ಕೊಂದು ನೀ। ಉರಿಗಾಹುತಿಯ ಮಾಡೆಂದ ॥೧೦೫॥

ಪಟ್ಟದ ರಾಣಿ ಉಟ್ಟಳು ತೊಡೆ ಚಲ್ಲಣ। ಕಟ್ಟಾಣಿವೆಂಗಳು ಸಹಿತ।
ಬಟ್ಟಮುತ್ತಿನ ಸರ ಕಟ್ಟಿ ರವುಕೆಯ ತೊಟ್ಟು। ಇಟ್ಟರು ಚಂದನ ತಿಲಕ ॥೧೦೮॥

ಪೊಳೆವ ಕುಂತಳ ವೀರಜಡೆಗಳ ಹೆಣೆಸಿಯೆ। ಒಳಕಂಪ ಮೈಗೆ ಶೃಂಗರಿಸಿ
[ತೊಳ]ಪುಗಂಗಳ ಮುಖ [ಕನ್ನಡಿ] ಕಠಾರ [ವು]। ಅಳವಟ್ಟವಾ ಸತಿಯರಿಗೆ ॥೧೦೯॥

ಮರೆದರು ಸಿರುಮೇಂದ್ರ ಏಳೇಳು ಜಲ್ಮದಿ। ಪುರುಷನಾಗೆಂದು ಮುಂಡಾಡಿ।
ಕರೆದು ಒಬ್ಬೊಬ್ಬರ ಮುಖ ನೋಡಿ ಮಾತಾಡಿ। ಮರಳ ಗೌರಿಯನೊಲಿಸಿದರು ॥೧೧೧॥

ಬಾಗಿನವಿತ್ತರು ಸಿರುಮ ನರಸಿಂಗನ। ಈಗಲೆ ಗೆಲಿದು ಪಂಥದಲಿ।
ಬೇಗ ಬಂದೆಮ್ಮ ಕೂಡೆಂದು ನಗುತಲಿ। ಸಾಗಿ ಬಂದರು ಕೊಂಡದೆಡೆಗೆ ॥೧೧೨॥

ಕಡಿಯೊ ನೀ ನರಸಿಂಗರಾಯನ ದಂಡನು। ಮುಡುಹಿ ನೀನವನ ಮಾರ್ಬಲವ
ಪಡೆಯೊ ನೀ ವೀರಸ್ವರ್ಗವನೆಂದು ಸಿರುಮನು। ಮಡದಿಯರಾಡಿ ಪಾಡಿದರು ॥೧೧೩॥

ನನಗಿಂದ ವೀರಾಧಿವೀರರು ನೀವೆಂದು। ಘನ ಸಂತೋಷದಿ ನಗುತ।
ಸನುಮತವನು ಮಾಡಿ ಗುಟುಕು ತಾಂಬುಲವಿತ್ತು। ವನಿತೆಯೊಡನೆ ನುಡಿದನು ॥೧೧೪॥

ಇರಿಯೆಂದು ಕೊಂಡದೊತ್ತಿಲಿ ನಿಂದು ಸಿರುಮನ। ನೆರೆ ನೋಡಿ ಕನ್ನಡಿವಿಡಿದು।
ಮೆರೆವುತಿರಲು ಕಂಡು ಸಿರುಮಭೂಪಾಲನು। ಇರಿದು ಕೊಂಡಕೆ ಹಾಕಿಸಿದ ॥೧೧೭॥

ಕೊಂಡಗಳಿಗೆ ಆಹುತಿಯಾಗಬೇಕೆಂದು। ಗಂಡುಗಲಿಯು ಸಿರುಮೇಂದ್ರ
ತಂಡ ತಂಡದಲಿರಿದೆಲ್ಲರನು ನೂಕಿ। ಕೊಂಡದೊಳಗೆ ಹಾಕಿ ಸುಡಿಸಿ ॥೧೧೮॥

ದುಃಖದ ಕಡಲು ಉತ್ತಳಿಕೆಯ ಮಾಡಿದ। ಮಕ್ಕಳು ಹೆಂಡರನೆಲ್ಲ।
ಸಿಕ್ಕದೆ ಇರಿದು ಇಕ್ಕೆಲದ ಕೊಂಡಕೆ ಹಾಕಿ। ವಿಕ್ರಮ ಸಿರುಮ ನಿಂದಿರಲು ॥೧೧೯॥

ಹುಡುಕಿ ಅರಸಿ ನೋಡಿ ಅಡಗಿರ್ದ ಮಕ್ಕಳ। ಉಡಿಕೈಯ್ಯ ಹಿಡಿದೆಳೆತಂದು।
ಬಿಡದೆ ಕೊಲ್ಲಿಸಿ ಎಣ್ಣೆ ತುಪ್ಪದ ಹಡಗವ। ಒಡೆಯ ಹೊಯ್ಸಿ ಸುಡಿಸಿದರು ॥೧೨೧॥

ಬೆಕ್ಕು ಗಿಳಿಯು ಪಾರಿವಾಳವು [ದೀಹದ]। ಹಕ್ಕಿಯ ಕೊರಳನೆ ಕೊಯ್ಸಿ
ಲೆಕ್ಕದ ಕಡಿತವ ಬಣ್ಣ ಭಂಗಾರವ। ಹಕ್ಕರಿಕೆಯ ಸುಡಿಸಿದನು ॥೧೨೩॥

ಆಯತದಿಂದ ಮಲ್ಲಣ್ಣನೇರುವ। ಜೀವರತ್ನವ ಬೀಳಲಿರಿದ।
ಖೋ ಎಂದು ಕೂಗುತ ಒಳಹೊಕ್ಕು ತಿವಿದನು। ರಾಯ ಬೊಲ್ಲನನಾಕ್ಷಣದಿ ॥೧೨೪॥

ಬಂದೊಳಹೊರ ಲಾಯದ ಕುದುರೆಗಳನು। ಒಂದಿಲ್ಲದೆ ಬೀಳಲಿರಿದ।
ಕುಂದದೆ ಕೂದಲ ಬಾಲಂಗಳನೆ ಕೊಯ್ದು। ಕೊಂಡದೊಳಗೆ ಹಾಕಿ ಸುಡಿಸಿ ॥೧೩೭॥

ಒಡಕುಟ್ಟಿ ಡೋಳ [ತಮ್ಮ]ಟಿ ಗಿಡಿಬಿಡಿಯನು। ಹಿಡಿವ ಠೆಕ್ಕವ ಸುಡಿಸಿದನು
ಪಡುಗವನೊಡೆಕುಟ್ಟಿ ಕೊಂಡದೊಳಗೆ ಹಾಯ್ಕಿ। ಹುಡಿ ಹುಡಿಮುತ್ತು ಮಾಣಿಕವ ॥೧೩೮॥

ಹಿಟ್ಟುಮಾಡಿಸಿ ಕಡುಕು ಕಂಠಮಾಲೆಯ। ಕಟ್ಟಾಣಿಲ್ಲದ ಜಾಳಿಗೆಯ।
ಪೆಟ್ಟಿಗೆ ಪರಿಮಳ ಬಣ್ಣ ಬಂಗಾರವ। ಸುಟ್ಟು ಬೂದಿಯ ತೂರಿಸಿದ ॥೧೩೯॥

[ಭಿತ್ತಿ]ಲಿ ಬರೆದ ಬಣ್ಣದ ಚಿತ್ರವ। ಕೆತ್ತಿ ಕೆಡಹಿ ಸವರಿಸಿದ।
ಸುತ್ತ [ಭಗ]ವಂತಿಯ ಮನೆ ಮಣಿಮಂಚವ। ಮೊತ್ತದಲವ ಸುಡಿಸಿದನು ॥೧೪೦॥

ನರಸಿಂಹ ಕಣ್ಮನ ಬಯಸಿ ಕೈದುಡುಕಲು। ಸರಕೇನು ಇನಿತಿಲ್ಲದಂತೆ।
ಸಿರುಮ ತನ್ನರಸಿ ತಾನಲ್ಲದೆ ಎಲ್ಲರ। ಉರಿಗಾಹುತಿಯ ಮಾಡಿದನು ॥೧೪೧॥

ಮುಂಡಾಡಿ ಮುಖನೋಡಿ ತಮ್ಮನ ತಲೆಯನು।ಕೊಂಡದೊಳಗೆ ಹಾಕಿ ಸುಡಿಸಿ
ತಾಂಡವಾಡುವ ವೀರನಂತೆ ಸಿರುಮ ತನ್ನ। ಹೆಂಡತಿ ಸಹವಾಗಿ ಬರಲು ॥೧೪೮॥

ದೆಸೆಯುಳ್ಳ ಕಂದ ಕಾಚಯ ಕಾದಿ ಉರದಲ್ಲಿ। ಹೊಸ ಘಾಯ ಬಿಸಿ ರಕ್ತದಲಿ
ಉಸಿರಾಡುತಿರಲು ಕಡಿದು ಕೊಂಡಕೆ ಹಾಕಿ। ಮಸುಧೆಗಧಿಕ ಸಿರುಮೇಂದ್ರ ॥೧೪೯॥

ಮುಂಚಲಿ ಸಿರಿಮೇಂದ್ರ [ಮು]ತ್ತೈದೆತನ ನಿನ್ನ। ಹಿಂಚಲಿ ರಂಡೆತನಗಳ।
ಸಂಚಲಿಸದೆ ಕೊಲ್ಲೆಂದು ಬೇಡಿಕೊಂಡಳು। ಅಂಚೆಗಮನೆ ಚಿಕ್ಕಮ್ಮ ॥೧೭೨॥

ಕುಲದೀಪ ಮಲ್ಲಣ್ಣ ಸಿರುಮ ನರಸಿಂಹನ। ಬಲದೊಳು ಕಾದಿ ಮಡಿದರೆ
ತಲೆಯ ತಂದೊಡಗೂಡೆಂದು ಮಗನ। ನಲಿದು ಮುದ್ದಾಡುತಿರಲು ॥೧೭೯॥

ಆಯವ ತಾಕಲಿರಿದು ಸಿರುಮಣ್ಣನು ಚಿಕ್ಕಾಯ ನೂಕಿದ ಕೊಂಡದೊಳಗೆ।
ಬೇಯುತಿರಲು ಖೋ ಎಂದು ಕೂಗುತಲಾಗ। ರಾಯ ದಂಡಿಗೆ ಇದಿರಾದ ॥೧೮೦॥

ಬಿದ್ದರೆ ಕೊರಳ ಕೊಯ್ದು ಕೊಂಡದಿ ಹಾಕು। ಮುದ್ದು ಕುಮಾರ ಮಲ್ಲಣ್ಣ।
ಬುದ್ಧಿವಂತರು ಕಲ್ಲರಸ ಲಿಂಗರಸ[ರಿಗೆ]। ರೌದ್ರದಿ ಸಿರುಮ ಹೇಳಿದರು ॥೧೮೭॥

[ನ]ನ್ನನಿರಿದ ಹರಿಗೆಯವನ ಹಿಡಿದು ಬೇಗ। ಚೆನ್ನಾಗಿ ಕಡಿದೆ ಮಲ್ಲಣ್ಣ।
ಇನ್ನು ಕೈ ಮರೆಯದೆ ಕೊರಳ ಕೊಯ್ದು ತಲೆಯ। ನಿನ್ನ ತಾಯೊಡಗೂಡಿಸೆಂದ ॥೨೦೪॥

ಅರಮನೆ ಹೋಯಿತು ಪರಿವಾರ ನನಗಿಲ್ಲ। ತರಿಯೊ ಬೇಗದಿ ನನ್ನ ಶಿರವ
ಬರಿಯೊ ನಿಮ್ಮಮ್ಮನ ಕೂಡಿಸೋ ಏ ನನ್ನ। ಮರಿಯೊ ಎಂದನು ಸಿರುಮೇಂದ್ರ ॥೨೦೯॥

[ಮ]ಲ್ಲಣ್ಣ ನಿನ್ನ ಕೈಮುಟ್ಟಿ ಮನವನು। ಕಲ್ಲೆದೆಯನು ಮಾಡಿಕೊಂಡು।
ನಿಲ್ಲದೆ ಕೊರಳ ಕೊಯ್ದು ಕೊಂಡದೊಳು ಹಾಕೋ ರಣಮಲ್ಲ ಎಂದನು [ಸಿರು]ಮೇಂದ್ರ ॥೨೧೯॥

ತಕ್ಕೈಸಿ ಮುಂಡಾಡಿ ತಂದೆಯ ತಲೆಯನು। ಛಕ್ಕನೆ ಕಡಿದೆತ್ತಿ ತಂದು
ಚಿಕ್ಕಾಯ ಕೊಂಡದೊಳುರಿಯೆ ಸಿರುಮನ ಹಾಯ್ದು। ಮಕ್ಕಳ ಮಾಣಿಕ್ಯ [ಮ]ಲ್ಲಣ್ಣ ॥೨೨೭॥

ಹೆತ್ತ ತಾಯೆ ನಿಮ್ಮ ಪುರಷ ಕೊಂಡಕೆ ಬಿದ್ದ ನಾ। ನಿತ್ತ ಭಾಷೆಗೆ ತಪ್ಪಿಲ್ಲ।
ಸುತ್ತುವರಿದು ಕೂಗಿ ಹೇಳಿ ಕುಮಾರ ಮಲ್ಲ। ಮ[ತ್ತಳಲಿ] ದುಃಖದಲಿ ॥೨೨೮॥

ತಂದೆ ತಾಯಿ ಬಂಧು ಬಳಗ ಕಳೆದುಕೊಂಡರೂ ಕಾದತೊಡಗಿದ ಮಲ್ಲಣ್ಣ ಯುದ್ಧದಲ್ಲಿ ಸತ್ತ ಮಂತ್ರಿಗಳಾದ ಕಲ್ಲರಸ, ಲಿಂಗರಸರ ಶವಗಳೊಡನೆ ತಾನೂ ಕಿಚ್ಚಿಗೆ ಆಹುತಿಯಾದ. ಅರಮನೆ ಸುಟ್ಟು ಹೋದದನ್ನು ನೋಡಿ ಬೆರಗಾದ ಸಾಳುವ ನರಸಿಂಹ ಮಂತ್ರಿ ಈಶ್ವರನಾಯಕನ ಸಲಹೆಯಂತೆ ಕೊಂಡದ ಮೇಲೆ ಆದಿಲಿಂಗದೇವಾಲಯ ಕಟ್ಟಿಸಿ, ರುದ್ರರಾಜನೆಂಬವನನ್ನು ಅಧಿಕಾರಿಯಾಗಿರಿಸಿ ವಿಜಯನಗರಕ್ಕೆ ತಿರುಗಿದ.

ಸಂಧಿ : ೬

ಒತ್ತರದ ಗಾಯವ ಕಂಡು ಮಲ್ಲಣ್ಣ। ಎತ್ತಿಕೊಂಡನು ಮಂತ್ರಿಗಳ।
ಮತ್ತೆ ಕೊಂಡಕೆ ಹೊಂದಿ ಖೋ ಎಂದು ಕೂಗುತ। ಮೃತ್ಯಂಜಯ ಜಯ ಎನುತ ॥೫೨॥

ತಂದೆ ತಾಯಿ ಅಣ್ಣ ತಮ್ಮ ಬಂಧುಗಳಿರ। ಅಂದು ನಿಮಗೆ ಕೊಟ್ಟಪ್ಪಣೆಗೆ।
ಇಂದು ಕಲ್ಲರಸ ಲಿಂಗರಸ ನಾನು ಸಹವಾಗಿ। ಬಂದೆವೆನುತ ಧುಮುಕಿದನು ॥೫೩॥

ಕೊಂಡಕೆ ಬೀಳುವ ಕೊಮಾರ ಮಲ್ಲಣ್ಣನ। ಕೆಂಡಗಣ್ಣನು ಪಿಡಿದೆತ್ತಿ।
ಗಂಡುಗಳರಸನೆ ಬಾಳು ಬಾಳೆಂದು। ಮಂಡೆಯ ಪಿಡಿದಲುಗಿದನು ॥೫೪॥

ಇತ್ತ ನರಸಿಂಹರಾಯ ಈಶ್ವರಿನಾಯಕ। ಹತ್ತಿ ನೋಡಲು ಅರಮನೆಯ।
ಚಿತ್ರದ ಗೋಡೆಲ್ಲ ಕೆತ್ತಿ ಸುಟ್ಟಿರಲಾಗಿ। ಪೃಥ್ವಿಪತಿಯು ಬೆರಗಾದ ॥೭೦॥

ಮುತ್ತು ಮಾಣಿಕ ವಜ್ರ ವೈಢೂರ್ಯವ।ಅರ್ತಿಯ ಲಾಯದ ಕುದುರೆ।
ಮೊತ್ತದ ಭಂಡಾರ ಬೊಕ್ಕಸಗಳನೆಲ್ಲ। ಹೊತ್ತಿ ಹೋದುದ ಕಂಡನಾಗ ॥೭೧॥

ಬೇಗದಿ ನರಸಿಂಹರಾಯ ಸಿರುಮೇಂದ್ರನ। ಅರಮನೆಯನು ಹೊಕ್ಕು ನೋಡಿ।
ಇರುವೆ ಕಾಲಷ್ಟು ವಚ್ಚೆವಿಲ್ಲವು ಎಂದು। ಬೆರಗಾಗಿ ನರಸಿಂಹ ನುಡಿದ ॥೭೨॥

ಮೇದಿನಿಪತಿಗಾಗ ಈಶ್ವರನಾಯಕನೆಂದ। ಆದಿಲಿಂಗವ ನಿರ್ಮಿಸಿಯೆ।
ಗೋದಾನ ಕನ್ಯಾದಾನ ಭೂದಾನಗಳಿಂದಲಿ। ಸಾಧಿಸಿಕೊಂಬ ಮುಕ್ತಿಯನು ॥೭೮॥

ಹರುಷದಲಾ ಮಾತ ಕೇಳುತ ನರಸಿಂಹ। ಕರೆಸಿದ ಕಾಮಾಟದವರ।
ಭರದಿಂದ ಕೊಂಡವ ಹೂಣಿಸದರ ಮೇಲೆ। ಗಿರಿ ಗೋಪುರ ಕಟ್ಟಿಸಿದನು ॥೭೯॥

ಆ ಗೋಪುರದೊಳು ಆದಿಲಿಂಗವನಿಟ್ಟು। ನಾಗಭೂಷಣ ಜಯ ಎನುತ।
ಬೇಗ ಠಾಣ್ಯಕ್ಕೆ ರುದ್ರರಾಜನೆಂಬನಿಟ್ಟು। ಸಾಗಿದ ವಿಜಯನಗರಕೆ ॥೮೦॥

■■

೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

ಹರವೆಕೋಟೆ ಕಾಳಗದಲ್ಲಿ ವೀರಸ್ವರ್ಗವೇರಿದ ತೋಟೇಂದ್ರನ ರಾಣಿ ಚೆನ್ನಬಸವಮ್ಮ ಗಂಡನೊಂದಿಗೆ ಸಮಾಧಿಯಾಗುವ ಸತಿ ಆಚರಣೆಯ ಸಂದರ್ಭ.

ಸಂಧಿ : ೧೬

ಬಂದು ಪೋಗುತೆ ನಿಜಮಂದಿರದೊಳಗಾ।ನಂದನನೊಪ್ಪುವಂಗವನು।
ಚಂದದಿ ಮೂರ್ತಿಗೊಳಿಸಿ ಚಿಕ್ಕಭೂವರ। ನಂದಗೊಳಿಸಿದನಾ ಶಿರವ ॥೨೯॥

ಕಂಗೊಳಿಸುವ ಚಿಮ್ಮುರಿಯ ಚೆಲ್ವಣಿಯ ಬೆ।ಡಂಗಿಸಮುರಿಮಾನದಿಂದೆ।
ಚುಂಗಿನಿಂದೆಸೆವೊರೆ ಚಿಂದಿಯನವನುತ್ತ। ಮಾಂಗದೊಳಳವಡಿಸಿದನು(?) ॥೩೦॥

ವಾರೆ ಚಿಂದಿಯೊಳು ತುರಾಯವನಿಕ್ಕಿ ಕ।ಸ್ತೂರಿಯ ತಿಲಕವ ತಿದ್ದಿ।
ಚಾರು ರತ್ನಾಭರಣಗಳಿಂದವನ ಶ। ರೀರವನೊಲಿದು ಸಿಂಗರಿಸಿ ॥೩೧॥

ಆ ಕುಮಾರನ ರಾಣಿ ಚನ್ನಬಸವಮ್ಮ। ತಾ ಕಲಿಯಾಗಿ ಸಿಂಗರಿಸಿ।
ಶ್ರೀ ಕೈಲಾಸಕೆಯ್ದಿದ ತನ್ನ ಗಂಡನೆಂ।ದಾ ಕಮಲಾಯತನೇತ್ರ ॥೭೦॥

ಎಡಗೈಯ ಮಣಿಗನ್ನಡಿ ಬಲಗೈಯೊಳು। ಪಿಡಿದಲಗುವ ಜಮದಾಡೆ।
ಮುಡಿದ ಗರಿಯ ಬಾಸಿಗವಮರಿದ ರನ್ನ।ದೊಡವೊಪ್ಪಲೈತಂದಳಾಗ ॥೭೧॥

ಬಾಳು ಸದ್ಗುಣೇಶ ಬಾಳು ಮತ್ಪ್ರಾಣೇಶ। ಬಾಳು ಬಾಳೆನ್ನೆದೆಯಾಣ್ಮ।
ಬಾಳು ನಿನ್ನೊಡನೆನಗೆಂದು ನಿಜೇಶನ। ಬಾಳಾಂತು ಮೆರೆವುತರ್ಥಿಯಲಿ ॥೭೨॥

ಛಲದಂಕಮಲ್ಲ ನಲ್ಲನ ತಲೆವಿಡಿದು ಹೆ।ಕ್ಕಳವಿಕ್ಕಿ ಹೆಚ್ಚಿಯುಬ್ಬೆದ್ದು।
ಕಳಕಳಿಸುತೆ ಕು[ಕಿ]ಲೆಂದಾರ್ದು ಸತಿಯರ। ತಲೆವಣಿ ನಗೆಮೊಗವೆರಸಿ ॥೭೩॥

ಆಲ್ದು ಬೊಬ್ಬಿಟ್ಟಳಲ್ಲದೆ ಅಳವಳಿದಳೆ। ಜೋಲ್ದಳೆ ಒಡಲಾಸೆಯಿಂದೆ।
ಗೆ[ಲ್ದೆ]ನೆಂದುಬ್ಬೆದ್ದಳಲ್ಲದೆಯಳಿಯಾಸೆ।ಗೊಲ್ದಳೆ ಪೇಳುವೆನೇನ ॥೭೪॥

ನರ್ತಿಸಿದಳು ನಲಿದಳು ಮನದನ್ನನ। ಮೂರ್ತಿಯ ವಿಮಲಸದ್ಗುಣವ।
ಕೀರ್ತಿಸುತಾ ಸತಿ ಮಾಸತಿಯಗಿ ಪ್ರ। ವರ್ತಿಸಿದುದನೇನೆಂಬೆ ॥೭೫॥

ನಿಡು ಸೋಗೆಗಂಗಳ ಬೆಳಪು ತೊಳಪ ರನ್ನ। ದೊಡವಿನೊಳ್ಪೆಳಗಂಗರುಚಿಯ।
ಒಡವೆರಸಿರಲೊಲೆದಾಡಿದಳಾಡುವ। ಕುಡಿಮಿಂಚೆನಲಾ ಬನಿತೆ ॥೭೬॥

ಹಸನಾದುದು ನಿನ್ನಡಿಗಳ ಬಳಿವಿಡಿ।ದೆಸೆದಿಹಳಲ್ಲಾನೆನ್ನ।
ಅಸು ನಿನ್ನಡಿಗಳಾಗಿರ್ಪೆನ್ನನುಳಿದು ಮೋ।ಹಿಸಿದೆಯೆ ಸುರನಾರಿಯರ ॥೭೭॥

ನುಡಿಯಿಂದೆ ನುಡಿವೆಣ್ಣ ಲಂಚ[ದೆ] ಜಸವೆಣ್ಣ। ನಿಡುದೋಳ್ಗಳಿಂ ಗೆಲವೆಣ್ಣ।
ಬಿಡದಾ[ಳ್ವು]ದು ದಕ್ಕಿತೆಂದಚ್ಚರಸಿಯರ್ಕ।ಳೊಡಗೂಟಕೆಳಸೆಯ್ದಿದೆಯಾ ॥೭೮॥

ನೋಡಲೀವೆನೆ ನಿನ್ನ ಮೊಗವನವರಿಗೊಮ್ಮೆ। ನೋಡೆನ್ನ ಪಂಥವನಾಣ್ಮ।
ಆಡಿದೊಡೇನಹುದೀಗಳೆ ನಿನ್ನೊಡ।ಗೂಡಿ ನಿನ್ನನೆ ಮೆಚ್ಚಿಸುವೆನು ॥೭೯॥

ಎಂದೆನುತಲಿ ನಲಿದೊಲಿದು ಮೆರೆವುತಾ।ನಂದದಿಂದಾಣ್ಮನ ತಲೆಯ।
ಅಂದಗೊಳಿಸಿ ಮುನ್ನಿನಂದಿದಿ ನಿಡುರವ।ದಿಂದಾರ್ದು ನಗುತ ಬೊಬ್ಬಿಡಲು ॥೮೦॥

ಗೋಳಿಟ್ಟರಾಗ ಗೋಣೊಡೆವಂತೆ ತನ್ನ ಸ।ಮ್ಮೇಳದ ಸಖಿಯರ ತಂಡ।
ಕೇಳುತಲವರ ಬೊಬ್ಬೆಯ ಕೈಸನ್ನೆಯಿಂ। ನೀಲಕುಂತಳೆ ನಿಲಿಸಿದಳು ॥೮೧॥

ಪಂಚಾಸ್ಯನ ಪದಪದ್ಮವ ನೆನೆವುತೆ। ಪಂಚಾಕ್ಷರಿಯ ಜಪಿಸುತ್ತೆ।
ಪಂಚಬಾಣನ ರೂಪ ತೋಟೇಂದ್ರನೆದೆಗೊಳ।ದಂಚೆ ಸ[ಭ]ಯಭಕ್ತಿಯಿಂದೆ ॥೮೨॥

ಅತ್ತೆಮಾವಂದಿರ ಪಾದಕೆರಗಿ ತನ್ನ। ಚಿತ್ತವಲ್ಲಭನ ಮೂರ್ತಿಯನು।
ಚಿತ್ತದೊಳಿಟ್ಟು ಜಾನಿಸುತೆ ಶ್ರೀಗುರುರಾಯ। ನಿತ್ತ ಲಿಂಗಕೆ ಪೊಡಮಡುತೆ ॥೮೩॥

ಚರಲಿಂಗಚರಣೋದಕ ವಿ[ಕ್ಕಿ] ತನ್ನಯ। ಪುರುಷನ ಮೂರ್ತಿಯೊತ್ತಿನಲಿ।
ತರುಣಿ ಶಿರೋಮಣಿಯಾ ಚೆನ್ನಬಸವಮ್ಮ। ಹರಷದೊಳಮರ್ದು ಮಂಡಿಸುತೆ ॥೮೪॥

ಪರಮಪಂಚಾಕ್ಷರಿಯನು ಜಪಿಸುತೆ। ಗುರುಸಿದ್ಧಮಲ್ಲಿಕಾರ್ಜುನನ।
ಚರಣವ ಮಂಡೆಯೊಳಿಟ್ಟು ಲಿಂಗವ ನೋಡಿ।ವೆರಸಿದಳಾತ್ಮವಲ್ಲಭನ ॥೮೫॥

ಕಂಡಚ್ಚರಿಗೊಂಬುತೆ ಶಿವಭಕ್ತರ। ತಂಡವುಘೇವುಘೇಯೆನಲು।
ಖಂಡೆಂದುಧರನ ತೊಡೆಯೊಳಿಪ್ಪ ತನ್ನಯ। ಗಂಡನನಮರ್ದಪ್ಪಿದಳು ॥೮೬॥

■■

೬. ಹಳೆಯ ಕುಮಾರರಾಮನ ಸಾಂಗತ್ಯ

ಸಂಧಿ : ೭

ನೆಲಮಾಳಿಗೆಯಲ್ಲಿ ಮುಚ್ಚಿಡಲ್ಪಟ್ಟ ಕುಮಾರರಾಮನು ಮಡಿದನೆಂದೇ ಭಾವಿಸಿ, ಅವನ ಐವರು ಮಡದಿಯರು ಚಿತೆಯೇರಲು ಸಿದ್ಧರಾದ ಸಂದರ್ಭ.

ಕೋವಿದ ರಾಮಯ್ಯ ತೀರಿದ ಬಳಿಕ ನಾವು। ಜೀವಿಸಬಹುದೆ ಲೋಕದೊಳು।
ಸಾವು ತಪ್ಪದು ಕಾಲಕಾಲಕೆಯೆಂದೆನುತಲಿ। ತೀವಿ ಶೃಂಗರವಾದರಾಗ ॥೯೮॥

ಹಿಡಿದು ಕಠಾರಿಯ ಬಲಗೈಯಲಿ ಅವರು। ಎಡದ ಕೈಯಲಿ ಕನ್ನಡಿಯ।
ನಡೆದರು ಕಂಪಿಲನೋಲಗಕೆಯು ಬೇಗ। ತಡೆಯದೆ ಕಿಚ್ಚ ಬೇಡುವರೆ ॥೯೯॥

ನಿಚ್ಚಟ ರಾಮನು ಮುಂಚೆ ಹೋಗುತಲಾನೆ। ಅಚ್ಚರಿಯಾಗಿಸಲು ಬೇಗ।
ಉಚ್ಚಾಹದಲಿ ಗಂಡನ ಕೂಡಿಕೊಳಬೇಕು। ಕಿಚ್ಚ ಪಾಲಿಸು ಕಂಪ ಮಾವ ॥೧೧೨॥

ಬೇಡ ನಿಮ್ಮತ್ತೆಯ ಕೂಡಿಕೊಳ್ಳಿರಿ ನೀವು। ನಾಡನು ಹಂಚಿ ಕೊಡುವೆನು।
ರೂಢಿಗಧಿಕ ರಾಮನ ಬಿಟ್ಟಿಹುದಿನ್ನು। ಖೋಡಿಯಲ್ಲವೆ ಕಂಪ ಮಾವ ॥೧೧೩॥

ಮುಂಡೆತನಕೆ ಬೇರೆ ರಾಜ್ಯವ ಕೊಡಿಸು[ವೆ]। ಚಂಡಿತನವು ಬೇಡಮ್ಮಗಳೆ।
ಗಂಡುಗಲಿ ರಾಮನ ಬಿಟ್ಟು ಇಹುದಿನ್ನು। ಭಂಡ ಅಲ್ಲವೆ ಕಂಪ ಮಾವ ॥೧೧೪॥

ಆನೆ ಸಾಯ್ವಾಗ ಆನೆಯ ಮೇಲೆ ಇರುತಿಹ। ಹೇನು ಸಾಯ್ವುದು ಅರಿದಲ್ಲ।
ಆನೆ ರಾಮನ ಬಿಟ್ಟು ನಾವು ಇಲ್ಲಿಹುದಿನ್ನು। ಹೀನವಲ್ಲವೆ ಕಂಪ ಮಾವ ॥೧೧೫॥

ಗಚ್ಚಿನ ಚಾವಡಿಯೊಳಗೆ ಕಂಪಿಲರಾಯ। ನಿಚ್ಚಟ ಮನ್ನೇರು ಸಹಿತ।
ಅಚ್ಚರಿಯಾಗಿ ತನ್ನ ಸೊಸೆಯರಿಗೆಯು ಬೇಗ। ಕಿಚ್ಚ ಪಾಲಿಸಿದ ಕಂಪ[ಯ್ಯ] ॥೧೧೭॥

ವೀಳ್ಯವನು ಕೊಟ್ಟು ಸೊಸೆಯರ ಕಳುಸಿದ। ದಾಳಿಗೊಂಬಂತೆ ಸ್ವರ್ಗವನು।
ಮೇಳೈಸಿಯೆ ನಡೆದರು ಅರಮನೆಗಾಗಿ। ಲೋಲೆಯರು......... ॥೧೧೮॥

ಚಿಪ್ಪಿಗರನು ಕರೆದನು ಕಂಪಿಲರಾಯ। ಕರ್ಪೂರ ವೀಳ್ಯವ ಕೊಡಿಸಿ।
ತಪ್ಪದೆ ಐದು ಕುಪ್ಪಸಗ[ಳ ಗೆಯ್ಯೆಂದು]। ಕರ್ಪೂರ ವೀಳ್ಯವ ನೀಡಿ ॥೧೧೯॥

ವಿಶ್ವಕರ್ಮನು ನಿರ್ಮಿಸಿದಂತೆ ಕುಪ್ಪಸವು। ಹೊಸ ಪರಿಯಾದವು ಕ್ಷಣದಿ।
ಎಸೆವ ಕೆಲಸದಿ ರವಿಕೆಯು ಟಿಬ್ಬಿಗಳ[ವು]। ಹಸನಾಗಿರ್ದವು ನಿಮಿಷದಲಿ ॥೧೨೦॥

ಗಳಿಲನೆ ಚಿಪ್ಪಿಗ ಕಾಲಕುಪ್ಪಸವನು। ಕಳೆಯುಳ್ಳ ವಾಲಗದೊಳಗೆ।
ತಳುವದೆ ತಂದು ಒಪ್ಪಿಸಲು ಕಂಪಿಲ ಮೆಚ್ಚಿ। ಹೊಳೆವ ತೇಜಿಯ ಕೊಟ್ಟನಾಗ ॥೧೨೧॥

ರವಿಕೆ ಕುಪ್ಪಸವು ಪ್ರಧಾನ ಬೈಚಪ್ಪಗೆ। ಅವಧಾನದಲಿ ಒಪ್ಪಿಸಿದನು।
ಭುವನದೊಳಾಶ್ಚರಿಯಾಗೆನ್ನ ಸೊಸೆಯರ। ಕಳುಹು ಹೋಗೆಂದ ಕಂಪಿಲನು ॥೧೨೩॥

ಕನ್ನಡಿ ಕಾಲಕುಪ್ಪಸ ನಿಂಬೆಯ ಹಣ್ಣು। ಚೆನ್ನರಾಮನ ರಾಣಿಯರಿಗೆ।
ಭಿನ್ನಿವಿಲ್ಲದಲಿ ಕೊಟ್ಟನು ಬೈಚಪ್ಪನು। ತನ್ನ ಮನೆಗೆ ಕರೆದೊಯ್ದು ॥೧೨೪॥

ಕಮ್ಮೆಣ್ಣೆಯ ಹೂಸಿದರು ಐವರು ತಾವು। ನಿರ್ಮಳ ಪನ್ನೀರ ಬೆರಸಿ।
ಸುಮ್ಮಾನದಿಂದ ಮಜ್ಜನವಾಗಲನುವಿಂದ। ಗಮ್ಮನಾರತಿಯನೆತ್ತಿದರು ॥೧೨೬॥

ಉಡುಗೊಟ್ಟ ವಸ್ತ್ರ ಪ್ರಧಾನಿ ಬೈಚಪ್ಪನು। ತೊಡಿಗೆ ಮುತ್ತಿನ ಹಾರಗಳ।
ಸಡರಗದಲಿ ದೇವಾನ್ನವು ಎಡೆಯಾಗೆ। ತಡೆಯದೆ ಉಂಡು ತಿರುಗಿದರು ॥೧೨೭॥

ಪರಿ ಪರಿ ಪುಷ್ಪಜಾತಿಗಳನು ತಂದರು ಬೇಗ। ತರತರದಲಿ ಸೇವಕರು।
ಸರಸರವನು ಮಾಲೆಗಳ ಕಟ್ಟಿದರಾಗ। ವರ ಮಾಸ್ತಿಯರಿಗೆ ಆ ಕ್ಷಣದಿ ॥೧೨೮॥

ಕಾಲಕುಪ್ಪಸ ಉಟ್ಟು ರವಿಕೆಯ ತೊಟ್ಟರು। ಮೇಲೆ ಹೊಂಗರಿಗಳ ಮುಡಿದು।
ಮೇಳೈಸಿದ ಮುಡಿದಂಡೆ ಸೂಸಕದಲಿ। ಲೋಲ ಮಾಸ್ತಿಯರಿಗೊಪ್ಪಿದವು ॥೧೨೯॥

ಗಂಧ ಕಸ್ತುರಿ ಕುಂಕುಮ ಜವಾದಿಯ। ಸಂಧಿಸಂಧಿಗೆ ಲೇಪಿಸಿದರು।
ಚೆಂದದಿಂದಲಿ ರಾಮನಾಥನ ರಾಣಿಯರೆಲ್ಲ। ನಿಂದರು ಮಾಸಾಳಿನಂತೆ ॥೧೩೦॥

ಹರುಷದಿ ವಾದ್ಯವ ತರಿಸಿ ಬೈಚಪ್ಪ। ಹಿರಯ ಹೆಗ್ಗಾಳೆ ಮದ್ದಳಿಯ।
ಭರದಿಂದ ಹೊಡೆವ ತಂಬಟ ಡೊಳ್ಳು ಬುರುಗನು। ನೆರೆಯಿತು ಧರೆ ಹೊರದಂತೆ ॥೧೩೧॥

ಆಗ ಪ್ರಧಾನ ಬೈಚಪ್ಪ ತೇಜಿಗಳನು। ಬೇಗದಿಂದಲಿ ತರಿಸಿದನು।
ಸಾಗಿಸಿ ತಂದು ರಾಮನ ರಾಣಿಗೊಪ್ಪಿಸೆ। ರಾಗದಿಂದಲಿ ಏರಿದರು ॥೧೩೨॥

ಹಿಡಿದ ಪಲ್ಲವದ ಸತ್ತಿಗೆಯ ನೆಳಲೊಳು। ತಡೆಯದೆ ಧೀರ ಮಾಸ್ತಿಯರು।
ನಡೆದರು ಬೈಚಪ್ಪನರಮನೆಯಿಂದಲಿ। ಸಡಗರವನು ಏನೆಂಬೆ ॥೧೩೩॥

ಕಿಚ್ಚ ಹೊಯಿವ ಹರೆ ಬಾರಿಸಿದವಲ್ಲಲ್ಲಿ। ಹೆಚ್ಚಿತು ವಾದ್ಯದ ರಭಸ।
ಅಚ್ಚರಿಯಿಂದ ಪ್ರಧಾನಿ ಮಾಸ್ತಿಯವರನು। ಬಚ್ಚಿಟ್ಟ ಪರಿಯ ಹೇಳುವೆನು ॥೧೩೪॥

ಭೂಮಿಗಧಿಕ ವೀರ ನೇಮಿಯ ದಂ[ಡಿನ]। [ಸಮರ ವೀರ] ಹೆಸರವನೆ।
ಪ್ರೇಮದಿ ನಮ್ಮ ಬಿಟ್ಟಿಹುದು ಗುಣವೆ ಎಂದು। ರಾಮಲೆ ವಾಲಾಡಿದಳು ॥೧೩೫॥

ಮಂಡಲದೊಳು ನಿಮ್ಮ ಗಂಡುಗಲಿಗಳೆಂದು। ಕೊಂಡಾಡುವರು ಧರೆಯೊಳಗೆ।
ಹೆಂಡಿರಿಗಂಜಿ ಮಡಿವುದು ಗುಣವೇ ಎಂದು। ಗಂಡ ರಾಮನ ಹಾಡಿದರು ॥೧೪೦॥

ಘಳಿಲನೆ ರಾಮನ ಹೆಂಡಿರು ಐವರು। ನಿರಿಗಳ[ನವ] ಉಡುತ ಹಾ[ಕೆ]।
ತಳವೆಳಗಾಗಿ ಪಟ್ಟಣವೆಲ್ಲ ದುಃಖದಿ। ಅಳತೊಡಗಿತು ನಿಮಿಷದಲಿ ॥೧೪೧॥

ಸುಮ್ಮನೆ ಇರಿ ನೀವು ನಿಮ್ಮನೆ[ಗಳೊ]ಳು। ನಮ್ಮ ರಾಮಗೆ ದೇವಲೋಕ।
ಗಮ್ಮನೆ ತೆರವಾಗಿ ಕೊಟ್ಟಿತೆಂಬುದ ಕೇಳಿ। ನಮ್ಮ ಕರೆಯ ಕಳುಹಿದನು ॥೧೪೨॥

ಸಂತವಿಟ್ಟಳು ಅಳುವುದನು ರಾಮಲದೇವಿ। ನಿಂತು ಅಲ್ಲಲ್ಲಿಗಾಕ್ಷಣದಿ।
ಕಂತುಹರನ ಪುರಕೈದು ಹೋಗುತೆವೆಂದು। ಮಂತಣದಲಿ ಓಲಾಡಿದರು ॥೧೪೩॥

ಇತ್ತರದಲಿ ಕರ[ದಿರ್ದ] ಕಂಚಿ ನಿಂಬೆಯ ಹಣ್ಣ। ಮತ್ತೆ ಸೂರೆಯ ಬಿಡಿಸಿದರು।
ಒತ್ತೊತ್ತಿ ಬಗ್ಗಿ ತೆಗೆವರನು ಕಂಡಿನ್ನು। ಚಿತ್ತದೊಳತಿ ಹಿಗ್ಗಿದರು ॥೧೪೪॥

ಉಪ್ಪಲಿಕರ ಸಿಂಗನ ಕರೆಸಿದನಾಗ। ಕರ್ಪೂರ ವೀಳ್ಯವ ಕೊಡಿಸಿ।
ತಪ್ಪದೆ ಕೊಂಡವಾಗಲಿಯೆಂದು ಬೈಚಪ್ಪ। ಒಪ್ಪವನಿಟ್ಟು ಹೇಳಿದನು ॥೧೪೯॥

ಅಗಲಾದ ಕೊಂಡವಾಗಲಿ ಹನ್ನೆರಡು ಮಾ[ರು]। ಮಿಗಿಲುದ್ದ ಮೂರು ಮಾರುಗಳು।
ತೆಗೆಸು ಹೋಗು ಬೇಗನೆಂದು ಪ್ರಧಾನನು। ಸುಗುಣ ಸಿಂಗನ [ಕಳಿಸಿದನು] ॥೧೫೦॥

ಹರುಷದಿಂದಲಿ ಕಳುಹಿಸಿಕೊಂಡು ಸಿಂಗನು। ಕರೆಸಿದ ಕಾಮಾಟದವರ।
ನೆರೆಯಿತು ಮುನ್ನೂರು ಹಾರಿ ಗುದ್ದಲಿ ಸಹ। ತರತರದಲಿ ಕಟ್ಟಿ ಹೊತ್ತು ॥೧೫೧॥

ತಡೆಯದೆ ಮುನ್ನೂರು ಹಾರಿ ಗುದ್ದಲಿ ಸಹ। ನಡೆದನುಪ್ಪಲಿಗರ ಸಿಂಗ।
ಸಡಗರದಲಿ ರುದ್ರಭೂಮಿಗೆ ಬಂದರು। ಬಿಡದೆ ಹಂಚಿಕೊಂಡ[ರಾ]ಗ ॥೧೫೨॥

ಹೊಕ್ಕಿತು ಕಮ್ಮಾಟದವರು ಕೊಂ[ಡ] ತ[ಗೆ]ವರೆ। ರಕ್ಕಸ ದಡಿಗರಂದದಲಿ।
ಧಿಕ್ಕನೆ ಭೂಮಿ ಇಬ್ಭಾಗವ ಮಾಡಿದರು। ಮುಕ್ಕಣ್ಣ ಶಿವ ಬಲ್ಲನೆನುತ ॥೧೫೩॥

ಕೊಂಡವಾಯಿತು ಬೇಗ ಎರಡು ಗಳಿಗೆಯೊಳು। ಕಂಡನುಪ್ಪಲಿಗರ ಸಿಂಗ।
ಗಂಡುಗಲಿಯು ನಡೆದು ಬಂದನು ಬೇಗ ಪ್ರಚಂಡ ಮಂತ್ರಿಗೆ ಹೇಳಿದನು ॥೧೫೪॥

ಕಡೆಯ ಮಾತನು ಕೇಳಿ [ಮಂತ್ರಿ] ಬೈಚಪ್ಪನು। ಉಡಕೊಟ್ಟನಾ ಸಿಂಗ[ಣನಿ]ಗೆ।
ಕಡಗ ಕಂಠಮಾಲೆ ಪೆಂಡೆದ ಸರಗಳ। ಬಿಡದೆ ಮನ್ನಿಸಿ ಕಳುಹಿದನು ॥೧೫೬॥

ಹೊತ್ತು ಹೋಗುತಲಿದೆ ಎನುತ ಪ್ರಧಾನನು। ಮತ್ತೆ ಕಟ್ಟಿಗೆಯರ ಕರೆ[ಸೆ]।
ಇತ್ತರದಲಿ ಕೇರಿ ಕೇರಿಲಿ ಸಾರಿತು। ಹೊತ್ತಿತು ಕೊರಡು ಕುಂಟೆಯ[ದು] ॥೧೫೭॥

ಎಣ್ಣೆಯ ಕೊಡ ತುಪ್ಪದ [ಕೊಡ] ಹಾಕಿತು। ಬಣ್ಣ[ದ] ರಾಶಿ ಎಳ್ಳುಗಳ।
ಸಣ್ಣ ಶ್ರೀಗಂಧವ ಕಡಿದು ಹಾಕಿಸೆ ಬೇಗ। ಹಣ್ಣಿತು ಕೊಂಡಕೆ ಕಿಚ್ಚು ॥೧೫೮॥

ಕರ ಮುಗಿದುಕೊಂಡು ಮಣಿಹಾರ ಮಲ್ಲಯ್ಯನು। ಒರೆದನು ಬೈಚಪ್ಪನೊಡನೆ।
ಭರದಿಂದ ಕೊಂಡ ಕೆಂಡವಾಯಿತು ಸ್ವಾಮಿ। ಕರೆಸು ರಾಮನ ರಾಣಿಯರನು ॥೧೬೧॥

ಏಳಿ ಚಿತ್ತೈಸಿ ತಳಹುವಿನ್ನೇತಕೆ। ಭಾಳಾಕ್ಷನ ಸೀಮೆಯೊಳಗೆ।
ವೇಳೆಯಾಯಿತು ರಾಮನ ಬೀಡಾರ। [ತೋ]ಳುಗೊಂಬ[ರೆ] ಬಿಜಮಾಡಿ ॥೧೬೩॥

ಗಳಿಲನೆ ಆ ಮಾತ ಕೇಳುತ ಐವರು। ಕಳೆಯೇರುತಲಿ ಹರುಷದಲಿ।
ತಳಮಳವಾಗಿ ದುಃಖವನು ಮಾಡುತಲಾಗ। ಕಾಟನ ಸತಿ ಅಳಲಿದಳು ॥೧೬೪॥

ಅಕ್ಕಗಳನು ಸಂತೈಸಿ ರಾಮಲದೇವಿ। ದುಃಖವ ಮಾಡಲಿ ಬೇಡ।
ಚಿಕ್ಕ ರಾಮಯ್ಯನ ಕೂಡಿಕೊಂ[ಬೆ]ವು ನಾವು। ಮುಕ್ಕಣ್ಣ ಬಲ್ಲನೀ ಪರಿಯ ॥೧೬೫॥

ಅಲ್ಲಿ ಎಲ್ಲರನು ಸಂತೈಸಿ ರಾಮಲದೇವಿ। ಮೆಲ್ಲನೆ ಹೊರಟಳು ಗೃಹದಿ।
ನಿಲ್ಲದೆ ನಡೆದು ಬಂದಳು ಹರಿಯಮ್ಮನ। ವಲ್ಲಭನರಮನೆಗಾಗಿ ॥೧೬೬॥

ಅತ್ತೆಯ ಕಾಣುತ ಮತ್ತೆ ಪಾದಕೆ ಬಿದ್ದು। ಎತ್ತಿ ಕೈಮುಗಿದು ಕಂಪಿಲಗೆ।
ಹೆತ್ತ ಮಗನು ನಿಮ್ಮ ಚೆನ್ನಿಗರಾಮ ತ। ನ್ನೊತ್ತಿಗೆ ಕರೆಯ ಕಳುಹಿದನು ॥೧೬೭॥

ಹರುಷದಿ ನಮ್ಮ ಬಿಟ್ಟಿರಲಾರನು ಎಂದು। ಕರೆಯಲಟ್ಟಿದನು ಅಗ್ನಿಯನು।
ಭರದಿಂದಲೆ ನಾವು ಹೋದೇವು ನೀವಿತ್ತ। ಸ್ಥಿರರಾಜ್ಯ[ವಾ]ಳಿಯೆಂದು ॥೧೬೮॥

ಆಗಲೆ ಹರಿಯಮ್ಮನು ಬೇಗ ನಾಣ್ಯವ। ಭೋಗವಣ್ಣಿಗೆಯ ಸೀರೆಗಳ।
ಶೋಧಿಸಿ ತೆಗೆದುಡಕೊಟ್ಟು ಬಂಗಾರವಿತ್ತು। ಬೇಗದಿ ಕೂಡೆನ್ನ ಮಗನ ॥೧೭೭॥

ಕರವ ಮುಗಿದು ಕಳುಹಿಸಿಕೊಂಡು ಐವರು। ತುರಗವನೇರಿದರಾಗ।
ದಿಟ್ಟ ರಾಮನ ಐವರು ಹೆಂಡಿರುಗಳು। ಪಟ್ಟದಾನೆಗಳು ಪಾಡಿದರು ॥೧೭೮॥

ರಾಮನ ಹಳೆಯ ಮಂದಿಗಳು ಎಕ್ಕಟಿಗರೆ। ಪ್ರೇಮದಿ ನಿಮ್ಮೂರ ಬಿಟ್ಟು।
ಸೋಮಧರನ ಪುರಕೆಯು ಪೋಗುತವೆಯೆಂದು। ರಾಮಲಾ ವಾಲಾಡಿಗಳು ॥೧೭೯॥

ದಿಕ್ಕನೆ ಆ ಮಾತ ಕೇಳುತ ಹಳೆಯರು। ದುಃಖಗೊಂಡರು ನಿಮಿಷದಲಿ।
ಚಿಕ್ಕ ರಾಮನ ಪೋಲ್ವ ದೊರೆಯುಂಟೆ ಎನುತಲಿ। ಬಿಕ್ಕಿ ಬಿಕ್ಕಯೆ ಅಳುತಿರಲು ॥೧೮೦॥

ಕೇರೆಯ ಬೊಬ್ಬೆಯು ವೀರಮಾಸ್ತಿಯರಿಗೆ। ವೀರವರೆಯು ಮೊಳಗಿದವು।
ಭೋರನೆ ಹೆಣ್ಣುಗಳಿಗೆ ಕಟ್ಟಾಣೇರು। ಸೇರಿ ಹಿರ್‍ರನೆ ಹಿಗ್ಗಿದರು ॥೧೮೧॥

ಆಗ ಪ್ರಧಾನ ಬೈಚಪ್ಪನು ಕೃತಕದಿ। ಬೇಗದಿ ಐದು ದಂಡಿಗೆಯ।
ಸಾಗಿಸಿ ತೆಗೆದು ಪನ್ನಂಗವ ಮುಚ್ಚಿರೆ। ಸಾಗಿಸಿದನು ಮುಂಗಡೆಯ ॥೧೮೨॥

ಬಂದ ದಂಡಿಗೆ ಕೂಡಿ ಐವರು ಮಾಸ್ತೇರು। ಚಂದದಿ ಹೊರಡೆ ಪಟ್ಟಣವ।
ಮಂದಿ ಕುದುರೆ ಸಂದಣಿಸಿತು ಸಂಭ್ರಮ। ಮುಂದೆ ನೋಡಲು ತೆರಹಿಲ್ಲ ॥೧೮೩॥

ನೆರೆಗಲಿ ರಾಮನ ಹೆಂಡಿರು ಬೇಗದಿ। [ಕೆ]ರೆಯ ಬಾಗಿನಕೆ ಸಾಗಿದರು।
ಭರದಿಂದಲಿ ಗಂಗೆಯ ಕಂಡರು ಶರಣೆಂದು।ದುರುಳ ರಾಮನ ಕೂಡಿಸೆಮಗೆ ॥೧೮೪॥

ಏಳೇಳು ಜನ್ಮದಿ ರಾಮನಾಥನೆ ಗಂಡ। ಮೇಳವಾಗಲಿ ಗಂಗಮ್ಮ।
ಲೋಲ ಕಂಪಿಲ ಮಾವನಾಗಲಿ ಹರಿಯಮ್ಮ। ಬಾಲೆಯಾಗಲಿ ಬಿಡದತ್ತೆ ॥೧೮೫॥

ಮತ್ತೆ ಮಳಲಗೌರಿಯ ಗುಡ್ಡೆಯ ಮಾಡಿ। ಮುತ್ತಿನಕ್ಷತೆ ಗಂಧವೆರಸಿ।
ಮು[ತ್ತ]ಲವಿಡಿದ ಮುತ್ತೈದೇರ ಕರೆಸಿಯೆ। ಮತ್ತೆ ಬಾಗಿನ ಕೊಟ್ಟರಾಗ ॥೧೮೬॥

ಬಾಗಿನವನು ಕೊಟ್ಟು ಮಳಲಗೌರಿಗೆ ತಾವು। ರಾಗದಿಂದಲಿ ಕೈಯ ಮುಗಿದು।
ಬೇಗ ರಾಮನ ಕೂಡಿಕೊಳಬೇಕೆನುತಲಿ। ಸಾಗಿದರಾ ಕೊಂಡದೆ[ಡೆ]ಗೆ ॥೧೮೭॥

ನೆರೆಗಲಿ ರಾಮನ ಹೆಂಡಿರು ಐವರು। ನಿರಿದೆಗೆ[ದು] [ಉ]ಡುತಾರೆ।
ಹಿರಿ ಸಣ್ಣ ರಾವುತ ರಾಣೇರೆಲ್ಲರು। ಮರೆಗೊ[ಳೆ] ಗೆರೆಯ ಸುತ್ತಿನಲಿ ॥೧೮೮॥

ಕೂಗು ಬೊಬ್ಬೆಯ ಕೊಟ್ಟಿತು ಪರಿವಾರವು। ಆಗ ರಾಮನ ರಾಣಿಯರಿಗೆ।
ರಾಗದಿಂದಲಿ ಬಂದು ಮೆಟ್ಟುಗಲ್ಲಲಿ ನಿಂದು। ಬೇಗ ಕೊಂಡಕೆ ಕೈಯ ಮುಗಿದು ॥೧೯೩॥

ಅಲ್ಲಿ ಎಣ್ಣೆಯ ನೆಳಲನು ನೋ[ಡೆ] ಐವರು। ಇಲ್ಲಿ ರಾಮನ ಸುಳುವಿಲ್ಲ।
ಎಲ್ಲಿ ಬಯಲು ಆದೆ ಧುರಗಲಿ ವಿಕ್ರಮನೆಂದು। ಮೆಲ್ಲನೆ ತಿಳಿದ[ರು] ಆಗ ॥೧೯೪॥

ಘಳಿಲನೆ ರಾಮನು ಸತ್ತುದುಂಟಾದರೆ। ಸುಳುವದೋರುವ ಎಣ್ಣೆಯೊಳಗೆ।
ಹೊಳೆವ ಕಂಗಳ ರಾಮ ಸತ್ತುದು ಹುಸಿಯೆಂದು। ತಳುವದೆಲ್ಲೆಯು ಮಡಗಿದೆಯಾ ॥೧೯೫॥

ಸಂಧಿ : ೧೧

ಮರಣ ಪೂರ್ವದಲ್ಲಿ ರಣರಂಗಕ್ಕೆ ಹೊರಟ ಕುಮಾರರಾಮ ತನ್ನ ಮಡದಿಯರಿಗೆ ಸತಿಹೋಗುವ ವಿಷಯವಾಗಿ ಹೇಳಿದ ಮಾತು.

ಕಿಚ್ಚವ ಕಂಡು ಮನವ [ಒಳಗುಂದದಿರಿ]। [ಒಚ್ಚೆಯ ತಂದುಕೊಳ್ಳೆನಲು]
ನಿಶ್ಚಯಿಸಿದ ಮನವನು ನೀ ನೋಡೆಂದು। ಮೆಚ್ಚಿನ ಮಡದಿ ನುಡಿದಳು ॥೧೭॥

ಮಡದಿಯರೆಲ್ಲರ್ಗೆ [ಉಸುರಿದ ರಾಮಯ್ಯ]। ಮಡಿ[ದೆ]ನೆಂದರೆ [ತನ್ನೊಳಗೆ]
ಬಿಡಿ ಪ್ರಾಣವನೆನುತಲಿ ವೀಳ್ಯವನಿತ್ತು। ಕಡುಗಲಿ ಕಳುಹಿಸಿಕೊಂಡ ॥೧೮॥

ಮಾರಣಾಂತಿಕ ಗಾಯಕ್ಕೆ ಗುರಿಯಾದ ಕುಮಾರರಾಮ ಎಡಗಾಲ ಕಡೆ(ಕಡಗ)ಯನ್ನು ಕಾಟಣ್ಣನ ಮೂಲಕ ತಂದೆಗೆ ಕಳಿಸುವ, ರಾಜಧಾನಿ ಕಂಪಲಿದುರ್ಗ, ಹೊಸಮಲೆದುರ್ಗಗಳಿಗೆ ಹೋದ ಕಾಟಣ್ಣ ಪಟ್ಟಣ-ಪರಿವಾರ ಬೆಂಕಿಗೆ ನೂಕಿದ ಸಂದರ್ಭ.

ಕಡೆಯವ ಕೊಂಡೊ[ಯ್ದು].......ರವನಲ್ಲ। ಸುಡು ಸಂಸಾರವಿನ್ನೇಕೆ।
ಮೃಡನು ಮೆಚ್ಚಲಿ ಕಡಿದಾಡುವೆ ನಿನ ಮುಂದೆ। ಪೊಡವಿಯಲಿ ರಾಮ ಚಿತ್ತೈಸು ॥೫೬॥

ಎಡದ ಕಾಲಿನ ಕಡೆಯವನಿತ್ತು.......। ....।
ಒಡೆಯನು ಎನ್ನ ಪ್ರಾಣಕೆ ಅಭಿಮತ। ತಡೆಯದೆ ಕೊಲ್ಲು ಹೋಗೆಂದ ॥೬೧॥

ಎಲವೊ ಕಾಟಣ್ಣ ಎನಗೆ ಬಲು ಗಾಯವೊ। ಕೊಲುವರಿನ್ನಾರೊ ಹೆಂಡಿರನು।
..................ಕೊಂಡು ಮುಂಡಾಡಿ ಕಾಟನ। ನಿಲಬೇಡ ಕೊಲ್ಲು ಹೋಗೆಂದ ॥೬೪॥

ಕಿಚ್ಚನಿಕ್ಕಿನ್ನು ಬೊಕ್ಕಸ ಭಂಡಾರಕೆ। ಒಚ್ಚೊತ್ತಿಗೆಲ್ಲ ಅರಮನೆಯ।
ಒಟ್ಟಿಸಿ ಕಿಚ್ಚಿನೊಳೆಲ್ಲರ ನೂಕಿಸಿ। ನಿಶ್ಚಯಿಸಿ ತಿರುಗಿದನು ॥೬೮॥

ಇತ್ತರದಲಿ ಚಲ್ಲಿವರಿದ ಕಾಟಣ್ಣನು। ತತ್ತರದರಿದು ಕೇರಿಯನು।
ಸುತ್ತ ಕಿಚ್ಚನಿಕ್ಕಿ ಸುಟ್ಟ ಪಟ್ಟಣವನು। ಹತ್ತಿದನಾ ಹೊಸಮಲೆಗೆ ॥೬೯॥

ಒಡೆಯ ಕಂಪಿಲರಾಯನ ಕೈಗೆ ಕಾಟಣ್ಣ। ಕಡೆಯವನವನು ಒಪ್ಪಿಸಿದ।
ಕಡುಗಲಿ ಕಾಟಣ್ಣ ಏನಾದನೊ ರಾಮ। ಪಡೆಯೊಳಗೊಪ್ಪಿಸಿ ಬಂದೆ ॥೭೦॥

೭. ಹೊಸ ಕುಮಾರರಾಮನ ಸಾಂಗತ್ಯ

ಸಂಧಿ : ೧೦

ನೆಲಮಾಳಿಗೆಯಲ್ಲಿ ಮುಚ್ಚಿಡಲ್ಪಟ್ಟ ಕುಮಾರರಾಮನು ತೀರಿಕೊಂಡಿರುವನೆಂದೇ ಭಾವಿಸಿ, ಅವನ ಐದು ಜನ ಮಡದಿಯರು ಚಿತೆಯೇರಲು ಸಿದ್ಧತೆ ನಡೆಸಿದ ಸಂದರ್ಭ.

ನಾವು ಮಾಡಿದ ಫಲವಿಷ್ಟೆಂದು ತಮ್ಮೊಳು। ತಾವೆ ಮಾತಾಡಿ ನಿಶ್ಚಯಿಸಿ।
ಮಾವನಿದ್ದೆಡೆಗೆ ಹೋಗುವ ಕಿಚ್ಚಬೇಡುವ। ರಾಮನ ಕೂಡುವೆವೆನುತ ॥೨೩೩॥

ದುಕುಲವ ಸಣ್ಣ ನಡುವಿಗೆ ಇಟ್ಟು ನವರತ್ನ। ಖಚಿತದಾಭರಣವ ತೊಟ್ಟು।
ಮಕರಂಕನರಸಿಯ ಪಳಿವಂತೆ ರಾಮನ। ಸತಿಯರೆಲ್ಲರು ತೆರಳಿದರು ॥೨೩೪॥

ಹಿಡಿದ ಕಠಾರಿಯ ಬಲಗೈಯ ಐವರು। ಎಡದ ಕೈಯಲ್ಲಿ ಕನ್ನಡಿಯು।
ನಡೆದರು ಕಂಪಿಲ ರಾಯನ ಸಮ್ಮುಖಕೆ। ತಡೆಯದೆ ಕಿಚ್ಚ ಬೇಡುವರೆ ॥೨೩೫॥

ನಿಂಬಿಯ ಹಣ್ಣ ಕಣಗಿಲ ಕೋಲ ಪಿಡಿದರು। ಗಂಧಕಸ್ತುರಿಗಳ ಪೂಸಿ।
ಚಂದ್ರನ ಅರಸಿಯ ಪಳಿವಂತೆ ರಾಮನ। ಮಂದಗಮನೆಯರು ಹೊರಟು ॥೨೩೬॥

ತೇಜಿಯನೈವರು ಏರುತ ಮೆರೆವುತ। ರಾಜವೀಧಿಯೊಳು ನಡೆತರುತ।
ರಾಜ ಚೆಲುವ ರಾಮನ ಪೋಲ್ವರಾರೆಂದು। ರಾಜಮುಖಿಯರು ನಡೆತರಲು ॥೨೩೭॥

ನಡೆದು ಬಂದರು ಕಂಪಿಲರಾಯನೋಲಗಕೆ। ಎದೆಗೆಡದಾ[ಗ] ಪೊಗಳುತಲಿ।
ಪೊಡವಿಯ ರಾಯರಗಂಡ ರಾಮುಗನೆಂದು। ನಡೆದರು ಕಿಚ್ಚ ಬೇಡುವರೆ ॥೨೪೦॥

ಆಡುತ ಗತಿಗತಿ ಥಂದಥಂದದಲಿ ಕೊಂ। ಡಾಡುತ ಗಂಡನ ಸೊಬಗ।
ನೋಡುತ ಕನ್ನಡಿಯನು ನಲಿದಾಡುತ। ಹಾಡಿದರೊಲಿದು ರಾಮನನು ॥೨೪೧॥

ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ। ದಳಪತಿಗಳ ಗಂಡನೆಂದು।
ಕಳೆಯುಳ್ಳ ಚೆಲುವರ ಗಂಡನೆಂದೆನುತಲಿ। ನಲಿದು ಪಾಡಿದರು ರಾಮುಗನ ॥೨೪೨॥

ಹಾ! ಎನ್ನ ವೀರ ಹಾ! ಶೂರ ಮಲೆವರ ಗಂಡ। ಹಾ! ಎನ್ನ ಪ್ರಾಣದ ಕಾಂತ।
ಹಾ! ಎನ್ನ ಜೋಡನಗಲುವರೆ ಚೆನ್ನಗ ರಾಮ। ಹಾ! ಎಂದು ಮೊರೆದರರ್ತಿಯಲಿ ॥೨೪೩॥

ಬಾಳು ಬಾಳು ಬಲು ಮಲೆತರ ಸಂಹಾರ। ಬಾಳು ಬಾಳೆಮ್ಮ ರಮಣನೆ।
ಬಾಳು ಬಾಳು ಎಮ್ಮ ಬಿಟ್ಟಗಲುವರೆ। ಬಾಳು ಬಾಳೆಂದು ಮೊರೆದರು ॥೨೪೪॥

ಹಾ! ಎನುತೈವರು ಎಡಬಲ ನಡೆದರು। ಕೋಯೆಂದು ಕೂಗಿ ಬೊಬ್ಬಿರಿದು।
ಕಾಯಜರೂಪ ರಾಮಯ್ಯನ ಪಾಡುತ। ರಾಯನ ಬಳಿಗೆ ನಡೆದರು ॥೨೪೫॥

ಮಸೆದಾಯುಧ ಪಿಡಿದಿರ್ದರು ಸತಿಯರು। ಬಿಸಿಗಲ್ಲ ನಾಸಿಕಕಿಟ್ಟು।
ಹಸನುಳ್ಳ ರನ್ನಗನ್ನಡಿ ನಿಂಬಿಯ ಹಣ್ಣು। ಶಶಿಮುಖಿಯರು ನಡೆಗೊಳಲು ॥೨೪೭॥

ಬಂದರು ಐವರು ರಾಯನ ಮನೆಗಾಗಿ। ನಿಂದರು ಚಾವಡಿಯೊಳಗೆ।
ಸಂದೇಹವಿಲ್ಲದೆ ಸತಿಯರೆಲ್ಲರು ಕೂಡಿ। ಬಂದರು ರಾಯನ ಬಳಿಗೆ ॥೨೪೮॥

ಒಂದೆಸೆಯಲ್ಲಿ ಕಾಟಣ್ಣನ ಸತಿಯರು। ಮಂದಗಮನೆಯರೊಡಗೂಡಿ।
ನಿಂದಲ್ಲಿ ನಿಲ್ಲದೆ ನಲಿನಲಿದಾಡುತ। ಬಂದರು ಕಿಚ್ಚ ಬೇಡುವರೆ ॥೨೪೯॥

ಬೇಡಿದರೊಲಿದು ಮಾವಗೆ ಕಿಚ್ಚು ಕೊಡುಯೆಂದು। ಕೂಡೆ ಮುಗಿದು ಕರಗಳನು।
ನೋಡುವ ಜನ[ರು] ರತ್ನಿಯ ಶಾಪಿಸಲಾಗಿ। ಬೇಡಿದರೊಲಿದು ಮುಕ್ತಿಯನು ॥೨೬೭॥

ಕೊಂಡವ ತೋಡಿಸೊ ಕೆಂಡವ ಹಾಕಿಸೊ। ದಿಂಡೆಯ ರತ್ನಿಯ ಕರಸೊ।
ಮಂಡಲಪತಿ ರಾಮನ ಪಿಡಿದ ಬಗೆಯನು। ಹೆಂಡತಿಯನು ಕೇಳುವೆವೊ ॥೨೬೮॥

ಮನಗು ಕಸ್ತೂರಿ ಶ್ರೀಗಂಧ ಕಮ್ಮೆಣ್ಣೆಯ। ಅನುಗೊಳಿಸಿದರು ಕೊಂಡದೊಳು।
ಮೊನೆಗಾರ ರಾಮಯ್ಯ [ಮೆ]ಚ್ಚಲಿ ಮಾವಯ್ಯ। ಘನದಿ ಅಪ್ಪಣೆ ಕೊಟ್ಟು ಕಳುಹೊ ॥೨೬೯॥

ಕಾಟಣ್ಣನರಸಿಯು ಕಡು ಚೆಲುವೆ [ಕೆಂಪಿಲಿ]। ಪಾಟಿಸಿ ನಿಂದು ಸಮ್ಮುಖದಿ।
ಕೋಟಾನುಕೋಟಿ ಕೋವಿದ ಮಾನ್ಯರಗಂಡ। ಕಾಟನೊಡನೆ ಕಿಚ್ಚಿನೀಯೊ ॥೨೭೦॥

ಮಂಡಲಪತಿಯು ರಾಮಯ್ಯನೆಕ್ಕಟಿಗರ। ಹೆಂಡಿರುಗಳು ತಮತಮಗೆ।
ಚಂಡ ವಿಕ್ರಮ ಕಂಪಿಲರಾಯ ಬಾಳೆಂದು। ದಂಡಿಸಿ ಕಿಚ್ಚಬೇಡಿದರು ॥೨೭೧॥

ನಿಮ್ಮ ಕುಮಾರ ರಾಮಯ್ಯನು ಸ್ವರ್ಗದಿ। ಉಮ್ಮಾಯದಿಂದ ಬಾಳುವನು।
ನಮ್ಮ ಪಾಡೇನು ಕಂಪಿಲ ಮಾವ ಕೇಳೆಂದು। ಉಮ್ಮಾಯ ಕಿಚ್ಚಕೊಡೆಂದು ॥೨೭೨॥

ಸಂಧಿ : ೧೨

ಮರಣಪೂರ್ವ ಸಂದರ್ಭದಲ್ಲಿ ರಣರಂಗಕ್ಕೆ ಹೊರಟುನಿಂತ ಕುಮಾರರಾಮನು ತನ್ನ ಮಡದಿಯರಿಗೆ ಸತಿಹೋಗುವ ವಿಷಯವಾಗಿ ಹೇಳಿದ ಮಾತು.

ತಿರುಗಿದ ತನ್ನರಮನೆಗಾಗಿ ರಾಮಯ್ಯ। ಅರಸಿಯರನು ಕ[ರೆ]ಸಿದನು।
ತರಸಿ ಮುತ್ತಿನ ಗದ್ದುಗೆ ಮೇಲೆ ಕುಳಿತಾಗ। ಹರುಷದಿ ಮಾತನಾಡಿದನು ॥೧೩೦॥

ಕಿಚ್ಚ ಕಂಡರೆ ಕಂಗೆಡಬೇಡಿ ಮನದೊಳು। ಒಚ್ಚೆಯ ತಂದುಕೊಳ್ಳೆನುತ।
ನಿಶ್ಚೈಸಿ ತನ್ನ ಕೂಡೆನುತಲಿ ರಾಮಯ್ಯ। ಮೆಚ್ಚಿನ ಮಡದಿಗೆ ಹೇಳೆ । ।೧೩೧॥

ಮಡದಿಯರೆಲ್ಲರಿಗೆ ಉಸುರಿದ ರಾಮಯ್ಯ। ಮಡಿದನೆಂದರೆ ತನ್ನೊಳಗೆ।
ಬಿಡುವುದು ಪ್ರಾಣವನೆನುತ ರಾಮಯ್ಯನು। ಮಡದೇರ ಮುಖವ ಮುಂಡಾಡಿ ॥೧೩೨॥

ಮಾರಣಾಂತಿಕ ಗಾಯಕ್ಕೆ ಗುರಿಯಾದ ಕುಮಾರರಾಮ ತನ್ನ ಕಡೆ(ಕಡಗ)ಯನ್ನು ಕಾಟಣ್ಣನ ಮೂಲಕ ತಾಯಿಗೆ ಕಳಿಸುವ, ಕಾಟಣ್ಣನು ರಾಮನ ಆಜ್ಞೆಯಂತೆ ಅವನ ಹೆಂಡರ ಮಾಸ್ತಿಕ್ರಿಯೆ, ತನ್ನ ಹೆಂಡತಿಯ ಬಲಿದಾನಕ್ರಿಯೆ ಪೂರೈಸುವ ಸಂದರ್ಭ.

ಪಡೆದ ತಾಯಿ ಹರಿಯಮ್ಮಗೆ ಬೇಗದಿ। ಕಡೆಯವನೊಪ್ಪಿಸೊ ಅಣ್ಣ।
ಒಡಹುಟ್ಟಿದನ ಮಾತ ಕೇಳಿ ಕಾಟಣ್ಣನು। ಒಡಲೊಳು ಕಿಚ್ಚ ಕೊಂಡಂತೆ ॥೧೭೫॥

ತಲೆ ಹೋಗು ತನಕ ನೀ ನಿಲಬೇಡ ಕಾಟಣ್ಣ। ಕೊಲು ಹೋಗು ರಾಣಿವಾಸವನು।
ತಳುಹು ಮಾಡಲಿ ಬೇಡ ಹೋಗೆಂದ ರಾಮನು। ಬಳಲುತ ಕಾಟ ಮನದೊಳಗೆ ॥೧೮೮॥

ತರಹರಿಸದೆ ಓಡಿ ಬಂದನು ಕಾಟಣ್ಣ। ಉರಿಗೊಂಡ ಪುತ್ಥಳಿಯಂತೆ।
ಅರಸಿಯರರಿತರು ಆಗಲೆ ಸುದ್ದಿಯ। ಧುರಧೀರ ರಾಮನೇನಾದ ॥೧೮೯॥

ಅಂಬಿನ ಮಳೆಯಲೋಲಾಡಿದ ರಾಮಯ್ಯ। ಇಂಬುಗೊಡದೆ ತರಿದೊಟ್ಟಿ।
ಅಂಬರ ಕುಸುಮದ ತೆರನಂತೆ ರಾಮನು। ನಂಬಿದ ವೈಕುಂಠವನು ॥೧೯೦॥

ತಡಮಾಡ ಸಲ್ಲದು ಎನುತ ರಾಮಯ್ಯನ। ಮಡದಿಯರೆಲ್ಲ ಶೃಂಗರಿಸಿ।
ತಡೆಯದೆ ಕರೆತನ್ನಿ ಎನುತ ಕಾಟಣ್ಣನು। ನುಡಿದನು ಹರಿಯಮ್ಮನೊಡನೆ ॥೧೯೩॥

ಗಾಢದಿ ಕೊಂಡವ ಮಾಡಿಸಿ ಆಗಲೆ। ರೂಢಿಗೆ ಹೊಸ ಪರಿಯೆನಿಸಿ।
ಪಾಡುಪಾಡಿಲಿ ಶ್ರೀಗಂಧದ ಕೊರಡನು। ಜೋಡಿಸಿ ಕಿಚ್ಚನಿಕ್ಕಿದರು ॥೧೯೪॥

ಧಗಧಗಿಸುವ ಕೊಂಡವನಾಗ ನೋಡಿದರು। ಮಿಗೆ ಚೆಲ್ವ ರಾಮನರಸಿಯರು।
ಆಗ ವೇಗದಿ ಬರಹೇಳೆಂದು ಕಾಟಣ್ಣ। ಸಾಗಿಸಿದನು ಕೊಂಡದೆಡೆಗೆ ॥೧೯೫॥

ಬಂದರು ರಾಮನ ಮಡದಿಯರೆಲ್ಲರು। ಚೆಂದ ಚೆಂದದಿ ಮೆರೆವುತಲಿ।
ಇಂದೆಮ್ಮ ಜೋಡನಗಲುವರೆ ಚೆನ್ನಿಗರಾಮ। ಕಂದರ್ಪರೂಪ ಹಾ ಎನುತ ॥೧೯೮॥

ಮಳಲಗೌರಿಯ ನೋಂತರು ಏಳು ಜಲ್ಮಕೆ। ಕಳೆಯುಳ್ಳ ರಾಮನೆ ಗಂಡ।
ಇಳೆಗಧಿಪತಿ ಕಂಪಿಲ ಮಾವನಾಗಲಿ। ಹರಿಯಮ್ಮನೆ ಅತ್ತೆ ನಮಗೆ ॥೧೯೯॥

ಓಡಿಬಂದರು ಕೊಂಡವ ಸುತ್ತಿ ಕಟ್ಟೆಯ। ಗಾಢದಿ ಹತ್ತಿಕೊಂಡಿಹರು।
ರೂಢೀಶ ಕಾಟಣ್ಣ ನೋಡುತ ನಿಂದನು। ಪಾಡುತ ಧುಮುಕಿದರಾಗ ॥೨೦೦॥

ತನ್ನರಮನೆಗಾಗಿ ಬಂದನು ಕಾಟಣ್ಣ। ಪುಣ್ಯಾಂಗನೆಯರ ನೋಡಿದನು।
ಮನ್ನೆಯ ರಾಮನ ಮಡದೇರ ಕೊಂದೆನು। ನಿನ್ನ ಹದನ ಹೇಳೆಂದ ॥೨೦೨॥

ತಡಮಾಡಲೇತಕೆ ಕಡಿ ಬೇಗಯೆನುತಲಿ। ಕಡು ಬೇಗ ಕಾಟಣ್ಣನರಸಿ।
ಬಿಡು ತನ್ನ ಮೇಲಣಾಸೆಯನೆಂದು ನುಡಿದಳು। ಮಡದಿ ತನ್ನರಸನ ಕೂಡೆ ॥೨೦೩॥

ಮರೆಮಾತು ಯಾಕೆ ಎನಗೆ ಜೀವದಾಸಿಲ್ಲ। ಇರಿಯೆಂದು ಎದೆಯನೊಡ್ಡಿದಳು।
ಕರದಲ್ಲಿ ಪಿಡಿದ ಖಂಡೆಯವನ್ನು ಝಳಪಿಸಿ। ಉರದ ಮೇಲಿರಿದ ಕಾಟಣ್ಣ ॥೨೦೪॥

ಸುರಿದ ರಗುತವ ಕಂಡು ಬಾಯೊಳು ಬಾಯಿಟ್ಟು। ಒರಗಿಸಿ ತನ್ನರಸಿಯನು।
ಉರಿಗೆಂಡವಡೆದಲ್ಲಿ ಹೋದನು ಮರುಗುತ। ತಿರಿಗಿದ ರಾಮನಿದ್ದೆಡೆಗೆ ॥೨೦೫॥

ವೀರಮರಣವನ್ನಪ್ಪಿದ ಕುಮಾರರಾಮನನ್ನು ಆಸೆಮಾಡಿ ಸುರಕನ್ನೆಯರು ಬರುವುದು, ಪರಾಂಗನಾ ವಿರತಿವ್ರತದ ಅರೆಜೀವದ ಅವನು ಹಿಂದಕ್ಕೆ ಸರಿಯುವುದು, ಅವನ ಶಿರವನ್ನು ಖಾನನ ಬಳಿ ದಿಲ್ಲಿಗೆ ಕಳಿಸುವುದು. ಅವನ ಮಗಳು ರಾಮನ ರುಂಡವನ್ನು ಉಡಿಯಲ್ಲಿ ಕಟ್ಟಿಕೊಂಡು ಚಿತಾಪ್ರವೇಶಕ್ಕೆ ಸಿದ್ಧಳಾಗುವುದು.

ನೆಟ್ಟಿದ್ದ ಕೂರಂಬುಗಳ ಗಾಯಕ್ಕೆ। ಕೆಟ್ಟಿತು ಕುಮ್ಮಟವೆಂದು।
ದಿಟ್ಟ ಕಂಪಿಲನ ದೆಸೆಯು ಹರಿಯಿತುಯೆಂದು। ಬಿಟ್ಟನು ಪ್ರಾಣ ರಾಮಯ್ಯ ॥೨೧೧॥
ಧುರಧೀರ ರಾಮನ ಮನವ ನೋಡುವೆನೆಂದು। ಪರಮೇಶ್ವರ ಪ್ರಾಣನಿಟ್ಟ।
ತೆರೆದನು ಕಣ್ಣು[ಗಳನು] ತುರುಕರನಾಗ। ಇರಿದು ಕೊಲ್ಲುವೆನೆಂದು ಗಮಿಸಿ ॥೨೧೨॥

ಇರಿವೆನೆನುತ ರಾಮ ಮುಂದಕ್ಕೆ ನಡೆದನು। ಸುರಲೋಕದ ನಾರಿಯರು।
ಕರದೊಯ್ವೆವೆನುತ ತಮ್ಮೊಡನೆ ಯೋಚನೆಮಾಡಿ। ಚರಣವ [ಹಿಂಬಾಲಿಸಲು] ॥೨೧೩॥

ಪರನಾರಿಯರ ಸಹೋದರನೆಂಬ ಸತ್ಯವು। ಬಿರಿದು ದಕ್ಕಿದರೆ ಸಾಕೆನುತ।
ಧರೆಯೊಳು ವ್ರತಗೆಟ್ಟನೆಂದೆಂಬುದಪಕೀರ್ತಿ। ಹೊರಬಾರದೆಂದು ತಿರುಗಿದನು ॥೨೧೪॥

ಮುತ್ತಿತ್ತು ಸಬಳದ ಮಂದಿ ರಾಮಯ್ಯನ। ಒತ್ತಿ ತಿವಿದು ನೂಕಿದರು।
ಹತ್ತೆನಿಂದಾಗ ಮಾತಂಗಿಯ ಖಾನರು। ಸತ್ತನೆನುತ ತಲೆಗೊಯ್ಯೆ ॥೨೧೫॥

ಮುತ್ತು ಮಾಣಿಕ್ಯ ನವರತ್ನ ಬಾಯೊಳು ತುಂಬಿ। ಕಸ್ತೂರಿಯನು ಪೂಸುತಲಿ।
ಸುತ್ತಿ ದೇವಾಂಗವ ರಾಮನ ತಲೆ ನೋಡಿ। ಅತ್ತರು ಖಾನ ಮಲ್ಲುಕರು ॥೨೧೬॥

ಗಂಧ ಕುಂಕುಮ ಕದಂಬ ಕಸ್ತೂರಿ ತುಂಬಿ। ತಂದು ರಾಮಗೆ ಉಪಚರಿಸಿ।
ತಂದರು ಖಾನರು ಮಲ್ಲಿಗೆ ಮಾಲೆಯ। ಛಂದ ಛಂದದಲಿ ಶೃಂಗರಿಸಿ ॥೨೨೧॥

ಮನವೇಗ ತೇಜಿಯ ತಂದರು ಬೇಗದಿ। ಘನವೀರ ರಾಮನ ತಲೆಯ।
ದಿನಕರ ಉದಯವಾಗದ ಮುನ್ನ ಹೋಗೆಂದು। ಜನಪತಿ ಸುರಿತಾಳ ಬಳಿಗೆ ॥೨೨೨॥

ಸುರಿತಾಳನ ಮಗಳು ತಲೆಯನು ಕಂಡಾಗ। ತ್ವರಿತದಿ ಮುಖವ ನೋಡಿದಳು।
ಸ್ಥಿರಕಾಲ ನಂಬಿ ಬಯಸಿದ್ದೆನೊ ರಾಮಯ್ಯ। ಪುರುಷ ನೀನಳಿಯಲಿಬಹುದೆ ॥೨೨೭॥

ಕಡುಗಲಿ ರಾಮನ ಬಿಡಲಾರೆನೆನುತಲಿ। ಜಡೆಯ ಮುತ್ತಿನ ಗೊಂಡೆಗಳ।
ಬಿಡಿಸಿ ತನ್ನಯ ತುರುಬಿನ ಮೇಲೆ ಕಟ್ಟಿಯೆ। ಕಡು ದುಃಖ ಮಾಡುತಲಿಹಳು ॥೨೨೯॥

ಪೊಡವಿಪ ತಂದೆ ಎನಗೆ ಕಿಚ್ಚಕೊಡುಯೆಂದು। ಕಡುಗಲಿ ರಾಮನ ಕೂಡೆ।
ಕಡು ದುಃಖಗೊಂಡು ಕಾತರದಿಂದ ರಾಮನ। ಕಡಿಯಬುಹುದೆಯೆಂದು ಹೊರಳೆ ॥೨೩೩॥

ಉಡಿಯಲಿ ತಲೆಯನು ಕಟ್ಟಿ ಬೀಳುವೆನೆಂದು। ಮಡದಿ ದೃಢವನು ನಿಶ್ಚೈಸೆ।
ಪೊಡೆವಿಯೊಳಗೆ ಅಪಕೀರ್ತಿ ಮಾಡಲಿಬೇಡ। ಒಡನೆ ಮಗಳಿಗೆ ಹೇಳಿದನು ॥೨೩೪॥

■■

೮. ಕೊಮಾರ ರಾಮಯ್ಯನ ಚರಿತ್ರೆ

ಸಂಧಿ : ೧೯

ನೆಲಮಾಳಿಗೆಯಲ್ಲಿ ಮುಚ್ಚಿಡಲ್ಪಟ್ಟ ಕುಮಾರರಾಮನು ತೀರಿಕೊಂಡಿರುವನೆಂದೇ ಭಾವಿಸಿ, ಅವನ ಐದು ಜನ ಮಡದಿಯರು ಚಿತೆಯೇರಲು ಸಿದ್ಧತೆ ನಡೆಸಿದ ಸಂದರ್ಭ.

ನಾವು [ಪಡೆದ] ಫಲವಿಷ್ಟೆಂದು ತಮ್ಮೊಳು। ತಾವೆ ಮಾತಾಡಿ ನಿಶ್ಚಯಿಸಿ।
ಮಾವನಿದ್ದೆಡೆಗೈದು ಕಿಚ್ಚ [ಬೀಳು]ವೆವೆಂದು। ಭಾವಕಿಯರು ತೆರಳಿದರು ॥೧೧೪॥

ದುಕುಲವ ಸಣ್ಣ ನಡುವಿಗುಟ್ಟು ನವರತ್ನ ಖಚಿತದಾಭರಣವನಿಟ್ಟು।
ಮಕರಂಕನರಸಿಯ ಪಳಿವಂ[ಥ] ರಾಮನ। ಸಖಿಯರೆಲ್ಲರು ತೆರಳಿದರು ॥೧೧೫॥

ಪಿಡಿದು ಕಠಾರಿಯ ಬಲಗೈಯಲೈವರು ಎಡಗೈಯ್ಯ। ಕನ್ನಡಿ ನಿಂಬೆ ವಸ್ತ್ರಗಳು।
ನಡೆದು ಬಂದರು ಕಂಪಿಲರಾಯನೋಲಗಕೆ। ತಡೆಯದೆ ಕಿಚ್ಚ ಬೇಡುವರೆ ॥೧೧೭॥

ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ। ದಳಪತಿ ರಾಯರ ಗಂಡ।
ಕಳೆಯುಳ್ಳ ಚೆಲುವ ಚೆನ್ನಿಗರಾಮನೆನುತಲಿ। ನಲಿದು ಗಂಡನ ಪಾಡಿದರು ॥೧೧೮॥

ನಿಚ್ಚಟ ರಾಮಯ್ಯ ಮುಂಚೆ ಹೋದನು ನಮಗಾಶ್ಚರ್ಯವಾಯಿತು ಈಗ।
ನಿಶ್ಚಯಿಸಿ ರಾಮನ ಕೂಡೆ ಪೋಪೆವು ನಾವು। ಕಿಚ್ಚ ಪಾಲಿಸೊ ಕಂಪ ಮಾವಾ ॥೧೩೪॥

ಬೇಡಿ ನಿಮ್ಮತ್ತೇರ ಕೂಡಿನ್ನು ಸುಖದಲ್ಲಿ। ನಾಡ ಹಂಚಿಸಿ ಕೊಡಿಸುವೆನು।
ರೂಢಿಯೊಳಗೆ ರಾಮನ ಬಿಟ್ಟು ಇರುವುದು। ಖೋಡಿಯಲ್ಲವೆ ಕಂಪ ಮಾವಾ ॥೧೩೫॥

ಮರಣಪೂರ್ವ ಸಂದರ್ಭದಲ್ಲಿ ರಣರಂಗಕ್ಕೆ ಹೊರಟುನಿಂತ ಕುಮಾರರಾಮ ತನ್ನ ಮಡದಿಯರಿಗೆ ಹೇಳಿದ ಕೊನೆಯ ಮಾತು.

ತಿರುಗಿ ತನ್ನರಮನೆಗಾಗಿ ರಾಮಯ್ಯನು। ಅರಸಿಯರನು ಕರೆಸಿದನು।
ತರಿಸಿ ಮುತ್ತಿನ ಗದ್ದುಗೆ ಮೇಲೆ ಕುಳಿತಿರ್ದು। ಹರುಷದಿ ಮಾತಾಡಿದನು ॥೧೧॥

ಕಿಚ್ಚ ಕಂಡು ಕಣ್ಣುಗೆಡಬೇಡಿ ಮನದೊಳು। [ಒಚ್ಚೆಯ] ತಂದುಕೊಳ್ಳೆನುತ।
ನಿಶ್ಚೈಸಿ ತನ್ನ ಕೂಡಲಿ ಬನ್ನಿಯೆನುತಲಿ। ಮೆಚ್ಚಿನ ಮಡದೆರ್ಗೆ ಉಸುರೆ ॥೧೨॥

ಮಡದಿಯರಿಗೆ ಬುದ್ಧಿ ಹೇಳಿನ್ನು ರಾಮಯ್ಯ। ಮಡಿದೆ[ನೆಂ]ದರೆ ಎನ್ನೊಡನೆ।
ಬಿಡುವುದು ಪ್ರಾಣವ ಎನುತ ತಾಂಬೂಲವಿತ್ತು। ಕಡುಗಲಿ ಕಳುಹಿಸಿಕೊಂಡ ॥೧೩॥

ಮಾರಣಾಂತಿಕ ಗಾಯಕ್ಕೆ ಗುರಿಯಾದ ಕುಮಾರರಾಮ ಎಡಗಾಲ ಕಡೆ(ಕಡಗ)ಯನ್ನು ಕಾಟಣ್ಣನ ಮೂಲಕ ತಾಯಿಗೆ ಕಳಿಸಿದ, ಅವನ ಮಡಿದಿಯರಿಗೆ ಮಾಸ್ತಿ ಚಿತೆ ಪ್ರವೇಶ ಮಾಡಿಸಿದ, ತನ್ನ ಮಡದಿಯನ್ನು ಹತ್ಯೆ ಮಾಡಿದ ಸಂದರ್ಭ.

ಒಡನೊಡನರಸಿ ರಾಮಯ್ಯ ಕಾಟಣ್ಣನಿಗೆ। ಒಡಲ ಗಾಯವು ಸೊಕ್ಕಿತೆನಗೆ।
ಪಡೆದ ತಾಯಿ ಹರಿಯಮ್ಮಗೆ ನೀ ಹೇಳು। ಕಡೆಯವನೊಪ್ಪಿಸುಯೆಂದು ॥೫೩॥

ಬಂದನು ರಾಮಯ್ಯನ ಮಡದಿಯರೆಲ್ಲರ। ನಿಂದು ಶೃಂಗಾರ ಮಾಡಿಸಿದ।
ಚೆಂದದಿ ಮೊರೆವುತ ಆಡುತ ಪಾಡುತ। ಬಂದರು ರಾಜಬೀದಿಯಲಿ ॥೭೦॥

ಬಂದರು ರಾಮನ ಮಡದಿಯರೆಲ್ಲರು। ಚೆಂದಚೆಂದದಲಿ ಮೆರೆವುತ।
ಇಂದೆಮ್ಮ ಜೋಡಗಲುವರೆ ಚೆನ್ನಿಗರಾಮ। ಕಂದರ್ಪರೂಪ ಎಂದೆನುತ ॥೭೧॥

ಮಳಲಗೌರಿಯ ನೋಂತರು ಏಳು। ಜಲ್ಮಕೆ ದೊರೆ ರಾಮನೆ ಗಂಡನೆನುತ।
ಅರಸು ಕಂಪಿಲರಾಯ ಮಾವನಾಗಲಿ ನಮಗೆ। ಹರಿಯಮ್ಮ ಅತ್ತ್ಯಾಗಲೆಂದು ॥೭೩॥

ಓಡಿಬಂದರು ಕೊಂಡವ ಹತ್ತಿ ಬೇಗದಿ। ಗಾಢದಿ ಹತ್ತಿ ಕೆಂಡವನು।
ನೋಡುತ ನಸುನಗೆ ನಗುತ ರಾಮಯ್ಯನ। ಪಾಡುತ ದುಮಕಿದರಾಗ ॥೭೪॥

ತನ್ನರಮನೆಗಾಗಿ ಬಂದನು ಕಾಟಣ್ಣ। ಉನ್ನತ ಕಿಚ್ಚುರಿವುತಿರೆ।
ಮನ್ನೆಯ ರಾಮನ ಮಡದೇರ ಕೊಂದೆನು। ಎನ್ನುತ ಕಾಟ ಪೇಳಿದನು ॥೭೬॥

ತಡಬೇಡ ಎನ್ನನು ಕಡಿ ಬೇಗ ಎಂದಳು। ಕಡುಗಲಿ ಕಾಟಣ್ಣನರಸಿ।
ಬಿಡು ನನ್ನ ಮೇಲಣ ಆಸೆಯನೆಂದಳು। ನುಡಿದಳು ತನ್ನರಸನ ಕೂಡೆ ॥೭೭॥

ಕಡಿಯೊ ಎನ್ನಯ ಜೀವದಾಸಿಲ್ಲ ಕಾಣ। ಹಿಡಿಯಿರಿಯೆನೆ ಖಂಡೆಯವ।
ಬಿಡದೆ ಖಂಡೆಯವೆತ್ತಿ ಜಳ್ಪಿಸಿ ಕಾಟನು। ನಡುವುರದ ಮೇಲಿನ್ನು ಇರಿದ ॥೭೮॥

ಸುರಿವ ರಕ್ತವ ಕಂಡು ಬಾಯೊಳು ಬಾಯಿಟ್ಟು। ಒರಗಿಸಿದನು ರಾಣಿಯನು।
ತರಿಗೆಂಡವ ತನ್ನ ಒಡಲೊಳು ಹೊಯ್ದಂತೆ। ತಿರುಗಿದ ರಾಮನಿದ್ದೆಡೆಗೆ ॥೭೯॥

ಸಂಧಿ : ೨೬

ವೀರಮರಣವನ್ನಪ್ಪಿದ ಕುಮಾರರಾಮನನ್ನು ಆಸೆಮಾಡಿ ಸುರಕನ್ಯೆಯರು ಬರುವುದು, ಪರಾಂಗನಾವಿರತಿ ಮೌಲ್ಯದ ಅರೆಜೀವದ ಅವನು ಹಿಂದಕ್ಕೆ ಸರಿಯುವುದು, ಕತ್ತರಿಸಿದ ಅವನ ಶಿರವನ್ನು ಖಾನರ ಬಳಿ ದಿಲ್ಲಿಗೆ ಕಳಿಸುವುದು, ಅವನ ಮಗಳು ರಾಮನ ರುಂಡವನ್ನು ಉಡಿಯಲ್ಲಿ ಕಟ್ಟಿಕೊಂಡು ಚಿತಾಪ್ರವೇಶಕ್ಕೆ ಸಿದ್ಧಳಾಗುವುದು.

ಕೇಳಿ ಮನ್ನೆಯರೆಲ್ಲ ಕೊಂದೇನೆನುತ ಬಂದು। ಒತ್ತಿ [ನಿಂ]ದರು ಬೊಲ್ಲನೆಡೆಗೆ।
ಬಂದು [ಮಾತಂಗಿ]ಯು ರಾಮನ ಎಳೆದಳು। ಒಲಿದು ಬಿದ್ದನು ರಣದೊಳಗೆ ॥೮॥

ತೆರೆದು ಕಣ್ಣನು ನೋಡಲು ರಾಮ ತುರುಕರು। ಮುತ್ತಿ ಕೊಲ್ಲು[ವ]ನೆಂದು [ಗ]ಮಿಸೆ।
ತ[ರಿ]ವೆನೆನುತ ಮುಂದಕೆ ತಾ ತೆರಳಿದರೆ। ಸುರಲೋಕದ ನಾರಿಯರು ॥೯॥

ಕರೆದೊ[ಯ್ವೆವು] ತಮ್ಮ ನೆರೆವುದೆಂದೆನು[ತಿರೆ]। ಚರಣವ ಹಿಮ್ಮೆಟ್ಟಿದನು।
ಪರನಾರಿಯ ಸಹೋದರನೆಂಬ ಸತ್ಯವು। ಬಿರಿದು ದಕ್ಕಿದರೆ ಸಾಕೆನುತ ॥೧೦॥

ರಾಮನ ತಲೆಯನು ಕೊಯ್ದರು ತುರುಕರು। ನೇಮದಿ ಡಿಳ್ಳಿ ಮುಟ್ಟಿಪೆವು।
ಮುತ್ತು ಮಾಣಿಕ ಚಿನ್ನವ ಬಾಯೊಳು ತುಂಬಿ। ಸುತ್ತಿ ದೇವಾಂಗವ ತಲೆಗೆ ॥೧೭॥

ಗಂಧ ಕಸ್ತೂರಿ ಕುಂಕುಮ ಕಾದಂಬವ। ತಂದರು ಖಾನ ಮಲುಕರು।
ಮು.......ರಳುವ ಜಾಜಿ ಮಲ್ಲಿಗೆ ಸಂಪಗೆ। ತುಂಬಿ ನಿಂದು ರಾಮನ ಶೃಂಗರಿಸಿ ॥೧೯॥

ಮ[ನವೇಗ] ತೇಜಿಯ ತರಿಸಿ ಅದರ ಮೇಲೆ। ಘನ ವೀರರಾಮನ ತಲೆಯ।
ದಿನಕರನುದಯವಾಗದ ಮುನ್ನ ನೀವು ಹೋಗಿ। ಎನುತ ಸುರಿತಾಳನ ಬಳಿಗೆ ॥೨೦॥

ಸುರಿತಾಳನ ಮಗಳು ಈ ತಲೆಯನು ಕಂಡು। ಸ್ಥಿರಕಾಲವು ಬಯಸಿರ್ದೆ।
ಪುರುಷ ನೀನಳಿಯಬಹುದೆ ಈಗ ನೀನೆಂದು। ಹರುಷದಿ ಮುಖವ ನೋಡಿದಳು ॥೨೪॥

ಕಡುಗಲಿ ರಾಮನ ಬಿಡಲಾರೆನೆನುತವನ। ಜಡೆಯ ಮುತ್ತಿನ ಗೊಂಡೆಯವ।
ಮುಡಿಸಿ ತನ್ನಯ ತುರುಬಿನ ಮೇಲೆ ಕಟ್ಟಿದಳು। ಕಡು ಶೋಕವ ಮಾಡಿದಳು ॥೨೭॥

ಪೊಡವಿಪ ತಂದೆ[ಗೆ] ಕಿಚ್ಚ ಬೇಡಿದಳಾಗ। ಕಡುಗಲಿ ರಾಮನ ತಲೆಯ।
ಉಡಿಯಲಿ ತಾ ಕಟ್ಟಿಕೊಂಡು ಬೀಳುವೆನೆನಲು। ನುಡಿದ[ನು] ಸುರಿತಾಳನೊಡನೆ ॥೩೨॥

ಅಪಕೀರ್ತಿಯ ಮಾಡಿಕೊಂಬರೆ ಕಂದಯ್ಯ। ವಿಪರೀತ ನಿನ್ನಯ ಮಾತು।
ತಪವಿರುವಾ ಸತ್ತ ತಲೆಯನು ಪಿಡಿಕೊಂಡು। ಅಪಹರಿಸೆಂ[ದೊ]ರ[ಲಿ]ದನು ॥೩೩॥

■■

೯. ಬಾಲರಾಮನ ಸಾಂಗತ್ಯ

ಸಂಧಿ : ೧೫

ನೆಲಮಾಳಿಗೆಯಲ್ಲಿ ಮುಚ್ಚಿಡಲ್ಪಟ್ಟ ಕುಮಾರರಾಮನು ತೀರಿಕೊಂಡಿರುವನೆಂದೇ ಭಾವಿಸಿ, ಅವನ ಐದು ಜನ ಸರಿಯರು ಚಿತೆಯೇರಲು ಸಿದ್ಧತೆ ನಡೆಸಿದ ಸಂದರ್ಭ.

ಬಂದರು ರಾಮನ ಸತಿಯರು ಐವರು। ಕಿರಣದ ಪ್ರಭೆ ಸೂಸುವಂತೆ।
ಮೊರೆಯಿಡುತ ಮನ್ಮಥನು [ಉ]ರಿದಾಗ ರತಿದೇವಿ। ಹರನೆಡೆಗೆ ಹೋದಂತೆ ಶೋಕದಲಿ ॥೧೫೯॥

ಮಾವನೆ ಮತಿಗೇಡಿ ಕುಮಾರನ ಕೊಲುವೆ। ಸೂಳೆಯ ಒಲುಮೆ ತಲೆಗೇರಿ।
ಹಾಳು ಮಾಡಿ[ದೆ] ಮನೆಯ ನಾವಿದ್ದು ಫಲವೇನು। ಮಾಡಿಸಿಕೊಡೆಮಗೆ ಕೊಂಡವನು ॥೧೬೦॥

ನುಂಗಿದ ತುತ್ತಿಗೆ ರುಚಿಯಾಕೆ ಮಾಮಾಜಿ। ಗಂಡನಿದ್ದರೆ ಮಾತು ಎಮಗೆ।
ಮುಂಡೆಗೂಳಲಿ ನಾವು ಮುನ್ನ ಬಾಳುವರಲ್ಲ। ಭಂಡ ಕೊಡೆಮಗೆ ಕಿಚ್ಚನು ॥೧೬೫॥

ಗಂಡನೆ ಗತಿ ಮತಿ ಗಂಡನೆ ಮನೆದೈವ। ಗಂಡನೆ ಪ್ರಾಣದೊಲ್ಲಭನು।
ಗಂಡರ ಗಂಡ ಉದ್ದಂಡ ರಾಮನ ಬಿಟ್ಟು। ರಂಡೆಯ ಬಾಳು ಬಾಳುವೆ[ವೆ] ॥೧೬೬॥

ಕಲಿಯಾಗಿ ರಾಮನ ಲಲನೆಯರೈವರು। ಹರಿದರು ಮಂತ್ರಿಯ [ಕಡೆ]ಗೆ।
ಕಳುಹೆಮ್ಮ ಕಾಂತನ ಅಲರಂಬ ಬಾಣ[ನ] ಅಗಲಿ। ಇರುವರಲ್ಲವೊ ಕಿಚ್ಚ ಬೇಗ ॥೧೬೯॥

ಕೋಟಿ ಸೂರ್ಯನ ಪೋಲ್ವ ಕಾಂತ ತೊಲಗಿದ ಮೇಲೆ। ಜಾತಿ ಸತಿಯರು ಇರಸಲ್ಲ।
ಇತರ ಸುಖಭೋಗ ಇರುವನಕ ಅರೆ ಬಾಳು। ಹಾಕುವುದು ದೊರೆತನ ಲಕ್ಷಣವು ॥೧೮೧॥

ಪಡೆದವನೆ ಎಲೆ ತಂದೆ ನಿನ್ನೊಡಲೊಳಗೆ ಜನಿಸಿ। ಹೊರೆವರಲ್ಲವೊ ಭಂಡ ಬಾಳ।
ದೃಢವಾಗಿ ನಡೆವೆವೊ ಕಮಲಾಕ್ಷನ ಮಗನ। ಪೋಲ್ವನ ಬಿಟ್ಟು ಇರುವವರೆ ॥೧೮೨॥

ಮೆಚ್ಚಿದನು ಮಂತ್ರಿಯು ಪತಿವ್ರತ ಭಾವ ಇವರೊಳಗೆ। ಹೊಕ್ಕಾರು ಕೊಂಡ ನಿಜವೆಂದು।
ದಟ್ಟಿಚಲ್ಲಣ ಉಟ್ಟು ಶೃಂಗಾರವಾಗಿ ಬರಲೆಂದು। ಪುತ್ರಿ ಬಾಲೆಯರನು ಕಳುಹೆ ॥೧೮೩॥

ರಂಭೆಗೆ ಸಾಟಿ ರತಿದೇವಿಗಿಮ್ಮಡಿಯಾದ ಬೆಳದಿಂಗಳ ಪೋಲ್ವ ನಾರಿಯರು।
ಶೃಂಗಾರವಾಗಲು ಉಂಗುಷ್ಠ ತುದಿ ಮುತ್ತು। ರಂಗು ಮಾಣಿಕ್ಯ ರತ್ನದಲಿ ॥೧೮೪॥

ತೊಟ್ಟು ಚಲ್ಲಣ ದಟ್ಟಿ ಬಿಗಿದುಟ್ಟ ಹಳದಿಯ ಸೀರೆ। ಕಟ್ಟಿದ ಮಲಕು ಕಾಣಿಗಳು।
ಕಿತ್ತ ಕಠಾರಿ ಕೈಯೊಳು ಬಾಕು ಗಜನಿಂಬೆ। ಉತ್ತಮ ಚಂದ್ರಾಯುಧವ ಪಿಡಿದು ॥೧೮೫॥

ಎಡಗಯ್ಯ ದರ್ಪಣ ಮುಡಿದ ಹೂವಿನ ಮಾಲೆ। ಹೊಡೆದು ಬೊಬ್ಬೆಗಳು ಪುರದೊಳಗೀ।
ಗೆಡೆಯೆಡೆಗೆ ಬಾಗಿನವ ಮುತ್ತೈದೆಯರು ಕೊಡುತಲಿ। ಬರುವಾಗ ನಗರ ಗೋಳೋ ಎನುತ ॥೧೮೬॥

ಹಿರಿಯರು ಕಿರಿಯರು ತರಳರು ಪತಿವ್ರತ। ತರುಣಿಯರು ಬಾಲ ಕಾಂತೆಯರು।
ಎಡದೆರನಿಲ್ಲದೆ ಇಡುವರು ಹಣ ಹೊನ್ನು। ನಡೆವರು ಕೋಟಿ ಯಾತ್ರೆಯಲಿ ॥೧೮೭॥

ಹರಿಹರ ದೇವಿಯ ಅರಮನೆಯನು ಹೊಕ್ಕು। ಶರಣೆನುತ ಒಡನೆ ಎರಗಿದರು।
ತರಳೆಯರ ಕಾಣುತ್ತ ಭೋರಿಡಲಾಗ ಅತ್ತೆಗೆ। ವರ ಶಾಂತಿಗಳ ಪೇಳುತಿಹರು ॥೧೮೮॥

ದುಃಖವ್ಯಾತಕೆಯಮ್ಮ ಕಾಂತನೆಡೆಗೆ ಪೋ[ಗೆ]। ನೀವತ್ತರೆ ನಮಗೆ ಗತಿಯುಂಟೆ।
ಹತ್ತೇಳು ಜನ್ಮದಿ ಸೊಸೆಯರಾಗಿ ಬರುವೆವು ನಿಮ್ಮ। ಪುತ್ರನ ಬಿಡದೆ ನಾವಿನ್ನು ॥೧೮೯॥

ಮುತ್ತಿನ ಬಾಗಿನವ ಮಡಿಲಲ್ಲವರು ತುಂಬಿ। ಕಚ್ಚಿ ಗಲ್ಲಗಳ ಮುಂಡಾಡಿ।
ಪುತ್ರ ರಾಮಯ್ಯನ ಪುಣ್ಯಸತಿಯರಾಗಿ। ಸತ್ಯಲೋಕದಿ ಬಾಳಿಯೆನಲು ॥೧೯೧॥

ಅತ್ತೆಯ ಚರಣಕ್ಕೆ ಮತ್ತೊಮ್ಮೆ ಅಡಿಗೆರಗಿ। ಕಿಚ್ಚಿನ ಮಾಸ್ತಿಯವರು ಹೊರಡೆ।
ಒತ್ತಿಲಿ ಹರಿಯಮ್ಮ ಕಮಲಾಜಿ ಪರಿವಾರ। ಹೊಕ್ಕರು [ಮಾ]ವಾಜಿ ಸದರ ॥೧೯೨॥

ವೀರಮಾತೆಯರಾಗ ಕಾಣುತ್ತ ಕಂಪಿಲನ। ಪಾದಕ್ಕೆ ಎರಗಿ ಐವರು।
ಆನಂದ ಸುಖದೊಳು ಸ್ಥಿರರಾಜ್ಯ ಬಾಳರಸ। ರಾಣಿ ರತ್ನಿಯ ಸುಖದೊಳಗೆ ॥೧೯೩॥

ಕೋಮಲೆ ಕಾಂತೆಯರ ಕಾಣುತ್ತ ಕಂಪಿಲಗೆ। ಏರಲು ಬಡಬಾಗ್ನಿ ಶೋಕ।
ಬೀಳುತ ಇವರೊಡನೆ ಕೊಂಡ ಮನದೊಳು ಗ್ರಹಿಸಿ। ಭೂನಾಥ ಹೊರಡೆ ಸೊಸೆಯರೊಡನೆ ॥೧೯೪॥

ತಾಳಮೇಳದ ಘೋಷದಲಿ ಕಹಳೆ ಭೇರಿಗಳಿಂದ। ಭೂಮಿಯ ಭೇದಿಸುತ ಬರಲು।
ತೋರಣ ಮೇಲ್ಕಟ್ಟು ಎಡೆಯೆಡೆಗೆ ಕುರುಚುಗಳು। ಸಾರಲು ಸೂರ್ಯ ವರುಣದಲಿ ॥೧೯೫॥

ಇತ್ತ ನೆಲಮಾಳಿಗೆ ಒತ್ತಿಲಿ ಮಂತ್ರಿಯು। ಮತ್ತೆ ಕೊಂಡನು ಮಾಡಿಸಿದ।
ಲೆಕ್ಕವಿಲ್ಲದೆ ಶ್ರೀಗಂಧದ ಕೊರಡಿಂದ। ಒಟ್ಟಿಸಿ ಕೊಂಡ ಮಾಡಿರಲು ॥೧೯೬॥

ಕೊಂಡವಂ ಬಳಸಿ ಶೃಂಗಾರ ಚಪ್ಪರ ಹಾಕಿ। ಪವಳ ಮುತ್ತಗಳ ಮೇಲ್ಕಟ್ಟು।
ಚೆಲುವಾಗಿ ತೋರಣ ಝುಲ್ಲಿ ಪರದಿ ಸುತ್ತಲು ಬಿಡಿಸಿ। ಚೋದ್ಯವೆನಿಸಿ ಭೂಮಿಯಲಿ ॥೧೯೯॥

ಕೊಂಡವ ಏರಿ ಬಳಸಿ ಬಂದು ಐವರು। ಕೊಂಡವ ಕಾಣುತ್ತ ಹಿಗ್ಗಿ।
ಕೊಂಡಾಡಿ ಮಂತ್ರಿ[ಯೆ] ಕೊಟ್ಟೆಮಗೆ ಸದ್ಗತಿಯ। ಬಂಧುಬಳಗದಿ ಸುಖಬಾಳು ॥೨೦೦॥

ಹಾಳಾಗಿ ಕುಮ್ಮಟ ಹುಟ್ಟಲಿ ಗಿಡ ಮೆಳೆಯು। ರಾಮನ ಸತಿಯರಂದದಲಿ।
ವಾಲಿಗಳಳಿಯಲಿ ನಮ್ಮಂತೆ ಕೊಂಡವ। ಬೀಳಲಿ ಎಂದು ಹಾರೈಸಿದರು ॥೨೦೧॥

ಮೆಟ್ಟಿಬಂದರು ನಿಂದು ಸ್ವಾತಿ ಕಲ್ಲಿನ ಮೇಲೆ। ಪಟ್ಟಣವ ದೃಷ್ಟಿಸಿ ನೋಡಿ।
ಬಟ್ಟಲೊಳೆಣ್ಣೆಯ ತಂದಿತ್ತರೆ ಬೈಚಪ್ಪ। ಮತ್ತೆ ಐವರು ನೋಡಿ ನೆರಳು ॥೨೦೨॥

ತೈಲದೊಳಗೆ ತಮ್ಮ ಇನಿಯ ಕಾಣುವುದಿಲ್ಲ। ಹರಿಹರನೆ ಬಲ್ಲ ಈ ಮಾಯೆ।
ಮರಣ ಕಾಣುವುದಿಲ್ಲ ಮಡಗಿರು[ವಿರಿ]। ಮಂತ್ರಿ ಅರುಹು [ಎ]ಮಗೆ ॥೨೦೩॥

ಸಂಧಿ : ೧೯

ಮರಣಪೂರ್ವ ಸಂದರ್ಭದಲ್ಲಿ ರಣರಂಗಕ್ಕೆ ಹೊರಟು ನಿಂತ ಕುಮಾರರಾಮನು ತನ್ನ ಮಡದಿಯರಿಗೆ ಹೇಳಿದ ಕೊನೆಯ ಮಾತು.

ರಾಯ ರಾಮನು ಕರೆಸಿ ರಾಣಿಯರೈವರ। ಬಾರೆನ್ನ ರಂಭೆ ಊರ್ವಸಿಯೆ।
ಬಾರೆನ್ನ ರತಿ ಭಾಗ್ಯದ ಸ್ತ್ರೀ ಲಕ್ಷ್ಮೀ[ಯೆ]। ಬಾರೆನ್ನ ಚಂದ್ರನ ಕಳೆಯೇ ॥೨೦೭॥

ಮಡದಿಯರೈವರ ತೋಳೆಡೆಯೊಳು ಕುಳ್ಳಿರಿಸಿ। ಪರಿವಾರ ಸಮೇತ ಮಧ್ಯದಲಿ।
ಪಿಡಿದು ಗಲ್ಲಗಳನು ಲಯಗಾಲ ಕೇಳಲು ನೀವು। ಬರಬೇಕು ಎನ್ನೊಡನೆ ಎನಲು ॥೨೦೮॥

ಮಲೆವ ರಾಯರ ಗಂಡ ರಣವಿಜಯ ಕಲಿಪಾರ್ಥ। ಹಿಡಿ [ನ]ಮ್ಮ ಅಭಯ ಹಸ್ತವನು।
ಎದೆಗೆಡದೆ ವೈರಿಯ ಕಡಿ ನಾವು ಬರುವುದಕೆ। ಎರಡೆಂಟು ಬೇಡ ಬೆನ್ನೊಡನೆ ॥೨೦೯॥

ಸಂಧಿ : ೨೦

ಮಾರಣಾಂತಿಕ ಗಾಯಕ್ಕೆ ಗುರಿಯಾದ ಕುಮಾರರಾಮ ತನ್ನ ಹೆಂಡಿರನ್ನು ಚಿತಾಪ್ರವೇಶ ಮಾಡಿಸಲು ಸೂಚಿಸಿದ, ಕಾಟಣ್ಣ ಆ ಕಾರ್ಯ ಪೂರೈಸಿ, ತನ್ನ ಹೆಂಡತಿಯನ್ನೂ ಹತ್ಯಮಾಡಿದ ಸಂದರ್ಭ.

ಬಾರಯ್ಯ ಕಾಟಣ್ಣ ತೀರಿಸಿದೆ ಜಡರನು। ರಾಣಿಯರ ತೊಡಕೊಂದು ಇಹುದು।
ನಾಲ್ವರ ತಲೆಹೊಡೆ[ಯೊ] ಕುಮಾರನ ಪಡೆದಂಥ।ಬಾಲೆಯೊರ್ವಳ ಕಾಯೆನಲು ॥೧೨೭॥

ಬಾಲೆಯರ ಕೇಳಿದ ನೀವು ಎನ್ನವುದೇನು। ಸೇರಿದ ರಾಮಣ್ಣ ಕೈವಲ್ಯ।
ಆಡೋದು ಆಗೊಂದು ಒಡಲೇ ಖಾಜೆ। ಹಾರಿಸು ತಲೆಯೆಂದು ಕುಳಿತು ॥೧೩೮॥

ಹೊಯ್ಯಲು ನಾಲ್ವರ ನಿಮಿಷ ಮಾತ್ರದಿ ಕಾಟ। ಇರು ತಾಯಿ ಸುಭದ್ರೆ ಸುಖದಿ।
ಮಗನು ಜಟ್ಟಂಗಿಯ ರಾಮನ ಮುಂದಿಟ್ಟು। ನಡೆಸಮ್ಮ ರಾಜ್ಯಭಾರವನು ॥೧೩೯॥

ಪುತ್ರನ ಸುಡು ನನ್ನ ಪುರುಷನೊಡನೆ ಪೋಗೆ। ಪ್ರಾಪ್ತಿ ಕೊಡಲಿಲ್ಲವೆ ಶಿವ ನನಗೆ।
ಜತಿಯರು ನಾಲ್ವರು ಏಕಾರ್ಥವಾದರು ತೊರೆದು। ಬಿಟ್ಟೇನೆ ಮನ್ಮಥನ ರೂಪ ॥೧೪೦॥

ತವಕದೊಳಗೆ ಕಾಟ ತನ್ನ ಮನೆಗೆ ಬಂದು। ನಿಮ್ಮ ಮಾತೇನು ಹೇಳೆಂದ।
ತಮ್ಮನ ರಾಣಿಯರ ಯಮಧರ್ಮನ ಕಾಣಿಸಿದೆ। ನಿಲ್ಲಲು ತನಗ್ಯಾಳ್ಯವಿಲ್ಲ ॥೧೪೧॥

ಯಾಕರಸೆ ನಿಲ್ಲುವುದು ಇದ್ದೆನೆಂಬುವರ್ಯಾರು। ಹೊಡೆದ್ಹಾಕಯ್ಯ ಈ ಕ್ಷಣವೆ ನೀನು।
ಜಡಿದೆತ್ತಿ ಖಡ್ಗವ ಹೊಡೆದು ಈರ್ವರ ಮೇಲೆ। ಹೊರಳಿದ ಬಿದ್ದು ದುಃಖದಲಿ ॥೧೪೨॥

ಬಾಲೆಯರ ಲಯಮಾಡಿ ಬೇಗ ಹೊರಡಲು ಕಾಟ। ಕಾಲ ತೊಡರಿಲ್ಲ ನಮಗೆನಲು।
ಭೇರುಂಡ ರಣರಾಮ ಏನಾದನೋ ಎನುತಲಿ। ವಾಯುಗಮನದಿ ಓಡಿಬಂದ ॥೧೪೩॥

ಮಾತಂಗಿ ಕುಮಾರರಾಮನ ರುಂಡ ಕತ್ತರಿಸಿದುದು, ರುಂಡ ದಿಲ್ಲಿಗೆ ಬಂದುದು, ಖಾನನ ಮಗಳು ಅದನ್ನು ಉಡಿಯಲ್ಲಿ ಕಟ್ಟಿಕೊಂಡು ಚಿತಾಪ್ರವೇಶಿಸಲು ಸಿದ್ಧಳಾದುದು.

ಇದಿರಾಗಿ ನಿಲ್ಲಲು ಎದೆ ಧೈರ್ಯ ಸಾಲದೆ। ದೂರದೊಳು ನಿಂದು ನೋಡುವರು।
ಬಿಟ್ಟೇನೆ ಎಲೆ ರಾಮ ಕೊಟ್ಟ ಛಲಪದನೆಂದು। ಕುತ್ತಿಗೆ ಕೊರೆಸಿದಳು ರಂಡೆ ॥೨೧೦॥

ಹತ್ತೆಂಟು ದಿವಸದಿ ತಟ್ಟಲು ತಲೆ ಡಿಳ್ಳಿ। ಪಟ್ಟಣದ ಸದರಿಗೆ ಮಡಗಿ।
ಕೊಟ್ಟರು ಸುದ್ದಿಯ ಸುರಿತಾಳ ಕುಮ್ಮಟದ। ಪಟ್ಟಕರನ ತಲೆ ಬಂತು ॥೨೧೩॥

ಮಗಳು ಬಿಬ್ಬಿಯ ಸಹ ಒಡಗೊಂಡು ಸುರಿತಾಳ। ಸದರಿನೊಳಗೆ ಬಂದು ಕುಳಿತ।
ಕಳೆ ಕಾಂತಿಯಿಂದೆಸೆವ ತಲೆಯನು ಕಂಡು ಸುರಿತಾಳ। ಕೊಲಬಹುದೆ ಇಂಥ ಚೆಲುವನ ॥೨೨೩॥

ತಲೆಯ ಕಾಣುತ ಬಿಬ್ಬಿ ಜಲವೊರತು ನಯನದಿ। ಪಿಡಿದಳು ಗಲ್ಲ ಬಮ್ಮವನು।
ಉಳಿದೊಮ್ಮೆ ಬಂದಿರಲು ಕುಲಗೆಡಲು ಮುಡಿಪಾಗಿ। ಅರಸ ಮಾಡಿಸುವೆ ಡಿಳ್ಳಿಗೆ ॥೨೨೪॥

ಕೈಸೆರೆಯ ಪಿಡಿತರದೆ ಕೊಂದರೆ ಪಾಪಿಗಳು। ಹಿಂದಣ ಹಗೆಯೆ ಮಹವಾಗಿ।
ಕಂದರ್ಪ ಬಾಣನ ಕಲೆ ಹೆಚ್ಚೆ ಬಿಬ್ಬಿಗೆ। ಮಂಡೆಯ ಬಿಗಿಯಪ್ಪುವಳು ॥೨೨೫॥

ಬಿಡು ಮಗಳೆ ಅಪಕೀರ್ತಿ ಮೂರು ಕಾಲ ಮಾನವರಲ್ಲಿ। ಕಡೆಗಂಡನುವಂತೆ ಎಡಲ।
ಒಡಗೊಂಡು ಬರುವಾಗ ನುಡಿಯೆ ಚರುಗೆ ರಾಯ। ತಲೆಯ ಅಗ್ನಿಯ ಕಾಣಿಸೆಂದ ॥೨೨೮॥

ದಿಲ್ಲಿಯಿಂದ ತಿರುಗಿ ಬಂದ ರುಂಡವನ್ನು ನೋಡಿ, ಕುಲಕೆಲ್ಲ ದೇವರಾಗು, ಬಂಜೆಯರಿಗೆ ಮಕ್ಕಳ ಕೃಪೆದೋರು ಎಂದು ತಾಯಿ ಹರಿಹರದೇವಿ ಹಾರೈಸುವುದು, ಬೇಡರು ಕುಮಾರರಾಮನ ಜಾತ್ರೆ ಜರುಗಿಸುವುದು, ಅವನು ದೇವರಾಗಿ ಮೆರೆದುದು.

ಹರಿಹರದೇವಿಯು ತರಳನ ಮುಖ ನೋಡಿ। [ಕು]ಲಕೆಲ್ಲ ದೇವರಾಗೆಂದು
ಕರ ಮುಗಿದು ದೊರೆಯು ಕಂಪಿಲ ಮಂತ್ರಿ ಧುರಧೀರ ರ .... ಯರರ ॥೨೫೩॥

ಹುಟ್ಟು ಬಂಜೆರಿಗೆಲ್ಲ ಮಕ್ಕಳಿತ್ತು ದೃಷ್ಟದೊಳಗೆ। ಪೂಜೆ ಕೊಳ್ಳೆ ಸತ್ಯದಿ।
ನಡದಾನೆ ಮಾತಾಡುತ್ತ ಹೆತ್ತ ಮಕ್ಕಳ ಹೆಸರು।......................... ॥೨೫೪॥

ನಾಡೊಳಗಿರುವಂಥ ಬೇಡರ ಕುಲ ಬಂದು। ....ರೆ ಜಾತ್ರೆ ನಡೆಸಿ।
ಬೇಡಿದ ವರಗಳನು ಕೊಡುವ ರಾಮನು। ತಾನು ಎನಿಸಿ ಮೆರೆವ ॥೨೫೫॥

ರಾಮಯ್ಯ ತಾ ದೇವರೆನ್ನಸಿಕೊಂಡು। ಪೂಜೆಗೊಳ್ಳುತ ನಿರುತದಿ।
ರಾಯ ಕಂಪಿಲ ತನ್ನ ಮೊಮ್ಮಗನ...........। ....ಳುವ ರಾಜ್ಯ ಸುಖದೊಳಗೆ॥೨೫೬॥

❖❖

ಮಹಾರಾಷ್ಟ್ರದ ಕನ್ನಡ ಶಾಸನಗಳು

ಎಂ. ಎಂ. ಕಲಬುರ್ಗಿ

ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ

ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕನ್ನಡ ಅಧ್ಯಯನ ವಿಭಾಗ

ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ

೧೯೮೭

*

ನನ್ನ ಮಾತು

"ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಅನುಭಾವವೆಲ್ಲಿಯದೋ" ಎಂದು ಪ್ರಭುದೇವರು ಹೇಳುತ್ತಾರೆ. ಹುಟ್ಟಿದ ನೆಲೆಯ ಅಂದರೆ ನೆಲದ ವ್ಯಾಮೋಹವುಳ್ಳವರಿಗೆ ನಿಜದ ನೆಲೆ ಕಾಣುವುದಿಲ್ಲವೆಂಬ ಎಚ್ಚರಿಕೆ ಇಲ್ಲಿದೆ. ಈ ಎಚ್ಚರಿಕೆಯನ್ನು ಆದರ್ಶವಾಗಿಟ್ಟುಕೊಂಡು, ಇಂದಿನ ಮಹಾರಾಷ್ಟ್ರದಲ್ಲಿ ಸಿಗುವ ಕನ್ನಡ ಶಾಸನಗಳು ಪ್ರತ್ಯಕ್ಷವಾಗಿ ಹೇಳುವ, ಸೂಚಿಸುವ ಸಂಗತಿಗಳನ್ನೂ ಅವುಗಳ ಹಿಂದೆ ಸ್ಪಂದಿಸುವ ಸತ್ಯಗಳನ್ನೂ ಇಲ್ಲಿ ಪ್ರತಿಪಾದಿಸಲಾಗಿದೆ.

ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ೧೯೮೭ ಫೆಬ್ರುವರಿ, ೭ ಮತ್ತು ೮ರಂದು ನೀಡಿದ ವಿಶೇಷೋಪನ್ಯಾಸಗಳ ಲಿಖಿತ ರೂಪ, ಈ ಪುಸ್ತಕ. ಕರ್ನಾಟಕದಲ್ಲಿ ಕನ್ನಡದ ಕೆಲಸ ಮಾಡುವುದಕ್ಕಿಂತ ಕರ್ನಾಟಕದ ಹೊರಗೆ, ಅದರಲ್ಲಿಯೂ ಭಾರತದ ಬಾಯಿಯಾಗಿರುವ ಮುಂಬಾಯಿಯಲ್ಲಿ ಕನ್ನಡದ ಕೆಲಸ ಮಾಡುವುದು ದೊಡ್ಡದು. ಈ ಅಂತರ್‌ರಾಷ್ಟ್ರೀಯ ಪಟ್ಟಣದ ಹೃದಯವೆನಿಸಿರುವ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಕನ್ನಡದ ಇಂಥ ಕೆಲಸಗಳಿಗೆ ಸೂಕ್ತ ವೇದಿಕೆ. 'ಕರ್ನಾಟಕ–ಮಹಾರಾಷ್ಟ್ರ ಸಾಹಚರ್ಯ' ಶೋಧದ ಮೂಲಕ ಉಭಯ ಪ್ರಾಂತಗಳ ಸಾಂಸ್ಕೃತಿಕ ರಾಯಭಾರಿಯಾಗುತ್ತಲಿರುವ ಈ ವಿಭಾಗದ ಅಂಗಳದಲ್ಲಿ ನಿಂತು ಉಪನ್ಯಾಸ ನೀಡಿದುದು, ನಿಜವಾದ ಕನ್ನಡ ಕೆಲಸವೆಂದು ನಾನು ಭಾವಿಸುತ್ತೇನೆ.

ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀನಿವಾಸ ಹಾವನೂರ ಅವರು ಈ ಉಪನ್ಯಾಸ ನೀಡಲು ನನ್ನನ್ನು ಆಮಂತ್ರಿಸಿ, ವಿದ್ವತ್‌ಸಭೆಯನ್ನು ಸಂಘಟಿಸಿದ ವಿಷಯ ಬಹುದಿನ ನನ್ನ ನೆನಪಿನಲ್ಲಿ ನಿಲ್ಲುವಂತಹದು. ವಿದ್ವತ್ತನ್ನು ಪ್ರೀತಿಸುವ, ಪ್ರೀತಿಗೆ ಇನ್ನೊಂದು ಹೆಸರಾಗಿರುವ ಡಾ. ಹಾವನೂರ ಅವರಿಗೆ, ಉಪನ್ಯಾಸದ ದಿನಗಳಲ್ಲಿ ಉದ್ದಕ್ಕೂ ನನಗೆ ನೆರವಾದ ಡಾ. ವಸಂತಕುಮಾರ ತಾಳ್ತಜೆ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಮಿತ್ರರಾದ ಡಾ. ಎಸ್. ಎಚ್. ರಿತ್ತಿ, ಶ್ರೀ. ಆನಂದ ಕುಂಬಾರ್ ಅವರು ಅಚ್ಚಿಗೆ ಅಣಿಗೊಳಿಸುವ "ಸೊಲ್ಲಾಪುರ ಜಿಲ್ಲೆಯ ಶಾಸನಗಳು" ಹಸ್ತಪ್ರತಿಯನ್ನು ಅವಲೋಕಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಮುಂಬೈಯಂಥ ಯಂತ್ರಜೀವನದ ಮಧ್ಯದಲ್ಲಿಯೂ ಬಿಡುವು ಮಾಡಿಕೊಂಡು ಬಂದು, ಆಸಕ್ತಿಯಿಂದ ಉಪನ್ಯಾಸಗಳನ್ನು ಆಲಿಸುವುದರ ಮೂಲಕ ಮುಂಬಯಿಯ ಸಹೃದಯರು ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಗದುಗಿನ ತ್ವರಿತ ಮುದ್ರಣಾಲಯದ ಶ್ರೀ. ಫ. ಶಿ. ಭಾಂಡಗೆ ಅವರು ಶ್ರದ್ಧೆಯಿಂದ ಇದನ್ನು ಮುದ್ರಿಸಿದ್ದಾರೆ. ಇವರೆಲ್ಲರಿಗೆ ಧನ್ಯವಾದಗಳು.

ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

–ಡಾ। ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕ

ದ್ವಿತೀಯ ಮುದ್ರಣ

'ಮಹಾರಾಷ್ಟ್ರದ ಕನ್ನಡ ಶಾಸನಗಳು' ಹೊರನಾಡಿನಲ್ಲಿ ಶಾಸನಗಳ ಮೂಲಕ ಕನ್ನಡ ಸಂಸ್ಕೃತಿ ಶೋಧಿಸಲು ನಡೆಸಿದ ಪ್ರಥಮ ಅಧ್ಯಯನವಾಗಿದೆ. ಈ ಹೊಸ ಬಗೆಯ ಪ್ರಯತ್ನಕ್ಕೆ ಆಕರ್ಷಿತರಾಗಿ ಒಬ್ಬರು ಇದೇ ಶೀರ್ಷಿಕೆ ಬಳಸಿ ಪಿಎಚ್.ಡಿ. ಅಧ್ಯಯನ ಕೈಕೊಂಡರು, ಇನ್ನೊಬ್ಬರು ಈ ಕೃತಿಯನ್ನು ಮರಾಠಿಗೆ ಅನುವಾದಿಸಿದರು. ಇಷ್ಟು ಮಹತ್ವದ ಈ ಕೃತಿಯ ದ್ವಿತೀಯ ಮುದ್ರಣದ ಬೇಡಿಕೆ ಬಹಳ ದಿನಗಳಿಂದಲೂ ಇತ್ತು. ಬೇರೆ ಬೇರೆ ಕೆಲಸಗಳಿಂದಾಗಿ ಈ ಕಡೆಗೆ ಗಮನಕೊಡುವುದು ನನಗೆ ಸಾಧ್ಯವಾಗಿರಲಿಲ್ಲ. ಈಗ ಈ ಕಾರ್ಯ ಕೈಗೆತ್ತಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಆತ್ಮೀಯರೂ ಆಗಿರುವ ಡಾ। ನಲ್ಲೂರ ಪ್ರಸಾದ ಅವರಿಗೆ ಕೃತಜ್ಞನಾಗಿದ್ದೇನೆ. ಮುದ್ರಣ ಕಾರ್ಯದಲ್ಲಿ ನೆರವಾದ ಡಾ। ಹನುಮಂತ ಮೇಲಿನಮನಿ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ.

ಧಾರವಾಡ

–ಡಾ। ಎಂ. ಎಂ. ಕಲಬುರ್ಗಿ

೨೦೧೨

❖❖

*

ಪರಿವಿಡಿ

೧. ಪೀಠಿಕೆ

ಮಹಾರಾಷ್ಟ್ರದ ಕನ್ನಡ ಶಾಸನಗಳ ಅಧ್ಯಯನ ವಿಪುಲ ಸಾಮಗ್ರಿ, ವಿಶೇಷ ಫಲಿತಾಂಶ– ಈ ದೃಷ್ಟಿಯಿಂದ ತುಂಬ ಮಹತ್ವಪೂರ್ಣ ವಿಷಯವೆನಿಸಿದೆ. ಇದೇ ರೀತಿ ಆಂಧ್ರಪ್ರದೇಶದ ಕನ್ನಡ ಶಾಸನಗಳು, ತಮಿಳುನಾಡಿನ ಕನ್ನಡ ಶಾಸನಗಳು, ಕೇರಳಪ್ರಾಂತದ ಕನ್ನಡ ಶಾಸನಗಳು ಎಂಬ ಅಧ್ಯಯನಗಳನ್ನು ಕೈಕೊಳ್ಳುವವರಿಗೆ ಕೈತುಂಬ ಸಾಮಗ್ರಿ ಸಿಗುತ್ತದೆ; ಮೌಲಿಕ ಫಲಿತಾಂಶಗಳು ಪ್ರಕಟವಾಗುತ್ತವೆ. ಇದಕ್ಕೆ ಪ್ರತಿಯಾಗಿ ಕರ್ನಾಟಕದಲ್ಲಿ ತೆಲುಗು ಶಾಸನಗಳು, ತಮಿಳು ಶಾಸನಗಳು, ಮಲಯಾಳಂ ಶಾಸನಗಳು ಎಂಬ ವಿಷಯವನ್ನು ಕುರಿತ ಅಧ್ಯಯನ ನಿರಾಶೆಯನ್ನುಂಟು ಮಾಡುತ್ತದೆ; "ಕರ್ನಾಟಕದ ಮರಾಠಿ ಶಾಸನಗಳು" ಇನ್ನೂ ನಿರಾಶೆಯನ್ನು ಹುಟ್ಟಿಸುತ್ತದೆ. ಆದರೆ "ಮಹಾರಾಷ್ಟ್ರದ ಕನ್ನಡ ಶಾಸನಗಳು" ಎಂಬುದು ಮಾತ್ರ ಮಹಾರಾಷ್ಟ್ರದಲ್ಲಿರುವ ಇತರ ಭಾಷೆಗಳ ಶಾಸನಾಧ್ಯಯನಕ್ಕಿಂತ ಪ್ರಾಚೀನ ಇತಿಹಾಸ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಯೂ, ವರ್ತಮಾನ ಸಮಸ್ಯೆ ದೃಷ್ಟಿಯಿಂದ ಹೆಚ್ಚು ಕುತೂಹಲಕಾರಿಯೂ ಆಗಿದೆ.

ಚರಿತ್ರೆಯನ್ನು ಬರೆಯುವಲ್ಲಿ ಹಸ್ತಪ್ರತಿಗಳಂಥ ಚರ ದಾಖಲೆಗಳು, ಶಾಸನಗಳಂಥ ಸ್ಥಿರ ದಾಖಲೆಗಳು ತುಂಬ ನೆರವನ್ನು ನೀಡುತ್ತವೆ. ಇವುಗಳಲ್ಲಿ ಕನ್ನಡ ಭಾಷೆಯಲ್ಲಿ ಬರೆದ ಚರ ದಾಖಲೆ ಅಂದರೆ ಹಸ್ತಪ್ರತಿಗಳ ಬಗ್ಗೆ ಹೇಳುವುದಾದರೆ ಇಂದಿನ ಕರ್ನಾಟಕಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಉಸ್ಮಾನಾಬಾದ, ಸೊಲ್ಲಾಪುರ ಜಿಲ್ಲೆಗಳಲ್ಲಿ ಲಿಂಗಾಯತರ ಹಸ್ತಪ್ರತಿಗಳೂ ಸಾಂಗಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿ ಜೈನರ ಹಸ್ತಪ್ರತಿಗಳೂ ವಿಪುಲಸಂಖ್ಯೆಯಲ್ಲಿ ಸಿಗುತ್ತವೆ. ಇವು ಕರ್ನಾಟಕದಲ್ಲಿ ಬರೆಯಿಸಿಕೊಂಡು ಅಭ್ಯಾಸಕ್ಕೆಂದು ಮಹಾರಾಷ್ಟ್ರಕ್ಕೆ ಒಯ್ದ ಕೃತಿಗಳಾಗಿರದೆ, ಸ್ಥಳೀಯವಾಗಿ ಅಲ್ಲಿಯೇ ಬರೆದವುಗಳಾಗಿವೆ. ಇದರಿಂದ ತಲೆತಲಾಂತರ ಮುಂದುವರಿಯುವ ವೃತ್ತಿಗಳಾದ ಕೃಷಿ ವಾಣಿಜ್ಯಗಳನ್ನವಲಂಬಿಸಿ, ಅಲ್ಲಿ ಮೊದಲಿನಿಂದಲೂ ಜೈನ ಕನ್ನಡಿಗರು, ಲಿಂಗಾಯತ ಕನ್ನಡಿಗರು ವಿಪುಲಸಂಖ್ಯೆಯಲ್ಲಿ ಸ್ಥಿರವಾಗಿ ವಾಸಿಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ.

ಇವುಗಳಿಗಿಂತ ಮಹತ್ವದವು ಸ್ಥಿರದಾಖಲೆಗಳಾದ ಶಾಸನಗಳು. ಇವು ಮಹಾರಾಷ್ಟ್ರದಲ್ಲಿ ಗಣ್ಯಪ್ರಮಾಣದಲ್ಲಿ ಸಿಗುತ್ತವೆ. ಮೇಲೆ ಹೇಳಿದ ಹಸ್ತಪ್ರತಿಗಳು ಒಂದು ವಿಶಿಷ್ಟ ಮತದವರು ನೆಲೆ ನಿಂತುದಕ್ಕೆ ಸಾಕ್ಷಿ ನುಡಿದರೆ, ಈ ಶಾಸನಗಳು ಅಲ್ಲಿ ಆಳಿದ ಅರಸರು ಯಾರು? ಬಾಳಿದ ಸಾಮಾಜಿಕರು ಯಾರು? ಅವರ ಬದುಕಿನ ಸ್ವರೂಪವೇನು? ಎಂಬ ವಿವರಗಳನ್ನು ಸಾರಿ ಹೇಳುತ್ತವೆ. ಆದುದರಿಂದ ಇವುಗಳ ಅಧ್ಯಯನ ಪ್ರಾದೇಶಿಕ ಇತಿಹಾಸವನ್ನು ಬರೆಯುವವರಿಗೆ ನೆರವಾಗಿ ನಿಂತು, ವರವಾಗಿ ಪರಿಣಮಿಸುತ್ತದೆ. ಆದುದರಿಂದ ಪ್ರಾಚೀನ ಮಹಾರಾಷ್ಟ್ರದ ಪ್ರಜಾಜೀವನಕ್ಕೆ ಸಂಬಂಧಿಸಿ ಎಲ್ಲ ಮಗ್ಗಲುಗಳನ್ನು ಸ್ಪಷ್ಟ ಪಡಿಸಿಕೊಳ್ಳುವುದಕ್ಕಾಗಿ, ಅಲ್ಲಿಯ ಕನ್ನಡ ಶಾಸನಗಳನ್ನು ಅಣು ಅಣುವಾಗಿ ಇಲ್ಲಿ ಅಭ್ಯಾಸಕ್ಕೆ ಅಳವಡಿಸಿಕೊಳ್ಳಲಾಗಿದೆ.

೨. ಅಧ್ಯಯನದ ಆತಂಕಗಳು

ಶಾಸನಗಳ ಅಧ್ಯಯನ ಅನೇಕ ದೃಷ್ಟಿಗಳಿಂದ ಶ್ರಮದಾಯಕವಾಗಿದ್ದು, ಮಹಾರಾಷ್ಟ್ರದ ಕನ್ನಡ ಶಾಸನಗಳನ್ನು ಅಭ್ಯಾಸ ಮಾಡುವಾಗ ಈ ಕೆಳಗಿನ ಆತಂಕಗಳು ಎದುರಾಗುತ್ತವೆ:

೧. ಮಹಾರಾಷ್ಟ್ರದ ಎಲ್ಲ ಶಾಸನಗಳು ವ್ಯವಸ್ಥಿತವಾಗಿ ಇನ್ನೂ ಶೋಧವಾಗಿಲ್ಲ. ೨.ಶೋಧಿಸಲ್ಪಟ್ಟವುಗಳಲ್ಲಿ ಕೆಲವು ಪ್ರಕಟವಾಗಿದ್ದು, ಅವು ಶಾಸನ ಸಂಪುಟಗಳಲ್ಲಿ, ವೈಯಕ್ತಿಕ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ ಹಂಚಿಹೋಗಿವೆ. ಒಮ್ಮೊಮ್ಮೆ ಒಂದು ಶಾಸನ ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ಪ್ರಕಟವಾಗಿದ್ದು, ಈ ಪುನರುಕ್ತಿ ಅಭ್ಯಾಸಿಗೆ ಸಂದೇಹ ಹುಟ್ಟಿಸುತ್ತದೆ. ೩. ಶೋಧಿಸಲ್ಪಟ್ಟವುಗಳಲ್ಲಿ ಕೆಲವುಗಳ ಸಾರಾಂಶ ಮಾತ್ರ ಎ. ಆರ್. ಐ. ಇ ಮತ್ತು ಎ. ಆರ್. ಎಸ್. ಆಯ್. ಇ. ವರದಿಗಳಲ್ಲಿ, ಕೆ. ಆರ್. ಐ. ರಿಪೋರ್ಟ್ ಮೊದಲಾದವುಗಳಲ್ಲಿ ಕಾಣಿಸಿಕೊಂಡಿದೆ. ಕೆಲವೊಮ್ಮೆ ಇಲ್ಲಿಯೂ ಪುನರುಕ್ತಿ ತಲೆ ಹಾಕಿದೆ. ೪. ಕೆಲವು ವಿದ್ವಾಂಸರು ತಾವು ಪ್ರಕಟಿಸಿದ ಇಲ್ಲವೆ ವರದಿ ಮಾಡಿದ ಶಾಸನಗಳ ಪೂರ್ಣ ಮಾಹಿತಿ ಒದಗಿಸದೆ ಹೋಗಿದ್ದಾರೆ. ಹೀಗಾಗಿ ಇವು ತಾಮ್ರ ಶಾಸನಗಳೇ? ಶಿಲಾಶಾಸನಗಳೇ? ಭಾಷೆ ಯಾವುದು? ಇತ್ಯಾದಿ ವಿವರಗಳು ಸಿಗುವುದಿಲ್ಲ. ೫. ಕೆಲವರು ಶಾಸನಗಳನ್ನು ತಪ್ಪಾಗಿ ಓದಿ, ತಪ್ಪು ವ್ಯಾಖ್ಯಾನ ಮಾಡಿರುವುದರಿಂದ ಅವು ಓದುಗರನ್ನು ಅಡ್ಡದಾರಿಗೆಳೆಯುತ್ತವೆ. ಸಗ್ರೋಳಿ ಶಾಸನದಲ್ಲಿ ಬರುವ ದೇವರ ಹೆಸರು ಡಾ. ರಿತ್ತಿಯವರ ಪ್ರಕಾರ ಸರ್ವೇಶ್ವರ. ಎ. ಆರ್. ಐ. ಇ. ಪ್ರಕಾರ ಶಂಬೇಶ್ವರ. ಶ್ರೀ. ಜಿ. ಎಚ್. ಖರೇ ಅವರು ಪೇಶ್ವೆದಫ್ತರ ತಾಮ್ರಪಟದಲ್ಲಿ ಬರುವ 'ಕಂನಡ ನಾಲ್ಸಾಯಿರ' ಎಂಬುದನ್ನು ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಕಂದಗಲ್ಲು ಗ್ರಾಮವೆಂದು ವ್ಯಾಖ್ಯಾನಿಸಿದ್ದಾರೆ. ಆದರೆ ಇದು 'ಕರಹಾಡ ನಾಲ್ಕು ಸಾವಿರ' ಹೆಸರಿನ ಪ್ರಾಂತವಾಗಿದೆ. ಇಂಥ ವಾಚನ, ಇಂಥ ವ್ಯಾಖ್ಯಾನಗಳು ಮುಂದಿನವರಿಗೆ ದಾರಿ ತಪ್ಪಿಸುತ್ತವೆ. ೬. ವರದಿಗಳಲ್ಲಿ ಕೇವಲ ಮುಖ್ಯ ಘಟನೆಯ ಸಾರಾಂಶವಿರುವುದರಿಂದ ಶಾಸನಗಳಲ್ಲಿ ಸೂಚಿತವಾಗಿರುವ ಸ್ಥಳೀಯ ಸಾಮಾಜಿಕ ವಿವರಗಳು ಅಭ್ಯಾಸಕ್ಕೆ ಲಭ್ಯವಾಗದೆ ಹೋಗುತ್ತದೆ. ೭. ಕೆಲವು ತಾಮ್ರ ಶಾಸನಗಳು ಮಹಾರಾಷ್ಟ್ರದಲ್ಲಿ ಲಭ್ಯವಾಗಿದ್ದರೂ ಮೂಲತಃ ಅವು ಹುಟ್ಟಿದುದು ಕನಾಟಕದಲ್ಲಿ. ಪ್ರಿನ್ಸ್ ಆಫ್ ವೇಲ್ಸ್ ಮ್ಯುಜಿಯಮ್‌ದಂಥ ಸಂಸ್ಥೆಗಳಲ್ಲಿದ್ದರೂ ಮೂಲತಃ ಅವು ಕರ್ನಾಟಕಕ್ಕೆ ಸಂಬಂಧಿಸಿದುವು. ಇವುಗಳನ್ನು ಮಹಾರಾಷ್ಟ್ರದ ಶಾಸನಗಳೆಂದು ಭಾವಿಸುವುದು ತಪ್ಪಾಗುತ್ತದೆ. ಉದಾ. ಹುಬ್ಬಳ್ಳಿ ಹತ್ತಿರದ ಅದಿರಗುಂಚಿ ಗ್ರಾಮದ ಒಂದು ಶಿಲಾಶಾಸನ ಈಗ ಪ್ರಿನ್ಸ್ ಆಫ್ ವೇಲ್ಸ್ ಮ್ಯುಜಿಯಮ್‌ದಲ್ಲಿದೆ. ೮. ಒಂದು ಊರಿನ ಬೇರೆ ಬೇರೆ ಸ್ಥಳಗಳಲ್ಲಿಯ ಇಲ್ಲವೆ ಒಂದು ತಾಲೂಕಿನ ಬೇರೆ ಬೇರೆ ಊರುಗಳಲ್ಲಿಯ ಶಾಸನಗಳನ್ನು ತಂದು ಒಂದೇ ಕಡೆಗೆ ಸಂಗ್ರಹಿಸಿರುವುದು, ಶಾಸನೋಕ್ತ ಸ್ಥಳವಿಶೇಷಗಳನ್ನು ಗುರುತಿಸಲು ವ್ಯತ್ಯಯವನ್ನುಂಟು ಮಾಡುತ್ತದೆ. ಉದಾ: ಮಂಗಳವೇಡೆಯ ತಹಶೀಲದಾರ ಕಚೇರಿ ಮತ್ತು ಅಕ್ಕಲಕೋಟ ಹಳೆಯ ಅರಮನೆ ಆವರಣದಲ್ಲಿ ಸಂಗ್ರಹಿಸಿರುವ ಶಾಸನಗಳು. ಈ ಎಲ್ಲ ಸಂಗತಿಗಳು ಅಧ್ಯಯನ ಪ್ರಸಂಗದಲ್ಲಿ ವಿಶಿಷ್ಟ ಆತಂಕಗಳನ್ನೊಡ್ಡುತ್ತವೆ.

ಎರಡನೆಯದಾಗಿ, ಈಗಾಗಲೇ ಪ್ರಕಟವಾದ ಎಲ್ಲ ಶಾಸನ ಸಂಪುಟಗಳು, ವರದಿಗಳು, ಪತ್ರಿಕೆಗಳು ಅಭ್ಯಾಸಕ್ಕೆ ಒಂದೇ ಕಡೆಗೆ ಸಿಗುವುದಿಲ್ಲ. ಅದರಲ್ಲಿಯೂ ಕರ್ನಾಟಕದಲ್ಲಿ ಕುಳಿತು ಮಹಾರಾಷ್ಟ್ರದ ಪ್ರಕಟಣೆಗಳನ್ನು ಅಭ್ಯಾಸಕ್ಕಾಗಿ ಸಂಗ್ರಹಿಸುವುದು ಇನ್ನೂ ಕಷ್ಟಕರವಾದುದು.

ಕೊನೆಯದಾಗಿ, ಇನ್ನು ಒಂದು ತೊಂದರೆಯೆಂದರೆ ಮಹಾರಾಷ್ಟ್ರ ರಾಜ್ಯದ ಮತ್ತು ಅದರ ಜಿಲ್ಲೆಗಳ ಗಡಿರೇಖೆ. ಭಾಷಾವಾರು ಪ್ರಾಂತರಚನೆಯ ಕಾಲಕ್ಕೆ ಭಾರತದ ಎಲ್ಲ ಪ್ರಾಂತಗಳಂತೆ ೧೯೫೬ರಲ್ಲಿ ಮಹಾರಾಷ್ಟ್ರಕ್ಕೆ ಹೊಸ ಗಡಿರೇಖೆಯನ್ನು ಬರೆಯಲಾಗಿದೆ. ಆದರೆ ಇದಕ್ಕೂ ಮೊದಲು ಶಾಸನ ಪರಿವೀಕ್ಷಣೆ ಮಾಡಿದವರು 'ಮಹಾರಾಷ್ಟ್ರ'ವೆಂದು ನಮೂದಿಸಿರುವುದನ್ನು ಈಗ ಸ್ವೀಕರಿಸಲು ಬರುವುದಿಲ್ಲ. ಉದಾ: ಇಂದು ವಿಜಾಪುರ ಜಿಲ್ಲೆಯಲ್ಲಿರುವ ತೇರದಾಳವನ್ನು ಕನ್ನಡ ಸಂಶೋಧನ ಸಂಸ್ಥೆಯ ವರದಿಯಲ್ಲಿ 'ಸಾಂಗಲಿ ಜಿಲ್ಲೆ' ಎಂದು ತೋರಿಸಲಾಗಿದೆ. ಎರಡನೆಯದಾಗಿ ಮಹಾರಾಷ್ಟ್ರ ಸರಕಾರ ತೀರ ಇತ್ತೀಚೆ ಜಿಲ್ಲೆ ಮತ್ತು ತಾಲೂಕುಗಳನ್ನು ಪುನರ್ ವರ್ಗೀಕರಣ ಮಾಡಿದೆ. ಹೀಗಾಗಿ ಈಗಾಗಲೇ ಪ್ರಕಟವಾಗಿರುವ ಒಂದು ಗ್ರಾಮದ ಶಾಸನ ಯಾವ ಜಿಲ್ಲೆಯದು? ಯಾವ ತಾಲೂಕಿನದು? ಎಂಬ ಗೊಂದಲವುಂಟಾಗುತ್ತದೆ. ಇದು ಕೇವಲ ಪುಸ್ತಕ, ನಕಾಶಗಳಿಂದಲೂ ವಿದ್ವಾಂಸರೊಂದಿಗಿನ ಪತ್ರವ್ಯವಹಾರದಿಂದಲೂ ಬಗೆಹರಿಯುವ ವಿಷಯವಲ್ಲ. ಸಮಗ್ರ ಮಹಾರಾಷ್ಟ್ರ ಪ್ರಾಂತದ ನೇರ ಭೌಗೋಲಿಕ ಪರಿಚಯ ಇದಕ್ಕೆ ಬೇಕಾಗುತ್ತದೆ. ಇಲ್ಲದಿದ್ದರೆ ಅನೇಕ ಪ್ರಮಾದಗಳು ಘಟಿಸುತ್ತವೆ. ಶಾಂತಾರಾಮ ದೇವ ಅವರು ೧೯೮೪ರಲ್ಲಿ ಪ್ರಕಟಿಸಿದ ತಮ್ಮ "ಮಹಾರಾಷ್ಟ್ರ ವ ಗೋವೆ ಶಿಲಾಲೇಖ- ತಾಮ್ರಪಟಾಂಚೀ ವರ್ಣನಾತ್ಮಕ ಸಂದರ್ಭ ಸೂಚೀ"ಯಲ್ಲಿ ಗೊಡಚಿ, ರಾಯಬಾಗ, ಜುಗಲ ಮತ್ತು ತೊರಗಲ್ಲಗಳನ್ನು ಇಂದಿನ ಮಹಾರಾಷ್ಟ್ರದ ಗ್ರಾಮಗಳೆಂದು ಭಾವಿಸಿರುವುದು ಇಂಥ ಪ್ರಮಾದಕ್ಕೆ ನಿದರ್ಶನವೆನಿಸಿದೆ.

ಈ ಎಲ್ಲ ಆತಂಕಗಳನ್ನು ನಿವಾರಿಸಿಕೊಂಡರೆ ಮಾತ್ರ 'ಮಹಾರಾಷ್ಟ್ರದ ಕನ್ನಡ ಶಾಸನಗಳು' ಎಂಬ ವಿಷಯಕ್ಕೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ. ಈ ತೊಂದರೆಗಳ ಸ್ಪಷ್ಟ ಹಿನ್ನೆಲೆಯಲ್ಲಿ ೧೯೫೬ರ ಮಹಾರಾಷ್ಟ್ರದ ನಕ್ಷೆಯನ್ನು ಇಲ್ಲಿ ಪ್ರಮಾಣವಾಗಿ ಇಟ್ಟುಕೊಳ್ಳಲಾಗಿದೆ.

೩. ಅಧ್ಯಯನ ಮಿತಿ-ವ್ಯಾಪ್ತಿ

ಈ ಉಪನ್ಯಾಸದ ಶೀರ್ಷಿಕೆ "ಮಹಾರಾಷ್ಟ್ರದ ಶಾಸನಗಳು" ಅಲ್ಲ; 'ಮಹಾರಾಷ್ಟ್ರದ ಕನ್ನಡ ಶಾಸನಗಳು.' ಇದರಿಂದಾಗಿ ಮಹಾರಾಷ್ಟ್ರದಲ್ಲಿಯ ಇತರ ಭಾಷೆಯ ಶಾಸನಗಳು ಹೊರಗುಳಿದು ಸಮಗ್ರ ಮಹಾರಾಷ್ಟ್ರದ ಅಭ್ಯಾಸಕ್ಕೂ, ಮಹಾರಾಷ್ಟ್ರದಲ್ಲಿ ಲೀನವಾಗಿರುವ ಪ್ರಾಚೀನ ಕರ್ನಾಟಕದ ತಿಳಿವಳಿಕೆಗೂ ಒಂದು ಮಿತಿ ಪ್ರಾಪ್ತವಾಗುತ್ತದೆ. ಅಂದರೆ ಇಂದಿನ ಮಹಾರಾಷ್ಟ್ರದಲ್ಲಿ ಸಿಗುವ ಕನ್ನಡ ಶಾಸನಗಳಿಂದ ಹೊರಡುವ ಧ್ವನಿಗಳ ಸಂಗ್ರಹಕ್ಕೆ ಮಾತ್ರ ಈ ಅಧ್ಯಯನ ಸೀಮಿತಗೊಳ್ಳುತ್ತದೆ. ಹೀಗೆ ಈ ಅಭ್ಯಾಸಕ್ಕೆ ಒಂದು ಮಿತಿಯಿದ್ದರೂ ಮಹಾರಾಷ್ಟ್ರದಲ್ಲಿ ಸಿಗುವ ಕನ್ನಡ ಶಾಸನಗಳದು ಒಂದು ಪಿಎಚ್.ಡಿ. ಪ್ರಬಂಧದ ವಿಷಯವೆಂದೂ, ಅದರ ಫಲಿತಾಂಶ ಗಣ್ಯ, ಗಮನಾರ್ಹವೆಂದೂ ಹೇಳಬಹುದು. ಕಳೆದ ೧೦೦ ವರ್ಷಗಳಿಂದ ಕನ್ನಡ ನಾಡಿದ ಇತಿಹಾಸದ ಅಧ್ಯಾಪಕರು ಶಾಸನಗಳನ್ನು ವಿಶೇಷವಾಗಿ ರಾಜಕೀಯ ಇತಿಹಾಸದ ಪುನರ್ರಚನೆಗೋಸುಗ ಬಳಸುತ್ತ ಬಂದಿದ್ದಾರೆ. ಇತ್ತೀಚೆ ಕರ್ನಾಟಕದಲ್ಲಿ ಕನ್ನಡ ಅಧ್ಯಾಪಕರು ಜಾನಪದಕ್ಷೇತ್ರವನ್ನು ಪ್ರವೇಶಿಸಿದಂತೆ ಶಾಸನಕ್ಷೇತ್ರವನ್ನೂ ಭರದಿಂದ ಪ್ರವೇಶಿಸಿ, ಕಳೆದು ಹೋದ ಪ್ರಾಚೀನ ಜನಜೀವನದ ಸಮಸ್ತ ಮುಖಗಳ ಚರಿತ್ರೆಯ ಪುನರ್‌ರಚನೆಗಾಗಿ ಅವುಗಳನ್ನು ಬಳಸಿಕೊಳ್ಳುತ್ತಲಿದ್ದಾರೆ. ಇಂಥ ಬಹುಮುಖಿ ಅಧ್ಯಯನವನ್ನು ಇಲ್ಲಿ ಕೈಕೊಳ್ಳಲಾಗಿದೆ.

೪. ಅಧ್ಯಯನದ ಆಕರಗಳು

ಮೇಲೆ ವಿವರಿಸಿದ ಪ್ರತಿಕೂಲ ಪರಿಸ್ಥಿತಿ, ವಿಷಯದ ಪರಿಮಿತಿಗಳ ಮಧ್ಯದಲ್ಲಿಯೂ ಈ ಅಧ್ಯಯನಕ್ಕೆ ಸಂಬಂಧಪಟ್ಟ ಆಕರಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಈವರೆಗೆ ವಿದ್ವಾಂಸರ ಪ್ರಯತ್ನದಿಂದ ಪ್ರಕಟವಾಗಿರುವ ಆಕರಗಳನ್ನು ಶಾಸನ ಸಂಪುಟಗಳು, ವರದಿಗಳು, ಪತ್ರಿಕೆಗಳು ಎಂದು ವರ್ಗೀಕರಿಸಿ ಹೀಗೆ ವಿವರಿಸಬಹುದು.

೧. Inscriptions in northern Karnatak and Kolhapur State ಪ್ರೊ. ಕೆ. ಜಿ. ಕುಂದಣಗಾರ. ಮಹಾರಾಷ್ಟ್ರದ ೧೭ ಕನ್ನಡ ಶಾಸನಗಳು ಇದರಲ್ಲಿದೆ.

೨. ಶಿಲಾಹಾರ ರಾಜವಂಶೀಚಾ ಇತಿಹಾಸ ಅಣೀ ಕೋರೀವ ಲೇಖ – ಡಾ. ವಿ. ವಿ. ಮಿರಾಸಿ. ಮಹಾರಾಷ್ಟ್ರದ ೮ ಕನ್ನಡ ಶಾಸನಗಳು ಇದರಲ್ಲಿವೆ.

3. Inscriptions from Nanded district – ಡಾ. ಎಸ್. ಎಚ್. ರಿತ್ತಿ ಮತ್ತು ಡಾ. ಜಿ. ಸಿ. ಶೇಳಕೆ. ಮಹಾರಾಷ್ಟ್ರದ ೩೭ ಕನ್ನಡ ಶಾಸನಗಳು ಇದರಲ್ಲಿವೆ.

4. Inscriptions from Sholapur district- ಡಾ. ಎಸ್. ಎಚ್. ರಿತ್ತಿ ಮತ್ತು ಶ್ರೀ ಆನಂದ ಕುಂಭಾರೆ (ಅಪ್ರಕಟಿತ). ಮಹಾರಾಷ್ಟ್ರದ ೩೮ ಕನ್ನಡ ಶಾಸನಗಳು ಇದರಲ್ಲಿವೆ.

5. A history of Marathawada region – ಡಾ. ಜಿ. ಸಿ. ಶೇಳಕೆ (ಪಿಎಚ್.ಡಿ. ಪ್ರಬಂಧ ಅಪ್ರಕಟಿತ). ಮಹಾರಾಷ್ಟ್ರದ ೧೯ ಕನ್ನಡ ಶಾಸನಗಳು ಇದರಲ್ಲಿದೆ.

6. Karnatak inscriptions Vol. II – ಆರ್. ಎಸ್. ಪಂಚಮುಖಿ

7. Karnatak inscriptions Vol. V– ಬಿ. ಆರ್. ಗೋಪಾಲ

೮. ಸಂಶೋಧನ ಮುಕ್ತಾವಲಿ–ಡಾ. ವಿ. ವಿ. ಮಿರಾಸಿ (ವಿದರ್ಭ ಸಂಶೋಧನ ಮಂಡಲ, ನಾಗಪುರ)

೯. ದಕ್ಷಿಣಾಚ್ಯಾ ಮಧ್ಯಯುಗೀನ ಇತಿಹಾಸಾಚೀ ಸಾಧನ–(ಭಾರತ ಇತಿಹಾಸ ಸಂಶೋಧನ ಮಂಡಳ, ಪುಣೆ)

೧೦. ಕೊಲ್ಹಾಪೂರ–ಗ್ರಹಾಮ್

೧೧. ಇಂಡೆಕ್ಸ್ ಆಫ್ ಸೌಥ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್–ಕೀಲಹಾರ್ನ

೧೨. ಮಹಾರಾಷ್ಟ್ರ ವ ಗೋವೆ ಶಿಲಾಲೇಖ–ತಾಮ್ರಪಟಾಂಚೀ ವರ್ಣನಾತ್ಮಕ ಸಂದರ್ಭಸೂಚಿ : ಶಾಂತಾರಾಮ್, ಭಾಲಚಂದ್ರ ದೇವ.

ಈ ಗ್ರಂಥಗಳನ್ನು ಬಿಟ್ಟರೆ ARSIE, ARIE ವರದಿಗಳಲ್ಲಿ, ಧಾರವಾಡದ ಕನ್ನಡ ಅಧ್ಯಯನ ಸಂಸ್ಥೆಯ The descriptive list of stone and copper plate inscriptions (1940-41 to 1942-43), summaries of inscriptions (1943-44 to 1945-50 ಹೆಸರಿನ ಎರಡು ವರದಿಗಳಲ್ಲಿ, ಹಾಗೂ MARದಲ್ಲಿ ಕೆಲವು ಶಾಸನಗಳ ಸಾರ ಪ್ರಕಟವಾಗಿದೆ.

ಪತ್ರಿಕೆಗಳಿಗೆ ಬಂದರೆ ಇಂಡಿಯನ್ ಎಂಟಿಕ್ವರಿ, ಎಪಿಗ್ರಫಿಯ ಇಂಡಿಕಾ, ಜರ್ನಲ್ ಆಫ್ ಮುಂಬೈ ಯುನಿವರ್ಸಿಟಿ, ಇಂಡಿಯನ್ ಆರ್ಕಿಯಾಲಾಜಿ ಎ ರಿವ್ಯೂ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಕರ್ನಾಟಕ ಭಾರತಿ–ಇವುಗಳಲ್ಲಿ ಡಾ. ಬಾರ್ನೆಟ್, ಡಾ. ಫ್ಲೀಟ್, ಡಾ. ಆರ್. ಎನ್. ಗುರವ, ಡಾ. ಮಾಧವ ಕಟ್ಟಿ ಕೆಲವು ಶಾಸನಗಳನ್ನು ಪ್ರಕಟಿಸಿದ್ದಾರೆ. ಮಹಾರಾಷ್ಟ್ರದಿಂದ ಪ್ರಕಟವಾಗುವ ಭಾರತ ಇತಿಹಾಸ ಸಂಶೋಧನ ಮಂಡಳ ತ್ರೈಮಾಸಿಕ, ಭಾರತ ಇತಿಹಾಸ ಆಣಿ ಸಂಸ್ಕೃತಿ (ತ್ರೈಮಾಸಿಕ)–ಈ ಪತ್ರಿಕೆಗಳಲ್ಲಿಯೂ ಕೆಲವು ಶಾಸನಗಳು ಬೆಳಕು ಕಂಡಿವೆ. ಈ ಎಲ್ಲ ಆಕರಗಳಿಂದ ಸಂಗ್ರಹಿಸಿದ ಮಹಾರಾಷ್ಟ್ರದ ಸುಮಾರು ೨೭೦ ಕನ್ನಡ ಶಾಸನಗಳ ಅಧ್ಯಯನದ ಫಲ ಶ್ರುತಿ ಈ ಉಪನ್ಯಾಸವಾಗಿದೆ.

೫. ಕರ್ನಾಟಕ–ಮಹಾರಾಷ್ಟ್ರ ಶಾಸನಗಳು

ಇಂದು ಮಹಾರಾಷ್ಟ್ರದ ವ್ಯಾಪ್ತಿ ಕರ್ನಾಟಕಕ್ಕಿಂತ ಬಹಳ ದೊಡ್ಡದು; ಆದರೆ ಅದರ ಶಾಸನಸಂಖ್ಯೆ ಕರ್ನಾಟಕಕ್ಕಿಂತ ಬಹಳ ಸಣ್ಣದು. ಕ್ರಿ. ಶ. ೧೯೭೦ರ ವರೆಗೆ ಶೋಧವಾಗಿರುವ ಶಾಸನಗಳನ್ನು ಗಮನಿಸಿ ಶ್ರೀ ಶಾಂತಾರಾಮ್ ದೇವ ಅವರು ಪ್ರಕಟಿಸಿದ (೧೯೮೪) 'ಮಹಾರಾಷ್ಟ್ರ ಗೋವ ಶಿಲಾಲೇಖ ತಾಮ್ರ ಪಟಾಂಚೀ ವರ್ಣನಾತ್ಮಕ ಸಂದರ್ಭಸೂಚೀ', ಹೆಸರಿನ ಗ್ರಂಥದ ಪ್ರಕಾರ ಗೋವೆ ಸಹಿತ ಮಹಾರಾಷ್ಟ್ರದ ಒಟ್ಟು ಶಾಸನ ಸಂಖ್ಯೆ ೭೨೧. ಇದರಲ್ಲಿಯ ಗೋವೆಯ ಶಾಸನಗಳನ್ನೂ, ಕಣ್ತಪ್ಪಿ ಸೇರಿಕೊಂಡಿರುವ ಇಂದಿನ ಕರ್ನಾಟಕದ ಶಾಸನಗಳನ್ನೂ ಕಳೆದರೆ ಈ ಸಂಖ್ಯೆ ೭೦೦ ಕ್ಕೆ ಇಳಿಯುತ್ತದೆ. ನಾನು ಅನೇಕ ಆಕರಗಳಿಂದ ಸಂಗ್ರಹಿಸಿದ ೨೨೦ ಕನ್ನಡ ಶಾಸನಗಳನ್ನು ಕೂಡಿಸಿದರೆ ಈ ಸಂಖ್ಯೆ ೯೨೦ಕ್ಕೆ ಏರುತ್ತದೆ. ಭವಿಷತ್ತಿನಲ್ಲಿ ಇನ್ನಷ್ಟು ಸಿಗುವದೆಂದಿಟ್ಟುಕೊಂಡರೂ ಈ ಸಂಖ್ಯೆ ೧೦೦೦ನ್ನು ಮುಟ್ಟಬಹುದು. ಇದು ಮಹಾರಾಷ್ಟ್ರದ ಒಟ್ಟು ಶಾಸನಸಂಪತ್ತು.

ಶ್ರೀ. ಎಸ್. ಜಿ. ತುಳಪುಳೆ ಅವರ 'ಪ್ರಾಚೀನ ಮರಾಠಿ ಕೋರೀವ ಲೇಖ' ಗ್ರಂಥದ ಪ್ರಕಾರ ಮಹಾರಾಷ್ಟ್ರ, ಕನಾಟಕ, ಗೋವೆ ರಾಜ್ಯಗಳು ಸೇರಿ ಲಭಿಸಿದ ಮರಾಠಿ ಹಾಗೂ ಅರೆಮರಾಠಿ ಶಾಸನಗಳ ಒಟ್ಟು ಸಂಖ್ಯೆ ೭೬. ಕಷ್ಟಪಟ್ಟು ಹುಡುಕಿದರೆ ಇನ್ನಷ್ಟು ಸಿಗುವದೆಂದಿಟ್ಟುಕೊಂಡರೂ ಈ ಸಂಖ್ಯೆ ೧೦೦ನ್ನು ಮಿಕ್ಕಲಾರದು.

ಹೀಗೆ ಮಹಾರಾಷ್ಟ್ರದಲ್ಲಿ ಒಟ್ಟು ಶಾಸನಗಳು ೧೦೦೦. ಅದರಲ್ಲಿ ೧೦೦ ಮರಾಠಿ ಶಾಸನಗಳಿದ್ದರೆ; ಕರ್ನಾಟಕದಲ್ಲಿ ಒಟ್ಟು ಶಾಸನಗಳು ೨೫,೦೦೦, ಅದರಲ್ಲಿ ಕನ್ನಡ ಶಾಸನಗಳು ೨೦೦೦೦. ಇದನ್ನು ನೋಡಿದರೆ ಇಂದಿನ ಕರ್ನಾಟಕಕ್ಕೆ ಭೂಗೋಳ ಸಣ್ಣದು, ಇತಿಹಾಸ ದೊಡ್ಡದು, ಇಂದಿನ ಮಹಾರಾಷ್ಟ್ರಕ್ಕೆ ಭೂಗೋಲ ದೊಡ್ಡದು, ಇತಿಹಾಸ ಸಣ್ಣದು ಎನಿಸುತ್ತದೆ. ಇನ್ನು ಮಹಾರಾಷ್ಟ್ರದಲ್ಲಿ ಸಿಗುವ ಕನ್ನಡ ಶಾಸನಗಳನ್ನು ನೋಡಬಹುದು. ಶ್ರೀದೇವ ಅವರು ತಮ್ಮ ಸೂಚಿಯಲ್ಲಿ ದಾಖಲಿಸಿದ ಮೇರೆಗೆ ಮಹಾರಾಷ್ಟ್ರದಲ್ಲಿರುವ ಕನ್ನಡ ಶಾಸನಗಳ ಸಂಖ್ಯೆ ೬೦. ಇದರಲ್ಲಿ ಕಣ್ತಪ್ಪಿ ಸೇರಿದ ಇಂದಿನ ಕರ್ನಾಟಕದ ಶಾಸನಗಳನ್ನು ಕಳೆದರೆ ಉಳಿಯುವ ಸಂಖ್ಯೆ ೫೦. ಆದರೆ ಅನೇಕ ಆಕರಗಳಿಂದ ನಾನು ಸಂಗ್ರಹಿಸಿದ ಕನ್ನಡ ಶಾಸನಗಳ ಸಂಖ್ಯೆ ಸುಮಾರು ೨೨೦. ಶೋಧಿಸಲ್ಪಟ್ಟು ಪ್ರಕಟವಾಗಿಯೂ ನನ್ನ ಕೈಗೆ ಸಿಗದಿದ್ದುವು ಬಹುಶಃ ೩೦. ಹೀಗಾಗಿ ಇಂದಿನ ಮಟ್ಟಿಗೆ ಮಹಾರಾಷ್ಟ್ರದಲ್ಲಿ

ಸಿಗುವ ಕನ್ನಡ ಶಾಸನಗಳ ಒಟ್ಟು ಸಂಖ್ಯೆ ೩೦೦ (=೫೦+೨೨೦+೩೦). ಇದನ್ನು ನೋಡಿದರೆ ಇಂದಿನ ಕರ್ನಾಟಕದಲ್ಲಿಯಂತೆ ಇಂದಿನ ಮಹಾರಾಷ್ಟ್ರದಲ್ಲಿಯೂ ಕನ್ನಡ ಶಾಸನಗಳೇ ಅಧಿಕ (೩೦೦). ಆಮೇಲೆ ಸಂಸ್ಕೃತ (೩೦೦),* ಬಳಿಕ ಪ್ರಾಕೃತ (೨೫೦), ಕೊನೆಗೆ ಮರಾಠಿ (೭೬) ಶಾಸನಗಳಿಗೆ ಈ ಸ್ಥಾನಸಲ್ಲುತ್ತದೆ. ಈ ಸಂಸ್ಕೃತ ಶಾಸನಗಳಲ್ಲಿ ಕೆಲವು ಮೂಲತಃ ಬೇರೆ ಪ್ರಾಂತಗಳಲ್ಲಿ ಹುಟ್ಟಿ ಇಲ್ಲಿ ಲಭಿಸಿದುವು, ಕೆಲವು ವಾಕ್ಯಮಟ್ಟಿನ ವ್ಯಾಪ್ತಿಯುಳ್ಳುವು. ಪ್ರಾಕೃತ ಶಾಸನಗಳಾದರೋ ಬಹಳಷ್ಟು ವಾಕ್ಯ, ಶಬ್ದಮಟ್ಟಿನ ವ್ಯಾಪ್ತಿಯುಳ್ಳುವು. ಮರಾಠಿ ಶಾಸನಗಳು ತೀರ ಚಿಕ್ಕವು. ಸತ್ವದಲ್ಲಿಯೂ ಪ್ರಾಕೃತ, ಮರಾಠಿ ಶಾಸನಗಳು ತೀರ ಸಾಧಾರಣ. ಹೀಗಾಗಿ ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳಿಗೇ ಸಾರ್ವಭೌಮ ಸ್ಥಾನ ಸಲ್ಲುತ್ತದೆ. ಮುಂದೆ ಹೊಸಹೊಸ ಶೋಧದಿಂದಾಗಿ ಮಹಾರಾಷ್ಟ್ರದ ಶಾಸನ ಸಂಖ್ಯೆಯಲ್ಲಿ ಏನೇ ವ್ಯತ್ಯಾಸವಾದರೂ ಈ ಪ್ರಾಂತದ ಒಟ್ಟು ಶಾಸನಗಳ ಸಿಂಹಪಾಲಿನ ಮರ್ಯಾದೆಯನ್ನು ಕನ್ನಡ ಶಾಸನಗಳು ತಪ್ಪದೇ ಉಳಿಸಿಕೊಳ್ಳುತ್ತವೆ.

ಕರ್ನಾಟಕದಲ್ಲಿ ಮೊದಲು ಪ್ರಾಕೃತಶಾಸನ, ಆಮೇಲೆ ಏಕಕಾಲಕ್ಕೆ ವಿರಳವಾಗಿ ಸಂಸ್ಕೃತ ಶಾಸನ ವಿಪುಲವಾಗಿ ಕನ್ನಡ ಶಾಸನಗಳು ಹುಟ್ಟುತ್ತ ಬಂದಿವೆ. ಆದರೆ ಮಹಾರಾಷ್ಟ್ರದಲ್ಲಿ ಮೊದಲು ಪ್ರಾಕೃತ, ಆಮೇಲೆ ಸಂಸ್ಕೃತ, ಬಳಿಕ ಕನ್ನಡ, ಕೊನೆಗೆ ಮರಾಠಿ ಶಾಸನಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ೪೫೦ರ ಹಲ್ಮಿಡಿಯದು ಪ್ರಥಮ ಕನ್ನಡ ಶಾಸನವಾದರೆ, ೧೦೧೨ರ ಆಕ್ಸಿ (ಕುಲಾಬಾ ಜಿಲ್ಲೆ)ಯದು ಪ್ರಥಮ ಮರಾಠಿ ಶಾಸನವಾಗಿದೆ.

ಕೆಲವರು ಶ್ರವಣಬೆಳಗೊಳ ಗೊಮ್ಮಟೇಶ್ವರನ ಪಾದಸಮೀಪದ ಮರಾಠಿ ಬರೆವಣಿಗೆಯೇ ಪ್ರಥಮ ಮರಾಠಿ ಶಾಸನವೆಂದು ಭಾವಿಸಿದ್ದಾರೆ. ಆದರೆ ಅಲ್ಲಿರುವ 'ಶ್ರೀ ಚಾಮುಣ್ಡರಾಜಂ ಮಾಡಿಸಿದಂ', 'ಶ್ರೀ ಗಂಗರಾಜ ಸುತ್ತಾಲಯವಂ ಮಾಡಿಸಿದ' ಎಂಬ ಎರಡು ಕನ್ನಡವಾಕ್ಯಗಳಲ್ಲಿ ಒಂದು ಚಾವುಂಡರಾಯನ ಕಾಲವಾದ ೧೦ನೆಯ ಶತಮಾನದ್ದು, ಇನ್ನೊಂದು ಹೊಯ್ಸಳ ಮಂತ್ರಿ ಗಂಗರಾಜನ ಕಾಲವಾದ ೧೨ನೆಯ ಶತಮಾನದ್ದು ಎಂಬಂತೆ ಭಾಷೆ-ಲಿಪಿ ದೃಷ್ಟಿಯಿಂದ ತುಂಬ ಭಿನ್ನವಾಗಿವೆ. ಆದರೆ 'ಶ್ರೀ ಚಾವುಣ್ಡರಾಜೇಂ ಕರವಿಯಲೇಂ', 'ಶ್ರೀ ಗಂಗರಾಜೇ ಸುತ್ತಾಲೇ ಕರವಿಯಲೇ' ಎಂಬ ಎರಡು ಮರಾಠಿ ವಾಕ್ಯಗಳು ಲಿಪಿದೃಷ್ಟಿಯಿಂದ ಒಂದೇ ಬಗೆಯಾಗಿದ್ದು, ಒಬ್ಬನೇ ವ್ಯಕ್ತಿ ಬರೆದಂತಿವೆ. ಹೀಗಾಗಿ ಈ ಎರಡೂ ಮರಾಠಿ ವಾಕ್ಯಗಳು ಹೊಯ್ಸಳ ಮಂತ್ರಿ ಗಂಗರಾಜನ ಕಾಲವಾದ ೧೨ನೆಯ ಶತಮಾನದಲ್ಲಿ ಬರೆಯಲಾಗಿವೆಯೇ ಹೊರತು, ಒಂದು (ಮೊದಲನೆಯದು) ಚಾವುಂಡರಾಯನ ಕಾಲವಾದ ೧೦ನೆಯ ಶತಮಾನದಲ್ಲಿ ಬರೆದುದಲ್ಲ. ಕನ್ನಡವಾಕ್ಯದಲ್ಲಿಯ 'ಚಾಮುಣ್ಡರಾಯ'ಕ್ಕಿಂತ ಮರಾಠಿ ವಾಕ್ಯದಲ್ಲಿಯ 'ಚಾವುಣ್ಡರಾಜೇಂ' ಎಂಬುದು ಆಧುನಿಕ ರೂಪವೆಂದು ಬೇರೆ ಹೇಳಬೇಕಿಲ್ಲ. ಹೀಗೆ ಮರಾಠಿಯ ಎರಡೂ ವಾಕ್ಯಗಳು ೧೨ನೆಯ ಶತಮಾನದವುಗಳಾಗಿದ್ದರೂ ಇವು ಪ್ರಾಚೀನವೆಂದು ನಂಬಿಗೆ ಹುಟ್ಟಿಸಲು 'ರಾಜೇಂ', 'ಕರವಿಯಲೇಂ' ಎಂದು ಇಲ್ಲಿಯ ಭಾಷೆಯನ್ನು ಹಳೆಯ ರೂಪಕ್ಕೆ ತಿರುಗಿಸಿದ್ದಾರೆ. ಆದರೆ ಲಿಪಿಯನ್ನು ಹಳೆಯ ರೂಪಕ್ಕೆ ತಿರುಗಿಸಲು ಸಾಧ್ಯವಾಗಿಲ್ಲ. ಹೀಗಾಗಿ ಇನ್ನು ಮೇಲೆ ಪ್ರಥಮ ಮರಾಠಿಶಾಸನವೆಂಬ ಕೀರ್ತಿ ಈ ಶ್ರವಣಬೆಳಗೋಳ ಶಾಸನಕ್ಕೆ ತಪ್ಪುತ್ತದೆ.

---

* ಕೆಲವು ಸಂಸ್ಕೃತ ತಾಮ್ರಪಟಗಳು ಬೇರೆ ಪ್ರಾಂತಗಳಿಂದ ಮಹಾರಾಷ್ಟ್ರಕ್ಕೆ ವಲಸೆ ಹೋಗಿವೆ. ಇವುಗಳನ್ನು ಕಳೆದರೆ ಅಲ್ಲಿಯ ಸಂಸ್ಕೃತ ಶಾಸನಗಳ ಸಂಖ್ಯೆ ೩೦೦ಕ್ಕೆ ಕಡಿಮೆಯಾಗುವುದರಿಂದ ಅದರ ಸ್ಥಾನ ಕನ್ನಡಕ್ಕೆ ೨ನೆಯದಾಗುತ್ತದೆ.

ಭೌಗೋಳಿಕವಾಗಿ ಹೇಳುವುದಾದರೆ ಮಹಾರಾಷ್ಟ್ರದಲ್ಲಿ ಪ್ರಾಕೃತ ಶಾಸನಗಳು ಸಹ್ಯಾದ್ರಿ ಶ್ರೇಣಿಯುದ್ದಕ್ಕೂ ಕಂಡುಬರುತ್ತವೆ. ಇವನ್ನು ಬಿಟ್ಟರೆ ಸಂಸ್ಕೃತ, ಮರಾಠಿ ಶಾಸನಗಳು ಪಶ್ಚಿಮದಿಂದ ಪೂರ್ವಕ್ಕೆ ಕಡಿಮೆಯಾಗುತ್ತ ಬರುತ್ತದೆ. ಕನ್ನಡ ಶಾಸನಗಳು ಪೂರ್ವದಿಂದ ಪಶ್ಚಿಮಕ್ಕೆ ಕಡಿಮೆಯಾಗುತ್ತ ಹೋಗುತ್ತವೆ. ಕನ್ನಡ ಶಾಸನಗಳು ಗೋದಾವರಿ ಉತ್ತರಕ್ಕೆ ಇಲ್ಲವೆನ್ನುವಷ್ಟು ಕಡಿಮೆ.

ಬರೆವಣಿಗೆಯ ಮಾಧ್ಯಮವನ್ನು ಅವಲಂಬಿಸಿ ಹೇಳುವುದಾದರೆ ಕರ್ನಾಟಕದಲ್ಲಿ ಶಿಲಾಶಾಸನ ಹೆಚ್ಚು, ತಾಮ್ರ ಶಾಸನ ಕಡಿಮೆ. ಮಹಾರಾಷ್ಟ್ರದಲ್ಲಿ ತಾಮ್ರಶಾಸನ ಹೆಚ್ಚು, ಶಿಲಾಶಾಸನ ಕಡಿಮೆ. ಇದಕ್ಕೆ ಕಾರಣ ಹೀಗೆ: ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಮೊದಲು ಏಕಕಾಲಕ್ಕೆ ಅಶೋಕನ ಬೌದ್ಧಪರ ಪ್ರಾಕೃತ ಶಾಸನಗಳು ಹುಟ್ಟಿಕೊಂಡಿವೆ. ಆಮೇಲೆ ಬಂದ ಶಾತವಾಹನರು ಬಹುಶಃ ಹಿಂದುಗಳಾಗಿದ್ದರೂ ಮೌರ್ಯರ ಪ್ರತಿನಿಧಿಗಳಿಗಿದ್ದ ಕಾರಣ ಪ್ರಾಕೃತಶಾಸನಗಳ ಬರೆವಣಿಗೆಯನ್ನೇ ಉಭಯ ಪ್ರಾಂತಗಳಲ್ಲಿ ಮುಂದುವರಿಸಿದರು. ಧರ್ಮಪ್ರಸಾರವೇ ಇವುಗಳ ಮುಖ್ಯ ಉದ್ದೇಶವಾದುದರಿಂದ ಸಾರ್ವಜನಿಕ ಪ್ರಸಾರಮಾಧ್ಯಮಗಳಂತೆ ಇವು ಶಿಲೆಯನ್ನಾಶ್ರಯಿಸಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ತಲೆಯೆತ್ತಿದವು.

ಶಾತವಾಹನರ ಕೊನೆಯ ಅವಧಿಯಲ್ಲಿ ವೈದಿಕರಾದ ಬಾದಾಮಿಯ ಚಾಲುಕ್ಯರು, ಬನವಾಸಿ ಕದಂಬರು ತಲೆಯೆತ್ತುವಲ್ಲಿ ಬೌದ್ಧಧರ್ಮ ಹಿಂದೆ ಬಿದ್ದು, ಕ್ರಮೇಣ ವೈದಿಕ ಧರ್ಮ ತಲೆಯೆತ್ತಿತು. ಇದರಿಂದಾಗಿ ಅಗ್ರಹಾರ ಸಂಪ್ರದಾಯ ಅಸ್ತಿತ್ವಕ್ಕೆ ಬಂದಿತು. ಈಗ ಸಾರ್ವಜನಿಕ ಪ್ರಸಾರಮಾಧ್ಯಮವಾದ ಶಿಲಾಶಾಸನದ ಬರೆವಣಿಗೆ ಇಳಿಮುಖವಾಗಿ, ಅಗ್ರಹಾರ ಪಡೆದುದರ ಅಧಿಕೃತ ದಾಖಲೆಯೆಂಬಂತೆ 'ವೈಯಕ್ತಿಕದಾನ'ದ ತಾಮ್ರಪಟಗಳು ಕನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅಧಿಕಸಂಖ್ಯೆಯಲ್ಲಿ ಬೆಳೆದು ಬಂದುವು. ಈ ದಾನಪಡೆದವರು ಬ್ರಾಹ್ಮಣರೇ ಆಗಿದ್ದುದರಿಂದ ಸಹಜವಾಗಿಯೇ ತಾಮ್ರಪಟಗಳಲ್ಲಿ ಸಂಸ್ಕೃತ ಭಾಷೆ ಪ್ರವೇಶ ಪಡೆಯಿತು. ಬನವಾಸಿ ಕದಂಬರ ಒಟ್ಟು ೫೧ ಶಾಸನಗಳಲ್ಲಿ ೨ ಪ್ರಾಕೃತ, ೩ ಕನ್ನಡ, ೪೬ ಸಂಸ್ಕೃತವಾಗಿರುವುದೂ, ೧೬ ಶಿಲಾಶಾಸನ, ೩೫ ತಾಮ್ರ ಶಾಸನಗಳಾಗಿರುವುದೂ ಇದಕ್ಕೆ ನಿದರ್ಶನವೆನಿಸಿದೆ. ವಸ್ತುಸ್ಥಿತಿ ಹೀಗಿದ್ದರೂ ಈ ಕಡೆ ಕರ್ನಾಟಕದಲ್ಲಿ ಕಾಣಿಸಿಕೊಂಡ ಹೆಚ್ಚಿನ ಬೆಳವಣಿಗೆಯೆಂದರೆ ಇಲ್ಲಿ ತಲೆಯೆತ್ತಿದ ಕದಂಬ, ಚಾಲುಕ್ಯ, ಸಾಮ್ರಾಜ್ಯಗಳು ಕಾರಣವಾಗಿ 'ವೀರಮೌಲ್ಯ'ವೂ ಹೊಸದಾಗಿ ಆಕಾರ ಪಡೆದುದು. ಪಂಪ ಹೇಳುವಂತೆ ಈ ಅರಸರು 'ಚಾಗದ ಕಂಬಮಂ ನಿರಿಸಿ, ಬೀರದ ಶಾಸನಮಂ ನೆಗಳ್ಚಿ' ಕೀರ್ತಿ ಸಾಧಿಸಲು ತವಕಿಸಿದರು. ಈಗ ವೈಯಕ್ತಿಕ ದಾನಪತ್ರಗಳಾದ ತಾಮ್ರಪಟಗಳ ಜೊತೆಗೆ ಈ ಹೊಸ ಮೌಲ್ಯಗಳ ಸಾರ್ವಜನಿಕ ಪ್ರಸಾರಮಾಧ್ಯಮವೆಂಬಂತೆ ಕರ್ನಾಟಕದಲ್ಲಿ ಶಿಲಾಶಾಸನಗಳ ಪರಂಪರೆಯೂ ಬೆಳೆಯಲಾರಂಭಿಸಿತು. ಈ ಮೌಲ್ಯವನ್ನು ಮೂಲೆ ಮೂಲೆಗೂ ಮುಟ್ಟಿಸುವ ಉದ್ದೇಶದಿಂದ ಶಿಲಾಶಾಸನಗಳಲ್ಲಿ ಪ್ರಜೆಗಳ ಭಾಷೆಯಾದ ಕನ್ನಡವನ್ನು ಬಳಸಲಾರಂಭಿಸಿದರು. ಇದರಿಂದಾಗಿ ಶಾಸನ ಕ್ಷೇತ್ರಕ್ಕೆ ಸಂಬಂದಿಸಿದಂತೆ ಕರ್ನಾಟಕದಲ್ಲಿ ತಾಮ್ರಪಟ–ಸಂಸ್ಕೃತ ಭಾಷೆಗಳ ಜೊತೆಗೆ ಶಿಲಾಶಾಸನ ಕನ್ನಡಭಾಷೆಗಳೂ ಬೆಳೆದುಬಂದವು.

ಆದರೆ ಇದಕ್ಕೆ ವಿರುದ್ಧವೆನ್ನುವಂತೆ ಮಹಾರಾಷ್ಟ್ರದಲ್ಲಿ ಶಾತವಾಹನರ ತರುವಾಯ ದೊಡ್ಡ ಸ್ವತಂತ್ರ ರಾಜವಂಶಗಳು ತಲೆಯೆತ್ತದಿದ್ದ ಕಾರಣ, ವೀರಮೌಲ್ಯ ಆಕಾರ ಪಡೆಯಲಿಲ್ಲ. ಆಗಮಿಕ ಶೈವದ ದೇವಾಲಯ ನಿರ್ಮಾಣಕ್ಕಿಂತ ವೈದಿಕ ಅಗ್ರಹಾರ ಸಂಪ್ರದಾಯವೇ ಮುಂದುವರಿದ ಕಾರಣ, ಸಾರ್ವಜನಿಕ ದಾನಮೌಲ್ಯವೂ ಬೆಳೆಯಲಿಲ್ಲ. ಹೀಗಾಗಿ ಮಹಾರಾಷ್ಟ್ರದಲ್ಲಿ 'ಸಮಷ್ಟಿಪ್ರಜ್ಞೆ'ಯ

ಪ್ರಸಾರ ಮಾಧ್ಯಮವಾದ ಶಿಲಾಶಾಸನಗಳು ಹುಟ್ಟಿದೆ, 'ವ್ಯಷ್ಟಿಪ್ರಜ್ಞೆ'ಯ ದಾಖಲೆಗಳಾದ ತಾಮ್ರಶಾಸನಗಳ ಪರಂಪರೆಯೇ ೧೦ನೆಯ ಶತಮಾನದ ವರೆಗೆ ಮುಂದುವರೆಯಿತು. ಇದಲ್ಲದೆ ಚಾಲುಕ್ಯರ ಬಾದಾಮಿ, ರಾಷ್ಟ್ರಕೂಟರ ಮಳಖೇಡ ಈ ರಾಜಧಾನಿಗಳ ಸುತ್ತ ಶಿಲಾಶಾಸನಗಳು ಬೆಳೆದು ದೂರದ ಮಹಾರಾಷ್ಟ್ರ ಭಾಗ ಉಪೇಕ್ಷಿತವಾಯಿತು. ಆಮೇಲೆ ಸಮಷ್ಟಿಮೌಲ್ಯ ಜಾಗ್ರತವಾದ ಅವಧಿಯಲ್ಲಿ ಅಂದರೆ ೧೧ರಿಂದ ೧೩ನೆಯ ಶತಮಾನದ ವ್ಯಾಪ್ತಿಯಲ್ಲಿ ಶಿಲಾ ಶಾಸನ-ಕನ್ನಡ ಭಾಷೆಗಳು ಮಹಾರಾಷ್ಟ್ರದಲ್ಲಿ ಕಣ್ಣು ತೆರೆದು, ಒಮ್ಮೆಲೇ ಒಂದು ಆಂದೋಲನವೆನ್ನುವಂತೆ ಅವು ಕಿಕ್ಕಿರಿದು ಬೆಳೆದವು. ಈ ಕಾಲದಲ್ಲಿ ಬಿಡಿ ಬಿಡಿಯಾಗಿ ಮರಾಠಿ ಶಾಸನಗಳು ಹುಟ್ಟಿಕೊಳ್ಳಲಾರಂಭಿಸಿದರೂ ಒಂದು ಆಂದೋಲನವೆಂಬಂತೆ ಅವು ಬೆಳೆಯಲಿಲ್ಲ.

೬. ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು : ಐತಿಹಾಸಿಕ ಬೆಳವಣಿಗೆ

ಮಹಾರಾಷ್ಟ್ರದ ಶಾಸನಗಳ ಚರಿತ್ರೆ ಮೌರ್ಯ ಅಶೋಕನ ಕ್ರಿ. ಶ. ಪೂ. ೩೦೦ ರ ಠಾಣಾ ಜಿಲ್ಲೆಯ ಸೊಪಾರಾ ಪ್ರಾಕೃತ ಶಾಸನದಿಂದ ಪ್ರಾರಂಭವಾಗುತ್ತದೆ. ಆಮೇಲೆ ಕ್ರಿ. ಶ. ೩೦೦ರ ವರೆಗೆ ಮಹಾರಾಷ್ಟ್ರವನ್ನು ಆಳಿದ ಶಾತವಾಹನರು ಬಹುಶಃ ಹಿಂದುಗಳಾಗಿದ್ದರೂ ಶಾಸನಗಳ ಭಾಷೆಯ ವಿಷಯವಾಗಿ ಅಶೋಕನ ಧೋರಣೆಯನ್ನೇ ಮುಂದುವರಿಸಿದರು. ಇದು ಮಹಾರಾಷ್ಟ್ರದ ಶಾಸನಗಳ ಇತಿಹಾಸದಲ್ಲಿ ಒಂದನೆಯ ಘಟ್ಟ.

ಶಾತವಾಹನರ ಆಳಿಕೆಯ ಕೊನೆಯಲ್ಲಿ ಬಾದಾಮಿ ಚಾಲುಕ್ಯರಿಂದಾಗಿ ಮಹಾರಾಷ್ಟ್ರದಲ್ಲಿಯೂ ಬೌದ್ಧ ಸಂಸ್ಕೃತಿ ನಾಶವಾಗಿ, ವೈದಿಕ ಸಂಸ್ಕೃತಿ ಬೆಳೆಯಲಾರಂಭಿಸಿ, ಸಹಜವಾಗಿಯೇ ಪಾಕೃತಶಾಸನಗಳು ಹಿಂದೆ ಬಿದ್ದು ಸಂಸ್ಕೃತಶಾಸನಗಳು ಬೆಳೆಯಲಾರಂಭಿಸಿದವು. ಈ ಸಮಯದಲ್ಲಿ ಇಂದಿನ ಕರ್ನಾಟಕ-ಮಹಾರಾಷ್ಟ್ರ ಎರಡೂ ರಾಜ್ಯಗಳ ಅಖಂಡ ಅಧಿಕಾರಿಗಳಾಗಿದ್ದ ಈ ಚಾಲುಕ್ಯರು ಕರ್ನಾಟಕದಲ್ಲಿ ಸಂಸ್ಕೃತಭಾಷೆಯ ತಾಮ್ರಶಾಸನಗಳ ಜೊತೆಗೆ ಕನ್ನಡಭಾಷೆಯ ಶಿಲಾಶಾಸನಗಳನ್ನೂ, ಮಹಾರಾಷ್ಟ್ರದಲ್ಲಿ ಕೇವಲ ಸಂಸ್ಕೃತ ಭಾಷೆಯ ತಾಮ್ರಶಾಸನಗಳನ್ನೂ ಬರೆಯಿಸಿದ್ದಾರೆ. ಆಮೇಲೆ ಚಾಲುಕ್ಯರಂತೆ ಎರಡೂ ರಾಜ್ಯಗಳನ್ನಾಳಿದ ಮಳಖೇಡದ ರಾಷ್ಟ್ರಕೂಟರ ಕಾಲದಲ್ಲಿಯೂ ಚಾಲುಕ್ಯರ ಶಾಸನಪದ್ಧತಿಯೇ ಮಹಾರಾಷ್ಟ್ರದಲ್ಲಿ ಮುಂದುವರಿಯಿತು. ಹೀಗಾಗಿ ೧೦ನೆಯ ಶತಮಾನದ ವರೆಗೆ ಇಂದಿನ ಮಹಾರಾಷ್ಟ್ರದಲ್ಲಿ ಅಂದಿನ ಪ್ರಾಂತಭಾಷೆಯಾದ ಕನ್ನಡ ಶಾಸನಗಳೂ ಇಲ್ಲ, ಇಂದಿನ ಪ್ರಾಂತಭಾಷೆಯಾದ ಮರಾಠಿ ಶಾಸನಗಳೂ ಇಲ್ಲ. ಇದು ಮಹಾರಾಷ್ಟ್ರದ ಶಾಸನಗಳ ಚರಿತ್ರೆಯಲ್ಲಿ ಎರಡನೆಯ ಘಟ್ಟ.

ಈ ತರುವಾಯ ಉಭಯ ರಾಜ್ಯಗಳ ರಾಜಕೀಯ ಕ್ಷಿತಿಜದ ಮೇಲೆ ಕಲ್ಯಾಣ ಚಾಲುಕ್ಯರು ಕಾಣಿಸಿಕೊಂಡರು. ಇವರ ಮತ್ತು ಇವರ ಮಾಂಡಲಿಕರ ಅವಧಿಯಲ್ಲಿ ವೀರಮೌಲ್ಯ ಮತ್ತು ದೇವಾಲಯ ನಿರ್ಮಾಣಕಾರ್ಯ ಮಹಾರಾಷ್ಟ್ರದಲ್ಲಿಯೂ ಮೈಚಾಚಿಕೊಂಡಿತು. ಇದರ ಫಲವಾಗಿ ಈ ಭಾಗದಲ್ಲಿ ಜನಭಾಷೆಯಾದ ಕನ್ನಡದಲ್ಲಿ ಬರೆದ, ಸಾರ್ವಜನಿಕ ಮೌಲ್ಯಪ್ರಸಾರದ ಮಾಧ್ಯಮಗಳಾದ ಶಿಲಾಶಾಸನಗಳು ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲತೊಡಗಿದವು. ಅಶೋಕ ಮತ್ತು ಶಾಶತವಾಹನರ

ಕಾಲದಲ್ಲಿ ಬೆಟ್ಟವಿದ್ದಲ್ಲಿಯೇ ಹೋಗಿ ಶಾಸನ ಕೊರೆಯಿಸುವುದಕ್ಕೂ, ಈಗ ಬೆಟ್ಟದಿಂದ ಶಿಲೆಯನ್ನು ತಂದು ಶಾಸನ ಬರೆದು, ಅದನ್ನು ಜನರ ಮಧ್ಯೆ ನಿಲ್ಲಿಸುವುದಕ್ಕೂ ಧೋರಣೆಯಲ್ಲಿ ವ್ಯತ್ಯಾಸವಿರುವದನ್ನು ಇಲ್ಲಿ ನೆನೆಯಬಹುದು. ಕಲ್ಲು ಇದ್ದಲ್ಲಿಗೆ ಹೋಗಿ ಶಾಸನ ಬರೆಯಿಸುವುದು ಬೇರೆ, ಶಾಸನ ಕಲ್ಲನ್ನು ತಂದು ಜನರ ಮಧ್ಯೆ ನಿಲ್ಲಿಸುವುದು ಬೇರೆ. ಅಂದರೆ ಮೌಲ್ಯಗಳನ್ನು ಶಾಶ್ವತಗೊಳಿಸುವುದು ಬೇರೆ. ಶಾಶ್ವತಗೊಳಿಸುವುದರೊಂದಿಗೆ ಪ್ರಸಾರಗೊಳಿಸುವುದು ಬೇರೆ. ಒಂದರದು ಕಾಲಕಾಲದಲ್ಲಿ ಉಳಿಯಬೇಕೆಂಬ ಧೋರಣೆ; ಇನ್ನೊಂದರದು ಜೊತೆಗೆ ದೇಶದೇಶಗಳಲ್ಲಿಯೂ ಬೆಳೆಯಬೇಕೆಂಬ ಧೋರಣೆ. ಹೀಗೆ ಪ್ರಸಾರ ಮಾಧ್ಯಮವನ್ನು ಪರಿಣಾಮಕಾರಿಗೊಳಿಸುವ ಕ್ರಮ, ಕಲ್ಯಾಣ ಚಾಲುಕ್ಯರ ಕಾಲಕ್ಕೆ ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತು. ಇದರ ಫಲವಾಗಿ ಕನ್ನಡ ಶಾಸನಗಳು ಹುಟ್ಟತೊಡಗಿ, ಈಗಿನ ಮಟ್ಟಿಗೆ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಯಸಿಂಹನ ೧೦೧೩ರ ಉಸ್ಮಾನಾಬಾದ ಜಿಲ್ಲೆಯ ಒಮೆರ್ಗಾ ತಾಲೂಕಿನ ಮುರಮ್ (ಮೊರಂಬ) ಗ್ರಾಮದ ಶಾಸನಕ್ಕೆ 'ಮಹಾರಾಷ್ಟ್ರದ ಪ್ರಥಮ ಕನ್ನಡ ಶಾಸನ'ವೆಂಬ ಗೌರವ ಸಲ್ಲುತ್ತದೆ.* ಕರ್ನಾಟಕದಲ್ಲಿ ಈ ಹೊತ್ತಿಗಾಗಲೇ ಸುಮಾರು ೧೦೦೦ಕ್ಕೂ ಹೆಚ್ಚು ಕನ್ನಡ ಶಾಸನಗಳು ಹುಟ್ಟಿ, ಕನ್ನಡ ಶಾಸನಗಳ ಇತಿಹಾಸದಲ್ಲಿ ಒಂದು ಘಟ್ಟ ಮುಗಿದುಹೋಗಿದ್ದಿತೆಂಬುದನ್ನು ಗಮನಿಸಬೇಕು.

ಕಲ್ಯಾಣಚಾಲುಕ್ಯ ಮತ್ತು ಆಮೇಲಿನ ಕಲಚುರಿ, ಯಾದವ ಮತ್ತು ಇವರ ಅಧಿಕಾರಿಗಳ ಕಾಲದಲ್ಲಿ ಕರ್ನಾಟಕ–ಮಹಾರಾಷ್ಟ್ರ ಎರಡೂ ಪ್ರಾಂತಗಳಲ್ಲಿಯೂ ಕನ್ನಡ ಶಾಸನಗಳು ವಿಪುಲ ಸಂಖ್ಯೆಯಲ್ಲಿ ಒಮ್ಮೆಲೇ ಹುಟ್ಟಿಕೊಳ್ಳಲಾರಂಭಿಸಿವೆ. ಮಹಾರಾಷ್ಟ್ರದ ಕನ್ನಡ ಶಾಸನಗಳ ಅಧ್ಯಯನವೆಂದರೆ ಈ ಮೂರು ಮನೆತನಗಳ ಅವಧಿಯ ಕನ್ನಡ ಶಾಸನಗಳ ಅಧ್ಯಯನವೇ ಆಗಿದೆ. ಇವುಗಳಲ್ಲಿ ಕಲ್ಯಾಣ ಚಾಲುಕ್ಯರ, ಅದರಲ್ಲಿಯೂ ಆರನೆಯ ವಿಕ್ರಮಾದಿತ್ಯನ ಶಾಸನಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇದು ಮಹಾರಾಷ್ಟ್ರದ ಶಾಸನಗಳ ಇತಿಹಾಸದಲ್ಲಿ ಮೂರನೆಯ ಘಟ್ಟ, ಕೊನೆಯ ಘಟ್ಟವೂ ಆಗಿದೆ. ಹಾಗೆಯೇ ಮಹಾರಾಷ್ಟ್ರದ ಕನ್ನಡ ಶಾಸನಗಳ ಇತಿಹಾಸದಲ್ಲಿ ಮೊದಲ ಘಟ್ಟವಾಗಿರುವಂತೆ ಕೊನೆಯ ಘಟ್ಟವೂ ಆಗಿದೆ. ಇದು ಮಹಾರಾಷ್ಟ್ರದ ಶಾಸನಗಳ ಸುವರ್ಣಯುಗವೆನಿಸಿದ ಘಟ್ಟವಿದು. ಈ ಹಿರಿಮೆಯನ್ನು ತಂದುಕೊಟ್ಟ ಕೀರ್ತಿ ಇಲ್ಲಿಯ ಕನ್ನಡ ಶಾಸನಗಳಿಗೆ ಸಲ್ಲುತ್ತದೆ.

ಯಾದವರು ಆಳುವಾಗ (೧೨–೧೩ನೆಯ ಶತಮಾನ)ಉಭಯ ಪ್ರಾಂತಗಳಲ್ಲಿ ಕನ್ನಡ ಶಾಸನ ಬರೆಯಿಸುವ ಧೋರಣೆ ಮುಂದುವರಿದರೂ ಜೊತೆಗೆ ಮಹಾರಾಷ್ಟ್ರದಲ್ಲಿ ಆಗೊಮ್ಮೆ ಈಗೊಮ್ಮೆ ಮರಾಠಿ ಶಾಸನಗಳೂ ಕಾಣತೊಡಗಿದವು. ಈ ಕಾಲದಲ್ಲಿ ಮರಾಠರ ಸಂಖ್ಯೆ ಅಲ್ಲಿ ವರ್ಧಿಸುತ್ತಿದ್ದುದರ, ಅವರು ಪ್ರಬಲರಾಗುತ್ತಿದ್ದುದರ ಲಕ್ಷಣವಿದು. ಮುಂದೆ ಅಲ್ಪಾವಧಿಯಲ್ಲಿಯೇ ಯಾದವರ ಪತನ, ಮುಸಲ್ಮಾನರ ಆಕ್ರಮಗಳು ಘಟಿಸಿ, ೧೪ನೆಯ ಶತಮಾನದ ಪ್ರಾರಂಭದಿಂದ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕಗಳಲ್ಲಿ ಒಟ್ಟಾಗಿ ಶಾಸನ ಬರೆವಣಿಗೆ ಗಣನೀಯ ಪ್ರಮಾಣದಲ್ಲಿ

---

* ಕೊಲ್ಹಾಪುರ ಜಿಲ್ಲೆಯ ಕೋರೋಚಿ ಗ್ರಾಮದ ಕನ್ನಡ ತಾಮ್ರಪಟದಲ್ಲಿ ಬರುವ ಸರ್ಬರಸನು ರಾಷ್ಟ್ರಕೂಟ ಅಮೋಘವರ್ಷ Iನೆಂದು ಡಾ. ಎಂ. ಎಚ್. ಕೃಷ್ಣ, ಕೊಲ್ಹಾಪುರ ಸಮೀಪದ ಒಬ್ಬ ಮಾಂಡಲಿಕನೆಂದು ಡಾ. ಮಿರಾಸಿ ಹೇಳುತ್ತಾರೆ. ಈ ಶಾಸನದಲ್ಲಿ ಕಾಲ ನಿರ್ದೇಶನವಿಲ್ಲ. ಡಾ. ಕೃಷ್ಣ ಅವರ ಅಭಿಪ್ರಾಯ ಸರಿಯಿದ್ದರೆ ಇದು ಇಂದಿನ ಮಹಾರಾಷ್ಟ್ರದಲ್ಲಿ ಸಿಕ್ಕ ಮೊದಲ ಕನ್ನಡ ಶಾಸನವಾಗುತ್ತದೆ.

ಕಡಿಮೆಯಾಯಿತು. ಲೇಖನ ಮಾಧ್ಯಮವಾಗಿ ಕಾಗದ ಬಂದು, ಈ ಕ್ರಿಯೆಯನ್ನು ಇನ್ನೂ ನಿಧಾನಗೊಳಿಸಿತು. ಮಹಾರಾಷ್ಟ್ರದಲ್ಲಿ ಅದೇ ಆಗ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದ ಮರಾಠಿ ಶಾಸನಗಳ ಬರೆವಣಿಗೆಯೂ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತ ಬಂದಿತು. ದಕ್ಷಿಣ ಕರ್ನಾಟಕದಲ್ಲಿ ಮಾತ್ರ ವಿಜಯನಗರ ಸಾಮ್ರಾಜ್ಯ ಕಾರಣವಾಗಿ ಕನ್ನಡ ಶಾಸನಗಳ ಬರವಣಿಗೆ ತಕ್ಕ ಪ್ರಮಾಣದಲ್ಲಿ ಕೆಲವು ಕಾಲ ಮುಂದುವರಿಯಿತು.

೭. ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು : ಭೌಗೋಳಿಕ ಪ್ರಸಾರ

ಕ್ರಿ. ಶ. ಪೂ. ೩ನೆಯ ಶತಮಾನದ ಅಶೋಕನಿಂದ ಆರಂಭವಾಗಿ ಕ್ರಿ. ಶ. ೩ನೆಯ ಶತಮಾನದ ಶಾತವಾಹನರ ವರೆಗಿನ ಅವಧಿ ಮಹಾರಾಷ್ಟ್ರದ ಶಾಸನಗಳ ಮೊದಲ ಘಟ್ಟವಾಗಿದ್ದು, ಈ ಅವಧಿಯಲ್ಲಿ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ವರೆಗೆ ಅಂದರೆ ಕುಲಾಬಾ, ಠಾಣಾ, ನಾಸಿಕ ಜಿಲ್ಲೆಗಳಲ್ಲಿ, ಪೂಣಾ, ಔರಂಗಾಬಾದ ಜಿಲ್ಲೆಗಳ ಅರ್ಧ ಭಾಗಗಳಲ್ಲಿ ಒಂದೊಂದಾಗಿ ಪ್ರಾಕೃತ ಶಾಸನಗಳು ಮಾತ್ರ ಕಂಡುಬರುತ್ತವೆ. ಕರ್ನಾಟಕದಲ್ಲಿ ಶಾತವಾಹನರ ಕಾಲದ ಪ್ರಾಕೃತ ಶಾಸನಗಳು ಆಕಸ್ಮಿಕದಂತೆ ಹುಟ್ಟಿದ್ದರೆ, ಮಹಾರಾಷ್ಟ್ರದಲ್ಲಿ ಆ ನೆಲದ ಘಟ್ಟದುದ್ದಕ್ಕೂ ಸಹಜವೆಂಬಂತೆ ೨೫೦ರಷ್ಟು ಹಬ್ಬಿ ಹರಡಿ ನಿಂತಿವೆ. ಈಗಿನ ಮರಾಠಿ ಭಾಷೆಯು ಪ್ರಾಕೃತದ ಮುಂದುವರಿದ ಒಂದು ಶಾಖೆಯೇ ಆಗಿರುವುದರಿಂದ, ೩ನೆಯ ಶತಮಾನದ ಹೊತ್ತಿಗೆ ಈಗಿನ ಮಹಾರಾಷ್ಟ್ರದ ಪಶ್ಚಿಮದ ಜಿಲ್ಲೆಗಳನ್ನು ಮರಾಠರು ಆವರಿಸಿದ್ದರೆಂದು ಹೇಳಬಹುದು. ಆದರೆ ಮಹಾರಾಷ್ಟ್ರದ ಉತ್ತರದಲ್ಲಿ ಮರಾಠರು ಯಾವ ಕಾಲಕ್ಕೆ? ಎಷ್ಟು ಪ್ರದೇಶವನ್ನು ಆವರಿಸಿದ್ದರೆಂದು ಹೇಳಲು ಶಾಸನಾಧಾರಗಳಿಲ್ಲ. ಕನ್ನಡ ಅರಸರು ಆಗಾಗ ಗೋದಾವರಿಯನ್ನು ದಾಟಿ ಆಳಿದ್ದರೂ ಅದೆಲ್ಲವನ್ನು ಬಿಟ್ಟು, ಗೋದಾವರಿಯನ್ನೇ ಕನ್ನಡದ ಉತ್ತರ ಮೇರೆಯೆಂದು ಕವಿರಾಜಮಾರ್ಗ ಹೇಳುವುದರಿಂದ, ಇದರ ಕಾಲವಾದ ೯ನೆಯ ಶತಮಾನದ ಹೊತ್ತಿಗೆ ಗೋದಾವರಿಯೇ ಕನ್ನಡಿಗರ ಉತ್ತರಮೇರೆಯಾಗಿದ್ದಿತೆಂದು ಹೇಳಬಹುದು.

ಪರ್ವತ, ನದಿಗಳಂಥ ನೈಸರ್ಗಿಕ ಪ್ರತಿಬಂಧಕಗಳು ಅಂದು ಪ್ರಾಂತದ ಗಡಿಗೆರೆಗಳಾಗುತ್ತಿದ್ದುದರಿಂದ ಶಾತವಾಹನರ ಹೊತ್ತಿಗೆ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ವರೆಗಿನ, ರಾಷ್ಟ್ರಕೂಟರ ಹೊತ್ತಿಗೆ ಉತ್ತರದಲ್ಲಿ ಗೋದಾವರಿ ವಾಹಿನಿ ವರೆಗಿನ ನೆಲ ಮರಾಠರದಾಗಿದ್ದಿತು. ಹೀಗಾಗಿ ಈ ಎರಡು ನೈಸರ್ಗಿಕ ಪ್ರತಿಬಂಧಕಗಳ ಮಧ್ಯದ ಬಯಲು ನೆಲ ಕನ್ನಡಿಗರ ಆಡುಂಬೊಲವಾಗಿದ್ದಿತು. ಈ ಕಾರಣಕ್ಕಾಗಿಯೇ ಕಲ್ಯಾಣದಂಥ ಮುಖ್ಯ ರಾಜಧಾನಿಯ ಸುತ್ತ, ಕೊಲ್ಲಾಪುರ ಕರಹಾಡ ಮಂಗಳವಾಡ ಅಕ್ಕಲಕೋಟಗಳಂಥ ಮಾಂಡಲಿಕ ರಾಜಧಾನಿಗಳ ಸುತ್ತ ಹುಟ್ಟತೊಡಗಿದ ಕನ್ನಡ ಶಾಸನಗಳು ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಹೋದಂತೆ ವಿರಳವಾಗುತ್ತ ನಡೆದು, ಪಶ್ಚಿಮದಲ್ಲಿ ಸಹ್ಯಾದ್ರಿ ಘಟ್ಟಕ್ಕೆ ನಿಂತು ಬಿಡುತ್ತವೆ; ಉತ್ತರದಲ್ಲಿ ಗೋದಾವರಿಗೆ ನಿಂತು ಬಿಡುತ್ತವೆ.

ಗೋದಾವರಿ ಆಚೆಗೆ ಔರಂಗಬಾದ ಜಿಲ್ಲೆಯ ಅಜಂತಾ, ಎಲ್ಲೋರಾ ಗವಿಗಳಲ್ಲಿ ಮತ್ತು ಅಕೋಲಾ ಜಿಲ್ಲೆಯ ನಲಪುರ ತಾಲೂಕಿನ ಪಾತುರಲೇಣಿಯಲ್ಲಿ ಕರ್ನಾಟಕದ ಪ್ರಾಚೀನ ಪ್ರವಾಸಿಗಳ ಹೆಸರುಗಳೂ, ಪರಭಣಿ ಜಿಲ್ಲೆಯ ಔಂಧದ ನಾಗನಾಥ ದೇವಾಲಯದಲ್ಲಿ ಕುದುರೆಯ ಶಿಲ್ಪ

ಕಂಡರಿಸಿಕೊಟ್ಟ ಶಿಲ್ಪಿಯ ಹೆಸರೂ ಕನ್ನಡದಲ್ಲಿ ಕೆತ್ತಲ್ಪಟ್ಟಿವೆ. ಪಶ್ಚಿಮ ಘಟ್ಟದ ಆಚೆಗೆ ಠಾಣಾ ಜಿಲ್ಲೆಯ ರಾಯಗ್ರಾಮದಲ್ಲಿ ಗೋವೆ ಕದಂಬ ಜಯಕೇಶಿಯ ಕನ್ನಡ ಶಾಸನವಿದೆ; ಮುಂಬೈಯ ಬೋರಿವಲ್ಲಿಯಲ್ಲಿ ಒಂದು ಕನ್ನಡ ವೀರಗಲ್ಲು ಇದೆ. ಆ ಕಾಲದ ಹಿನ್ನೆಲೆಯಲ್ಲಿ ಇವೆಲ್ಲ ಆಕಸ್ಮಿಗಳೆಂದೇ ಹೇಳಬೇಕು. ಡಾ. ರಿತ್ತಿ, ಡಾ. ಶೇಳ್ಕೆ ಸಂಪಾದಿಸಿದ "Inscriptions from Nanded district" ಪುಸ್ತಕದ ೩೬ ಕನ್ನಡ ಶಾಸನಗಳಲ್ಲಿ ಅಪವಾದವೆಂಬಂತೆ ಒಂದು ಮಾತ್ರ ಗೋದಾವರಿಯ ಉತ್ತರದಲ್ಲಿ, ಮಿಕ್ಕ ೩೫ ಗೋದಾವರಿಯ ದಕ್ಷಿಣದಲ್ಲಿ ಸಿಕ್ಕಿವೆ. ಇದಕ್ಕೆ ವಿರುದ್ಧವಾಗಿ ಈ ಗ್ರಂಥದ ಮರಾಠಿ ಶಾಸನಗಳಲ್ಲಿ ಅಪವಾದವೆಂಬಂತೆ ಒಂದು, ಗೋದಾವರಿ ದಕ್ಷಿಣದಲ್ಲಿ ಮಿಕ್ಕುವು ಉತ್ತರದಲ್ಲಿ ಸಿಕ್ಕಿವೆ. ಇದರಿಂದ ಈಗಿನ ಮಹಾರಾಷ್ಟ್ರದಲ್ಲಿ ಉತ್ತರಕ್ಕೆ ಗೋದಾವರಿ ವರೆಗಿನ, ಪಶ್ಚಿಮಕ್ಕೆ ಸಹ್ಯಾದ್ರಿಶ್ರೇಣಿ ವರೆಗಿನ ನೆಲ ಕನ್ನಡಿಗರದೆಂದು ಅಲ್ಲಿ ನಿಂತಿರುವ ಕನ್ನಡ ಶಾಸನಗಳು ಸಾಬೀತು ಪಡಿಸುತ್ತವೆ. ಇನ್ನೂ ಒಂದು ವಿಶೇಷವೆಂದರೆ ಮಹಾರಾಷ್ಟ್ರ ಕೆಲವು ಊರುಗಳ ಎಲ್ಲ ಶಾಸನಗಳು ಕನ್ನಡದಲ್ಲಿಯೇ ಇರುವುದು, ಇಲ್ಲವೆ ಕನ್ನಡ ಶಾಸನಗಳೇ ಸಂಖ್ಯೆಯಲ್ಲಿ ಅಧಿಕಾರಿಯಾಗಿರುವುದು. ದೂರದ ಬೀಡ ಜಿಲ್ಲೆಯ ಧರ್ಮಾಪುರಿ ಗ್ರಾಮದ ಐದೂ ಶಾಸನಗಳು ಕನ್ನಡದಲ್ಲಿವೆ. ಇಂಥ ಉದಾರಣೆಗಳು ಅಲ್ಲಿಯ ಕನ್ನಡದ ದಟ್ಟತೆಯನ್ನು ಸೂಚಿಸುತ್ತವೆ.

ಈಗ ಈ ಶಾಸನಗಳ ಭೌಗೋಲಿಕ ಪ್ರಸಾರವನ್ನು ನೋಡಬಹುದು ಇಂದಿನ ಕರ್ನಾಟಕ ಮಹಾರಾಷ್ಟ್ರಗಳ ಗಡಿರೇಖೆಯ ಒಳಗಿನ ಬೀದರ, ಗುಲಬರ್ಗಾ, ಬಿಜಾಪೂರ, ಬೆಳಗಾವಿ ಜಿಲ್ಲೆ ಮತ್ತು ಹೊರಗಿನ ಮೊದಲ ಸುತ್ತಿನ ನಾಂದೇಡ, ಉಸ್ಮಾನಾಬಾದ, ಸೊಲ್ಲಾಪುರ, ಸಾಂಗಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿರುವ ಕನ್ನಡ ಶಾಸನಗಳ ಪ್ರಮಾಣ ಬಹುಮಟ್ಟಿಗೆ ಸಾಂದ್ರತೆ, ಸಂಖ್ಯಾದೃಷ್ಟಿಯಿಂದ ಸಮನಾಗಿದೆ. (ಶಾಸನಗಳ ಸಮಗ್ರ ಶೋಧ ನಡೆದಲ್ಲಿ ಈ ಮಾತು ಇನ್ನೂ ಸತ್ಯವಾಗುತ್ತದೆ). ಹೊರಗಿನ ಎರಡನೆಯ ಸುತ್ತಿನ ಬೀಡ, ಸಾತಾರಾ ಜಿಲ್ಲೆಗಳಲ್ಲಿ ಕೆಲವೇ ಕನ್ನಡ ಶಾಸನ ಸಿಕ್ಕಿವೆ. ಸಾತಾರಾ ಜಿಲ್ಲೆಯು ಪ್ರಾಚೀನ ಕರ್ನಾಟಕದ 'ಕರಹಾಡ ೪೦೦೦' ಪ್ರಾಂತದ ಭಾಗವಾಗಿದ್ದಿತು. ಬೀಡ ಜಿಲ್ಲೆಯಲ್ಲಿ ಲೊಕ್ಕಿಗುಂಡಿ ೫೦೦ ಸಮಾವೇಶಗೊಂಡಿದ್ದಿತು. ಹೀಗಾಗಿ, ಶೋಧಿಸಿದರೆ ಈ ಎರಡೂ ಜಿಲ್ಲೆಗಳಲ್ಲಿ ಕನ್ನಡ ಶಾಸನಗಳು ಖಂಡಿತ ಸಿಗುತ್ತವೆ. ಮಿಕ್ಕ ಪುಣೆ, ಅಹಮ್ಮದನಗರ ಜಿಲ್ಲೆಗಳ ಪೂರ್ವಾರ್ಧ ಭಾಗದಲ್ಲಿ ಶೋಧ ನಡೆಸಿದರೆ ಕನ್ನಡ ಶಾಸನ ಸಿಗುವ ಸಾಧ್ಯತೆಯಿದೆ. ಆದುದರಿಂದ ಶಾಸನಗಳು ಕರ್ನಾಟಕದಿಂದ ಕಳೆಚಿಹೋದ ಇಷ್ಟು ಭಾಗವನ್ನು ಪತ್ತೆ ಹಚ್ಚಿಕೊಡುತ್ತವೆ. ಮಹಾರಾಷ್ಟ್ರದ ಈ ಕನ್ನಡ ಶಾಸನಗಳಿಗೂ ಕರ್ನಾಟಿಕದ ಕನ್ನಡ ಶಾಸನಗಳಿಗೂ ಭಾಷೆ, ಸಾಹಿತ್ಯ, ಶೈಲಿ, ವಸ್ತುಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಇವು ಕರ್ನಾಟಕದವು, ಅವು ಮಹಾರಾಷ್ಟ್ರದವು ಎಂದು ಪ್ರತ್ಯೇಕಿಸಲು ಬಾರದಂತೆ ಈ ಕನ್ನಡ ಶಾಸನಗಳ ಸ್ವರೂಪವಿದೆ.

ಒಟ್ಟಿನಲ್ಲಿ ಮಹಾರಾಷ್ಟ್ರದ ಕನ್ನಡ ಶಾಸನಗಳೆಂದರೆ ೧೧ ರಿಂದ ೧೩ನೆಯ ಶತಮಾನದ ವರೆಗಿನ ಗೋದಾವರಿ ದಕ್ಷಿಣದ–ಸಹ್ಯಾದ್ರಿ ಪಶ್ಚಿಮದ ಬಯಲುನಾಡಿನ ಶಾಸನಗಳೇ ಆಗಿವೆ. ಈ ಅವಧಿಯಲ್ಲಿ ಈ ಪ್ರದೇಶದಲ್ಲಿ ಹುಟ್ಟಿ ಈವರೆಗೆ ಶೋಧವಾಗಿರುವ ಕನ್ನಡ ಶಾಸನಗಳ ಸ್ಥೂಲ ವಿವರ ಹೀಗಿದೆ:

೧. ನಾಂದೇಡ ಜಿಲ್ಲೆ–೩೮   ೨. ಉಸ್ಮಾನಾಬಾದ ಜಿಲ್ಲೆ–೨೪

೩. ಸೊಲ್ಲಾಪುರ ಜಿಲ್ಲೆ–೭೦   ೪. ಸಾಂಗ್ಲಿ ಜಿಲ್ಲೆ–೫೬

೫. ಕೊಲ್ಲಾಪುರ ಜಿಲ್ಲೆ–೪೪ ೬. ಬೀಡ ಜಿಲ್ಲೆ–೫

೭. ಸಾತಾರ ಜಿಲ್ಲೆ–೦೩ ೮. ಪ್ರಿನ್ಸ್ ಆಫ್ ವೇಲ್ಸ್ ಮ್ಯುಜಿಯಂ–೧೬

೯. ಬರೋಡಾ ಮ್ಯುಜಿಯಂ–೦೨ ೧೦. ಔರಂಗಾಬಾದ ಜಿಲ್ಲೆ–೦೩

೧೧. ಅಕೋಲಾ ಜಿಲ್ಲೆ–೦೬ ೧೨. ಪರಭಣಿ ಜಿಲ್ಲೆ–೦೧

೧೩. ಠಾಣಾ ಜಿಲ್ಲೆ–೦೧ ೧೪. ಪೇಶ್ವೆದಫ್ತರ–೧

– ಹೀಗೆ ೨೭೦ ಶಾಸನಗಳು ಈವರೆಗೆ ಶೋಧವಾಗಿದ್ದು, ಇವುಗಳಲ್ಲಿ ಸುಮಾರು ೧೭೦ ಶಾಸನಗಳ ಪಾಠ (Text) ಪ್ರಕಟವಾಗಿದೆ.

೮. ಕನ್ನಡ ಶಾಸನಗಳ ಸ್ವರೂಪ ಲಕ್ಷಣ

೧೧ರಿಂದ ೧೩ನೆಯ ಶತಮಾನದ ಕಾಲಾವಧಿ ಕರ್ನಾಟಕದಲ್ಲಿಯ ಕನ್ನಡ ಶಾಸನಗಳ ಇತಿಹಾಸದಲ್ಲಿ ಸುವರ್ಣಯುಗ. ನುಣುಪಾದ ಶಿಲೆ, ಶುದ್ಧ ಭಾಷೆ, ಸಮೃದ್ಧ ಸಾಹಿತ್ಯದೃಷ್ಟಿಯಿಂದ ಕನ್ನಡ ಶಾಸನಗಳಿಗೆ ಒಂದು 'ಸಿದ್ಧರೂಪ' ಪ್ರಾಪ್ತವಾದ ಕಾಲವಿದು. ಈ ಲಕ್ಷಣ ಮಹಾರಾಷ್ಟ್ರದಲ್ಲಿ ಸಿಗುವ ಕನ್ನಡ ಶಾಸನಗಳಿಗೂ ಅನ್ವಯಿಸುತ್ತದೆ. ಇದರ ವಿವರ ಹೀಗಿದೆ : (೧) ಇವು ನುಣುಪಾದ ಶಿಲೆಯ ಮೇಲೆ ಕೆತ್ತಿದ ಶಾಸನಗಳಾಗಿವೆ. (೨) ಮಹಾರಾಷ್ಟ್ರದ ಶಾಸನ ಸಂಖ್ಯೆ ವರ್ಧಿಸಿದೆ. (೩)ಕನ್ನಡ ಭಾಷೆ ಸಂಸ್ಕೃತಪದಗಳಿಂದ ಪ್ರೌಢವಾಗಿದೆ. (೪) ಅಕ್ಷರಗಳು ಆಕರ್ಷಕವಾಗಿವೆ. (೫)ಸಾಹಿತ್ಯ ಚಂಪೂರೂಪದ ಪ್ರೌಢಿಮೆಯಿಂದ ಶೋಭಿಸುತ್ತದೆ. (೬) ಶಾಸನಗಳು ೧೦೦ ಸಾಲಿನಷ್ಟು ವಿಸ್ತಾರವಾಗಿವೆ.

೯. ಕನ್ನಡ ಶಾಸನಗಳ ಲಿಪಿ

ಮಹಾರಾಷ್ಟ್ರದಲ್ಲಿ ಸಿಗುವ ಪ್ರಾಕೃತಶಾಸನಗಳಿಗೆ ಬ್ರಾಹ್ಮೀ ಲಿಪಿಯನ್ನು ಬಳಸಲಾಗಿದೆ. ಸಂಸ್ಕೃತ, ಮರಾಠಿ ಶಾಸನಗಳಿಗೆ ನಾಗರಲಿಪಿಯನ್ನು, ಕನ್ನಡ ಶಾಸನಗಳಿಗೆ ಕನ್ನಡ ಲಿಪಿಯನ್ನು ಬಳಸಿದ್ದರೂ ಕೆಲವೊಮ್ಮೆ ಇವುಗಳಲ್ಲಿ ಲಿಪಿ ವ್ಯತ್ಯಾಸ ತೋರಿ ಬರುತ್ತದೆ.

ಕನ್ನಡ ಭಾಷೆ–ಕನ್ನಡ ಲಿಪಿ : ಒಂದೆರಡು ಕನ್ನಡ ಶಾಸನಗಳಿಗೆ ಮಾತ್ರ ನಾಗರಲಿಪಿ ಬಳಸಿರುವುದನ್ನು ಬಿಟ್ಟರೆ ಮಹಾರಾಷ್ಟ್ರದಲ್ಲಿ ಸಿಗುವ ಎಲ್ಲ ಕನ್ನಡ ಶಾಸನಗಳಿಗೂ ತಪ್ಪದೇ ಕನ್ನಡ ಲಿಪಿಯನ್ನು ಬಳಸಲಾಗಿದೆ. ಇದು ಶಾಸನ ಬರೆಯಿಸಿದ ಗ್ರಾಮಗಳಲ್ಲಿ ಕನ್ನಡ ಭಾಷೆಯನ್ನು ಮಾತನಾಡಬಲ್ಲವರು, ಕನ್ನಡ ಲಿಪಿಯನ್ನು ಬರೆಯಬಲ್ಲವರು, ಹೀಗೆ ಬರೆದುದನ್ನು ಓದಬಲ್ಲವರು ಇದ್ದುದನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಕನ್ನಡ ಭಾಷೆಯನ್ನು ತಾಮ್ರಶಾಸನಗಳಿಗಿಂತ ಶಿಲಾಶಾಸನಗಳಲ್ಲಿ ಹೆಚ್ಚು ಬಳಸಲಾಗಿದೆ. ಶಿಲಾಶಾಸನಗಳು ಸಾರ್ವಜನಿಕ ಮೌಲ್ಯಪ್ರಸಾರದ

ಮಾಧ್ಯಮಗಳಾಗಿರುವುದರಿಂದ ಆ ಪ್ರದೇಶದ ಸಾರ್ವಜನಿಕರು ಕನ್ನಡವನ್ನೇ ಮಾತೃಭಾಷೆಯಾಗಿಟ್ಟುಕೊಂಡು ಅದರ ಜೊತೆಗೆ ಸಹಜವಾಗಿಯೇ ಕನ್ನಡ ಲಿಪಿಯನ್ನು ಬಳಸುತ್ತಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ಇಲ್ಲಿ ಬಳಸಲಾದ ಕನ್ನಡ ಭಾಷೆ-ಲಿಪಿಗಳಿಗೂ ಕರ್ನಾಟಕದಲ್ಲಿ ಬಳಸಲಾದ ಭಾಷೆ- ಲಿಪಿಗಳಿಗೂ ಏನೂ ವ್ಯತ್ಯಾಸವಿಲ್ಲದುದರಿಂದ ಮಹಾರಾಷ್ಟ್ರದ ಈ ಭಾಗದ ಜನತೆ ಅಚ್ಚಗನ್ನಡಿಗರೇ ಆಗಿದ್ದರೆಂದು ಹೇಳಬೇಕಾಗುತ್ತದೆ.

ಕನ್ನಡೇತರ ಭಾಷೆ-ಕನ್ನಡ ಲಿಪಿ: ಮಹಾರಾಷ್ಟ್ರದ ಅನೇಕ ಸಂಸ್ಕೃತ ಮತ್ತು ಮರಾಠಿ ಶಾಸನಗಳಿಗೂ* ಕನ್ನಡ ಲಿಪಿ ಬಳಸಿದುದು ಕುತೂಹಲದ ವಿಷಯವಾಗಿದೆ. ಭಾಷೆ ಮತ್ತು ಲಿಪಿಗಳಲ್ಲಿ ಭಾಷೆ ಸಾಮಾಜಿಕ ಸಂಪರ್ಕದಿಂದ ಮಾತನಾಡಲು ಬರುತ್ತದೆ. ಲಿಪಿಯನ್ನು ಶ್ರಮವಹಿಸಿ ಕಲಿಯಬೇಕಾಗುತ್ತದೆ. ಇದನ್ನು ನೋಡಿದರೆ ಈ ಶಾಸನಗಳಿದ್ದ ಪ್ರದೇಶದಲ್ಲಿ ಶ್ರಮವಹಿಸಿ ಕನ್ನಡ ಲಿಪಿ ಕಲಿಯುವುದು ಅವಶ್ಯವಾಗಿರುವಷ್ಟು ಈ ಭಾಷೆ ಅಲ್ಲಿ ಗಾಢವಾಗಿದ್ದಿತೆಂದು ವ್ಯಕ್ತವಾಗುತ್ತದೆ. ಹೀಗಾಗಿ ಜೀವಂತ ಭಾಷೆಯಾಗಿದ್ದ ಮರಾಠಿ ಮತ್ತು ಗತಭಾಷೆಯಾದ ಸಂಸ್ಕೃತಗಳೆರಡಕ್ಕೂ ನಾಗರಿಗೆ ಬದಲು ಕನ್ನಡಲಿಪಿ ಬಳಸುವುದು ಸುಲಭವೆನಿಸುವಂತೆ ಕನ್ನಡಲಿಪಿ ಅಲ್ಲಿ ಜೀವಂತವಾಗಿರಬಹುದು. ಹಾಗೆ ನೋಡಿದರೆ ಮಹಾರಾಷ್ಟ್ರದಲ್ಲಿ ಸಿಗುವ ಶಾಸನಗಳಿಗೆ ಕನ್ನಡ ಭಾಷೆಗಿಂತ ಮೊದಲು ಕನ್ನಡ ಲಿಪಿ ಬಳಕೆಯಾಗಿದೆ. ಉದಾ: ಕಲ್ಯಾಣ ಚಾಲುಕ್ಯರಿಗಿಂತ ಮೊದಲಿನ ಅನೇಕ ಸಂಸ್ಕೃತ ಶಾಸನಗಳಿಗೆ ಕನ್ನಡ ಲಿಪಿಯನ್ನು ಬಳಸಿದ ಉದಾಹಣೆಗಳಿವೆ.** ಲಿಪಿ ಸೌಂದರ್ಯವೂ ಒಬ್ಬ ಕನ್ನಡ ಲಿಪಿಕಾರ ಬರೆದಂತೆ ಪ್ರಮಾಣ ಬದ್ಧ, ಸಹಜಸುಂದರವಾಗಿವೆಯೇ ಹೊರತು, ಅನ್ಯಭಾಷಿಕನು ಅನುಕರಿಸಿ ಬರೆದಂತಿಲ್ಲ. 'ಈ ಸಾಸನಾಕ್ಷರಮಂ ಬರೆದು ಪೊಯ್ದಂ ಧರ್ಮೋಜಂ' (ತಡಖೇಲ್-ದೇಗಲೂರು-ತಾಲೂಕು-ನಾಂದೇಡ ಜಿಲ್ಲೆ: ಕ್ರಿ. ಶ. ೧೦೪೭) ಎಂಬ ವಾಕ್ಯ, ಈ ಶಾಸನ ಪಾಠವನ್ನು ಕಲ್ಲಿನ ಮೇಲೆ ಸುಣ್ಣದಿಂದ ಬರೆದವನೂ ಉಳಿಯಿಂದ ಕೊರೆದವನೂ ಒಬ್ಬ ಸಾಮಾನ್ಯ ಕಲ್ಲುಕುಟಿಗನೆಂದು ತಿಳಿಸುವುದರಿಂದ, ಅಲ್ಲಿ ಕನ್ನಡ ಲಿಪಿಯ ಬಳಕೆ ಸ್ಥಳೀಯ ಕಲ್ಲುಕುಟಿಗರ ಕೈವರೆಗೂ ಹೋಗಿದ್ದಿತೆಂದು ಹೇಳಬೇಕಾಗುತ್ತದೆ.

೧೦. ಕನ್ನಡ ಶಾಸನಗಳ ಭಾಷಾಸ್ವರೂಪ

ಮಹಾರಾಷ್ಟ್ರದ ಕನ್ನಡ ಶಾಸನಗಳು ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯ, ಕಲಚುರಿ ಮತ್ತು ಸೇವುಣರ ಅವಧಿಯಲ್ಲಿ ಹುಟ್ಟಿದುವು. ಈ ಅವಧಿಯಲ್ಲಿ ಕನ್ನಡ ಶಾಸನಗಳು ಭಾಷೆ, ವಿಷಯ ವಿನ್ಯಾಸ ದೃಷ್ಟಿಯಿಂದ ಒಂದು ಸಿದ್ಧರೂಪವನ್ನು ಹೊಂದಿದ್ದವು. ಹೀಗಾಗಿ ದೇವತಾಸ್ತುತಿ, ನಗರ, ರಾಜವಂಶ, ದೇವಾಲಯ, ಆಚಾರ್ಯ ಮೊದಲಾದ ವರ್ಣನೆಗಳಲ್ಲಿ ಇಲ್ಲಿಯ ಶಾಸನಗಳು ಸಂಸ್ಕೃತ ಭೂಯಿಷ್ಠ ಗದ್ಯ – ಪದ್ಯ ರೂಪದ ಚಂಪೂಶೈಲಿಯನ್ನು ಬಳಸಿವೆ. ಗಟ್ಟಿಮುಟ್ಟಾದ

---

* ಗೋವೆಯ ಖೋಟೆಗ್ರಾಮ ತಾಮ್ರಪಟ (ಶಕ ೧೨೭೦)ದಲ್ಲಿ, ಗೋವೆಯ ವೇರಗ್ರಾಮದ ತಾಮ್ರಪಟ (ಶಕ ೧೨೭೧)ದಲ್ಲಿ ಕನ್ನಡ ಲಿಪಿ ಬಳಸಲಾಗಿದೆ.

** ದೇವ ೪೩೨ (ನಾಗದ-ಕನ್ನಡ-ಔರಂಗಾಬಾದ : ತಾಮ್ರಪಟ ಕ್ರಿ. ಶ. ೬೫೫. ಸೇಂದ್ರಕ ನಿಕುಂಭಾಲ್ಲಶಕ್ತಿ)

ಹಳಗನ್ನಡ ಭಾಷೆ ಇಲ್ಲಿ ವಿಪುಲ ಪ್ರಮಾಣದಲ್ಲಿ ಕಾಲೂರಿನಿಂತಿದೆ. ಆದರೆ ಶಾಸನಗಳ ಉತ್ತರಾರ್ಧದ ದಾನವಿವರ ಪ್ರಸಂಗದಲ್ಲಿ ನಿತ್ಯ ವ್ಯವಹಾರದ ನಡುಗನ್ನಡ ಗದ್ಯ ಪ್ರವೇಶಿಸಿದೆ. ಉದಾ: "ಕರಡಿ ಕಲ್ಲಲು ಕೊಟ್ಟ ಸ್ಥಳವೃತ್ತಿ: ಘಳೆಯ ಮತ್ತರು ೫೦ ಹಾಳಕೆಯಿ. ಘಳೆಯ ಮತ್ತರು ೭ ಗದ್ದೆ, ಘಳೆಯ ಮತ್ತರು ೨ ಹಾಳಕೆಯ್ಯ, ಸಮೀಪ(ದ)ಲು ತೋಂಟ ೧, ದೇವರಿಂ ತೆಂಕ ಪುರದ ಮನೆ ೧, ಗ(ದ್ದೆ) ಘಳೆಯ ಮತ್ತರು ೩, ಪುರದಿಂ ಮೂಡ ಘಳೆಯ ಮತ್ತರು ೩, ಮೂಡಣ ಮಾಳಿಗೆಯ ಮೇಲೆ ಘಳೆಯ ಮತ್ತರು ೩, ಸ್ಥಳದಲೂರ ಮುಂದೆ ತೋಂಟ ೨, ಅಲ್ಲಿ ಮನೆಯ ನಿವೇಶಣಂ ೪, ಕೂಡಲ ಗದ್ದೆ ಮತ್ತರು ೧." ಮಹಾರಾಷ್ಟ್ರದ ಜನಸಮೂಹದಲ್ಲಿ ಅಂದು ಜೀವಂತವಿದ್ದ ಕನ್ನಡ ಗದ್ಯಕ್ಕೆ ಮಾದರಿಯಿದು. ಇದಲ್ಲದೆ ಭಾಷೆ ತನ್ನ ಗಾಢಪ್ರಸಾರದಿಂದಾಗಿ ವಿಕಲ್ಪರೂಪಗಳಿಂದಲೂ ಬಳಕೆಯಾಗುತ್ತಿದ್ದುದಕ್ಕೆ ಹೇರು–ಪೇರು, ಹೆಗ್ಗಡೆ–ಪೆರ್ಗ್ಗಡೆ, ಗಾಮುಣ್ಡ–ಗಾವುಣ್ಡ–ಗೌಣ್ಡ, ನಖರ–ನಗರ, ಪೊಗಳ್ತೆ–ಪೊಗರ್ತ್ತೆ, ಕಾಲಂ ಕಳ್ಚಿ– ಕಾಲಂ ಕರ್ಚಿ ಇತ್ಯಾದಿ ಪ್ರಯೋಗಗಳು ನಿದರ್ಶನವೆನಿಸಿವೆ. ಶಕಟರೇಫ, ರಳ, ಕುಳಗಳನ್ನು ಸರಿಯಾಗಿಯೇ ಬಳಸಿದುದು ಅಂದು ಮಹಾರಾಷ್ಟ್ರದಲ್ಲಿ ಕನ್ನಡ ಶುದ್ಧರೂಪದಲ್ಲಿಯೇ ಬಳಕೆಯಾಗುತ್ತಿದ್ದುದನ್ನು ಸ್ಪಷ್ಟಪಡಿಸುತ್ತದೆ.

ನಿತ್ಯೋಪಯೋಗಿ ಪದಗಳಾದ ಕೆಸರುಕಲ್ಲು, ಕಂಪಣ, ಬಾಡ, ಎಂಟು ಓಟ್ಟು, ಆಯಗಾರ, ಗಡಿಂಬಗಳು ಇಲ್ಲಿ ಪದೇ ಪದೇ ಸಿಗುತ್ತವೆ. ಅಪ್ಪಿತಪ್ಪಿಯೂ ಇಲ್ಲಿಯ ಭಾಷೆಯ ಮೇಲೆ ಮರಾಠಿಯ ಪ್ರಭಾವ ಕಂಡುಬರುವುದಿಲ್ಲ. ಅಂದರೆ ಇವು ದ್ವಿಭಾಷಾ ಸಂದರ್ಭದಲ್ಲಿ ಹುಟ್ಟಿದ ಶಾಸನಗಳೆಂದು ಅನಿಸುವುದೇ ಇಲ್ಲ. ಆದುದರಿಂದ ಕನ್ನಡ ಆಗ ಈ ಪ್ರದೇಶದ ಸಾರ್ವಭೌಮ ಭಾಷೆ ಮತ್ತು ಸಾರ್ವತ್ರಿಕ ಭಾಷೆಯಾಗಿತ್ತೆಂದೂ 'ಆ ಗೋದಾವರಿ ವರಂ ಇರ್ದ ನಾಡು' ಕನ್ನಡ ಭಾಷಿಕರದಾಗಿದ್ದಿತೆಂದೂ ನಂಬುಗೆ ಹುಟ್ಟುತ್ತದೆ.

೧೧. ರಾಜಕೀಯ ವಿಭಾಗಗಳು

ಆಡಳಿತದ ಅನುಕೂಲತೆಗಾಗಿ ಈಗಿನಂತೆ ಪ್ರಾಚೀನ ಕಾಲದಲ್ಲಿಯೂ ರಾಜ್ಯವನ್ನು ವಿಭಾಗ, ಉಪವಿಭಾಗವಾಗಿ ವಿಂಗಡಿಸುತ್ತಿದ್ದರು. ಹೀಗೆ ವಿಭಾಗಿಸಿದ್ದ ಪ್ರಾಂತಗಳನ್ನು ಬೆಳ್ವೊಲ–೩೦೦, ಬನವಾಸಿ–೧೨೦೦೦ ಎಂದು ಪ್ರದೇಶ ಇಲ್ಲವೆ ಗ್ರಾಮದ ಹೆಸರಿನ ಮುಂದೆ ಅಂಕಿಯನ್ನು ಬಳಸಿ ಕರೆಯುವುದು ಪ್ರಾಚೀನ ಕರ್ನಾಟಕದ ವಿಶಿಷ್ಟ ಪದ್ಧತಿಯಾಗಿದ್ದಿತು. ಈ ಅಂಕಿ ಆಯಾ ಪ್ರಾಂತಗಳಲ್ಲಿಯ ಗ್ರಾಮಸಂಖ್ಯೆಯನ್ನು ಸೂಚಿಸುವುದೆಂದು ಈಗ ನಿರ್ಣಯಕ್ಕೆ ಬರಲಾಗಿದೆ. ಹೀಗೆ ಅಂಕಿಗಳನ್ನು ಅಂಟಿಸಿ ಪ್ರಾಂತಗಳನ್ನು ಕರೆಯುವ ಪದ್ಧತಿ ಎಲ್ಲಿಯ ವರೆಗೆ ಇದೆಯೋ ಅಷ್ಟು ಭಾಗ ಕರ್ನಾಟಕ, ಅದರಾಚೆಗಿನದು ಕರ್ನಾಟಕವಲ್ಲವೆಂದು ಹೇಳಬಹುದಾಗಿದೆ. ಈ ದೃಷ್ಟಿಯಿಂದ ಮಹಾರಾಷ್ಟ್ರದ ಶಾಸನಗಳನ್ನು ಪರಿಶೀಲಿಸಿದರೆ ಘಟ್ಟದ ಪಶ್ಚಿಮಕ್ಕಿರುವ, ಗೋದಾವರಿಯ ಉತ್ತರಕ್ಕಿರುವ ಪ್ರದೇಶದ ಶಾಸನಗಳಲ್ಲಿ ಆರ್ಯಪದ್ಧತಿಯಂತೆ ಭುಕ್ತಿ, ಅಹಾರ, ದೇಶ, ವಿಷಯ, ಪ್ರಾಂತ ಎಂಬಂಥ ಪದಗಳನ್ನು, ಮಿಕ್ಕ ಸಾತಾರಾ, ಕೊಲ್ಲಾಪೂರ, ಸಾಂಗಲಿ, ಸೊಲ್ಲಾಪೂರ, ಉಸ್ಮಾನಾಬಾದ, ಬೀಡ, ನಾಂದೇಡ ಜಿಲ್ಲೆಯ ಶಾಸನಗಳಲ್ಲಿ ಕರ್ನಾಟಕ ಪದ್ಧತಿಯಂತೆ ಕರಹಾಡ–೪೦೦೦, ಲೊಕ್ಕಿಗುಂಡಿ–೫೦೦, ಅವರವಾಡಿ–೭೦೦ ಎಂಬಂಥ ಪದಗಳನ್ನು

ಬಳಸಿದುದು ಕಂಡುಬರುತ್ತದೆ. ಪುಣೆ, ಅಹಮ್ಮದನಗರ ಜಿಲ್ಲೆಗಳ ಪೂರ್ವ ಭಾಗದಲ್ಲಿಯೂ ಶೋಧಿಸಿದರೆ ಇಂಥ ಉದಾಹರಣೆಗಳು ಸಿಗಬಹುದು. ಹೀಗಾಗಿ ಈ ಜಿಲ್ಲೆಗಳು ನಿಸ್ಸಂದೇಹವಾಗಿ ಕರ್ನಾಟಕಕ್ಕೆ ಸೇರಿದುದಾಗಿವೆ. ಹಾಗೆಯೇ ವಾಯವ್ಯಕ್ಕೆ ಮುಂದುವರಿದರೆ ಸೇವುಣ ದೇಶದ ವಿಭಾಗವಾದ ಶ್ರೀನಗರ-೨೫೦೦, ಮತ್ತು ಈ ಶ್ರೀನಗರ-೨೫೦೦ರ ಉಪವಿಭಾಗವಾದ ಸಂಗಮನೇರ-೮೪ಗಳ ಉಲ್ಲೇಖಗಳು ಸಿಗುತ್ತವೆ. ಶ್ರೀನಗರವೆಂದರೆ ಇಂದಿನ ನಾಸಿಕ ಜಿಲ್ಲೆಯ ಸಿನ್ನೇರ; ಸಂಗಮನೇರ ಎಂಬುದು ಇಂದಿನ ಅಹಮ್ಮದನಗರ ಜಿಲ್ಲೆಯ ಸಂಗಮನೇರ. ಹೀಗಾಗಿ ನಾಸಿಕ ಜಿಲ್ಲೆಯ ಕೆಳಗಿನ ಸ್ವಲ್ಪ ಭಾಗವೂ, ಇಡಿಯಾಗಿ ಅಹಮ್ಮದನಗರ ಜಿಲ್ಲೆಯೂ ಮೂಲತಃ ಕರ್ನಾಟಕದ ಭಾಗವಾಗಿರಬಹುದು. ಇಷ್ಟು ವಿವರಣೆಯೊಂದಿಗೆ ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಸಿಗುವ ರಾಜಕೀಯ ವಿಭಾಗಗಳನ್ನು ಹೀಗೆ ಸೂಚಿಸಬಹುದು.

ಕರಹಾಡ-೪೦೦೦ : ಸಾತಾರಾ ಜಿಲ್ಲೆಯ ತಾಲೂಕು ಸ್ಥಳವಾದ ಇಂದಿನ ಕರಾಡವನ್ನು ಕೇಂದ್ರವಾಗಿಟ್ಟುಕೊಂಡ ೪೦೦೦ ಹಳ್ಳಿಗಳ ಪ್ರಾಂತವಿದು. ಇದರಲ್ಲಿ ಸಾತಾರ ಜಿಲ್ಲೆಯ ದಕ್ಷಿಣಭಾಗ, ಸಾಂಗಲಿ ಜಿಲ್ಲೆಯ ಬಹುಭಾಗ, ವಿಜಾಪುರ ಜಿಲ್ಲೆಯ ಕನಮಡಿಯನ್ನೊಳಗೊಂಡ ಭಾಗ ಸಮಾವೇಶವಾಗಿದ್ದು, ಇದರ ಒಂದು ತುದಿ ಪಶ್ಚಿಮ ಘಟ್ಟವನ್ನು ಇನ್ನೊಂದು ತುದಿ ಇಂದಿನ ಕರ್ನಾಟಕದ ಪಶ್ಚಿಮ ಗಡಿರೇಖೆಯನ್ನು ಮುಟ್ಟಿದ್ದವು. ಈ ಪ್ರಾಂತದ ಉಲ್ಲೇಖ ಉಮರಾಣಿ, ವಳಸಂಗ, ಸಂಖ, ಬೀಳೂರು ಶಾಸನಗಳಲ್ಲಿ ಬರುತ್ತದೆ.

ಇದು ಕಣಂಬಡೆ ೩೦೦ನ್ನು (ವಿಜಾಪುರ ಜಿಲ್ಲೆಯ ಕನಮಡಿ) ಒಳಗೊಂಡಿದ್ದ ವಿಷಯ ವಳಸಂಗ, ಬೀಳೂರು, ಸಿದ್ಧನಾಥ, ಕೋಳಗಿರಿ ಶಾಸನಗಳಲ್ಲಿದೆ. ಡೊಂಗರಗಾವೆಯು ಇದರಲ್ಲಿ ಸಮಾವೇಶವಾಗಿದ್ದಿತು. ಉಂಬರವಾಣಿ-೩೬ನ್ನೂ (ಜತ್ತ ತಾಲೂಕಿನ ಉಮ್ರಾಣಿ) ಒಳಗೊಂಡಿದ್ದ ವಿಷಯ ಉಮರಾಣಿ ಶಾಸನದಲ್ಲಿದೆ. ಈ ಪ್ರಾಂತವನ್ನು ವಿಕ್ರಮಾದಿತ್ಯನ ಮಗ ಯುವರಾಜ ಮಲ್ಲಿಕಾರ್ಜುನನು ಆಳಿದ ವಿಷಯ ಅಥಣಿ ತಾಲೂಕು ರಾಮತೀರ್ಥ ಶಾಸನದಲ್ಲಿದೆ. ಕಲಚುರಿಗಳು ಆಳಿದ ಸಂಗತಿ ಅನೇಕ ಶಾಸನಗಳಲ್ಲಿ ಬರುತ್ತದೆ. ಕಲಚುರಿ ಮೈಲುಗಿದೇವನ ಬಾಳಮಣಿ ಶಾಸನ (೧೧೫೬)ದ ಪ್ರಕಾರ 'ಏಳು ಹನ್ನೆರಡು' ಹೆಸರಿನ ಪ್ರಾಂತ ಕರಹಾಡ ೪೦೦೦ದಲ್ಲಿ ಸಮಾವೇಶವಾಗಿದ್ದಿತೆಂದು ತಿಳಿದುಬರುತ್ತದೆ.

ತರಿಕಾಡು ನಾಡು; ಕಲಚುರಿಗಳು ಮಂಡಲೇಶ್ವರರಾಗಿ ಆಳುತ್ತಿದ್ದ ಈ ಪ್ರಾಂತದ ರಾಜಧಾನಿ ಸೊಲ್ಲಾಪುರ ಜಿಲ್ಲೆಯ ಮಂಗಳವೇಡ. ಇದರ ಉಲ್ಲೇಖ ಸಂಖ ಮತ್ತು ಮಾಳಿಗೆ ಶಾಸನದಲ್ಲಿದೆ. ಮಾಳಿಗೆ ಗ್ರಾಮವು ಇದರಲ್ಲಿ ಸಮಾವೇಶವಾಗಿದ್ದಿತು. ಇದು ಅಂಕುಲಗೆ-೫೦ನ್ನು ಒಳಗೊಂಡಿದ್ದಿತೆಂದು ಸಂಖ ಶಾಸನ ತಿಳಿಸುತ್ತದೆ. ಅಂಕುಲಗೆ ೫೦ರಲ್ಲಿ ಕರಂಡಗೆ, ಆಸೆಯ, ಅರಳಿಗೆ, ಖೈರಳಿಗೆ ಗ್ರಾಮಗಳು ಸೇರಿದ್ದ ವಿಷಯ ಸಂಖದ ೩ ಶಾಸನಗಳಲ್ಲಿದೆ. (ತರಿಕಾಡು ನಾಡಿನಲ್ಲಿ ೩೦೦ ಗ್ರಾಮಗಳಿದ್ದುದಾಗಿ ಇಂಡಿ ತಾಲೂಕಿನ ಚಿಕ್ಕನಿಂಬರಗಿ ಶಾಸನದಿಂದ ತಿಳಿದುಬರುತ್ತದೆ.)

ಮಿರಿಂಜೆದೇಶ : ಕೊಲ್ಲಾಪುರ ಶಾಸನದಲ್ಲಿ ಇದರ ಉಲ್ಲೇಖವಿದ್ದು ಕೋರಂಬಿ ಗ್ರಾಮ ಇದರಲ್ಲಿ ಸಮಾವೇಶವಾಗಿದ್ದಿತು. (ಮಿರಿಂಜೆ-೩೦೦೦ ಎಂದು ಬೇರೆ ಶಾಸನಗಳಲ್ಲಿ ಬರುವುದರಿಂದ ಇದರಲ್ಲಿ ೩೦೦೦ ಗ್ರಾಮಗಳು ಸಮಾವೇಶವಾಗಿದ್ದಿವೆಂದು ಗೊತ್ತಾಗುತ್ತದೆ.)

ಅಣಂದೂರು-೩೦೦: ಉಸ್ಮಾನಾಬಾದ ಜಿಲ್ಲೆಯ ತುಳಜಾಪುರ ತಾಲೂಕಿನ ಅಣದೂರು ಕೇಂದ್ರವಾಗುಳ್ಳ ೩೦೦ ಹಳ್ಳಿಗಳ ಪ್ರಾಂತ. ಇದರ ಉಲ್ಲೇಖ ಸೊಲ್ಲಾಪುರ ಜಿಲ್ಲೆ ಮತ್ತು ಉಸ್ಮಾನಾಬಾದ

ಜಿಲ್ಲೆಯ ಶಾಸನಗಳಲ್ಲಿ ಬರುತ್ತದೆ. ಇದರಲ್ಲಿ ಅಂಕುಲಗೆ-೮೦, ಮಂಡುಬೆ (ಮಂದುಬ್ಬೆ, ಮಂದುರ್ವೆ) ೩೦, ವಂಗಿ-೩೦, ಕುಂಬರಿಗಾವೆ-೬೦ ಸಮಾವೇಶವಾಗಿದ್ದವು. ಇವು ಕ್ರಮವಾಗಿ ಇಂದಿನ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ, ಮಂದ್ರೂಪ, ವಾಂಗಿ, ಕುಂಬರ್‌ಗಾವ್ ಗ್ರಾಮಗಳಾಗಿವೆ. ಅಂಕುಲಗೆ ೮೦ರಲ್ಲಿ ಚಿಟ್ಟೆಯನ ಕರಂಜಿಗೆ, ಚಟ್ಟಣವಾವಿ, ಜೇವುರಗೆ, ಚಿಕ್ಕ ಕವುಟಗೆ, ಜಂಬುಗಾವೆ, ನಿಲೇಗಾವ, ಇಟ್ಕಲ್ ಗ್ರಾಮಗಳು ಸೇರಿದ್ದವು. ಮಂಡುಬೆ-೩೦ರಲ್ಲಿ ಭಂಡಾರಕವಠೆ ಸೇರಿದ್ದಿತು. ಹನ್ನಿಪಳ್ಳಿಯು ಅಣಂದೂರು-೩೦೦ರಲ್ಲಿ ಸೇರಿದ್ದ ವಿಷಯ ಅಣದೂರ ಶಾಸನದಲ್ಲಿದೆ.

ಅಲಂದೆ-೧೦೦೦: ಈಗಿನ ಗುಲಬರ್ಗಾ ಜಿಲ್ಲೆಯ ತಾಲೂಕು ಸ್ಥಳವಾದ ಆಲಂದೆಯನ್ನು ಕೇಂದ್ರವಾಗುಳ್ಳ ೧೦೦೦ ಹಳ್ಳಿಗಳ ಪ್ರಾಂತ. ಇದರಲ್ಲಿ ಗೆಜ್ಜೆ-೭೦೦, ಮೊರಂಬ-೮೦, ಐವತ್ತೇಳು ಬಾಡ, ಕವಿಟಗೆ-೧೫ ಸಮಾವೇಶವಾಗಿದ್ದವು. ಇಲ್ಲಿಯ ಮೊರಂಬವೆಂಬುದು ಈಗಿನ ಉಸ್ಮಾನಾಬಾದ ಜಿಲ್ಲೆಯ ಮುರಮ್. ಮೊರಂಬ-೮೦ರಲ್ಲಿ ದಾಳಿಂಬ-೧೨ ಅಂದರೆ ಇಂದಿನ ಉಸ್ಮಾನಾಬಾದ ಜಿಲ್ಲೆಯ ಉಮರ್ಗಾ ತಾಲೂಕಿನ ದಲಿಮ್ ಗ್ರಾಮವು ಕೇಂದ್ರವಾಗುಳ್ಳ ೧೨ ಹಳ್ಳಿಗಳ ವಿಭಾಗವು ಸಮಾವೇಶವಾಗಿದ್ದಿತು. ಈ ೧೨ರಲ್ಲಿ ಒಂದು ಗ್ರಾಮ ಚಿಂಚಹಳ್ಳಿ. ಐವತ್ತೇಳುಂಬಾಡ ವಿಭಾಗದ ಉಲ್ಲೇಖ ಉಸ್ಮಾನಾಬಾದ ಜಿಲ್ಲೆಯ ಉಮರ್ಗಾ ತಾಲೂಕಿನ ನರಂಗವಾಡಿ ಅಂದರೆ ಈಗಿನ ನಾಗರ ಕವಡಿಕೆ ಶಾಸನದಲ್ಲಿ ಬರುತ್ತದೆ. ಕವಿಟಗೆ-೧೫ ಈ ಐವತ್ತೇಳುಂಬಾಡದ ಒಂದು ಭಾಗವಾಗಿರಬಹುದು. ನರಂಗವಾಡಿ ಶಾಸನದಲ್ಲಿ 'ಮೂವತ್ತಾರುಂ ಬಾಡ'ದ ಉಲ್ಲೇಖ ಬರುತ್ತಿದ್ದು, ಬಹುಶಃ ಇದೂ ಅಲಂದೆ-೧೦೦೦ ರ ಉಪವಿಭಾಗವಾಗಿರಬೇಕು.

ಮನ್ನೆದಡಿ-೧೦೦೦ : ಈ ಉಲ್ಲೇಖ ಅಪ್ರಕಟಿತ ಶಾಸನವೊಂದರಲ್ಲಿದೆ. ಉಸ್ಮಾನಾಬಾದ ಜಿಲ್ಲೆಯ ನಿಲಂಗಾ ತಾಲೂಕಿನ ಮುದುಗಡ ಈ ಗ್ರಾಮ. ಇದರ ಪರಸರವೇ ಮನ್ನೆದಡಿ-೧೦೦೦ ಎಂದು ಡಾ. ಶೇಳ್ಕೆ ಹೇಳುತ್ತಾರೆ.

ಮಾರುಡಿ-೮೦ : ಇದು ಸೊಲ್ಲಾಪುರ ತಾಲೂಕಿನ ಭಾಗವಾಗಿದ್ದಿತೆಂದು ಡಾ. ರಿತ್ತಿ ಹೇಳುತ್ತಾರೆ.

ಕುರುವಲಗೆ ನಾಡು: ಪುಳುಂಜಶಾಸನ (ಸೊಲ್ಲಾಪುರ ಜಿಲ್ಲೆ)ದಲ್ಲಿ ಇದರ ಉಲ್ಲೇಖವಿದೆ. ಪುಳುಂಜದಿಂದ ಮೈಲು ದೂರದ ಕುರುಲಗ್ರಾಮ ಮುಖ್ಯವಾಗಿದ್ದ ಪ್ರಾಂತವಿದು.

ಲೊಕ್ಕಿಗುಂಡಿ-೫೦೦: ಬೀಡ ಜಿಲ್ಲೆಯ ಧರ್ಮಪುರಿ ಶಾಸನದಲ್ಲಿ ಲೊಕ್ಕಿಗುಂಡಿ-೫೦೦ ಎಂಬ ವಿಭಾಗದ ಉಲ್ಲೇಖ ಬರುತ್ತದೆ. ಈ ಲೊಕ್ಕಿಗುಂಡಿ ಯಾವುದೋ ಈಗ ಗೊತ್ತಾಗುವುದಿಲ್ಲ(ಲೋಖಂಡೆ ಎಂಬ ಅಡ್ಡಹೆಸರನ್ನು ಇಲ್ಲಿ ನೆನೆಯಬಹುದು).

ಎರಡಿರ್ಛಾಸಿರ : ತಲಾ ಒಂದು ಸಾವಿರ ಹಳ್ಳಿಗಳನ್ನೊಳಗೊಂಡ ಎರಡು ಪ್ರಾಂತಗಳ ಸಂಯುಕ್ತ ವಿಭಾಗವಿದು. ಇವುಗಳಲ್ಲಿ ಒಂದು ಪ್ರಾಂತದ ಹೆಸರು ಸಹಸ್ರ ಮಂಡಳ ಅಥವಾ ಸಾಯಿರಬಾಡ. ಈ ಸಹಸ್ರ ಮಂಡಳದ ರಾಜಧಾನಿ ಕರಡಿಕಲ್ಲು ಅಂದರೆ ನಾಂದೇಡ ಜಿಲ್ಲೆಯ ದೇಗಲೂರು ತಾಲೂಕಿನ ಕರಾಡಖೇಡ. ಇದರಲ್ಲಿ ಅವರವಾಡಿ-೭೦೦ ಸೇರಿದ್ದಿತು. ಇದು ಬಿಲೋಳಿ ತಾಲೂಕಿನ ಇಂದಿನ ಅವರಾಲಾ ಆಗಿರಬಹುದು. ಈ ಅವರವಾಡಿ-೭೦೦ರಲ್ಲಿ ಕಲ್ಲುಕುಂಬರಿಗೆ ಅಂದರೆ ಬಹುಶಃ ಅವರಾಲಾ ಸಮೀಪದ ಇಂದಿನ ಕುಂಬರ್‌ಗಾವ್ ಮತ್ತು ಆಲೂರು, ಬೋರಿಗಾವೆ,

ದಯಸವಳಿಗೆ, ಗಾವುಂಡಗಾವೆ, ಗುಕ್ಕಾವೆ, ಹಿಪ್ಪಳಗಾವೆ, ಕಾವಳಿಗಾವೆ, ನೇರಿಲಿಗೆ ಗ್ರಾಮಗಳು ಸೇರಿದ್ದವು. ಬಹುಶಃ ಸಕ್ಕರಿಗೆ-೮೦ (೯೦?) ಸಹಸ್ರಮಂಡಲದ ಇನ್ನೊಂದು ವಿಭಾಗ. ಇದರಲ್ಲಿ ಭಾಯಿಗಾವೆ ಮತ್ತು ಎಕ್ಕಲಗಾವೆ, ತಡಕಲ್ಲುಗಳು ಸಮಾವೇಶವಾಗಿದ್ದವು. ಸಾವಿರ ಹಳ್ಳಿಗಳ ಇನ್ನೊಂದು ಪ್ರಾಂತವನ್ನು ಇನ್ನೂ ಶೋಧಿಸಬೇಕಾಗಿದೆ.

ಬೋದನ-೭೦೦: ಕರಾಡಖೇಡ ಶಾಸನದಲ್ಲಿ ಇದರ ಉಲ್ಲೇಖ ಬರುತ್ತದೆ. ಇದು ಇಂದಿನ ಆಂಧ್ರಪ್ರದೇಶದ ನಿಜಾಮಬಾದ ಜಿಲ್ಲೆಯ ತಾಲೂಕು ಸ್ಥಳ. ಇದರ ಒಂದು ಭಾಗವಾದ ಕಂಪಣ-೨೪ ಈಗ ಮಹಾರಾಷ್ಟ್ರಕ್ಕೆ ಸೇರಿದ ಪ್ರದೇಶವಾಗಿದೆ. ೨೪ ಹಳ್ಳಿಗಳ ಈ ವಿಭಾಗದ ಕೇಂದ್ರ ಪಟ್ಟಣ ಸವರವಳ್ಳಿ ಅಂದರೆ ಇಂದಿನ ನಾಂದೇಡ ಜಿಲ್ಲೆಯ ಬಿಲೋಳಿ ತಾಲೂಕಿನ ಸಗ್ರೋಳಿ.

ಕುಹುಂಡಿನಾಡು: ಇದು ೩೦೦೦ ಗ್ರಾಮಗಳ ಪ್ರಾಂತ. ಕೊಲ್ಲಾಪುರ ಶಾಸನದಲ್ಲಿ ಇದರ ಉಲ್ಲೇಖವಿದೆ. ಇಡೀ ಬೆಳಗಾವ ಜಿಲ್ಲೆಯನ್ನು ವ್ಯಾಪಿಸಿದ್ದ ಇದರ ಕೆಲವು ಭಾಗ ಇಂದಿನ ಮಹಾರಾಷ್ಟ್ರದಲ್ಲಿ ಚಾಚಿಕೊಂಡಿರಬಹುದು. ಈ ಪ್ರಾಂತದ ಕೇಂದ್ರ ಪಟ್ಟಣ ಕುಹುಂಡಿ. ಇದನ್ನು ಗೊತ್ತು ಹಚ್ಚುವುದು ಇನ್ನೂ ಸಾಧ್ಯವಾಗಿಲ್ಲ. ಬಹುಶಃ ಚಿಕ್ಕೋಡಿ, ಹಿರೇಕೋಡಿ ಗ್ರಾಮಗಳ ಹೆಸರನ್ನು ಚಿಕ್ಕ ಕುಹುಂಡಿ, ಹಿರಿಯ ಕುಹುಂಡಿ ಎಂದು ಬಿಡಿಸಿ ಇವುಗಳಲ್ಲಿ ಒಂದು, ಪ್ರಾಚೀನ ಕುಹುಂಡಿ ಪಟ್ಟಣವಾಗಿರಬೇಕೆಂದು ಊಹಿಸಬಹುದಾಗಿದೆ. ಕೊಲ್ಲಾಪುರ ಶಾಸನವು ಈ ಪಟ್ಟಣದಲ್ಲಿ ಆದಿತ್ಯ ಗೃಹ ಅಂದರೆ ಸೂರ್ಯದೇವಾಲಯವಿದ್ದುದನ್ನು ಸೂಚಿಸುತ್ತದೆ. ಈ ಸೂಚನೆಯನ್ನು ಆಧಾರವಾಗಿಟ್ಟುಕೊಂಡು ಈ ನಗರವನ್ನು ಇನ್ನೂ ಖಚಿತವಾಗಿ ಹುಡುಕಬಹುದಾಗಿದೆ(ಈ ನಗರ ಇಂದಿನ ಪಟ್ಟಣಕೋಡಿಯೆಂದು ಇತ್ತೀಚೆ ಸ್ಪಷ್ಟವಾಗಿದೆ).

ಏಳು ಹನ್ನೆರಡು: 'ಮೈಲುಗಿದೇವರಸರಾಳ್ಕೆಯ ಕರಹಡ ನಾಲ್ಕು ಸಾಸಿರದ ಬಳಿಯ ಯೇಳುಂ ಹಂನೆರಡರೊಳಗಣ ಶ್ರೀಮತು ರಾಜಧಾನಿ ಬಾಳಮಣಿಗೆಯಲು ಗವರೇಶ್ವರ ದೇವರಿಗೆ' ಎಂಬ ವಾಕ್ಯ ಬಾಳಮಣಿ (ಸಾಂಗಲಿ-ಖಾನಾಪೂರ) ಶಾಸನ (೧೧೫೬)ದಲ್ಲಿ ಬರುತ್ತದೆ.

ಸೇವುಣದೇಶ: ಇದರ ಉಲ್ಲೇಖ ನಾಂದೇಡ ಜಿಲ್ಲೆಯ ತಡಖೇಲ ಶಾಸನದಲ್ಲಿದೆ. ಯಾದವರ ಮನೆತನದ ಹೆಸರಾಗಿರುವಂತೆ ಇದು ಅವರ ರಾಜ್ಯದ ಹೆಸರೂ ಆಗಿದೆ. ಅಶ್ವೀ ತಾಮ್ರಪಟದಲ್ಲಿ ನರ್ಮದಾ ಸೇವುಣದೇಶದಲ್ಲಿ ಹರಿಯುವುದೆಂದೂ, ಕಳೇಗಾವ ತಾಮ್ರಪಟದಲ್ಲಿ ಗೋದಾವರಿಯು ಸೇವುಣದೇಶದ ಆಭರಣದಂತಿದೆಯೆಂದೂ, ಸ್ವಯಂಭುವಿನ 'ಪವುಮಚರಿಅ'ದಲ್ಲಿ ಸೇವುಣದೇಶದ ಅಮೃತಪ್ರವಾಹ ಭೀಮರಥಿ ಎಂದೂ ಹೇಳಿರುವುದರಿಂದ ನರ್ಮದಾ, ಗೋದಾವರಿ, ಭೀಮಾನದಿಗಳನ್ನೊಳಗೊಂಡುದೇ ಸೇವುಣದೇಶವೆಂದು ಹೇಳಬಹುದು. ಇದು ನಾಸಿಕ ಜಿಲ್ಲೆಯ ಸಿನ್ನಾರಗ್ರಾಮವನ್ನು ಒಳಗೊಂಡು ಅಹಮ್ಮದನಗರ, ಬೀಡ, ಉಸ್ಮಾನಾಬಾದ, ಸೊಲ್ಲಾಪುರ ಜಿಲ್ಲೆಗಳನ್ನೊಳಗೊಂಡಿದ್ದಿತೆಂದು ವಿದ್ವಾಂಸರು ಹೇಳುತ್ತಾರೆ.

ಇವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿ ಅವರು ಕನಹೈರಿ ಕಂಪಣ, ನಿಧಿವಾಸ ಕಂಪಣಗಳು ಇದರ ಭಾಗಗಳೆಂದು ಹೇಳುತ್ತಾರೆ. ಡಾ. ಮಿರಾಶಿಯವರು ಕನಹೈರಿಯು ಖಾನದೇಶದ ಚಾಳಿಸಗಾವಕ್ಕೆ ೮ ಮೈಲು ದೂರವಿರುವ ಕನ್ಹೇರಾ ಎಂದು, ನರಸಿಂಹಮೂರ್ತಿ ಅವರು ನಿಧಿವಾಸವು ಅಹಮ್ಮದ ನಗರ ಜಿಲ್ಲೆಯ ತಾಲ್ಲೂಕು ಸ್ಥಳವಾದ ನೇವಾಸವೆಂದು ಹೇಳುತ್ತಾರೆ. ಇಲ್ಲಿಯ 'ಕಂಪಣ' ಎಂಬ ಕನ್ನಡ ಪದಗಳನ್ನು ಗಮನಿಸಬೇಕು. ಬಹುಶಃ ಖಾನದೇಶದ ಇಂದಿನ ಚಾಳಿಸಗಾವ್

ಎಂಬುದು ಕನ್ನಡದ ನಾಲ್ವತ್ತುಂಬಾಡ ಎಂಬುದರ ಮರಾಠಿ ಅನುವಾದ. ಇದು ೪೦ ಹಳ್ಳಿಗಳ ವಿಭಾಗವಾಗಿರಬಹುದು. ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿಯೂ ನಾಲ್ವತ್ತುಂಬಾಡ (ಈಗಿನ ನಾಲ್ವತ್ತವಾಡ ಕೇಂದ್ರವಾಗುಳ್ಳುದು) ಹೆಸರಿನ ವಿಭಾಗವಿದ್ದುದನ್ನು ಇಲ್ಲಿ ನೆನೆಯಬಹುದು.

ಇವುಗಳಲ್ಲದೆ ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಇಂದಿನ ಕರ್ನಾಟಕ ಹಲಸಿಗೆ ೧೨೦೦೦, ಬನವಾಸಿ ೧೨೦೦೦, ತರ್ದವಾಡಿ ೧೦೦೦ ಪ್ರಾಂತಗಳ ಉಲ್ಲೇಖ ಆನುಷಂಗಿಕವಾಗಿ ಬರುತ್ತದೆ. ಒಟ್ಟಿನಲ್ಲಿ ಈ ಶಾಸನಗಳು ಮಹಾರಾಷ್ಟ್ರದಲ್ಲಿ ಮರೆಯಾಗಿರುವ ಕರ್ನಾಟಕದ ಅನೇಕ ಪ್ರಾಂತಗಳನ್ನು ಸೂಚಿಸುತ್ತ, ಇವು ಕಾಲಾನಂತರದಲ್ಲಿ ಕರ್ನಾಟಕದಿಂದ ಕಳಚಿಹೋದವೆಂದು ಸ್ಪಷ್ಟಪಡಿಸುತ್ತವೆ. ಮಹಾರಾಷ್ಟ್ರದ ಎಲ್ಲ ಭಾಷೆಯ ಶಾಸನಗಳನ್ನು ಅಭ್ಯಾಸಕ್ಕೆ ಅಳವಡಿಸಿಕೊಂಡಲ್ಲಿ ಅದರ ಪ್ರಾಚೀನ ವಿಭಾಗಗಳನ್ನು ಇನ್ನೂ ವಿವರವಾಗಿ, ಖಚಿತವಾಗಿ ಪುನರ್ರಚಿಸಲು ಸಾಧ್ಯವಾಗುತ್ತದೆ.

೧೨. ರಾಜಕೀಯ ಇತಿಹಾಸ

ಕ್ರಿ. ಶ. ೧೭ನೆಯ ಶತಮಾನದಿಂದ ಈಚೆ ಇಂದಿನ ಕರ್ನಾಟಕದ ಬಹುಭಾಗ ಮರಾಠರ ಕೈಯಲ್ಲಿದ್ದರೆ, ೧೩ನೆಯ ಶತಮಾನದಿಂದ ಆಚೆ ಇಂದಿನ ಮಹಾರಾಷ್ಟ್ರದ ಬಹುಭಾಗ ಕನ್ನಡಿಗರ ಕೈಯಲ್ಲಿದ್ದುದು ಒಂದು ಯೋಗಾಯೋಗ. ಆದರೆ ಮರಾಠರು ತಮ್ಮದಲ್ಲದ ಪ್ರದೇಶವನ್ನು ಆಳಿದರು, ಕನ್ನಡಿಗರು ತಮ್ಮದೇ ಪ್ರದೇಶವನ್ನು ಆಳಿದರೆಂಬುದನ್ನು ಇಲ್ಲಿ ಮರೆಯಲಾಗದು.

ಮೌರ್ಯರು, ಶಾತವಾಹನರು, ವಾಕಾಟಕರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಕ್ರಮವಾಗಿ ಮಹಾರಾಷ್ಟ್ರವನ್ನಾಳಿದ್ದು, ಇವರಲ್ಲಿ ಶಾತವಾಹನರ ವರೆಗೆ ಪ್ರಾಕೃತ, ಆಮೇಲೆ ಸಂಸ್ಕೃತ ಶಾಸನಗಳು ಹುಟ್ಟಿವೆ. ರಾಷ್ಟ್ರಕೂಟರ ತರುವಾಯ ಕ್ರಮವಾಗಿ ಅಧಿಕಾರಕ್ಕೆ ಬಂದ ಕಲ್ಯಾಣ ಚಾಲುಕ್ಯರು, ಕಲಚುರಿಗಳು, ಸೇವುಣರು ಇವರ ಕಾಲದಲ್ಲಿ ಮಾತ್ರ ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು ತಲೆಯೆತ್ತಿದ್ದು, ಈ ಕನ್ನಡ ಶಾಸನಗಳು ಕಟ್ಟಿಕೊಡುವ ಈ ಅರಸರ ಮತ್ತು ಇವರ ಮಾಂಡಲಿಕರ ವಿವರಗಳು ಹೀಗಿವೆ:

ಕಲ್ಯಾಣ ಚಾಲುಕ್ಯರು: ಮಹಾರಾಷ್ಟ್ರದ ಒಟ್ಟು ಕನ್ನಡ ಶಾಸನಗಳ ಅರ್ಧದಷ್ಟು ಕಲ್ಯಾಣ ಚಾಲುಕ್ಯರಿಗೆ, ಈ ಚಾಲುಕ್ಯರ ಶಾಸನಗಳ ಅರ್ಧದಷ್ಟು ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿವೆ. ಇವು ಅನುಷಂಗಿಕವಾಗಿ ತಮ್ಮ ಪೂರ್ವಜರಾದ ಬಾದಾಮಿ ಚಾಲುಕ್ಯರ ಪ್ರಸ್ತಾಪ ಮಾಡುತ್ತಿದ್ದರೂ ಕಲ್ಯಾಣ ಚಾಲುಕ್ಯರೇ ಇವುಗಳ ಮುಖ್ಯ ವಸ್ತು. ಈ ವಂಶದ ಜಗದೇಕಮಲ್ಲ ಜಯಸಿಂಹ IIನ ಕ್ರಿ. ಶ. ೧೦೧೩ ರ ಮುರಮ್ (ಉಸ್ಮಾನಾಬಾದ ಜಿಲ್ಲೆ–ಉಮರ್ಗಾ ತಾಲೂಕು) ಶಾಸನವೇ ಇಂದಿನ ಮಹಾರಾಷ್ಟ್ರದಲ್ಲಿ ಲಭಿಸಿದ ತೇದಿಯುಳ್ಳ ಪ್ರಥಮ ಕನ್ನಡ ಶಾಸನವಾಗಿದೆ. ಇದು ಈತನ ಆಳಿಕೆಯನ್ನು ೩ ವರ್ಷ ಹಿಂದಕ್ಕೆ ಒಯ್ಯುತ್ತಿದೆ.

ಈತನ ಮಗ ಸೋಮೇಶ್ವರ I ನು (೧೦೪೩–೧೦೬೮) ಮಾಳವ ಪರಮಾರ ಭೋಜನನ್ನು ರಾಜಧಾನಿ ಧಾರಾದಿಂದ ಓಡಿಸಿದ, ಕೊಂಕಣ ಶಿಲಾಹಾರ ಮಾರಸಿಂಹನನ್ನು ಸೋಲಿಸಿದ ಸಂಗತಿಗಳನ್ನು ತಿಳಿಸುವ ಪ್ರಥಮ ಶಾಸನ ನಾಂದೇಡ ಜಿಲ್ಲೆಯ ದೇಗಲೂರ ತಾಲೂಕಿನ ತಡಖೇಲ

(೧೦೪೭) ಗ್ರಾಮದ್ದಾಗಿದೆ. ಈ ಎರಡೂ ಯುದ್ಧಗಳಲ್ಲಿ ಮುಖ್ಯಪಾತ್ರ ವಹಿಸಿದ ದಂಡನಾಯಕ ನಾಗವರ್ಮನು ಚಕ್ರಕೂಟದ ಧಾರಾವರ್ಷನನ್ನು ಸೋಲಿಸಿದುದನ್ನು ಸೂಚಿಸುತ್ತ, 'ಸವಲಕ್ಕ ವಿಂಧ್ಯಮಂ ಪರಿದೆಯ್ದಿ ವಿಂಧ್ಯಪತಿ ಮಲ್ಲನನಾಜಿಯೊಳಾಂತು ಕೊಂದ', 'ಉರಿಸಿದನೊಂದೆ ಕೊಳ್ಳಿಯೊಳೆ ಸೇವುಣದೇಶಮುಮಂ' ಎಂಬ ಹೊಸ ವಿಷಯಗಳನ್ನೂ ಈ ಶಾಸನ ಹೇಳುತ್ತದೆ. ಇದಲ್ಲದೆ ಈತನು ಡಂಗ, ವರಾಳಗಳನ್ನೂ ಗೆದ್ದ ವಿಷಯವಿಲ್ಲಿದೆ. ಈ ನಾಗವರ್ಮನಲ್ಲದೆ ಏಕಲಾರ ಗ್ರಾಮದ ಒಂದು ಶಾಸನದಿಂದ ದಂಡನಾಯಕ ಕಾಳಿದಾಸಯ್ಯನ ಮಗ ಕೇಶರಾಜ, ಇನ್ನೊಂದು ಶಾಸನದಿಂದ ಅಮರಾವತೀಪುರಾಧೀಶ್ವರ ಕರ್ಪರಸ ಎಂಬ ಬೇರೆ ಇಬ್ಬರು ಸೋಮೇಶ್ವರನ I ನ ಅಧಿಕಾರಿಗಳಾಗಿದ್ದರೆಂದು ತಿಳಿದುಬರುತ್ತದೆ.

ಈತನ ಮಗ ಸೋಮೇಶ್ವರ II (೧೦೬೮–೭೬). ದೇಗಲೂರು ತಾಲೂಕಿನ ಕರಾಡಖೇಡದ ಎರಡು ಶಾಸನ, ಬಿಮ್ರಾದ ಒಂದು ಶಾಸನಗಳು ವಹ್ನಿವಂಶದ ಕಲಿಚೋರ ಮೊದಲಾದವರು ಈತನ ಮಂಡಳೇಶ್ವರರಾಗಿದ್ದುದನ್ನು ತಿಳಿಸುತ್ತವೆ. (ಇದನ್ನು ಹೊಟ್ಟುಲ ಗ್ರಾಮದ ಸಂಸ್ಕೃತ ಶಾಸನವೂ ಪುಷ್ಟಿಸುತ್ತದೆ).

ಸೋಮೇಶ್ವರ II ನ ತಮ್ಮ ವಿಕ್ರಮಾದಿತ್ಯ VI (೧೧೭೬–೧೧೨೭). ಮಹಾರಾಷ್ಟ್ರದ ಕನ್ನಡ ಶಾಸನಗಳು ಈತನ ಅನೇಕ ಅಧಿಕಾರಿಗಳನ್ನೂ ರಾಣಿಯರನ್ನೂ ಹೊಸದಾಗಿ ಸೂಚಿಸುತ್ತವೆ. ಮಾಣಿಕ ಭಂಡಾರಿ ದಂಡನಾಯಕ ಚಟ್ಟಪ್ಪಯ್ಯ (ಏರಿಗಿ), ಮಹಾಮಂಡಲೇಶ್ವರಿ ರೆಬ್ಬಲದೇವಿ (ಆದಮ್‌ಪುರ), ಕೊಪಣಪುರವರಾಧೀಶ್ವರ ನಾಗರಸ (ಮುರಮ್), ಮಹಾಮಂಡಲೇಶ್ವರ ಸಾಮಂತ ಠಕ್ಕುರ (ಕರಾಡಖೇಡ), ದಂಡನಾಯಕ ಮನೆವೆಗ್ಗಡೆ ನಾಚಿಯರಸ, ಪಸಾಯಿತ ಯೊಕ್ಕಪಯ್ಯ (ಸಗ್ರೋಳಿಯ ಎರಡು ಶಾಸನ), ಮಾಣಿಕ್ಯ ಭಂಡಾರಿ ರುದ್ರದಂಡಾಧೀಶ (ಕರಾಡಖೇಡ), ಮಹಾಮಂಡಲೇಶ್ವರ ಮದನಕರ್ಣರಸ (ಕರಾಡಖೇಡ), ಎರೆಯಮರಸ (ಬಿಮ್ರಾ), ಪಾರಿಖ ಮಾರಸಿಂಗ (ಪಿಪ್ಪಲಗಾವ್), ಚೋಳವಂಶದ ಅಹವಮಲ್ಲರಸ (ದಲಿಮ್)–ಇವರು ಮೊಟ್ಟ ಮೊದಲ ಸಲ ಮಹಾರಾಷ್ಟ್ರದ ಕನ್ನಡ ಶಾಸನಗಳಿಂದ ಬೆಳಕಿಗೆ ಬರುತ್ತಾರೆ. ಇವರಲ್ಲಿ ಯೊಕ್ಕಪಯ್ಯನು ವಿಕ್ರಮಾದಿತ್ಯನ ಮಗ 'ತೈಲಪದೇವನ ಚಿತ್ತಸಂತೋಷಂ' ಆಗಿದ್ದರೆ, ಅಹವಮಲ್ಲರಸನು 'ಕಾವೇರಿ ಉಭಯತಟ ರಾಜಹಂಸ'ನೆನಿಸಿದ್ದಾನೆ.

'ರಾಜಾನಾಂ ಬಹುವಲ್ಲಭಾ' ಎಂಬಂತೆ ಈ ವಿಕ್ರಮಾದಿತ್ಯನಿಗೆ ಕರ್ನಾಟಕದ ಅರಸರಲ್ಲಿಯೇ ಅಧಿಕ ಜನ ಪತ್ನಿಯರಿದ್ದರು. ಬಿಮ್ರಾ ಶಾಸನವು ಮಲ್ಲಣಿದೇವಿ, ಸುಗ್ಗಲದೇವಿ ಎಂಬ ಇಬ್ಬರನ್ನು ಹೊಸದಾಗಿ ಪರಿಚಯಿಸುತ್ತದೆ. ವಾಜಿವಂಶದ ನಾಗರಾಜನು 'ಮಲ್ಲಣಿದೇವಿಯ ಮನೆಯೊಳು ಶುಚಿದಕ್ಷನಾಗಿ ಮಾಣಿಕಭಂಡಾರದ ನಿಯೋಗಮಂ' ಹೊಂದಿದ್ದನೆಂದೂ, ಸುಗ್ಗಲದೇವಿಯು ರೇವಣೇಶ್ವರ ದೇವರಿಗೆ ದತ್ತಿ ಬಿಟ್ಟಳೆಂದೂ ಈ ಶಾಸನ ತಿಳಿಸುತ್ತದೆ. ಬೇರೆ ಶಾಸನಗಳಿಂದ ತಿಳಿದು ಬಂದಿರುವ ಮಲಯಮತಿಯರಸಿಯ ಉಲ್ಲೇಖ ಏತಾಳ ಸ್ತಂಭಶಾಸನದಲ್ಲಿದೆ. ಬಹುಶಃ ಇದು ಇವಳ ಮರಣಸ್ಮಾರಕವಾಗಿರಬಹುದು.

ವಿಕ್ರಮಾದಿತ್ಯನ ಹಿರಿಯ ಮಗ ಮಲ್ಲಿಕಾರ್ಜುನನ ಉಲ್ಲೇಖ ಸಂಗಮದ ಎರಡು ಸಂಸ್ಕೃತ ಶಾಸನಗಳಲ್ಲಿದ್ದರೂ ಇವುಗಳಲ್ಲಿ ಒಂದರ ಲಿಪಿ ಕನ್ನಡ. ಇನ್ನೊಬ್ಬ ಮಗ ತೈಲಪನು ಸಗ್ರೋಳಿಯನ್ನಾಳುತ್ತಿದ್ದನೆಂದೂ ಯೊಕ್ಕಪಯ್ಯನು ಈತನ ಪಸಾಯಿತನಾಗಿದ್ದನೆಂದೂ ಸಗ್ರೋಳಿ ಶಾಸನ ತಿಳಿಸುತ್ತದೆ.

ವಿಕ್ರಮಾದಿತ್ಯನ ಕಾಲದ ಬಿಮ್ರಾಶಾಸನ (೧೧೨೨)ವು ಬಾದಾಮಿ ಚಾಲುಕ್ಯ ವಂಶವು ಕೀರ್ತಿವರ್ಮ II ನ ಕಾಲಕ್ಕೆ ಕೊನೆಗೊಂಡ ಸತ್ಯವನ್ನು ಸಾರುತ್ತದೆ. ಇದಲ್ಲದೆ ಷಣ್ಮುಖನಿಂದ ನವಿಲುಧ್ವಜ, ಮಹಿಷಮರ್ದಿನಿಯಿಂದ ಆರು ಬೆಳ್ಗೊಡೆ, ವಿಷ್ಣುವಿನಿಂದ ವರಾಹ ಮುದ್ರೆಯನ್ನು ಬಾದಾಮಿ ಚಾಲುಕ್ಯರು ಪಡೆದಿದ್ದ ವಿಷಯವೂ ಈ ಶಾಸನದಲ್ಲಿದೆ. ವಾಜಿವಂಶದ ನಾಗವರ್ಮ (ನಾಗರಾಜ)ನ ಉಲ್ಲೇಖವೂ ಇಲ್ಲಿದ್ದು, ಈತನು ಸೋಮೇಶ್ವರ I ನ ಕಾಲದ ನಾಗವರ್ಮ (ತಡಕಲ್ ಶಾಸನ)ನಿಂದ ಭಿನ್ನನಾಗಿದ್ದಾನೆ.

ವಿಕ್ರಮಾದಿತ್ಯನ ಮಗ ಸೋಮೇಶ್ವರ III (೧೧೨೭-೧೧೩೮). ಕರಾಡಖೇಡದ ಎರಡು ಶಾಸನ, ಏರಿಗೆಯ ಒಂದು ಶಾಸನಗಳಲ್ಲಿ ಎರಡಿರ್ಭಾಸಿರನಾಡನ್ನಾಳುತ್ತಿದ್ದ ಈತನ ಮಹಾಮಂಡಲೇಶ್ವರ ಎರೆಯಮರಸನ ಉಲ್ಲೇಖ ಬರುತ್ತದೆ. ಈತನು ತಂದೆ ವಿಕ್ರಮಾದಿತ್ಯ VI ನ ಕಾಲದಲ್ಲಿಯೂ ಮಹಾಮಂಡಲೇಶ್ವರನಾಗಿದ್ದ ವಿಷಯ ಬಿಮ್ರಾ ಶಾಸನದಲ್ಲಿದೆ. ಕರಾಡಖೇಡದ ಇನ್ನೊಂದು ಶಾಸನ ಈ ಸೋಮೇಶ್ವರನ ಉತ್ತರ ದಿಗ್ವಿಜಯವನ್ನು ಸೂಚಿಸುತ್ತ, ರುದ್ರದಂಡಾಧೀಶನ ಮಗ ಶ್ರೀಧರಯ್ಯನು "ಮಹಾಪ್ರಧಾನ, ತಂತ್ರಾಧಿಷ್ಠಾಯಕ, ಪಿಜೆಯರಸಿ ಪಟ್ಟಮಹಾದೇವಿರ ಮನೆವೆರ್ಗಡೆ"ಯಾಗಿ ಅವರವಾಡಿ-೭೦೦, ಬೋಧನ-೭೦೦ ರ ಸಾಮಂತಿಕೆಯನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಮೇಲೆ ಹೇಳಿದ ಇಬ್ಬರಲ್ಲದೆ ಮಂಗರಸನೆಂಬ ಅಧಿಕಾರಿಯ ಉಲ್ಲೇಖವೂ ಇಲ್ಲಿ ಹೊಸದಾಗಿ ಸಿಗುತ್ತದೆ. ಈತನು ಮಾಳವದೇಶದ ಜಗದ್ದೇವನನ್ನು ಸೋಲಿಸಿನೆಂಬುದು, ಸೋಮೇಶ್ವರನಿಗೆ ರಾಜಲದೇವಿ ಹೆಸರಿನ ರಾಣಿಯಿದ್ದಳೆಂಬುದು ಪ್ರಥಮಸಲ ಬೆಳಕಿಗೆ ಬರುವ ಸಂಗತಿಗಳಾಗಿವೆ.

ಸೋಮೇಶ್ವರ III ನ ಮಗ ಜಗದೇಕಮಲ್ಲ II. ಈತನ ಉಲ್ಲೇಖ ಕರಾಡಖೇಡ ಶಾಸನದಲ್ಲಿದೆ. ತಂದೆ ಸೋಮೇಶ್ವರನ ಕಾಲದಲ್ಲಿಯೂ ಇದ್ದ ಮಹಾಮಂಡಲೇಶ್ವರ ಎರೆಯಮರಸನು ಈತನ ಕಾಲದಲ್ಲಿಯೂ ಆಳುತ್ತಿದ್ದನೆಂದು ಏರಿಗಿ ಶಾಸನ ತಿಳಿಸುತ್ತದೆ.

ಜಗದೇಕಮಲ್ಲ II ನ ತಮ್ಮನಾದ ತೈಲಪ III ನ ಮಗ ಸೋಮೇಶ್ವರ IV. ತಂದೆ ತೈಲಪನು ಕಲಚುರಿಗಳಿಗೆ ಸೋತ ಸಾಮ್ರಾಜ್ಯವನ್ನು ಮರಳಿ ಪಡೆದವನೀತ. ಹೂಬನ್ನೂರದಲ್ಲಿ ಬೀಡಾರ ಬಿಟ್ಟ ಸಂದರ್ಭದಲ್ಲಿ ಮಹಾಪ್ರದಾನ ಸೇನಾಪತಿ ಬಮ್ಮಿ ದೇವರಸನೊಂದಿಗೆ ಈತನು 'ಗುಡಿವೆಪ್ರಿಯ ಸ್ವಯಂಭೂ ಸೋಮನಾಥ'ನಿಗೆ ಸೋರಡಿ ಗ್ರಾಮವನ್ನು ದಾನಬಿಟ್ಟ ಉಲ್ಲೇಖ ಗುಡ್ಡಾಪುರ ಶಾಸನದಲ್ಲಿದೆ.

ಕಲಚುರಿಗಳು: ಕಲ್ಯಾಣ ಚಾಲುಕ್ಯ ಸಿಂಹಾಸನವನ್ನು ಆಕ್ರಮಿಸುವ ಮೊದಲು ಕಲಚುರಿ ಬಿಜ್ಜಳ ಮತ್ತು ಇವನ ಪೂರ್ವಜರು ಮಂಗಳವೇಡ ರಾಜಧಾನಿಯಿಂದ ತರಿಕಾಡು ನಾಡನ್ನು ಮತ್ತು ಕರಹಾಡ ರಾಜಧಾನಿಯಿಂದ ಕರಹಾಡ ೪೦೦೦ ನ್ನು ಆಳುತ್ತಿದ್ದರು. ಇವೆರಡೂ ಪ್ರಾಂತಗಳು ಈಗ ಮಹಾರಾಷ್ಟ್ರದ ಭಾಗಗಳಾಗಿರುವುದರಿಂದ ಕಲಚುರಿಗಳ ಈ ಅವಧಿಯ ಚಟುವಟಿಕೆಗಳನ್ನು ತಿಳಿದುಕೊಳ್ಳಲು ಮಹಾರಾಷ್ಟ್ರದ ಶಾಸನಗಳೇ ದೊಡ್ಡ ಆಧಾರ ಸಾಮಗ್ರಿಯಾಗಿವೆ. ಸಂಸ್ಕೃತ ಹೆಸರುಗಳನ್ನು ಬಿಟ್ಟರೂ ಕನ್ನಮ, ಅಮ್ಮುಗಿ, ಜೋಗಮ, ಬಿಜ್ಜಳ, ಪೆರ್ಮಾಡಿ, ಸಂಕಮ, ಮೈಳುಗಿ ಹೆಸರುಗಳು ಈ ಅರಸರ ಅಚ್ಚಗನ್ನಡತನವನ್ನು ಸ್ಪಷ್ಟಪಡಿಸುತ್ತವೆ. ಇವರ ಕನ್ನಡ ಶಾಸನಗಳಲ್ಲಿ ತೀರ ಉತ್ತರಕ್ಕೆ ಸಿಕ್ಕುದು ಗೋದಾವರಿ ಆಚೆಗಿನ ನಾಂದೇಡ ಜಿಲ್ಲೆಯ ಬಿಲೋಳಿ ತಾಲೂಕಿನ ಜುನ್ನಿಗ್ರಾಮದ್ದಾಗಿದೆ. ತೀರ ಪಶ್ಚಿಮಕ್ಕೆ ಸಿಕ್ಕುದು ಸಾತಾರ ಜಿಲ್ಲೆಯ ಆಟಪಾಡಿ ತಾಲೂಕಿನ ಭಿವಘಾಟದ್ದಾಗಿದೆ.

ಈ ಮನೆತನದ ಮೊದಲನೆಯ ಬಿಜ್ಜಳನ ಅಣ್ಣನ ಮಗನಾದ ಅಮ್ಮುಗಿದೇವನು ಆಳುತ್ತಿದ್ದ ವಿಷಯವನ್ನು ಮಹಾರಾಷ್ಟ್ರದ ಮೂರು ಶಾಸನಗಳು ಮಾತ್ರ ತಿಳಿಸುತ್ತವೆ. ಅವು ದಕ್ಷಿಣ ಸೊಲ್ಲಾಪುರ ಜಿಲ್ಲೆಯ ಭಂಡಾರಕವಠೆ (೧೦೭೯), ಮಂದ್ರೂಪ (೧೦೭೯), ನಿಂಬರಗಿ (೧೦೮೦) ಗ್ರಾಮಕ್ಕೆ ಸಂಬಂಧಿಸಿವೆ. ಈ ಶಾಸನಗಳಲ್ಲಿ ಚಕ್ರವರ್ತಿಯ ಉಲ್ಲೇಖವಿಲ್ಲದುದು ಇವರು ಸ್ವತಂತ್ರರಾಗಲು ಹವಣಿಸುತ್ತಿರುವುದರ ಸೂಚನೆಯಾಗಿರಬಹುದು. ೧ನೆಯ ಬಿಜ್ಜಳನ ಮೊಮ್ಮಗ ಜೋಗಮನ ವಿಷಯ ಮಹಾರಾಷ್ಟ್ರದ ಜತ್ ತಾಲೂಕಿನ ಕೋಳಗಿರಿ, ವಳಸಂಗ, ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ, ಮಂಗಳವಾಡ, ಉಸ್ಮಾನಾಬಾದ ಜಿಲ್ಲೆಯ ತೇರ ಶಾಸನಗಳಿಂದ ತಿಳಿದುಬರುತ್ತದೆ. ಇವನ ಮೊದಲನೆಯ ಶಾಸನ ದಕ್ಷಿಣ ಸೊಲ್ಲಾಪುರ ಜಿಲ್ಲೆಯ ೧೦೮೨ರ ತೀರ್ಥಗ್ರಾಮಕ್ಕೆ ಸೇರಿದೆ. ಈತನ ಮಗ ಪೆರ್ಮಾಡಿಯ ಪ್ರಸ್ತಾಪ ಜತ್ ಗ್ರಾಮದ ಬಂಕೇಶ್ವರ ದೇವಾಲಯದ ಶಾಸನದಲ್ಲಿ ಬರುತ್ತದೆ.

ಕಲಚುರಿಗಳಲ್ಲಿ ಸುಪ್ರಸಿದ್ಧ ಅರಸು ಎರಡನೆಯ ಬಿಜ್ಜಳ. ಈತನು ಮಂಗಳವಾಡ ಮತ್ತು ಕಲ್ಯಾಣ ರಾಜಧಾನಿಗಳಿಂದ ಆಳಿದ ಉಲ್ಲೇಖಗಳು ಮಹಾರಾಷ್ಟ್ರದ ಅನೇಕ ಕನ್ನಡ ಶಾಸನಗಳಲ್ಲಿ ಸಿಗುತ್ತವೆ. ಇವನಿಗೆ ಸಂಬಂಧಿಸಿದ ಜತ್ ತಾಲೂಕಿನ ವಳಸಂಗ ಶಾಸನ (೧೧೪೨)ದಲ್ಲಿ ೬ನೆಯ ವಿಕ್ರಮಾದಿತ್ಯನ ಹೆಂಡತಿ ಚಂದಲದೇವಿಯನ್ನು ಅಭಿನವ ಶಾರದಾದೇವಿಯೆಂದೂ ಅದಕ್ಕಿಂತ ಬಿಜ್ಜಳದೇವನ 'ಮುತ್ತಬ್ಬೆ' ಎಂದೂ ಕರೆದುದು ಮಹತ್ವದ ಅಂಶವಾಗಿದೆ. ಬಹುಶಃ ಈ ಚಂದಲದೇವಿಯ ಮಗಳನ್ನು ಬಿಜ್ಜಳನ ತಂದೆ ಪೆರ್ಮಾಡಿ ಮದುವೆಯಾಗಿರಬೇಕು. ಇವಳ ಮಗನೇ ಬಿಜ್ಜಳನಾಗಿರಬೇಕು. ಈ ಕಾರಣದಿಂದಲೇ ಚಂದಲದೇವಿಯು ತನ್ನ ಮುತ್ತಬ್ಬೆಯೆಂದು ಹೆಮ್ಮೆಯಿಂದ ಹೇಳಿಕೊಂಡಂತಿದೆ. ಈಕೆಯು ಕಳಂಬಡೆ ೩೦೦ ಆಳುತ್ತಿದ್ದುದನ್ನು ಈ ಶಾಸನ ತಿಳಿಸುತ್ತದೆ.

೧೧೪೨ರ ಈ ವಳಸಂಗ ಶಾಸನವೇ ಬಿಜ್ಜಳನ ಪ್ರಥಮ ಶಾಸನವೆಂದು ಈ ಮೊದಲು ಭಾವಿಸಲಾಗಿದ್ದಿತು. ಆಮೇಲೆ ಇತ್ತೀಚೆ ಸಿಕ್ಕಿದ್ದ ಕಲಘಟಗಿ ತಾಲೂಕಿನ ತಂಬೂರ ಶಾಸನಕ್ಕೆ (೧೧೩೬ ಮೇ ೧೬) ಈ ಕೀರ್ತಿ ಪ್ರಾಪ್ತವಾಯಿತು. ಆದರೆ ಇದಕ್ಕಿಂತ ಕೆಲವು ತಿಂಗಳು ಮೊದಲಿನ (೧೧೩೬ ಜನೆವರಿ ೨೬) ಸೊಲ್ಲಾಪುರ ಶಾಸನಕ್ಕೆ, ಇನ್ನೂ ಹಿಂದಿನ (೧೧೩೫ ಫೆಬ್ರುವರಿ ೨೪) ಔರಾದ ಶಾಸನಕ್ಕೆ ಈಗ ಈ ಕೀರ್ತಿ ಸಲ್ಲುತ್ತದೆ. ಬಿಜ್ಜಳನು ಹಾನಗಲ್ಲು ಕೋಟೆಯ ಮೇಲೆ ೧೧೩೬ ಮೇ ೧೬ ರಂದು ದಾಳಿ ಮಾಡಿದ ವಿಷಯ ತಂಬೂರ ಶಾಸನದಲ್ಲಿದೆ. ಆದರೆ ೧೧೩೬ ಜನೆವರಿ ೨೦ಕ್ಕೆ ಮೊದಲೂ ಈತನು ಹಾನಗಲ್ಲ ಕೋಟೆಯ ಮೇಲೆ ದಾಳಿ ಮಾಡಿದ ವಿಷಯ ಸೊಲ್ಲಾಪುರ ಶಾಸನದಲ್ಲಿ ಬರುತ್ತದೆ. ೧೧೬೬ರ ದಕ್ಷಿಣ ಸೊಲ್ಲಾಪುರ ತಾಲೂಕಿನ ಮಾಳಕವಠೆ ಶಾಸನದಿಂದ ಬಿಜ್ಜಳನ ಹೆಂಡತಿಯ ಹೆಸರು ರಂಭಾದೇವಿಯೆಂದು ತಿಳಿದು ಬರುತ್ತಿದೆ. ಈ ಸಂಗತಿ ಈ ಮೊದಲು ಗೊತ್ತಿರಲಿಲ್ಲ. ಆಕೆ ಜೈನಬಸದಿಗೆ ದಾನ ಮಾಡಿದ ವಿಷಯವಿಲ್ಲಿದೆ.

ಈ ಬಿಜ್ಜಳನ ಮಕ್ಕಳ ಶಾನಗಳು ಬಿವಘಾಟ, ಉಮದಿ ಗ್ರಾಮಗಳಲ್ಲಿ ಸಿಗುತ್ತವೆ. ಇವರಲ್ಲಿ ಒಬ್ಬನಾದ ರಾಯಮುರಾರಿ ಸೋವಿದೇವನ ಒಬ್ಬ ರಾಣಿ ಹಾರಲದೇವಿಯ ಉಲ್ಲೇಖ ಉತ್ತರ ಸೊಲ್ಲಾಪುರ ತಾಲೂಕಿನ ಶಿವಣಿ ಶಾಸನ (೧೧೭೧) ದಲ್ಲಿ, ಇನ್ನೊಬ್ಬ ರಾಣಿ ಜ್ಯೋತಾದೇವಿಯ ಉಲ್ಲೇಖ ತುಳಜಾಪುರ ತಾಲೂಕಿನ ದಿಂಡೇಗಾವ ಶಾಸನದಲ್ಲಿ ಪ್ರಥಮ ಸಲ ಕಾಣುತ್ತವೆ. ಈ ರಾಯಮುರಾರಿ ಸೋವಿದೇವನಿಗೆ ವೀರಬಿಜ್ಜಳ ಹೆಸರಿನ ಮಗನಿದ್ದ ವಿಷಯವನ್ನು ಸಂಖಗ್ರಾಮದ ಒಂದು ಶಾಸನ (೧೧೯೩) ಮಾತ್ರ ತಿಳಿಸುತ್ತದೆ.

ಹೊಯ್ಸಳರು : ಕಲಚುರಿಗಳ ತರುವಾಯ ಯಾದವರು ಉತ್ತರ ಕರ್ನಾಟಕವನ್ನು, ಹೊಯ್ಸಳರು ದಕ್ಷಿಣ ಕರ್ನಾಟಕವನ್ನು ಬದ್ಧವೈರದಿಂದ ಆಳುತ್ತಲಿದ್ದ ಕಾರಣ ಮಹಾರಾಷ್ಟ್ರದಲ್ಲಿ ಹೊಯ್ಸಳರ ಶಾಶ್ವತ ಪ್ರವೇಶ ಸಾಧ್ಯವಾಗಲಿಲ್ಲ. ಹೀಗಿದ್ದೂ ಪಂಡರಪುರ, ಕೊಲ್ಲಾಪುರಗಳಲ್ಲಿ ಇವರ ಎರಡು ಶಾಸನಗಳು ಸಿಗುತ್ತವೆ. ಯುದ್ಧ ವಿಜಯಾನಂತರ ಪಂಡರಪುರ ಪ್ರದೇಶದಲ್ಲಿ ಬೀಡುಬಿಟ್ಟಿದ್ದ ಹೊಯ್ಸಳ ವೀರಸೋಮೇಶ್ವರನು ವಿಠ್ಠಲದೇವರ ಪೂಜೆಗಾಗಿ ೨೦೦ ವರಹಗಳನ್ನು ದಾನಮಾಡಿದ್ದಾನೆ. ಈ ಶಾಸನವನ್ನು ವಿಠ್ಠಲದೇವಾಲಯದ ತೊಲೆಯ ಮೇಲೆ ಕೆತ್ತಲಾಗಿದೆ. ಹೊಯ್ಸಳ ಬಲ್ಲಾಳರಾಯನ ಕನ್ನಡ ಭಾಷೆಯ ಕೊಲ್ಲಾಪುರ ತಾಮ್ರಪಟ ನಾಗರಿಲಿಪಿಯಲ್ಲಿದೆ (ಅಂಕಿಗಳು ಕನ್ನಡದಲ್ಲಿವೆ). ಬಹುಶಃ ಹುಬ್ಬಳ್ಳಿ ಪ್ರದೇಶದಲ್ಲಿ ಹುಟ್ಟಿರುವ ಇದು ಕೊಲ್ಲಾಪುರದಲ್ಲಿ ಸಿಕ್ಕಿರುವುದರಿಂದ ಇದನ್ನು ಮಹಾರಾಷ್ಟ್ರದ ಶಾಸನವೆಂದು ಪರಿಗಣಿಸುವಂತಿಲ್ಲ.

ಸೇವುಣರು : ಸೇವುಣರು ಔರಂಗಾಬಾದ ಜಿಲ್ಲೆಯ ದೇವಗಿರಿ (ದೌಲತಾ ಬಾದ) ರಾಜಧಾನಿಯಿಂದ ಆಳಿದರು. ಈ ಮನೆತನದ ಬಿಲ್ಲಮ, ಜೈತುಗಿ, ಸಿಂಘಣ, ಅಮ್ಮಣ, ಬಲ್ಲಾಳ ಹೆಸರುಗಳು ಇವರ ಕನ್ನಡತ್ವವನ್ನು ಸ್ಪಷ್ಟಪಡಿಸುತ್ತವೆ. ಇವರು ಕನ್ನಡಿಗರೆಂದು ಡಾ. ಎಸ್. ಎಚ್. ರಿತ್ತಿ, ಡಾ. ಎ. ವಿ. ನರಸಿಂಹಮೂರ್ತಿ ತೋರಿಸಿ ಕೊಟ್ಟಿದ್ದಾರೆ. ಸೇವುಣ ಎಂಬುದು ದೇಶವಾಚಿಯಾಗಿರುವಂತೆ ಇವರಿಗೆ ವಂಶವಾಚಿಯೂ ಆಗಿದೆ. ಇದು 'ಸೇಗುಣ' ರೂಪದಲ್ಲಿಯೂ ಸಿಗುತ್ತಿದ್ದು ಇದೇ ಸರಿಯಾದ ರೂಪವಾಗಿರಬಹುದು. ಇಂದಿಗೂ ಕರ್ನಾಟಕದಲ್ಲಿರುವ 'ಸೇಗುಣಸಿ' ಇತ್ಯಾದಿ ಹೆಸರಿನ ಗ್ರಾಮಗಳಿಗೂ ಈ ಹೆಸರಿಗೂ ಇರುವ ಸಂಬಂಧವನ್ನು ಪರೀಕ್ಷಿಸಬೇಕಾಗಿದೆ. ಚಕ್ರವರ್ತಿಯಾಗುವುದಕ್ಕೆ ಪೂರ್ವದಲ್ಲಿ ಇವರು ಮಂಡಲೇಶ್ವರರಾಗಿ ಆಳುತ್ತಿದ್ದ ಸೇವುಣದೇಶ ಇಂದಿನ ಮಹಾರಾಷ್ಟ್ರದ ಭಾಗವಾಗಿರುವುದರಿಂದ, ಇಲ್ಲಿ ಸಿಗುವ ಕನ್ನಡ ಶಾಸನಗಳು ಈ ಮನೆತನದ ಚರಿತ್ರೆಯನ್ನು ಪುನರ್ರಚಿಸಲು ತುಂಬ ನೆರವಾಗುತ್ತವೆ.

ಈ ಮನೆತನದ ಭಿಲ್ಲಮ V, ಮಗ ಜೈತುಗಿ I, ಮಗ ಸಿಂಘಣ II, ಮೊಮ್ಮಗ ಕನ್ನರ, ತಮ್ಮ ಮಹಾದೇವ ಇಷ್ಟು ಜನರ ಕನ್ನಡ ಶಾಸನಗಳು ಮಹಾರಾಷ್ಟ್ರದಲ್ಲಿ ಸಿಗುತ್ತವೆ. ಒಂದು ದೃಷ್ಟಿಯಿಂದ ಹೇಳುವುದಾದರೆ ೫ನೆಯ ಭಿಲ್ಲಮನೇ ಸೇವುಣ ವಂಶದ ನಿಜವಾದ ಸ್ಥಾಪಕ ಎಂಬಂತೆ ಆಳಿದ. ಭಿಲ್ಲಮನ ಕಾಲದಿಂದಲೇ ಕನ್ನಡ ಶಾಸನಗಳು ಪ್ರಾರಂಭವಾಗುತ್ತವೆ. ಈ ಭಿಲ್ಲಮನ ಉಲ್ಲೇಖವನ್ನೊಳಗೊಂಡ ಪದ್ಯಗಳು ರಾಜಾದಿತ್ಯನ ವ್ಯವಹಾರಗಣಿತದಲ್ಲಿ ಸಿಗುತ್ತವೆ. ಸಿಂಘಣ (II?)ನ ಉಲ್ಲೇಖ ಕಮಲಭವನ ಶಾಂತೀಶ್ವರ ಪುರಾಣದ ಗುರುಸ್ತುತಿ ಸಂದರ್ಭದಲ್ಲಿ ಬರುತ್ತದೆ. ಈತನಿಗೆ ಜೈತುಗಿಯೊಳಗೊಂಡು ಆರು ಜನ ಮಕ್ಕಳಿದ್ದ ವಿಷಯ ಇಟ್ಕಲ್‌ಶಾಸನ (೧೨೧೭) ದಿಂದ ತಿಳಿದು ಬರುವುದಾಗಿ ಡಾ. ಶೇಳ್ಕೆ ಹೇಳುತ್ತಾರೆ. ಆದರೆ ಇವರು ಉಪ್ಪರವಟ್ಟಖೇಡದ ಮಗರ ಮುರಾರಿ ಸಂಗಮದೇವನಾಯಕನ ಮಕ್ಕಳಾಗಿದ್ದಾರೆ.

ಸೊಲ್ಲಾಪುರದ ಕಪಿಲಸಿದ್ಧಮಲ್ಲಿಕಾರ್ಜುನನಿಗೆ ಸಂಬಂಧಿಸಿದ ೨೨ ಶಾಸನಗಳಲ್ಲಿ ೨೧ ಶಾಸನಗಳು ಈ ವಂಶದ ಅರಸರು ಮತ್ತು ಅಧಿಕಾರಿಗಳು ನೀಡಿದ ದಾನವನ್ನು ಉಲ್ಲೇಖಿಸುತ್ತವೆ. ಇವುಗಳಲ್ಲಿ ೬ ಶಾಸನಗಳು ಉಸ್ಮಾನಾಬಾದ ಜಿಲ್ಲೆಯ ತುಳಜಾಪುರ ತಾಲೂಕಿನ ನಿಲೇಗಾವ, ಕೇಸೆಗಾವ, ಇಟ್ಕಲ್, ಸೊಲ್ಲಾಪುರ ಜಿಲ್ಲೆಯ ಮಹೋಳ ತಾಲೂಕಿನ ಜಂಬಗಾವ, ಅಕ್ಕಲಕೋಟ ತಾಲೂಕಿನ ಅಕ್ಕಲಕೋಟಿ, ದಕ್ಷಿಣ ಸೊಲ್ಲಾಪುರ ತಾಲೂಕಿನ ಗುಂಜೇಗಾವ-ಹೀಗೆ ಮಹಾರಾಷ್ಟ್ರದಲ್ಲಿ ಸಿಗುತ್ತವೆ. ಇವು ಭಿಲ್ಲಮ V, ಜೈತುಗಿ, ಸಿಂಘಣ II ರ ಕಾಲದಲ್ಲಿ ಹುಟ್ಟಿವೆ. ಇಲ್ಲಿಯ ಭಿಲ್ಲಮನೆ

ವೀರಶೈವ 'ಭಿಲ್ಲಮರಾಯಚರಿತೆ'ಯ ಕಥಾನಾಯಕನೆಂದು ವಿದ್ವಾಂಸರು ಊಹಿಸಿದ್ದಾರೆ. ಈ ವಂಶದ ಕೊನೆಯ ಅರಸು ರಾಮಚಂದ್ರನನ್ನು 'ತಾನೊಂದನುಂಡು ಜಂಗಮಕೊಂದನಿಕ್ಕದತಿಮಾನನಿಧಿ' ಎಂದು ಲಕ್ಕಣದಂಡೇಶನ ಶಿವತತ್ವ ಚಿಂತಾಮಣಿ (೩೮–೧೩೭) ಹೇಳುತ್ತದೆ. ಹೀಗಾಗಿ ಈ ಅರಸರ ವೀರಶೈವ ಒಲವಿನ ಅಭ್ಯಾಸ ಮಹತ್ವದ್ದೆನಿಸಿದೆ.

ಕೊಲ್ಲಾಪುರ ಶಿಲಾಹಾರರು:[೧] ಮಹಾರಾಷ್ಟ್ರದಲ್ಲಿ ಉತ್ತರ ಕೊಂಕಣದ ಶಿಲಾಹಾರ, ದಕ್ಷಿಣ ಕೊಂಕಣದ ಶಿಲಾಹಾರ ಮತ್ತು ಕೊಲ್ಲಾಪುರದ ಶಿಲಾಹಾರ ಎಂಬ ಮೂರು ಮನೆತನಗಳು ಕಂಡುಬರುತ್ತವೆ. ಇವರನ್ನು ಕುರಿತ ತಗರಪುರವರಾಧೀಶ್ವರ ಎಂಬ ಬಿರುದಿನಲ್ಲಿಯ 'ತಗರಪುರ'ವೆಂಬುದು ಇಂದಿನ ಉಸ್ಮಾನಾಬಾದ ಜಿಲ್ಲೆಯ 'ತೇರ' ಎಂದು ಕೆಲವರೂ, ಉತ್ತರ ಕನ್ನಡ ಜಿಲ್ಲೆಯ ತೊರ್ಕೆ ಎಂದು ಕೆಲವರೂ ಹೇಳುತ್ತಾರೆ. 'ಟಗರಪುರ' ಅಡ್ಡ ಹೆಸರಿನ ಅನೇಕ ಮನೆತನಗಳು ಇಂದಿಗೂ ಉತ್ತರ ಕನ್ನಡ ಜಿಲ್ಲೆಯಲ್ಲಿವೆ ಎಂಬುದನ್ನು ಇಲ್ಲಿ ಅವಶ್ಯ ಗಮನಿಸಬೇಕು. ಇವರ ಮನೆತನದ ಹೆಸರು ಶಿಲಾಹಾರ ಎಂಬುದು ಸಿಯಳಾರ ರೂಪದಲ್ಲಿಯೂ ಸಿಗುತ್ತದೆ. ಇದು ಕೊಲ್ಲಾಪುರ ಜಿಲ್ಲೆಯ ಶಾಹುವಾಡಿ ತಾಲೂಕಿನ ಸಿಯಳಾರ (ಶಿರೋಳ) ಗ್ರಾಮವಾಗಿರಬಹುದು.

ಈ ಕೊಲ್ಲಾಪುರ ಶಿಲಾಹಾರರ ಕೆಲವು ಶಾಸನಗಳು ಕನ್ನಡದಲ್ಲಿವೆ. ಇವರ ಶಾಸನಗಳು ಮಹಾರಾಷ್ಟ್ರದ ಕೊಲ್ಲಾಪುರ–ಸಾಂಗಲಿ ಜಿಲ್ಲೆಗಳಲ್ಲಿ ೧೭, ಕರ್ನಾಟಕದ ಬೆಳಗಾವ ಜಿಲ್ಲೆಯಲ್ಲಿ ೩– ಹೀಗೆ ಒಟ್ಟು ೨೦ ಸಿಗುತ್ತವೆ. ಈ ೨೦ ರಲ್ಲಿ ಹೊನ್ನೂರು (ಮಿ–೪೪), ಹೇರ್ಲೆ (ಮಿ–೪೭), ಕೊಲ್ಲಾಪುರ (ಮಿ–೪೯). ಕೊಲ್ಲಾಪುರ (೫೦), ಮಿರಜ (ಮಿ. ೫೨) ಖಿದ್ರಾಪುರ (ಮಿ–೫೭), ಖಿದ್ರಾಪುರ (ಕುಂ–೩೫), ಕೊಲ್ಲಾಪುರ (ದೇ–೨೮೮), ಕೊಲ್ಲಾಪುರ(ಕೆ.ಆರ್.ಆಯ್.ಆರ್. ೧೯೪೧–೪೨, ನಂ.೪೨), ಕೊಲ್ಲಾಪುರ (ದೇ–೨೯೦)–ಈ ೧೦ ಶಾಸನಗಳು ಇಡಿಯಾಗಿ ಕನ್ನಡದಲ್ಲಿವೆ. ಸಂಸ್ಕೃತ ಶಾಸನಗಳಾಗಿದ್ದರೂ ಕೊಲ್ಲಾಪುರ ಶಿಲಾಲೇಖದ (ವಿ–೫೩) ಕೊನೆಗೆ ಕನ್ನಡ ಅಕ್ಷರವೃತ್ತ, ಬಾಮಣಿ ಶಿಲಾಲೇಖದ (ಮಿ–೫೪) ಕೊನೆಗೆ ಕನ್ನಡ ವಾಕ್ಯಗಳು ಕಂಡು ಬರುತ್ತವೆ. ಈ ಎರಡು ಶಾಸನಗಳು ಮತ್ತು ಮಿರಜ ತಾಮ್ರಪಟ (ಮಿ–೪೩), ಕೊಲ್ಲಾಪುರ ತಾಮ್ರಪಟ (ಮಿ–೪೬)– ಹೀಗೆ ಈ ನಾಲ್ಕು, ಸಂಸ್ಕೃತ ಶಾಸನಗಳಾದರೂ ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿವೆ.

ಬೆಳಗಾವಿ ಜಿಲ್ಲೆಯ ೩ ಶಾಸನಗಳನ್ನು ಬದಿಗಿರಿಸಿ ಹೇಳುವುದಾದರೆ ಮಹಾರಾಷ್ಟ್ರದಲ್ಲಿ ಸಿಗುವ ಇವರ ೧೭ ಶಾಸನಗಳಲ್ಲಿ ೭ ಕನ್ನಡ ಲಿಪಿ–ಭಾಷೆಯಲ್ಲಿವೆ, ೪ರ ಭಾಷೆ ಸಂಸ್ಕೃತವಿದ್ದರೂ ಲಿಪಿ ಕನ್ನಡವಾಗಿದ್ದು, ಇವುಗಳಲ್ಲಿ ೨ರ ಕೊನೆಗೆ ಕನ್ನಡ ಬರವಣಿಗೆ ಇದೆ. (ಮಿಕ್ಕ ೬ ರ ಲಿಪಿ ನಾಗರಿ, ಭಾಷೆ ಸಂಸ್ಕೃತ). ಈ ಕನ್ನಡ ಶಾಸನಗಳನ್ನು ಹೊರತುಪಡಿಸಿದರೆ ಈ ಅರಸುಮನೆತನದ ಚರಿತ್ರೆಯೇ ಪೂರ್ಣವಾಗುವುದಿಲ್ಲವೆಂಬ ಮಹತ್ವ ಈ ಶಾಸನಗಳಿಗೆ ಸಲ್ಲುತ್ತದೆ.

ಇಲ್ಲಿ ಕನ್ನಡ ಶಾಸನಗಳಿಗೆ ಸಹಜವಾಗಿರುವ ಕನ್ನಡ ಲಿಪಿ ಸಂಸ್ಕೃತ ಶಾಸನಗಳಿಗೂ ದಾಳಿ ಇಟ್ಟಿದೆ. ಹೆಚ್ಚಿನದಾಗಿ ಕೊನೆಗೆ ಕನ್ನಡ ಭಾಷೆಯೂ ಪ್ರವೇಶಿಸಿದೆ. ಇದಲ್ಲದೆ ಈ ಅರಸರ

---

೧. ಇಲ್ಲಿಂದ ಮುಂದಿನ ವಿವರದಲ್ಲಿ ಬರುವ ಸಂಕೇತಗಳು ಹೀಗಿವೆ: ಮಿ = ಶಿಲಾಹಾರ ರಾಜವಂಶೀಚಾ ಇತಿಹಾಸ ಆಣೀ ಕೋರಿವ ಲೇಖ (ಡಾ. ಮಿರಾಸಿ). ಕೆ. ಆರ್. ಆರ್ಯ. ಆರ್. = ಧಾರವಾಡದ ಕೆ. ಆರ್. ಆಯ್. ರಿಪೋರ್ಟ. ದೇ = ಮಹಾರಾಷ್ಟ್ರ ವ ಗೋವೆ ಶಿಲಾಲೇಖ ತಾಮ್ರಪಟಾಂಚೀ ವರ್ಣನಾತ್ಮಕ ಸಂದರ್ಭಸೂಚೀ (ಶಾಂತಾರಾಮ ದೇವ).

ಜಟಿಗ, ಗೊಂಕ, ಬಲ್ಲಾಳ, ಗಂಡರಾದಿತ್ಯ ಎಂಬಿವು ಕನ್ನಡ ಹೆಸರುಗಳಾಗಿವೆ. ಇದು ಈ ಪ್ರದೇಶದ, ಈ ಅರಸರ ಕನ್ನಡತನದ ಸಂಕೇತವಾಗಿದೆ.

ಈ ಮನೆತನದ ಪ್ರಥಮ ಕನ್ನಡ ಶಾಸನ (ಹೊನ್ನೂರು) ಸೋದರರಾದ ಮಂಡಳೇಶ್ವರ ಬಲ್ಲಾಳದೇವ, ಗಂಡರಾದಿತ್ಯರಿಗೆ ಸೇರಿದೆ. ಮೂಲಸಂಘದ ಪುನ್ನಾಗ ವೃಕ್ಷಮೂಲಗಣದ ರಾತ್ರಿಮತಿಕಂತಿಯರ ಗುಡ್ಡ ಬಮ್ಮಗಾವುಂಡ ಮಾಡಿಸಿದ ಬಸದಿಗೆ ಈ ಸೋದರರು ಮುನಿಗಳ ಆಹಾರಾದಾನಕ್ಕಾಗಿ ದತ್ತಿ ಬಿಟ್ಟುದು ಇದರ ವಿಷಯವಾಗಿದೆ. ಇವರಲ್ಲಿ ಗಂಡರಾದಿತ್ಯ ಕರ್ನಾಟಕ ಮತ್ತು ಕನ್ನಡ ದೃಷ್ಟಿಯಿಂದ ಬಹುಮುಖ್ಯವ್ಯಕ್ತಿಯೆನಿಸಿದ್ದಾನೆ. ಕನ್ನಡ ಕವಿ ಕರ್ಣಪಾರ್ಯನು ಈತನ ಆಸ್ಥಾನದಲ್ಲಿದ್ದು ಬರೆದಿರುವ ನೇಮಿನಾಥ ಪುರಾಣದಲ್ಲಿ–

ಮನುಮಾರ್ಗಂ ಮುರುವಕ್ಕಸರ್ಪನವನೀವಿಖ್ಯಾತ ಜೀಮೂತವಾ ।
ಹನ ವಿದ್ಯಾಧರಚಕ್ರಿವಂಶತಿಳಕಂ ಶ್ರೀ ಗಂಡರಾದಿತ್ಯ ಭೂ ।
ಪನುದಾತ್ತಂ ಪುರುಷೋತ್ತಮಂ ಕಿಳಕಿಳ ಪ್ರಖ್ಯಾತ ದುರ್ಗಾಧಿಪಂ ।
ಜನಸಂರಕ್ಷಣದಕ್ಷನೀ ಕ್ಷಿತಿನುತಂ ಗಾಂಭಿರ್ಯರತ್ನಾಕರಂ ॥

ಎಂದು ಗಂಡರಾದಿತ್ಯನನ್ನು ಹೊಗಳಿದ್ದಾನೆ. ಇದರಿಂದ ಈತನ ಜೈನಭಕ್ತಿ, ಕನ್ನಡ ಪ್ರೀತಿಗಳು ವ್ಯಕ್ತವಾಗುತ್ತವೆ. ಅಣ್ಣನೊಂದಿಗೆ ಜೈನಬಸದಿಗೆ ದಾನನೀಡಿದ ವಿಷಯವನ್ನೊಳಗೊಂಡ ಮೇಲಿನ ಕನ್ನಡ ಶಾಸನವನ್ನು ಬಿಟ್ಟರೂ ಈತನ ೩ ಕನ್ನಡ ಶಾಸನಗಳು (ಹೇರ್ಲೆಯಲ್ಲಿ ೧, ಕೊಲ್ಲಾಪುರದಲ್ಲಿ ೨) ಮಹಾರಾಷ್ಟ್ರದಲ್ಲಿ ಸಿಗುತ್ತವೆ. ತಾಯಿಯಾದ ನಾಗಲದೇವಿಯ ಬಿನ್ನಹದ ಮೇರೆಗೆ ಎಡೆನಾಡಕ್ಕೆ ಸಂಬಂಧಿಸಿದ ವಗುಬನ ಹೇರಿಳಿಗೆ (ಹೇರ್ಲೆ) ಗ್ರಾಮದಲ್ಲಿ ನೇಮಗಾವುಂಡ ಕಟ್ಟಿಸಿದ ಬಸದಿಗಾಗಿ ಗಂಡರಾತ್ಯದಿನು ಕೊಲ್ಲಾಪುರದ ತೀರ್ಥಬಸದಿಯ (ತ್ರಿಭುವನ ತಿಲಕಬಸದಿ ಅಥವಾ ಚಂದ್ರನಾಥ ಬಸದಿ) ಆಚಾರ್ಯ ಶಾಂತವೀರದೇವರಿಗೆ ದಾನನೀಡಿದ ವಿಷಯ ಹೇರ್ಲೆಶಾಸನ (೧೧೧೮)ದಲ್ಲಿ ಬರುತ್ತದೆ.

ಇದನ್ನು ಬಿಟ್ಟರೆ ಈತನ ಕೊಲ್ಲಾಪುರದ ಎರಡು ಕನ್ನಡ ಶಾಸನಗಳು ಮಹತ್ವದ ದಾಖಲೆಗಳಾಗಿವೆ. ಇವುಗಳಲ್ಲಿ ಒಂದು ಶೇಷಶಾಯಿದೇವಾಲಯದಲ್ಲಿ, ಇನ್ನೊಂದು ಪಾರ್ಶ್ವನಾಥ ಬಸದಿ (ಮಾನಸ್ತಂಭಬಸದಿ)ಯಲ್ಲಿದ್ದು, ಗಂಡರಾದಿತ್ಯ ಮತ್ತು ನಿಂಬ ಸಾಮಂತರ ವಿವರಗಳನ್ನೊದಗಿಸುತ್ತವೆ.

ಶೇಷಶಾಯಿ ದೇವಾಲಯದ ಶಾಸನದಲ್ಲಿ ಈ ವಿವರಗಳಿವೆ: ಜೈನಮತೀಯ ಸಾಮಂತನಾದ ನಾಕರಸ ಚಂಪಾದೇವಿಯರಿಗೆ ಭಿಲ್ಲರಸ, ನಿಂಬರಸ, ಕಾವರಸ, ಕರ್ಣಾದೇವಿಯರು ಮಕ್ಕಳು. ಕರ್ಣಾದೇವಿ ಅರಸು ಗಂಡರಾದಿತ್ಯನ ರಾಣಿ. ನಾಕರಸನು ಗೃಹಪಟ್ಟವರ್ಧನ, ನಾಗಲದೇವಿಯು (ಗಂಡರಾದಿತ್ಯನ ತಾಯಿ) ಗಂಧವಾರಣ, ಸಾಮಂತಕೇದಾರನೆನಿಸಿದ್ದನು. ಇವುಗಳಲ್ಲಿ ಕೊನೆಯ ಎರಡು ಬಿರುದುಗಳನ್ನು ಧರಿಸಿದ್ದ ನಿಂಬರಸನು ಕೊಲ್ಲಾಪುರದಲ್ಲಿ ರೂಪನಾರಾಯಣ ಹೆಸರಿನ ಆದಿತೀರ್ಥಂಕರ ಬಸದಿ ಕಟ್ಟಿಸಿದನು. ರೂಪನಾರಾಯಣರೆಂಬುದು ಅರಸು ಗಂಡರಾದಿತ್ಯನ ಬಿರುದು. ರೂಪನಾರಾಯಣ ಬಸದಿಯೇ ಇಂದು ಶೇಷಶಾಯಿ ವಿಷ್ಣುದೇವಾಲಯ ವಾಗಿರುವಂತಿದೆ. ಗಂಡರಾದಿತ್ಯನು ಆಳುವಾಗ ನಿಂಬರಸನು ಕವಡೆಳ್ಳಗೊಂದ ಬಳಿಯ ಸಂತೆಯ ಮುದ್ದೊಡೆ ಗ್ರಾಮದಲ್ಲಿ ಪಾಶ್ವನಾಥ ಬಸದಿ

ಕಟ್ಟಿಸಿದನೆಂದೂ ಇದಕ್ಕೆ ಅನೇಕ ಸೆಟ್ಟಿಗಳು ದಾನ ಬಿಟ್ಟರೆಂದೂ ಕೊಲ್ಲಾಪುರದ ಪಾರ್ಶ್ವನಾಥ (ಮಾನಸ್ತಂಭ) ಬಸದಿಯ ಶಾಸನ (೧೧೩೫) ತಿಳಿಸುತ್ತದೆ. ಈ ಸಂದರ್ಭದಲ್ಲಿ ನಿಂಬಸಾಮಂತನ ಇತರ ಸಂಗತಿಗಳನ್ನು ಇಲ್ಲಿ ತಿಳಿದುಕೊಳ್ಳುವುದು ಅವಶ್ಯ. ಈತನು ಮಲ್ಲಪಯ್ಯ, ಪುನ್ನಮಯ್ಯ, ಚಾವುಂಡರಾಯ, ಗಂಗರಾಜ, ಹುಳ್ಳ, ನನ್ನ, ಭರತ, ರೇಚ, ಗೊಂಕರೆಂಬ ಪ್ರಖ್ಯಾತ ಜೈನಮಂತ್ರಿ–ಮಾಂಡಲಿಕರ ಸಾಲಿನಲ್ಲಿ ನಿಲ್ಲುವ ಜೈನವ್ಯಕ್ತಿ. ಈತನನ್ನು ಕುರಿತು ಸುಮಾರು ೧೭ನೆಯ ಶತಮಾನದ ಪಾರ್ಶ್ವಕವಿಯು ನಿಂಬಸಾಮಂತ ಚರಿತೆ ಹೆಸರಿನ ಭಾಮಿನಿಷಟ್ಪದಿ ಕಾವ್ಯವನ್ನು ಕನ್ನಡದಲ್ಲಿ ಬರೆದಿದ್ದಾನೆ.[೧] ಕೊಲ್ಲಾಪುರದ ಪಂಚಗಂಗಾ ನದೀ ತೀರದಲ್ಲಿ ಗಂಡರಾದಿತ್ಯನ ಪರವಾಗಿ ಬಿಜ್ಜಳನನ್ನು ಎದುರಿಸಿ, ನಿಂಬಸಾಮಂತನು ವೀರಸ್ವರ್ಗವೇರಿದುದು ಈ ಕಾವ್ಯದ ವಸ್ತು. ಈತನು ಸಲ್ಲೇಖನವ್ರತ ಹಿಡಿದು ಯುದ್ಧಭೂಮಿಯನ್ನು ಪ್ರವೇಶಿಸಿದನೆಂದೂ ಕೊನೆಯದಿನ ದಣಿವು ಕಾರಣವಾಗಿ ರಣರಂಗ ಪ್ರವೇಶಿಸಲು ಹಿಂಜರಿಯುತ್ತಿದ್ದ ತನ್ನ ಕುದುರೆಯ ಕಣ್ಣು ಕಟ್ಟಿ, ಯುದ್ಧಭೂಮಿಗೆ ಧುಮುಕಿ, ಹೋರಾಡಿ ನಿಧನಹೊಂದಿದನೆಂದೂಈ ಕೃತಿಯಿಂದ ತಿಳಿದುಬರುತ್ತದೆ. ಸಲ್ಲೇಖನವ್ರತ ಹಿಡಿದು ಹೋರಾಡಿದ ಏಕೈಕ ಉಲ್ಲೇಖವಿದು. ಈ ಕಾವ್ಯದಲ್ಲಿ ಹೇಳಿರುವಂತೆ ಬಿಜ್ಜಳ ಮತ್ತು ಗಂಡರಾದಿತ್ಯರು ಸಮಕಾಲೀಕರೆಂಬುದು ಕಾಲದೃಷ್ಟಿಯಿಂದ ಹೊಂದಿಕೆಯಾಗುವುದಿಲ್ಲವಾದುದರಿಂದ ಈ ಯುದ್ಧ ಬಿಜ್ಜಳ ಮತ್ತು ಗಂಡರಾದಿತ್ಯನ ಮಗ ವಿಜಯಾದಿತ್ಯರ ನಡುವೆ ಜರುಗಿರಬಹುದೆಂದು ವಿದ್ವಾಂಸರು ಊಹಿಸಿದ್ದರು. ಆದರೆ ಬಿಜ್ಜಳ ಮತ್ತು ಗಂಡರಾದಿತ್ಯರ ನಡುವೆಯೇ ಈ ಕಾಳಗ ನಡೆದಿರಬಹುದೆಂದು ನಾನು ಬೇರೆಡೆ ಸೂಚಿಸಿದ್ದೆನು.[೨] ಈಗ ಬಿಜ್ಜಳನ ಅಧಿಕಾರಿಯೊಬ್ಬನು ಗಂಡರಾದಿತ್ಯನನ್ನು ಸೋಲಿಸಿದ ವಿಷಯ ಮಹಾರಾಷ್ಟ್ರದ ಔರಾದ ಶಾಸನ (೧೧೩೫)ದಲ್ಲಿ ಸಿಕ್ಕು ನನ್ನ ಸೂಚನೆ ಸತ್ಯವಾಗಿ ಪರಿಣಮಿಸಿದೆ.

ಗಂಡರಾದಿತ್ಯನ ಮಗ ವಿಜಯಾದಿತ್ಯನಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರದಲ್ಲಿ ಸಿಗುವ ೫ ಶಾಸನಗಳಲ್ಲಿ ಕೊಲ್ಲಾಪುರ ತಾಮ್ರಶಾಸನ, ಮಿರಜ, ಖಿದ್ರಾಪುರ (ಸಾ. ಪ. ೬೯–೨, ಮಿ ೫೨ ಮತ್ತು ೫೭) ಶಿಲಾಶಾಸನಗಳು ಕನ್ನಡದಲ್ಲಿವೆ. ಕೊಲ್ಲಾಪುರ (ಮಿರಾಶಿ ೫೩), ಬಾಮಣಿ (ಮಿರಾಶಿ ೫೪) ಶಾಸನಗಳ ಭಾಷೆ ಸಂಸ್ಕೃತವಾಗಿದ್ದರೂ ಲಿಪಿ ಕನ್ನಡವಾಗಿದೆ ಮತ್ತು ಕೊನೆಗೆ ಕನ್ನಡ ಬರೆವಣಿಗೆ ಇದೆಯೆಂದು ಮೇಲೆ ನೋಡಿದ್ದೇವೆ. ಇಷ್ಟರ ಮಟ್ಟಿಗೆ ಇವನ ಶಾಸನಗಳಲ್ಲಿ ಕನ್ನಡ ಗಾಢವಾಗಿ ತುಂಬಿಕೊಂಡಿದೆ. ಕೊಲ್ಲಾಪುರ ತಾಮ್ರಶಾಸನವು (೧೧೫೪) ಶಿಲಾಹಾರ ಗಂಡರಾದಿತ್ಯ ಮತ್ತು ಮಗ ವಿಜಯಾದಿತ್ಯರಲ್ಲಿ ಕ್ರಮವಾಗಿ ತಂದೆ ಕೂಚಿರಾಜ, ಮಗ ಕಪ್ಪದೇವರು ಮಂತ್ರಿಗಳಾಗಿದ್ದರೆಂದು ಹೇಳುತ್ತ, ಈ ಕೂಚಿರಾಜನನ್ನು ಕುರಿತು "ಸತ್ಕವೀಂದ್ರೋತ್ತಮಂ ತನಗಜ್ಜಂ ಪಂಪರಾಜಂ" ಎಂದು ಹೇಳಿರುವುದರಿಂದ, ಕೂಚಿರಾಜನ ಅಜ್ಜನಾದ ಪಂಪರಾಜನೆಂದರೆ ಅಭಿನವಪಂಪ ಬಿರುದಿನ ನಾಗಚಂದ್ರನೆಂಬ ಹೊಸ ಅಂಶ ತಿಳಿದುಬರುತ್ತದೆ. ಮೂಲತಃ ವಿಜಾಪುರಕ್ಕೆ ಸಂಬಂಧಿಸಿದ ನಾಗಚಂದ್ರನ ಕುಟುಂಬ ಆಮೇಲೆ ಕೊಲ್ಲಾಪುರಕ್ಕೆ ಸ್ಥಳಾಂತರಗೊಂಡಂತಿದೆ. ಕಪ್ಪದೇವನ ವಿನಂತಿಯ ಮೇರೆಗೆ ಕೊಲ್ಲಾಪುರದ ಶಾಂತಿನಾಥ ಜಿನಾಲಯಕ್ಕೆ ಅರಸು ವಿಜಯಾದಿತ್ಯನು ಶಿರಗುಪ್ಪೆ ಗ್ರಾಮವನ್ನು ದಾನವಾಗಿ ಕೊಟ್ಟುದು ಈ ಶಾಸನದ ವಿಷಯ.

---

೨. ಈ ಕಾವ್ಯವು ನನ್ನಿಂದ ಸಂಪಾದಿಸಲ್ಪಟ್ಟು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾಗಿದೆ.

೩. ನಾನು ಸಂಪಾದಿಸಿದ ನಿಂಬಸಾಮಂತ ಚರಿತೆಯ ಮುನ್ನುಡಿ ನೋಡಿರಿ.

ಕೊಲ್ಲಾಪುರದಲ್ಲಿ ಈ ಜಿನಾಲಯ ಕಟ್ಟಿಸಿದವನು ಕೂಚಿರಾಜ. ವಿಜಯಾದಿತ್ಯನ ಮಿರಜಶಾಸನ (೧೧೪೨-೧೧೪೪)ದಲ್ಲಿ ಅವನ ಅಧಿಕಾರಿಗಳಾದ ಭಾಯಿಪಯ್ಯ ನಾಯಕ ಮತ್ತು ಮಾಳಪಯ್ಯ ನಾಯಕರು ಶೇಡಬಾಳದ ಶಿವಮಂದಿರಕ್ಕೆ ದಾನನೀಡಿದ ವಿಷಯ ಬರುತ್ತದೆ. ಖಿದ್ರಾಪುರದ ಶಾಸನ (ಮಿರಾಶಿ-೫೭) ಬೊಪ್ಪಣದಂಡಾಧಿಪನನ್ನು ವರ್ಣಿಸುತ್ತದೆ.

ಈತನ ಮಗ ಭೋಜ IIನ ಖಿದ್ರಾಪುರದ ೧ ಮತ್ತು ಕೊಲ್ಲಾಪುರದ ೩ ಶಾಸನಗಳು ಕನ್ನಡದಲ್ಲಿವೆ. ಖಿದ್ರಾಪುರಶಾಸನ ಬಮ್ಮೇಶನೆಂಬವನ ವೀರಗಲ್ಲು. ಕೊಲ್ಲಾಪುರದ ೩ ಶಾಸನಗಳಲ್ಲಿ ಭೋಜದೇವನು ಕೋಟೇಶ್ವರ ದೇವಾಲಯ ಕಟ್ಟಿಸಿ ದಾನಬಿಟ್ಟ, ಅಮೃತೇಶ್ವರಮಠದ ಮಾಧವಾರ್ಯನ ಮಕ್ಕಳಿಗೆ ಲೋಕಣನಾಯಕನು ದಾನ ನೀಡಿದ, ಏಕನಾಗವೀರದಲ್ಲಿಯ ಶಾಂತಿಜಿನಾಲಯಕ್ಕೆ ಭೋಜನು ಮಿರಿಂಜದೇಶದ ಕೋರುಲಿ ಗ್ರಾಮವನ್ನು ದಾನನೀಡಿದ ವಿಷಯ ಬರುತ್ತದೆ. ಬಹುಶಃ ಖಿದ್ರಾಪುರದಲ್ಲಿ ಯಾದವ ಸಿಂಘಣನಿಗೆ ಭೋಜ IIನು ಸೋಲುವಲ್ಲಿ ಈ ಮನೆತನ ಅಸ್ತಂಗತವಾಯಿತು.

ಅಕ್ಕಲಕೋಟ ಶಿಲಾಹಾರರು: ಈಗಿನ ಉಸ್ಮಾನಾಬಾದ ಜಿಲ್ಲೆಯ ತುಳಜಾಪುರ ತಾಲೂಕಿನ ಅಣದೂರು ಅಂದರೆ ಅಣಂದೂರು -೩೦೦ ರ ಉಪವಿಭಾಗವಾದ ಅಂಕುಲಗೆ-೮೦ ರ ಮುಖ್ಯ ಪಟ್ಟಣ ಅಂಕಲುಗೆ. ಇದು ಇಂದಿನ ಸೊಲ್ಲಾಪುರದ ಜಿಲ್ಲೆಯ ತಾಲೂಕು ಸ್ಥಳವಾದ ಅಕ್ಕಲಕೋಟ. ಇಲ್ಲಿ ಶಿಲಾಹಾರರ ಒಂದುಶಾಖೆ ಆಳುತ್ತಿದ್ದಿತು. ಇದು ತರ್ದವಾಡಿ ಶಿಲಾಹಾರರ ಒಂದು ಉಪಶಾಖೆ, ಇವರನ್ನು ಕುರಿತ ಶಾಸನಗಳು ಮಹಾರಾಷ್ಟ್ರದಲ್ಲಿ ಸಿಗುತ್ತವೆ. ಅಕ್ಕಲಕೋಟ ಶಾಸನ (೧೮೯೨)ದಲ್ಲಿ ಕಲಚುರಿ ಜೋಗಮ ಮತ್ತು ಶಿಲಾಹಾರ ಕವಿಲಾಸರು ಹಂದೆಕ್ಕಾಡಿಯ ಚಂದ್ರೇಶ್ವರ ದೇವರಿಗೆ ದಾನನೀಡಿದ ವಿಷಯವಿದೆ. ಈತನ ಮಗ ಇಂದರಸ, ಕುಮಾರ ತೈಲಪನ ದಾಯಿ ಭೋಗಿಯಬ್ಬರಸಿ, ದಂಡನಾಯಕ ಗಜಾಂಕುಶವಂಶದ ಪ್ರಭುಕೇಸರಿ, ಆತನ ಮಗ ನಂಬರಸರು ಕರಂಜಿಗೆಯ ಸಿದ್ಧಗಜ್ಜೇಶ್ವರ ದೇವರಿಗೆ ದಾನನೀಡಿದ ವಿಷಯ ೧೧೧೪ ರ ಅಕ್ಕಲಕೋಟ ಶಾಸನದಲ್ಲಿದೆ. ಈ ಇಂದರಸನ ಮತ್ತೊಂದು ದಾನದ ವಿಷಯ ೧೧೨೨ ರ ಅಕ್ಕಲಕೋಟ ಶಾಸನದಲ್ಲಿ ಬರುತ್ತದೆ. ಪ್ರಾಚೀನ ಕನ್ನಡ ಕಾವ್ಯಗಳು ಗಜಾಂಕುಶ (=ಗಜಗ) ಹೆಸರಿನ ಕವಿಯನ್ನು ಉಲ್ಲೇಖಿಸುತ್ತವೆ. ರಾಷ್ಟ್ರಕೂಟ ಕೃಷ್ಣ III ನ ಮಂತ್ರಿಯಾದ ಇವನ ಉಲ್ಲೇಖ ಸಾಲೊಟಗಿ, ಮಡಕಶಿರಾ, ಭಿಲ್ಸಾ ಗ್ರಾಮಗಳ ಶಾಸನದಲ್ಲಿ ಬರುತ್ತದೆ. ಮೇಲೆ ಹೇಳಿದ ಪ್ರಭುಕೇಸರಿ ಈ ಗಜಾಂಕುಶನ ವಂಶಸ್ಥನಾಗಿರಬೇಕು. ಈ ಮನೆತನದ ಡಾಕರಸನ ಕಾಲದ ಕೂಡಲ ಶಾಸನ, ಅಲ್ಲಿಯ ಸಂಗಮೇಶ್ವರದೇವರಿಗೆ ಅಂಕುಲಗೆ ೮೦ರ ೨ ಹಳ್ಳಿಗಳನ್ನು ದಾನಕೊಟ್ಟುದನ್ನು ತಿಳಿಸುತ್ತದೆ. ೧೨೧೦ರ ಅಕ್ಕಲಕೋಟ ಶಾಸನದಲ್ಲಿ ಅರಸು ಧನಸಂಗ್ರಹನ ಬಗ್ಗೆ "ಪರಿಧಿ ನಿಜಧರೆಗೆ ಕಾಲಾಂಜರಮುಂ ಕ್ರಿಷ್ಣಾದ್ರಿ ತಟಮುಂ" ಎಂಬ ಮಾತು ಬರುತ್ತದೆ.

ಗೋವೆಯ ಕದಂಬರು : ಕಲ್ಯಾಣ ಚಾಲುಕ್ಯರ ಮಂಡಲೇಶ್ವರರಾಗಿದ್ದ ಕದಂಬರ ಶಾಖೆಯೊಂದು ಗೋವೆಯಲ್ಲಿ ಆಳುತ್ತಲಿದ್ದಿತು. ಕೊಂಕಣ ೯೦೦, ಪಲಸಿಗೆ ೧೨೦೦೦ ಪ್ರಾಂತಗಳನ್ನು ಇವರು ವಂಶಪಾರಂಪರ್ಯದಿಂದ ಆಳುತ್ತಿದ್ದರು. ಠಾಣಾ ಜಿಲ್ಲೆಯ ಸಾಲಸೇಟ ತಾಲೂಕಿನ ರಾಯಗ್ರಾಮದ ವೀರಗಲ್ಲು ಮಹಾರಾಷ್ಟ್ರದಲ್ಲಿ ಸಿಗುವ ಇವರ ಏಕಮಾತ್ರ ಕನ್ನಡ ಶಾಸನವಾಗಿದೆ. ಕದಂಬ ಜಯಕೇಶಿ Iಯು ಆಳುವಾಗ ವತ್ಸಿಯಪುರದ ಪ್ರಭುವಿನ ಸರದಾರನಾದ ಗೋಮರಸಿಮನು ಯುದ್ಧದಲ್ಲಿ ಮರಣ ಹೊಂದಿದುದು ಇದರ ವಿಷಯ. ಕೊಂಕಣಪ್ರದೇಶದಲ್ಲಿ ಇವರ ಕನ್ನಡ ಶಾಸನಗಳು ಸಿಗುವ ಸಾಧ್ಯತೆಯಿದೆ.

೧೩. ವ್ಯಕ್ತಿನಾಮ-ಗ್ರಾಮನಾಮ

ಶಾಸನಗಳು ಲಭಿಸಿದ ಮಾತ್ರಕ್ಕೆ, ಅರಸರು ಆಳಿದ ಮಾತ್ರಕ್ಕೆ ಯಾವುದೇ ನೆಲ ಆ ಶಾಸನದ ಭಾಷಿಕರದೆನ್ನುವುದು, ಆ ಅರಸರದೆನ್ನುವುದು ಅವಸರದ ನಿರ್ಣಯವಾಗುತ್ತದೆ. ಏಕೆಂದರೆ ೧೭, ೧೮, ೧೯ನೆಯ ಶತಮಾನಗಳಲ್ಲಿ ಕರ್ನಾಟಕದ ಬಹುಭಾಗವನ್ನು ಮರಾಠರು-ಪೇಶ್ವೆಯರು ಆಳಿದ್ದರೂ ಮರಾಠಿ ದಾಖಲೆಗಳು ಇಲ್ಲಿ ವಿಪುಲ ಸಂಖ್ಯೆಯಲ್ಲಿ ಸಿಗುತ್ತಿದ್ದರೂ ಕರ್ನಾಟಕವು ಅವರ ನೆಲವಲ್ಲ. ಇದೇ ರೀತಿ ಪ್ರಾಚೀನ ಮಹಾರಾಷ್ಟ್ರವನ್ನು ಬಹುಕಾಲದಿಂದ ಕರ್ನಾಟಕದ ಬೇರೆ ಬೇರೆ ಅರಸರು ಆಳಿದ್ದರೂ, ಅವರು ಕನ್ನಡ ಶಾಸನ ಬರೆಯಿಸಿದ್ದರೂ ಮಹಾರಾಷ್ಟ್ರವು ಕನ್ನಡ ನೆಲವಲ್ಲವೆಂದು ಕೆಲವರು ವಾದಿಸಬಹುದು. ಆಗ ಈ ಶಾಸನ ಮತ್ತು ಅರಸುಮನೆತನಗಳನ್ನು ಬಿಟ್ಟು ಇನ್ನೂ ಗಟ್ಟಿ ಆಧಾರಗಳನ್ನು ಒಡ್ಡಬೇಕಾಗುತ್ತದೆ. ಅವು ವ್ಯಕ್ತಿನಾಮಗಳು ಮತ್ತು ಗ್ರಾಮನಾಮಗಳು.

ಯಾವುದೇ ಪ್ರಾಂತದ ಮೇಲೆ ಅರಸರ ಪ್ರಭುತ್ವ ಆಗಾಗ ಬದಲಾಗಬಹುದು. ಆದರೆ ಸ್ಥಳೀಯರ ಭಾಷೆಯ ಭಾಗವಾಗಿರುವ ವ್ಯಕ್ತಿ – ಗ್ರಾಮಗಳಿಗೆ ಹೆಸರನ್ನಿಡುವ ಪದ್ಧತಿ ತೀವ್ರ ಬದಲಾಗದು. ಜನತೆಯ ಸಂಸ್ಕೃತಿಯ ಘಟಕವಾಗಿರುವ ಈ ಪದ್ಧತಿ ಬಹುಕಾಲ ಗಟ್ಟಿಯಾಗಿ ನಿಲ್ಲುತ್ತದೆ; ಮಾಯವಾಗುವುದಾದರೂ ಆ ಕ್ರಿಯೆ ತೀರ ಮಂದವಾಗಿ ಜರುಗುತ್ತದೆ. ಆದುದರಿಂದ ಒಂದು ಸ್ಥಳದ ಪ್ರಾಚೀನ ಇತಿಹಾಸವನ್ನು ಅರಿಯಲು ಈ 'ನಾಮ'ಗಳು ಬಹುಮುಖ್ಯ ಆಧಾರಗಳೆಂದು ವಿದ್ವಾಂಸರು ಇತ್ತೀಚಿಗೆ ಭಾವಿಸುತ್ತಿದ್ದಾರೆ. "ಒಂದು ಗ್ರಾಮದ ಇತಿಹಾಸ ನಿಂತಲ್ಲಿಂದ, ಅಂದರೆ ಶಾಸನ ದಾಖಲೆಗಳು ನಿಂತಲ್ಲಿಂದ, ಅಲ್ಲಿಯ ನಾಮಗಳು ಆ ಇತಿಹಾಸವನ್ನು ಇನ್ನೂ ಹಿಂದೆ ಒಯ್ಯುತ್ತವೆ" ಎಂದು ಹೇಳುವುದು ಈ ಕಾರಣಕ್ಕಾಗಿ. ಹೀಗಾಗಿ ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಸಿಗುವ ವ್ಯಕ್ತಿನಾಮ ಮತ್ತು ಗ್ರಾಮನಾಮಗಳನ್ನು ಇಲ್ಲಿ ಅಭ್ಯಸಿಸಬಹುದಾಗಿದೆ.

ಮಹಾರಾಷ್ಟ್ರದ ಶಾಸನೋಕ್ತ ನಾರಾಯಣ, ಸೋಮೇಶ್ವರ ಮೊದಲಾದ ಸರ್ವಸಾಮಾನ್ಯ ಸಂಸ್ಕೃತ ವ್ಯಕ್ತಿನಾಮಗಳನ್ನು ಬಿಟ್ಟರೆ ಮಿಕ್ಕವುಗಳಲ್ಲಿ ತೈಲಪ (ತೈಲ + ಅಪ್ಪ) , ಬಿಲ್ಲಮ (ಬಿಲ್ಲ + ಅಮ್ಮ), ಸಿಂಗಣ (ಸಿಂಗ + ಅಣ್ಣ)ಗಳಂಥ ರಾಜರ ಹೆಸರುಗಳೂ, ಇವುಗಳಲ್ಲಿಯ ಅಪ್ಪ, ಅಮ್ಮ, ಅಣ್ಣಗಳಂಥ ಸಂಬಂಧವಾಚಿಗಳೂ ಇವರ ಕನ್ನಡತ್ವವನ್ನು ಸೂಚಿಸುತ್ತವೆ. ಆಳುವ ದೊರೆಗಳು ಯಾವುದೇ ದೂರದ ಪ್ರದೇಶದವರಾಗಿರಬಹುದೆಂದು ವಾದಿಸುವುದಾದರೆ ಇವುಗಳನ್ನೂ ಬಿಟ್ಟು, ದಾನಕಾರ್ಯದಲ್ಲಿ ಭಾಗಿಯಾದ, ಯುದ್ಧ ಚಟುವಟಿಕೆಯಲ್ಲಿ ತೊಡಗಿದ ಸ್ಥಳೀಯ ಕನ್ನಡ ವ್ಯಕ್ತಿನಾಮಗಳನ್ನು ಇಲ್ಲಿಯ ಯಾವುದೇ ಭಾಷೆಯ ಶಾಸನಗಳಲ್ಲಿ ನೋಡಬಹುದಾಗಿದೆ. ಇಂಥ ಕನ್ನಡ ಹೆಸರುಗಳು ಮಹಾರಾಷ್ಟ್ರದ ಗಡಿನಾಡಿನ ಮತ್ತು ಒಳನಾಡಿನ ಶಾಸನಗಳಲ್ಲಿಯೂ ಕಂಡುಬರುತ್ತದೆ.

ದೇವಾಲಯವನ್ನು ಕಟ್ಟಿಸಿ, ಲಿಂಗವನ್ನು ಸ್ಥಾಪಿಸಿದವನು ಆ ದೇವರಿಗೆ ತನ್ನ ಹೆಸರನ್ನಿಡುವುದು ಪ್ರಾಚೀನ ಕಾಲದ ಪದ್ಧತಿಯಾಗಿದ್ದಿತು. ಉದಾ: ಶಾಂತಲೆ ಸ್ಥಾಪಿಸಿದ ದೇವರು ಶಾಂತಲೇಶ್ವರ, ಅಹವಮಲ್ಲ ಸ್ಥಾಪಿಸಿದುದು ಅಹವಮಲ್ಲೇಶ್ವರ, ಹಬ್ಬಣನಾಯಕ ಸ್ಥಾಪಿಸಿದುದು ಹಬ್ಬೇಶ್ವರ. ಇದಕ್ಕನುಗುಣವಾಗಿ ಮಹಾರಾಷ್ಟ್ರದ ಶಾಸನಗಳಲ್ಲಿ ಕಂಡುಬರುವ ದೇವರ ನಾಮಗಳಲ್ಲಿ ಕನ್ನಡ

ಹೆಸರುಗಳನ್ನು ಕಾಣುತ್ತೇವೆ. ನಾಂದೇಡ ಜಿಲ್ಲೆಯ ತಾಲೂಕು ಸ್ಥಳವಾದ ಕಂಧಾರಕ್ಕೆ ಸಂಬಂಧಿಸಿದ ರಾಷ್ಟ್ರಕೂಟರ ಕಾಲದ ಒಂದು ಸಂಸ್ಕೃತ ಶಾಸನದಲ್ಲಿ ಬಂಕೇಶ್ವರ, ಚಲ್ಲೇಶ್ವರ, ಗೊಜ್ಜಿಗೇಶ್ವರ, ತುಂಬೇಶ್ವರ, ತುಡಿಗೇಶ್ವರ ಎಂಬ ಅಚ್ಚಗನ್ನಡ ದೇವನಾಮಗಳು ಗೋಚರಿಸುತ್ತವೆ. ಬಂಕೇಶ್ವರಲಿಂಗವು ನೃಪತುಂಗನ ಸುಪ್ರಸಿದ್ಧ ಮಾಂಡಲಿಕ ವೀರಬಂಕೇಯನ ಹೆಸರಿನಲ್ಲಿ, ಚಲ್ಲೇಶ್ವರಲಿಂಗವು ಆತನ ವಂಶನಾಮವಾದ 'ಚಲ್ಲಕೇತ' ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿರಬೇಕು. ತುಡಿಗ ಎಂಬುದು ರಾಷ್ಟ್ರಕೂಟ ಕೃಷ್ಣ IIIನ ಬಿರುದು. ಬಹುಶಃ ಈ ಹೆಸರಿನಲ್ಲಿ ತಲೆಯೆತ್ತಿದ ದೇವಾಲಯವಿದು. ಗೊಜ್ಜಿಗೇಶ್ವರಲಿಂಗವು ರಾಷ್ಟ್ರಕೂಟ ೩ನೆಯ ಇಲ್ಲವೆ ೪ನೆಯ ಗೋವಿಂದನ ಹೆಸರಿನಲ್ಲಿ ಸ್ಥಾಪಿತವಾಗಿರಬೇಕು. ಇವಲ್ಲದೆ ಇದೇ ಜಿಲ್ಲೆಯ ಕರಾಡಖೇಡದಲ್ಲಿಯ ಧೋರೇಶ್ವರ, ಕಲಿಚೋರೇಶ್ವರ ದೇವಾಲಯಗಳೂ, ನಿಗಳಂಕಮಲ್ಲ ಜಿನಾಲಯವೂ ಕನ್ನಡಿಗರ ನಿರ್ಮಾಣಗಳೆಂದು ಅವುಗಳ ಹೆಸರುಗಳೇ ಹೇಳುತ್ತವೆ.

ಭೀಡ್ ಜಿಲ್ಲೆಯ ಧರ್ಮಪುರಿ ಶಾಸನ (೧೨ನೆಯ ಶತಮಾನ)ದಲ್ಲಿ ಬಂಕಿಸೆಟ್ಟಿ ಬಸದಿ, ಅಂಬೆಜೋಗೈ ಶಾಸನ (೧೧೪೩)ದಲ್ಲಿ ಗವರೇಶ್ವರ ದೇವಾಲಯಗಳ ಉಲ್ಲೇಖವಿದೆ. ಗವರೆ ಶುದ್ಧ ದ್ರಾವಿಡಪದ. ಗವರೆಗಳೆಂದರೆ ಮೇದರು (ಮೇದರ ಕೇತಯ್ಯನ ವಚನ ಮುದ್ರಿಕೆ 'ಗವರೇಶ್ವರ' ಎಂಬುದನ್ನು ಗಮನಿಸಿರಿ) ಅಥವಾ ನಾನು ಬೇರೆಡೆ ಊಹಿಸಿರುವಂತೆ ಎತ್ತಿನ ಮೇಲೆ ವಸ್ತುಗಳನ್ನು ಹೇರಿಕೊಂಡು ವ್ಯಾಪಾರ ಮಾಡುವವರು. ಬಹುಶಃ ಈ ಗವರೆಗಳೇ ಇಂದಿನ 'ಕೋರಿ' ಅಡ್ಡ ಹೆಸರಿನ ವ್ಯಾಪಾರಿಗಳಾಗಿರಬಹುದು. ಈ ಶಾಸನದಲ್ಲಿ ಕಂಡುಬರುವ ಗವರೇಶ್ವರ ದೇವಾಲಯವನ್ನು ಎತ್ತಿನ ಮೇಲೆ ವಸ್ತುಗಳನ್ನು ಹೇರಿಕೊಂಡು ವ್ಯಾಪಾರ ಮಾಡುವ ಕನ್ನಡಿಗರು ಕಟ್ಟಿಸಿರಬಹುದು. ಗವರೆಗಳ ಮತ್ತು ಇವರು ಕಟ್ಟಿಸಿದ ಗವರೇಶ್ವರ ದೇವಾಲಯಗಳ ಉಲ್ಲೇಖ ಕರ್ನಾಟಕದ ಅನೇಕ ಶಾಸನಗಳಲ್ಲಿ ಸಿಗುತ್ತದೆ.

ಉಸ್ಮಾನಾಬಾದ ಜಿಲ್ಲೆಯ ಮುರಮ್ (ಮೊರಬ>ಮೊರಬ)ದಲ್ಲಿ ರೇಕಲ ದೇವಿ ರೇಕಜಿನಾಲಯವನ್ನು, ಕಾಳಿಮರಸನ ಮಗ ಎಳಿಯಾದಿತ್ಯ ದಂಡನಾಯಕನು 'ಎಳೆಯಮಠ' ಹೆಸರಿನ ಮಠವನ್ನು ಕಟ್ಟಿಸಿದ್ದಾರೆ. ರೇಕಲಾ ಎಂಬುದು ಸುಗ್ಗಲಾ, ಶಾಂತಲಾಗಳಂತೆ ಕನ್ನಡ ಹೆಸರಾಗಿದೆ.

ಸಾಂಗಲಿ ಜಿಲ್ಲೆಯ ಹೆಮ್ಮೇಶ್ವರ (ಉಮ್ರಾಣಿ), ಬಂಕೇಶ್ವರ (ಜತ್), ಕಾಳೇಶ್ವರ, ಬಿಜ್ಜೇಶ್ವರ (ಮಾಡಗಿಹಾಳ) ದೇವಾಲಯಗಳು ಕನ್ನಡಿಗರ, ಭಾಗಲೇಶ್ವರ, ಬೈಜಲೇಶ್ವರ (ಬೀಳೂರು), ಮೈಳಲೇಶ್ವರ (ಸಂಖ) ದೇವಾಲಯಗಳನ್ನು ಕನ್ನಡಿತಿಯರ ಹೆಸರಿನಲ್ಲಿ ತಲೆಯೆತ್ತಿದ್ದ ನಿರ್ಮಾಣಗಳಾಗಿವೆ.

ಸೊಲ್ಲಾಪುರ ಜಿಲ್ಲೆಯ ಗಾತ್ರೀಶ್ವರ (ಮಾರಡಿ), ಬೆಳ್ಳೇಶ್ವರ (ಕುಂಬಾರಿ). ಮಿಟ್ಟೇಶ್ವರ (ಶಿರವಾಲ) ದೇವಾಲಯಗಳು ಕನ್ನಡ ಹೆಸರನ್ನು ಪ್ರತಿನಿಧಿಸುತ್ತವೆ. 'ಗಾತ್ರಿಗ' ಎಂದರೆ ಎಲೆಯ ವ್ಯಾಪಾರಿಯೆಂದೂ ಇವರು ಸ್ಥಾಪಿಸಿದ ದೇವರು ಗಾತ್ರೀಶ್ವರವೆಂದೂ ವಿದ್ವಾಂಸರು ಹೇಳುತ್ತಾರೆ. ಆದರೆ ಮೇಲೆ ನೋಡಿದಂತೆ 'ಗವರೇಶ್ವರ' ಎಂಬುದು ಎತ್ತಿನ ಮೂಲಕ ವ್ಯಾಪಾರಮಾಡುವವರು ಸ್ಥಾಪಿಸಿದ ದೇವತೆಯಾದರೆ, 'ಗಾತ್ರೀಶ್ವರ'ವು ಕತ್ತೆಯ ಮೂಲಕ ವ್ಯಾಪಾರ ಮಾಡುವವರು ಸ್ಥಾಪಿಸಿದ ದೇವರಾಗಿರಬಹುದೇ? ಗವರೆ ಮತ್ತು ಗಾತ್ರಿಗ ಹೆಸರುಗಳು ಶಾಸನದಲ್ಲಿ ತಪ್ಪದೇ ಜೊತೆಯಾಗಿ ಬರುವುದನ್ನು ಇಲ್ಲಿ ನೆನೆಯಬಹುದು. ಈ 'ಗಾತ್ರಿಗರು' ಎಂಬುದೇ ಇಂದಿನ 'ಕತ್ತಿಯವರು' ಎಂಬ ವ್ಯಾಪಾರಿ ವರ್ಗವಾಗಿರಬಹುದು. ಪಂಡರಪುರದ ವಿಠಲೇಶ್ವರ ದೇವಾಲಯವನ್ನು ಶಾಂತಲಾ, ಏಚಲಾ, ಬಾಚಲಾ ರೀತಿಯ 'ವಿಠಲಾ' ಹೆಸರಿನ ಕನ್ನಡ ಸ್ತ್ರೀ ಕಟ್ಟಿಸಿ, ದೇವರಿಗೆ ತನ್ನ ಹೆಸರಿಟ್ಟಿರಬಹುದು.

(ವಿಠಲಾ<ವಿಠ್ಠಲ<ವಿಠ್ಠಳ<ವಿಠ್ಠಣ ಎಂದು ಭಾವಿಸಿದರೆ ಕನ್ನಡಗಿನಾದ ಒಬ್ಬ ಪುರುಷ ಕಟ್ಟಿಸಿದ ದೇವಾಲಯವಿದೆಂದು ಹೇಳಬೇಕಾಗುತ್ತದೆ).

ಕೊಲ್ಲಾಪುರ ಜಿಲ್ಲೆಯ ಮಾರಸಿಂಗಸೆಟ್ಟಿ ಬಸದಿ, ನಿಂಬಸಾಮಂತ ಜಿನಾಲಯ (ಕೊಲ್ಲಾಪುರ)ಗಳು ಕನ್ನಡಿಗರ ಹೆಸರನ್ನು ಹೊತ್ತ ದೇವಾಲಯಗಳಾಗಿವೆ.

ಈ ಹೆಸರುಗಳನ್ನು ನೋಡಿದರೆ ನಾಂದೇಡ, ಭೀಡ್, ಉಸ್ಮಾನಾಬಾದ, ಸಾಂಗಲಿ, ಸೊಲ್ಲಾಪುರ, ಕೊಲ್ಲಾಪುರ ಈ ೬ ಜಿಲ್ಲೆಗಳು, ಇದಕ್ಕೆ ಸಾತಾರಾ ಜಿಲ್ಲೆ (ಇಲ್ಲಿ ಶಾಸನಗಳು ಶೋಧವಾಗಿಲ್ಲ)ಯನ್ನೂ ಸೇರಿಸಿದರೆ ಈ ೭ ಜಿಲ್ಲೆಗಳ ದೇವಾಲಯಗಳು ಕನ್ನಡಿಗರ ಹೆಸರನ್ನು ಪ್ರತಿನಿಧಿಸುತ್ತವೆ. ಇವಲ್ಲದೆ ಕರ್ನಾಟಕ ಪ್ರಸಿದ್ಧಿಯ ಮಲ್ಲಿಕಾರ್ಜುನ, ಸಂಗಮೇಶ್ವರ, ಸಿದ್ಧೇಶ್ವರ ಮೊದಲಾದ ಹೆಸರಿನ ದೇವತೆಗಳ ಉಲ್ಲೇಖ ಇಲ್ಲಿಯ ಶಾಸನಗಳಲ್ಲಿ ಪದೇಪದೇ ಬರುತ್ತದೆ. ನೋಡಲಿಕ್ಕೆ ಇವೆಲ್ಲ ದೇವರ ಹೆಸರುಗಳಾಗಿದ್ದರೂ ಮೂಲತಃ ಸ್ಥಾಪಿಸಿದ ವ್ಯಕ್ತಿಗಳ ಹೆಸರೆಂಬುದನ್ನು ಇಲ್ಲಿ ನೆನೆಯಬೇಕು.

ನೇರವಾಗಿ ವ್ಯಕ್ತಿನಾಮಗಳಿಗೆ ಬಂದರೆ ಇದಕ್ಕಿಂತ ಮಹತ್ವದ ಅಂಶಗಳು ಪ್ರಕಟವಾಗುತ್ತವೆ. ಒಂದು ಹೆಸರು ಕನ್ನಡವೆನ್ನಲಿಕ್ಕೆ (೧) ಹೆಸರಿನ ಪೂರ್ವ ಆಕೃತಿಮಾ ಕನ್ನಡವಿರಬೇಕು. (೨) ಹೆಸರಿನ ಉತ್ತರ ಆಕೃತಿಮಾ ಕನ್ನಡ ಸಂಬಂಧವಾಚಿ ಇಲ್ಲವೆ ಕನ್ನಡ ವೃತ್ತಿವಾಚಿ ಇರಬೇಕು. (೩) ಹೆಸರಿನ ಪೂರ್ವ ಮತ್ತು ಉತ್ತರ ಆಕೃತಿಮಾಗಳೆರಡೂ ಕನ್ನಡವಾಗಿರಬೇಕು (ಇಲ್ಲಿ ಉತ್ತರ ಆಕೃತಿಮಾ ಸಂಬಂಧವಾಚಿ ಇಲ್ಲವೆ ವೃತ್ತಿವಾಚಿ ಇರಬಹುದು.) ಈ ಸೂತ್ರಗಳಿಗೆ ಉದಾಹರಣೆಯಾಗಿ ಅನೇಕ ಕನ್ನಡ ಹೆಸರುಗಳು ಮಹಾರಾಷ್ಟ್ರದ ಶಾಸನಗಳಲ್ಲಿ ಸಿಗುತ್ತವೆ.*

(೧) ಪೂರ್ವ ಆಕೃತಿಮಾ ಕನ್ನಡ :

ಎರಗದೇವ (ಕುಂ ೨೩), ಮಲೆಯಮತಿ (ನಾಂ ೨೭), ಕಪ್ಪದೇವ (ಸಾ. ಪ. ೬೯–೨), ಕರ್ಕಭೂಪ (ನಾಂ ೨೪).

(೨) ಉತ್ತರ ಆಕೃತಿಮಾ ಕನ್ನಡ :

(ಅ) ಸಂಬಂಧವಾಚಿ : ನಾಗವರ್ಮಯ್ಯ (ನಾ ೮), ತೈಲಪ (ನಾಂ ೧೪), ಶ್ರೀಧರಯ್ಯ (ನಾಂ ೩೧).

(ಆ) ವೃತ್ತಿವಾಚಿ : ಗೋವಿಂದಶೆಟ್ಟಿ (ದೇ ೨೮೫), ಧರ್ಮೋಜ (ನಾಂ ೩), ರಾಜರಸ (ದೇ ೪).

(೩) ಉಭಯ ಆಕೃತಿಮಾ ಕನ್ನಡ :

(ಅ) ಉತ್ತರ ಆಕೃತಿಮಾ ಸಂಬಂಧವಾಚಿ : ರೇವಣ (ನಾಂ ೨೩), ನಾಲಿಕಬ್ಬೆ (ನಾಂ ೨೩), ರೆಬ್ಬಲಾ (ನಾಂ ೧೬), ಸುಗ್ಗಲಾ (ನಾಂ ೨೩), ಎರೆಯಮ (ನಾಂ ೨೩), ಆಚಬೆ (ಕೆ. ಆಯ್. V–೮೫), ಪಿಟ್ಟಮ (ದೇ ೧), ಕಾಟಿಯಣ (ದೇ ೧).

---

* ಇಲ್ಲಿಂದ ಮುಂದಿನ ಸಂಕ್ಷೇಪಗಳ ವಿವರ ಹೀಗಿದೆ: ಕುಂ= ಇನ್‌ಸ್ಕ್ರಿಪ್ಶನ್ಸ ಫ್ರಾಮ್ ನಾರ್ದನ್ ಕರ್ನಾಟಕ ಆಯಂಡ್ ಕೊಲ್ಲಾಪು ಸ್ಟೇಟ್(ಕುಂದಣಗಾರ), ನಾಂ= ಇನ್‌ಸ್ಕ್ರಿಪ್ಶನ್ಸ ಫ್ರಾಮ್ ನಾಂದೇಡ ಡಿಸ್ಟ್ರಿಕ್ಟ(ಡಾ. ರಿತ್ತಿ, ಡಾ. ಶೇಳ್ಕೆ), ದೇ= ಮಹಾರಾಷ್ಟ್ರ ವ ಗೋವೆ ಶಿಲಾಲೇಖ–ತಾಮ್ರಪಟಾಂಚೇ ವರ್ಣನಾತ್ಮಕ ಸಂದರ್ಭಸೂಚೀ(ಶಾಂತರಾಮ ದೇವ).

(ಆ) ಉತ್ತರ ಆಕೃತಿಮಾ ವೃತ್ತಿವಾಚಿ : ನಾಕರಸ (ನಾಂ ೪), ರನ್ನೋಜ (ನಾಂ ೩೯), ಕೇತರಸ (ಕೆ. ಆಯ್. V–೮೫), ಮಲ್ಲಗಾವುಂಡ (ನಾಂ ೪).

ಇಲ್ಲಿಯ ಕನ್ನಡ ಹೆಸರುಗಳೂ, ಕನ್ನಡ ಸಂಬಂಧವಾಚಿ ಆಕೃತಿಮಾಗಳಾದ ಅಣ್ಣ–ಅಪ್ಪ–ಅಮ್ಮ ಅಬ್ಬೆಗಳೂ, ಕನ್ನಡವೃತ್ತಿವಾಚಿ ಆಕೃತಿಮಾಗಳಾದ ಗಾವುಂಡ–ಸೆಟ್ಟಿ ಇತ್ಯಾದಿಗಳೂ ಇವರೆಲ್ಲರ ಕನ್ನಡತನಕ್ಕೆ ಸಾಕ್ಷಿಯಾಗಿವೆ. ಇವಲ್ಲದೆ ಕನ್ನಡ ವಿಶಿಷ್ಟವಾದ ಎರಗ, ರನ್ನೋಜದಂಥ ಹೆಸರುಗಳೂ, ಕರ್ನಾಟಕಪ್ರಸಿದ್ಧಿಯ ಮಲ್ಲಿಕಾರ್ಜುನ ಇತ್ಯಾದಿಗಳೂ ಇಲ್ಲಿಯ ಶಾಸನಗಳಲ್ಲಿ ವಿಪುಲಸಂಖ್ಯೆಯಲ್ಲಿ ಕಾಣುತ್ತವೆ. ಆದರೆ ಕ್ವಚಿತ್ತಾಗಿ, ಸಾಹಣಿ, ರಾಣೆ ಎಂಬ ಉತ್ತರ ಆಕೃತಿಮಾವುಳ್ಳ ಸಂಗೆಯಸಾಹಣಿ, ಖೇಯಸಾಹಣಿ, ಜೈತಯಸಾಹಣಿ, ಮಸಯಿಯಸಾಹಣಿ, ಕಂಬಯರಾಣೆಯ, ಪೊಮ್ಮದೇವ ರಾಣೆಯ ಇತ್ಯಾದಿ ಹೆಸರುಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಭಾಗುಬಾಯಿ (ಭಾಯಿ), ಭಾಯಿಲಯ್ಯ, ಲಾಹಿದೇವ ಎಂಬ ಒಂದೆರಡು ಅಪರೂಪ ಉದಾಹರಣೆಗಳೂ ಇಲ್ಲಿವೆ.

ವ್ಯಕ್ತಿನಾಮಕ್ಕಿಂತ ಕುಟುಂಬನಾಮ (ಸರ್‌ನೇಮ), ಕುಟುಂಬನಾಮಕ್ಕಿಂತ ಗ್ರಾಮನಾಮ ತುಂಬ ಹಳೆಯದಾಗಿರುತ್ತದೆ. ಗ್ರಾಮ ಹುಟ್ಟುವಾಗಲೇ ಅಲ್ಲಿಯ ಜನರು ತಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನು ಬಿಂಬಿಸುವ ಹೆಸರನ್ನು ಅದಕ್ಕೆ ಇಟ್ಟಿರುತ್ತಾರೆ. ಆದುದರಿಂದ ಗ್ರಾಮನಾಮಗಳ ಅಧ್ಯಯನದಿಂದ ಆ ಜನರ ಭಾಷೆ ಯಾವುದು? ಆ ಪ್ರದೇಶದ ಸಂಸ್ಕೃತಿ ಏನು? ಎಂಬುದನ್ನು ಸರಿಯಾಗಿ ತೀರ್ಮಾನಿಸಬಹುದಾಗಿದೆ. ಆದರೆ ಹೀಗೆ ತೀರ್ಮಾನಿಸುವಲ್ಲಿ ಗಮನಿಸಬೇಕಾದುದು ಗ್ರಾಮನಾಮದ ಈಗಿನ ರೂಪವನ್ನಲ್ಲ; ಪ್ರಾಚೀನರೂಪವನ್ನು, ಇಂಥ ಪ್ರಾಚೀನರೂಪಗಳನ್ನು ಒದಗಿಸುವ ಪ್ರಾಮಾಣಿಕ ಗಣಿಗಳೆಂದರೆ ಶಾಸನಗಳು. ಆದುದರಿಂದ ಮಹಾರಾಷ್ಟ್ರದ ಕನ್ನಡ ಶಾಸನಗಳನ್ನು ಈ ದೃಷ್ಟಿಯಿಂದ ಅವಲೋಕಿಸಬಹುದಾಗಿದೆ.

ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಸಿಗುವ ಮಂಟೂರು, ಅಣಂದೂರು, ಕೊಳನೂರು, ಲತ್ತಲೂರುಗಳಲ್ಲಿಯ 'ಊರು' ಎಂಬುದು, ಕಿಸುಗಲ್ಲು, ಕಂದಗಲ್ಲುಗಳಲ್ಲಿಯ 'ಕಲ್ಲು' ಎಂಬುದು, ಕೋರಳ್ಳಿ, ಚಿಂಚವಳ್ಳಿ, ಸಂಗವಳ್ಳಿ (ಸಾಂಗಲಿ), ಸವರವಳ್ಳಿಗಳಲ್ಲಿಯ 'ಹಳ್ಳಿ' ಎಂಬುದು, ಮದ್ದೆಯಕೆರೆ, ಪೊಟ್ಟಲಕೆರೆಗಳಲ್ಲಿಯ 'ಕೆರೆ' ಎಂಬುದು ಈ ಗ್ರಾಮನಾಮಗಳು ಕನ್ನಡಿಗರಿಗೆ ಸಂಬಂಧಿಸಿದುವೆಂದು ಸಾರಿ ಹೇಳುತ್ತವೆ. ಇವಲ್ಲದೆ ಅಂಕುಲಗೆ, ಕರಂಜಿಗೆ, ಕಾವುಟಗೆ, ಜೇವುರಗೆ, ಇಂಗುಳಗೆ, ಮಯಿಸಿಗೆ, ಹೇರಿಳಗೆ, ಲಳಿಗೆ, ಅಸುಠಗೆ, ಏವಂಡಿಗೆ, ಮಾಳಿಗೆ, ಮಿರಿಂಜಿಗೆ, ದುಧನಿಗೆ, ನೇರಿಲಗೆ ಎಂಬಿವುಗಳ ಕೊನೆಯ 'ಗೆ' ಎಂಬುದು ಕನ್ನಡದ ಇಕ್ಕೆ, ಕೆಯ್ (=ಪ್ರದೇಶ) ಎಂಬಿವುಗಳ ಸವೆದ ರೂಪವಾಗಿವೆ. ಕರ್ನಾಟಕದಲ್ಲಿ ಇಂಥ 'ಗೆ' ಕೊನೆಯುಳ್ಳ ಹೆಸರುಗಳು ಸಾವಿರ ಸಂಖ್ಯೆಯಲ್ಲಿ ಸಿಗುತ್ತವೆ. ಗುಲಬರ್ಗಾದಿಂದ ವಿಜಾಪೂರಕ್ಕೆ ಬರುವ ದಾರಿಯಲ್ಲಿ ಕಲಂಬರಗೆ, ಗೋಗೆ, ಜೇವರಗೆ, ನೇದಲಗೆ, ಮೋರಟಗೆ, ಜೇರಟಗೆ, ಗಬ್ಬುಸಾವಳಗೆ, ಗುತ್ತರಗೆ, ಸಿಂದಗೆ, ಚಿಕ್ಕಸಿಂದಗೆ, ಹೊನ್ನುಟಗೆ, ಹಿಪ್ಪರಗೆ, ಶಿವಣಗೆ, ಕುಮಟಗೆ, ಕೌಲಗೆ ಎಂಬ ಹೆಸರುಗಳು ಸಾಲುಗಟ್ಟಿರುವುದನ್ನು ಇಲ್ಲಿ ನೆನೆಯಬಹುದು. ಕೆಲವು ಸಲ ಕೆಯ್ ಎಂಬುದು 'ಕೆ' ರೂಪದಲ್ಲಿಯೂ ಸಿಗುತ್ತದೆ. ಉದಾ: ಕರ್ನಾಟಕದಲ್ಲಿ ಚಟ್ಟರಕೆ, ಹತ್ತರಕೆ, ಮಹಾರಾಷ್ಟ್ರದಲ್ಲಿ ಕಾತರಕೆ.

ಅಕ್ಕಲಕೋಟ ಶಾಸನದಲ್ಲಿ ಬರುವ ಚಿಕ್ಕಕಾವುಟಗೆ ಹೆಸರಿನ ಹಿಂದಿರುವ 'ಚಿಕ್ಕ' ಕನ್ನಡವೆಂದು ಬೇರೆ ಹೇಳಬೇಕಿಲ್ಲ. ಪಿಟವಡೆ>ಪಿಟೋಡೆ, ಪಿಂಪಲಜಾಯಿ>ಪಿಂಪಲಜೆ ಎಂಬಲ್ಲಿ ಪಕಾರವು

ಹಕಾರವಾಗದೆ ಹಾಗೆಯೇ ಉಳಿದಿದೆ. ಆದರೆ ಪೊಟ್ಟಳ ಇಂದು ಹೊಟ್ಟುಲ ಆಗಿದೆ, ಇದಕ್ಕೆ ವಿರುದ್ಧವೆನ್ನುವಂತೆ ಶಾಸನೋಕ್ತ ಹಿಪ್ಪಳಗಾವೆ ಇಂದು ಪಿಪ್ಪಲಗಾವ್ ಆಗಿದೆ. ಬಹುಶಃ ಕನ್ನಡಿಗರ ಬಾಯಿಯಲ್ಲಿ ಪ–ಹ ವ್ಯತ್ಯಾಸವಾಗಿದೆ. ಮರಾಠಿಗರ ಬಾಯಿಯಲ್ಲಿ ವ್ಯತ್ಯಾಸವಾಗಿಲ್ಲವೆಂಬುದು ಗಮನಿಸಬೇಕಾದ ಅಂಶವಾಗಿದೆ.

ಔರಂಗಾಬಾದ ಜಿಲ್ಲೆಯ ತಾಲೂಕು ಸ್ಥಳವಾದ 'ಕನ್ನಡ' ಎಂಬುದು ತಮ್ಮ ನಾಡನ್ನು ಪ್ರತಿನಿಧಿಸುತ್ತದೆಯೆಂದು ಕನ್ನಡಿಗರು ಹೆಮ್ಮೆಪಡುತ್ತಾರೆ. ಆದರೆ ಇದಕ್ಕೂ ಕನ್ನಡಕ್ಕೂ ಏನೂ ಸಂಬಂಧವಿಲ್ಲವೆಂದು ತೋರುತ್ತದೆ. ಇದರ ಸರಿಯಾದ ರೂಪ ಕನ್ನವಾಡ (ಕೃಷ್ಣ+ವಾಟ=ಬಾಡ) ಇರಬಹುದು. ಕೊಲ್ಲಾಪುರ ಜಿಲ್ಲೆಯ ಶಾಹುವಾಡಿ ತಾಲೂಕಿನ ಶಾಸನದಲ್ಲಿ ಬರುವ ಕನ್ನವಾಡ ಎಂಬ ಗ್ರಾಮವು ನೆರೆಯ ಶಿರೋಳ ತಾಲೂಕಿನ ಕನವಾಡವೇ ಆಗಿದ್ದರೆ, ಔರಂಗಾಬಾದ ಜಿಲ್ಲೆಯಲ್ಲಿ ಈ 'ಕನ್ನವಾಡ'ವು ಕನ್ನಡವಾಗಿದೆಯೆನ್ನಬಹುದು. ಪ್ರದೇಶ ಭೇದದಿಂದ ಒಂದು ಹೆಸರು ಎರಡು ಭಿನ್ನ ರೂಪಗಳಲ್ಲಿ ಕಾಣಿಸಿಕೊಳ್ಳುವುದು ಅಸಂಭವವೇನಲ್ಲ. ಉದಾಃ ಮೊರಂಬ ಎಂಬುದು ಒಂದು ಕಡೆ ಮೊರಬ ಎಂದೂ, ಇನ್ನೊಂಡು ಕಡೆ ಮುರಮ್ ಎಂದೂ ಉಚ್ಚರಿಸಲ್ಪಡುತ್ತದೆ.

ಗ್ರಾಮನಾಮಗಳಲ್ಲಿ ವ್ಯಕ್ತಿವಾಚಿಯಾದುವು ಇತ್ತೀಚಿನವು, ಜನಾಂಗವಾಚಿಯಾದುವು ಹಳೆಯವು, ನಿಸರ್ಗವಾಚಿಯಾದುವು ಇನ್ನೂ ಹಳೆಯವು ಎಂದು ನಾನು ಬೇರೆಡೆ ತೋರಿಸಿಕೊಟ್ಟಿದ್ದೇನೆ.[೧] ಈ ದೃಷ್ಟಿಯಿಂದ ನೋಡಿದರೆ ಲತ್ತಲೂರು, ನೇರಿಲಗೆ, ಅಂಕುಲಗೆಗಳು 'ಶಾಂತಲಾ'ದಂತೆ ಲತ್ತಲಾ, ನೇರಿಲಾ, ಅಂಕುಲಾ ಹೆಸರಿನ ಸ್ತ್ರೀ ಹೆಸರಿನಲ್ಲಿ ಹುಟ್ಟಿದ ಗ್ರಾಮಗಳಾಗಿರಬಹುದು. ದುದನಿಗೆ ಎಂಬುದು ದುದ್ದಣ್ಣನ ಇಕ್ಕೆ ಎಂಬ ಅರ್ಥವುಳ್ಳುದಾಗಿರಬೇಕು. ಇವೆಲ್ಲ ವ್ಯಕ್ತಿವಾಚಿ ಗ್ರಾಮಗಳು, ಇತ್ತೀಚಿನವು. ಶಿಂತರಗೆ, ಕಾತರತೆ, ಪಂಡರಗೆ, ನಾಗರಹಾಳು ಎಂಬಿವು ಶಿಂತರು, ಕಾತರು, ಪಂಡರು, ನಾಗರು ಎಂಬ ಜನಾಂಗಗಳ ನೆಲೆಗಳಾಗಿರಬಹುದು. ಇವೆಲ್ಲ ಜನಾಂಗವಾಚಿ ಗ್ರಾಮಗಳು, ಹಳೆಯವು. ಕಿಸುಗಲ್ಲು, ಕಂದಗಲ್ಲು ಇತ್ಯಾದಿ 'ಕಲ್ಲು' ಆಕೃತಿಮಾಗಳನ್ನೊಳಗೊಂಡ ನಿಸರ್ಗವಾಚಿ ಗ್ರಾಮಗಳು ಇನ್ನೂ ಹಳೆಯವೆಂದು ಹೇಳಬಹುದು.

ಗ್ರಾಮನಾಮ ಯಾರೊಬ್ಬರ ವೈಯಕ್ತಿಕ ಆಸ್ತಿಯಲ್ಲ, ಸಾರ್ವಜನಿಕ ಆಸ್ತಿ. ಹೀಗಾಗಿ ವೈಯಕ್ತಿಕ ಆಸ್ತಿಯಲ್ಲವೆಂಬ ಉಪೇಕ್ಷೆ, ಅನೇಕರ ಬಾಯಿಗೆ ಸಿಗುವಿಕೆ ಕಾರಣವಾಗಿ ಅವು ತೀವ್ರ ರೂಪಾಂತರಕ್ಕೆ ಗುರಿಯಾಗುತ್ತವೆ. ಅದರಲ್ಲಿಯೂ ಕನ್ನಡ ಹೆಸರು ಕನ್ನಡದವರ ಬಾಯಲ್ಲಿ ಒಂದು ರೀತಿ ಸವೆದರೆ, ಆರ್ಯ ಜನಾಂಗವಾದ ಮರಾಠರ ಬಾಯಲ್ಲಿ ಇನ್ನೊಂದು ರೀತಿ ಸವೆಯುತ್ತದೆ. ಉದಾ. ಮೊರಂಬ ಎಂಬ ಹೆಸರು ಕರ್ನಾಟಕದಲ್ಲಿ ಮೊರಬ, ಮಹಾರಾಷ್ಟ್ರದಲ್ಲಿ ಮುರಮ್ ಆಗಿದೆ. ಹೀಗಾಗಿ ಸಧ್ಯ ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿರುವ ಕನ್ನಡ ಗ್ರಾಮನಾಮಗಳ ಅಧ್ಯಯನಕ್ಕೆ ಭಿನ್ನದೃಷ್ಟಿಕೋನ ಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಈಗ ಪ್ರಚಲಿತವಿರುವ ಲ, ಲಿ, ಲ್ಲಿ, ಳ, ಳಿ, ಳ್ಳಿ ಅಂತ್ಯದ ಗ್ರಾಮನಾಮಗಳು ಕನ್ನಡದ ಪಳ್ಳಿ, ಪಾಳ್ಯೆ, ಹಾಳು, ಪೊಳಲು, ಕೆಲವೊಮ್ಮೆ ಕಲ್ಲು (ಲು>ಲ), ವಾಟ (ವಾಡೆ>ವಾಳೆ>ಳೆ>ಲೆ>ಲ)ಗಳಿಂದ ಬಂದಿರುವ ಸಾಧ್ಯತೆಯಿರುತ್ತದೆ. ಉದಾ: ಅವರವಾಡಿ>ಅವರಾಲಾ, ಸವರವಳ್ಳಿ>ಸಗ್ರೋಳಿ, ಕುರವಲಿ>ಕುರ್ಲಿ, ನಾಗರಹಾಳು>ನಾಗ್ರಾಲ್, ಸಂಗವಳ್ಳಿ>ಸಾಂಗಲಿ.

---

೧. ಧಾರವಾಡ : ಗ್ರಾಮನಾಮ ವಿವೇಚನೆ–ಜಾನಪದ ಜಗತ್ತು, ೧–೬.

ಕೆಲವು ಕನ್ನಡ ಗ್ರಾಮನಾಮಗಳ ಕೊನೆಯ 'ಗೆ' (<ಕೆ<ಕೆಯ್) ಕಳಚಿ ಹೋಗಿದೆ. ಉದಾ: ಮಿರಿಂಜಿಗೆ > ಮಿರಜಿ. ನೇರಿಲಿಗೆ > ನೇರಲಿ. ಇನ್ನೂ ಕೆಲವು ಸಲ 'ಗೆ' ಎಂಬುದು ಗಾವ್ (ಗ್ರಾಮ) ರೂಪ ಪಡೆದಿದೆ. ಉದಾ: ಕೂಳಿಗೆ > ಕೂಳಿಗಾವ್. ಪಂಡರಗೆ ಎಂಬುದು ಪಂಡರಪುರವಾಗುವಲ್ಲಿ, ಕನ್ನಡದ 'ಗೆ' ಕಾರವನ್ನು ತಳ್ಳಿ, ಸಂಸ್ಕೃತದ 'ಪುರ' ಪ್ರವೇಶಿಸಿದೆ.

ಕೆಲವು ಸಲ ಒಂದು ಕನ್ನಡ ಗ್ರಾಮನಾಮರೂಪ ಯಾವ ನಿಯಮಕ್ಕೂ ಬದ್ಧವಾಗದೆ ಬದಲಾಗುತ್ತದೆ. ಉದಾ: ಕರಡಿಕಲ್ಲು > ಕರಾಡಖೇಡ. ಎಕ್ಕಲಗಾವೆ>ಏಕಲಾರ, ಜುನ್ನವಾಣಿ>ಜುನ್ನಿ, ಚಿಂಚವಳ್ಳಿ>ಚಿಂಚಖೇಡ. ಈ ದಾರಿಯಲ್ಲಿ ಅಧಿಕ ಬದಲಾವಣೆಗೆ ಗುರಿಯಾದುದು ಮುಂಬೈ. ಮೊದಲು ಕನ್ನಡಿಗರ ಬಾಯಿಗೆ, ಆಮೇಲೆ ಮರಾಠರ ಬಾಯಿಗೆ, ತರುವಾಯ ಮುಸಲ್ಮಾನರ ಬಾಯಿಗೆ, ಕೊನೆಗೆ ಇಂಗ್ಲೀಷರ ಬಾಯಿಗೆ, ಏಕೆ ಅಂತರ್‌ರಾಷ್ಟ್ರೀಯ ಬಾಯಿಗೆ ಸಿಕ್ಕು ಬಾಂಬೆ ಆಗಿರುವ ಇದರ ನಿಷ್ಪತ್ತಿ ಇಂದಿಗೂ ಚರ್ಚೆಯ ವಿಷಯವಾಗಿ ಉಳಿದಿದೆ. ಪ್ರಾಚೀನ ದಾಖಲೆಗಳಲ್ಲಿ ಈ ಹೆಸರು 'ಮುಂಬಾಯಿ' ಎಂದು ಸಿಗುತ್ತದೆ. ಇದು ಕರ್ನಾಟಕದ ನಾಗಾಯಿ, ಕೆಂಬಾಯಿಗಳನ್ನು ನೆನಪಿಸುತ್ತದೆ. ಇವುಗಳ ಸರಿಯಾದ ರೂಪ ನಾಗಾವಿ (ನಾಗವಾವಿ), ಕೆಂಬಾವಿ ಇದೇ ರೀತಿ ಮುಂಬಾಯಿಯ ಮೂಲರೂಪವೂ ಮುಂಬಾವಿ ಇರಬಹುದು. ಇಲ್ಲಿ ಕನ್ನಡದ 'ಬಾವಿ' ಉತ್ತರ ಪದವಾಗಿದೆ. ಧಾರವಾಡ ಸಮೀಪದ ಅಮ್ಮಿನಬಾವಿಗೆ 'ಅಮ್ಮಯ್ಯ'ನೆಂಬುವನು ಕಟ್ಟಿಸಿದ ಬಾವಿಯಿಂದಾಗಿ ಹೆಸರು ಬಂದಂತೆ ಇಲ್ಲಿಯೂ ಒಂದು ಸುಪ್ರಸಿದ್ಧ ಬಾವಿ ಕಾರಣವಾಗಿ ಮುಂಬಾವಿ ಹೆಸರು ಹುಟ್ಟಿರಬಹುದು. ಈ ಬಾವಿ ನೈಸರ್ಗಿಕವಾಗಿದ್ದರೆ ಈ ಊರು ಪ್ರಾಚೀನ; ವ್ಯಕ್ತಿಯೊಬ್ಬ ಕಟ್ಟಿಸಿದುದಾಗಿದ್ದರೆ ಈ ಊರು ಅರ್ವಾಚೀನ. ಒಂದು ವೇಳೆ ಈ ನಿಷ್ಪತ್ತಿ ನಿಜವಿದ್ದರೆ ಮುಂಬೈ ಮೂಲತಃ ಕನ್ನಡಿಗರೆಂದು, ಈ ಹೆಸರು ಮೂಲತಃ ಕನ್ನಡದ್ದೆಂದು ಹೇಳುವವರಿಗೆ ಹೊಸ ಆಧಾರವೊಂದು ಲಭಿಸಿದಂತಾಗುತ್ತದೆ.

೧೪. ಸ್ಮಾರಕ ಶಾಸನಗಳು

ವೀರಗಲ್ಲು, ಮಾಸ್ತಿಕಲ್ಲು, ನಿಷಧಿಗಲ್ಲು, ವೇಳೆವಾಳಿಕಲ್ಲುಗಳು 'ಸ್ಮಾರಕಶಾಸನ' ವರ್ಗಕ್ಕೆ ಸೇರುತ್ತವೆ. ಇವುಗಳ ಸಂಖ್ಯೆ ಕರ್ನಾಟಕದಲ್ಲಿ ವಿಪುಲ. ಮಹಾರಾಷ್ಟ್ರದಲ್ಲಿ ಸಿಗುವ ಒಟ್ಟು ಸ್ಮಾರಕ ಶಿಲೆಗಳನ್ನು ಕುರಿತು "More number of memorial stones have been located in the Karnataka State than in the Maharastra" ಎಂದು ಶ್ರೀ ಎಸ್. ಬಿ. ದೇವ ಹೇಳುತ್ತಾರೆ.[೧] ಅವರೇ ಮುಂದುವರಿದು "It is significant to note that largest number of memorial stones or viragals is encounted in Sholapur Dt. In Maharastra which borders on the present State of Karnatak. Next comes the Kolhapur Dt. which is also close to Karnatak. The provenance of the memorial stones in the rest of the region of Maharastra, including Vidarbha is sporadic. They have been located

---

೧. Memorial Stones Ed. S. Settar and Sontheimer, P. 255.

in the Ahamadanagar, Kolhapur, Poona, Satara, Sholapur and Thana Dts. Their occurance in the eight districts of vidarbha, is much less common than in the districts mentioned above" ಎಂದು ಮಹಾರಾಷ್ಟ್ರದಲ್ಲಿ ಹರಡಿಕೊಂಡಿರುವ ಸ್ಮಾರಕ ಶಿಲೆಗಳ ಒಂದು ಚಿತ್ರವನ್ನು ಕೊಟ್ಟಿದ್ದಾರೆ.[೧] ಈ ಸಂದರ್ಭದಲ್ಲಿ ಡಾ. ಶಂ. ಬಾ. ಜೋಶಿ ಅವರ ಅಭಿಪ್ರಾಯ ಹೀಗಿದೆ : "ಕನಾಟಕದಲ್ಲಿ ವೀರಗಲ್ಲಿಗಳಿಲ್ಲದ ಭಾಗವೇ ಇಲ್ಲ. ಮಹಾರಾಷ್ಟ್ರದವರಿಗೆ ವೀರಗಲ್ಲುಗಳು ಅಪರಿಚಿತ. ಏಕೆಂದರೆ ಮರಾಠಿ ಭಾಷೆಯಲ್ಲಿ 'ವೀರಗಲ್ಲು' ಎಂಬುದಕ್ಕೆ ಸಮಾನಾರ್ಥಕ ಶಬ್ದವೇ ಇಲ್ಲ. ಆದರೂ ಮಹಾರಾಷ್ಟ್ರದಲ್ಲಿ ವೀರಗಲ್ಲುಗಳಿಗೆ ಕೊರತೆಯಿಲ್ಲ. . . ಯಾ ದಗಡನಾ ವೀರಗsಳ ಮಣ್ಣುತಾತ ಎಂದು ಮಹಾರಾಷ್ಟ್ರ ಸಂಶೋಧಕರು ಹೇಳುವ ವೀರಗsಳ ಎಂಬ ಮಾತಿನಿಂದಲೇ ಇವು ಆರೆಯವಲ್ಲ ಎಂಬುದು ಸ್ಪಷ್ಟವಾಗುತ್ತದೆ. . . . ಕರ್ನಾಟಕದ ದಕ್ಷಿಣ ತುದಿಯಲ್ಲಿ ಸಿಕ್ಕುವ ವಿಶಿಷ್ಟ ಪ್ರಕಾರದ ವೀರಗಲ್ಲಿನಂತಹ ನಟ್ಟುಕಲ್ಲುಗಳೇ ಉತ್ತರದ ನಾಸಿಕ ಮೊದಲಾದ ಕಡೆ ಸಿಗುತ್ತವೆ. ಈವರೆಗೆ ಬೆಳಕಿಗೆ ಬಂದಿರುವ ಸಾವಿರಾರು ವೀರಗಲ್ಲುಗಳಲ್ಲಿ ಆರೆ ಲಿಪಿಯವು ಎಷ್ಟು ಹುಡುಕಿದರೂ ಹತ್ತು ಹದಿನೈದಕ್ಕಿಂತ ಹೆಚ್ಚು ದೊರೆತಿಲ್ಲ." ಈ ಅಭಿಪ್ರಾಯಗಳು ಮಹಾರಾಷ್ಟ್ರದ ಸ್ಮಾರಕ ಶಿಲೆಗಳ ಬಗ್ಗೆ ಒಂದು ಕಲ್ಪನೆಯನ್ನು ಕೊಡುತ್ತದೆ.

ಈಗ ಮಹಾರಾಷ್ಟ್ರದಲ್ಲಿ ಲಭ್ಯವಿರುವ ಕನ್ನಡ ಶಾಸನಗಳನ್ನು ಸಮೀಕ್ಷಿಸಿದರೆ ವೀರಗಲ್ಲು, ಮಾಸ್ತಿಕಲ್ಲು, ನಿಷಧಿಕಲ್ಲುಗಳ ಸಂಖ್ಯೆ ಎಲ್ಲ ಸೇರಿ ೧೦ನ್ನು ಮೀರಲಾರದು. ಕೊಲ್ಲಾಪುರ ಜಿಲ್ಲೆಯ ಖಿದ್ರಾಪುರದಲ್ಲಿ ಬೊಪ್ಪಣ್ಣದಂಡನಾಯಕ, ಸಿರಿಯಣ, ಭೈರವರಿಗೆ ಸಂಬಂಧಿಸಿದ ೩-೪ ವೀರಗಲ್ಲುಗಳು ಸಿಗುತ್ತವೆ. ನಾಂದೇಡ ಜಿಲ್ಲೆಯ ಏತಲ ಗ್ರಾಮದ "ಸ್ವಸ್ತಿ ಶ್ರೀಮತು ಮಲೆಯಮತಿಯರಸಿಯರ ಕಂಭ" ಎಂಬ ಬರೆವಣಿಗೆಯ ಶಾಸನ ಸಹಗಮನ ಮರಣಸ್ಮಾರಕ ಇಲ್ಲವೆ ಸಾಮಾನ್ಯ ಮರಣಸ್ಮಾರಕ ಆಗಿರಬಹುದು. ಸಾಂಗಲಿ ಜಿಲ್ಲೆಯ ಖಟಾವ್ ಗ್ರಾಮದಲ್ಲಿಯದು ಸತಿಕಲ್ಲು ಎಂದು ಅದರ ಸಂಪಾದಕರು ಹೇಳುತ್ತಾರೆ. ಉಸ್ಮಾನಾಬಾದ ಜಿಲ್ಲೆಯ ರಾಮಲಿಂಗ ಮುದ್ಗಲದಲ್ಲಿ ದಾಮನಂದಿ, ದಿವಾಕರನಂದಿ, ಧನಕೀರ್ತಿಭಟ್ಟಾರಕ, ಅಭಯನಂದಿ ಭಟ್ಟಾರಕರ ನಿಷಧಿ ಶಾಸನಗಳಿವೆ. ಪ್ರಾಣಘಾತ ಮಾಡಿಕೊಂಡ ವೇಳೆವಾಳಿ ಸ್ಮಾರಕಗಳು ಒಂದೂ ಸಿಗುವುದಿಲ್ಲ. ಬಹುಶಃ ಕನ್ನಡ ಶಾಸನಗಳು ಮಹಾರಾಷ್ಟ್ರದಲ್ಲಿ ಪ್ರಾರಂಭವಾಗುವ ಹೊತ್ತಿಗೆ ಅಂದರೆ ೧೧-೧೨ನೆಯ ಶತಮಾನದ ಸುಮಾರಿಗೆ ಉತ್ತರ ಕರ್ನಾಟಕದಲ್ಲಿ ವೇಳೆವಾಳೆ ಸಂಪ್ರದಾಯ ನಿಂತುಹೋದುದೇ ಇದಕ್ಕೆ ಕಾರಣವಾಗಿರಬಹುದು.

೧೫. ಧಾರ್ಮಿಕ ಸ್ವರೂಪ

ಧಾರ್ಮಿಕ ಕ್ಷೇತ್ರದಲ್ಲಿ ಮಾರ್ಗಸಂಪ್ರದಾಯ (great tradition) ಮತ್ತು ದೇಶಿ ಸಂಪ್ರದಾಯ (Little tradition) ಎಂಬ ಎರಡು ಸಮಾಂತರ ಸ್ತರಗಳು ಯಾವ ಕಾಲಕ್ಕೂ ಅಸ್ತಿತ್ವದಲ್ಲಿರುತ್ತವೆ. ಇವುಗಳಲ್ಲಿ ಶಾಸನಗಳು ದಾಖಲಿಸುವುದು ಮಾರ್ಗಸಂಪ್ರದಾಯದ ಅಂದರೆ ಪ್ರತಿಷ್ಠಿತರ ಧಾರ್ಮಿಕ

1. Memorial Stones Ed. S. Settar & Sontheimer, P. 255-256.

ಚಟುವಟಿಕೆಗಳನ್ನು, ಈ ದೃಷ್ಟಿಯಿಂದ ನೋಡಿದರೆ ಮಹಾರಾಷ್ಟ್ರದ ಕನ್ನಡ ಶಾಸನಗಳು ಕರ್ನಾಟಕದ ಕನ್ನಡ ಶಾಸನಗಳಿಗಿಂತ ಭಿನ್ನವಾದುದದನ್ನು ತಿಳಿಸುವುದಿಲ್ಲವೆಂದೇ ಹೇಳಬೇಕು.

ಜೈನಧರ್ಮ: ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಬೌದ್ಧಧರ್ಮದ ಬಗ್ಗೆ ಅನುಷಂಗಿಕ ಸೂಚನೆಯೂ ಕಂಡುಬರುವುದಿಲ್ಲ. ಜೈನ ಸೂಚನೆಗಳು ಕೊಲ್ಲಾಪೂರ ಜಿಲ್ಲೆಯ ಶಾಸನಗಳಲ್ಲಿ ಗಾಢವಾಗಿ, ಸಾಂಗಲಿ ಜಿಲ್ಲೆಯಲ್ಲಿ ಸ್ವಲ್ಪ ವಿರಳವಾಗಿ, ಮೇಲೆ ಹೋದಂತೆ ಇನ್ನೂ ವಿರಳವಾಗಿ ಕಾಣುತ್ತವೆ. ಕೊಲ್ಲಾಪುರ ಶಿಲಾಹಾರರು ಮಹಾಲಕ್ಷ್ಮೀಲಬ್ಧ ವರಪ್ರಸಾದರು, ವೈದಿಕ ಪುರಾಣಪುರುಷ 'ಜೀಮೂತವಾಹನಾನ್ವಯ'ದವರು. ಆದರೆ ಸ್ಥಳೀಯ ಜೈನಸಮಾಜದ ಸಾಂದ್ರತೆ ಮತ್ತು ಜೈನಮತೀಯ ನಂಟು ಕಾರಣವಾಗಿ ಇವರು ಈ ಧರ್ಮದ ಬಗ್ಗೆ ತುಂಬ ಔದಾರ್ಯತೋರಿದ್ದಾರೆ. ನಿಂಬ ಸಾಮಂತನಂಥ ಮಹಾವ್ಯಕ್ತಿಗಳ, ಮಾಘಣಂದಿಸಿದ್ಧಾಂತಿಗಳಂಥ ಮಹಾಸ್ವಾಮಿಗಳ ಪ್ರಭಾವ ಕಾರಣವಾಗಿ ಈ ಭಾಗದಲ್ಲಿ ಜೈನಧರ್ಮ ತುಂಬ ಸತ್ವಶಾಲಿಯಾಗಿದ್ದಿತು. ಮಹಾರಾಷ್ಟ್ರದ ಜೈನರೆಂದರೆ ಕರ್ನಾಟಕದ ಜೈನರೇ; ಇವರು ಓದುತ್ತಿದ್ದ ಪ್ರಾಚೀನ ಧಾರ್ಮಿಕ ಸಾಹಿತ್ಯವೆಂದರೆ ಪ್ರಾಚೀನ ಜೈನ ಕನ್ನಡಸಾಹಿತ್ಯವೇ ಎಂದು ಇಲ್ಲಿ ಸಿಗುವ ಜೈನಹಸ್ತಪ್ರತಿಗಳಿಂದ ತಿಳಿದುಬರುತ್ತದೆ. ಇದಕ್ಕೆ ಅನೇಕ ಕನ್ನಡ ಶಾಸನಗಳು ಸಾಕ್ಷಿಯಾಗಿ ನಿಂತಿವೆ.

ಶ್ರೀ ಮೂಲಸಂಘ ಪುನ್ನಾಗವೃಕ್ಷಮೂಲಗಣ (ಹೊನ್ನೂರು-ಕೊಲ್ಲಾಪುರ ಜಿಲ್ಲೆ), ಮೂಲಸಂಘ ದೇಶಿಯಗಣ ಪುಸ್ತಕಗಚ್ಛ (ಕೊಲ್ಲಾಪುರ), ಮೂಲಸಂಘ ಸೇನಗಣ ಪೊಗರಿಗಚ್ಛ (ಮುರಮ್-ಉಸ್ಮಾನಾಬಾದ ಜಿಲ್ಲೆ), ಸೇನಗಣ, ಯಾಪನೀಯ ಸಂಘ (ಮುರಮ್-ಉಸ್ಮಾನಾಬಾದ ಜಿಲ್ಲೆ), ವಾಡಿಯೂರಗಣ ಯಾಪನೀಯ ಸಂಘ (ಧರ್ಮಪುರಿ-ಬೀರ್ ಜಿಲ್ಲೆ) ಹೆಸರಿನ ಸಂಘ, ಗಣ, ಗಚ್ಛಗಳು ಇಲ್ಲಿ ಕಾಣಸಿಗುತ್ತವೆ. ಇದರಿಂದ ಕೊಲ್ಲಾಪುರ ಪ್ರದೇಶದಲ್ಲಿ ಮೂಲಸಂಘ ಮತ್ತು ಅದರ ಶಾಖೆಗಳಾದ ಪುನ್ನಾಗವೃಕ್ಷಮೂಲಗಣ, ದೇಶಿಯಗಣ, ಸೇನಗಣಗಳೂ, ಉಸ್ಮಾನಾಬಾದ, ಭೀಡ್ ಜಿಲ್ಲೆಗಳಲ್ಲಿ ಯಾಪನೀಯ ಸಂಘ ಮತ್ತು ಅದರ ಶಾಖೆಗಳಾದ ಸೇನಗಣ, ವಾಡಿಯೂರು ಗಣಗಳೂ ಅಸ್ತಿತ್ವದಲ್ಲಿದ್ದವೆಂದು ಗೊತ್ತಾಗುತ್ತದೆ.

ಗಂಡರಾದಿತ್ಯನ ಪರಮವಿಶ್ವಾಸಿಯಾದ ನಿಂಬಸಾಮಂತನು ಕೊಲ್ಲಾಪುರದಲ್ಲಿ 'ರೂಪನಾರಾಯಣ' ಹೆಸರಿನ ಆದಿತೀರ್ಥಂಕರ ಬಸದಿಯನ್ನೂ ಸಂತೆಯ ಮುದ್ಗೊಡೆಯಲ್ಲಿ ಪಾರ್ಶ್ವನಾಥ ಬಸದಿಯನ್ನೂ ಕಟ್ಟಿಸಿದ್ದಾನೆ. ಹೇರಿಳೆಗೆಯಲ್ಲಿ ನೇಮಗಾವುಂಡನು ಚಂದ್ರನಾಥಬಸದಿ ಅಥವಾ ತ್ರಿಭುವನತಿಲಕಬಸದಿ ಅಥವಾ ತೀರ್ಥದ ಬಸದಿಯನ್ನು, ಬಮ್ಮಗಾವುಂಡನು ಬೇರೊಂದು ಬಸದಿಯನ್ನು ನಿರ್ಮಿಸಿದ್ದಾರೆ. ಸ್ವತಃ ಗಂಡರಾದಿತ್ಯನೇ ಆಜರೆಯಲ್ಲಿ ತ್ರಿಭುವನತಿಲಕಬಸದಿ ಕಟ್ಟಿಸಿರುವುದಾಗಿ ಸೋಮದೇವನ ಶಬ್ದಾರ್ಣವ ಚಂದ್ರಿಕಾ ತಿಳಿಸುತ್ತದೆ.

ಕೊಲ್ಲಾಪುರದ ಶಾಂತಿನಾಥಬಸದಿಗೆ ಶಿಲಾಹಾರ ವಿಜಯಾದಿತ್ಯ ಮತ್ತು ಭೋಜ IIರು ಬೇರೆ ಬೇರೆ ಕಾಲಗಳಲ್ಲಿ ದಾನಕೊಟ್ಟುದು ತಿಳಿದುಬರುತ್ತದೆ. ಭಾಳಮಣಿ (ಸಾಂಗಲಿ ಜಿಲ್ಲೆ), ಮಾಳಕವತೆ (ಸೊಲ್ಲಾಪುರ ಜಿಲ್ಲೆ)ಗಳಲ್ಲಿ ಜೈನಮಂದಿರಗಳಿದ್ದ ಉಲ್ಲೇಖ ಅಲ್ಲಿಯ ಶಾಸನಗಳಲ್ಲಿದೆ. ಮಹಾಮಂಡಳೇಶ್ವರ ಅಮ್ಮರಸದೇವನು ನೇಮಿನಾಥ ಬಸದಿ ಕಟ್ಟಿಸಿದ ಉಲ್ಲೇಖ ನಿಂಬರಗಿ (ಸೊಲ್ಲಾಪುರ ಜಿಲ್ಲೆ) ಶಾಸನದಲ್ಲಿದೆ. ಮೊರಂಬ (ಮುರಮ್ – ಉಸ್ಮಾನಾಬಾದ ಜಿಲ್ಲೆ)ದಲ್ಲಿ ದಾಸಿಸೆಟ್ಟಿಯು ಮೂಲಸಂಘ ಸೇನಗಣ ಪೊಗರಿಗಚ್ಛದ ಬಸದಿಯನ್ನೂ ರಾಜರಸನು ತನ್ನ

ಹೆಸರಿನಲ್ಲಿ ರಾಜಜಿನಾಲಯವನ್ನೂ ತಾಯಿಯ ಹೆಸರಿನಲ್ಲಿ ಸೂರಜಿನಾಲಯವನ್ನೂ ಕಟ್ಟಿಸಿದ್ದಾರೆ. ಮುರಮ್ (ಮೊರಂಬ ಉಸ್ಮಾನಾಬಾದ ಜಿಲ್ಲೆ)ದಲ್ಲಿ ದಂಡನಾಯಕ ಕಾಳಿಮಯ್ಯನು ನಿಗಳಂಕಮಲ್ಲ ಜಿನಾಲಯವನ್ನು ಕಟ್ಟಿಸಿದ್ದಾರೆ. ಧರ್ಮಪುರಿ (ಭೀಡ್ ಜಿಲ್ಲೆ)ಯಲ್ಲಿ ಬಂಕಿಸೆಟ್ಟಿ ಬಸದಿ, ಬೆಸಕಿಸೆಟ್ಟಿ ಬಸದಿಗಳಿದ್ದುದಾಗಿ ತಿಳಿದು ಬರುತ್ತದೆ. ಇದರಿಂದ ಕರ್ನಾಟಕದಂತೆ ಇಲ್ಲಿಯೂ ಈ ಕಾಲಕ್ಕಾಗಲೇ ಬಸದಿಗಳಿಗೆ ತೀರ್ಥಂಕರ ಹೆಸರಿಗೆ ಬದಲು ನಿರ್ಮಾತೃಗಳ ಹೆಸರಿಡುವ ಒಂದು ಬಗೆಯ ಸೂಕ್ಷ್ಮ ಅಹಮ್ಮಿಕೆ ಈ ಧರ್ಮದಲ್ಲಿ ಪ್ರವೇಶಿಸಿದ್ದಿತೆಂದು ವೇದ್ಯವಾಗುತ್ತದೆ. ಈ ನಿರ್ಮಾತೃಗಳೆಲ್ಲ ಮಹಾಮಂಡಳೇಶ್ವರರು, ಸಾಮಂತರರು, ದಂಡನಾಯಕರು, ಗಾವುಂಡರು, ಸೆಟ್ಟಿಗಳು ಇರುವುದರಿಂದ ಈ ಕಾಲಕ್ಕಾಗಲೇ ಕರ್ನಾಟಕದ ಭಾಗವೇ ಆಗಿದ್ದ ಇಲ್ಲಿಯೂ ಜೈನಧರ್ಮವು ಚಕ್ರವರ್ತಿಗಳ ತಲೆಯ ಮೇಲಿಂದ ಅಧಿಕಾರಿಗಳ ಹೆಗಲಿಗೆ ಇಳಿದಿದ್ದಿತೆಂದೂ ಸ್ಪಷ್ಟವಾಗುತ್ತದೆ.

ಈ ಶಾಸನಗಳ ಕಾಲದಲ್ಲಿ ವೀರಶೈವ ಚಳುವಳಿ ಹಾಗೂ ವೈದಿಕ ಪ್ರಾಬಲ್ಯಗಳು ಕಾರಣವಾಗಿ ಜೈನಧರ್ಮವು ಉತ್ತರ ಕರ್ನಾಟಕದಲ್ಲಿ ಕೊಪ್ಪಳ, ಲಕ್ಕುಂಡಿ ಮೊದಲಾದ ನೆಲೆಗಳಿಂದ ಹೊರದೂಡಲ್ಪಟ್ಟಿತು. ಆಗ ಬಹುಶಃ ಕೊಲ್ಲಾಪುರ ಪ್ರದೇಶವೇ ಅದರ ರಕ್ಷಣಾ ಸ್ಥಳವಾಗಿದ್ದಿತು. ಈ ಸಂದರ್ಭದಲ್ಲಿ ಮಹಾಮಂಡಳಾಚಾರ್ಯ ಮಾಘಣಂದಿ ಸಿದ್ಧಾಂತಿ ಮತ್ತು ಅವರ ಶಿಷ್ಯ ಪರಂಪರೆಯವರು ಕೊಲ್ಲಾಪುರ ಪ್ರದೇಶದಲ್ಲಿ ಇದು ಕೇಂದ್ರೀಕರಣಗೊಳ್ಳುವಂತೆ, ಸಾಂದ್ರೀಕರಣಗೊಳ್ಳುವಂತೆ ಪ್ರಯತ್ನಿಸಿದರು.

ಜೈನರಲ್ಲಿ ಸಲ್ಲೇಖನವ್ರತ ಮುಖ್ಯವಾದುದು. ಇತರೆಡೆಗಳಲ್ಲಿ ಕಾಣದೆ ಉಸ್ಮಾನಾಬಾದ ಜಿಲ್ಲೆಯ ನಿಲಂಗಾದಲ್ಲಿ ದಾಮನಂದಿ, ದಿವಾಕರನಂದಿ, ಧನಕೀರ್ತಿ, ಅಭಯ ನಂದಿಗಳ ನಿಷಧಿಶಿಲೆಗಳು ಲಭಿಸುತ್ತವೆ. ಜೈನ ಕಂತಿಯರಿಗಾಗಿ, ವಿದ್ಯಾರ್ಥಿಗಳಿಗಾಗಿ ತೋಟ, ನಿವೇಶನಗಳನ್ನು ದಾನಬಿಟ್ಟ ಉಲ್ಲೇಖ ಅಕ್ಕಲಕೋಟ ಶಾಸನದಲ್ಲಿದೆ. ಬಸದಿಯ ನಿತ್ಯವ್ಯವಹಾರಕ್ಕಾಗಿ ಆಳುವ ಪ್ರಭುಗಳು, ಪ್ರಜೆಗಳು, ವರ್ತಕರು ದಾನಬಿಟ್ಟ ಉಲ್ಲೇಖಗಳೂ ಸಿಗುತ್ತವೆ.

ಶೈವಧರ್ಮ: ವೈದಿಕಶೈವಕ್ಕೆ ಭಿನ್ನವಾದ ನಕುಲೀಶಪಾಶುಪತ ಹೆಸರಿನ ಆಗಮಿಕ ಶೈವವೊಂದು ಕರ್ನಾಟಕದಲ್ಲಿ ತುಂಬ ಪ್ರಸಿದ್ಧವಾಗಿದ್ದಿತು. (ಇವರಲ್ಲಿ ದೀಕ್ಷಿತರಾದವರೇ ಕಾಳಾಮುಖರು. ವೀರಶೈವವು ಈ ನಕುಲೀಶಪಾಶುಪತದ ಪರಿಷ್ಕೃತ ರೂಪವಾಗಿರಬಹುದು?). ಕರ್ನಾಟಕದ ಶಾಸನಗಳಲ್ಲಿ, ಅದೇ ರೀತಿ ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ನಕುಲೀಶ ಪಾಶುಪತಧರ್ಮ ದಟ್ಟವಾಗಿ ಕಂಡುಬರುತ್ತದೆ. ಮಹಾರಾಷ್ಟ್ರದ ಕೊಲ್ಲಾಪುರ, ಸಾಂಗಲಿ ಜಿಲ್ಲೆಗಳಲ್ಲಿ ಜೈನಧರ್ಮ ಪ್ರಬಲವಾಗಿದ್ದರೆ, ಸೊಲ್ಲಾಪುರ, ಉಸ್ಮಾನಾಬಾದ, ನಾಂದೇಡ ಜಿಲ್ಲೆಗಳಲ್ಲಿ ಈ ಶೈವಧರ್ಮ ಪ್ರಬಲವಾಗಿದ್ದಿತೆಂದು ಇಲ್ಲಿಯ ಕನ್ನಡ ಶಾಸನಗಳು ತಿಳಿಸುತ್ತವೆ.

ಪಾಶುಪತಶೈವದ ಭುಜಂಗಾವಳಿಶಾಖೆಯ ಉಲ್ಲೇಖ ಒಂದು ಶಾಸನದಲ್ಲಿದೆ. ಈ ಧರ್ಮದ ಆಚಾರ್ಯರ ಹೆಸರಿನ ಮುಂದೆ ರಾಶಿ, ಪಂಡಿತ, ಜೀಯ, ಶಕ್ತಿಯೆಂಬ ಉತ್ತರ ಪದಗಳು ಬಳಕೆಯಾಗುತ್ತಿದ್ದವು. ಇಂಥ ಅನೇಕ ಹೆಸರುಗಳು ಇಲ್ಲಿಯ ಶಾಸನಗಳಲ್ಲಿ ಸಿಗುತ್ತವೆ. ಲಾಕುಳಾಗಮ ಸಮಯ ಸಮುದ್ಧರಣ ವಿಮಳಶಕ್ತಿಪಂಡಿತನ ಉಲ್ಲೇಖ ತೀರ್ಥ (ಸೊಲ್ಲಾಪುರ ಜಿಲ್ಲೆ) ಶಾಸನದಲ್ಲಿದೆ. ಕರ್ನಾಟಕದಲ್ಲಿಯಂತೆ ಈ ಮತಕ್ಕೆ 'ಏಕ್ಕೋಟಿ ಸಮಯ' ಎಂದೂ ಈ ಮತದ ಮುನಿಗಳಿಗೆ 'ಏಕ್ಕೋಟಿ ಮುನಿಪರು' ಎಂದೂ ಕರೆಯಲಾಗಿದೆ. ಈವರೆಗೆ ವಿದ್ವಾಂಸರು ಭಾವಿಸಿದಂತೆ ಇದು

'ಏಳುಕೋಟಿ' ಎಂಬ ಸಂಖ್ಯೆಗೆ ಸಂಬಂಧಿಸಿಲ್ಲವೆಂದು ತೋರುತ್ತದೆ. ಈ ಸಂದರ್ಭದಲ್ಲಿ ಗೋವೆಯ ಸಪ್ತಕೋಟೀಶ್ವರ ನೆನಪಾಗುತ್ತದೆ. ಮೂಲತಃ ಇದರ ಅರ್ಥ ಸಪ್ತಕೂಟ + ಈಶ್ವರ, ಏಳು ಶಿಖರಗಳುಳ್ಳ ಪರ್ವತಶ್ರೇಣಿಯ ಒಡೆಯ. ಬಹುಶಃ ಈ ಸಪ್ತಕೂಟೇಶ್ವರ ನೀಲಗಿರಿ ಪರ್ವತ ಪ್ರದೇಶದ ದೇವತೆಯಾದ ಮೈಲಾರನಾಗಿದ್ದಾನೆ. ಹೀಗಾಗಿ ಮೈಲಾರನ ಹೆಸರು ಏಳುಕೂಟ ಒಡೆಯ, ಉಚ್ಚಾರ ಸಾಮ್ಯಭ್ರಾಂತಿಯಿಂದ ಗ್ರಾಮ್ಯರು ಇವನಿಗೆ 'ಏಳುಕೋಟಿ ಉಘೇ' ಎಂದು ಪರಾಕು ಹೇಳುತ್ತಾರೆ. ಇದು ಬಹುಶಃ ಕಾಪಾಲಿಕ ಸಂಪ್ರದಾಯ. ಇದೇ ಕಾಳಾಮುಖವಾಗಿ ಪರಿಷ್ಕರಣ ಹೊಂದಿದ್ದು, ಹಳೆಯ 'ಏಳುಕೋಟಿ' ಎಂಬ ಗ್ರಾಮ್ಯರ ನುಡಿಗಟ್ಟು ಕಾಳಾಮುಖ ಶಾಸನಗಳಲ್ಲಿ ಏಕ್ಕೋಟಿ ರೂಪದಿಂದ ಇಳಿದು ಬಂದಿದೆ. (ನವಕೋಟಿ < ನವಕೂಟ ನಾರಾಯಣವೂ ಹೀಗೆಯೇ ರೂಪಾಂತರಗೊಂಡಂತಿದೆ).

ಈ ಪಾಶುಪತರ ಮುಖ್ಯ ಕೊಡುಗೆಯೆಂದರೆ ದೇವಾಲಯ ಮತ್ತು ಮಠ ನಿರ್ಮಾಣ, ದೇವಾಲಯವನ್ನು ಕಟ್ಟಿಸಿ ತಮ್ಮ ಹೆಸರಿನಲ್ಲಿ ಲಿಂಗವನ್ನು ಸ್ಥಾಪಿಸಿದವರು ದೇವರೇ ಆಗುತ್ತಾರೆಂಬ ಆಗಮವಾಕ್ಯದ ಮೇರೆಗೆ ಆ ಕಾಲದಲ್ಲಿ ಅನೇಕರು ತಮ್ಮ ಮತ್ತು ತಮ್ಮ ಪರಿವಾರದವರ ಹೆಸರಿನಲ್ಲಿ ದೇವಾಲಯಗಳನ್ನು ಕಟ್ಟಿಸುತ್ತಿದ್ದರು. ದಂಡನಾಯಕ ನಾಗವರ್ಮಯ್ಯನು ತಡಕಲ್ಲು ಗ್ರಾಮದಲ್ಲಿ "ತಂದೆಗೆ ನಾರಾಯಣ ದೇವರುಂ, ತಾಯಿಗಾದಿತ್ಯದೇವರುಂ, ಕಿರಿಯಯ್ಯಂಗಯ್ಚೇಶ್ವರದೇವರುಂ, ತಮ್ಮ ಹೆಸರಲು ಶ್ರೀ ನಾಗೇಶ್ವರದೇವರುಂ, ತಮ್ಮ ಪತ್ನಿಗೆ ಸರಸ್ವತೀಮಂಟಪಮಂ, ಸುತಂಗೆ ಭೈರವ ದೇವರುಂ, ತಂಗೆಗೆ ಮಲ್ಲಿಕಾರ್ಜುನದೇವರುಂ" ಮಾಡಿಸಿ "ಕಾಳಾಮುಖಾಖ್ಯರುಂ ಪರಮನೈಷ್ಠಿಕರುಮಪ್ಪ ಶ್ರೀ ನಾಗೇಶ್ವರಪಂಡಿತದೇವರ್ಗೆ" ಒಪ್ಪಿಸುತ್ತಾನೆ. ಎಕ್ಕಲಗಾವೆಯಲ್ಲಿ ಮಲ್ಲಗಾವುಂಡನು ಮಲ್ಲೇಶ್ವರದೇವಾಲಯು, ಅವರವಾಡಿಯಲ್ಲಿ ವೈಜದಂಡನಾಥನು ವೈಜೇಶ್ವರದೇವಾಲಯು, ಮಂಡಳೇಶ್ವರ ಹೆಮ್ಮಾಡಿ ಅರಸನು ಉಂಬರವಾಣಿಯಲ್ಲಿ ಹೆಮ್ಮೇಶ್ವರದೇವಾಲಯ, ಪತ್ನಿ ಚಂದಲದೇವಿಯ ಹೆಸರಿನಲ್ಲಿ ಚಂದಲೇಶ್ವರ ದೇವಾಲಯ, ಜೋಗಮನ ಅಮಾತ್ಯ ಇಂದಪಯ್ಯನು ಇಂದ್ರೇಶ್ವರ ದೇವಾಲಯ, ಬಿಜ್ಜನಾಯಕನು ಬಿಜ್ಜೇಶ್ವರ ದೇವಾಲಯಗಳನ್ನು ಕಟ್ಟಿಸಿದ್ದಾರೆ.

ಇವಲ್ಲದೆ ತಮ್ಮವಲ್ಲದ ಬೇರೆ ಹೆಸರಿನಲ್ಲಿಯೂ ಅನೇಕ ದೇವಾಲಯಗಳು ಇಲ್ಲಿ ಹುಟ್ಟಿಕೊಂಡಿವೆ. ದಂಡನಾಯಕ ನರವೈದ್ಯನಾರಾಯಣನು ಮುದಗೋಡ (ಉಸ್ಮಾನಾಬಾದ ಜಿಲ್ಲೆ)ದಲ್ಲಿ ನೀಲಕಂಠೇಶ್ವರದೇವಾಲಯ, ಮಂಡಳೇಶ್ವರ ಕರ್ಕಭೂಪಾಲನು ಕರಡಿಕಲ್ಲು (ನಾಂದೇಡ ಜಿಲ್ಲೆ) ಗ್ರಾಮದಲ್ಲಿ ಸೋಮೇಶ್ವರ, ಧೋರೇಶ್ವರ, ಕಲಿಚೋರೇಶ್ವರ, ಪ್ರಸನ್ನ ಭೈರವೇಶ್ವರ ದೇವಾಲಯಗಳನ್ನು ಕಟ್ಟಿಸಿದುದು ಇದಕ್ಕೆ ಉದಾಹರಣೆಯಾಗಿದೆ. ಒಬ್ಬ ವ್ಯಕ್ತಿ ಅನೇಕ ದೇವರನ್ನು ಸ್ಥಾಪಿಸಬಹುದೆಂಬುದಕ್ಕೆ ಈ ಕರ್ಕ ಭೂಪಾಲನು ಉದಾಹರಣೆಯೆನಿಸಿದ್ದಾನೆ.

ಇದಲ್ಲದೆ ಈ ಮತದ ಸಾಂದ್ರತೆಯನ್ನು ಜಿಲ್ಲಾವಾರು ಸಮೀಕ್ಷೆಯಿಂದ ಇನ್ನೂ ಖಚಿತಪಡಿಸಿಕೊಳ್ಳಬಹುದು. ಉಸ್ಮಾನಾಬಾದ ಜಿಲ್ಲೆಯ ಶಾಸನಗಳಲ್ಲಿ ಜೋಗೇಶ್ವರ (ನರಂಗವಾಡಿ), ಮಾಣಿಕೇಶ್ವರ (ಅಣಂದೂರು), ನಾಂದೇಡ ಜಿಲ್ಲೆಯ ಶಾಸನಗಳಲ್ಲಿ ರೆಬ್ಬೇಶ್ವರ (ಹೊಟ್ಟಲ), ನಗರೇಶ್ವರ (ಏರಿಗೆ), ಸರ್ವೇಶ್ವರ (ಸಗ್ರೋಳಿ), ರೇವಣೇಶ್ವರ (ಬಿಮ್ರಾ), ಸೊಲ್ಲಾಪುರ ಜಿಲ್ಲೆಯ ಶಾಸನಗಳಲ್ಲಿ ಮಾಣಿಕೇಶ್ವರ (ಬಾಗೇಹಳ್ಳಿ), ಬ್ರಹ್ಮೇಶ್ವರ (ಜಾವೂರ), ಕಪಿಲಸಿದ್ಧ ಮಲ್ಲೇಶ್ವರ, ಕನ್ನೇಶ್ವರ, ಚಟ್ಟೇಶ್ವರ, ಮಲ್ಲಿಕಾರ್ಜುನ (ಸೊಲ್ಲಾಪುರ), ಭೀಮೇಶ್ವರ (ವಂಗಿ), ಸಿಂಗೇಶ್ವರ (ಕಮ್ಮತಿಗೆ),

ಸಿದ್ಧೇಶ್ವರ, ಗಾತ್ರೀಶ್ವರ (ಮಾರಡಿ), ಭೋಗಲಿಂಗ (ಹೊಟಗೆ), ಬೆಳ್ಳೇಶ್ವರ (ಕುಂಬರಗಾವೆ), ಸಿದ್ಧೇಶ್ವರ (ಮಂದ್ರೂಪ), ನಾಗೇಶ್ವರ (ಭಂಡಾರಕವಠೆ), ಮಿಟ್ಟೇಶ್ವರ (ಸಿರಿವೊಳಲ), ಮಾಣಿಕೇಶ್ವರ (ಕೋನಳ್ಳಿ), ಸಂಗಮೇಶ್ವರ (ಕೂಡಲ), ಮಲ್ಲೇಶ್ವರ (ಚಟ್ಟಣವಾವೆ), ಕಂದರ್ಪೇಶ್ವರ (ದೈತಾಣ), ಮಲ್ಲಿಕಾರ್ಜುನ (ದುದನಿ), ಸಾಂಗಲಿ ಜಿಲ್ಲೆಯ ಶಾಸನಗಳಲ್ಲಿ ನಗರೇಶ್ವರ (ಭಾಳಮಣಿ), ಸಿದ್ಧನಾಥ (ವಜ್ರವಾಡಿ), ಉಕ್ಕೇಶ್ವರ (ಉಮರಾಣಿ), ಲಕ್ಖಣೇಶ್ವರ, ಕಲಿದೇವ (ವಳಸಂಗ), ಕೇದಾರೇಶ್ವರ (ತಿಕೊಂಡಿ), ಸಿದ್ಧೇಶ್ವರ (ಡೊಂಗರಗಾವೆ), ಮಾಣಿಕೇಶ್ವರ, ನಾಗೇಶ್ವರ, ಮೈಳಲೇಶ್ವರ (ಸಂಖ), ವೀರಸೋಮನಾಥ (ಗುಡ್ಡಾಪುರ), ಸೋಮನಾಥ (ಅಂಕುಲಗೆ), ಭಾಗಲೇಶ್ವರ, ಬೈಜಲೇಶ್ವರ (ಬೀಳೂರು), ತ್ರಿಪುರಾಂತಕೇಶ್ವರ (ಬಾಗಿವಾಡ), ಉತ್ತರೇಶ್ವರ (ಮಂಗಳವಾಡ), ತ್ರಿಪುರಾಂತರೇಶ್ವರ (ಬೋರಿವಾಳ), ಸಾಮಂತಕೇಶ್ವರ, ಭೋಗೇಶ್ವರ (ಮಂಗಳವಾಡ), ಸೋಮೇಶ್ವರ (ಪುಳಜೆ). ಭೀಡ್‌ಜಿಲ್ಲೆಯ ಶಾಸನಗಳಲ್ಲಿ ಅಂಬಿಜೋಗೈ–ಗವರೇಶ್ವರ, ಧರ್ಮಪುರಿ–ಕಾಳೇಶ್ವರ, ಸಾತಾರಾ ಜಿಲ್ಲೆಯ ಮ್ಹಸವಾಡ ಶಾಸನದಲ್ಲಿ ಸಿದ್ಧೇಶ್ವರದೇವಾಲಯಗಳ ಉಲ್ಲೇಖವಿದ್ದು ಇವೆಲ್ಲ ಕನ್ನಡಿಗರ ದೇವತೆಗಳೆಂಬುದು ಸ್ಪಷ್ಟವಾಗುತ್ತದೆ.

ಈ ಸಂದರ್ಭದಲ್ಲಿ ಕೆಲವು ಶೈವಕೇಂದ್ರಗಳ ಬಗ್ಗೆ ವಿವರಣೆ ಅಗತ್ಯವೆನಿಸುತ್ತದೆ. ಸೊಲ್ಲಾಪುರದ ಕಪಿಲಸಿದ್ಧ ಮಲ್ಲಿಕಾರ್ಜುನನಿಗೆ ದತ್ತಿ ನೀಡಿದ ವಿಷಯವನ್ನೊಳಗೊಂಡ ೨೨ ಶಾಸನಗಳಲ್ಲಿ ೬ ಶಾಸನಗಳು (ನಿಲೇಗಾವ, ಕೇಸೇಗಾವ, ಇಟ್ಕಲ, ಜಂಬಗಾವ್, ಅಕ್ಕಲಕೋಟ, ಗುಂಜೇಗಾವ) ಮಹಾರಾಷ್ಟ್ರದಲ್ಲಿವೆ. ಸಾಮಾನ್ಯವಾಗಿ ಶಾಪಾಶಯದ ಪದ್ಯಗಳು ಮತ್ತು ವಾಕ್ಯಗಳು ಶಾಸನದ ಕೊನೆಗೆ ಬರುತ್ತವೆ. ಆದರೆ ಈ ೨೨ ಶಾಸನಗಳಲ್ಲಿ ಶಾಪಾಶಯದ ವಿಶಿಷ್ಟ ಗದ್ಯಖಂಡಗಳು ಪ್ರಾರಂಭದಲ್ಲಿಯೇ ಬಂದು "ಇಂತಿದು ಗುರುಸಿದ್ಧರಾಮನಾಥ ದೇವರ ವಚನ" ಎಂದು ಮುಗಿಯುತ್ತವೆ. ಆದರೆ ಇವು ಸಿದ್ಧರಾಮನ ಅನುಭಾವದ ವಚನಗಳಲ್ಲ, ಆತನು ವಚಿಸಿದ ಆದೇಶಗಳಾಗಿವೆ.*

ಮಹಾಪ್ರಧಾನ ಶ್ರೀಕರಣದ ಕನ್ನಪಯ್ಯನು ಬಿನ್ನವಿಸಲಾಗಿ ಅವನಿಗೆ ಬಿಜ್ಜಳನು "ನಿಂನೂರು ಸೊನ್ನಲಿಗೆಯಲಿ ಕಟ್ಟಿಸಿದ ಶ್ರೀ ಕನ್ನೇಶ್ವರ, ಚಟ್ಟೇಶ್ವರ, ಮಲ್ಲಿಕಾರ್ಜುನ ತ್ರಿಕೂಟ ಶಿವಾಲಯಕ್ಕೆ" ದತ್ತಿ ಕೊಡುವೆನೆಂದು ಹೇಳಿದ ವಿಷಯ ೧೧೬೮ರ ಸೊಲ್ಲಾಪುರ ಶಾಸನದಲ್ಲಿ ಬರುತ್ತದೆ. ಇಲ್ಲಿ ಹೇಳಲಾದ ಮಲ್ಲಿಕಾರ್ಜುನ ದೇವಾಂತರ್ಗತ ತ್ರಿಕೂಟ ದೇವಾಲಯವನ್ನು ಕನ್ನಪಯ್ಯನೇ ಕಟ್ಟಿಸಿರಬಹುದು. ರಾಘವಾಂಕ ಹೇಳುವಂತೆ ಸಿದ್ಧರಾಮನು ಕಟ್ಟಿಸಿದ ಕಪಿಲಸಿದ್ಧಮಲ್ಲಿಕಾರ್ಜುನ ದೇವಾಲಯ ಈ ತ್ರಿಕೂಟ ಮಲ್ಲಿಕಾರ್ಜುನ ದೇವಾಲಯದಿಂದ ಭಿನ್ನವೆಂದು ತೋರುತ್ತದೆ.

ಸಿದ್ಧರಾಮನು 'ಮಲ್ಲಿಕಾರ್ಜುನನ ಮಂದಿರಕ್ಕಾಗ್ನೇಯದಲ್ಲಿ' ಕೆರೆಯನ್ನು ಕಟ್ಟಿಸಿದನೆಂದು ರಾಘವಾಂಕ ಹೇಳುತ್ತಾನೆ. ಆದರೆ ಸಿದ್ಧರಾಮನ ಆರಾಧ್ಯದೈವವೆಂದು ಇಂದು ಪೂಜಿಸಲಾಗಿತ್ತಿರುವ, ಸೊಲ್ಲಾಪುರದ ಉತ್ತರ ಕಸಬಾ ಪೇಟೆಯಲ್ಲಿಯ ಮಲ್ಲಿಕಾರ್ಜುನ ದೇವಾಲಯದ ಆಗ್ನೇಯಕ್ಕೆ ಕೆರೆಯು ಇಲ್ಲ. ಕೆರೆ ಸ್ಥಳಾಂತರವಾಗುವುದು ಅಸಂಭವ. ಬಹುಶಃ ದೇವಾಲಯವೇ ಸ್ಥಳಾಂತರವಾಗಿರಬಹುದು.ಹಾಗಿದ್ದರೆ ಕೆರೆಯನ್ನು ಆಗ್ನೇಯಕ್ಕೆ ಹೊಂದಿದ ಆ ಮೂಲ ದೇವಾಲಯ

---

* ಇತ್ತೀಚೆ ಇವು ಅವನ ವಚನಗಳೆಂದೇ ಸ್ಪಷ್ಟವಾಗಿದೆ(ನೋಡಿ: ಮಾರ್ಗ–III, ಪು. ೧೭೨. ಆವೃತ್ತಿ–೨೦೧೦)

ಯಾವುದು? ಈ ಪ್ರಶ್ನೆಗೆ ಇಂದು ಪ್ರಿನ್ಸ್ ಆರ್ಫ ವೇಲ್ಸ್ ಮ್ಯೂಜಿಯಂದಲ್ಲಿರುವ ಎರಡು ಶಿಲಾಶಾಸನಗಳು ಸರಿಯಾಗಿ ಉತ್ತರಿಸುತ್ತವೆ. ಇವುಗಳನ್ನು ಸೊಲ್ಲಾಪುರ ಕೋಟೆಯಲ್ಲಿರುವ ಹಾಳುದೇವಾಲಯದಿಂದ ಎತ್ತಿ ತರಲಾಗಿದೆಯೆಂದು ಈ ಮ್ಯೂಜಿಯಮ್‌ದ ದಾಖಲು ರಜಿಸ್ಟರ (ನಂ. ೨೮, ೨೯) ತಿಳಿಸುತ್ತದೆ. ಈ ಶಾಸನಗಳಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನಿಗೆ ನೀಡಿದ ದತ್ತಿ ವಿಷಯವಿರುವುದರಿಂದ ಕೋಟೆಯಲ್ಲಿರುವ ಹಾಳುದೇವಾಲಯವೇ ಸಿದ್ಧರಾಮ ಕಟ್ಟಿಸಿದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯವೆಂದು ಸ್ಪಷ್ಟವಾಗುತ್ತದೆ. ರಾಘವಾಂಕ ಹೇಳುವಂತೆ ಕೆರೆ ಇದರಿಂದ ಆಗ್ನೇಯ ದಿಕ್ಕಿಗಿದೆ. ಆದುದರಿಂದ ಸಿದ್ಧರಾಮ ಕೈಯಾರೆ ಕಟ್ಟಿಸಿದುದು ಈಗ ಸಾರ್ವಜನಿಕರು ನಂಬಲಾಗಿರುವ ಉತ್ತರ ಕಸಬಾಪೇಟೆಯ ದೇವಾಲಯವಲ್ಲ; ಕೋಟೆಯಲ್ಲಿಯ ಹಾಳುಬಿದ್ದ ದೇವಾಲಯ, ಉತ್ತರ ಕಸಬಾ ದೇವಾಲಯದ ಮೇಲೆ ಕೆತ್ತಿರುವ ೧೮೯೯ ಎಂಬ ಇಸ್ವಿಯೂ ಅದು ಇತ್ತೀಚಿನ ದೇವಾಲಯವೆಂದು ಇನ್ನೂ ಖಚಿತಪಡಿಸುತ್ತದೆ.

ಜತ್ತ ತಾಲೂಕಿನ ಗುಡ್ಡಾಪುರ ದಾನಮ್ಮ ದೇವಾಲಯದಲ್ಲಿ ಎರಡು ಶಾಸನಗಳಿವೆ. ಇದು ಮೂಲತಃ ದಾನಮ್ಮನ ದೇವಾಲಯವಲ್ಲ; ಇವಳ ಆರಾಧ್ಯದೈವ ಸೋಮನಾಥನ ದೇವಾಲಯ. ಗುಡ್ಡಾಪುರ ದಾನಮ್ಮ, ನಾವಿದಿಗೆ ಗುಡ್ಡವ್ವೆ ಬೇರೆಯೆಂದೂ, ಒಂದೇ ಎಂದೂ ಕೆಲವರು ಸಂದೇಹಿಸುತ್ತಾರೆ. ಈ ಸಂದೇಹಕ್ಕೆ ಉತ್ತರ ಕೊಡುತ್ತಿವೆ, ಈ ಶಾಸನಗಳು. ಇಲ್ಲಿ ಈ ಊರನ್ನು ನಾಯಿಂತಿಗೆ ಎಂದೂ, ಇಲ್ಲಿ ಶರಣೆಯನ್ನು ಗುಡ್ಡವ್ವೆಯೆಂದೂ ಹೇಳಿರುವುದರಿಂದ ಈಗಿನ ಗುಡ್ಡಾಪುರ ದಾನಮ್ಮ ಎಂಬುದರ ಸರಿಯಾದ ಹೆಸರು ನಾವಿದಿಗೆಯ ಗುಡ್ಡವ್ವೆಯೆಂದು ಸ್ಪಷ್ಟವಾಗುತ್ತದೆ. ಆದರೆ ಗುಡ್ಡವ್ವೆ ಕಾರಣವಾಗಿ ನಾವಿದಿಗೆಗೆ ಗುಡ್ಡಾಪುರವೆಂದು, ದಾನಗುಣ ಕಾರಣವಾಗಿ ಇವಳಿಗೆ ದಾನಮ್ಮ ಎಂದೂ ಹೆಸರುಗಳು ರೂಢಿಗೆ ಬಂದು 'ಗುಡ್ಡಾಪುರ ದಾನಮ್ಮ' ಎಂಬುದು ಇಂದು ಪ್ರಚಾರದಲ್ಲಿದೆ. "ಗುಡಿವೆ ಪ್ರಿಯ ಸ್ವಯಂಭೂ ಸೋಮನಾಥ" ಎಂದು ಈ ದೇವರನ್ನು ಶಾಸನದಲ್ಲಿ ಕರೆದಿರುವುದರಿಂದ ಇದು ಇವಳ ವಚನಾಂಕಿತವಾಗಿರಬಹುದೇ? ಎನಿಸುತ್ತದೆ. ಏಕೆಂದರೆ ಸಾಮಾನ್ಯವಾಗಿ ವಚನಕಾರ್ತಿಯರು ತಮ್ಮ ದೈವತದ ಜೊತೆ 'ಪ್ರಿಯ' ಪದವನ್ನು ಬಳಸುತ್ತಾರೆ. ಉದಾ. ಗಂಗಾಂಬಿಕೆಯ ಮುದ್ರಿಕೆ 'ಗಂಗಾಪ್ರಿಯ ಕೂಡಲ ಸಂಗಮದೇವಾ'. ಇಲ್ಲಿ ದಾನ ಸ್ವೀಕರಿಸಿದವರು ವೀರವ್ರತಿ, ಕ್ಷೇತ್ರ ಸನ್ಯಾಸಿ ರೇವಯ್ಯ ಮತ್ತು ವೀರವ್ರತಿ, ಕ್ಷೇತ್ರಸನ್ಯಾಸಿ ಸಕ್ಕೆಯ ತೈಲೆಯ. ಇಲ್ಲಿಯ ವಿಶೇಷಣಗಳು ಕೆಲವೊಮ್ಮೆ ಕರ್ನಾಟಕದ ಶಾಸನಗಳಲ್ಲಿ ವೀರಶೈವ ಶರಣರಿಗೆ ಕಂಡುಬರುತ್ತದೆ. ಈ ವಿಶೇಷಣಗಳ ಅರ್ಥವನ್ನು ಪರೀಕ್ಷಿಸುವುದು ಅವಶ್ಯವಿದೆ.

ಜತ್ತ ತಾಲೂಕಿನ ಹುಲಿಜಂತಿ ಅಂದರೆ ಪುಳಜೆಯಲ್ಲಿ ಅಮ್ಮುಗಿದೇವನ ಎರಡು ಶಾಸನಗಳಿವೆ. ಈತನೊಬ್ಬ ಶರಣ. ಜಾತಿಯಿಂದ ಮೂಲತಃ ಕುರುಬ. ಸಿದ್ಧರಾಮನ ಸಮಕಾಲೀನನಾದ ಇವನ ಆರಾಧ್ಯದೈವ ಸೋಮೇಶ್ವರ. ಇಲ್ಲಿ ಅಮ್ಮುಗಿದೇವನನ್ನು "ಶಿವಾಚಾರ್ಯೈಕ ನಿರತೋ ಲಿಂಗೈಕ್ಯೋ ಲಿಂಗವೇದಿಕಃ", "ಶರಣ ಸಂತಾನ", "ಮಾಹೇಶ್ವರಗಣ ಕುಲಾನ್ವಯದಿವಾಕರ" ಎಂದು ಮುಂತಾಗಿ ಕೀರ್ತಿಸಲಾಗಿದೆ. ಈ ಅಮ್ಮುಗಿ ದೇವನಿಗೆ ಸ್ಥಳೀಯ ಮಹಾಜನರು, ಯಾದವ ಚಕ್ರವರ್ತಿ ಸಿಂಘಣ ಮತ್ತು ಈತನ ಅಧಿಕಾರಿಗಳು ದಾನಬಿಟ್ಟುದು ಇಲ್ಲಿಯ ವಿಷಯ. ಈ ಶಾಸನದ ಕಾಲ ೧೨೦೦ ಇರುವುದರಿಂದ ಈತನು ಬಸವಣ್ಣನವರ ತರುವಾಯ ಬದುಕಿದ ಸುಪ್ರಸಿದ್ಧ ಶರಣನೆಂದು ಹೇಳಬೇಕಾಗುತ್ತದೆ.

ವೀರಶೈವ ಶರಣರಲ್ಲಿ ಗಜೇಶಮಸಣಯ್ಯ ಹೆಸರಿನ ಶರಣನೊಬ್ಬ ಕಂಡುಬರುತ್ತಾನೆ. ಈತನು ಕರಜಿಗೆ ಗ್ರಾಮದವನು. ಇವನ ಮುದ್ರಿಕೆ 'ಗಜೇಶ್ವರಾ' ಎಂದು ಭಾವಿಸಲಾಗಿದೆ. ಅಕ್ಕಲಕೋಟೆಯ ಒಂದು ಶಾಸನದಲ್ಲಿ ಕರಂಜಿಗೆಯ ಶ್ರೀ ಸಿದ್ಧ ಗಜ್ಜೇಶ್ವರ ದೇವರಿಗೆ ದಾನಬಿಟ್ಟು ವಿಷಯ ಬರುತ್ತದೆ. ಬಹುಶಃ ಈ 'ಸಿದ್ಧಗಜ್ಜೇಶ್ವರ' ಎಂಬುದನ್ನೇ 'ಗಜೇಶ್ವರ' ಎಂದು ಸಂಕ್ಷೇಪೀಕರಿಸಿ, ಅದನ್ನು ತನ್ನ ವಚನಮುದ್ರಿಕೆಯಾಗಿ ಮಸಣಯ್ಯ ಬಳಸಿರಬಹುದು. ಆದರೆ ಹಾವೇರಿ ತಾಲೂಕಿನ ಹಿರೇಹಳ್ಳಿಯಲ್ಲಿ ಅಂಗಜೇಶ್ವರ ಹೆಸರಿನ ದೇವಾಲಯವಿದ್ದು, ಈ 'ಅಂಗಜೇಶ್ವರ' ಎಂಬುದನ್ನೇ ಮಸಣಯ್ಯನು 'ಗಜೇಶ್ವರ' ಎಂದು ಬಳಸಿರಬಹುದು.[೧] ಏಕೆಂದರೆ ಈ ಹಿರೇಹಳ್ಳಿಯ ನೆರೆಯಲ್ಲಿಯೂ ಒಂದು ಕರಜಗೆ ಗ್ರಾಮವಿದೆ.

ಶರಣಸಮೂಹದಲ್ಲಿ ಹಿರಿಯ ತಲೆಮಾರಿನವ ಶಂಕರದಾಸಿಮಯ್ಯ. ಈತನ ದೈವ ಜಡೆಯ ಶಂಕರಲಿಂಗ. ಸೊಲ್ಲಾಪುರ ಜಿಲ್ಲೆಯ ಕರಜಗಿ ಗ್ರಾಮದ ಶಂಕರಲಿಂಗ ದೇವಾಲಯದ ಬಾಗಿಲುವಾಡದ ಮೇಲೆ (೧೮೨೪) ಜಡೆಯ ಶಂಕರಲಿಂಗಸ್ವಾಮಿ ಮತ್ತು ಶಂಕರದಾಸರ ಉಲ್ಲೇಖ ಬರುತ್ತದೆ.

ಮೇಲೆ ವಿವರಿಸಿದ ಸೊಲ್ಲಾಪುರ ಸಿದ್ಧರಾಮ, ಗುಡ್ಡಾಪುರ ದಾನಮ್ಮ, ಹುಲಿಜಂತಿಯ ಅಮ್ಮುಗಿದೇವ, ಕರಜಗೆಯ ಗಜೇಶ ಮಸಣಯ್ಯ-ಶಂಕರದಾಸಿಮಯ್ಯ ಹೆಸರುಗಳನ್ನು ಹಿಡಿದುಕೊಂಡು ಮಹಾರಾಷ್ಟ್ರದಲ್ಲಿ ಶರಣ ಆಂದೋಲನದ ಒಂದು ಪುಟ್ಟ ಚಿತ್ರವನ್ನು ಬಿಡಿಸಬಹುದಾಗಿದೆ.

ವೈದಿಕ ಧರ್ಮ: ಈವರೆಗೆ ವಿವರಿಸಿದ ಜೈನಧರ್ಮ, ಆಗಮಿಕ ಶೈವಧರ್ಮಗಳಷ್ಟೇ ಈ ಪ್ರದೇಶದಲ್ಲಿ ಪ್ರಧಾನವಾಗಿದ್ದವು, ವೈದಿಕ ಪರವಾದ ಶೈವ-ವೈಷ್ಣವಧರ್ಮಗಳು. ಅಗ್ರಹಾರ, ಯಜ್ಞ, ದಾನ ಇತ್ಯಾದಿ ಸಂಪ್ರದಾಯಗಳನ್ನು ಬೆಳೆಸಿದ, ದೇವಾಲಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಧರ್ಮವಿದು. ಶಾಸನಗಳಲ್ಲಿ ಬರುವ ಶಿವಪರ ದೇವಾಲಯಗಳನ್ನು ಆಗಮಿಕಶೈವ ಮತ್ತು ವೈದಿಕಶೈವಗಳೆಂದು ಬೇರ್ಪಡಿಸುವುದು ಕಷ್ಟವಾಗುತ್ತದೆ. ಬಹುಶಃ ಅಲ್ಲಿಯ ಆಚಾರ್ಯರ ಹೆಸರಿನ ಕೊನೆಗೆ ರಾಶಿ, ಪಂಡಿತ, ಜೀಯ, ಶಕ್ತಿ ಎಂದು ಇದ್ದರೆ ಅವು ಆಗಮಿಕಶೈವಪರ ದೇವಾಲಯಗಳೆಂದೂ, ಭಟ್ಟ, ಷಡಂಗಿ ಎಂದು ಇದ್ದರೆ ಅವು ವೈದಿಕಶೈವಪರ ದೇವಾಲಯಗಳೆಂದೂ ಭಾವಿಸಬಹುದು.

ಕೆಲವೊಮ್ಮೆ ವೈಷ್ಣವ ದೇವಾಲಯಗಳನ್ನೂ ಬೇರಳುಮಾಡಿ ಹೇಳುವುದು ಕಷ್ಟವಾಗುತ್ತದೆ. ಉದಾ: ನಾಂದೇಡ ಜಿಲ್ಲೆಯ ತಡಖೇಲ ಶಾಸನೋಕ್ತ ನಾರಾಯಣ ದೇವರ ದೇವಾಲಯ ವೈದಿಕಪರ ವೈಷ್ಣವ ದೇವಾಲಯವೆಂದು ಹೇಳಲು ಮನಸ್ಸಾಗುತ್ತದೆ. ಆದರೆ ಇದು ನಾಗವರ್ಮಯ್ಯನು ತನ್ನ ತಂದೆ ನಾರಾಯಣಯ್ಯನ ಹೆಸರಿನಲ್ಲಿ ಅಂದರೆ ವ್ಯಕ್ತಿಯ ಹೆಸರಿನಲ್ಲಿ ಕಟ್ಟಿಸಿದುದು, ಆಗಮಿಕ ಕಾಳಾಮುಖ ವಾಗೀಶ್ವರಪಂಡಿತರಿಗೆ ಸೇರಿದುದು. ಹೀಗಾಗಿ ಇದು ಆಗಮಿಕ ಶೈವದೇವಾಲಯವಾಗಿದೆ. ಆದುದರಿಂದ ವಿಷ್ಣುವಿನ ಅವತಾರವನ್ನು ಪ್ರತಿನಿಧಿಸುವಂಥವುಗಳನ್ನು ಮಾತ್ರ ನಿರ್ದಿಷ್ಟವಾಗಿ ವೈಷ್ಣವ ದೇವಾಲಯಗಳೆಂದು ಹೇಳಬಹುದು. ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಜಲಶಯನ ನಾರಾಯಣ (ಉಮದಿ-ಸಾಂಗಲಿಜಿಲ್ಲೆ) ಇತ್ಯಾದಿ ವೈಷ್ಣವಪರ ದೇವಾಲಯಗಳು ಕಂಡುಬರುತ್ತವೆ.

---

೧. ಅಂಗಜೇಶ್ವರ ಮಸಣಯ್ಯ, ಕರ್ನಾಟಕ ಭಾರತಿ. ೬-೨.

ಕೊಲ್ಲಾಪುರದ ಮಹಾಲಕ್ಷ್ಮಿಯನ್ನು ಕುರಿತು ಕೆಲವು ಕನ್ನಡ ಶಾಸನಗಳು ಸಿಗುತ್ತವೆ. ದೇವಿಗೆ ಯಾದವ ಸಿಂಘಣನು ಆಭರಣ ಮಾಡಿಸಿದ, ಸಿಂಘಣನ ಅಧಿಕಾರಿ ತೈಲಣನು ದ್ವಾರ ಮತ್ತು ತೋರಣ ಮಾಡಿಸಿದ ಉಲ್ಲೇಖ ಈ ಶಾಸನಗಳಲ್ಲಿದೆ. ಮಹಾಲಕ್ಷ್ಮೀ ದೇವಾಲಯದ ಸತ್ರಗಳ ಉಸ್ತುವಾರಿ ನೋಡಿಕೊಳ್ಳುವ ಮಹಾದೇವನೆಂಬವನನ್ನೂ ಪಂಡಿತಕನಕಚಂದ್ರನು ಕೇಶವ ನರಸಿಂಹದೇವರಿಗೆ ದಾನಬಿಟ್ಟುದನ್ನೂ ಇನ್ನೊಂದು ಶಾಸನ ತಿಳಿಸುತ್ತದೆ. ೧೨ನೆಯ ಶತಮಾನದ ಒಂದು ಶಾಸನ ಮಹಾಲಕ್ಷ್ಮೀ ದೇವಾಲಯ ಅಗ್ನಿಗೆ ಆಹುತಿಯಾದ ಸಂದರ್ಭದಲ್ಲಿ ಮಾಲಗಾರ ಮುತ್ತಯ್ಯ ತೋರಿದ ಸಾಹಸಗಳನ್ನು ವರ್ಣಿಸುತ್ತದೆ.

ಈ ಪ್ರದೇಶದ ಸುಪ್ರಸಿದ್ಧದ ವೈಷ್ಣವ ಕೇಂದ್ರ ಪಂಡರಪುರ. ಇದರ ಮೂಲ ಹೆಸರು ಪಂಡರಗೆ. ಕೊನೆಯ 'ಗೆ' ಪ್ರತ್ಯಯದಿಂದಾಗಿ ಇದು ಅಚ್ಚಗನ್ನಡ ಗ್ರಾಮವೆಂದು ಸ್ಪಷ್ಟವಾಗುತ್ತದೆ. ಸೊನ್ನಲಗೆ ಸೊನ್ನಲಾಪುರವಾದಂತೆ ಈ ಪಂಡರಗೆ ಪಂಡರಪುರವಾಗಿದೆ. ಇದಲ್ಲದೆ ಪಂಡರಗೆ ಎಂಬುದರ ಅರ್ಥ ಕಾಲಕ್ರಮದಲ್ಲಿ ಅಪರಿಚಿತವಾದಾಗ ಪಂಡರಗೆ ವಿಠಲನನ್ನು 'ಪಾಂಡುರಂಗವಿಠ್ಠಲ' ಎಂಬ ಪರಿಚಿತ ಪದವನ್ನಾಗಿ ಮಾಡಿ, ಪುರಂದರದಾಸರು ಈ ಪಂಡರಪುರ ಗ್ರಾಮದ ವಿಠ್ಠಲನ ಭಕ್ತನೆಂದು ಈವರೆಗೆ ಭಾವಿಸಲಾಗಿದೆ. ಆದರೆ ಅವರ ಮುದ್ರಿಕೆ 'ಪಾಂಡುರಂಗ ವಿಠ್ಠಲ'ವಾಗಿರದೆ 'ಪುರಂದರ ವಿಠಲ' ಇರುವುದರಿಂದ ಅವರು ಪುರಂದರ ಗ್ರಾಮದ ವಿಠ್ಠಲನ ಭಕ್ತರಾಗಿರಬೇಕು. ಪುರಂದರ ಗ್ರಾಮದ ಹಳೆಯ ರೂಪ ಕನ್ನಡದ ನಾಗವಾರ, ಉದಯಾವರಗಳಂತೆ ಪುರಂದವರ, ಪುರಂದಾವರ ಇಲ್ಲವೆ ಪುರಂದಾವರ ಇರಬಹುದು. ಇಂದಿನ ಪುರಂದರ ಗಡದಲ್ಲಿ ವಿಠಲನ ದೇವಾಲಯವಿಲ್ಲದ ಕಾರಣ ಈ ದಾಸರ ಗ್ರಾಮವಾದ ಪುರಂದರ ಬೇರೊಂದು ಇರಬಹುದೇ? ಹಾಗಿದ್ದಲ್ಲಿ ಈ ಹೆಸರಿನ ಗ್ರಾಮವನ್ನು ಹುಡುಕುವುದು, ಪುರಂದರದಾಸರ ಬಗ್ಗೆ ಶೋಧ ಮುಂದುವರಿಸುವುದು ಅವಶ್ಯವಿದೆ. ಒಂದು ಮಾತು ನಿಜ: ಪುರಂದರ (ಪುರಂದವರ, ಪುರಂದಾವರ, ಪುರಂದವಾರ) ಎಂಬುದು ಕನ್ನಡ ಗ್ರಾಮನಾಮವಾಗಿರುವುದರಿಂದ ಪುರಂದರದಾಸರ ಊರು ಕರ್ನಾಟಕ ಪ್ರದೇಶಕ್ಕೆ ಒಳಪಟ್ಟಿದೆ; ಪುರಂದರದಾಸರು ಕನ್ನಡಿಗರು.

ಈ ದೇವಾಲಯಗಳನ್ನು ಬಿಟ್ಟರೂ ವೈದಿಕರ ಬಹುದೊಡ್ಡ ಸಂಪ್ರದಾಯವಾದ ಅಗ್ರಹಾರಗಳ ಉಲ್ಲೇಖ ಕೆಲವು ಶಾಸನಗಳಲ್ಲಿ ಬರುತ್ತದೆ. ನಾಂದೇಡ ಜಿಲ್ಲೆಯ ಏರಿಗೆ, ಸೊಲ್ಲಾಪುರ ಜಿಲ್ಲೆಯ ಲಂಪಗಿ, ಜೇವುರಗೆ, ಭೀಡ್ ಜಿಲ್ಲೆಯ ಲೊಕ್ಕಿಗುಂಡಿಗಳು ಅಗ್ರಹಾರಗಳಾಗಿದ್ದವೆಂದು ತಿಳಿದುಬರುತ್ತದೆ. ಅಗ್ರಹಾರಗಳು ಬ್ರಾಹ್ಮಣ ಕುಟುಂಬಗಳ ಉಪಜೀವನಕ್ಕಾಗಿ ಕೊಟ್ಟ ಗ್ರಾಮಗಳಾಗಿದ್ದು, ಇಲ್ಲಿ ಬರುವ 'ಮಹಾಜನರು ೫೦೦' ಇತ್ಯಾದಿ ಸಂಖ್ಯೆ ಆ ದಾನವನ್ನು ಪಡೆದ ಬ್ರಾಹ್ಮಣ ಕುಟುಂಬಗಳನ್ನು ಸೂಚಿಸುವುದೆಂದು ಈವರೆಗೆ ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಆದರೆ ಏರಿಗೆ ಶಾಸನದಲ್ಲಿ 'ಏರಿಗೆಯಶೇಷ ಮಹಾಜನಂಗಳುಂ. . . ಬ್ರಹ್ಮಪುರಿಯ ಮಹಾಜನಂಗಳುಂ' ಎಂಬ ಮಾತು ಬರುವುದರಿಂದ ಬ್ರಹ್ಮಪುರಿಯ ಮಹಾಜನರೆಂದರೆ ಕೇವಲ ಬ್ರಾಹ್ಮಣರು, ಅಶೇಷ ಮಹಾಜನರೆಂದರೆ ಬ್ರಾಹ್ಮಣರೂ ಕೆಲವು ಬ್ರಾಹ್ಮಣೇತರರೂ ಎಂದು ಅರ್ಥ ಹೇಳಬೇಕೆನಿಸುತ್ತದೆ. ಈ ಕಾರಣದಿಂದಾಗಿಯೇ ಇಂದಿಗೂ ಅಬ್ರಾಹ್ಮಣರಲ್ಲಿ ಮಹಾಜನಶೆಟ್ಟಿ ಮೊದಲಾದ ಅಡ್ಡ ಹೆಸರುಗಳಿರುವಂತಿದೆ. ಇದಲ್ಲದೆ ಆ ಕಾಲದಲ್ಲಿ ಒಂದು ಊರಿನಲ್ಲಿ ೫೦೦ ಬ್ರಾಹ್ಮಣ ಕುಟುಂಬಗಳಿರುವುದೂ ಅಸಂಭವ. ಆದುದರಿಂದ 'ಮಹಾಜನ' ಪದದ ಅರ್ಥವನ್ನು ಇನ್ನೊಮ್ಮೆ ವಿದ್ವಾಂಸರು ಪರೀಕ್ಷಿಸಬೇಕಾಗಿದೆ.

ಯಾವುದೇ ಗ್ರಾಮದಲ್ಲಿ ಬ್ರಾಹ್ಮಣರು ವಾಸವಾಗಿದ್ದ ಕೇರಿಯನ್ನು 'ಬ್ರಹ್ಮಪುರಿ' ಎನ್ನುತ್ತಿದ್ದರು. "ದ್ವಿಜಕುಳೋತ್ತಮರ ಬ್ರಹ್ಮಪುರಿ" ಎಂಬ ಮಾತು ಬಿಮರಾ ಶಾಸನದಲ್ಲಿ ಬರುತ್ತದೆ. ಏರಿಗೆಯಲ್ಲಿಯೂ ಬ್ರಹ್ಮಪುರಿಯಿದ್ದ ಸಂಗತಿಯನ್ನು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಬ್ರಾಹ್ಮಣರ ವಿಧಿಕರ್ಮಗಳಿಗೆ ಸಂಬಂಧಿಸಿದ ಆಪ್ತೋರ್ಯಾಮ ಮಹೇಷ್ಟಿಕಾಯಜ್ಞ (ಪಂಡರಪುರ), ಗೋಸಹಸ್ರದಾನ (ಮ್ಹಸವಾಡ), ಲಕ್ಷಹೋಮ (ಮಂಗಳವಾಡ) – ಇವುಗಳ ಉಲ್ಲೇಖ ಕೆಲವು ಶಾಸನಗಳಲ್ಲಿದೆ.

ಸಾಮಾನ್ಯ ಮತಗಳು: ಕೇವಲ ಆಚರಣೆಪ್ರಧಾನವಾಗಿದ್ದ ಕೆಲವು ಮತಗಳ ಕೇಂದ್ರಗಳು ಮಹಾರಾಷ್ಟ್ರದಲ್ಲಿ ಕಂಡುಬರುತ್ತದೆ. ಬಹುಶಃ ಕೊಲ್ಲಾಪುರ ಮಹಾಲಕ್ಷ್ಮಿ ಮೂಲತಃ ಅಂಥ ಒಂದು ದೇವತೆಯಾಗಿದ್ದು ಆಮೇಲೆ ಪ್ರತಿಷ್ಠಿತ ಹಂತವನ್ನು ಮುಟ್ಟಿರಬಹುದು. ಅಂಕುಲಗೆಯ ಒಂದು ಶಾಸನ ಅಲ್ಲಿಯ ಸ್ತ್ರೀದೇವತೆಯನ್ನು "ಅರವತ್ತುನಾಲ್ಕು ಯೋಗಪೀಠಗಳ ಆದಿನಾಥೆ" ಎಂದು ಕರೆದಿದೆ. ಇವನ್ನು ಬಿಟ್ಟರೂ ಜಜೂರಿಯ 'ಖಂಡೋಬಾ' ಹೆಸರೇ ಕನ್ನಡ. ಖಂಡೆಯ (=ಖಡ್ಗ) + ಅಬ್ಬಾ (=ಅಪ್ಪ) ಅಂದರೆ ಖಡ್ಗ ಹಿಡಿತ ದೇವತೆಯೆಂದು ಇದಕ್ಕೆ ಅರ್ಥವಿದೆ. 'ಮರವಾಳ್ವಾಳೂರ ಮೈಲಾರನಾ' (ಅನಂತ ೧೨–೨೬) ಎಂಬ ವಾಕ್ಯವನ್ನು ಇಲ್ಲಿ ನೆನೆಯಬೇಕು. ಇದೇ ನಿಟ್ಟಿನಲ್ಲಿ ತುಳಜಾಪುರ ಅಂಬಾಭವಾನಿ ಅಭ್ಯಾಸಯೋಗ್ಯವಾಗಿದೆ. ತಡಖೇಲ ಶಾಸನವು "ಗಣಪತಿ ಭಗವತೀ ಸಪ್ತಮಾತೃಕೆ ನಂದಿನಾಗರ"ಗಳನ್ನು ಸ್ಥಾಪಿಸಿದ ವಿಷಯ ತಿಳಿಸುತ್ತದೆ. 'ಸಪ್ತಮಾತೃಕೆ'ಯನ್ನೇ ಕರ್ನಾಟಕದಲ್ಲಿ ಗ್ರಾಮೀಣರು 'ಏಳು ಮಕ್ಕಳ ತಾಯಿ' ಎಂದು ಪೂಜಿಸುವಂತಿದೆ.

೧೬. ಶಿಕ್ಷಣ

ಬ್ರಹ್ಮಪುರಿ, ಅಗ್ರಹಾರಗಳು ನೇರವಾಗಿ ಶಿಕ್ಷಣಕೇಂದ್ರಗಳಲ್ಲ. ಕ್ರಮವಾಗಿ ಬ್ರಾಹ್ಮಣರ ಕೇರಿ ಮತ್ತು ಬ್ರಾಹ್ಮಣರ ಉಪಜೀವನಕ್ಕೆ ಕೊಟ್ಟ ಗ್ರಾಮಗಳು. ಘಟಿಕಾ ಸ್ಥಾನಗಳು ಮಾತ್ರ ನೇರವಾಗಿ ಶಿಕ್ಷಣಕೇಂದ್ರಗಳು. ಸಮಯ ತಿಳಿಸುವ ಘಟಿಕಾಯಂತ್ರ ಅಂದರೆ ನೀರ ಗಡಿಯಾರವನ್ನೊಳಗೊಂಡ ಕಾರಣ ಇವುಗಳಿಗೆ 'ಘಟಿಕಾಸ್ಥಾನ' ಎಂದು ಹೆಸರು. ಇವು ಬಹುಶಃ ವೈದಿಕರ ಪ್ರೌಢಶಿಕ್ಷಣ ಕೇಂದ್ರಗಳು. ಉಸ್ಮಾನಾಬಾದ ಜಿಲ್ಲೆಯ ಶಿರೂರ, ನಾಂದೇಡ ಜಿಲ್ಲೆಯ ಕರಾಡಖೇಡ ಮತ್ತು ಆರಿಗೆಗಳಲ್ಲಿ ಘಟಿಕಾಸ್ಥಾನಗಳಿದ್ದ ಉಲ್ಲೇಖಗಳಿವೆ. 'ಏರಿಗೆಯ ಶಾಸನ' "ಸಾ(ಲೆ)ಯ ಘಟೆ" ಎಂದು ವ್ಯಕ್ತವಾಗಿಯೇ ಕರೆದಿದೆ. ತಡಖೇಲ ಶಾಸನದಲ್ಲಿ 'ಘಳಿಗೆ' ಎಂದು ಕರೆದುದು ಘಟಿಕಾ ಸ್ಥಾನವನ್ನೇ. ಘಟಿಕಾ ಸ್ಥಾನಗಳಿಗೆ ಹೊಂದಿ ತ್ರೈಪುರಷ (ಬ್ರಹ್ಮ, ವಿಷ್ಣು, ಮಹೇಶ್ವರ) ದೇವಾಲಯಗಳಿರುತ್ತಿದ್ದವು. ಏರಿಗೆಯಲ್ಲಿ ಇಂಥ ದೇವಾಲಯವಿದ್ದುದನ್ನು 'ಏರಿಗೆಯ ಶಾಲೆಯ ತ್ರೈಪುರಷದೇವ' ಎಂಬ ವಾಕ್ಯ ಸ್ಪಷ್ಟಪಡಿಸುತ್ತದೆ.

೧೭. ಒಕ್ಕಲುತನ–ವ್ಯಾಪಾರ

ಸಮಾಜದ ಆರ್ಥಿಕ ಚಟುವಟಿಕೆಗಳನ್ನು ನಿಗ್ರಹಿಸುವುವೆಂದರೆ ಒಕ್ಕಲುತನ ಮತ್ತು ವ್ಯಾಪಾರ. ಹೀಗಾಗಿ ಸಮಾಜದ ದಾಖಲೆಗಳಾದ ಶಾಸನಗಳಲ್ಲಿ ಇವುಗಳಿಗೆ ಸಂಬಂಧಿಸಿದ ಅನೇಕ ಅಂಶಗಳು ಹೀಗೆ ಕಂಡುಬರುತ್ತವೆ:

ಅಂದು ಹೊಲವನ್ನು ಕೆಯ್, ಗದ್ದೆ, ಕರಿಯಹೊಲ, ತೋಂಟ, ಪಾಳು, ಹಾಳಕೆಯಿ ಎಂದು ಗುರುತಿಸುತ್ತಿದ್ದರು. ಭೂಮಿಯನ್ನು ಅಳೆಯಲು ಬೇರೆ ಬೇರೆ ಪ್ರದೇಶದವರು ಬೇರೆ ಬೇರೆ ಅಳತೆಯ ಮಾನದಂಡಗಳನ್ನು ಉಪಯೋಗಿಸುತ್ತಿದ್ದು, ಅವುಗಳಿಗೆ ಕುಂಟೆ, ಕೋಲು, ಘಳೆ(ಗಳ) ಎಂದು ಕರೆಯುತ್ತಿದ್ದರು. ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಮಾವನ ಸಿಂಘನ ಕೋಲು, ಮಾರ್ಕೊಳ್ವನ ಕೋಲು, ಕನ್ನೇಶ್ವರದ ಕೋಲು, ಹತ್ತು ಕಪ್ಪಡಿಕೋಲು (?) ಎಂಬ ಹೆಸರಿನ ಅಧಿಕೃತ ಭೂಮಾಪನ ಕೋಲುಗಳ ಉಲ್ಲೇಖವಿದೆ. ಇವು ಹಲವು ಗೇಣುಗಳ ಅಳತೆಯುಳ್ಳುವಾಗಿದ್ದವು. ಹನ್ನಿಗ್ಗೇಣ ಕೋಲು, ಅಂದರೆ ೧೨ ಗೇಣು ಉದ್ದನೆಯ ಕೋಲುವೊಂದರ ಉಲ್ಲೇಖ ಒಂದು ಶಾಸನದಲ್ಲಿ ಬರುತ್ತದೆ. ಇಂಥ ಕೋಲಿನ ಅಧಿಕೃತ ಪ್ರಮಾಣ ಸಾರ್ವಜನಿಕರಿಗೆ ಗೊತ್ತಾಗಲೆಂದು ದೇವಾಲಯದ ಗೋಡೆ ಇಲ್ಲವೆ ಕಟ್ಟೆಯ ಮೇಲೆ ಅದನ್ನು ಕೆತ್ತುತ್ತಿದ್ದರು. ಶೋಧಿಸಿದರೆ ಮೇಲೆ ಹೇಳಿದ ಕೋಲುಗಳ ಶಿಲ್ಪಚಿತ್ರ ಮಹಾರಾಷ್ಟ್ರದ ದೇವಾಲಯಗಳಲ್ಲಿ ಸಿಗಬಹುದು.

ಹಲವು ಕೋಲು, ಕುಂಟೆ ಅಥವಾ ಘಳೆಗಳೆಂದರೆ ಒಂದು ಕಂಭ ಅಥಮಾ ಕಮ್ಮ. ಹಲವು ಕಂಬಗಳೆಂದರೆ ಒಂದು ಮತ್ತರು. ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಬಳಸಿದ 'ಮತ್ತರು' ಎಂಬುದಕ್ಕೆ ಪರ್ಯಾಯವಾಗಿ ಅದೇ ಊರಿನ ಸಂಸ್ಕೃತ ಶಾಸನದಲ್ಲಿ 'ನಿವರ್ತನ' ಎಂದು ಬಳಸಿದ್ದುದು ತಿಳಿದು ಬರುತ್ತದೆ. ದಾನವಾಗಿ ಕೊಟ್ಟ ಹೊಲ, ನಿವೇಶನಗಳಿಗೆ ಸೀಮೆಯನ್ನು ಹೇಳುತ್ತಿದ್ದರು. ಉದಾ: "ಮೂಡಲು ಸುಗ್ಗಾವೆಯ ಪೊಲ ಮೇರೆ, ಬಡಗಲು ಬಟ್ಟೆ, ತೆಂಕಲು ಎಲವದ ಮೇರೆ, ಪಡುವಲು ಶಾಸನಸ್ತಂಭ." ಕೊಟ್ಟ ದಾನವನ್ನು ಮೊದಲು ಅಕ್ಷರದಲ್ಲಿ, ಆಮೇಲೆ ಅಂಕಿಯಲ್ಲಿ (ಇಂದು ಮೊದಲು ಅಂಕಿಯಲ್ಲಿ, ಬಳಿಕ ಅಕ್ಷರದಲ್ಲಿ ಬರೆಯುತ್ತೇವೆ) ಬರೆಯುತ್ತಿದ್ದರು. ಉದಾ: ಮಾವನ ಸಿಂಘನ ಕೋಲಮತ್ತರಿಪ್ಪತ್ತೊಂದು, ಅಂಕದೊಳಂ ಮತ್ತ ೨೧ "ಮಾವನ ಸಿಂಗಂ ಕೋಲ ಮತ್ತರೈವತ್ತಂಕದೊಳಂ ಮತ್ತರು ೫೦."

ಧಾನ್ಯಗಳನ್ನು ಮಾನ, ಸೊಲ್ಲಗೆ, ಸೌಟು, ಕೊಳಗ, ದೇವಮಾನ, ಸೊಳಸ, ಬಳ್ಳ, ಮೊಟ್ಟೆ ಎಂಬ ಕನ್ನಡ ಹೆಸರಿನ ಅಳತೆಗಳಿಂದ ಅಳೆಯುತ್ತಿದ್ದರು.

ಹಣಕ್ಕೆ ಸಂಬಂಧಪಟ್ಟಂತೆ ದ್ರಮ್ಮ, ಪಣ, ಹಾಗ, ಪೊನ್, ಗದ್ಯಾಣ, ವೀಸ, ಮುದ್ರಾವಣ, ಧರಣ, ಬೆಳ್ಳಿಯ ದ್ರಮ್ಮ, ಕರಿಯ ದ್ರಮ್ಮ ಎಂಬ ಹೆಸರಿನ ನಾಣ್ಯಗಳು ಬಳಕೆಯಲ್ಲಿದ್ದವು.

ಸಾಮಾನ್ಯವಾಗಿ ಎಲ್ಲ ವಸ್ತುಗಳ ಮೇಲೆ ಸುಂಕ ಹಾಕುತ್ತಿದ್ದರು. ಈ ಸಂದರ್ಭದಲ್ಲಿ ಬಳಕೆಯಾದ 'ಕೊಟ್ಟಲ್ಲಿ', 'ಕೊಂಡಲ್ಲಿ' ಎಂಬ ಪದಗಳು ವಣಿಕ, ಗ್ರಾಹಕ ಇಬ್ಬರಿಂದಲೂ ಸುಂಕ ಸಂಗ್ರಹಿಸುತ್ತಿದ್ದುದನ್ನು ತಿಳಿಸುತ್ತವೆ. ಸುಂಕ (=ಶುಲ್ಕ)ಕ್ಕೆ ಬದಲು ತೆರಿಗೆ ಪದವನ್ನೂ ತೆರಿಗೆಗೆ ಬದಲು 'ತೆರೆ' ಪದವನ್ನೂ ಬಳಸುತ್ತಿದ್ದರು. ಉದಾ: ಬಣ್ಣಿಗೆದೆರೆ, ಅಂಕದೆರೆ. ಈ ತೆರಿಗೆ ತುಂಬ ಭಾರವಾಗಿದ್ದುದರಿಂದ ಇದನ್ನು 'ಭಾದೆ' ಎಂದು ಕರೆಯುತ್ತಿದ್ದರು. ಉದಾ: ಬಟ್ಟೆಯ ಬಾಧೆ (–ದಾರಿಯ ಸುಂಕ). ದಾನವನ್ನು 'ಸರ್ವಬಾಧಾ ಪರಿಹಾರವಾಗಿ' ಕೊಟ್ಟರು ಎಂದರೆ 'ದಾನವಾಗಿ ಕೊಟ್ಟ ವಸ್ತುವಿನ ಮೇಲೆ ಯಾವುದೇ ಸುಂಕವನ್ನು ಆಕರಿಸಬಾರದು ಎಂದು ನಿರ್ದಿಷ್ಟಪಡಿಸಿ ದಾನ ಮಾಡಿದರು' ಎಂದು ಅರ್ಥ. ಅಧಿಕಾರಿ ಸಂಗ್ರಹಿಸಿದ ಒಂದು ಊರಿನ ಇಲ್ಲವೆ ಒಂದು ಪ್ರಾಂತದ ಸುಂಕದಲ್ಲಿ ಒಂದಿಷ್ಟು ಪಾಲು ಅವನ ಸಂಬಳವೆಂದು ಹೋಗುತ್ತಿತ್ತು. ಇಲ್ಲವೆ ತಾನು ಸಂಗ್ರಹಿಸಿದ ಸುಂಕದಲ್ಲಿ ಮೊದಲೇ ನಿರ್ದಿಷ್ಟಪಡಿಸಿದಷ್ಟು ಹಣವನ್ನು ಅರಸನಿಗೆ ಕೊಟ್ಟು, ಮಿಕ್ಕದನ್ನು ತಾವು ಸಂಬಳವೆಂದು ಸ್ವೀಕರಿಸುತ್ತಿದ್ದರು. ಇಂಥವರು ಕೆಲವು ಪ್ರಧಾನವ್ಯಕ್ತಿ ಇಲ್ಲವೆ ಸಂಸ್ಥೆಯಿಂದ ಸುಂಕವನ್ನೇ

ಆಕರಿಸದಿರುವುದು, ಇಲ್ಲವೆ ಕೆಲವು ವಸ್ತುಗಳಿಂದ ಬರುವ ಸುಂಕವನ್ನು ಉದಾರವಾಗಿ ಕೊಡುವುದು 'ದಾನ'ವೆಂದು ಪರಿಗಣಿತವಾಗುತ್ತಿತ್ತು. ಆಯಗಾರರು ದೇವಾಲಯದ ಭೂಮಿಯಿಂದ ಕೆಲವೊಮ್ಮೆ 'ಆಯ'ವನ್ನು ಆಕರಿಸದಿರುವುದೂ 'ದಾನ'ವೆಂದು ಪರಿಗಣಿತವಾಗುತ್ತಿತ್ತು. ಚಪ್ಪನ್ನೆಯ ಸುಂಕ (ಪನ್ನೆಯ ಸುಂಕ?), ಅಂಗಡಿ ಸುಂಕ, ಸೀರೆಯ ಸುಂಕ, ಬಣ್ಣಿಗೆದೆರೆ, ಅಂಕದೆರೆ, ಪೆರ್ಜುಂಕ, ವೀಸದ ಸುಂಕ ಎಂಬ ಸುಂಕಗಳು ಇಲ್ಲಿಯ ಶಾಸನಗಳಲ್ಲಿ ಕಂಡುಬರುತ್ತವೆ. ಒಂದು ಶಾಸನದಲ್ಲಿ ಸೀರೆಯ ಸುಂಕಗಳ ಪ್ರಮಾಣವನ್ನು "ಪೊದಕೆಗೆ ಪಾಗ ೨, ಸೀರೆಗೆ ಪಾಗ ೧, ಮೊಟ್ಟೆಯ ಸೀರೆಗೆ ಪೊಂಗೆ* ಪಣ ೧, ದೇಡ (=ಜೇಡ) ಸೀರೆಗೆ ಪೊಂಗೆ* ಪಣ ೧" ಎಂದು ಹೇಳಲಾಗಿದೆ.

ಕರ್ನಾಟಕ ವಿಶಿಷ್ಟವಾದ ಐಯಾವೊಳೆಯ ಐನೂರ್ವರು, ಮುಮ್ಮುರಿದಂಡ, ಸೆಟ್ಟಿ, ಸೆಟ್ಟಿಗುತ್ತ ಮೊದಲಾದ ವ್ಯಾಪಾರಿವರ್ಗದ ಹೆಸರುಗಳು ಕರ್ನಾಟಕದ ಶಾಸನಗಳ ಕ್ರಮದಲ್ಲಿಯೇ ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿಯೂ ಬರುತ್ತವೆ. ಉದಾ: "ಅಹಿಚ್ಛತ್ರವೆನಿಸುವಯ್ಯಾವೊಳೆ ಪುರಪರಮೇಶ್ವರರುಮಪ್ಪಯ್‌ನೂರ್ವ್ವಸ್ವಾಮಿಗಳುಂ ಗವರೆಗಳುಂ। ಗಾತ್ರಿಗರುಂ। ಸೆಟ್ಟಿಯರುಂ। ಸೆಟ್ಟಿಗುತ್ತರುಂ। ಗಾಮುಂಡರುಂ। ಗಾಮುಣ್ಡಸಾಮಿಗಳುಂ। ಬೀರರುಂ। ಬೀರವಣಿಗರುಂ."[೧] ಇವರು ಬಿಟ್ಟ ದಾನದ ವಿವರಗಳು ಆಯಾ ಪರಿಸರದ ವಾಣಿಜ್ಯ ವಾತಾವರಣವನ್ನೇ ಕಣ್ಣಿಗೆ ಕಟ್ಟುತ್ತವೆ. ಉದಾ: ಧಾರಾಪೂರ್ವಕವಾಗಿ ಕೊಟ್ಟಾಯಮೆಂತ್ತೆದೊಡೆ: ಅಡಕೆ ಹೇರಂಗೆ ಅಯ್ವತ್ತು, ಜವಳಕ್ಕಿರ್ಪತ್ತು, ಪಸರಕಯ್ದು। ಎಲೆ ಹೇರಂಗೆ ನೂರು, ತಲೆವೊರೆಗಯ್ವತ್ತು, ಪಸರಕಿರ್ಪ್ಪತ್ತೈದು। ತುಪ್ಪಮೆಣ್ಣೆಯೆಂಬಿವು ಕೊಡಕ್ಕೆ ಸೊಲ್ಲಿಗೆ, ಸಿದ್ಧದಿಗೆಗರವಾನಂ, ಸಂಗಡಿಗೊಮ್ಮಾನಂ। ದೂಸಿಗವಸರಕ್ಕಮಕ್ಕಸಾಲೆಗಂ ಪೊಂಗೆ ಪಣಂ। ಹತ್ತಿ ಮಳವೆಗಯ್ವಲಂ। ಭಂಡಿಯ ಕುರುಸೆಯ ಮಳವೆಗೆರಡು ಬಿಸಿಗೆ। ಜವಳಕ್ಕೆ ಪಲಂ ಪತ್ತು। ಲಂಕರೊಕ್ಕಲಲ್ಲಿ ಆಱು ತಿಂಗಳ್ಗೆ ಮಣೆ ತಿವಿಗೆ ಮರವಿಯೆಂಬಿವೊಂದಕ್ಕುಂ, ವರ್ಷಕ್ಕೆ ಮಂಚವೊಂದಕ್ಕುಂ। ಅಲ್ಲವರಿಸಿನ ಶುಂಠಿ ಬೆಳ್ಳುಳ್ಳಿ ಬಜೆ ಭದ್ರಮುಸ್ತೆಯೆಂಬಿವು ಮೊದಲಾಗಿ ತೂಗಿಮಾರುವ ಭಂಡಗಳ್ಗೆ ಹೇರಿಂಗಯ್ವಲಂ, ಜವಳಕ್ಕಿಪ್ಪಲಂ, ಹಸರಕ್ಕೊಪ್ಪಲಂ। ಜೀರಿಗೆ ಮೆಳಸು ಸಾಸಿವೆಯೆಂಬಿವು ಹೇರಿಂಗೊಮ್ಮನಂ, ಜವಳಕ್ಕರವನಂ, ಹಸರಕ್ಕೆ ಸೊಲ್ಲಗೆ। ಉಪ್ಪು ಮೊದಲಾಗಿ ಹಡಿ(ದಿ)ನೆಂಟು ಧಾನ್ಯಂಗಳ್ಗಂ ಭಂಡಿಗೆ ಕೊಳಗವೊಂದು, ಹೇರಿಂಗೆ ಮಾನವೆರಡು, ತಲೆವೊರೆಗೊಮ್ಮಾನಂ। ಬಾಡುಕಾಯೆಂಬಿವು ಭಂಡಿಗೆ ಹತ್ತು, ತಲೆವೊರೆಗೆ ನಾಲ್ಕಕ್ಕುಂ। ಭಂಡಿಗೆ ದಂಡಿಗೆವೊಂ(ದು) ಸೆವೆಯ್ದು, ಹೂಟೆಯೆರಡರ್ಕ್ಕಂ ದಂಡಿಗೆವೊಂಡು(ದು) ಸೆವೆಯೆರಡು, ಹೂವಿನ ಹೆಡಲಿಗೆಗೆ ಮಾಲೆವೊಂದು, ಕುಂಬಱರಲ್ಲಿ ಹಸರಕ್ಕೆ ಮಡಕೆವೊಂದು." ಈ ಗದ್ಯದಲ್ಲಿಯ ವಿವಿರಗಳು ಸಂತೆಯ ಮತ್ತು ಸಂತೆಯ ಸುಂಕವಿಧಾನದ ಸ್ಪಷ್ಟಚಿತ್ರಕೊಟ್ಟು ಇಂದಿನ ಮಹಾರಾಷ್ಟ್ರದಲ್ಲಿ ಹಿಂದೆ

---

* ಪೊಂಗೆ–ಪೊನ್‌ಕ್ಕೆ. ಒಂದು ಹೊನ್ ಗಳಿಕೆಯ ಮೇಲೆ ಒಂದು ಹಣವನ್ನು ಸುಂಕವಾಗಿ ಕೊಡಬೇಕೆಂದು ಇಲ್ಲಿಯ ಅರ್ಥ. ಒಂದು ರೂಪಾಯಿಗೆ ಒಂದು ಪೈಸೆ ಸುಂಕ ಎಂಬಂತೆ.

೧. ಕರ್ನಾಟಕದಲ್ಲಿ ಪದೇ ಪದೇ ಗೋಚರಿಸುವ ಪಟ್ಟಣಶೆಟ್ಟಿಗಳ ಉಲ್ಲೇಖವೂ ಇಲ್ಲಿದೆ. "ಭಾಳಮಣಿಗೆಯ ಪ್ರಭು ಪಟ್ಟಣಶೆಟ್ಟಿ ಮುಖ್ಯವಾಗಿ . . ." ಎಂಬ ಮಾತು ಭಾಮಣಿ ಶಾಸನದಲ್ಲಿದೆ. ಯಾವುದೇ ಗ್ರಾಮ, ಸಂತೆ ನೆರೆಯುವಿಕೆಯಿಂದ ಪಟ್ಟಣವೆನಿಸಿಕೊಳ್ಳುತ್ತಿತ್ತು. ಗುತ್ತಿಗೆ ರೂಪದಲ್ಲಿ ಸಂತೆಯ ಸುಂಕದ ಕೆಲವು ಭಾಗವನ್ನು ರಾಜನಿಗೆ ಕೊಡುವುದರ ಮೂಲಕ ಸಂತೆ ಸಂಘಟಿಸುತ್ತಿದ್ದವನೇ ಪಟ್ಟಣಶೆಟ್ಟಿ. 'ಸೆಟ್ಟಿ ಇಳಿದಲ್ಲಿ ಪಟ್ಟಣ'ವೆಂದರೆ ಸೆಟ್ಟಿ ಇಳಿದಲ್ಲಿ ಸಂತೆ ಎಂದು ಅರ್ಥ. 'ಸೆಟ್ಟಿ ಶೃಂಗಾರ ಆಗುವುದರಲ್ಲಿ ಪಟ್ಟಣ ಹಾಳಾಯಿತು' ಅಂದರೆ ಸೆಟ್ಟಿ ಅಲಂಕಾರ ಮಾಡಿಕೊಳ್ಳುವುದರಲ್ಲಿ ಸಂತೆ ಮುಗಿಯಿತು ಎಂದು ಅರ್ಥ.

ಅಸ್ತಿತ್ವದಲ್ಲಿದ್ದ ಕರ್ನಾಟಕದ ವಾಣಿಜ್ಯದ ಒಂದು ಪುಟ್ಟ ಕಲ್ಪನೆಯನ್ನು ಕೊಡುತ್ತವೆ. ಇದಲ್ಲದೆ ಅರುವಣ, ಹೇರು, ಗಡಿಂಬ, ನಖರ ಎಂಬ ನಿತ್ಯ ವ್ಯವಹಾರದ ಪದಗಳು ಶಾಸನಗಳಲ್ಲಿ ಕಿಕ್ಕಿರಿದಿವೆ.

೧೮. ಆಡಳಿತ

ಪ್ರಾಚೀನಕಾಲದ ಆಡಳಿತವನ್ನು ಅಭ್ಯಾಸ ಮಾಡುವ ಪ್ರಸಂಗದಲ್ಲಿ ನಮ್ಮ ಅನೇಕ ವಿದ್ವಾಂಸರು ಎರಡು ದೊಡ್ಡ ತಪ್ಪುಗಳನ್ನು ಮಾಡುತ್ತಾರೆ. ಅವು: ಆ ಆಡಳಿತವನ್ನು ಕೆಲವೊಮ್ಮೆ ಕೌಟಿಲ್ಯನ ಅರ್ಥಶಾಸ್ತ್ರದ ಕನ್ನಡಕದ ಮೂಲಕ ನೋಡುವುದು, ಕೆಲವೊಮ್ಮೆ ಇಂದಿನ ಆಡಳಿತದ ಕನ್ನಡಕದ ಮೂಲಕ ನೋಡುವುದು. ಇದರಿಂದಾಗಿ ಅನೇಕ ಸಲ ತಮತಮಗೆ ತಿಳಿದ ತಪ್ಪುಗಳನ್ನು ಸ್ಥಾಪಿಸುತ್ತ ಹೋಗಿದ್ದಾರೆ. ಈ ಉಭಯ ಸೂತಕಗಳಿಂದ ಮುಕ್ತವಾಗಿ, ಲಭ್ಯಸಾಮಗ್ರಿಯನ್ನವಲಂಬಿಸಿ ಆಡಳಿತದ ರೂಪರೇಷೆಯನ್ನು ಇಂದು ಬರೆಯಬೇಕಾಗಿದೆ.

ಚಕ್ರವರ್ತಿಯೇ ರಾಷ್ಟ್ರದ ಪರಮಾಧಿಕಾರಿ. ಈ ಕಾಲದಲ್ಲಿ ಸಾಮಾನ್ಯವಾಗಿ ಕರ್ನಾಟಕದ ಒಳಗಿನ ಎಲ್ಲ ಶಾಸನಗಳು ಚಕ್ರವರ್ತಿಯನ್ನು ಉಲ್ಲೇಖಿಸುತ್ತವೆ. ಇದೇ ರೀತಿ ಮಹಾರಾಷ್ಟ್ರದ ಮಂಗಳವೇಡದಿಂದ ಆಳುತ್ತಲಿದ್ದ ಕಲಚುರಿಗಳು ತಮ್ಮ ಚಕ್ರವರ್ತಿಗಳಾದ ಕಲ್ಯಾಣ ಚಾಲುಕ್ಯರ ಹೆಸರನ್ನು ಹೇಳುವರಾದರೂ ಕೆಲವೊಮ್ಮೆ ಕೈಬಿಡುತ್ತಾರೆ. ಉದಾ: ಅಮುಗಿದೇವನ ಶಾಸನಗಳು. ಇವರನ್ನು ಬಿಟ್ಟರೆ ಯಾದವರು ಇನ್ನೂ ಹೆಚ್ಚು ಸಲ, ಕೊಲ್ಲಾಪುರ ಶಿಲಾಹಾರರು ಮತ್ತೂ ಹೆಚ್ಚು ಸಲ ಚಕ್ರವರ್ತಿಯ ಹೆಸರನ್ನು ಹೇಳುವುದಿಲ್ಲ. ಇದನ್ನು ನೋಡಿದರೆ ಕರ್ನಾಟಕದ ಗಡಿ ಪ್ರದೇಶದ ಇವರು ಚಕ್ರವರ್ತಿಯ ಅಧಿಕಾರವನ್ನು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಿದ್ದರೆಂದು ಅರ್ಥವಾಗುತ್ತದೆ.

ಚಕ್ರವರ್ತಿಯನ್ನು ಕುರಿತು ಹೇಳುವಾಗ ಅವರ ಬೇರೆ ಬೇರೆ 'ರಾಜಧಾನಿ'ಗಳ ಉಲ್ಲೇಖಗಳು ಬರುತ್ತವೆ. ಇವೆಲ್ಲ ಆತನ ರಾಜಧಾನಿಗಳಾಗಿದ್ದವೆಂದು ಎಲ್ಲರೂ ಭಾವಿಸುತ್ತಾರೆ. ಆದರೆ ಆತನಿಗೆ ರಾಜಧಾನಿ ಇದ್ದುದು ಒಂದೇ. ಪ್ರಯಾಣ ಪ್ರಸಂಗದಲ್ಲಿ ವಸತಿ ಮಾಡಿದ ಗ್ರಾಮದಿಂದ ದಾನ ನೀಡಿದಾಗ 'ಆ ಗ್ರಾಮದಿಂದ ಆಳುತ್ತಿರಲಾಗಿ' ಎಂದು ಬರೆಯುವುದು ರೂಢಿ. ಹೀಗೆಂದ ಮಾತ್ರಕ್ಕೆ ಇವೆಲ್ಲ ರಾಜಧಾನಿಗಳೆಂದು ಭಾವಿಸಬಾರದು. ಇದೇ ರೀತಿ ಅಧಿಕಾರಿಗಳನ್ನು ಉಲ್ಲೇಖಿಸುತ್ತ 'ಆಳುತ್ತಮಿರೆ' ಎಂಬ ಪದವನ್ನು ಶಾಸನಗಳು ಬಳಸಿವೆ. ಅಲ್ಲಿ ಈ ಪದ 'Ruling' ಮತ್ತು 'Administration' ಎಂಬ ಎರಡು ಅರ್ಥಗಳಲ್ಲಿ ಬಳಕೆಯಾಗಿದೆ. ಹೀಗಾಗಿ ಕೆಲವರು 'ಅಧಿಪತ್ಯದ ಪ್ರಭುಗಳು', ಇನ್ನು ಕೆಲವರು 'ಆಡಳಿತಾಧಿಕಾರಿಗಳು' ಎಂದು ಆಡಳಿತ ವರ್ಗದವರನ್ನು ವರ್ಗೀಕರಿಸಿಕೊಳ್ಳಬೇಕು. ಇದರಿಂದಾಗಿ ಚಕ್ರವರ್ತಿ, ಮಾಂಡಲಿಕ, ಸಾಮಂತ, ನಾಳ್ಗಾವುಂಡ, ಗಾವುಂಡ ಇವರೆಲ್ಲ ಪ್ರಭುಗಳು, ಮಿಕ್ಕವರು ಅಧಿಕಾರಿಗಳೆಂದು ಸ್ಪಷ್ಟವಾಗುತ್ತದೆ. ಆಡಳಿತದಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಎಂಬ ಜೋಡು ಪದ್ಧತಿ ರೂಢಿಯಲ್ಲಿದ್ದಿತು. ಅಂದರೆ ಯಾವುದೇ ಪ್ರಾಂತದಲ್ಲಿ ಕೇಂದ್ರದ ಆಡಳಿತದವರು, ಪ್ರಾಂತದ ಆಡಳಿತದವರು ಕೆಲಸ ಮಾಡುತ್ತಿದ್ದರು. 'ದಂಡನಾಯಕ' ಎಂಬುದನ್ನು ಈ ಎರಡೂ ವಿಧದ ಆಡಳಿತ ವರ್ಗದವರಿಗೆ ಸಾಮಾನ್ಯವಾಗಿ ಬಳಸಲಾಗುತ್ತಿತ್ತು. ಆ

ಕಾಲದ ಮುಖ್ಯ ಶಾಖೆಗಳೆಂದರೆ ಸೈನ್ಯ ಮತ್ತು ಸುಂಕ. ಇವುಗಳನ್ನು ಬಿಟ್ಟರೆ ವಿದೇಶಾಂಗ ಇಲಾಖೆಗೂ ಮಹತ್ವದ ಸ್ಥಾನವಿದ್ದಿತು.

ಇಂದಿನ ಮಹಾರಾಷ್ಟ್ರದ ಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಮಧ್ಯಕಾಲೀನ ಅವಧಿಯಲ್ಲಿ ಚಕ್ರವರ್ತಿಗಳು ಆಳಿಲ್ಲವಾದುದರಿಂದ, ಇಲ್ಲಿಯ ಶಾಸನಗಳಲ್ಲಿ ಚಕ್ರವರ್ತಿಗಿಂತ ಆಧಿಪತ್ಯದ ಪ್ರಭುವರ್ಗ, ಆಡಳಿತದ ಅಧಿಕಾರಿವರ್ಗದವರ ಉಲ್ಲೇಖವೇ ಬರುತ್ತದೆ. ಸ್ತ್ರೀಯರೂ ಆಳಿದುದಕ್ಕೆ ರೆಬ್ಬಲದೇವಿ ಮತ್ತು ಅಭಿನವಶಾರದೆ ಚಂದಲದೇವಿಯರ ಶಾಸನಗಳು ನಿದರ್ಶನವೆನಿಸಿವೆ. ಯುವರಾಜರೂ ಆಳಿದುದಕ್ಕೆ ವಿಕ್ರಮಾದಿತ್ಯನ ಮಗ ಮಲ್ಲಿಕಾರ್ಜುನ ಮತ್ತು ತೈಲಪ, ಬಿಜ್ಜಳ ಮಗ ಮೈಳುಗಿಯರ ಉಲ್ಲೇಖಗಳು ಸಿಗುತ್ತವೆ.

೧೯. ಸಾಹಿತ್ಯ

ಶಾಸನಗಳು ಪ್ರಾಚೀನಕಾಲದಲ್ಲಿ ಜರುಗಿದ ಮೌಲಿಕ ಘಟನೆಗಳ ಪ್ರಸಾರ ಮಾಧ್ಯಮಗಳು ಮತ್ತು ಅಧಿಕೃತ ದಾಖಲೆಗಳು. ವೀರಮರಣ, ಸಹಗಮನಗಳಂಥ ಆದರ್ಶಘಟನೆಗಳನ್ನು ಸಾರ್ವಜನಿಕರಲ್ಲಿ ಪ್ರಸಾರ ಮಾಡುವುದು, ದೇವಾಲಯಗಳಂಥ ಸಾರ್ವಜನಿಕ ಸಂಸ್ಥೆಗಳಿಗೆ, ಯುದ್ಧ ವಿಜಯಿಯಂಥ ಗಣ್ಯವ್ಯಕ್ತಿಗಳಿಗೆ ನೀಡಿದ ದಾನದತ್ತಿಗಳನ್ನು ದಾಖಲುಗೊಳಿಸುವುದು ಇವುಗಳ ಮುಖ್ಯ ಉದ್ದೇಶ. ಆದರೆ ಕಾಲಕ್ರಮದಲ್ಲಿ, ಈ ಮೌಲ್ಯಪ್ರಸಾರ ಇನ್ನೂ ಪರಿಣಾಮಕಾರಿಯಾಗಲೆಂದು ಶಾಸನಗಳನ್ನು ದಾಖಲೆರೂಪದಿಂದ ಸಾಹಿತ್ಯರೂಪಕ್ಕೆ ತಿರುಗಿಸಲಾಯಿತು. ಇದಕ್ಕೆ ಅನುಸರಿಸಿ ತಾಮ್ರಪಟದಂಥ ವೈಯಕ್ತಿಕ ದಾನ ದತ್ತಿ ದಾಖಲೆಗಳೂ ಸಾಹಿತ್ಯ ರೂಪಕ್ಕೆ ಹೊರಳಿದವು. ಇದರಿಂದಾಗಿ ಎಲ್ಲ ಬಗೆಯ ಶಾಸನಗಳು 'ಸಾಹಿತ್ಯ'ದ ದಾರಿಯಲ್ಲಿ ಬೆಳೆಯತೊಡಗಿದವು.

ಸಾಮಾನ್ಯವಾಗಿ ಮಧ್ಯಯುಗದ ಕನ್ನಡ ಶಾಸನಗಳು ಕೇವಲ ಗದ್ಯ ಇಲ್ಲವೆ ಪದ್ಯಗಳಿಗೆ ಬದಲು ಗದ್ಯ-ಪದ್ಯಗಳ ಮಿಶ್ರಣವಾದ ಚಂಪೂ ರೂಪದಲ್ಲಿ ಅರಳಿ ನಿಂತವು. ಇದಲ್ಲದೆ "ಪುರಾಣಂ ಪಂಚಲಕ್ಷಣಂ" ಎಂಬ ಆದರ್ಶದಲ್ಲಿ "ಶಾಸನಂ ಪಂಚಲಕ್ಷಣಂ" ಎಂಬ ಸೂತ್ರವನ್ನು ಕಲ್ಪಿಸಿಕೊಂಡು, ಅದರ ಆದರ್ಶದಲ್ಲಿ ದೇವತಾಸ್ತುತಿ, ದೇಶವರ್ಣನೆ, ಕ್ಷೇತ್ರವರ್ಣನೆ, ಚಕ್ರವರ್ತಿ ಸಾಮಂತ ವಿವರಣೆ, ದಾನ, ದಾನಮಿತಿ, ದಾನವಸ್ತು, ಸಮಾಪ್ತಿವಾಕ್ಯ ಎಂದು ವಿಶಿಷ್ಟ ಕ್ರಮವಿನ್ಯಾಸವನ್ನು ಪಡೆದವು. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಈ ವಿನ್ಯಾಸದ ಒಂದು ಸಿದ್ಧರೂಪ ಶಾಸನಗಳಲ್ಲಿ ನಿರ್ಮಾಣವಾಗಿದ್ದಿತು. ಮಹಾರಾಷ್ಟ್ರದ ಕನ್ನಡ ಶಾಸನಗಳೆಲ್ಲ ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯಯುಗಕ್ಕೆ ಸಂಬಂಧಿಸಿರುವುದರಿಂದ ಇವುಗಳಲ್ಲಿ ಸಹ ಈ ಸಿದ್ಧರೂಪ ಅಂದರೆ ಚಂಪೂರೂಪ ಮತ್ತು ಪಂಚಲಕ್ಷಣ ವಿನ್ಯಾಸ ಕಂಡುಬರುತ್ತದೆ. ನಾಂದೇಡ ಜಿಲ್ಲೆಯ ಕರಾಡಖೇಡ, ಬಿಮ್ರಾ, ಉಸ್ಮಾನಾಬಾದ ಜಿಲ್ಲೆಯ ಮುರುಮ್, ನರಂಗವಾಡಿ, ಇಟ್ಕಲ್, ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ, ಮಾಂದ್ರೂಪ, ತಡವಲ, ಮಾಳಕವಠೆ, ದರ್ಪಾಲ, ಸಾಂಗಲಿ ಜಿಲ್ಲೆಯ ಮಂಗಳವೇಢ, ಉಮ್ರಾಣಿ, ಪುಳುಜೆ, ಮಿರಜ, ಸಂಖ, ಕೊಲ್ಲಾಪುರ ಜಿಲ್ಲೆಯ ಕೊಲ್ಲಾಪುರ, ಬಾಮಣಿ, ಹೊನ್ನೂರು ಶಾಸನಗಳು ವಿಸ್ತಾರದಲ್ಲಿ, ವೈಭವದಲ್ಲಿ

ಗಮನಾರ್ಹವಾಗಿವೆ. ಮಾಘಣಂದಿಮುನಿಯಿಂದಾಗಿ ಕೊಂಡಕುಂದಾನ್ವಯಕ್ಕೆ ಘನತೆ ಗೌರವಗಳು ಪ್ರಾಪ್ತವಾದುದನ್ನು ಒಂದು ಪದ್ಯ ಹೀಗೆ ವರ್ಣಿಸುತ್ತದೆ.

ಎಳೆಮಾವಿಂ ಬನವಬ್ಜದಿಂ ತಿಳಿಗೊಳಂ ಮಾಣಿಕ್ಯದಿಂ ಮಂಡನಾ ।
ವಟಿ ತಾರಾಧಿಪನಿಂ ನಭಂ ಶುಭದಮಾಗಿರ್ಪ್ಪಂತಿರಿರ್ದ್ದತ್ತು ನಿ ।
ರ್ಮ್ಮಳವೀಗಳ್ ಕುಳಚಂದ್ರದೇವಚರಣಾಂಭೋಜಾತ ಸೇವಾವಿನಿ ।
ಶ್ಚಳ ಸೈದ್ಧಾಂತಿಕ ಮಾಘಣಂದಿಮುನಿಯಿಂ ಶ್ರೀಕೊಂಡಕುಂದಾನ್ವಯಂ ॥

ಕೊಲ್ಲಾಪುರದ ಶೇಷಶಾಯಿದೇವಾಲಯದಲ್ಲಿರುವ ಶಾಸನೋಕ್ತ ಈ ಸುಂದರ ಪದ್ಯ ಶ್ರಣಬೆಳ್ಗೊಳದ ಶಾಸನದಲ್ಲಿಯೂ ಕಂಡು ಬರುತ್ತದೆ. ಬೊಪ್ಪಣ್ಣನ ಉಪ ಸ್ಥಿತಿಯಿಂದಾಗಿ ಯಾವುದೇ ಜನಸಮೂಹ ಸಭೆಯ ಅರ್ಥ ಪಡೆಯುತ್ತಿದ್ದುದನ್ನು ಖಿದ್ರಾಪುರಶಾಸನ ಹೀಗೆ ಹೇಳುತ್ತದೆ:

ಇದು ದಿಟವೊಂದೆ ಮಾತು ದಿವಿಜಾಧಿಪನಿರ್ಪುದೆ ದೇವಲೋಕವ।
ಗ್ಗದ ಮ್ರಿಗರಾಜನಿರ್ಪುದೆ ಬನಂ ಗಜಮಿರ್ಪುದೆ ಸೇನೆ ಚಂದ್ರನಿ।
ರ್ಪುದೆ . . . ಸನಂ ಚಮೂಪತಿಸಿಖಾಮಣಿ ಬೊಪ್ಪಣದಂಡನಾಥನಿ।
ರ್ಪುದೆ ಸಭೆ ಕಳ್ಪಭೂಮಿಹವಿರ್ಪುದೆ ಬಂಧುರ ಮಂದರಾಚಳಂ॥

ಇಂಥ ಪದ್ಯಗಳು ಅನೇಕ ಶಾಸನಗಳಲ್ಲಿ ಗೋಚರಿಸುತ್ತವೆ. ಇವುಗಳ ಮಧ್ಯೆ ಗದ್ಯವೂ ಸೇರಿ ಒಂದೊಂದು ಶಾಸನ ಚಂಪೂಶಿಲ್ಪದ ಮೈಪಡೆದಿವೆ. ಇಂಥ ಒಂದು ಚಂಪೂಶಿಲ್ಪಕ್ಕೆ ಸೊಲ್ಲಾಪುರದ ಶಾಸನವೊಂದು ಉತ್ತಮ ಉದಾಹರಣೆಯೆನಿಸಿದೆ. ಈ ಶಾಸನವನ್ನು ಮಾರುತಿ ವಿಗ್ರಹಕ್ಕೆ ಉಪಯೋಗಿಸಿಕೊಂಡಿರುವುದರಿಂದ ಅದರ ಬೆನ್ನ ಮೇಲೆ ಅಲ್ಲಲ್ಲಿ ಪಾಠ ಉಳಿದುಕೊಂಡಿದೆ. ಇದು ಯಾವ ಘಟನೆಯನ್ನೂ ಹೇಳುವುದಿಲ್ಲ; ಶಿವಪಾರ್ವತಿಯರ ವಿವಾಹವರ್ಣನೆ ಇದರ ವಸ್ತು. ಇದನ್ನು 'ವಿವಾಹ ಪುರಾಣ'ವೆಂದು ಕರೆಯಲಾಗಿದ್ದು ಮದುವೆಯ ಪ್ರತಿಯೊಂದು ಅಂಶವನ್ನು ಹೃದಯಂಗಮವಾಗಿ ವರ್ಣಿಸುತ್ತ, ಹರಿಹರನ ಗಿರಿಜಾಕಲ್ಯಾಣವನ್ನು ನೆನಪಿಸುತ್ತದೆ.

ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿ ಕಾವ್ಯಮಯಗದ್ಯ ಮತ್ತು ವ್ಯಾವಹಾರಿಕ ಗದ್ಯಗಳಿಗೂ ಕೊರತೆಯಿಲ್ಲ. ಕೊಲ್ಲಾಪುರದ ಒಂದು ಶಾಸನ ಸರಸ್ವತಿಯನ್ನು ವರ್ಣಿಸುವ ಕಾವ್ಯಮಯ ಗದ್ಯಭಾಗವೊಂದು ಹೀಗಿದೆ: "ಗದ್ಯವೆ ತನಗೆ ಗದ್ದಿಗೆಯಾಗೆ। ವ್ರಿತ್ತವೆ ತನಗೆ ಕಟಿಕುಚಪ್ರದೇಶವಾಗೆ। ರಾಗಂಗಳ ಸುಳಿವುಗಳೆ ತನಗೆ ಕುರುಳೋಳಿಗಳಾಗೆ। ರಾಗಂಗಳ ಕೊಂಕುಗಳೇ ತನಗೆ ಕಡುವುರ್ಪುಗಳಾಗೆ। ನಾಟಿಯೆ ತನಗೆ ನೋಟವಾಗೆ। ಕ. . . .ದಾವೆ ತನಗೆ ಮೋದವಾಗೆ। ಕರ್ಮ್ಮ. . .ಯೆ ತನಗುಜ್ಜಳವೆನಿಪ ರ. . . ಪಾಳಿಕೆಯಾಗೆ। ಪಂಜಳವೆ ತನಗೆ ರಂಜಿಸುವಧರೋಷ್ಟವಾಗೆ। ಪದರಚನೆಯೆ ಮ್ರಿದುಪವನವಾಗೆ। ಅಂಬುವೆ ತನಗೆ ಕಂಬುಗ್ರೀವಮಾಗೆ। ಪೂರ್ಣರಾಗವೆ ತನಗೆ ಕರ್ಣ್ನಾಭರಣವಾಗೆ। ದೇವಾಳವೆ ತನಗೆ ನೇವಾಳವಾಗೆ। ಅಕ್ಕರವೆ ತನಗರೆವಾಣಿಯಾಗೆ। ತಿವದಿಯೆ ತನಗೆ ತೆಳುವಸಿರಾಗೆ। ದೋಹಳವೆ ತನಗೆ ಬಾಹಾಬಲವಾಗೆ। ಚಪುಪದಿಯೆ ತನಗೆ . . . . ಜವಾಗೆ। ಸಾಮತವೆ ತನಗೆ ವಿರಿದ ಪಲ್ಗಳಾಗೆ। ರಾಗಂಗಳಣಗುಗವಿತವೆ ತನಗೆ ಸೆಳ್ಳುಗುರ್ಗಳಾಗೆ..."–ಹೀಗೆ ಸರಳ, ಸುಂದರ, ಸಣ್ಣ ವಾಕ್ಯಗಳ ಗದ್ಯ ಇಲ್ಲಿ ಮನೋಜ್ಞವಾಗಿ ಮುಂದುವರಿದಿದೆ. ಇದಲ್ಲದೆ "ಇನ್ತು ಸಂಸಾರದೊಳು ಸುಖ ಮಿರಲು ತಾವರೆಕೊಳಕೆ ಮಂಜುಬರ್ಪ್ಪನ್ತೆ, ಪೂತು ಕಾತೆರದಲ್ಲಿರ್ದ್ದ

ಮಾಮರಕ್ಕೆ ಬೆ . . . ರಬಿಂದು ಬಪ್ಪನ್ತೆ, ಬಳದು ಪಾಲೆರ . . .ಲ್ಳ್ವ ಕೆಯ್ಗೆ ಜೇಷ್ಠೆಯ ಗಾಳಿ ಬರ್ಪ್ಪನ್ತೆ . . .” ಎಂಬ ಮಾಲೋಪಮೆ ಉತ್ತಮ ಕವಿತ್ವಕ್ಕೆ ಸಾಕ್ಷಿಯಾಗಿದೆ.

ಕೆಲವು ಶಾಸನಗಳ ಕೊನೆಯಲ್ಲಿ ಅವುಗಳನ್ನು ಬರೆದ ಕವಿಯ ಹೆಸರು ಮತ್ತು ಅವನ ಸಾಮರ್ಥ್ಯಗಳನ್ನು ದಾಖಲಿಸಲಾಗಿದೆ. “ಸರಸ್ವತಿ ಪೆಣ್ಬರಿಜಂ ಬಿಟ್ಟು ರೂಢಿವೆತ್ತೀಗ ಬರೆವರಾದಿತ್ಯನ ಕಯ್ವೆರಗಿನ ಕಂಟದೊಳಿದ್ದಕ್ಷರ ಪದಮಂ ಪಡೆದು ಸಿರಿಯಂ ಮೆರೆವಳ್” ಎಂಬಂಥ ಹೇಳಿಕೆಗಳು ಲಿಪಿಕಾರರ ಸಿದ್ಧಿ ಪ್ರಸಿದ್ಧಿಯನ್ನು ಸ್ಪಷ್ಟಪಡಿಸುತ್ತವೆ.


೧೧೭೭ರ ಕಲಚುರಿ ಸೋವಿದೇವನ ಕಾಲದ ಮಾಡಗಿಹಾಳ (ಜತ್ ತಾಲೂಕು) ಶಾಸನದಲ್ಲಿ ಅಲ್ಲಿಯ ಪ್ರಭು ಬಿಜ್ಜಯನಾಯಕನನ್ನು ಕುರಿತು “ಬುಧರೀಯೆ ವರ್ಣಕವಿ ಕನ್ನಡ ಜಾಣನೆನಿಪ್ಪ ಬಲ್ಮೆ ತನ್ನೊಳೆ” ನೆಲಸಿದ್ದಿತೆಂದೂ, ಅವನು “ವರ್ಣಕ ಕವಿತಾ ಪ್ರವೀಣ”, “ಸುಜನ ವಿಬುಧ ಚೂಡಾಮಣಿ” ಎಂದೂ ಹೇಳಲಾಗಿದೆ. ೯೪ ಸಾಲುಗಳ ಈ ಶಾಸನದಲ್ಲಿ ೩೭ ಕನ್ನಡ ಪದ್ಯಗಳಿದ್ದು ಇದನ್ನು ಈತನೇ ಬರೆದಿರುವ ಸಾಧ್ಯತೆಯಿದೆ.

೨೦. ಸಮಾರೋಪ

ಶಾಸನ ಬರೆವಣಿಗೆ ಪ್ರಾರಂಭವಾದ ಕಾಲದಿಂದ ಇತ್ತೀಚಿನ ಅವಧಿಯನ್ನು ಚರಿತ್ರೆಯ ಕಾಲವೆಂದು ಕರೆಯಲಾಗುತ್ತದೆ. ಭಾರತದಲ್ಲಿ, ಅದರ ಭಾಗವಾದ ಮಹಾರಾಷ್ಟ್ರದಲ್ಲಿ ಚರಿತ್ರೆಯ ಕಾಲ ಕ್ರಿ. ಶ. ಪೂ. ೩೦೦ ರಿಂದ ಪ್ರಾರಂಭವಾಗುತ್ತದೆ. ಮುಂದೆ ಕ್ರಿ. ಶ. ೩೦೦ ರ ಹೊತ್ತಿಗೆ ಪಶ್ಚಿಮದಲ್ಲಿ ಸಮುದ್ರದಿಂದ ಇಡಿಯಾಗಿ ಸಹ್ಯಾದ್ರಿ ಘಟ್ಟದ ತುಂಬ ಮಹಾರಾಷ್ಟ್ರೀ ಪ್ರಾಕೃತಶಾಸನಗಳು ಸಿಗುವುದರಿಂದ, ಆ ಸಮಯಕ್ಕಾಗಲೇ ಅಷ್ಟು ಪ್ರದೇಶವು ಪ್ರಾಕೃತವನ್ನು ಮಾತೃಭಾಷೆಯಾಗುಳ್ಳವರಿಂದ ಅಂದರೆ ಮರಾಠರ ಪೂರ್ವಜರಿಂದ ಆಕ್ರಮಿಸಲ್ಪಟ್ಟಿರಬಹುದು. ಪಶ್ಚಿಮದಲ್ಲಿ ಈ ಸಹ್ಯಾದ್ರಿ ಬುಡದಿಂದ ಕನ್ನಡಿಗರ ಮೇರೆಯನ್ನು ಸ್ಥೂಲವಾಗಿ ಹೇಳಬಹುದಾದರೂ ಈಗ ಅವರ ಉತ್ತರ ಮೇರೆ ಯಾವುದೆಂಬುದನ್ನು ಹೇಳಲು ಗಟ್ಟಿ ಆಧಾರಗಳು ಸಿಗುವುದಿಲ್ಲ. ಮುಂದೆ ೯ನೆಯ ಶತಮಾನಕ್ಕೆ ಬಂದರೆ ಗೋದಾವರಿಯು ಕನ್ನಡಿಗರ ಉತ್ತರ ಮೇರೆಯಾಗಿದ್ದಿತೆಂದು ನೃಪತುಂಗ ಹೇಳುವನಾದರೂ, ಈ ಅವಧಿಯಲ್ಲಿ ಪಶ್ಚಿಮ ಮೇರೆ ಯಾವುದೆಂದು ಗೊತ್ತಾಗುವುದಿಲ್ಲ. ಬಹುಶಃ ಈ ಹೊತ್ತಿಗೆ ಮರಾಠರು ಪಶ್ಚಿಮ ಘಟ್ಟವನ್ನು ಇಳಿದು ಬಯಲುಭೂಮಿಯನ್ನು ಆಕ್ರಮಿಸಲು ಪ್ರಾರಂಭಿಸಿರಬೇಕು. ಒಟ್ಟಿನಲ್ಲಿ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿ, ಉತ್ತರದಲ್ಲಿ ಗೋದಾವರಿ ವಾಹಿನಿಗಳ ಮೇರೆಗೆ ಒಳಪಡುವ ಕೊಲ್ಲಾಪುರ, ಸಾಂಗಲಿ, ಸೊಲ್ಲಾಪುರ, ಉಸ್ಮಾನಾಬಾದ, ನಾಂದೇಡ ಜಿಲ್ಲೆಗಳಲ್ಲಿ ಕನ್ನಡ ಶಾಸನಗಳು ಸಿಗುವುದರಿಂದ ಇವು ಮೂಲತಃ ಕನ್ನಡಿಗರ ಜಿಲ್ಲೆಗಳೆಂದು ಸ್ಪಷ್ಟವಾಗುತ್ತದೆ. ಹುಡುಕಿದರೆ ಬೀಡ, ಸಾತಾರಾ ಜಿಲ್ಲೆಗಳಲ್ಲಿ ಇನ್ನೂ ಕೆಲವು ಕನ್ನಡ ಶಾಸನಗಳು ಸಿಗುತ್ತವೆ. ಪುಣೆ ಮತ್ತು ಅಹಮ್ಮದನಗರ ಜಿಲ್ಲೆಗಳ ಪೂರ್ವಭಾಗಗಳಲ್ಲಿ ಅಂದರೆ ಸಹ್ಯಾದ್ರಿ ಘಟ್ಟದ ವರೆಗೆ ಕನ್ನಡ ಶಾಸನಗಳು ಸಿಗುವ ಸಾಧ್ಯತೆಯಿದೆ. (೨) ಹತ್ತನೆಯ ಶತಮಾನದ ವರೆಗೆ ಮಹಾರಾಷ್ಟ್ರದಲ್ಲಿ ಯುದ್ಧ ನಿರ್ವಹಣೆಯ ವೀರಮೌಲ್ಯ, ದೇವಾಲಯ ನಿರ್ಮಾಣದ ದಾನಮೌಲ್ಯಗಳೆಂಬ ‘ಸಾಮಾಜಿಕ ಮೌಲ್ಯ’ಗಳಿಗಿಂತ ಅಗ್ರಹಾರ ನಿರ್ಮಾಣ, ಬ್ರಾಹ್ಮಣ ವಿದ್ವಾಂಸರ ಪೋಷಣೆಗಳಂಥ ‘ವೈಯಕ್ತಿಕ ಮೌಲ್ಯ’ಗಳೇ ಹೆಚ್ಚು

ರೂಢಿಯಲ್ಲಿದ್ದವೆಂದು ತೋರುತ್ತದೆ. ಇದಕ್ಕೆ ಅನುಗುಣವಾಗಿ ಬಾದಾಮಿ ಚಾಲುಕ್ಯರು, ಮಳಖೇಡ ರಾಷ್ಟ್ರಕೂಟರು ಮಹಾರಾಷ್ಟ್ರದಲ್ಲಿ ಸಾಮಾಜಿಕ ಮೌಲ್ಯಪ್ರಸಾರ ಮಾಧ್ಯಮಗಳಾದ ಶಿಲಾಶಾಸನಗಳಿಗಿಂತ ವೈಯಕ್ತಿಕ ದಾನ ದಾಖಲೆಗಳಾದ ತಾಮ್ರಪಟಗಳನ್ನೇ ಬರೆಸಿದರು.ಇವು ಬ್ರಾಹ್ಮಣರಿಗೆ ಸಂಬಂಧಿಸಿದುದರಿಂದ ಇವುಗಳಿಗೆ ಸಂಸ್ಕೃತ ಭಾಷೆಯೇ ಬಳಕೆಯಾಯಿತು. ಹೀಗಾಗಿ ೧೦ನೆಯ ಶತಮಾನದ ವರೆಗೆ ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು ಬೆಳೆದು ಬರಲಿಲ್ಲ. (೩) ೧೧ ರಿಂದ ೧೩ನೆಯ ಶತಮಾನದ ವರೆಗಿನ ಕನ್ನಡ ಶಾಸನಗಳು ಮಹಾರಾಷ್ಟ್ರದಲ್ಲಿ ೨೭೦ ಸಿಕ್ಕಿದ್ದು, ಹುಡುಕಿದರೆ ಈ ಸಂಖ್ಯೆ ಇನ್ನೂ ವರ್ಧಿಸಬಹುದಾಗಿದೆ. ಹೀಗಾಗಿ ಮಹಾರಾಷ್ಟ್ರದ ಒಟ್ಟು ಶಾಸನ ಸಂಪತ್ತಿನ ಸಿಂಹಪಾಲು ಕನ್ನಡ ಶಾಸನಗಳದಾಗಿದೆ. (೪) ಈ ಶಾಸನಗಳಲ್ಲಿ ಕರ್ನಾಟಕದ ರಾಜಕೀಯ ಧರ್ಮ, ಸಮಾಜ, ವಾಣಿಜ್ಯ, ಕೃಷಿ, ವ್ಯಕ್ತಿನಾಮ, ಗ್ರಾಮನಾಮ, ಭಾಷೆ, ಲಿಪಿ ಮತ್ತು ಸಾಹಿತ್ಯಗಳ ಸ್ಪಷ್ಟಚಿತ್ರವೇ ಕಂಡುಬರುವುದರಿಂದ 'ಮಹಾರಾಷ್ಟ್ರದಲ್ಲಿ ಕನ್ನಡ ಶಾಸನಗಳು' ಎಂದರೆ 'ಕರ್ನಾಟಕದಲ್ಲಿ ಕನ್ನಡ ಶಾಸನಗಳು' ಎಂದೇ ಅರ್ಥ. ಹೀಗಾಗಿ ದಿಟ್ಟಿಸಿ ನೋಡಿದರೆ ಇಂದಿನ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಅಂದಿನ ಕರ್ನಾಟಕ ದೇಶ ಕಾಣಿಸುತ್ತದೆ; ಕಿವಿಗೊಟ್ಟು ಕೇಳಿದರೆ ಅಂದಿನ ಕನ್ನಡಭಾಷೆ ಕೇಳಿಸುತ್ತದೆ. ಹೀಗಿರುವಾಗ ಪ್ರಾಚೀನ ಕರ್ನಾಟಕ ಮತ್ತು ಮಹಾರಾಷ್ಟ್ರಗಳನ್ನು ಕುರಿತು ಮರಾಠಿ ವಿದ್ವಾಂಸರು ಒಟ್ಟಾಗಿ ಹೇಳುವ : 'It is but natural that there was abundant cultural exchange' ಎಂಬ ಮಾತು ಶಿವಾಜಿ ತರುವಾಯದ ಕಾಲಾವಧಿಗೆ ಅನ್ವಯವಾಗಬಹುದೇ ಹೊರತು, ಈ ಶಾಸನಗಳ ಕಾಲಾವಧಿಗೆ ಅನ್ವಯವಾಗುವುದೇ ಇಲ್ಲ. ಏಕೆಂದರೆ ಈ ಶಾಸನಗಳಿಂದ ಕರ್ನಾಟಕ ಸಂಸ್ಕೃತಿ ತಿಳಿದುಬರುವುದೇ ಹೊರತು, ಮರಾಠಿ ಸಂಸ್ಕೃತಿಯ ನೆರಳು ಕೂಡ ಅಲ್ಲಿ ತಲೆ ಹಾಕಿಲ್ಲ. (೫)ಕರ್ನಾಟಕ ಸಂಸ್ಕೃತಿಯ ಈ ಚಿತ್ರ ಇನ್ನೂ ವಿಸ್ತಾರವೂ ವಿಸ್ಫುಟವೂ ಆಗಬೇಕಾದರೆ, ಮಹಾರಾಷ್ಟ್ರದಲ್ಲಿ ಸಿಗುವ ಎಲ್ಲ ಕನ್ನಡ ಶಾಸನಗಳನ್ನು ಒಂದೂ ಬಿಡದಂತೆ ಶೋಧಿಸಬೇಕು. ಅದಕ್ಕೂ ಮೊದಲು ಈವರೆಗೆ ಶೋಧಿಸಲಾದ ಅಲ್ಲಿಯ ಎಲ್ಲ ಕನ್ನಡ ಶಾಸನಗಳನ್ನು, ಕೊನೆಯ ಪಕ್ಷ ಒಂದು ವರ್ಣನಾತ್ಮಕ ಸೂಚಿಯನ್ನಾದರೂ ಪ್ರಕಟಿಸಬೇಕು. ಜೊತೆಗೆ ಮಹಾರಾಷ್ಟ್ರದಲ್ಲಿ ಸಿಗುವ ಪ್ರಾಕೃತ, ಸಂಸ್ಕೃತ ಮತ್ತು ಮರಾಠಿ ಶಾಸನಗಳಲ್ಲಿ ಕಂಡುಬರುವ ಕರ್ನಾಟಕದ ಅಂಶಗಳನ್ನು ಸಂಗ್ರಹಿಸಬೇಕು.

❖❖



ಅರ್ಜುನವಾಡ ಶಾಸನದ ಮೇಲ್ಭಾಗ



ಸಿರಿಯಾಳಸೆಟ್ಟಿ ಚೆಂಗಳವ್ವೆಯರು ಶಿವನಿಗೆ ಮಗನನ್ನು ಕೊಡುತ್ತಿರುವ
ವಿಗ್ರಹ–ಅಬ್ಬಲೂರು



ಕುಂಬಾರಗುಂಡನು ಗಡಿಗೆ ಬಾರಿಸುತ್ತ ಕುಳಿತ ಚಿತ್ರ-ಅಬ್ಬಲೂರು



ಜೇಡರದಾಸಿಮಯ್ಯ ಶಿವನಿಗೆ ವಸ್ತ್ರಕೊಡುತ್ತಿರುವ
ವಿಗ್ರಹ-ಅಬ್ಬಲೂರು




ಕೊಂಡಗುಳಿ ಕೇಶಿರಾಜ ಕಟ್ಟಿಸಿದ ಸೋಮೇಶ್ವರ ದೇವಾಲಯ
ಕೊಂಡಗುಳಿ



ಹಾಳಾಗಿರುವ ಕವಿಳಾಸಪುರ ಪ್ರದೇಶದ ಒಂದು ನೋಟ
ಅರ್ಜುನವಾಡ



ನಿಡಸೋಸಿ ಶ್ರೀ ಜಗದ್ಗುರುಗಳ ಸನ್ನಿಧಿಯಲ್ಲಿ ಕವಿಳಾಸಪುರ ಸಂಶೋಧಕರು



೧. ಹಾಲಶಂಕರ (ಮಲ್ಲಿಕಾರ್ಜುನ?)ಲಿಂಗ. ೨. ಮೊಸರಶಂಕರ (ಸಂಗಮೇಶ್ವರ?) ಲಿಂಗ ೩. ನಾಗೇಶ್ವರಲಿಂಗ?- ಅರ್ಜುನವಾಡ



'ಶ್ರೀ ಬಸವಣದಂಣಾಯಕರ ಕೆಯ್' ಎಂಬ ಬರಹವನ್ನೊಳಗೊಂಡ
ಹೊಲದ ಸೀಮೆಯ ಕಲ್ಲು-ಅರ್ಜುನವಾಡ




ಸಿದ್ಧರಾಮನ ಶಾಸನವುಳ್ಳ ನಂದಿಸ್ತಂಭ-ಸಂಗೂರ




ಮಡಿವಳ ಮಾಚಿದೇವನು ಬಿಜ್ಜಳನ ಆನೆಯನ್ನು
ತುಳಿಯುತ್ತಿರುವ ವಿಗ್ರಹ ಅಮ್ಮಿನಭಾವಿ
(ಈಗ ಧಾರವಾಡದ ಕನ್ನಡ ಅಧ್ಯಯನಪೀಠದಲ್ಲಿದೆ)



ಮಡಿವಳ ಮಾಚಿದೇವನು ಬಿಜ್ಜಳನ ಆನೆಯನ್ನು
ತುಳಿಯುತ್ತಿರುವ ವಿಗ್ರಹ–ಮುಳಗುಂದ




ಹುಳಿಯುಮೇಶ್ವರ ದೇವಾಲಯ-ದೇವರಗುಡಿ




ಏಕಾಂತರಾಮಯ್ಯ ರುಂಡ ಕತ್ತರಿಸಿಕೊಂಡ ಬ್ರಹ್ಮೇಶ್ವರ ದೇವಾಲಯ
ಅಬ್ಬಲೂರು



ಏಕಾಂತರಾಮಯ್ಯ ಕಟ್ಟಿಸಿದ ಸೋಮೇಶ್ವರ ದೇವಾಲಯ-ಅಬ್ಬಲೂರು




ಏಕಾಂತರಾಮಯ್ಯನು ಶಿವಲಿಂಗಕ್ಕೆ ರುಂಡ ಅರ್ಪಿಸಿದ ಮತ್ತು
ಸಂಕಗಾವುಂಡನ ಸೈನ್ಯದೊಂದಿಗೆ ಕಾದುತ್ತಿರುವ ವಿಗ್ರಹ.
(ಈ ಶಿಲ್ಪದ ಮಗ್ಗುಲಿಗೆ ಲಿಂಗಪ್ರತಿಷ್ಠೆಯ ಇನ್ನೊಂದು ಅಸ್ಪಷ್ಟ ವಿಗ್ರಹವಿದೆ)




ಗಂಡಗತ್ತರಿ-ನಿಂಬಯ್ಯನಮಠ ಲಕ್ಷ್ಮೇಶ್ವರ



ಮೂರುಜಾವಿದೇವನ ವಿಗ್ರಹ-ಅಂತರವಳ್ಳಿ



ಗುಂಡುಬ್ರಹ್ಮಯ್ಯಗಳ ವಿಗ್ರಹ-ನೀತಿಗೆರೆ



ಗುಂಡಬ್ರಹ್ಮಯ್ಯಗಳ ವಿಗ್ರಹ–ಹಾವೇರಿ
(ಈಗ ಧಾರವಾಡದ ಕೆಆರ್‌ಆಯ್‌ದಲ್ಲಿದೆ)



ಗಂಡಬ್ರಹ್ಮಯ್ಯಗಳ ವಿಗ್ರಹ-ಚಿತ್ರದುರ್ಗ




ಗುಂಡಬ್ರಹ್ಮಯ್ಯಗಳ ವಿಗ್ರಹ-ಬಳ್ಳಾರಿ



ಗುಂಡಬ್ರಹ್ಮಯ್ಯಗಳ ವಿಗ್ರಹ-ಗುಂಡೇನಹಳ್ಳಿ



ಗುಂಡಬ್ರಹ್ಮಯ್ಯಗಳ ಶೂಲಸ್ಥಂಭಗಳು-ಆಣೆಗೆರೆ




ಶಿವದೇವ ಒಡೆಯರ ಆರಾಧ್ಯದೈವತ ಮುಕ್ತಿನಾಥದೇವಾಲಯ- ಚೌಡದಾನಪುರ
(ಮಗ್ಗುಲದ ಎರಡು ಶಾಸನಗಳಲ್ಲಿ ಬಸವಣ್ಣನವರ ಉಲ್ಲೇಖವಿದೆ)



೧. ಲದ್ದೆಯ ಸೋಮಣ್ಣ ೨. ಮೋಳಿಗೆ ಅಯ್ಯ
೩. ನುಲಿಯ ಚಂದಯ್ಯ ೪. ಆಯ್ದಕ್ಕಿ ಮಾರಯ್ಯ
೫. ಇಕ್ಕದ ಮಾರಯ್ಯ (ಈಶ್ವರ) ೬. ಹಡಪದ ಅಪ್ಪಣ್ಣ
೭. ಹೋಳಿ ಹಂಪಣ್ಣ ೮. ಅಗ್ಗಣಿ ಹೊಂನಯ್ಯ
೯-೧೦ ಗುಂಡಬ್ರಹ್ಮಯ್ಯ(ಗುಂಡಯ್ಯ-ಬ್ರಹ್ಮಯ್ಯ)



ಜಿನವಿಗ್ರಹದ ಸನ್ನಿಧಿಯಲ್ಲಿ ಮಲ್ಲಿಷೇಣನ ಸಲ್ಲೇಖನ(ಶ್ರವಣಬೆಳ್ಗೊಳ)
ನಿಷಿಧಿ ಶಿಲೆಯ ಮೇಲ್ಭಾಗವಿದು. ಕುಳಿತ ಭಂಗಿಯನ್ನು ಗಮನಿಸಿ



ದೇವಕೀರ್ತಿಪಂಡಿತ, ಶುಭಚಂದ್ರಯತಿಗಳ ನಿಷಿಧಿಶಿಲೆ(ಕಂಬದ ಹಿಂದೆ
ಮರೆಯಾಗಿದೆ)ಯ ಮಂಟಪ ಮತ್ತು ಮಲ್ಲಿಷೇಣ ಮುನಿಯ ನಿಷಿಧಿಶಿಲೆಯ
ಮಂಟಪ(ಶ್ರವಣಬೆಳ್ಗೊಳ)



ಚಂಡನ ಅಗ್ನಿಪ್ರವೇಶ, ಬಾಳೂರು(ಈಗ ಕೆಆರ್‌ಆಯ್ ಧಾರವಾಡದಲ್ಲಿದೆ)



ಬೊಪ್ಪನ ಅಗ್ನಿಪ್ರವೇಶ. ತಿಳವಳ್ಳಿ
(ಈಗ ಕೆಆರ್‌ಆಯ್ ಧಾರವಾಡದಲ್ಲಿದೆ)
ಸೂರ್ಯನನ್ನು ಹಾವು ನುಂಗುತ್ತಿರುವ ದೃಶ್ಯ ಗಮನಿಸಿ



ಜೈನ ಮುದ್ದಗೌಡನ ಸಮಾಧಿಮರಣ, ಆತನ ಸತಿಯ ಮಾಸ್ತಿ ಮರಣ
ಬಾಳೂರು(ಈಗ ಕೆಆರ್‌ಆಯ್‌ದಲ್ಲಿದೆ)



ಕೈ ಎತ್ತಿ ನಿಂತ ಮಾಸ್ತಿ(ಹೆರೂರು)




ಯುದ್ಧ ಮರಣ ಹೊಂದಿದ ಪತಿಯೊಂದಿಗೆ ನಿಂತ ಮಾಸ್ತಿ
(ಕಿತ್ತೂರು ಮ್ಯೂಸಿಯಂ)



ಸತಿಯರಿಬ್ಬರು ಸತಿಹೋದ ಇಕ್ಕೈ ಮಾಸ್ತಿ(ಲಿಂಗನಮಕ್ಕಿ)
ಇಲ್ಲಿಯ ಪಲ್ಲಕ್ಕಿಯನ್ನು ಗಮನಿಸಿರಿ



ಎರಡೂ ಕೈ ಎತ್ತಿದ ಮಾಸ್ತಿ
(ಕರ್ನಾಟಕ ಸಂಶೋಧನ ಮಂಡಲ, ಧಾರವಾಡದಲ್ಲಿದೆ)



ಪತಿಯ ಯುದ್ಧಮರಣ, ಸತಿಯ ಸಹಗಮನ(ಸಸ್ತಾಪುರ-ಬೀದರ ಜಿಲ್ಲೆ)
ಚಿತೆಯಲ್ಲಿ ಮಲಗಿದ ದಂಪತಿಗಳನ್ನು ಗಮನಿಸಿರಿ



ಪತಿಯ ಕೋಟೆ ಕಾಳಗಮರಣ, ಸತಿಸಹಗಮನ(ಬಾವಡೇ–ಮಹಾರಾಷ್ಟ್ರ)
ಕೆಳಗಿನ ಸ್ತರದಲ್ಲಿ ಚಿತಾವೇದಿಕೆ ಏರುತ್ತಿರುವ ಸತಿಯ, ಅದರ ಮೇಲಿನ
ಸ್ತರದಲ್ಲಿ ಕೋಟೆ ಕಾಳಗದಲ್ಲಿ ತೊಡಗಿದ ಪತಿಯ ಚಿತ್ರಗಳನ್ನು ಗಮನಿಸಿರಿ



ಕುವರಲಕ್ಷ್ಮನು ಲೆಂಕರೊಂದಿಗೆ ಆತ್ಮಬಲಿಯಾದುದನ್ನು ಸಾರುವ
ಸ್ತಂಭಶಾಸನ(ಹಳೆಬೀಡು) ಸ್ತಂಭದ ಮೇಲೆ ಲೆಂಕರು ಇರಿದುಕೊಳ್ಳುವ
ಭಂಗಿಗಳಿವೆ




ಒಬ್ಬ ವ್ಯಕ್ತಿ ಆತನ ಇಬ್ಬರು ಹೆಂಡಿರ ವೇಳವಾಳಿ ಶಿಲ್ಪ (ಅಬ್ಬಲೂರು)



ಎಮ್ಮೆಗಳನ್ನು ಸೆರೆ ಹಿಡದ ಚಿತ್ರ(ಗೋಧಳಿ)
[ಮಹಾರಾಷ್ಟ್ರ]ವೀರಗಲ್ಲಿನ ಭಾಗ)




ವೀರಗಲ್ಲುಗಳ ಗುಂಪು (ಬೆಟಗೇರಿ)



ವೀರಗಲ್ಲುಗಳ ಗುಂಪು(ಕೈಕಿಣಿ)




ಗೋಗ್ರಹಣ ಪ್ರಸಂಗದ ವೀರಗಲ್ಲು (ಹುಕ್ಕೇರಿ)
ಕೆಳಗಿನ ಸ್ತರದಲ್ಲಿ ಆಕಳುಗಳನ್ನು ಗಮನಿಸಿರಿ



ಹಿಟ್ಟಿನಾಯಕನ ಅಶ್ವಯುದ್ಧದ ವೀರಗಲ್ಲು–ಅಮ್ಮಿನಭಾವಿ
(ಈಗ ಧಾರವಾಡದ ಕೆಆರ್‌ಆಯ್‌ದಲ್ಲಿದೆ)



ಬಿಜ್ಜಳನ ಗಜಯುದ್ಧದಲ್ಲಿ ಮಡಿದ ಕೇತೆನಾಯಕನ ವೀರಗಲ್ಲು
(ತಂಬೂರು. ಈಗ ಕೆಆರ್‌ಆಯ್ ಧಾರವಾಡದಲ್ಲಿದೆ)



ಜೈನಯೋಧನ ವೀರಗಲ್ಲು(ಕೈಕಿಣಿ)
ಮೇಲಿನ ಸ್ತರದಲ್ಲಿಯ ತೀರ್ಥಂಕರ ವಿಗ್ರಹವನ್ನು ಗಮನಿಸಿರಿ



ವೀರಗಲ್ಲಿನ ಕೆಳಭಾಗ(ಕೈಕಿಣಿ). ವೀರನು ಪಲ್ಲಕ್ಕಿಯಲ್ಲಿ ಕುಳಿತು ಯುದ್ಧಕ್ಕೆ ಹೋಗುವ ದೃಶ್ಯ



ಸ್ತ್ರೀಯೊಬ್ಬಳ ವೀರಗಲ್ಲು(ಹೇರೂರು). ಕೊಡೆಯ ಕೆಳಗಿನದು ಸ್ತ್ರೀ ವಿಗ್ರಹ



ರಾಷ್ಟ್ರಕೂಟರ ಕಾಲದ ಸುಂದರ ವೀರಗಲ್ಲು(ಬೆಟಗೇರಿ)
ಇಲ್ಲಿಯ ಹೋರಾಟದ ಆವೇಶವನ್ನು ಗಮನಿಸಿರಿ



ರಾಷ್ಟ್ರಕೂಟರ ಕಾಲದ ಸುಂದರ ವೀರಗಲ್ಲು(ಬೆಟಗೇರಿ)
ಇಲ್ಲಿಯ ಹೋರಾಟದ ಆವೇಶವನ್ನು ಗಮನಿಸಿರಿ




ಪೆಣ್ಬುಯ್ಯಲ್ ವೀರಗಲ್ಲು(ಅಬ್ಬಲೂರು)
ಕೆಳಗಿನ ಸ್ತರದಲ್ಲಿ ಬೆತ್ತಲೆಯಾದ, ಕೂಸನ್ನು ಎತ್ತಿಕೊಂಡ
ಸ್ತ್ರೀ ವಿಗ್ರಹವನ್ನು ಗಮನಿಸಿರಿ




ಮಹಾರಾಷ್ಟ್ರದ ಕನ್ನಡ ಶಾಸನಗಳ ಪ್ರದೇಶ

ಅಭಿನವಪಂಪನನ್ನು ಉಲ್ಲೇಖಿಸುವ ತಾಮ್ರಶಾಸನ, ಕೊಲ್ಲಾಪುರ



೫. . .। ಜಿನನಾಥಂ ತನಗಿಷ್ಟದೆಯ್ವವಧಿಪಂ ಶ್ರೀಗಣ್ಡರಾದಿತ್ಯದೇವನಿಳ ವಿಶ್ರುತಕೀರ್ತಿವಲ್ಲರಿವಿತಾ
೬ ನಂ ಸತ್ಕವೀಂದ್ರೋತ್ತಮಂ ತನಗಜ್ಜಂ ಕವಿಪಂಪರಾಜನೆನೆ ಸದ್ವಿಖ್ಯಾತಿಯಂ ಕೂಚಿರಾಜನ ವೋಲ್ ಪೇಳ್ವೆರರಾರೊ ತಾಳ್ದಿದ
೭ ವರೀ ವಿಶ್ವಂಭರಾಭಾಗದೊಳ್॥

–[ಕೃಪೆ: ಅಖಿಲಭಾರತ ಪುರಾತತ್ವ ಇಲಾಖೆ, ಮೈಸೂರು]



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359